THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FIFTY-SECOND DAY

OF THE

FIFTH SESSION

MONDAY, 19TH APRIL 1965

Vol. X—No. 7

4829 (A)

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1965

Price: 25 Paise.

CONTENTS

		Pages
Starred Questions and Answers	...	363—379
Question for answer on the day (but not taken up)	...	379—380
Business of the House	...	381—382
Appointment of Chairmen to :—		
(i) the Committee on Public Accounts		
(ii) the Committee on Subordinate Legislation	...	382
Nomination of Members to the Committee on Petitions	...	383
Papers laid on the Table :		
Second and Third Annual Reports for 1961-62 and 1962-63 of the Tungabhadra Steel Products Ltd.	...	383
Mysore Land Reforms (Amendment) Bill, 1965—(Motion to consider—Debate not concluded)	...	383—414

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FIFTY-THIRD DAY

OF THE

FIFTH SESSION

TUESDAY, 20TH APRIL 1965

Vol. X—No. 8

१८२९ (अ)

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1965

Price: 25 Paise.

CONTENTS

	PAGES
Starred Questions and Answers ...	415—429
Short Notice Question and Answer ...	430—432
Calling Attention to a Matter of Urgent Public Importance *re*: Assault of a School Girl at Kudur Village, Magadi Taluk ...	432—433
Thirty-third Report of the Business Advisory Committee —(Adopted) ...	433—435
Papers laid on the Table—	
Appropriation Accounts of the Government of Mysore for the year 1963-64 and Audit Report, 1965 ...	435—436
Mysore Land Revenue (Amendment) Bill, 1965—(Passed)	436—463
Mysore Land Reforms (Amendment) Bill, 1965—(Motion to consider—debate not concluded) ...	464—470

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FIFTY-FOURTH DAY

OF THE

FIFTH SESSION

WEDNESDAY, 21ST APRIL 1965

Vol. X—No. 9

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE FIFTY-FIFTH DAY

OF THE

FIFTH SESSION

THURSDAY, 22ND APRIL 1965

Vol. X—No. 10

BANGALORE:
PRINTED BY THE DIRECTOR OF PRINTING, STATIONERY AND
PUBLICATIONS AT THE GOVERNMENT PRESS
1965

Price: 25 Paise

CONTENTS

	PAGES
Starred Questions and Answers ...	525—545
Short Notice Questions and Answers ...	545—551
Question for answer on the day (but not taken up) ...	551—552
Calling Attention to a Matter of urgent Public Importance *re:* the Food situation in South Kanara ...	552—555
Statement by the Chief Minister *re:* Introduction of Free Secondary Education ...	555
Papers laid on the Table—	
Tenth List of Unstarred Questions and Answers; Replies to the Questions of Previous Sessions ...	556
Unstarred Questions and Answers ...	556—567
Replies to Questions of Previous Sessions ...	567—694
Mysore Land Reforms (Amendment) Bill, 1965—(Passed) ...	694—715
Official Resolution *re:* Survey and Settlement Report—(Adopted) ...	715—771
House adjourned *sine die* ...	771

MYSORE LEGISLATIVE ASSEMBLY

Monday, 19th April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Transfer of Gazetted Officers of Revenue Department in Tumkur District.

*Q.—534. Sri ANDANAIAH (Kunigal).—

Will the Government be pleased to state :—

(a) the number of Gazetted Officers transferred within one year in Tumker district in Revenue Department during the years 1964 and 1965 up-to-date ;

(b) the reasns for such transfer within that short period

A.—Sri M. V. KRISHNAPPA (Minister for Revenue).—

(a) 6 in 1964.
3 in 1965.

9 (in all)

(b) The transfers were made in some cases on administrative grounds in the interest of Public Service and in others on account of promotion of some officers.

ಶ್ರೀ ಅಂದಾನಯ್ಯ.—ಒಟ್ಟು 9 ಜನ ಅಧಿಕಾರಿಗಳ ಪೈಕಿ ಪ್ರಮೋಷನ್ ಆಗಿರುವವರು ಎಷ್ಟು ಜನ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರಲ್ಲಿ ಪ್ರಮೋಷನ್ ಬರುವುದಿಲ್ಲ. ಇಬ್ಬರು ತಹಶೀಲದಾರರನ್ನು ಮಾತ್ರ ಟ್ರೇನಿಂಗಿಗೆ ಕಳಿಸಬೇಕಾಗಿತ್ತು. ಅವರನ್ನು ಟ್ರೇನಿಂಗಿಗೆ ಕಳಿಸಲಾಗಿದೆ. ಅದರ ವಿವರ ಈ ರೀತಿ ಇದೆ. ಶ್ರೀ ಕೇಳವಾಡಿ ಅವರನ್ನು ಹೊಸದಾಗಿ ರಚನೆಯಾದ ಫುಡ್ ಡಿಪಾರ್ಟಮೆಂಟಿಗೆ ತೆಗೆದುಕೊಂಡಿದೆ. ಶ್ರೀ ಶಿವಲಿಂಗಯ್ಯ ಅವರನ್ನು ಸರ್ವೆ ಸೆಟಲ್‌ಮೆಂಟ್ ಕೆಲಸ ಪ್ರಾರಂಭವಾದ್ದರಿಂದ ಅಲ್ಲಿಗೆ ತೆಗೆದುಕೊಳ್ಳಲಾಯಿತು. ಈ ಇಲಾಖೆಯಲ್ಲಿ ಅವರು ಮೊದಲು ಕೆಲಸ ಮಾಡಿದ್ದರಿಂದ ಅವರನ್ನು ತೆಗೆದುಕೊಳ್ಳಬೇಕಾಯಿತು. ಶ್ರೀ ಕೆ. ಮೈಲಾರಪ್ಪ ಅವರನ್ನು ಟ್ರೇನಿಂಗಿಗೆ ಕಳಿಸಲಾಗಿದೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಶ್ರೀ ಬಿ. ಎನ್. ವೆಂಕಟರಾಜು ಟ್ರೇನಿಂಗಿಗೆ ಕಳಿಸಲಾಗಿದೆ. ಶ್ರೀ ಕೆ. ಆರ್. ಶಂಕರನಾರಾಯಣ ರಾವ್ ಮಧುಗಿರಿಯಲ್ಲಿ ಕೆಲಸ ಮಾಡಿದ್ದರಿಂದ ಸೆಟ್ಲಮೆಂಟ್ ಆಫೀಸರ್ ಎಂದು ತೆಗೆದುಕೊಳ್ಳಲಾಗಿದೆ, ಶ್ರೀ ಬಸವರಾಜ ಅರಸು ಅವರನ್ನು ಹರಪನಹಳ್ಳಿ ತಾಲ್ಲೂಕಿಗೆ ಟ್ರಾನ್ಸ್‌ಫರ್ ಆಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತುಮಕೂರು ಜಿಲ್ಲೆಯ ಅಧಿಕಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದಾಗಿ ಸೆಟ್ಲಮೆಂಟ್ ಕೆಲಸ ಪ್ರಾರಂಭವಾದುದರಿಂದ ನೂರಾರು ಅಧಿಕಾರಿಗಳ ಅವಶ್ಯಕತೆ ಇದ್ದಿತು. ಅನೇಕ ಅಧಿಕಾರಿಗಳನ್ನು ತೆಗೆದುಕೊಂಡಿದೆ, ಈ ಡಿಸ್ಟ್ರಿಕ್ಟ್‌ನಿಂದ 9 ಜನರನ್ನು ಮಾತ್ರ ತೆಗೆದುಕೊಂಡಿದೆ. ಬೇರೆ ಜನಗಳನ್ನು ಸಹ ತೆಗೆದುಕೊಂಡಿದೆ.

ಶ್ರೀ ಅಂದಾನಯ್ಯ.—ಅಸಿಸ್ಟೆಂಟ್ ಕಮಿಷನರ್ ಶ್ರೀ ಕೇಳವಾಡಿಯವರು ತುಮಕೂರಿಗೆ ಬಂದು ಎಷ್ಟು ದಿವಸವಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಫುಡ್ ಡಿಪಾರ್ಟಮೆಂಟಿಗೆ ಯಂಗ್ ಅಂಡ್ ಎನರ್ಜಿಟಿಕ್ ಇರುವ ಮತ್ತು ಆನೆಸ್ಟ್ ಆಗಿ ಕೆಲಸ ಮಾಡತಕ್ಕಂಥ ಯುವಕರು ಅಗತ್ಯವಾಗಿತ್ತು. ಅವರ ಬಗ್ಗೆ ನನಗೆ ಸ್ವತಃ ಗೊತ್ತಿದೆ. ಹೊಸದಾಗಿ ಪ್ರಾರಂಭವಾದ ಫುಡ್ ಡಿಪಾರ್ಟಮೆಂಟಿಗೆ ಇಂಥ ಯುವಕ ಅಧಿಕಾರಿಯನ್ನು ತೆಗೆದುಕೊಂಡರೆ ಒಳ್ಳೆಯದು ಎಂದು ನನಗೆ ಅನ್ನಿಸಿತು.

Sri C. J. MUCKANNAPPA.—Is it not a fact that the Government was compelled to transfer him because he did not pull on well with the Minister coming from that area ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಸಂಬಂಧವಿಲ್ಲ.

ಶ್ರೀ ಜಿ. ಮಾದೇಗೌಡ.—ಈ ಗೆಜೆಟೆಡ್ ಅಧಿಕಾರಿಗಳನ್ನು ಬದಲಾವಣೆ ಮಾಡತಕ್ಕವರು ಯಾರು?

ಶ್ರೀ ಎಂ. ವಿ. ಕೃಷ್ಣಪ್ಪ.—ಚೀಫ್ ಮಿನಿಸ್ಟರ್, ರೆವೆನ್ಯೂ ಮಿನಿಸ್ಟರ್ ಮತ್ತು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವರ್ಷದ ಮಧ್ಯದಲ್ಲಿ ಚೇಂಜ್ ಮಾಡಬಾರದು ಎಂದು ಅವರು ಚೀಫ್ ಮಿನಿಸ್ಟರ್ ಅವರಿಗೆ ರಿಪ್ರೆಜೆಂಟೇಷನ್ ಕೊಟ್ಟಿದ್ದರು. ಆದರೆ ಅದನ್ನು ಕನ್‌ಸಿಡರ್ ಮಾಡುವಾಗ್ಗೆ ರಾ ಮಿನಿಸ್ಟರ್ ಅವರು ಅದಕ್ಕೆ ಒಪ್ಪಲಿಲ್ಲ, ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಫುಡ್ ಡಿಪಾರ್ಟಮೆಂಟಿಗೆ ಟ್ರಾನ್ಸ್‌ಫರ್ ಮಾಡಿದ್ದು. ಬೇರೆ ಉದ್ದೇಶ ಏನೂ ಇರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಐ. ಎ. ಎಸ್. ಮತ್ತು ಎಂ. ಎ. ಎಸ್. ಅಧಿಕಾರಿಗಳನ್ನು ಜಿ. ಎ. ಡಿ. ಮತ್ತು ಚೀಫ್ ಸೆಕ್ರೆಟರಿಯವರು ಟ್ರಾನ್ಸ್‌ಫರ್ ಮಾಡುತ್ತಾರೆ ಎಂಬುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್ ಪ್ರಕಾರ ಮತ್ತು ಕನ್‌ವೆನ್‌ಷನ್ ಪ್ರಕಾರ ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಎರಡು ವರ್ಷಗಳಿಗಿಂತ ಮುಂಚೆ ಅಧಿಕಾರಿಗಳನ್ನು ವರ್ಗ ಮಾಡುವಾಗ್ಗೆ ಆ ಫೈಲು ಚೀಫ್ ಮಿನಿಸ್ಟರ್ ಕಡೆಗೆ ಹೋಗಬೇಕು ಅವರ ಅಪ್ರೂವಲ್ ತೆಗೆದುಕೊಂಡು ವರ್ಗ ಮಾಡಬೇಕು ಎಂದು ಸರಕಾರದ ಧೋರಣೆ ಇದೆ ಎಂಬುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು.

ಶ್ರೀ ಎಸ್. ಎಂ. ಕೃಷ್ಣ.—ಅಂಥ ಅಧಿಕಾರಿಗಳನ್ನು ಎಷ್ಟೋ ಸಾರೆ ಟ್ರಾನ್ಸಫರ್ ಮಾಡುವಾಗ್ಗೆ ಸರಕಾರದ ನೀತಿ ಏನು ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದಾಗಿ ಪ್ರಾರಂಭವಾದ ಫುಡ್ ಇಲಾಖೆಗೆ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಬೇಕಾಯಿತು. ಇದಲ್ಲದೆ ಸರ್ವೆ ಸೆಟ್ಲಮೆಂಟ್ ಕೆಲಸ ಪ್ರಾರಂಭವಾಯಿತು. ಗವರ್ನಮೆಂಟ್ ಆಫ್ ಇಂಡಿಯಾದ ಫುಡ್ ಕಾರ್ಪೊರೇಷನ್ ಅವರು ನಮ್ಮ ಆಫೀಸರ್‌ಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಇಂಥ ಸಂದರ್ಭದಲ್ಲಿ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತುಮಕೂರು ಅಸಿಸ್ಟೆಂಟ್ ಕಮಿಷನರ್‌ರನ್ನು ಟ್ರಾನ್ಸಫರ್ ಮಾಡಬಾರದು, ಟ್ರಾನ್ಸ್‌ಫರ್ ಆರ್ಡರ್ ಕ್ಯಾನ್ಸಲ್ ಮಾಡಬೇಕೆಂದು ಎಷ್ಟು ರಿಪ್ರೆಜೆಂಟೇಷನ್ಸ್ ಬಂದಿದ್ದವು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕರು ಹಾಗೆ ಬರೆಯುತ್ತಾರೆ. ಮಾನ್ಯ ಸದಸ್ಯರೂ ಕೂಡ ಎರಡೂ ಕಡೆಯಿಂದ ಬರೆಯುತ್ತಾರೆ.

———

Veterinary Dispensaries in Shimoga District.

*Q.—102. Sri V. S. LAKSHMIKANTHAPPA (Sagar).—

Will the Government be pleased to state :—

(a) the names of Veterinary Dispensaries with their respective cattle population in Shimoga District;

(b) the cost of medicine supplied to each Dispensary for the past three years in Shimoga District;

(c) the names of Veterinary Dispensaries provided with artificial insemination equipments, the cases attended to by each dispensary for the past three years (dispensary-wise and yearwise figures may be furnished);

(d) the staff and facilities provided for such artificial inseminatio centres ?

A.—Sri M. V. KRISHNAPPA (Minister for Revenue).—

(a) *Vide* Statement I placed on the Table of the House.‡

(b) *Vide* Statement II placed on the Table of the House.‡

(c) and (d) Statement III and IV placed on the Table of the House.*

(d) *Vide* Statement V placed on the Table of the House.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ತಾವು ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ—ಸಾಗರ ತಾಲ್ಲೂಕಿಗೆ ಅಲ್ಲಿ 98 ಸಾವಿರ ಜಾನುವಾರುಗಳಿದ್ದಲ್ಲಿಗೆ 3 ಆಸ್ಪತ್ರೆಗಳನ್ನೂ ಮತ್ತು 92 ಸಾವಿರ ಜಾನುವಾರುಗಳಿರತಕ್ಕ ಸೊರಬದ ತಾಲ್ಲೂಕಿಗೆ 2 ಆಸ್ಪತ್ರೆಗಳನ್ನೂ ಕೊಟ್ಟಿದ್ದೀರಿ. ಆದರೆ ಈ ಆಸ್ಪತ್ರೆಗಳಿಗೆ ಒಂದು ವರ್ಷಕ್ಕೆ ಕೊಡುತ್ತಿರುವ ಔಷಧಿಯಾದರೋ ಒಂದಕ್ಕೆ 1,200 ರೂಪಾಯಿಗಳು, ಇನ್ನೊಂದಕ್ಕೆ 1,600 ರೂಪಾಯಿಗಳು. ಇದು ಹೀಗೇ ವರ್ಷೇ ವರ್ಷೇ ಕಡಮೆಯಾಗುತ್ತಿದೆ. ಹೀಗೆ ಈ ಔಷಧಿಯು ಸರಬರಾಯಿ ಕಡಮೆಯಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.— ಅದಕ್ಕೆ ಕಾರಣ ಹಣ ಕಡಮೆ ಇರುವುದೇ ಆಗಿದೆ. ತಾವು ವೆಟರಿನರಿ ಬಾಬಿಗೆ ಮಂಜೂರು ಮಾಡಿರತಕ್ಕ ಬಡ್ಜೆಟ್ 1 ಕೋಟಿ ರೂಪಾಯಿಗಳು ಮತ್ತು ವೈದ್ಯ ಇಲಾಖೆಗೆ ಮಂಜೂರು ಮಾಡಿರತಕ್ಕ ಬಡ್ಜೆಟ್ 12 ಕೋಟಿ ಮಾತ್ರ. ಆದರೆ ನಮ್ಮಲ್ಲಿ 600 ಚಿಲ್ಲರೆ ಆಸ್ಪತ್ರೆಗಳಿವೆ. ಆದ್ದರಿಂದ ಔಷಧಿಗೆ ದುಡ್ಡು ಕಡಮೆ ಬರುತ್ತೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ರಾಜ್ಯದಲ್ಲಿ ಎಲ್ಲಾ ಕಡೆಗೂ ಇಲ್ಲದ ಕೊರತೆ ಈ ನಮ್ಮ ಎರಡು ತಾಲ್ಲೂಕುಗಳಿಗೆ ಮಾತ್ರ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್‌ಗಳ ತೊಂದರೆ ಇದೆ. ಫಾರಿನ್ ಮೆಡಿಸನ್ಸ್ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ನಮಗೆ ಬರತಕ್ಕದ್ದನ್ನು ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೂ ಒಂದೇ ಸಮನಾಗಿ ಹಂಚುತ್ತೇವೆ. ನಿಮ್ಮ ಆ 2 ಆಸ್ಪತ್ರೆಗಳಮೇಲೆ ನಮಗೇನೂ ದ್ವೇಷವಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಇನ್ನು ಮೇಲಾದರೂ ಅಲ್ಲಿಗೆ ಸಾಕಷ್ಟು ಔಷಧಿಗಳನ್ನು ಒದಗಿಸುವುದಕ್ಕೆ ಒಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಧ್ಯವಾದಷ್ಟು ಕೊಡೋಣ ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಸರ್ಕಾರದಲ್ಲಿ ಹಣವಿಲ್ಲದಿದ್ದರೆ ಅವುಗಳನ್ನು ನಡೆಸುವುದಕ್ಕೆ ತಾಲ್ಲೂಕ್ ಬೋರ್ಡ್‌ಗಳಿಗೇಕೆ ಅವಕಾಶ ಕೊಡಬಾರದು ?

---

‡ Copy placed in the Mysore Legislature Library No. 30, dated 19-4-1965.

ಅಧ್ಯಕ್ಷರು.— ಅವರಲ್ಲಿ ಆದರೆ ಎಲ್ಲಿಂದ ದುಡ್ಡು ಬರುತ್ತೆ ?

ಶ್ರೀ ಎಂ. ವಿ. ಕೃಷ್ಣಪ್ಪ.—25 ಸಾವಿರ ಜಾನುವಾರುಗಳಿಗೆ ಒಂದು ರೂರಲ್ ಡಿಸ್‌ಪೆನ್ಸರಿ ಇರಬೇಕೆಂದಿದೆ. ತಾಲ್ಲೂಕ್ ಬೋರ್ಡಿನವರಲ್ಲಿರತಕ್ಕ ಹಣವೂ ನಮ್ಮದೇ. ಅದನ್ನೂ ನಾವು ಇದಕ್ಕೇ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಿ. ಮಾದೇಗೌಡ.—ಸರ್ಕಾರದವರು ಪ್ರತಿವರ್ಷವೂ ಎಷ್ಟು ಜಾನುವಾರು ಆಸ್ಪತ್ರೆಗಳನ್ನು ತೆರೆಯಬೇಕೆಂದು ಒಂದು ಅಂದಾಜು ಇಟ್ಟುಕೊಂಡಿದ್ದಾರೆ ಮತ್ತು ಅವುಗಳನ್ನು ಯಾವ ಆಧಾರದ ಮೇಲೆ ಹಂಚುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ವರ್ಷಕ್ಕೆ 10-20 ಆಸ್ಪತ್ರೆಗಳನ್ನು ತೆರೆಯಬೇಕೆಂಬ ಇರಾದೆ ಇದೆ. ಆದರೆ ನಮ್ಮಲ್ಲಿ ಇನ್ನೂ ಹೆಚ್ಚಿಗೆ ತೆರೆಯುವುದಕ್ಕೆ ಸಾಕಷ್ಟು ಸಿಬ್ಬಂದಿಯಿಲ್ಲ. ಆದರೂ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿ 25 ಸಾವಿರ ಜಾನುವಾರುಗಳ ಸಂಖ್ಯೆ ಇರುತ್ತದೋ ಅಂಥ ಕಡೆಗಳಲ್ಲಿ ಯಾರು ಮುಂದೆ ಬಂದು ಮನೆ ಇತ್ಯಾದಿಗಳನ್ನು ಒದಗಿಸುತ್ತೇವೆ ಎಂದು ಹೇಳುತ್ತಾರೋ ಅಂಥ ಕಡೆಗೆ ಪ್ರಯಾರ್ಟಿ ಕೊಡುತ್ತೇವೆ.

Sri C. J. MUCKANNAPPA.—May I know why there should be dual authority over the Veterinary Hospitals in regard to establishment of Hospitals by one Department and supply of medicine by another Department ? Is it not desirable to bring it under one Department ? Is it not desirable to end this dual control ? Minister for Co-operation said on the other day that it comes under his purview.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಟೋರ್ಸ್‌ಪರ್ಚೇಜ್ ಇಲಾಖೆಮೂಲಕ ಔಷಧಿಗಳನ್ನು ಕೊಂಡು ಒಂದು ಇಲಾಖೆಯ ಮೂಲಕವೇ ಔಷಧಿಗಳನ್ನು ಎಲ್ಲಾ ಆಸ್ಪತ್ರೆಗಳಿಗೂ ಸಪ್ಲೈಮಾಡಲಾಗುತ್ತಿದೆ. ಆದರೆ ಡೆವಲಪ್‌ಮೆಂಟ್ ಶಾಖೆಯ ಮಂತ್ರಿಗಳು ಹೇಳಿದ್ದರೆ ಅವರೂ ಕೂಡ ಕೆಲವು ಹಣವನ್ನು ಈ ಬಾಬಿಗೆ ಕೊಡುತ್ತಾರೆ, ಅಷ್ಟುವಿನಾ ಅವರು ಔಷಧಿಯನ್ನೇನೂ ಕೊಡುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗತಾನೆ ಮಾನ್ಯ ಮಂತ್ರಿಗಳು 25 ಸಾವಿರ ಜಾನುವಾರುಗಳಿಗೊಂದು ಆಸ್ಪತ್ರೆ ಇರಬೇಕೆಂದು ಅಪ್ಪಣೆ ಕೊಡಿಸಿದರು. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಬಾಗೂರೆಂಬ ಒಂದು ದೊಡ್ಡ ಗ್ರಾಮವಿದೆ. ಅದು ಚನ್ನರಾಯಪಟ್ಟಣಕ್ಕೆ ಸಮೀಪದಲ್ಲಿರುವುದರಿಂದ ಅಲ್ಲಿಗೆ ಜಾನುವಾರು ಆಸ್ಪತ್ರೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿಗೆ ದಯವಿಟ್ಟು ಒಂದು ಆಸ್ಪತ್ರೆಯನ್ನು ಕೊಡಿಸುವುದಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಬರೆದರೆ ಅದನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.— ಶಿವಮೊಗ್ಗ ಜಿಲ್ಲೆಯಲ್ಲಿ ಹೊಸದಾಗಿ ಈ ವರ್ಷ ಎಷ್ಟು ಆಸ್ಪತ್ರೆಗಳನ್ನು ತೆರೆಯಬೇಕೆಂದು ಆಲೋಚನೆ ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಶಿವಮೊಗ್ಗಾ ಜಿಲ್ಲೆಯಲ್ಲಿ ಸುಮಾರು 22 ಅಥವಾ 23 ಸಾವಿರ ಜಾನುವಾರುಗಳಿರಬಹುದು. ಅದಕ್ಕೆ ಸಾಕಾಗುವಷ್ಟು ಆಸ್ಪತ್ರೆಗಳನ್ನು ಈಗಾಗಲೇ ಅಲ್ಲಿ ತೆರೆಯಲಾಗಿದೆ. ಆದರೆ ಅದು ಮಲೆನಾಡಾದ್ದರಿಂದ ಅಲ್ಲಿ ಇನ್ನೂ ಜಾಸ್ತಿಯಾಗೇ ಕೆಲವು ಆಸ್ಪತ್ರೆಗಳನ್ನು ಕೊಡಲಾಗಿದೆ.

Mr. SPEAKER.—From the statement we find that the veterinary dispensary at Shimoga and the Hospital at Bhadravathi cover 59 thousand cattle. Does not the yardstick of 25 thousand apply here ?

Sri M. V. KRISHNAPPA.—I spoke of the total number of hospitals, for example, in Honnali for 58 thousand there are 6 hospitals and in Thirthahalli for 92 thousand there are 7 hospitals. *i.e.*, for 15 thousand cattle there is a hospital. The District taken as a whole has one Hospital for 20 thousand heads of cattle, whereas our average is 25 thousand.

ಶ್ರೀ ಆರ್. ಎನ್. ಲಕ್ಷ್ಮೀಪತಿ.—25 ಸಾವಿರ ಜಾನುವಾರುಗಳಿದ್ದರೂ ಆಸ್ಪತ್ರೆಯನ್ನು ಕೊಡತಕ್ಕ ಕಾಲದಲ್ಲಿ ಕೆಲವು ಷರತ್ತುಗಳನ್ನು ಹಾಕಿ ಪಂಚಾಯ್ತಿಯವರು ಇಷ್ಟು ಕೊಟ್ಟರೆ ಇಂಥದನ್ನು ಮಾಡಿದರೆ ನಾವು ಆಸ್ಪತ್ರೆಕೊಡುತ್ತೇವೆ ಎಂಬ ಷರತ್ತನ್ನು ತಪ್ಪಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಖರ್ಚುಮಾಡತಕ್ಕ ಬಡ್ಜೆಟ್ಟು ಹಣದ ಇಂತಿಷ್ಟು ಪರ್ಸೆಂಟನ್ನು ಅವರು ಕೊಡಬೇಕೆಂಬ ನೇಮ ಇದೆ. ಅದು ಅವರ ಮೇಲಿರತಕ್ಕ ಒಂದು ಆಬ್ಲಿಗೇಟರಿ ಡ್ಯೂಟಿ. ಅದನ್ನು ಅವರು ಮಾಡಲೇ ಬೇಕು.

ಶ್ರೀ ಜಿ. ರಾಮೇಗೌಡ.—ಈಗ ಆಸ್ಪತ್ರೆಗಳಿಗೆ ಒದಗಿಸುತ್ತಿರುವ ಔಷಧಿಗಳು ಬಹಳ ಕಡಮೆ ಆದ್ದರಿಂದ ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಹಣ ಕೊಡಿ ಮಾಡುತ್ತೇವೆ ಎಂದು ಆಗಲೇ ಉತ್ತರ ಹೇಳಿದರು.

ಶ್ರೀ ಎಂ. ವಿ. ಕೃಷ್ಣಪ್ಪ.—ಆಸ್ಪತ್ರೆಗಳನ್ನು ಕಟ್ಟಿಸಿದ ಮೇಲೆ ಔಷಧಿಗಳನ್ನು ಸರಬರಾಯಿ ಮಾಡದಿದ್ದರಾಗುತ್ತದೆಯೇ ? ಕೊಡಲೇಬೇಕು, ಕೊಡುತ್ತೇವೆ.

Sri SANJEEVANATH AIKALA.—How many hospitals have been given to Key Village Centres or which are the places in Shimoga District which have got Hospitals in Key Village Centres ?

Sri M. V. KRISHNAPPA.—Key Village Centres are quite different from this scheme. This has nothing to do with this.

ಶ್ರೀ ಜಿ. ಎನ್. ಪಾಟೀಲ್.—ವೆಟರ್‌ನರಿ ಗ್ರ್ಯಾಜ್ಯುಯೇಟ್ಸ್ ಸಾಕಾದಷ್ಟು ಜನ ಇಲ್ಲ ಎಂದು ತಾವು ಹೇಳಿದ್ದೀರಿ. ಮಹಾರಾಷ್ಟ್ರ ಮತ್ತು ಗುಜರಾತ್‌ದಲ್ಲಿ ಕನ್ನಡದವರು ಕೆಲವು ಜನ ಗ್ರ್ಯಾಜ್ಯುಯೇಟ್ಸ್ ಇದ್ದಾರೆ ಅವರನ್ನು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವರನ್ನು ತೆಗೆದುಕೊಂಡಿದ್ದೇವೆ, ಗುಜರಾತ್‌ದವರು ಇಬ್ಬರು ಅರ್ಜಿ ಹಾಕಿಕೊಂಡಿದ್ದರು ಅವರಿಗೆ ಬಹಳ ವಯಸ್ಸಾಗಿತ್ತು. ರೂಲ್ಸ್‌ಪ್ರಕಾರ ಬೇರೆ ಪ್ರಾವಿನ್ಸ್‌ದಿಂದ ಬಂದವರು ಇಲ್ಲಿ ಸೇರಬೇಕಾದರೆ ಹೊಸದಾಗಿಯೇ ಸೇರಬೇಕಾಗುತ್ತದೆ, ಅಲ್ಲಿ ಸರ್ವೀಸ್‌ನ್ನು ಇಲ್ಲಿ ಕೌಂಟ್‌ಮಾಡುವುದಕ್ಕಾಗುವುದಿಲ್ಲ. ಅವರ ಅರ್ಜಿ ಬಂದಿತ್ತು ಅದನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಸೂಕ್ತವಾದ ತಿದ್ದುಪಾಟುಮಾಡಿ ಅವರನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೇವೆ.

ಶ್ರೀಮತಿ ಬಸವರಾಜೇಶ್ವರಿ.—ಈ ವರ್ಷಕ್ಕೆ ಇರತಕ್ಕ 25 ರಲ್ಲಿ ರಾಯಚೂರಿಗೆ ಏನಾದರೂ ಕೊಡಬೇಕೆಂದು ಇದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಇನ್ನೂ ತೀರ್ಮಾನವಾಗಿಲ್ಲ, ಬಹುಶಃ ರಾಯಚೂರು ಜಿಲ್ಲೆಗೂ ಕೊಡುವ ಸಂಭವ ಉಂಟು ?

ಶ್ರೀ ಸಿದ್ದಯ್ಯಕಾಶೀಮಠ್.—ಹೆಚ್ಚು ವೆಟರ್ನರಿ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ದುಡ್ಡಿಲ್ಲ ಎಂದು ಹೇಳಿದಿರಿ, ಸಂಚಾರಿ ವೆಟರ್ನರಿ ಆಸ್ಪತ್ರೆಗಳನ್ನು ಮಾಡಿ ಜಾನುವಾರುಗಳಿಗೆ ಔಷದೋಪಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಸ್ಕೀಂ ಅಷ್ಟು ಸರಾಗವಾಗಿ ಈ ಡಿಪಾರ್ಟ್‌ಮೆಂಟಿನಲ್ಲಿ ಆಗಲಿಕ್ಕೆ ಇಲ್ಲ. ಮಿಲ್ಕ್‌ಷೆಡ್ ಏರಿಯಾನಲ್ಲಿ ಮಾಡಬೇಕೆಂದು ಇದ್ದೇವೆ. ಸದ್ಯದಲ್ಲಿ ವೆಟರ್ನರಿ ಇಲಾಖೆಯಲ್ಲಿ ಮಾಡಬೇಕೆಂದು ಅಭಿಪ್ರಾಯವಿಲ್ಲ.

ಶ್ರೀ ಎಫ್. ಎಸ್. ತಾವರೆ.—ಸ್ಥಾನಿಕ ಬೇಡಿಕೆಯಾವುದು ಇದೆಯೋ, ಯಾವ ಔಷಧಿ ಬೇಕೋ ಆ ಔಷಧಿಯನ್ನು ಕಳುಹಿಸದೇ ತಮ್ಮಲ್ಲಿ ಯಾವ ಔಷಧಿ ಸ್ಟಾಕ್ ಇರುತ್ತದೆಯೋ ಅದನ್ನು ತುಂಬಿ ಕಳುಹಿಸುತ್ತಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಕೇಳಿದ ಔಷಧಿ ಬಿಟ್ಟು ಬೇರೆ ಔಷಧಿ ಅವರು ಕಳುಹಿಸುವುದಿಲ್ಲ; ಏಕೆಂದರೆ ಅವರೆಲ್ಲಾ ಟೆಕ್ನಿಕಲ್ ಪೀಪಲ್ ಇರುತ್ತಾರೆ. ಹಾಗೇನಾದರೂ ಕಳುಹಿಸಿದ್ದರೆ ಬಹುಶಃ ಯಾವುದಾದರೂ ಒಂದು ಔಷಧಿ ಇರಲಿ ಎಂದು ಕಳುಹಿಸಿರಬಹುದು.

Sri SANJEEVANATH AIKALA.—Is it a fact that these dispensaries or cattle farms are posted with officers trained in T. C. M. and returned with M. B. S. C. ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಈ ವೆಟರ್ನರಿ ಲೈವ್‌ಸ್ಟಾಕ್ ಇಲಾಖೆಯಲ್ಲಿ ಅವರಿಗೆ ಬೇರೆ ಏನೇನೂ ಅಪರ್ಚ್ಯುನಿಟಿ ಇಲ್ಲದೇ ಇದ್ದರೂ ಕೂಡ ಬಹಳ ಜನ ಪರದೇಶಗಳಿಗೆ ಹೋಗಿಬರುವ ಅವಕಾಶ ದೊರೆತಿದೆ. 10-12 ವರ್ಷದಲ್ಲಿ ಸುಮಾರು 100-120 ಜನ ಅಮೆರಿಕಾ, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್ ಮುಂತಾದ ಕಡೆಗಳಿಗೆಲ್ಲಾ ಹೋಗಿ ಬಂದಿದ್ದಾರೆ. ನಮ್ಮಲ್ಲಿರತಕ್ಕ ಆಫೀಸರುಗಳಲ್ಲಿ ಶೇಕಡ 60 ಭಾಗ ಫಾರಿನ್ ರಿಟರ್ನ್ಡ್ ಅವರೇ ಇದ್ದಾರೆ ಇದು ಅವರ ಅದೃಷ್ಟ.

ಶ್ರೀಮತಿ ಬಸವರಾಜೇಶ್ವರಿ.—ನಮ್ಮಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ ಕೆಲವೇ ಕೆಲವು ಇರುವುದರಿಂದ ರಾಯಚೂರಿಗೆ ಕೊಡತಕ್ಕ ಡಿಸ್ಪೆನ್ಸರಿಯಲ್ಲಿ ಆರ್ಟಿಫಿಷಿಯಲ್ ಇನ್‌ಸಿಮಿನೇಷನ್ ಸೆಂಟರನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ವಿಚಾರಮಾಡಿ ನೋಡುತ್ತೇವೆ.

Sri SANJEEVANATH AIKALA.—Is it not possible to utilise their service in the veterinary colleges or newly-formed Rural Universities because they are well qualified men for that ?

Sri M. V. KRISHNAPPA.—In Animal Husbandry and Veterinary, here are a number of persons who have specialised in them and they go on specialising in a number of subjects. They hold only those posts in which they have been specially trained. I remember almost all the lecturers and professors in Veterinary College had the opportunity to go out and if there are one or two more they are likely to get since their names have been sent.

ಶ್ರೀಮತಿ ರತ್ನಮ್ಮ ಮಾಧವರಾವ್.—ಶಿವಮೊಗ್ಗಾ ತಾಲ್ಲೂಕು ಹಾರನಕಟ್ಟೆ ಗ್ರಾಮಕ್ಕೆ ಈ ವರ್ಷ ಪಶುವೈದ್ಯ ಶಾಲೆಯನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಬಹಳವಾಗಿ ಪದೇ ಪದೇ ಆ ವಿಷಯ ಬರೆಯುತ್ತಾ ಇದ್ದೀರಿ, ಈ ಸಲ ಕೊಡುವಾಗ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವಿ.ಎಸ್. ಲಕ್ಷ್ಮೀಕಾಂತಪ್ಪ.—ಶಿವಮೊಗ್ಗಾ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ 15 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆಯಂತೆ ಇದೆ ಎಂದು ಹೇಳಿದ್ದೀರಿ. 40-50 ಸಾವಿರ ಜಾನುವಾರುಗಳಿರತಕ್ಕ ಪ್ರದೇಶವಾದ ಸೊರಬ, ಸಾಗರ ತಾಲ್ಲೂಕುಗಳಲ್ಲಿ ಆ ತಾಲ್ಲೂಕಿನ ತಾಲ್ಲೂಕು ಬೋರ್ಡಿನವರು ಪಶುವೈದ್ಯಶಾಲೆ ಬೇಕೆಂದು ತೀರ್ಮಾನಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದ್ದರಿಂದ ಹೊಸದಾಗಿ ಈ ವರ್ಷ ಕೊಡಬೇಕೆಂದು ನಿರ್ಧಾರಮಾಡುವಾಗ ಆ ತಾಲ್ಲೂಕುಗಳಿಗೂ ಕೂಡ ಆಸ್ಪತ್ರೆಯನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೊರಬದಲ್ಲಿ 3 ಆಸ್ಪತ್ರೆ ಇದೆ. ಅಲ್ಲಿ 90 ಸಾವಿರ ಕ್ಯಾಟಲ್ ಇದೆ. 25 ಸಾವಿರಕ್ಕೆ 3 ಆಸ್ಪತ್ರೆ ಆಯಿತು. ಇನ್ನು ಒಂದು ತೆಗೆಯುವುದಕ್ಕೆ ಎಷ್ಟು ಜಾನುವಾರುಗಳು ಇರಬೇಕೋ ಅಷ್ಟು ಇಲ್ಲ, ಸ್ವಲ್ಪ ಕಡಿಮೆ ಇದೆ. ಆದರೂ ಕೂಡ ಅಲ್ಲಿ ಇನ್ನೊಂದು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಹಾರನಕಟ್ಟೆ ಗ್ರಾಮಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದೀರಿ. ಅಲ್ಲಿ ಪಶುವೈದ್ಯಶಾಲೆ ತೆರೆಯಬೇಕಾದರೆ ಅದಕ್ಕೆ ಆಗಬೇಕಾದ ಕರ್ಮಗಳೆಲ್ಲಾ ಮುಗಿದಿರುವಾಗ ಖಂಡಿತವಾಗಿ ಕೊಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೊಡುತ್ತೇವೆ.

Sri SANJEEVANATH AIKALA.—Is there any request to treat horses and dogs in Headquarters hospitals of the Districts ?

Sri M. V. KRISHNAPPA.—They are treated in veterinary hospitals; not only horses and dogs, but even donkeys are also looked after.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಒನ್ ಸೈಡೆಡ್ ಪ್ರಾಮಿಸ್ ಕೊಟ್ಟಿರಿ, ನಮಗೂ ಆ ತರಹ ಸ್ವಲ್ಪ ಅಷ್ಯೂರೆನ್ಸ್ ಕೊಡಿ, ಸ್ವಾಮಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಎಲ್ಲಾ ಆಗಿ ಮುಗಿದಿದೆ, ಆದ್ದರಿಂದ ಧೈರ್ಯವಾಗಿ ಹೇಳಿದೆ, ಅಷ್ಟೆ.

Amount sanctioned under the liberalised schemes for constructing Irrigation Wells in Belgaum District.

*Q.—648. SRI R. S. PATIL (Ramdurg).—

Will the Government be pleased to state :—

(*a*) the amount sanctioned under the Liberalised schemes for the Construction of Irrigation wells in Belgaum District, for the last 3 years;

(*b*) the number of wells sanctioned in each taluk of Belgaum District during the said period;

(*c*) the number of wells completed in each of the taluks in the above period?

A.—SRI M. V. KRISHNAPPA (Minister for Revenue).—

(*a*) 1961-62	1962-63	1963-64
Rs.	Rs.	Rs.
4,29,851-00	9,89,780	16,50,000

(*b*) and (*c*) *Vide* statement appended.

Statement showing the number of wells sanctioned and the number of wells completed during the period from 1961-62 to 1963-64 in Belgaum District.

Name of the taluk		Sanctioned 1961-62	Sanctioned 1962-63	Sanctioned 1963-64	Completed 1961-62	Completed 1962-63	Completed 1963-64
Athni	...	—	195	73	—	195	—
Chickodi	...	—	83	10	—	83	—
Hukkeri	...	—	65	41	—	64	—
Gokak	...	16	197	154	16	157	—
Bailhongal	...	—	25	9	—	25	—
Parasagad	...	22	111	31	22	105	—
Ramadurg	...	—	139	76	—	117	16
Raibag	...	—	142	87	—	139	—
Khanapur	...	—	—	—	—	—	—
Belgaum	...	—	139	8	—	119	—
		38	1096	489	38	1004	16

ಶ್ರೀ ಆರ್. ಎಸ್. ಪಾಟೀಲ್.—1963-64 ರಲ್ಲಿ 489 ಮಂಜೂರು ಆದದ್ದರ ಪೈಕಿ ಕೇವಲ 16 ಬಾವಿಗಳು ಪೂರ್ತಿಯಾಗಿವೆ ಎಂದು ಹೇಳಿದ್ದೀರಿ. ಅಷ್ಟೊಂದು ಬಾವಿಗಳು ಅಪೂರ್ತಿಯಾಗುವುದಕ್ಕೆ ಕಾರಣವೇನು ? ತಮ್ಮಿಂದ ಹಣ ಒದಗಿಸುವುದಕ್ಕೆ ಆಗಲಲ್ಲವೇ ಅಥವಾ ಕೊಟ್ಟ ಹಣ ಅಪವ್ಯಯವಾಗಿ ಪೂರ್ತಿಯಾಗಲಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಕಡೆ ಪೂರ್ತಿಯಾಗದೇ ಇರುವುದಕ್ಕೆ ಕಾರಣ ಮಳೆ ಬಂದ ಕಾಲಕ್ಕೆ ಕೆರೆ ತುಂಬುತ್ತದೆ. ಈ ಜಿಲ್ಲೆಯಲ್ಲಿ ಅಂತಹ ಸನ್ನಿವೇಶ ಇಲ್ಲ. ಇಲ್ಲಿ ಪೂರ್ತಿಯಾಗದೇ ಇರುವುದಕ್ಕೆ ಏನು ಕಾರಣ ಎಂಬುದನ್ನು ತಿಳಿದುಕೊಂಡು ಹೇಳಬೇಕಾಗುತ್ತದೆ. ಹಳೇ ಮೈಸೂರು ಏರಿಯಾದಲ್ಲಿ ಮಳೆ ಬಂದ ಕಾಲಕ್ಕೆ ಕೆರೆಗಳೆಲ್ಲಾ ತುಂಬಿಹೋಗುತ್ತವೆ, ಬಾವಿ ತೆಗೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಪೂರ್ತಿಯಾಗುವುದಿಲ್ಲ. ಪೂರ್ತಿಯಾಗಬೇಕಾದರೆ ಬೇಸಗೆ ಕಾಲ ಬರಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಸರ್ಕಾರದಿಂದ ಎರಡನೆ ಕಂತಿನ ಹಣ ತಡವಾಗಿ ಮುಟ್ಟಲಿಕ್ಕೆ ಹತ್ತಿರುವುದರಿಂದ ಬಾವಿಗಳು ಪೂರ್ತಿಯಾಗದೇ ಉಳಿದಿವೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೊತ್ತಿದೆ. ಬೇರೆ ಡಿವಿಜನ್‌ಗಳಿಗೆ ಕೊಟ್ಟಹಾಗೇ ಬೆಳಗಾಂ ಡಿವಿಜನ್‌ಗೂ ಕೂಡ ಕೊಟ್ಟಿದೆ. ಬೇರೆ ಡಿವಿಜನ್‌ಗಳಲ್ಲಿ ಎಷ್ಟು ಪ್ರೋಗ್ರೆಸ್ ಆಗಿರಬೇಕೋ ಅಷ್ಟೇ ಅಲ್ಲೂ ಆಗಿರಬಹುದು. ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದು ಹೇಳಿ ದೂರು ಬಂದಿಲ್ಲ. ಬಂದರೆ ಸಂಬಂಧಪಟ್ಟ ಆಫೀಸರುಗಳಿಗೆ ಹೇಳಿ ಕೊಡಿಸುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ಅಥಣಿ, ಗೋಕಾಕ್, ರಾಯಬಾಗ್, ರಾಮದುರ್ಗ ಈ ಎಲ್ಲಾ ಕಡೆಯಲ್ಲೂ ಅರ್ಧಭಾಗದಷ್ಟು ಮಾತ್ರ ಆಗಿದೆ. ಕೊಟ್ಟಂಥ ಬಾವಿಗಳ ಸಂಖ್ಯೆ 1096. ಇದರಲ್ಲಿ ಅವರ ಎರಡನೆಯ ಒಂದು ಅಂಶ ಕೂಡ ಅವರ ಡಿಮ್ಯಾಂಡನ್ನು ಪೂರೈಕೆ ಮಾಡುವುದಕ್ಕೆ ತಮ್ಮಿಂದ ಆಗಿಲ್ಲ ಎಂಬುದನ್ನು ಒಪ್ಪುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾಂ ಜಿಲ್ಲೆಗೆ 1962 ರಲ್ಲಿ 4 ಲಕ್ಷ ರೂಪಾಯಿ ಕೊಟ್ಟಿತ್ತು. 1963 ರಲ್ಲಿ 10 ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಈ ವರ್ಷ 16 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಆದರೆ ಕೊಡುತ್ತಾ ಇರುವ ಬಾವಿಗಳು ಸಾಲದು ಎನ್ನುವುದು ಗೊತ್ತಿದೆ. ಆ ದೃಷ್ಟಿಯಿಂದ ಇನ್ನುಮುಂದೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ಗಳಿಗೆ ಇದನ್ನು ವಹಿಸಿ ನಾವು 16 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅವರ ಮೂಲಕ ಅದರ 5 ರಷ್ಟು ಅವರಿಗೆ ಸಿಕ್ಕಬಹುದು. 80 ಲಕ್ಷ ರೂಪಾಯಿ ಕೋ ಆಪರೇಟೀವ್ ಲೋನ್ ರೈಸ್ ಮಾಡಿ 16 ಲಕ್ಷಕ್ಕೆ ಬದಲಾಗಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬಹುದು. ಈಗ ಒಂದು ಬಾವಿಗೆ ಕೊಡುತ್ತಾ ಇರುವ 3 ಸಾವಿರ ರೂಪಾಯಿ ಸಾಲದು ಇನ್ನೂ ಜಾಸ್ತಿ ಹಣ ಕೊಡಬೇಕೆಂದು ಹೇಳಿ ಒಂದು ಸಲಹೆ ಇತ್ತು. ಆದ್ದರಿಂದ 5 ಸಾವಿರ ರೂಪಾಯಿಗಳವರೆಗೂ ಸಹ ಕೊಡಬಹುದು ಎಂದು ಹೇಳಿ ಬ್ಯಾಂಕ್‌ನವರಿಗೆ ಅಧಿಕಾರ ಕೊಟ್ಟಿದ್ದೇವೆ. ಇನ್ನು ಮುಂದೆ ಈ ಕೆಲಸ ಎಲ್ಲಾ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮುಖಾಂತರ ನಡೆಯುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ತಾಲ್ಲೂಕು ಬೋರ್ಡು ತಕಾವಿ ಹಣ ಕೊಡುವಂತೆ ವ್ಯವಸ್ಥೆ ಮಾಡುವುದಕ್ಕೆ ಇರುವ ತೊಂದರೆಯೇನು ?

1-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ತಾಲ್ಲೂಕು ಬೋರ್ಡಿಗಿರುವ ಅಧಿಕಾರಕ್ಕೆ ಕುಂದಕ ಬಾರದ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—1962-63 ರಲ್ಲಿ 9,89,780 ರೂಪಾಯಿಗಳನ್ನು ಮಂಜೂರು ಮಾಡಿದಾಗ 1,096 ಬಾವಿಗಳಿಗೆ ಅವಕಾಶ ಕೊಟ್ಟು, 1963-64ರಲ್ಲಿ ಹದಿನಾರೂವರೆಲಕ್ಷರೂಪಾಯಿಗಳಷ್ಟು ಹೆಚ್ಚು ಹಣ ಕೊಟ್ಟಿರುವಾಗ ಕೇವಲ 489 ಬಾವಿಗಳಿಗೆ ಮಾತ್ರ ಮಂಜೂರಾತಿ ನೀಡಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಪೂರ್ಣವಾಗಿರುವ ಬಾವಿಗಳ ಕೆಲಸವನ್ನು ಪೂರ್ಣಮಾಡುವುದಕ್ಕೆ ಹಣ ಕೊಡಬೇಕಾಗುತ್ತದೆ. ಈ ವರ್ಷ ನೂರು ಬಾವಿಗಳಿಗೆ ಒಂದು ಸಾವಿರ ರೂಪಾಯಿನಂತೆ ಕೊಟ್ಟರೆ ಮುಂದಿನ ವರ್ಷ ಅಪೂರ್ಣವಾಗಿರುವುದನ್ನು ಪೂರ್ಣಮಾಡಲು ಹಣ ಕೊಡಬೇಕಾಗುತ್ತದೆ.

ಶ್ರೀ ಎಫ್. ಎಸ್. ತಾವರೆ.—1964-65 ರಲ್ಲಿ ಹೊಸ ಬಾವಿಗಳಿಗೆ ಹಣ ಕೊಡಬಾರದು ಎಂದು ಸೂಚಿಸಿರುವುದಾಗಿ ಅರ್ಥ ಬರುವಂತೆ ಹೇಳಿದರು. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ತನ್ನ ಸ್ಕೀಮನ್ನು ಜಾರಿಗೆ ತರುವವರೆಗೆ ಬೇಕಾದರೆ ಒಂದು ವರ್ಷ ಕೆಲಸ ನಿಲ್ಲುವುದರಿಂದ ಬ್ಯಾಂಕು ತನ್ನ ಕೆಲಸ ಪ್ರಾರಂಭಿಸುವವರೆಗೆ ಸೌಲಭ್ಯ ನೀಡಲು ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸ ಬಾವಿ ತೆಗೆದುಕೊಳ್ಳುವುದು ಬೇಡವೆಂದು ಹೇಳಿರುವುದಕ್ಕೆ ಕಾರಣ ಅಪೂರ್ಣವಾಗಿರುವ ಬಾವಿಗಳನ್ನು, ಸುಮಾರು 16-17 ಸಾವಿರ ಅಪೂರ್ಣವಾಗಿರುವುದನ್ನು ಪೂರ್ಣಮಾಡಲು 2-3 ಕೋಟಿ ರೂಪಾಯಿ ಬೇಕು, ಅದಕ್ಕೆ ಮೊದಲು ಅವಕಾಶ ಕೊಡಬೇಕು ಎಂಬ ಉದ್ದೇಶದಿಂದ ಮಾನ್ಯ ಸದಸ್ಯರಾದ ತಾವರೆಯವರು ಶಿಗಾವಿ ತಾಲ್ಲೂಕಿನಲ್ಲಿ ದೊಡ್ಡ ಚಳವಳಿ ನಡೆಸಿ ಬಹಳ ಬಾವಿಗಳನ್ನು ಈಗಾಗಲೆ ತೆಗೆಸಿದ್ದಾರೆ.

Converting of Muddebihal-Bijapur Road into an all-weather Road.

*Q.—689. Sri S. M. GURADDI (Muddebihal).—

Will the Government be pleased to state :—

(a) whether it has come to their notice that much hardship was caused to the people as communication and transport facilities in Muddebihal taluk were cut off completely for 10-15 days during the last rainy season ;

(b) whether it is a fact that at that time the Taluk Congress Committee Merchants' Association, Lawyers' Association and the M.L.A., of the above taluk had represented to the Chief Minister, Minister for Public Works to convert the Muddebihal-Bijapur road into an all-weather road ;

(c) if so, the action taken by them to improve the Muddebihal-Bijapur road ?

A.—Sri VEERENDRA PATIL (Minister for Public Works).—

(a) Yes—for 4-5 days only.

(b) Yes.

(c) The section from Bijapur to Mangoli is already taken up for improvements under NH 13 original works and work is in progress.

Further work in the section from Mangoli to Muddebihal will be taken up after the alignment is finalised.

ಶ್ರೀ ಎಸ್ ಎಂ. ಗುರೆಡ್ಡಿ.—ಮುದ್ದೇಬಿಹಾಳಿನಿಂದ ಬಿಜಾಪುರದವರೆಗೆ ಇರುವ ರಸ್ತೆ ಮಾಡಿ ಸಾಧಾರಣವಾಗಿ 75-80 ವರ್ಷಗಳಾಗಿರಬಹುದು. ಈ ರಸ್ತೆಯಲ್ಲಿ ಒಂದು ಕಾಸ್‌ವೇ ಇಲ್ಲ, ಸೇತುವೆ ಇಲ್ಲ. ಎಷ್ಟೋ ಸಲ ಇದರಿಂದಾಗುವ ತೊಂದರೆಯನ್ನು ತಿಳಿಸಿದರೂ ಕೂಡ ಇನ್ನೂ ರಸ್ತೆ ಸರಿಯಾಗಿ ಮಾಡದಿರಲು ಕಾರಣವೇನು ?

†Sri G. B. SHANKAR RAO (Parliamentary Secretary to the Minister for Public Works).—Sir, this is a section of National Highway No. 13 which has been approved by the Government of India. But recently the Deputy Research Officer, Government of India visited this area for fixing and deciding the location of the Bridge across Krishna. In view of this, the alignment is going to be changed. That is why we have not taken up any improvements on this road.

---

† Indicates that the speeches or remarks have not been revised by the member concerned.

Sri R. M. DESAI.—It is not the question of bridge across Krishna, but it is a small portion of the road where there are small nalas and big nalas which are innumerable on this road, from Sholapur to Chitaldurg. Is there any programme of taking up this work as early as possible ?

Sri G. B. SHANKAR RAO.—This will be decided only when the new alignment is decided. This section of the alignment of the National High way No. 13 is going on to be changed.

Mr. SPEAKER.—Are there any nalas in the portion that will not be changed ?

Sri G. B. SHANKAR RAO.—Yes, Sir, There are nalas. But these roads have been taken over to P.W.D. only recently and we will improve them gradually.

Sri R. M. DESAI.—Sir. probably the Deputy Minister has no idea of the road, Sir.

Mr. SPEAKER.—That is not a supplementary.

Sri R. M. DESAI.—What is the length of the road which has been taken from Bijapur as National High Way ?

Mr. SPEAKER.—National High way No. 13 begins from what place and ends at what place ?

Sri G. B. SHANKAR RAO.—This section of the road begins at Bijapur and joins National High way No. 4 near about Chitaldurg.

Mr. SPEAKER.—In that portion, the Member states, apart from this alteration that is considered, in the portions where there is no idea of change at all, are there any nalas and what works are going to be taken up and when ?

Sri G. B. SHANKAR RAO.—Sir, the question relates to the section of the road National High way from Bijapur to Muddebihal. There are nalas. But this alignment is going to be changed in view of the shifting of the location of the Krishna Bridge which is to be decided yet, whether this entire length will be made as a national high way No. 13 or after the change of alignment, the other portions cannot be improved, will be considered afterwards.

Sri R. M. DESAI.—If it is not taken as national high way, is the fate of the road sealed, Sir ?

Mr. SPEAKER.—Evidently there is a slight mixing of the idea. The Hon'ble Member may give notice of a fresh question.

ಶ್ರೀ ಎಸ್. ಎಂ. ಗುರೆಡ್ಡಿ.—ನಾನು ಕೇಳುವುದು ಮುದ್ದೆಬಿಹಾಳ—ಬಿಜಾಪುರ ರಸ್ತೆ ವಿಚಾರ ಈ ರಸ್ತೆಯಲ್ಲಿ ಒಂದು ಪ್ಲೈಪ್ ಆದರೂ ಹಾಕಿದ್ದೀರಾ ?

Sri G. B. SHANKAR RAO.—Sir, this was originally a L.B. Road but tentatively the Government has fixed this as National High Way No. 13. Because it has been taken over recently and because of paucity of funds with us, I say that this will be taken up gradually.

ಶ್ರೀ ಜಿ. ಎಲ್. ಕಬಾಡಿ.—ಸರಕಾರದವರು ಈಗ ಉತ್ತರ ಕೊಡುವಾಗ ಹೇಳಿದ ನ್ಯಾಷನಲ್ ಹೈವೇಗೂ ಮುದ್ದೇಬಿಹಾಳ—ಬಿಜಾಪುರ ರಸ್ತೆಗೂ ಯಾವ ಸಂಬಂಧವೂ ಇಲ್ಲ. ಪ್ರಶ್ನೆಯಲ್ಲಿ ಕೇಳಿರುವ ರಸ್ತೆಯ ಕೆಲಸವನ್ನು ಯಾವಾಗ ತೆಗೆದುಕೊಂಡು ಸೇತುವೆಗಳನ್ನು ನಿರ್ಮಿಸಲಾಗುವುದು ?

Sri G. B. SHANKAR RAO.—Perhaps the Hon'ble Member has no clear idea of this area. The road from Bijapur to Muddebihal *via* Bagewadi has been fixed as National High Way No. 13. The Hon'ble Member says that it is not a National High Way.

Mr. SPEAKER.—Let there be clear ideas. I will hold it over. I will look into it myself.

Sri G. B. SHANKAR RAO.—There is no need to hold over, Sir. I can answer any question.

Mr. SPEAKER.—We are concerned with the road length from Bijapur to Mangoli.

Sri G. B. SHANKAR RAO.—If that is the question of the Hon'ble Member, from Bijapur to Mangoli; this is a small section of the Bijapur-Muddebihal road.

Mr. SPEAKER.—Kindly read the answer to (*c*). I do not know from the answer that from Bijapur to Mangoli is under national highway No. 13.

Sri G. B. SHANKAR RAO.—From Bijapur to Mangoli is a part of work from No. NH 13.

Sri R. M. DESAI.—It is a NH 13 no doubt about it. Even up to Mangoli the road is not cleared. Is it the opinion of the Government that there is no bigger impediment on the way up to Mangoli ?

Mr. SPEAKER.—Has the Minister got details about it ?

Sri G. B. SHANKAR RAO.—No details but this is a very small portion of work and this is in progress.

Mr. SPEAKER.—There seems to be some confusion about it. Members are desirous of knowing what are the works from Bijapur to Mangoli ? If the Minister has not got details, he will get details. I will hold it over ; for obvious reasons, there is no harm.

Admission to Industrial Training Centre at K.G.F.

*Q.—802. Sri S. RAJAGOPAL (K. G. F.).—

Will the Government be pleased to state :—

(*a*) the number of applications received and the number of applicants interviewed for admission in Industrial Training Centre at K.G.F. during last 3 years (Tradewise).

(*b*) the number of applicants selected ?

A.—Sri K. MALLAPPA (Minister for Industries) [on behalf of D. DEVARAJ URS (Minister for Labour, Housing and Transport)].—

(*a*) The Information is as under :—

(i) Number of applications received ... 1,475

(ii) Number of applicants interviewed ... 1,204

(Trade-wise information cannot be furnished because application are not invited trade-wise).

(*b*) 318.

Sri S. RAJAGOPAL.—Supplementary to (a). May I know on what basis these applications are invited ?

Sri K. MALLAPPA.—Applications are invited from candidates and they are asked to indicate the preference to subjects. There will be half-a-dozen subjects and they will have to indicate the order of preference which they like to have.

Sri S. RAJAGOPAL.—May I know the order of the applications invited trade-wise ?

Sri K. MALLAPPA.—I can give the selection : In November 1962 fitters 37, welders 15, moulders 18, wiremen 18, carpentry 18, black-smithy 18, total 124.

1964 : fitters 30, welders 18; moulders 24 ; wiremen 24 ; carpentry 20; black-smithy 24, total 140.

February 1965 : fitters 13, welders 21 ; moulders 20, total 54.

Sri S. RAJAGOPAL.—Have Government received any complaints from the local people complaining that the selections were not proper ?

Sri K. MALLAPPA.—We have no information about it.

Sri C. J. MUCKANNAPPA.—What is the principle adopted to select these people trade-wise, Sir ?

Sri K. MALLAPPA.—The qualification and aptitude.

Sri S. RAJAGOPAL.—Sir, though the applications were 1204, selection for three years is only 318 candidates. So, in view of the demand, will Government think of increasing the present strength ?

Sri K. MALLAPPA.—They have already increased the strength. On account of increase in strength, the number in fitters is increased to 13, welders 25 and moulders also increased by 20 and selection has been made for that number.

Sri S. RAJAGOPAL.—By whom have these trainees been selected ?

Sri K. MALLAPPA.—There is a Selection Committee.

Sri S. RAJAGOPAL.—Who are the members of that committee ?

Sri K. MALLAPPA.—If the Hon'ble Member asks a separate question, I will give them.

Sri SIDDIAH KASIMATH.—How many Scheduled Caste candidates are there ?

Sri K. MALLAPPA.—They are as follows :—

		For 1963	1964	1965
Fitters	...	8	9	4
Welders	...	6	8	5
Moulders	...	6	9	8
Wiremen	...	8	1	
Carpenters	...	4	13	
Blacksmith	...	7	9	

Sri C. J. MUCKANNAPPA.—Do Government consider the desirability of increasing the intake in view of the large number of applications for training in the Industrial Training Institute ?

Sri K. MALLAPPA.—I have already stated that to the extent possible the strength has been increased in three subjects. In February we have taken additional candidates.

Sri J. P. SARWESH.—What kind of encouragement is Government extending to the lady candidates who come forward to take training in these centres ?

Sri K. MALLAPPA.—I do not think there is any objection if they come forward provided they have the necessary qualification and aptitude.

ಶ್ರೀ ಬಿ. ಚನ್ನಬೈರೇ ಗೌಡ.—ಈಗ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್‌ನಲ್ಲಿಯೂ ಆ ರೀತಿ ಟ್ರೈನಿಂಗ್ ಪಡೆದು ಪಾಸ್ ಆಗಿರುವವರಿಗೆ ಉದ್ಯೋಗಗಳು ಸಿಗುತ್ತಾ ಇಲ್ಲ. ಅಂತಹವರಿಗೆ ಅಲ್ಲಿ ಅವಕಾಶ ಸಿಗುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಅಲ್ಲಿಗೂ ಈ ಟ್ರೈನಿಂಗ್ ಸೆಂಟರಿಗೂ ಬಹಳ ವ್ಯತ್ಯಾಸವಿದೆ. ಇಲ್ಲಿ ತಯಾರಾಗಿರುವವರು ಕೆಲಸ ಮಾಡುವ ಜನರಾಗಿರಬೇಕು. ಆಫೀಸಿನಲ್ಲಿ ಕೂತು ಕಲಸ ಮಾಡುವ ಜನರಲ್ಲ. ಕಾರ್ಖಾನೆಗಳಲ್ಲಿ ಕೆಲಸ ಮಾಡುವಂತಹ ತರಬೇತು ಪಡೆದವರಾಗಿರಬೇಕು.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಈ ತರಪೇತಿ ಕೇಂದ್ರಕ್ಕೆ ಇಷ್ಟೇ ಜನರು ಇರಬೇಕೆಂದು ಸರ್ಕಾರ ನಿಗದಿಮಾಡಿದಿಯೇ ?

ಶ್ರೀ ಕೆ. ಮಲ್ಲಪ್ಪ.—ಪ್ರತಿಯೊಂದು ಸೆಕ್ಷನ್ನಿಗೂ ಇಷ್ಟೇ ವಿದ್ಯಾರ್ಥಿಗಳು ಇರಬೇಕೆಂದು ನಿಗದಿಯಾಗಿದೆ.

Sri S. RAJAGOPAL.—Has Government invited applications from lady candidates from K. G. F ?

Sri K. MALLAPPA.—No separate quota is fixed on the ground of sex.

Sri C. J. MUCKANNAPPA.—In view of the fact that this kind of training will solve the problem of unemployment, will Government consider the desirability of increasing the number of training institutes in the State ?

Sri K. MALLAPPA.—That is a suggestion for action.

Sri SANJEEVANATH AIKALA.—Sir, the passed over question No. 649 may be put to the House.

Mr. SPEAKER.—I put question No. 649.

Income derived by each of the Ports in the State by Imports and Exports.

Q.*—649. **Smt. V. V. MIRJANKAR (Kumta).—

Will the Government be pleased to state :—

(*a*) the income derived by each of the ports in the State by way of imports and exports annually ;

(*b*) the tonnage of cargo handled at these ports (annually) ;

(*c*) the facilities provided by the Ports Department at the Dock areas of Honnavar, Bhatkal, Tadri, Belekeri and Karwar for handling and storing, etc., of cargo ?

A.—Sri G. B. SHANKAR RAO (Parliamentary Secretary to the Minister for Public Works) [on behalf of SRI VEERENDRA PATIL (Minister for Public Works)].—

(*a*) *Vide* Statement I appended.

(*b*) 13,18,739 tonnes during 1963-64.

(*c*) *Vide* Statement II appended.

Statement I showing the income derived by each of the Ports in Mysore State by way of Imports and Exports during the year.

Sl. No.	Name of the Ports	1963-64
1	Mulki	...
2	Malpe	36,811.00
3	Hangarkatta	2,018.00
4	Coondapur	76,846.00
5	Baindur	650.00
6	Bhatkal	2,881.00
7	Shirali	65.00
8	Murdeshwar	450.00
9	Manki	3.00
10	Honavar	67,170.00
11	Kumta	75.00
12	Tadri	18,224.00
13	Gangavalli	56.00
14	Ankola	8.00
15	Belekeri	1,68,866.00
16	Chendia	672.00
17	Binge	362.00
18	Karwar	2,57,884.00
19	Sadashivgad	...
20	Majali	159.00
21	Mangalore	4,65,111.00
		10,98,311.00

STATEMENT II

Particulars of facilities provided at the ports of Batkal, Honavar, Tadri, Belekeri and Karwar for handling and storing of cargo.

1. *Bhatkal* :—There is a small built up Government Wharf on the Southeren bank of the River in front of the Customs House. A passenger shed 16m. × 5m. is provided for use of passengers embarking and disembarking at the port Cargo is handled on the P. W. D. Jetty on the Northern bank. No storage facilities like cargo shed, transit shed are provided at this port.

II. *Honavar* :—1. Lighterage Wharf about 400 ft. long with a stacking area of 69,000 sq. ft. (6,410·6 sq. m.)

2. Lighterage wharf, 564 ft. long with a total stacking area of about 3 lakh sq. ft. (27,870·7 sq. m.) is under construction and is expected to be completed by 1965–66.

3. Transit shed with an area of 1,250 Sq.ft. (116·2 Sq. meters) for storage of cargo.

All these facilities are provided on the northern bank of the River Sharavathi.

On the southern bank of the River, two wooden jetties were constructed for loading iron ore into barges. The work of constructing four R. C. C. loading jetties for iron ore has been taken up and is expected to be completed during 1965–66.

There is plenty of stacking area available for bulk cargo on the southern bank.

III. *Tadri* :—1. There is no built up wharf at this port. There is a small built up ramp in front of the Transit shed which is used for loading and unloading of general cargo.

2. A Transit shed of 1,250 sq. ft. area constructed during II Five Year Plan period.

3. A dry store masonry wharf 300 feet (91·44 metres) in length is under construction and is expected to be completed during 1965-66.

IV. *Belekeri* :—1. One Jetty with mechanical ore loading arrangement owned by Private firm for shore loading of iron ore into barges.

2. One wharf inside Belekeri creek about 850 ft. in length with a stacking area of 75,000 sq. feet (6·968 sq. metres).

3. One P.W.D. Passenger Landing Jetty used for landing and shipping of coastal cargo. No storage facilities like Transit shed, etc., are provided at this port.

V. *Karwar* :—(1) Stone masonry wharf 800 feet long.
(2) Stacking area between road and wharf wall 800'×100'.
(3) R.C.C. Passenger jetty—90'×40'
(4) One Passenger Shed with Canteen—59'6"×21'6".
(5) One transit shed—53'3"×21'6".
(6) Two hand cranes about one Ton capacity each

In addition one Lighterage wharf 1,000' in length is under construction and expected to be completed during 1965–66.

SRI SANJEEVANATH AIKALA.—Which are the ports which are to be developed as all-weather, fair-weather and major ports ?

MR. SPEAKER.—That is a totally different question.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಬಂದರುಗಳಿಂದ ಸಾಮಾನ್ಯವಾಗಿ 10 ಕೋಟಿ ರೂಪಾಯಿಗಳ ಆದಾಯವಿದೆ. ಅದರ ಜೊತೆಗೆ ಪರದೇಶಗಳಿಂದ ಹೆಚ್ಚು ಹಣ ಬರುವ ಸಂಭವ ಬೇರೆ ಇದೆ. ಹೀಗಿದ್ದರೂ ನಮ್ಮ ಸರ್ಕಾರದವರು ಬಂದರುಗಳ ಅಭಿವೃದ್ಧಿಗೆ ಹೆಚ್ಚು ನಿಗಾ ಕೊಟ್ಟಿಲ್ಲ. ಅವರ ಅಭಿವೃದ್ಧಿಗಾಗಿ ಅದರ ಪೋರ್ಟ್ ಪೋಲಿಯೊ ಇರುವಂಥ ಪ್ರತ್ಯೇಕವಾಗಿ ಒಬ್ಬ ಮಂತ್ರಿಗಳು ಇರಬೇಕು. ಈ ವಿಚಾರದಲ್ಲಿ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ?

Mr. SPEAKER.—Item 21 has been taken over by the Centre. Does the Hon'ble Member want a portfolio here when the Centre have taken over that ?

Sri H. R. KESHAVA MURTHY.—The development of ports in the Mysore State is a very important question. ನಮಗೆ ಕೊಟ್ಟಿರತಕ್ಕ ಪುಸ್ತಕವನ್ನು ನೋಡಿದರೆ ಬಹಳವಾಗಿ ಬಂದರುಗಳ ಅಭಿವೃದ್ಧಿಯಾಗಬೇಕಾಗಿದೆ. ಅದರ ಜವಾಬ್ದಾರಿ ಬಹಳವಿದೆ. ಅದರ ಕೆಲಸವೂ ಬಹಳವಿದೆ. ಆದ್ದರಿಂದ ಒಬ್ಬ ಮಂತ್ರಿಗಳು ಇದಕ್ಕೆ ಪ್ರತ್ಯೇಕವಾಗಿ ಬೇಕೇಬೇಕು.

Sri G. B. SHANKAR RAO.—The ports department is handled by the Minister for Public Works.

Sri SANJEEVANATH AIKALA.—There are two ports which derive an income which is less than two digits and there are four ports with an income less than three digits. Is it not better to close them ?

Sri G. B. SHANKAR RAO.—Excepting 7 ports the rest of the minor ports handle very little cargo. In course of time, when the traffic dwindles, we will think of closing them.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಬಂದರುಗಳ ಅಭಿವೃದ್ಧಿಯ ಬಗ್ಗೆ ಕೇಂದ್ರ ಸರ್ಕಾರದವರನ್ನು ನಮ್ಮ ರಾಜ್ಯ ಸರ್ಕಾರದವರು ಒತ್ತಾಯ ಮಾಡಬೇಕು. ಇದಕ್ಕೆ ಒಬ್ಬ ಸರಿಯಾದ ಅಧಿಕಾರಿ ಬೇಕು, ಒಬ್ಬ ಮಂತ್ರಿಯೂ ಪ್ರತ್ಯೇಕವಾಗಿ ಬೇಕು. ಕಸ್ಟಮ್ಸ್ ಡ್ಯೂಟಿಯನ್ನು ನಮ್ಮ ದೇಶದಲ್ಲಿ ಎಷ್ಟು ಕೊಡುತ್ತಿದ್ದಾರೆ? ಈ ಬಂದರುಗಳ ಅಭಿವೃದ್ಧಿ ಬಗ್ಗೆ ಈ ಸರ್ಕಾರದ ನಿಲುವೇನು ?

Sri G. B. SHANKAR RAO.—That is too vague a question. If the Hon'ble Member looks into the booklet, he will find how much attention we have paid to this question.

Sri R. S. HEGDE.—Why is the Karwar Port behind schedule ?

Sri G. B. SHANKAR RAO.—For some time model studies with regard to this port were conducted at Poona; that took some time to get the results. That is the reason for it.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಬಂದರುಗಳಲ್ಲಿ ಮುಖ್ಯವಾಗಿ ಆಮದು ಮತ್ತು ರಫ್ತು ಆಗ ತಕ್ಕಂಥ ವಸ್ತುಗಳು ಯಾವುವು ?

Mr. SPEAKER.—That booklet gives that information.

ಶ್ರೀ ಸಿದ್ದಯ್ಯ ಕಾಶೀಮಠ್.—ಕಾರವಾರ ಬಂದರಿನಿಂದ ಆಮದು ಮತ್ತು ರಫ್ತುಗಳ ಮೂಲಕ ಬಂದಿರತಕ್ಕ ವರಮಾನ ಕೇವಲ 2 ಲಕ್ಷ 57 ಸಾವಿರ ಚಿಲ್ಲರೆಯಾಗಿದೆ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ನೋಡಿದರೆ ಮಂಗಳೂರು ಬಂದರನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡಿದ್ದರಿಂದ ಅದರಿಂದ ವರಮಾನ 4 ಲಕ್ಷ 65 ಸಾವಿರ ಚಿಲ್ಲರೆ ಬಂದಿದೆ. ಆದ್ದರಿಂದ ಈ ಕಾರವಾರ ಬಂದರನ್ನು ಕೇಂದ್ರ ಸರ್ಕಾರಕ್ಕೆ ವಹಿಸುವುದರಿಂದ ವರಮಾನವೂ ಜಾಸ್ತಿಯಾಗಿ ಬಂದರಿನ ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುವುದಿಲ್ಲವೇ? ಇದಕ್ಕಾಗಿ ನಮ್ಮ ಸರ್ಕಾರದವರು ಹೆಚ್ಚಿಗೆ ನಿಗಾ ಕೊಡಬೇಕಲ್ಲವೇ ?

Sri G. B. SHANKAR RAO.—Karwar port is being developed at a cost of Rs. 2 crores as a State project. In the first stage there is

provision for construction of a lighterage wharf at a cost of Rs. 20 lakhs and in the second stage we are going to construct an ocean going steamer berth at a cost of Rs. 30 lakhs.

2-00 P.M.

Sri C. J. MUCKANNAPPA.—May I know the schemes under contemplation and the facilities going to be provided to the users of ports specially, Honnawar, Bhatkal and Karwar.

Sri VEERENDRA PATIL.—It is not possible to furnish this information which is a very lengthy one. If the Hon'ble Member wants I will place it on the Table of the House.

Sri SANJEEVANATH AIKALA.—How many are proposed to be developed as fishing ports and how many as fishing harbours ?

Sri G. B. SHANKAR RAO.—So far as commercial ports are concerned, namely Karwar, Coondapur and Bhatkal, there are proposals to develop them as fishing harbours also. There are also other minor ports which are to be developed as fishing harbours. It is proposed to develop Malpe as a fishing harbour by the Norvegian Aid.

Sri SANJEEVANATH AIKALA.—Is it not a fact that all these ports are good centres importing illicit distilled liquors ?

Mr. SPEAKER.—It is disallowed.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಒಟ್ಟು ರಾಜ್ಯದಲ್ಲಿ ಪ್ರತಿಯೊಂದು ಬಂದರಿನಿಂದ ಅಮದು ಮತ್ತು ರಫ್ತುಗಳ ಮೂಲಕ ಒಂದು ವರ್ಷಕ್ಕೆ 10,98,311.00 ರೂಪಾಯಿಗಳ ಆದಾಯ ಬಂದಿದೆ ಎಂದು ಹೇಳಿದ್ದೀರಿ, ಹಾಗಾದರೆ ಅಮದಿನಿಂದ ಎಷ್ಟು ಆದಾಯ ಬಂದಿದೆ, ರಫ್ತಿನಿಂದ ಎಷ್ಟು ಆದಾಯ ಬಂದಿದೆ ?

Sri G. B. SHANKAR RAO.—I want notice.

Mr. SPEAKER.—Question hour is over.

QUESTION FOR ANSWER ON THE DAY

(but not taken up)

Minor Irrigation Works in Chickmagalur Sub-Division.

**Q.*—628. Sri K. H. RANGANATH (Mudigere).—

Will the Government be pleased to state :—

(*a*) the amount sanctioned during the years 1962-63, 1963-64 and 1964-65 for minor irrigation works in Chickmagalur Sub-Division (Talukwise list to be furnished) ;

(*b*) the total number of minor irrigation works that were taken up and completed during the years 1962-63, 1963-64 and 1964-65 and the amounts spent in the said Sub-Division (Talukwise list to be furnished) ;

(SRI K. H. RANGANATH)

(c) the total number of minor irrigation works whose plans and estimates are pending with the Executive Engineer, Superintending Engineer and Government for either scrutiny or sanction?

A.—Sri ALUR HANUMANTHAPPA (Deputy Minister for Minor Irrigation).—

(a) *Vide* Statement 'A' appended.

(b) *Vide* Statement 'B' appended.

(c) Executive Engineer, Chickmagalur	...	61
Executive Engineer, Minor Irrigation Investigation Division, Shimoga	...	16
Superintending Engineer, Shimoga Circle	...	7
Chief Engineer (General), Bangalore	...	2
Government	...	Nil
		86

STATEMENT 'A'

Chickmagalur Revenue Sub-Division consisting Chickmagalur and Mudigere Taluks.

		Amount sanctioned during		
		1962-63	1963-64	1964-65
1 Chickmagalur	...	1,15,000	44,000	87,100
2 Mudigere	...	33,500	22,000	34,000

STATEMENT 'B'

Name of Taluk		1962-63			1963-64			1964-65		
		No. taken	No. completed	Amount	No. taken	No. completed	Amount	No. taken	No. completed	Amount
				Rs.			Rs.			Rs.
Chickmagalur	...	6	13	1,76,264	15	7	41,784	18	3	1,07,712
Mudigere	...	10	8	19,209	9	6	16,150	5	4	45,868

Businees of the House

Mr. SPEAKER.—I have to deal with a very important matter and I want the attention of all members including the Treasury Benches. Sri S. Sivappa raised a very important point. He asked how is it that there are only 7 questions. Of course, one hour has been fully spent and therefore there can be no legitimate grievance on the part of the members. The number of questions answered is not material, but the full one hour devoted for questions has been fully utilized for these questions and that too at the instance of members. Today we have spent 70 minutes on Questions. But, then the question still remains as to why it is that the Government is not able to give sufficient interpellations to be answered. The number 12 is a very low figure. In other legislatures they are putting much more than 12 Questions a day. I cannot possibly understand what the difficulty is. Unless somebody looks into this and finds out where the default lies and see that stagnation is removed, it will be very difficult.

Sri S. R. KANTHI (Minister for Education).—Sir, the other day you mentioned this fact.

Mr. SPEAKER.—Not the other day. Everyday this is mentioned.

Sri S. R. KANTHI.—Yes, Sir. The Government also is trying to do its best and we are trying to get answers as much as possible. In some cases it is difficult to get because we have to get information from the villages and taluk places. I assure you that we will look into the matter once again and try to get as much answer as possible.

Mr. SPEAKER.—It is a very unsatisfactory explanattion. I want that there should be proper appraisal of the importance of the question. The Government must remember that the members will be ready to do other work if the first hour every day is devoted properly. Unless the question hour is fully utilised according to normal rule, I will not allow any other work to be taken up. What is the right of the Government ? It has to do first hour perfectly and properly. If they do not do that it means that they do not give proper attention to the importance of the Question Hour. The importance of the Question Hour has been emphasised by everybody. I have made a special request to the Government. I have got with me a list showing how many questions are overdue from each ministry. I have received requests for extension of time with the remark that they have not been able to get information from their subordinates. Without even disclosing what is the nature, to say simply that my subordinate has not done it, may satisfy the minister but it cannot be satisfactory on the Floor of the House. Cannot every minister give answer at least to one Question every day ? It looks as if nobody looks into this. That is not fair to the House. If there are 30 Questions or 40 Questions addressed to each Minister, can they not single out one Question at least every day and give answers?

Sri S. R. KANTHI.—We will do that.

Mr. SPEAKER.—I must get it at least 48 hours in advance because I must get it translated and send it to the press. Formerly there was no courtesy of a request for extension of time. Now everybody does not seem to have taken note of it. It is highly irregular. There should be no officer or minister or secretary without making a request after the expiration of 15 days time, and now what justification is there for extension of time? Is it that they do not think it proper or find no time? That is not the way of paying respect to the House. I will distribute this to the various ministers and make a personal request and appeal to them to please try and send answer to at least one Question every day. Then at least I will have 15 Questions per day. I have hardly three more days. I have with me individual grievances from members. Here one member has said that questions 176, 185, 186, 188, 189 and 859 sent in November 1964 have not been replied. If Government is not able to get information from November, I do not know how to characterise it. It is absolutely unfair to the members. Members also will kindly help and make it a point to be present when the questions come up.

Public Accounts Committee—Appointment of Chairman.

Under sub-rule (3) of rule 196 of the Rules of Procedure and Conduct of Business in the House, I hereby nominate Sri Ganji Veerappa as Chairman of the Public Accounts Committee.

Subordinate Legislation Committee—Appointment of Chairman.

Under sub-rule (3) of rule 196 of the Rules of Procedure and Conduct of Business in the House, I hereby nominate Sri C. M. Desai as Chairman of the Subordinate Legislation Committee.

Sri S. SIVAPPA (Sravanabelagola).—Sir, of course I am not questioning the announcement made. Usually a well established parliamentary practice in Lok Sabha and British Parliament is that the Chairman of the Public Accounts Committee will be a member from the opposition side. Here also in this Assembly when ex-Chief Minister Sri Hanumanthaiya was there.

Mr. SPEAKER.—How are these conventions talked about on the Floor of the House? The Leader of the Opposition and the Leader of the House must meet and settle. I have no objection. Why not party leaders meet?

Committee on Petitions—Nomination of Members.

Under sub-rule (2) of rule 248 I nominate the following persons to be members on the Committee on Petitions:

Sriyuts :—
R. S. Hegde
K. P. Gadag
Andaniah
M. N. Naghnoor

The Deputy Speaker will be ex-officio Chairman.

PAPERS LAID ON THE TABLE.

Sri ALUR HANUMANTHAPPA (Minister for Minor Irrigation).—Sir, I beg to lay on the Table the second and third annual reports for 1961-62 and 1962-63 respectively of the Tungabhadra Steel Products Limited as required under sub-section (2) of section 639 of the Companies Act, 1956 (Central Act No. 1 of 1956).

Sri H. R. KESHAVAMURTHY (Gandasi).—Sir, point of order. Can the Hon'ble Deputy Minister lay on the table the report when he is occupying a different seat?

Mr. SPEAKER.—There is no merit in the point of order.

Sri ALUR HANUMANTHAPPA.—Sir, as promised by the Minister for Revenue, I beg to lay on the Table copies of extracts from letters and other papers relating to the amendments suggested by the Government of India to the Land Reforms in Mysore.

Mr. SPEAKER.—The other day it was pointed out that extracts of letters relating to the amendments contained in the Act might be placed on the Table of the House and the Hon'ble Minister was pleased to agree to it.

I wish to know from the Hon'ble members whether they have Mysore Land Reforms Bill, 1965. I do not want anybody to say that he has not received it. I am emphasising because it is going to be taken up before we adopt the Resolution. Now we will go to the debate.

LAND REFORMS, BILL, 1965.

Motion to Consider.

† Sri S. SIVAPPA.—Sir, I request the Hon'ble Minister in charge of this Bill to furnish information on two or three important points so that it may help the discussion on this Bill :

1. I want to know from the Government what would be the extent of surplus land available for distribution if this Act comes into force to-day ;

2. I want to know how many transfers have been made on 18th November 1961. Now they want to amend Section 16 to see that that

(SRI S. SIVAPPA)

the transfers after 18th November 1961 be made invalid. I want to know the number of transfers and also the extent of land involved in such transfers. This is very important;

3. What would be the amount of compensation the State Government has to pay for the surplus land acquired by the Government and the land that is going to be acquired.

Mr. SPEAKER.—Acquired from where ?

Sri S. SIVAPPA.—They must be having some data. Now they want to reduce the amount of compensation paid in cash from Rs. 10,000 to Rs. 2,000. I want to know what would be the amount payable by the Government if Rs. 10,000 limit is retained. I do not know why they want to change this limit. I want to know what is the present amount on Rs. 10,000 limit and what would be the amount when it is changed to Rs. 2,000.

Mr. SPEAKER.—Why has there been so much delay in asking for the information ?

Sri S. SIVAPPA.—This information will facilitate us to participate in the Debate. No figures are available. What would be the extent of surplus land available ? We want to know the effect of this Bill on the people.

Mr. SPEAKER.—I wish the Leader of the Opposition thinks about these things in time. The other day he was absent and he sends a letter saying that this work must be done to-day. After the Debate is over partially, he wakes up and says : 'I want this information'. Why not write to them and get the information ? Please write and give it to me and I will pass it on. Weapons must be ready in time.

I call upon Sri H. D. Deve Gowda.

(Hon'ble Member Sri H. D. Deve Gowda was absent).

As the Member is absent, he loses his chance. I call upon Sri T. N. Madappa Gowda to speak for ten minutes.

Sri T. N. MADAPPA GOWDA (Nagamangala).—I shall try to finish as early as possible.

Mr. SPEAKER.—The Member has to finish in ten minutes, because we have to finish it to-day. What time have we ?

Sri C. J. MUCKANNAPPA (Sira).—Sir, you yourself said that if necessary we will have to sit on Tuesday morning.

Mr. SPEAKER.—I appeal to the Hon'ble Members even now; let me have some collective opinion to-day.

Sri C. J. MUCKANNAPPA.—It was agreed day-before yesterday.

Mr. SPEAKER.—I don't think any of you, either the Treasury Benches or the Whips met together to come to some understanding.

Sri C. J. MUCKANNAPPA.—Sir, this is a very important Bill. Let the Member express his views clearly. Even if there are a few more Members desirous of participating, let them have their full say.

Mr. SPEAKER.—I think, I allotted one hour for the reply by the Hon'ble Minister.

Sri C. J. MUCKANNAPPA.—Let the reply be to-morrow, not to-day. Let us sit in the morning to-morrow, if necessary.

Mr. SPEAKER.—If I analyse the proceedings for the last three days, this kind of request has come at a late hour.

Sri C. J. MUCKANNAPPA.—Sir, you yourself said that if necessary we have to sit on Tuesday morning.

Mr. SPEAKER.—I said, to-morrow is a Holiday ; let Members come to some understanding and inform me. Why don't the Hon'ble Whips meet and finalise ? What are the Whips doing ? Don't make requests on the Floor of the House if you cannot meet. Please retire and meet in the Lounge or in my Ante-Chamber. I will get a cup of Coffee for all of you.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಾಮೀ, ನಮ್ಮ ಮುಂದೆ ತಂದಿರತಕ್ಕ ಮೈಸೂರು ಲ್ಯಾಂಡ್ ರಿಫಾರಂಸ್ ಬಿಲ್‌ಗೆ ನಾವು ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ವಿಷಾದದಿಂದ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ರಾಜಕೀಯ ಪಕ್ಷಗಳು ತಾರಾ ತಿಕ್ಕಡಿ ಆಟದಿಂದ ಎಲೆಕ್ಷನ್ನು ಕಾಲದಲ್ಲಿ ಬಡವರನ್ನು ಮೋಸ ಮಾಡುವುದಕ್ಕೆ ಇಂತಹ ಒಂದು ದೊಡ್ಡ ಉಪಾಯವನ್ನು ಹೂಡಿದ್ದಾರೆ. ಇಂತಹ ಒಂದು ಸ್ಲೋಗನ್‌ನನ್ನು ಎಲೆಕ್ಷನ್ನು ಕಾಲಕ್ಕೆ ಹುಟ್ಟು ಹೆಚ್ಚಾಗಿ ಜನಗಳ ಮುಂದೆ ತಂದು ಅವರಿಗೆ ಟೋಪಿ ಹಾಕಿ ತಾವು ಚುನಾವಣೆಯಾಗಿ ಇಂತಹ ಸಭೆಗಳಿಗೆ ಬಂದು ಅವರ ಮೇಲೆ ಇರುವಂತಹ ಹೊರೆಗಳನ್ನು ಇನ್ನೂ ಹೆಚ್ಚೆಚ್ಚಾಗಿ ಹೊರಿಸತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಇದು ಕಾಂಗ್ರೆಸ್ಸು ಒಂದು ಪಕ್ಷವೇ ಅಲ್ಲ, ನಮ್ಮ ದೇಶದಲ್ಲಿರುವ ಎಲ್ಲ ಪಕ್ಷಗಳೂ ಅದರಲ್ಲಿ ಸ್ವತಂತ್ರ ಪಕ್ಷ ಒಂದನ್ನು ಬಿಟ್ಟು, ಬಾಕಿ ಎಲ್ಲ ಪಕ್ಷಗಳೂ ಲ್ಯಾಂಡು ರಿಫಾರಂಸ್‌ನ್ನು ತರಬೇಕು ಎಂದು ಹೇಳುತ್ತಿದ್ದಾರೆ. ಆದರೆ ಶ್ರೀಮಾನ್ ಗೋಪಾಲ ಗೌಡರ ಪಕ್ಷದವರು ಇದನ್ನು ಬಹಳ ತೀವ್ರವಾಗಿ ಯೋಚನೆ ಮಾಡುತ್ತಿದ್ದಾರೆ, ಕೆಲವರು ಸ್ವಲ್ಪ ಕಡಮೆಯಾಗಿ ಯೋಚನೆ ಮಾಡುತ್ತಾರೆ ಅಷ್ಟೆ. ಇದರಲ್ಲಿ ಏನೋ ಒಂದು ತರಹದ ಮೋಸ ಇದೆ ಎನ್ನುವುದು ಕಾಣುತ್ತಿದೆ. ಹೇಗೆಂದರೆ ಒಬ್ಬ ಹಿಡುವಳಿದಾರನಿಗೆ 27 ಸ್ಟ್ಯಾಂಡರ್ಡ್ ಎಕರೆಗಳನ್ನು ಬಿಡಬೇಕು ಮತ್ತು ಮುಂದೆ ಬರುವವರಿಗೆ 18 ಸ್ಟ್ಯಾಂಡರ್ಡ್ ಎಕರೆಗಳಷ್ಟು ಬಿಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ಶೇಕಡಾ 80 ಭಾಗದಷ್ಟು ವ್ಯವಸಾಯದಲ್ಲೇ ಜೀವನ ಮಾಡತಕ್ಕ ಜನರಿದ್ದಾರೆ ಎಂದು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳುತ್ತಿದ್ದಾರೆ ಮತ್ತು ಎಲ್ಲರಿಗೂ ಜಮೀನು ಹಂಚಬೇಕೆಂದು ಹೊರಟರೆ ಒಬ್ಬರಿಗೆ ಅರ್ಧ ಎಕರೆಯಷ್ಟು ಭೂಮಿ ಕೊಡುವುದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಈಗ ಶೇಕಡಾ 80 ರಷ್ಟು ಜನ ವ್ಯವಸಾಯದಲ್ಲೇ ಇದ್ದುಕೊಂಡು ಜಮೀನು ಇಟ್ಟುಕೊಂಡೊ ಕೂಲಿಯೋ ನಾಲಿಯೋ ಮಾಡಿಕೊಂಡೋ ಜೀವನ ನಡೆಸಬೇಕು, ಇವರಿಗೆ ಹಂಚಿ ಕೊಡಬೇಕಾದರೆ ಒಂದು ಸಂಸಾರದಲ್ಲಿ ವ್ಯವಸಾಯದಿಂದ ಜೀವನ ಮಾಡಬೇಕಾದರೆ, ಎಲ್ಲರಿಗೂ ನೀವು ಈಗ ನಿಗದಿ ಮಾಡಿರತಕ್ಕ 18 ಅಥವಾ 27 ಸ್ಟ್ಯಾಂಡರ್ಡ್ ಎಕರೆಗಳಷ್ಟು ಜಮೀನನ್ನು ಬಿಟ್ಟು ಎಲ್ಲಿಂದ ತಂದು ಕೊಡುವುದಕ್ಕೆ ಸಾಧ್ಯ ? ಎಲ್ಲರಿಗೂ ಜೀವನಕ್ಕೆ ಸಾಕಾಗುವಷ್ಟು ಜಮೀನು ಎಲ್ಲಿಂದ ಬರುತ್ತದೆ ? ಇದರಲ್ಲಿ ಎಲ್ಲ ಬಡವರಿಗೂ ಅನುಕೂಲವಾಗುವ ಹಾಗೆ ಮಾಡುತ್ತೇವೆಂದು ಹೇಳುತ್ತಾರೆ. ಇದು ಹೇಗಿದೆ ಎಂದರೆ ಬಿಸಿಲ್ಗುದುರೆಯಂತೆ ಆಗಿದೆ. ಮರಳು ಕಾಡಿನಲ್ಲಿ ನೀರು ಎಲ್ಲೆಲ್ಲಿಯೂ ಕಾಣುತ್ತದೆ ಎಂದು, ಅಲ್ಲಿ ನೀರು ಇದೆ ಎಂದು ಹೇಳಿದರೆ ಅಲ್ಲಿ ನೀರೇ ಸಿಗುವುದಿಲ್ಲ. ಹಾಗೆ ಬಡವರಿಗೆ ಎಲೆಕ್ಷನ್ನು ಕಾಲದಲ್ಲಿ ಇಂತಹ ತೀರ್ಮಾನಗಳನ್ನು ನಾವು ಮಾಡಿದ್ದೇವೆ ಎಂದು ಒಂದು ತರಹದ ವಂಚನೆ ಮಾಡುತ್ತಿದ್ದಾರೆಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

2.30 P. M.

ಇದಲ್ಲದೆ ವ್ಯವಸಾಯಗಾರನ ಮೇಲೆ ಏತಕ್ಕೆ ಎಲ್ಲರ ಕಣ್ಣು ? ಮೈಸೂರು ಬೆಂಗಳೂರು ದೊಡ್ಡ ಪಟ್ಟಣಗಳಲ್ಲಿ 20 ಸಾವಿರ, 30 ಸಾವಿರ ; 50 ಸಾವಿರ ಮನೆ ಬಾಡಿಗೆ ತೆಗೆದುಕೊಳ್ಳುವ ಪುಣ್ಯ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ವಂತರು ಇರುವಾಗ್ಗೆ ಅವರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಧೈರ್ಯವಿಲ್ಲ. ಅಂಥವರನ್ನು ಕೇಳು ವುದಕ್ಕೆ ಆಗುವುದಿಲ್ಲ. ಬಡತನದಿಂದ ಜೀವನ ಮಾಡಲು ಅಲ್ಪ ಜಮೀನು ನೆಚ್ಚಿಕೊಂಡು ಇರುವ ರೈತನ ಮೇಲೆ ಭಾರ ಹಾಕುತ್ತಿರುವಿರಿ. ರೀಸೆಟ್ಲಮೆಂಟ್ ಮಾಡಿ ನಾಲ್ಕು ಪರ್ಸೆಂಟ್ ಜಾಸ್ತಿ ಮಾಡಿದ್ದು ನಮಗೆ ತಲೆಗೆ ಹಿಡಿಯುತ್ತಿಲ್ಲ. ಇಂದು ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ ಆದರೆ ವ್ಯವಸಾಯಗಾರನ ಮೇಲೆ ಏತಕ್ಕೆ ತೆರಿಗೆ ಭಾರ ಹಾಕುವುದು ನನಗಂತೂ ಅರ್ಥವಾಗುವುದಿಲ್ಲ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸ್ಟಾಂಡರ್ಡ್ ಎಕರೆಗಿಂತ ಹೆಚ್ಚಿಗೆ ಜಮೀನು ಇಟ್ಟುಕೊಂಡಿರ ತಕ್ಕಂಥ ರೈತರು ಎಷ್ಟು ಜನ ಇದ್ದಾರೆ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಡುತ್ತೀರಾ ? ನಮ್ಮ ಹಳೇ ಮೈಸೂರು ಭಾಗದಲ್ಲಿ, ಅದರಲ್ಲಿಯೂ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಅಂಥ ಒಬ್ಬೊಬ್ಬರು ರೈತರು ಸಹ ಇಲ್ಲ. ಹಾಗಾದರೆ ಟೆನೆಂಟ್ಸ್‌ಗಳಿಗೆ ಜಮೀನು ಎಲ್ಲಿಂದ ಕೊಡುತ್ತೀರಾ ? ಇದು ವಂಚನೆ, ಮೋಸ ಅಲ್ಲವೇ ? ಎಂದು ನಾನು ಪ್ರಶ್ನೆ ಕೇಳುತ್ತೇನೆ. ನವಕರಿಯಿಲ್ಲದಿರತಕ್ಕಂಥವರು ಒಂದೆರಡು ಎಕರೆ ಜಮೀನು ಇಟ್ಟುಕೊಂಡು ಬೇರೆ ಕಸಬು ಮಾಡಿ ಹೊಟ್ಟೆ ತುಂಬಿಕೊಳ್ಳುವ ಜನ ಯಾವುದನ್ನೂ ನಂಬಿಕೊಂಡು ಇರುವುದಕ್ಕಾಗುವುದಿಲ್ಲ. ಜಮೀನು ನಂಬಿಕೊಂಡು ಇರತಕ್ಕಂಥವರ ಗತಿ ಏನು ? ಅವನಿಗೆ ಬೇರೆ ಕೆಲಸ ಕೊಡುವ ಗ್ಯಾರಂಟೀ ಕೊಡುತ್ತೀರಾ ? ಅವರ ಮಕ್ಕಳು ಮರಿ ಬದುಕುವುದು ಹೇಗೆ ? ವ್ಯವಸಾಯ ಮಾಡುವುದು ಬಹಳ ಸುಲಭವಾಗಿದೆ ಎಂದು ತಿಳಿದುಕೊಂಡಿದ್ದಾರೆ. ನಾನು ದೊಡ್ಡ ಜಮೀನುದಾರನಲ್ಲ. ಮಧ್ಯಮ ವರ್ಗದ ಕೆಳದರ್ಜೆಯ ಒಬ್ಬ ವ್ಯವಸಾಯಗಾರನೆಂದು ನನ್ನ ಮಟ್ಟಿಗೆ ಹೇಳಬಹುದು. ಐದು ಹತ್ತು ಎಕರೆ ಜಮೀನು ಇಟ್ಟುಕೊಂಡಿರುವವರು ಕಷ್ಟಪಟ್ಟು ದುಡಿದು ಬೆಳೆಯ ಬೇಕಾದರೆ ವ್ಯವಸಾಯ ಕಾಲದಲ್ಲಿ ಮೂರು ನಾಲ್ಕು ಸಾವಿರ ಬಂಡವಾಳ ಇಟ್ಟು ಕೊಂಡಿರ ಬೇಕಾಗುತ್ತದೆ. ಗೊಬ್ಬರ, ಬೀಜ ಕೊಂಡುಕೊಳ್ಳಬೇಕಾಗುತ್ತದೆ. ಕೆಲಸಗಾರರಿಗೆ ಕೂಲಿ ಕೊಡಬೇ ಕಾಗುತ್ತದೆ. ಇಂದು ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಆಗಿದೆ ಎನ್ನುವುದು ಯಾರೂ ಅರ್ಥ ಮಾಡಿ ಕೊಂಡಿಲ್ಲ. ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಗಿದೆ ಎಂಬುದನ್ನು ಇಂಥ ಸಮಯದಲ್ಲಿ ಮರೆತು ಬಿಡಬಾರದು. ಜಮೀನನ್ನು ಹರಿದು ಹಂಚಿ ಹಾಳು ಮಾಡಿದರೆ ರೈತನು ತನ್ನ ಮಕ್ಕಳನ್ನು ಓದಿಸು ತ್ತಾನೆಯೆ ? ಇಂದು ರೈತನನ್ನು ನಿರ್ನಾಮ ಮಾಡತಕ್ಕಂಥ ರೀತಿ ನೀತಿಯಲ್ಲಿ ನಮ್ಮ ದೇಶ ಮುಂದೆ ಹೋಗುತ್ತಿದೆ. ರೈತ ತಲೆ ಎತ್ತ ಬಾರದು, ಜಮೀನು ನಂಬಿಕೊಂಡವನಿಗೆ ಹೊಟ್ಟೆಗಿಲ್ಲ ಬಟ್ಟೆಗಿಲ್ಲ ಎಂದು ಮಾಡಿ ನಿರ್ನಾಮವಾಗುವ ಹಾಗೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಮಾಡುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳಲು ಇಷ್ಟಪಡುತ್ತೇನೆ. ಈ ಕಾನೂನಿನ ಉದ್ದೇಶ ಒಳ್ಳೆಯದು. ಆದರೆ ಅನೀತಿ, ಅಸತ್ಯತೆ, ದಗಲಬಾಜಿ ಜಾಸ್ತಿಯಾಗಿರುವುದು ಕಾರಣವಾಗಿದೆ. ನಾವೂ ಸಹ ಪ್ರವಾಹದ ಜೊತೆಯಲ್ಲಿ ಹೋಗಬೇಕಾಗಿದೆ. ನಿಮ್ಮ ಈ ರೀತಿ ನೀತಿಯಿಂದ 1967ನೇ ಇಸವಿಯಲ್ಲಿ ಜನತೆ ನಿಮಗೆ ಚೆನ್ನಾಗಿ ಪಾಠ ಕಲಿಸುತ್ತಾರೆ. ಇಂಥ ಎಲ್ಲ ಕಾನೂನುಗಳ ಪರಿಣಾಮವನ್ನು 1967ರಲ್ಲಿ ನೀವು ಅನುಭವಿಸುತ್ತೀರಿ ಎಂದು ನಾನು ಇವತ್ತೇ ನಿಮಗೆ ಭವಿಷ್ಯ ಹೇಳುತ್ತೇನೆ. ಮುಜರಾಯಿ ಇಲಾ ಖೆಯ ಆಡಳಿತಕ್ಕೆ ಒಳಪಟ್ಟ ದೇವಸ್ಥಾನಗಳ ಗೇಣಿದಾರರಿಗೆ ಈ ಕಾನೂನು ಅನ್ವಯಿಸುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಇಂದು ನಮ್ಮ ರಾಷ್ಟ್ರ ಜಾತ್ಯತೀತ ರಾಷ್ಟ್ರ ಎಂದು ಬಾಯಲ್ಲಿ ಮಾತ್ರ ಹೇಳುತ್ತಾರೆ. ಆದರೆ ಪ್ರತಿಯೊಂದರಲ್ಲೂ ಜಾತೀಯತೆ ಕಂಡು ಬರುತ್ತದೆ. ಈ ರೀತಿ ಹೇಳುವುದು ಎಲ್ಲರಿಗೂ ಅನುಮಾನ. ನಮ್ಮ ದೇಶದಲ್ಲಿ ಪೂರ್ವಿಕರು ಗಟ್ಟಿಯಾದ ಧರ್ಮದ ತಳ ಹದಿಯ ಮೇಲೆ ಸಮಾಜ ಕಟ್ಟಿದ್ದಾರೆ. ಧರ್ಮ ಸರಿಯಾಗಿ ಉಳಿದುಕೊಂಡು ಬರುವುದಕ್ಕೆ ಅಲ್ಲಲ್ಲಿ ಮಠಗಳನ್ನು ಸ್ಥಾಪನೆ ಮಾಡಿದ್ದಾರೆ. ಇವುಗಳ ಮೂಲಕ ಜನರಲ್ಲಿ ನಂಬಿಕೆ ಬೆಳೆದು ಧರ್ಮ ಶ್ರದ್ಧೆ ಧಾರ್ಮಿಕ ಭಾವನೆ ಹೆಚ್ಚಾಗುವುದಕ್ಕೆ ಒಂದು ಒಳ್ಳೇ ಏರ್ಪಾಡು ಮಾಡಿದ್ದಾರೆ. ದೇವಸ್ಥಾನದಲ್ಲಿ ರುವ ಕಲ್ಲು ದೇವರು ಮಾತನಾಡುವುದಿಲ್ಲ. ದೇವಸ್ಥಾನ ಮಠ ಇವುಗಳ ಮೂಲಕ ಜನರಲ್ಲಿ ಧಾರ್ಮಿಕ ಭಾವನೆ ಬೆಳೆಯುತ್ತದೆ. ಶ್ರೀರಂಗಪಟ್ಟಣದಲ್ಲಿರುವ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಹಾಗೆ ನಮ್ಮ ಊರಿನಲ್ಲಿ ಕೇಶವಮೂರ್ತಿ ದೇವಸ್ಥಾನ ಇದೆ. ಸಾವಿರಾರು ಪಲ್ಲ ಬೆಳೆಯತಕ್ಕಂಥ ಜಮೀನು ಒಬ್ಬ ಪುಡಾರಿಯ ಕೈಯಲ್ಲಿದೆ. ಈ ಪುಡಾರಿಯು 30 ರೂಪಾಯಿ ಕೊಡುತ್ತಾನೆ. ಈ ಜಮೀನು ಅವನಿಗೇ ಆಗುತ್ತದೆ. ಈ ರೀತಿ ದೇವರ ಆಸ್ತಿಯನ್ನು ಪುಢಾರಿಗಳು ಎತ್ತಿ ಹಾಕಿ ಬಿಟ್ಟಿದ್ದಾರೆ. ಆದುದರಿಂದ ಮುಜರಾಯಿ ಇಲಾಖೆಯ ಲ್ಯಾಂಡ್ಸನ್ನು ಸರಕಾರದವರು ತಾವೇ ವಹಿಸಿಕೊಂಡು ಒಳ್ಳೇ ಉತ್ಪತ್ತಿ ಬರುವ ರೀತಿಯಲ್ಲಿ ಪೈಪೋಟಿಯಲ್ಲಿ ಹರಾಜು ಹಾಕಿ ಉತ್ಪತ್ತಿ ಬರತಕ್ಕಂಥಾದ್ದನ್ನು ನಮ್ಮ ಧರ್ಮ ಸಂಸ್ಕೃತಿ ಬೆಳವಣಿಗೆಗೆ ಉಪಯೋಗಿಸುವ ಹಾಗೆ ಏರ್ಪಾಡು ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮ ಸರಕಾರ ಕಮ್ಯುನಿಷ್ಟರ ಕಮ್ಯುನಿಜಂ ಏನು ಇದೆಯೋ ಆ ದಾರಿಯಲ್ಲಿ ಹೋಗುತ್ತಾ ಇದೆ. ಇದನ್ನು ಬಹಳ ವಿಷಾದದಿಂದ ಹೇಳುತ್ತೇನೆ

ಕಮ್ಯೂನಿಜಂ ಬಹಳ ಅನಾಹುತ ಮಾಡಬಲ್ಲದು ಎಂದು ನಾನು ತಿಳಿದುಕೊಂಡಿದ್ದೇನೆ. ಅಳುವ ಮಗುವಿಗೆ ಚೂರು ಬೆಲ್ಲ, ಪೆಪ್ಪರಮೆಂಟು ಕೊಟ್ಟು ತಾಯಿ ಮಗುವನ್ನು ಒಂದು ಅರ್ಧ ಗಂಟೆ ಕಾಲ ಸುಮ್ಮನೆ ಕೂಡ್ರಿಸಬಹುದು. ಹಾಗೆ ಈ ಲ್ಯಾಂಡ್ ರಿಫಾರ್ಮ್ಸ್ ಮಾಡುತ್ತಿದ್ದೀರಿ. ಜನರಿಗೆ ತುಂಬಾ ವಂಚನೆ ಮಾಡತಕ್ಕ ರೀತಿಯಲ್ಲಿ ಕರೆದುಕೊಂಡು ಹೋಗುತ್ತಿದ್ದೀರಿ. ಕಲ್ಲು ಇರತಕ್ಕಂಥ ಬಂಜರು ಭೂಮಿಯನ್ನು ಒಂದೆರಡು ಎಕರೆ ನೀವು ಕೊಡಬಹುದು. ಬಂಡವಾಳವಿಲ್ಲದೆ ಒಂದೆರಡು ಎಕರೆ ಭೂಮಿಯಲ್ಲಿ ರೈತ ಏನು ಬೆಳೆಯಬಹುದು ! ಅದರಲ್ಲಿ ಅವನು ಜೀವನ ಮಾಡುವುದು ಹೇಗೆ ? ಅವನಿಗೆ ತೃಪ್ತಿಯುಂಟಾಗುತ್ತದೆಯೇ ? ಹೀಗೆ ಮಾಡಬೇಡಿ. ಏನಾದರೂ ಕೇಳಿದರೆ ಇಂಗ್ಲೆಂಡ್ ಅಮೇರಿಕಾ ಉದಾಹರಣೆ ಕೊಡುತ್ತೀರಿ. ಫ್ರಾಗ್ಮೆಂಟೇಷನ್ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳುತ್ತೀರಿ. 100 ಅಥವಾ 500 ಎಕರೆ ಸಾವಿರಾರು ಎಕರೆ ಇರುವ ಕಡೆ ಸೀಲಿಂಗ್ ಹಾಕುವುದಕ್ಕೆ ಅವಕಾಶವಿರುವ ಏರ್ಪಾಡು ಮಾಡಬಹುದು. ಅಂದರೆ ರೈತ ಬದುಕಿಕೊಳ್ಳುತ್ತಾನೆ. ನಮ್ಮ ದೇಶದ ದುರಾದೃಷ್ಟದಿಂದ ದೇಶದಲ್ಲಿ ಜನಸಂಖ್ಯೆ ವಿಪರೀತ ಏರಿ ಹೋಗಿದೆ.

ಜನರಿಗೆ ಹೀಗೆಲ್ಲಾ ತೃಪ್ತಿಪಡಿಸುತ್ತೇವೆ ಎಂಬುದಾಗಿ ಜಮೀನಿನ ಕಡೆಗೆ ಸುಮ್ಮನೆ ತೋರಿಸಬೇಡಿ. ಇನ್ನೂ ಹೀಗೆ ಮಾಡುವುದರ ಬದಲು ಅವರಿಗೆ ದೇಶದಲ್ಲಿ ನಾನಾ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಆ ಮೂಲಕ ಜನರಿಗೆ ಉದ್ಯೋಗಗಳನ್ನೊದಗಿಸಿ. ಈ ದಿವಸ ಆ ಜಪಾನ್ ದೇಶದಲ್ಲಿ ಮಾಡಿರುವಂತೆ ಮನೆಗಳಲ್ಲೇ ಯಾವುದಾದರೊಂದು ಕೈಗಾರಿಕೆಯನ್ನು ಬೆಳೆಸುವುದಕ್ಕೆ ಉತ್ತೇಜನ ಕೊಡಿ. ಈ ದಿವಸ ಆ ಜಪಾನ್ ದೇಶದಲ್ಲಿ ಅವರು ಮನೆಗಳಲ್ಲೇ ತಯಾರಿಸಿದಂಥ ವಸ್ತುಗಳನ್ನು ಪ್ರಪಂಚದ ನಾನಾ ಭಾಗಗಳಿಗೆ ಕಳುಹಿಸಿ ಜೀವನ ಮಾಡುತ್ತಿದ್ದಾರೆ. ಹಾಗೇ ಇಲ್ಲಿಯೂ ತಾವು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದನ್ನು ಬಿಟ್ಟು ಹೀಗೆ ಜನರಿಗೆ ಸುಮ್ಮನೆ ಒಂದು ಕಣ್ಣು ಒರೆಸುವುದನ್ನು ಮಾತ್ರ ಮಾಡಬೇಡಿ ಎಂದು ಹೇಳುತ್ತೇನೆ. ಹೀಗೆ ಮಾಡುವುದು ನ್ಯಾಯವೂ ಅಲ್ಲ. ನಾನು ಈ ಮಾತುಗಳನ್ನಾಡುತ್ತಿರುವುದರಿಂದ ನನಗೆ ಆ ರೈತರ ವಿಚಾರದಲ್ಲಿ ದಯೆ ಇಲ್ಲ ಎಂದು ತಿಳಿಯಬಾರದು. ಅವರ ಬಗ್ಗೆ ನನಗೆ ನಿಮಗಿಂತ 100 ಪಾಲು ಕನಿಕರವಿದೆ. ಆದರೆ ನಾನು ತಮಗೆ ಹೇಳುತ್ತಿರುವುದು ಅವರನ್ನು ಹೀಗೊಂದು ಅಡ್ಡದಾರಿಗೆ ಎಳೆಯಬೇಡಿ ಎಂದು ಮಾತ್ರ ಹೇಳುತ್ತಿದ್ದೇನೆ. ಇದನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ.

ಇನ್ನು ನಮ್ಮ ಹಳೇ ಮೈಸೂರಿನಲ್ಲಿ ಈ ಸೀಲಿಂಗ್ ಲಿಮಿಟ್‌ನಲ್ಲಿ ಬರತಕ್ಕ ಜನ ಒಂದೆರಡು ಪರ್ಸೆಂಟಿದ್ದರೆ ಹೆಚ್ಚಾಯಿತು. ಆದರೆ ಇಲ್ಲಿ ಅಮೆಂಡಿಂಗ್ ಬಿಲ್ಲಿನಲ್ಲಿ ಅಡಕೆ ಮತ್ತು ತೆಂಗಿನ ತೋಟಗಳಿಗೂ ಸೀಲಿಂಗನ್ನು ತರಬೇಕೆಂದು ಹೇಳಿದ್ದಾರೆ. ಆದರೆ ಆ ತೋಟವನ್ನು ಬೆಳೆಸತಕ್ಕ ಕಷ್ಟ ಕಾರುಗಳಲ್ಲಿ ಓಡಾಡತಕ್ಕ ಮಂತ್ರಿಗಳಿಗೇನು ಗೊತ್ತಾಗುತ್ತದೆ ? ಶ್ರೀ ಪುಟ್ಟಸ್ವಾಮಿಯವರು ರೈತನ ಮಗನಾಗಿದ್ದರೂ ಅವರೂ ಸಹಾ ಕಾರಿನಲ್ಲಿ ಓಡಾಡುವುದಕ್ಕೆ ಪ್ರಾರಂಭಿಸಿದ ನಂತರ ಅವರು ಅದೆಲ್ಲವನ್ನೂ ಮರೆತಿದ್ದಾರೆ. ಅಡಕೆ ಮತ್ತು ತೆಂಗಿನ ತೋಟಗಳನ್ನು ಬೆಳೆಸಬೇಕಾದರೆ ಬಹಳ ಕಷ್ಟವಿದೆ. ಆದರೆ ಕಾಫೀ ತೋಟಕ್ಕೆ ವಿನಾಯಿತಿ ಇರಬೇಕು ಇವುಗಳಿಗೆ ಬೇಡ ಎನ್ನುವುದು ಸರಿಯಾದ್ದಲ್ಲ.

ನಾನು ತಮಗೆ ಈ ವಿಚಾರದಲ್ಲಿ ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ : ಕಾಫಿ ತೋಟಗಳಿಗೆ ಹೇಗೆ ಸೀಲಿಂಗ್ ವಿನಾಯಿತಿಯನ್ನು ತೋರಿಸಲಾಗಿದೆಯೋ ಹಾಗೇ ಈ ಅಡಕೆ ಮತ್ತು ತೆಂಗಿನ ತೋಟಗಳಿಗೂ ವಿನಾಯಿತಿ ತೋರಿಸಬೇಕೆಂದು ಹೇಳುತ್ತೇನೆ. ಗಾರ್ಡನ್ ಲ್ಯಾಂಡುಗಳಿಗೆ ಈ ಸೀಲಿಂಗ್ ಹಾಕುವುದು ಬೇಡ ಎಂದು ಹೇಳುತ್ತೇನೆ.

ಈಗ ನಮ್ಮಲ್ಲೇ ಅನೇಕರಿದ್ದಾರೆ ; ಹೇಳಿಕೊಳ್ಳುವುದಕ್ಕೆ ಬರುವುದಿಲ್ಲ, ನಾವು ಈ ರಾಜಕೀಯಕ್ಕಿಳಿದ ಮೇಲೆ ನಮಗೆಲ್ಲಾ ಜಮೀನು ವಗೈರೆ ಮಾಡುವುದು ಸ್ವಲ್ಪ ಕಷ್ಟಕ್ಕೇ ಬಂದಿದೆ. ದಿನಬೆಳಗಾದರೆ ನಾವು ಒಂದಲ್ಲಾ ಒಂದರಲ್ಲಿ ತೊಡರಿಕೊಂಡಿರುತ್ತೇವೆ. ನಮ್ಮಲ್ಲಿ ಕೆಲವರಿಗೆ ಈ ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಕಡಿಮೆಯಾಗಿದ್ದರೂ ನಮಗೆ ಅದನ್ನು ಮಾಡುವುದಕ್ಕೆ ವಿರಾಮವಿರುವುದಿಲ್ಲ. ಆದ್ದರಿಂದ ಆ ಜಮೀನನ್ನು ಗುತ್ತಿಗೇ ಕೊಡಬೇಕಾಗುವುದು. ಇನ್ನು ನಮ್ಮ ಹಾಗೇ ನೌಕರಿಯಲ್ಲಿರತಕ್ಕ ಜನರು ಗುಮಾಸ್ತರಿಂದ ಹಿಡಿದು ಸೆಕ್ರೆಟರಿಗಳ ಲೆವೆಲ್‌ವರೆಗೂ ಇರತಕ್ಕ ಜನರೆಲ್ಲರೂ 30 ವರ್ಷ ಕಾಲ ಕೆಲಸ ಮಾಡಿದನಂತರ ಅವರು ತಮ್ಮ ಮನೆಗಳಿಗೆ ವಾಪಸ್ಸು ಹೋಗಬೇಕು. ಅಂಥವರ ಜಮೀನನ್ನು ಕಿತ್ತುಕೊಳ್ಳುವುದು ಬೇಡ ಎಂದು ಹೇಳುತ್ತೇನೆ. ಏಕೆಂದರೆ, ಜಮೀನನ್ನು ಸುಧಾರಣೆ ಮಾಡುವುದು ಬಹಳ ಕಷ್ಟ. ಅದಕ್ಕೆ ಖರ್ಚು ವಿಪರೀತ ಇರುತ್ತೆ. ನಮ್ಮಲ್ಲಂತೂ ಬರೀ ಸಣ್ಣ ಹಿಡುವಳೀದಾರರೇ ಜಾಸ್ತಿ. ಬೊಂಬಾಯಿ ಕರ್ಣಾಟಕದಲ್ಲೇನೋ ದೊಡ್ಡ ದೊಡ್ಡ ಜಮೀನ್ದಾರರಿದ್ದಾರೆಂದು ಕೇಳುತ್ತೇನೆ, ಇರಲಿ ಬಹಳ ಸಂತೋಷ. ಈ ದಿವಸ ಒಬ್ಬ ರೈತನಾದವನು ಒಂದು ಜೊತೆ ಎತ್ತು ಒಂದು ಗಾಡಿಯನ್ನು ಕೊಳ್ಳಬೇಕಾದರೆ 1,500 ರೂಪಾಯಿ ಮೇಲೆ ಕೊಡಬೇಕು. ಇಂಥ ಕಾಲದಲ್ಲಿ ಊರಿಗೆಲ್ಲಾ ಜಮೀನು ಕೊಟ್ಟು ಜನರನ್ನು ಬಡತನದಿಂದ ಪಾರುಮಾಡುತ್ತೇವೆಂದರೆ ಅದು ಸಾಧ್ಯವಿಲ್ಲದ ಮಾತು. ಬಡತನದಲ್ಲಿರತಕ್ಕ ಜನರನ್ನು ಜಮೀನು ಕೊಟ್ಟು ಅವರನ್ನು ತೃಪ್ತಿಪಡಿಸುತ್ತೇ

(ಶ್ರೀ ಟಿ. ಎನ್. ಮಾದಪ್ಪಗೌಡ)

ವೆಂದರೆ ಅದು ಸಾಧ್ಯವಿಲ್ಲದ ಮಾತು. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ: ಜಪಾನ್ ದೇಶದಲ್ಲಿ ಬೇರೆ ಬೇರೆ ವಿಧವಾದ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಜೀವನಕ್ಕೊಂದು ದಾರಿ ಮಾಡಿರುವಂತೆ ಇಲ್ಲಿಯೂ ಕೂಡ ದೇಶಾದ್ಯಂತವೂ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಜೀವನಕ್ಕೆ ದಾರಿಕಲ್ಪಿಸುವುದು ಸೂಕ್ತವಾದ ಮಾರ್ಗವೇ ವಿನಾ ಅದನ್ನು ಬಿಟ್ಟು ನ್ಯಾಯ ಮತ್ತು ಧರ್ಮಕ್ಕೆ ವಿರುದ್ಧವಾದ ಕಾನೂನನ್ನು ದೇಶದಲ್ಲಿ ಖಂಡಿತ ಜಾರಿಗೆ ತರಬಾರದೆಂದು ಅತಿ ವಿನಯದಿಂದ ಪ್ರಾರ್ಥಿಸಿಕೊಂಡು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker, Sir, I congratulate the Hon'ble Minister for Revenue for bringing this amendment which will enable him to enforce the old Act which was passed in 1962 Sir, the delay on the part of the Government can be easily understood. This delay was due to constitutional amendment, Amendment No. 17.

[MR. DEPUTY SPEAKER in the Chair]

While welcoming the amendment Bill, Sir, I want to make certain suggestions as far as certain sections of the Amending Bill is concerned. At page 3 of the Amending Bill, I suggest that Section (34) (ii) should be deleted. We have got the original definition of the word 'tenant' in section 2(34). Section 2(34) says that a tenant means an agriculturist who holds land on lease from a landlord and includes a person who is deemed to be a tenant under Section 4 and a person who is a permanent tenant or a protected tenant. Now while retaining the original definition a new clause has been added in the amending Bill;

> "Tenant" means an agriculturist who holds land on lease from a landlord and includes,—
>
> (i) a person who is deemed to be a tenant under section 4;
>
> (ii) a person who was protected from eviction from any land by the Mysore Tenants (Temporary Protection from Eviction) Act, 1961."

I suggest that this clause should be deleted on many grounds. Ground No. 1 is that it may be appreciated by the House that many landlords and tenants took action under the original Bombay Act which came into force on 1st August 1956. Now after the new Bombay Act came into force on 1st August 1956 and after the reorganisation of the States, some sections were suspended by an Act of this Legislature, that is, in 1961. Now, those cases are suspended on account of the protection given by the temporary Eviction Act. Now, if the temporary Eviction Act is to enable those litigants to claim the right under it my, submission is, it will create greatest hardships on the landlords. Sir, I want to make it very clear that I am neither a landlord nor a tenant and I can speak with an unbiassed mind. This additional clause for protected tenants under the Temporary Protection Act is bound to land many agriculturists in trouble because thousands of suits in Bombay Karnatak are kept suspended. So, if this temporary protection from Eviction

Act gives certain statutory right even to a trespasser who is declared to be a trespasser by a civil court, then my sub-mission is it will create a great hardship on the landlords who have already secured a decree for possession on the ground that the particular person is a trespasser. Therefore, I again request the Government to re-examine this definition as far as inclusion of sub-clause 34 (ii) is concerned. If this is not deleted or if it is not considered in its proper perspective, I am quite sure that many litigants who have been litigating for the last 11 years, he may be a tenant or he may be a landlord—will have to again begin proceedings for the resumption of land under the new Act which may take further 10 to 11 years to get possession of the land even under the admissible limit. And therefore this requires a thorough reconsideration, a re-examination in the light of the fact that thousands of suits are pending which have been stayed under this Act.

Secondly, Sir, this clause (34) sub-clause (2) must be deleted because temporary protection Act gives a statutory right to become a tenant under any particular landlord without any contract and who is dubbed as a trespasser, it gives him a statutory protection despite any decree of the court—he becomes a tenant. Therefore, this will be mischievous clause which will create a lot of trouble both to the tenant and the landlord. Many landlords will be frustrated because they have been litigating right from 1956 to get possession of land and after litigating for 10—11 years, if this amending Act is to give them some right, then my submission is that many of the landlords will be frustrated and they will develop a sort of nausea to the development of agriculture as such.

Thirdly, Sir, I submit that section 8—amending clause 16 should be deleted—10A, 10B 10C. My submission is if section 10A is to nullify a particular transaction which was perfectly legal under a particular Act, it will amount to a certain discrimination. Expert opinion has been given that it amounts to permissible discrimination. But I would like to invite the attention of the House that discrimination under section 10A has to be viewed from a particular angle in so far as Government issued an ordinance or notification by which certain provisions of the Bombay Tenancy and Agricultural Lands Act were suspended, *i.e.*, section 31. The Government issued immediately after the Re-organisation, a notification suspending, by virtue of an Act of Legislature that section 31 of the Bombay Tenancy and Agricultural Lands Act, 1938 as it was amended which came into force in Bombay on 1st August 1956 should be suspended. Section 8 which deals with resumption. But Government did not suspend other sections of the Bombay Tenancy Act. Under any other provision of the Bombay Tenancy Act for a transaction which was perfectly legal and for which he was perfectly competent, I do not think the landlord or the tenants should be penalised, by inserting section 10A. If the Government wanted to suspend all the sections of that law and allow the matter to be dealt with under the Transfer of Property Act or any of the provisions of any other Act, one could really

(SRI R. S. HEGDE)

understand. The Government gave scope to certain thinking as far as agriculturists are concerned that they suspend only one section—section 31, which deals with resumption of land by the landlords for personal cultivation. The Government did not suspend the other provisions of the Bombay Act.

Mr. DEPUTY SPEAKER.—Did the Government act on its own or with the sanction of the Legislature ?

Sri R. S. HEGDE.—Government acted on the strength of approval of the Legislature. They acted under Act 31 of 1957. Under that piece of legislation, by a notification, they suspended certain provisions of the Bombay Tenancy Act. If after suspending a particular section of the Bombay Act, the agriculturists were led to believe or Government acted in such a way so as to give an impression to the agriculturists that the other provisions of the Bombay Act are not suspended, and therefore they could act under the other provisions of the Act, When the Government gave a *bona fide* impression to the agriculturists that the other provisions of the Tenancy Act are not suspended—after having given that impression, will it now be in the interest of justice, will it now be in the interest of natural justice, to insert now section 10A that if after 1961 we have entered into a particular transaction, this transaction will be taken into consideration for fixing the resumable limit

> "10A If any person has after the 18th November 1961 and before the appointed day transferred any land, then in calculating the extent of land owned by such person for purposes of the preceding clauses, the area so transferred shall be taken into consideration, and land exceeding the resumable area so calculated shall be deemed to be non-resumable land, and such person shall not be entitled to resume such non-resumable land."

So Sir, whatever action a particular agriculturist has taken under the Bombay Act which was perfectly valid, which was perfectly legal, and for which sufficient competency was there between the parties, now that action is sought to be penalised under the provisions of this Act; and therefore my submission is that section 10A is to be entirely deleted because if it is not deleted, it will create, it will only result in punishing the particular person who entered into transaction in a period when that particular enactment was in force.

Sri H. R. KESHAVA MURTHY.—If it goes to High Court, will it stand ?

Sri R. S. HEGDE.—Personally, I have my own apprehensions, but the expert opinion is given that it is a permissible discrimination-a discrimination which is allowed under the provisions of the Constitution-of India. But I go a step further in appreciating the discrimination the action of the Government has to be taken into consideration. The

Government acted in such a way in suspending only one section of the Act. If the Government had suspended all the provisions, no question would have arisen. In suspending one provision of the Act, Government gave a *bona fide* impression......

Sri SANJEEVANATH AIKALA (Surathkal).—On a point of order, Sir. When the Hon'ble Member is addressing the House, can the Hon'ble Minister be engaged in looking into files and in talking to the other members and can the other Members draw attention of the Hon'ble Minister ?

Sri M. V. KRISHNAPPA (Minister for Revenue).—This is a file concerned with the Land Reforms Act that is being discussed now.

Sri SANJEEVANATH AIKALA.—Not only that, two other Members are disturbing his attention including one Deputy Minister.

Sri M. V. KRISHNAPPA.—They are discussing with me some of the amendments to the Land Reforms Act.

Sri SANJEEVANATH AIKALA.—Then how the Minister can listen to the arguments advanced by the Hon'ble Member who is addressing the House ?

Sri M. V. KRISHNAPPA.—I can do both.

Mr. DEPUTY SPEAKER.—The House will now rise and meet after half an hour.

The House adjourned at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Sri R. S. HEGDE.—Mr Speaker, Sir, I was stating that section 10A offends the principle of natural justice in the peculiar circumstances in the passing of a legislation suspending certain provisions of the Bombay Act. Even if the Government wanted that other provisions of the Bombay Tenency Act should not become operative, then such a directive would have been there and because the directive was not there, my submission is, the Section offends the legitimate actions, legal actions, perfectly competent actions entered by agriculturists as far as alienation is concerned. Sri M. R. Patil has very forceable argued regarding the traceability of the records. Even if the records are traced, then we are to be guided by the Bombay Act which stands repealed under the present Act. So, a land-lord who goes to a court of law for resumption has not to prove that his case falls under the four corners or of the logal frame-work of the Mysore Land Reforms Act but he has to prove the principles in the Bombay Act which stands repealed. This anamolous position must be removed from the provisions of this Act.

(SRI R. S. HEGDE)

Incidentally, I will take section 32 (2) (a) regarding ..king of ceiling. My submision is, when the land lord or the tenant has legitimately acted under the provisions of a particular piece of legislation then in existance, then to penalise him for entering into such transactions will offend the provisions of the constitution and the natural justice. In this connection my submission is that it is not the fault of the agriculturist that a particular piece of legislation which was to come into force in 1962 is proposed to be given effect to in the year 1965. The reasons may be many. But, if the Government wanted they could have got an enactment passed suspending the other provisions of the Bombay Tenancy Act. Even if the section is deleted or even if the transaction entered into by agriculturists or tenants are to be ignored, my submission is, it will not affect the land policy of Government, it will not affect the ceiling. If I have got 500 acres, I will retain only the ceiling area and sell the rest of it. If I sell to others, whatever property I sell to others will be available for calculating the ceiling as far as the transferee is concerned. So, section 30 (2) (a) will not come in the way of land ceiling. Even if Government were to take the surplus land, it will have to distribute it to others. Therefore, private persons, keeping the ceiling limit, have themselves distributed to others taking proper saleprice.

Then, Sir, the word archard is defined in section 63 (5). There was a decision of Madras High Court in 1937 and decision of the Supreme Court in 1962 where it is stated that betel-nut and coconut come within the meaning of fruits. The same definition should be retained in respect of coconut and betel-nut and I visualise a great future for coconut which is going to be a multi-purpose industry in this State. Now, Sir, Kerala is the largest coconut growing area in our country. Then, comes Mysore and third is Madras. Madras Government has given exemption ; Kerala and West Bengal have also given exemption as far as coconut is concerned. Therefore, I would request the Government to re-examine the inclusion of coconut and betel-nut for the purpose of ceiling. Sir, recently I had an occasion to go to Ceylon. There, I found coconut has become a multi-purpose industry. Oil is used for manufacture of soap ; coconut shell is sent to foreign countries for the purpose of manufacturing bacholite and for the purpose of making carbo-hydrates. Dry husk is used for manufacturing bristle and mattress fibre. All these could be done in Mysore also and from that point of view, if a ceiling is placed, it will affect the industry which is a foreign exchange earning industry. To rear a coconut garden one has to wait for 15 years and after having invested lot of funds, if this land is to be taken away from the agriculturists and distributed, it clearly visualises a situation where production in the entire agricultural sphere will vanish. Even if one person wants to invest money to grow more coconuts, the Act will come in the way. Therefore, Government should re-examine the whole position in the light of developing an important industry in the State.

Thank you, Sir.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇರತಕ್ಕ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸಿ ಒಂದೆರಡು ಬದಲಾವಣೆಗಳನ್ನು ಸೂಚಿಸಲು ಇಷ್ಟಪಡುತ್ತೇನೆ.

ಕಳೆದ ನಾಲ್ಕು ವರ್ಷಗಳಿಂದಲೂ ಜಮೀನ್ದಾರರಾದವರು ಭೂಸುಧಾರಣೆ ಜಾರಿಗೆ ಬರುವುದಾದರೆ ನಾವು ಭೂಮಿಯನ್ನು ಅಭಿವೃದ್ಧಿಪಡಿಸಿದರೆ ನಮಗೆ ಬರತಕ್ಕ ಸೀಲಿಂಗ್ ಬಹಳ ಕಡಮೆ ಇರುತ್ತದೆ ಎಂದು ಬೇಜಾರು ಪಟ್ಟುಕೊಂಡು ಭೂಮಿಯನ್ನು ಅಭಿವೃದ್ಧಿಪಡಿಸದೆ ಹಾಗೆಯೇ ಬಿಟ್ಟರು. ಇನ್ನೊಂದು ಕಡೆ ಹಿಡುವಳಿದಾರರು ನಾವು ಎಷ್ಟು ಮಾಡಿದರೂ ಅದರಿಂದ ಪೂರ್ತಿ ಲಾಭ ನಮಗೆ ದೊರೆಯುವುದಿಲ್ಲ. ಭೂಮಿಯನ್ನು ಅಭಿವೃದ್ಧಿ ಪಡಿಸಿದರೆ ಅಥವಾ ಚೆನ್ನಾಗಿ ಬೇಸಾಯ ಮಾಡಿದರೆ ನಮಗೆ ಬರತಕ್ಕ ಲಾಭವೇನು ಎಂದು ಬೇಜಾರು ಪಟ್ಟುಕೊಂಡು ಹೆಚ್ಚು ಪ್ರತಿಫಲವನ್ನು ಭೂಮಿಯಿಂದ ಪಡೆಯಲು ಪ್ರಯತ್ನ ಮಾಡಲಿಲ್ಲ. ಈ ಎರಡು ರೀತಿಯಿಂದ ದೇಶದಲ್ಲಿ ಆಹಾರದ ಉತ್ಪತ್ತಿ ಸರಿಯಾಗಿ ಆಗದೆ ತೊಂದರೆಯಾಗಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ತಂದಿರತಕ್ಕ ಎಷ್ಟೋ ಸುಧಾರಣೆಗಳಂತೆಯೇ ಈ ಸುಧಾರಣೆಯೂ ವಿಫಲವಾಗಿದೆ ಎಂದರೆ ತಪ್ಪಾಗಲಾರದು. ಈ ಸುಧಾರಣೆಯನ್ನು ತರಬೇಕು ಎಂದು ಇಷ್ಟಪಟ್ಟದ್ದು ಒಂದು ಅದೃಷ್ಟ ಎಂದು ಕಾಣುತ್ತದೆ. ಆದರೆ ಈಗಲೂ ನಮಗೆ ಒಂದು ಸಂಶಯವಿದೆ; ಇದು ಬರುತ್ತದೆಯೋ ಇಲ್ಲವೋ ಎನ್ನುವ ಸಂಶಯವಿದೆ. ಎಷ್ಟೋ ಜನ ಕಾಫಿ ಪ್ಲಾಂಟರುಗಳು ಸರ್ಕಾರವನ್ನು ಹಿಂಬಾಲಿಸಿದ್ದಾರೆ, ಎಷ್ಟೋ ಜನ ತೆಂಗಿನ ತೋಟ ಮತ್ತು ಅಡಕೆ ತೋಟದ ಮಾಲೀಕರು ಸರ್ಕಾರವನ್ನು ಹಿಂಬಾಲಿಸುತ್ತಿದ್ದಾರೆ. ಇದರಿಂದ ಈ ಕಾನೂನು ಜಾರಿಗೆ ಬರುತ್ತದೆಯೋ ಇಲ್ಲವೋ ಎನ್ನುವ ಸಂಶಯ ಈಗಲೂ ಇದೆ. ಆದುದರಿಂದ ಇದನ್ನು ಕಾರ್ಯರೂಪಕ್ಕೆ ತಂದರೆ ಏನೊಂದು ಆಸೆ ಸಾಮಾನ್ಯ ಜನರಿಗೆ ಇದೆಯೋ ಅದು ನೆರವೇರಿ ಅವರಿಗೆ ಸಂತೋಷವುಂಟಾಗಿ ದೇಶದಲ್ಲಿ ಆಹಾರೋತ್ಪನ್ನ ಹೆಚ್ಚಾಗುತ್ತದೆ ಎನ್ನುವ ನಂಬಿಕೆ ನನಗಿದೆ.

ಜಮೀನುಗಳಲ್ಲಿ ಬಹಳಮಟ್ಟಿಗೆ ಅಭಿವೃದ್ಧಿಯಾಗತಕ್ಕ ಜಮೀನುಗಳಿವೆ. ಆದರೆ ನಾವು ಅದನ್ನು ನಿರ್ಧರ ಮಾಡುವಾಗ ಮಳೆ ನೀರಿನ ಮೇಲೆ ಅವಲಂಬಿಸಿ ನೀರಾವರಿಯಿಂದ ಅಭಿವೃದ್ಧಿ ಪಡಿಸಿರತಕ್ಕ, ಬಾವಿ ಮುಂತಾದ ಇತರ ನೀರಿನ ಸೌಕರ್ಯಗಳ ಮೇಲೆ ಅವಲಂಬಿಸಿ ಅಭಿವೃದ್ಧಿ ಪಡಿಸಿರತಕ್ಕ, ಭೂಮಿಗಳನ್ನು ತೀರ್ಮಾನ ಮಾಡತಕ್ಕದ್ದು ಬಹಳ ಕಷ್ಟತರವಾದದ್ದು. ಮುಂದೆ ಈ ಸೀಲಿಂಗನ್ನು ಗೊತ್ತು ಮಾಡುವಾಗ ನಮ್ಮ ರೈತರು ಎಷ್ಟೋ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಜಮೀನಿನ ಆಬಾದಿನ ಮೇಲೆ ವಿಂಗಡಣೆ ಮಾಡಿದರೆ ಎಷ್ಟೋ ಅನುಕೂಲವಾದೀತು.

ಜಮೀನ್ದಾರರಿಗೆ ಪರಿಹಾರ ಧನವನ್ನು ಕೊಡುವಾಗ ಹತ್ತು ಸಾವಿರ ರೂಪಾಯಿವರೆಗೂ ನಗದಾಗಿ ಕೊಡಬೇಕು ಎಂದು ಇದ್ದುದನ್ನು ಇದರಲ್ಲಿ ಎರಡು ಸಾವಿರಕ್ಕೆ ಇಳಿಸಿದ್ದಾರೆ. ಇದು ಬಹಳ ಅನ್ಯಾಯ. ನೂರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದ ಜಮಿನಿನಿಂದ ಬೇರೆಯಾಗುವುದಲ್ಲದೆ ನಗದುರೂಪದಲ್ಲಿ ಕೊಡತಕ್ಕ ಪರಿಹಾರ ಧನವನ್ನು 10 ಸಾವಿರದಿಂದ 2 ಸಾವಿರಕ್ಕೆ ಇಳಿಸಿರುವುದು ಬಹಳ ವಿಷಾದಕರವಾದ ವಿಚಾರ. ಆತನಿಗೆ ಏನು ಕೊಡಬೇಕೋ ಅದನ್ನು ಕೊಟ್ಟು ಆತನಿಗೆ ಸಮಾಧಾನ ಮಾಡತಕ್ಕದ್ದು ದೊಡ್ಡ ವಿಚಾರ. ಇದು ನಮ್ಮ ಸರ್ಕಾರದಲ್ಲಿ ದೊಡ್ಡ ನೀತಿಯಾಗಬೇಕೆಂದು ನನ್ನ ಅಭಿಪ್ರಾಯ. ಇದು ಜಮೀನು ಕಳೆದು ಕೊಳ್ಳುವವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡುವುದರಿಂದ ಮೂಲ ಕಾನೂನಿನಲ್ಲಿರುವಂತೆ 10 ಸಾವಿರ ರೂಪಾಯಿಗಳನ್ನು ನಗದಾಗಿ ಕೊಡುವಂತೆ ಉಳಿಸಿಕೊಂಡು ಮಿಕ್ಕದ್ದನ್ನು ಬಾಂಡುಗಳ ರೂಪದಲ್ಲಾಗಲೀ ಅಥವಾ ಬೇರೆ ರೂಪದಲ್ಲಾಗಲೀ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಎರಡು ಸಾವಿರರೂಪಾಯಿಗಳ ಪ್ರಕಾರಕೊಡುವುದಕ್ಕೂ ಹಣ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿದು ಕೊಳ್ಳಲು ಬಹಳ ಕಷ್ಟವಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ನಮ್ಮಲ್ಲಿ ಎಷ್ಟು ಭೂಮಿ ಉಳಿಯುತ್ತದೆ, ಅದನ್ನು ಎಷ್ಟು ಜನಗಳಿಗೆ ಕೊಡಬಹುದು, ಅದರ ಬೆಲೆ ಏನಾಗುತ್ತದೆ, ಎಷ್ಟು ಕೋಟಿ ರೂಪಾಯಿನಮ್ಮಲ್ಲಿದೆ ಎಂದುಕೇಳಿದರು. ಆ ವಿವರಗಳನ್ನೆಲ್ಲ ನಮಗೆ ಒದಗಿಸಿದ್ದರೆ ಹತ್ತು ಸಾವಿರದಿಂದ ಎರಡು ಸಾವಿರರೂಪಾಯಿಗೆ ಇಳಿಸಿದ್ದು ಸರಿಯೇ, ಯಾವ ಆಧಾರದ ಮೇಲೆ ಹೀಗೆ ಮಾಡಲಾಗಿದೆ ಎಂದು ನಮಗೆ ತಿಳಿಯುತ್ತಿತ್ತು. ಇದಲ್ಲದೆ ಜಮೀನ್ದಾರರಿಗೆ ಕೊಡಬೇಕಾಗುವ ಹಣವನ್ನು ಎಷ್ಟು ವರ್ಷಗಳಲ್ಲಿಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ರೈತನಿಂದ 20 ವರ್ಷಗಳಕಾಲದಲ್ಲಿ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಜಮೀನ್ದಾರನ ವಿಷಯದಲ್ಲಿ ಯಾವುದನ್ನೂ ಹೇಳಿಲ್ಲ. ಯಾವ ವಿಷಯದಲ್ಲಾಗಲೀ ಒಂದು ಗೊತ್ತಾದ ನೀತಿಯನ್ನಿಟ್ಟುಕೊಂಡು ತೀರ್ಮಾನಕ್ಕೆ ಬರಬೇಕು. 10 ಸಾವಿರ ರೂಪಾಯಿಗಳು ಎಂದು ಮೂಲ ಕಾನೂನಿನಲ್ಲಿ ಇರುವುದನ್ನು 2 ಸಾವಿರ ರೂಪಾಯಿಗಳಿಗೆ ತಗ್ಗಿಸದೆ ಮೊದಲು ಇದ್ದ ಹಾಗೆಯೇ ಉಳಿಸಿಕೊಂಡರೆ ಒಳ್ಳೆಯದು ಎಂದು ನಾನು ಅಭಿಪ್ರಾಯಪಡುತ್ತೇನೆ.

(ಶ್ರೀ ಜಿ. ರಾಮೇಗೌಡ)

ಈಗ ತಂದಿರುವ ಕೆಲವು ತಿದ್ದುಪಡಿಗಳಲ್ಲಿ ತೆಂಗಿನ ತೋಟ ಮತ್ತು ಅಡಕೆ ತೋಟಗಳಿಗೆ ಒಂದು ಮಿತಿಯನ್ನು ಹಾಕುವುದನ್ನು ಸೂಚಿಸಿದ್ದಾರೆ. ಮೂಲ ಕಾನೂನು ಈ ಸಭೆಯಲ್ಲಿ ಅಂಗೀಕಾರವಾಗಿ ನಾಲ್ಕು ವರ್ಷವಾಯಿತು. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲೇ ಸರ್ಕಾರದ ಮನಸ್ಸು ಪರಿವರ್ತನೆಯಾಗಿ ಅದಕ್ಕೆ ಸೀಲಿಂಗ್ ತಂದಿಟ್ಟಿದ್ದಾರೆ. ಹೀಗಿರುವಾಗ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆಯೇ ಇನ್ನೂ ಏನೇನು ಬದಲಾವಣೆಗಳನ್ನು ತರಬೇಕಾಗುತ್ತದೆಯೊ ಎನ್ನುವ ಅನುಮಾನ ಎಲ್ಲರಲ್ಲಿಯೂ ಇದೆ. ಆದುದರಿಂದ ಈ ತೋಟಗಳಿಗೆ ಸೀಲಿಂಗ್ ಇಲ್ಲದಂತೆ ಮಾಡಬೇಕು ಇದು ಒಳ್ಳೆಯ ಕೈಗಾರಿಕೆ ಮತ್ತು ರೈತರಿಗೆ ಲಾಭ ತರತಕ್ಕ ಅಥವಾ ಡಾಲರ್ ಸಂಪಾದನೆ ಮಾಡತಕ್ಕ ಉದ್ಯಮವಾದುದರಿಂದ ಇವೆರಡಕ್ಕೂ ಮಿತಿಯನ್ನು ಇಡುವುದು ಸರಿಯಲ್ಲ ಎಂದು ನಾನು ಸಲಹೆ ಮಾಡುತ್ತೇನೆ.

ಒಂದು ತಿದ್ದುಪಡಿಯಲ್ಲಿ 1961ನೆ ಇಸವಿಯಿಂದೀಚೆಗೆ ಏನು ಬದಲಾವಣೆಯನ್ನು ಮಾಡಿದ್ದರೂ ಅದು ಬದಲಾವಣೆಯಾಗಿಲ್ಲ ಎಂದು ಭಾವಿಸಿ ಸೀಲಿಂಗ್ ಗೊತ್ತು ಮಾಡುವಾಗ ಪರಿಗಣಿಸಲಾಗುತ್ತದೆ ಎಂದು ಹೇಳಿದ್ದಾರೆ. ಇದು ಖಂಡಿತ ಸರಿಯಲ್ಲ. ನಾವು ಏನು ನುಡಿದಿದ್ದೇವೆ ಅದರಂತೆ ನಡೆದುಕೊಳ್ಳಬೇಕು. ಯಾರಾದರೂ ಬರೀ ದುರುದ್ದೇಶದಿಂದ ಸ್ವಂತ ಆಸ್ತಿಯನ್ನು ಭೂಸುಧಾರಣೆ ಜಾರಿಗೆ ಬಂದರೆ ರೈತನಿಗೆ, ಬಡವನಿಗೆ ಕೊಡಬೇಕಾಗುತ್ತದೆ ಎಂದು ಮಾರಿದ್ದರೆ ಅಂಥದ್ದಕ್ಕೆ, ಈ ಕಾನೂನು ಅನ್ವಯಿಸುತ್ತದೆ. ಆದರೆ ತಾವು ಸಂಪಾದಿಸಿರುವ ಆಸ್ತಿಯನ್ನು ತಮ್ಮ ಕಷ್ಟವನ್ನು ನೀಗಿಸಿಕೊಳ್ಳಲು ಬದಲಾವಣೆ ಮಾಡಿಕೊಳ್ಳುವ ರೀತಿಯಲ್ಲಿ ಈ ಕಾನೂನು ಅನ್ವಯವಾಗಬಾರದು. ಇದಕ್ಕೆ ಸೂಕ್ತವಾದ ಬದಲಾವಣೆಯನ್ನು ಸರ್ಕಾರ ಸೂಚಿಸಿ, ಲಾ ಇಲಾಖೆಯೊಂದಿಗೆ ಆಲೋಚನೆ ಮಾಡಿ ಇದನ್ನು ಸರಿಪಡಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಈಗ ಪ್ಲಾಂಟೇಷನ್‌ಗಳಲ್ಲಿ ಬೆಳೆಯುವವರ ಕಷ್ಟಗಳನ್ನು ತಿಳಿದುಕೊಳ್ಳಬೇಕು. ಕಾಫಿ ಪ್ಲಾಂಟೇಷನ್ನುಗಳಲ್ಲಿ ಮಧ್ಯೆ 200-300-400 ಎಕರೆಗಳಷ್ಟು ಭೂಮಿಯಲ್ಲಿ ಬತ್ತ ಬೆಳೆದರೂ ಅಲ್ಲಿ ಒಂದು ಮಿತಿಯನ್ನು ನಿಗಧಿ ಮಾಡಿಲ್ಲ. ಆದರೆ, ಅವಿಭಕ್ತ ಕುಟುಂಬದಲ್ಲಿ ಭ್ರಾತೃಪ್ರೇಮದಿಂದ ಹಗಲಿರುಳೂ ದುಡಿಯುವ ಜನರು ಒಂದು ಸಹಕಾರ ತತ್ವದ ಮೇಲೆ ಸುಮಾರು 100 ವರ್ಷಗಳ ಹಿಂದಿನಿಂದಲೂ ಒಗ್ಗಟ್ಟಿನಿಂದ ಬಾಳಿ ದೇಶಕ್ಕಾಗಿ ಚೆನ್ನಾಗಿ ದುಡಿದು ಇರುವಂತಹ ಸಂಸಾರಗಳಿಗೆ ಸರಿಯಾದ ಹೆಚ್ಚಿನ ಮಿತಿಯನ್ನು ನಿಗದಿಮಾಡುವ ಆಲೋಚನೆಯನ್ನು ಸರ್ಕಾರ ಮಾಡಲಿಲ್ಲ. 5 ಜನರಿದ್ದರೆ ಒಂದು ಸೀಲಿಂಗ್, 10 ಜನರಿದ್ದರೆ 2 ರಷ್ಟು ಸೀಲಿಂಗ್, ಇನ್ನು 20 ರಷ್ಟು ಅಥವಾ 30ರಷ್ಟು ಜನರಿದ್ದರೆ 2 ರಷ್ಟು ಸೀಲಿಂಗ್ ಎಂಬುದಾಗಿ ಹೇಳುವುದು ಬಹಳ ಅನ್ಯಾಯ. ಅಂತಹ ದೊಡ್ಡ ಸಂಸಾರಗಳು ನಮ್ಮ ದೇಶದಲ್ಲಿ ಎಷ್ಟೋ ಇವೆ. ಇದರಿಂದಾಗಿ ಭ್ರಾತೃಪ್ರೇಮಕ್ಕೆ ಧಕ್ಕೆ ಬರುತ್ತದೆ. ಸಹಕಾರ ತತ್ವದ ಮೇಲೆ ವ್ಯವಸಾಯ ಮಾಡತಕ್ಕ ವ್ಯವಸಾಯಗಾರರಿಗೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ. ಹೆಚ್ಚು ಆಹಾರ ಬೆಳೆಯುತಕ್ಕ ಒಂದು ಸಂಸಾರವನ್ನು ನಾವಾಗಿಯೇ ವಿಚ್ಛೇದನ ಮಾಡಿ ಅನ್ಯಾಯಮಾಡಿದಂತಾಗುತ್ತದೆ. ದುರುದ್ದೇಶವಿಲ್ಲದೆ ಒಗ್ಗಟ್ಟಿನಿಂದ ಜೀವನಮಾಡಿ ಸಂಸಾರವನ್ನು ಬೆಳೆಸಿ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡುವಂತಹವರಿಗೆ ಹೆಚ್ಚು ಮಿತಿಯನ್ನು ಗೊತ್ತುಮಾಡುವುದು ಅಗತ್ಯ. ಸ್ವಂತವಾಗಿ ವ್ಯವಸಾಯ ಮಾಡುವವರಿಗೆ ಈಗಿನ ಎರಡರಷ್ಟು ಕೊಡಬೇಕೆಂದು ಹೇಳುವುದು ಸೂಕ್ತವೇ ? ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ನನ್ನ ಪ್ರಾರ್ಥನೆ.

ಇನ್ನು ಸೆಕ್ಷನ್ 125 ರಲ್ಲಿ ಅಫೆನ್ಸಸ್ ಮತ್ತು ಪೆನಲ್ಟೀಸ್ ವಿಷಯವಾಗಿ ಹೇಳಿದ್ದಾರೆ. 250 ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆ ವಿಧಿಸುವುದು ಖಂಡಿತವಾಗಿ ಬಹಳ ಕಠಿಣವಾದುದಾಗಿದೆ. ಈ ರೀತಿಯಾಗಿ ಫೈನ್ ಹಾಕತಕ್ಕದ್ದು ಸರಿಯಲ್ಲ. ಕಾನೂನಿಗೆ ವಿರೋಧವಾಗಿದ್ದರೆ, ಅಂತಹವರಿಂದ ಜಮೀನನ್ನು ಕಡ್ಡಾಯವಾಗಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿ. ಆದರೆ ಕನ್‌ವಿಕ್ಷನ್ ಮತ್ತು ಜುಲ್ಮಾನೆ ಹಾಕುವ ಏರ್ಪಾಡು ಸರಿಯಾಗಿಲ್ಲ. ಸಮಾಜದಲ್ಲಿ ಜನಸೇವೆ ಮಾಡುವಂತಹ ಜನಗಳಿಗೆ ಕೊಡುವ ಶಿಕ್ಷೆ ಇದರಲ್ಲಿ ಬಹಳ ಅಧಿಕವಾಗಿದೆ. ಅದನ್ನು ಸಡಿಲಗೊಳಿಸಬೇಕು.

ಇನ್ನು ಸೆಕ್ಷನ್ 136 ರಲ್ಲಿ ಸರ್ಕಾರಕ್ಕೆ ಒಳ್ಳೆಯ ಅವಕಾಶವಿದೆ. ರೂಲ್ಸ್ ಮಾಡುವಾಗ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಎಂಬುದಾಗಿ ರೂಲ್ಸ್ ಮಾಡುವ ಪದ್ಧತಿಯನ್ನು ಸರ್ಕಾರ ಬಿಡಬೇಕು. ಯಾರೋ ಒಬ್ಬರ ಅನುಭವದ ಮೇಲೆ ಇನ್ನೊಬ್ಬರಿಗೆ ಅನ್ಯಾಯ ಮಾಡುವುದು ಹೇಗೆ ? ಇಂಥಾದ್ದನ್ನೆಲ್ಲಾ ಮುಂದೆ ಜಾರಿಯಲ್ಲಿ ತರಬೇಕೇ ವಿನಾ ಹಿಂದಿನಿಂದ ಶಿಕ್ಷೆ ಅನುಭವಿಸಬೇಕು ಎಂಬುದಾಗಿ ಹೇಳುವುದು ಬಹಳ ತಪ್ಪು. ಇದಕ್ಕೆ ಮದ್ರಾಸ್ ರಾಜ್ಯದಲ್ಲಿ ಇತರ ರಾಜ್ಯಗಳಲ್ಲಿ ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ಇನ್ನು ಹಾಗೆಯೇ ಮುಂದು

ವರಿಸುತ್ತಿದ್ದಾರೆ. ಸರ್ಕಾರೀ ಅಧಿಕಾರಿಗಳು ಈ ರೂಲ್ಸ್ ಮಾಡುತ್ತಿದ್ದಾರೆ. ಇವನ್ನು ಪ್ರಜಾ ಪ್ರತಿನಿಧಿಗಳಾದ ಲೆಜಿಸ್ಲೇಟರ್ಸ್ ಮಾಡಿಲ್ಲ. ಅವರಿಗೆ ಬರೀ ನೋಟಿಫಿಕೇಷನ್ಸ್ ಪ್ರತಿಗಳನ್ನು ಕಳುಹಿಸುತ್ತಾರೆ. ಆ ರೂಲ್ಸ್‌ಗಳನ್ನು ಫ್ರೇಂ ಮಾಡುವ ಅವಕಾಶ ನಮ್ಮ ಲೆಜಿಸ್ಲೇಟರುಗಳಿಗಿಲ್ಲ. ರೂಲ್ಸ್ ಮಾಡತಕ್ಕ ಸರ್ವಾಧಿಕಾರ ಸರ್ಕಾರೀ ಅಧಿಕಾರಿಗಳಿಗೆ ಇದೆ. ಅಂತಹ ಅಧಿಕಾರವನ್ನು ಅವರಿಗೆ ಕೊಟ್ಟು ಈಗ ಅದನ್ನು ನಾವು ಖಂಡಿಸಬೇಕಾಗುತ್ತದೆ, ವಿರೋಧಿಸಬೇಕಾಗುತ್ತದೆ. ಈ ಆಕ್ಟ್‌ನಲ್ಲಿ ಯಾವುದು ಒಂದು ಸದುದ್ದೇಶವಾಗಿರುತ್ತದೋ ಆ ಉದ್ದೇಶವೇನಾದರೂ ಕಾರ್ಯ ರೂಪಕ್ಕೆ ಬರಬೇಕಾಗಿದ್ದರೆ ಅದು ರೂಲ್ಸ್‌ನಲ್ಲಿರಬೇಕು ಎಂಬುದಾಗಿ ಹೇಳುತ್ತಾರೆ. ಆದರೆ ಈ ಆಕ್ಟಿಗೆ ಸಂಬಂಧಪಟ್ಟುದು ಇದ್ದರೆ ಅದಕ್ಕೆ ತಿದ್ದುಪಡಿಯಾಗಿ ಈ ಮಾನ್ಯ ಸಭೆಯು ಒಪ್ಪಿಗೆಪಡೆದು ಮಾಡಬೇಕು. ರೂಲ್ಸ್‌ನಲ್ಲಿ ಫ್ರೇಕ್ ಹಾಕುತ್ತೇವೆ, ಕನ್‌ವಿಕ್ಷನ್ ಮಾಡುತ್ತೇವೆ ಎಂದು ಮಾಡಕೂಡದು. ರೂಲ್ಸ್ ಮೇಕಿಂಗ್‌ನಲ್ಲಿ ಅಧಿಕಾರ ಶಿಕ್ಷೆ ಮಾಡುವುದು ಧರ್ಮವಲ್ಲ, ಶ್ರೇಷ್ಠವಾದುದಲ್ಲ. ಏನಾದರೂ ನಿಯಮ, ರೀತಿ ಅಲ್ಲಿ ಹೇಳಬೇಕೇ ಹೊರತು ಇಷ್ಟೇ ಶಿಕ್ಷೆ ವಿಧಿಸಬೇಕು ಎಂದು ಕಡ್ಡಾಯವಾಗಿ ರೂಲ್ಸ್‌ನಲ್ಲಿ ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ನಾನು ಬಹಳವಾಗಿ ವಿರೋಧಿಸುತ್ತೇನೆ. ರೂಲ್ಸ್‌ನಲ್ಲಿ ಈ ಅವಕಾಶವನ್ನು ತಪ್ಪಿಸುವುದು ಸೂಕ್ತ. ಈಗ ಭೂಸುಧಾರಣೆಯನ್ನು ನಾನು ಬಹಳವಾಗಿ ಸ್ವಾಗತಿಸುತ್ತೇನೆ. ಆ ರೀತಿ ಸ್ವಾಗತಿಸುವಾಗ ರೈತರಿಗೆ ಇರತಕ್ಕ ಕಷ್ಟ ನಿಷ್ಠೂರಗಳನ್ನು ಬಗೆಹರಿಸಬೇಕು. ಈ ಭೂಸುಧಾರಣೆಯಾದನಂತರ ದೇಶದಲ್ಲಿ ಹೆಚ್ಚಿಗೆ ಆಹಾರೋತ್ಪನ್ನವಾಗುತ್ತದೆಂದು ಹೇಳುವುದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುವುದಿಲ್ಲ. ಇದರಲ್ಲಿ ಅವರಿಗೆ ಏನೇನು ಅನುಕೂಲತೆಗಳು ಬೇಕೋ ಅವನ್ನು ಕಲ್ಪಿಸಿಕೊಡಬೇಕು. ಭೂಮಿ ಸಾಕಷ್ಟು ಇಲ್ಲದೇ ಇರುವವರು ಹೆಚ್ಚಿಗೆ ಬೆಳೆಯಲಿಲ್ಲವೆಂದು ಹೇಳುವುದು ಅನ್ಯಾಯ. ಇದು ಅರಿವಿಲ್ಲದ ಮಾತು. ಅಲ್ಲದೇ ಭೂಮಿ ಒಂದೇ ಇದ್ದರೆ ಸಾಲದು. ಪ್ರಕೃತಿ ಸಂಪತ್ತು, ಪ್ರಗತಿ ಸಾಧಿಸುವ ಬಗ್ಗೆ ಹಣಕಾಸಿನ ವ್ಯವಸ್ಥೆ, ಮಳೆ ಸಕಾಲಕ್ಕೆ ಸರಿಯಾಗಿ ಬರುವುದು ಮುಖ್ಯ. ಹಣ ಒದಗಿಸುವ ವ್ಯವಸ್ಥೆ ಇದರಲ್ಲಿಲ್ಲ. ಆದ್ದರಿಂದ ಅತಿ ಜಾಗ್ರತೆಯಾಗಿ ಈ ಭೂಸುಧಾರಣೆಯನ್ನು ನಮಗೆ ಒದಗಿಸಿ. ಆದರೆ ನಂಬಿದ ಕೋಣ ಕರು ಹಾಕಿದರೆ ಎಷ್ಟು ಫಲವಿದೆಯೋ ಹಾಗೆ ಇದರಲ್ಲಿ ಏನೂ ಫಲವಿಲ್ಲವೆಂಬುದು ಸರ್ಕಾರದವರಿಗೇ ಅರ್ಥವಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದಂದಿನಿಂದ ಈ ಭೂಸುಧಾರಣೆ ಸಂಬಂಧ ಜರುಗಿದ ಘಟನೆಗಳನ್ನು ಅವಲೋಕಿಸಿದರೆ, ಜನಸಾಮಾನ್ಯರ ಹಿತದೃಷ್ಟಿಯಿಂದ ಕಾನೂನು ಮಾಡುವುದು ಕಷ್ಟ. ಮತ್ತು ಅವುಗಳನ್ನು ಜಾರಿಗೆ ಕೊಡುವುದೂ ಸಹ ಬಹಳ ಕಷ್ಟವೆಂಬುದು ನಮಗೆ ಮನವರಿಕೆಯಾಗಿದೆ. ಮೈಸೂರು ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಭೂಸುಧಾರಣೆಯ ವಿಷಯದಲ್ಲಿ ಅನಾವಶ್ಯಕವಾದ ಗುಲ್ಲು, ಅನಾವಶ್ಯಕವಾದ ಗಡಿಬಿಡಿ; ಅನಾವಶ್ಯಕವಾದ ಕೆಲವು ಘರ್ಷಣೆಗಳು ನಡೆದಿವೆ. ಇದರ ಪರಿಣಾಮವೇನಾಗಿದೆಯೆಂಬುದನ್ನು ನಾವು ಈಗ ಯೋಚನೆಮಾಡಬೇಕಾಗಿದೆ. ಈಗ ನಮ್ಮ ಮುಂದಿರತಕ್ಕ ವಿಧೇಯಕ ಕಾನೂನಾಗಿ ಭೂಸುಧಾರಣೆ ಕಾನೂನು ಜಾರಿಗೆ ಬಂದನಂತರ ಭೂಮಿ ಇದ್ದವರಿಗೆ ಹೆಚ್ಚಿಗೆ ತೊಂದರೆಯಾಗುವುದಿಲ್ಲ. ಭೂಮಿ ಇಲ್ಲದ ಗೇಣಿದಾರರಿಗೆ, ಕೂಲಿಗಾರರಿಗೆ ಪ್ರಯೋಜನವಾಗುವುದೂ ಅಷ್ಟೆ. ವಿಷಯಗಳನ್ನು ವಿಮರ್ಶೆಮಾಡದೆ, ತಿಳಿಯಬೇಕಾದ ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳದೆಯೇ ಅನೇಕ ವಾದ ವಿವಾದಗಳು ನಡೆದಿವೆ. ನನ್ನ ಮೇಲೆ ಕೆಲವು ಭೂಮಾಲೀಕರು ಬಹಳ ಸಿಟ್ಟಾಗಿ ನನ್ನನ್ನು ಶಪಿಸಿದ್ದಾರೆ. ಹಿಂದೆ ಈ ಭೂಸುಧಾರಣೆಗೆ ಸಂಬಂಧಪಟ್ಟ ವಿಧೇಯಕವನ್ನು ನಾನೇ ಈ ಶಾಸನ ಸಭೆಯ ಮುಂದೆ ಮಂಡಿಸಿದವನು. ಈ ವಿಧೇಯಕ ಕಾಂಗ್ರೆಸ್ ಪಕ್ಷದ ಆದೇಶದಂತೆ, ಪ್ಲಾನಿಂಗ್ ಕಮಿಷನ್ನಿನವರ ಸಲಹೆಯಂತೆ ಮತ್ತು ಜತ್ತಿ ಸಮಿತಿಯವರ ವರದಿಗನುಗುಣವಾಗಿ ರಚಿಸಲ್ಪಟ್ಟು ಅನಂತರ 46 ಸದಸ್ಯರನ್ನೊಳಗೊಂಡ ಚುನಾಯಿತ ಸಂಯುಕ್ತ ಸಮಿತಿ ಮುಂದೆ ದೀರ್ಘವಾಗಿ ಪರಿಶೀಲನೆಯಾಗಿ ಅನಂತರ ಆ ಸಮಿತಿ ವರದಿ ಕೂಡ ಈ ಸಭೆಯಲ್ಲಿ ಚರ್ವಿತ ಚರ್ವಣವಾಗಿ ಚರ್ಚೆಯಾಗಿ ಪರಿಶೀಲನೆಯಾಗಿ ಒಂದು ಕಾನೂನು ಆಯಿತು. ಇದನ್ನು ಮರೆತು ವೈಯುಕ್ತಿಕವಾಗಿ ಕೆಲವು ಭೂಮಾಲೀಕರು ಮತ್ತು ರಾಜಕಾರಣಿಗಳು ನನ್ನನ್ನು ಆಕ್ಷೇಪಿಸುತ್ತಾರೆ. ಬಹುಶಃ ಅವರು ನನ್ನನ್ನೇ ಸರ್ವಾಧಿಕಾರಿಯೆಂದು ತಿಳಿದಿರಬೇಕೆಂದು ತೋರುತ್ತದೆ.

Sri C. J. MUCKANNAPPA.—Is it to satisfy the Congress Party only that you are doing this ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಈ ವಿಧೇಯಕ ಜಾರಿಗೆ ಬಂದರೆ ಏನಾಗುತ್ತದೆಂಬುದನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡೋಣ. ಕಾಫಿ, ಟೀ, ರಬ್ಬರ್ ಏಲಕ್ಕಿ, ತೋಟದ ಮಾಲೀಕರಿಗೆ ಈ ವಿಧೇಯಕದಿಂದ ಎಳ್ಳಷ್ಟೂ ಬಾಧಕವಾಗುವುದಿಲ್ಲ.

(ಶ್ರೀ ಕಡಿದಾಳ್ ಮಂಜಪ್ಪ)

4-00 P.M.

ಸ್ವಂತ ಸಾಗುವಳಿ ಮಾಡತಕ್ಕ ಭೂಮಾಲೀಕರಿಗೆ ಇದರಿಂದ ತೊಂದರೆಯಾಗುವುದಿಲ್ಲ. ಸ್ಪೆಷಲೈಜ್ಡ್ ಫಾರಮ್ಸ್ ಇಟ್ಟುಕೊಂಡಿರತಕ್ಕವರಿಗೆ, ಸಕ್ಕರೆ ಕಾರ್ಖಾನೆಯನ್ನು ಇಟ್ಟುಕೊಂಡಿರತಕ್ಕವರಿಗೆ ಅರ್ಚರ್ಡ್ಸ್ ಮತ್ತು ಕಾಂಪ್ಯಾಕ್ಟ್ ಏರಿಯಾ ಇವುಗಳನ್ನು ಇಟ್ಟುಕೊಂಡಿರತಕ್ಕ ಭೂಮಾಲೀಕರಿಗೆ ಇದರಿಂದ ತೊಂದರೆಯಾಗುವುದಿಲ್ಲ. ಅವಿವಾಹಿತ ಮಹಿಳೆಯರು, ವಿಧವೆಯರು, ಅಪ್ರಾಪ್ತ ವಯಸ್ಕರು, ದೈಹಿಕ ಮತ್ತು ಮಾನಸಿಕ ರೋಗಿಗಳು ಇತ್ಯಾದಿ ಸಾಗುವಳಿ ಮಾಡಲು ಆಗದೇ ಇರುವವರು ಭೂಮಿಯನ್ನು ಗೇಣಿಗೆ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ. ಇದರಿಂದ ಪ್ರಯೋಜನ ಏನಾಗಿದೆ ಎಂದರೆ ಎಲ್ಲೋ ಅಲ್ಲಿ ಇಲ್ಲಿ ಕೆಲವು ರೈತರಿಗೆ ಗೇಣಿದಾರರಿಗೆ ಅಲ್ಪಸ್ವಲ್ಪ ರಕ್ಷಣೆ ದೊರೆತಿದೆ. ಈಗ ಕೆಲವರು ಮಾಡುವಂತಹ ವಾದವನ್ನು ನೋಡಿದರೆ ಅದೂಬೇಡ ಎಂದು ವಾದ ಮಾಡುವಂತೆ ತೋರುತ್ತದೆ. ಇವೊತ್ತು ನಮ್ಮಮುಂದಿರತಕ್ಕ ವಿಧೇಯಕದಲ್ಲಿ ಸರ್ಕಾರದವರು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಅದರಲ್ಲಿ ಒಂದೆರಡು ವಿನಾ ಉಳಿದವುಗಳೆಲ್ಲವೂ ಸಾಧುವಾದುವುಗಳು. ಅವುಗಳು ರೈತನ ಹಿತದೃಷ್ಟಿಯಿಂದ ತಂದಂತಹ ತಿದ್ದುಪಡಿಗಳಾಗಿವೆ. ಈ ಸಂದರ್ಭದಲ್ಲಿ ಒಂದಂಶವನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದು ಕ್ಲಾಜ್ 35ಕ್ಕೆ ಸಂಬಂಧಪಟ್ಟ ವಿಚಾರ. ಕ್ಲಾಜ್ 35ರಲ್ಲಿ ಸರ್ಕಾರದ ಆಳ್ವಿಕೆಗೆ ಒಳಗಾಗಿರತಕ್ಕ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಭೂಮಿಗಳಿಗೆ ವಿನಾಯಿತಿಯನ್ನು ಕೊಡಬೇಕೆಂದು ಸರ್ಕಾರದವರು ಸೂಚನೆ ಮಾಡಿದ್ದಾರೆ. ಈ ಕಾನೂನನ್ನು ಮಾಡುವುದು ಭೂಸುಧಾರಣಾ ಕಾನೂನನ್ನು ಜಾರಿಗೆ ತರತಕ್ಕದ್ದು ಧಾರ್ಮಿಕ ಸಂಸ್ಥೆಗಳ ಸುಧಾರಣೆಗೆ ಅಲ್ಲ. ರೈತನ ಸುಧಾರಣೆಗೋಸ್ಕರವಾಗಿ. ಆದ್ದರಿಂದ ರೈತನ ಹಿತದೃಷ್ಟಿಯನ್ನು ಗಮನಿಸುವುದಾದರೆ ಧಾರ್ಮಿಕ ಸಂಸ್ಥೆಗಳಿಗಾಗಲೀ ಬೇರೆ ಯಾವ ಸಂಸ್ಥೆಗಾಗಲೀ ಅಥವಾ ಯಾರಿಗೇ ಆಗಲೀ ವಿನಾಯಿತಿಯನ್ನು ಕೊಡತಕ್ಕದ್ದು ಅನಾವಶ್ಯಕ ಎಂದು ನನ್ನ ಅಭಿಪ್ರಾಯ. ಮಲೆನಾಡಿನಲ್ಲಿ ಅನೇಕ ಕಡೆಗಳಲ್ಲಿ ಸಾವಿರಾರು ಜನ ರೈತರು ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಭೂಮಿಯನ್ನು ಅನೇಕ ವರ್ಷಗಳಿಂದ ಸಾಗು ಮಾಡಿಕೊಂಡು ಬಂದಿದ್ದಾರೆ. ಮತ್ತು ಕೆಲವು ಸಂದರ್ಭಗಳಲ್ಲಿ ಪಾಳು ಬಿದ್ದಿದ್ದ ಜಮೀನು ಬಹಳ ಹಿಂದಿನಿಂದ ಸಾಗು ಮಾಡಿಕೊಂಡು ಬಂದು ಆ ಜಮೀನುಗಳನ್ನು ಬಹಳ ಉತ್ತಮ ಸ್ಥಿತಿಗೆತಂದಿದ್ದಾರೆ. ಕೆಲವು ಮೂಲ ಗೇಣಿದಾರರು ಆ ಭೂಮಿಯನ್ನು ನೂರಾರು ವರ್ಷಗಳಿಂದ ಒಂದೇ ಮನೆತನದವರು ಸಾಗು ಮಾಡುತ್ತಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಾದರೆ ಧಾರ್ಮಿಕ ಸಂಸ್ಥೆಗಳ, ಹಾಗೂ ದೇವಾಲಯಗಳ ಜಮೀನುಗಳನ್ನು ಅವಲಂಭಿಸಿಕೊಂಡಿರತಕ್ಕ ಸಾವಿರಾರು ಜನ ರೈತರು ಮಲೆನಾಡಿನಲ್ಲಿ ಬೀದಿಯ ಭಿಕಾರಿಗಳಾಗುತ್ತಾರೆ. ಅವರಿಗೆ ಯಾರಿಗೂ ಗೇಣಿದಾರನಿಗೆ ದೊರಕತಕ್ಕ ರಕ್ಷಣೆ ದೊರಕುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿ ನಾನು ಅತ್ಯಂತ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಒಬ್ಬರು ದಢೂತಿ ಕುಳಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಕೆಲವು ದಢೂತಿ ಜನರು ದೇವಾಲಯಗಳಿಗೆ ಸೇರಿದ ಜಮೀನುಗಳನ್ನು ಹರಾಜಿನಲ್ಲಿ ಅಲ್ಪಗೇಣಿಗೆ ವಹಿಸಿಕೊಂಡು ಅವರು ಬೇರೆಯವರಿಗೆ ಗೇಣಿಗೆ ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾವು ಮೂಲ ವಿಧೇಯಕದಲ್ಲಿ ಏನು ಮಾಡಿದ್ದೆವು ಎಂದರೆ ಯಾರು ವಾಸ್ತವಿಕವಾಗಿ ಸಾಗ ಮಾಡುತ್ತಾನೆಯೋ ಅವನಿಗೇ ಭೂಮಿ ದೊರೆಯುವಂತೆ ಮಾಡಬೇಕು ಎಂದು ಹೇಳಿ ನಿಭಂದನೆಗಳನ್ನು ರಚಿಸಿದ್ದೆವು.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭಧ್ರಾವತಿ).—ಕೆಲವು ಧಾರ್ಮಿಕ ಸಂಸ್ಥೆಗಳು ಮಿಡಲ್ ಸ್ಕೂಲುಗಳು, ಹೈಸ್ಕೂಲುಗಳು ಮತ್ತು ಕಾಲೇಜುಗಳನ್ನು ನಡೆಸುತ್ತಿವೆ. ಈ ರೀತಿಯಾಗಿ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕ ಧಾರ್ಮಿಕ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ. ಅಂಥವುಗಳ ಬಗ್ಗೆ ತಾವು ತಮ್ಮ ಅಭಿಪ್ರಾಯವನ್ನು ಸೂಚಿಸಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಸ್ಪಷ್ಟವಾದ ಅಭಿಪ್ರಾಯ ರೈತನ ಹಿತದೃಷ್ಟಿಯಿಂದ ಈ ಕಾನೂನನ್ನು ಮಾಡತಕ್ಕದ್ದು. ಯಾವ ಸಂಸ್ಥೆಗೂ ವಿದಾಯಿತಿಯನ್ನು ಕೊಡಬಾರದು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ ಇದೆ. ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿಯನ್ನು ಕೊಟ್ಟಾಕಣಕ್ಕೆ ಭಗವಂತನಿಗೆ ತೃಪ್ತಿಯಾಗುವುದಿಲ್ಲ. ಭಗವಂತನು ಮೆಚ್ಚುವ ಹಾಗೆ ನಡೆದುಕೊಳ್ಳಬೇಕು. ಸರ್ವವ್ಯಾಪಿಯಾದಭಗವಂತನು ರೈತನ ಹೃದಯದಲ್ಲೂ ಇದ್ದಾನೆ; ಗೇಣಿ ದಾರನ ಹೃದಯದಲ್ಲೂ ಇದ್ದಾನೆ. ಆದ್ದರಿಂದ ರೈತನ ಹೃದಯದಲ್ಲಿರುವ ಭಗವಂತನನ್ನು ತೃಪ್ತಿ ಮಾಡುವುದಕ್ಕಾಗಿ ಆ ಭೂಮಿಯನು

ರೈತನಿಗೇ ಕೊಟ್ಟು ಭಗವಂತನನ್ನು ತೃಪ್ತನಾಗುವಂತೆ ಮಾಡತಕ್ಕದ್ದು ಸರ್ಕಾರದವರ ಕರ್ತವ್ಯ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸೆಕ್ಷನ್ 106ರ ಪ್ರಕಾರ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳನ್ನು ಸರ್ಕಾರದವರು ವಶಪಡಿಸಿಕೊಂಡಾಗ ಅದಕ್ಕೆ ಯಾವರೀತಿಯ ಪರಿಹಾರವನ್ನು ಕೊಡಬೇಕೆಂಬುದನ್ನು ನಾವು ಮೂಲ ವಿಧೇಯಕದಲ್ಲಿ ಅಡಕ ಮಾಡಿದ್ದೆವು. ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳು ಗೇಣಿದಾರರಿಗೆ ಹೋದಾಗ ಧಾರ್ಮಿಕ ಸಂಸ್ಥೆಗಳಿಗೆ ಹೆಚ್ಚು ನಷ್ಟವಾಗುವುದಿಲ್ಲ. ಧಾರ್ಮಿಕ ಸಂಸ್ಥೆಗಳಿಗೆ ಕಾನೂನು ಪ್ರಕಾರ ಎಷ್ಟು ಗೇಣಿ ಬರಬೇಕಾಗಿತ್ತೋ ಆ ಗೇಣಿಯ ಕಿಮ್ಮತ್ತನ್ನು ಧಾರ್ಮಿಕ ಸಂಸ್ಥೆಗಳಿಗೆ ಪ್ರತಿ ವರ್ಷವೂ ಕೊಡತಕ್ಕದ್ದು ಎಂದು ವಿಧೇಯಕದಲ್ಲಿ ನಮೂದು ಆಗಿದೆ. ಆದ್ದರಿಂದ ಧಾರ್ಮಿಕ ಸಂಸ್ಥೆಗಳಿಗೆ ಅಥವ ದೇವಸ್ಥಾನಗಳಿಗೆ ಯಾವ ತೊಂದರೆಯೂ ಆಗುವುದಿಲ್ಲ. ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ದೇವಸ್ಥಾನದ ಜಮೀನುಗಳನ್ನು ತೆಗೆದುಕೊಂಡು ಅದನ್ನು ಸರ್ಕಾರದವರು ಹರಾಜು ಹಾಕುವುದಾದರೂ ಕೂಡ ಅದು ದಢೂತಿ ಇಸ್ಮುಗಳಿಗೇ ಹೋಗುತ್ತದೆ. ಅದು ಬಡವರಿಗೆ ಸಿಕ್ಕುವುದಿಲ್ಲ. ಅದ್ದರಿಂದ ಜಮೀನನ್ನು ಹೆಚ್ಚು ಹೆಚ್ಚಾಗಿ ಶ್ರೀಮಂತರೇ ತೆಗೆದುಕೊಳ್ಳಲಿ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲವು ಮಾನ್ಯ ಸದಸ್ಯರು ಈ ವಾದವನ್ನು ಮಾಡುತ್ತಿದ್ದಾರೆಂದು ಕಾಣುತ್ತದೆ. ಆದ್ದರಿಂದ ಯಾವ ಸಂಸ್ಥೆಗಳಿಗೂ ಕೂಡ ವಿನಾಯ್ತಿ ಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ.

ಆಮೇಲೆ ಶ್ರೀಮಾನ್ ಟಿ. ಎಚ್. ಮಾದಪ್ಪಗೌಡರು ಮತ್ತು ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಮಾತನಾಡುವಾಗ ತೆಂಗು ಮತ್ತು ಅಡಿಕೆ ತೋಟಗಳಿಗೆ ವಿನಾಯ್ತಿಯನ್ನು ಕೊಡಬೇಕೆಂದು ಅವರು ವಾದ ಮಾಡಿದ್ದಾರೆ. ಆದರೆ ಮೂಲ ವಿಧೇಯಕದಲ್ಲಿ ಇವುಗಳನ್ನು ಪ್ಲಾಂಟೇಷನ್ ಎಂಬ ಪದದ ಅರ್ಥ ವಿವರಣೆಯಲ್ಲಿ ಸೇರಿಸಲಾಗಿತ್ತು. ತೆಂಗಿನ ತೋಟಗಳಿಗೆ ಮತ್ತು ಅಡಿಕೆಯ ತೋಟಗಳಿಗೆ ವಿನಾಯ್ತಿಯನ್ನು ಕೊಡಬೇಕೆಂದು 1958ನೇ ಇಸವಿಯಲ್ಲಿ ಈ ಮಾನ್ಯ ಸಭೆಯ ಮುಂದೆ ಮಂಡಿಸಿದ ವಿಧೇಯಕದಲ್ಲಿ ನಮೂದು ಆಗಿತ್ತು. ಆದರೆ ಸೆಲೆಕ್ಟ್ ಕಮಿಟಿಯವರು ಮತ್ತು ಈ ಮಾನ್ಯ ಸಭೆಯವರು ಅದನ್ನು ವಿಮರ್ಶೆ ಮಾಡಿ ಅವುಗಳಿಗೆ ವಿನಾಯ್ತಿಯನ್ನು ಕೊಡತಕ್ಕದ್ದು ಅನಾವಶ್ಯಕವೆಂದು ಹೇಳಿದ್ದಾರೆ. ಈಗ ಅವುಗಳಿಗೆ ಕೊಟ್ಟಿರತಕ್ಕ ಸೀಲಿಂಗ್ ಲಿಮಿಟ್ ಏನೂ ಕಡಿಮೆ ಇಲ್ಲ. ಅವುಗಳಿಗೆ ಮುಗಿಲು ಮುಟ್ಟುವಷ್ಟು ಸೀಲಿಂಗ್ ಲಿಮಿಟ್ ಕೊಟ್ಟಿದ್ದಾರೆ. ಅಡಿಕೆ ಮತ್ತು ತೆಂಗಿನ ತೋಟಗಳಿಗೆ ಈಗಿರುವಂತಹ ಕಾನೂನು ಪ್ರಕಾರ 54 ಎಕರೆಯಿಂದ ಹಿಡಿದು 216 ಎಕರೆಯವರೆಗೂ ಪರಮಾವಧಿ ಮಿತಿ ಇದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಈ ಕಾನೂನು ಪ್ರಕಾರ ನಮ್ಮ ಕಡೆ ಮಲೆನಾಡಿನಲ್ಲಿ ಒಂದು ಕುಟುಂಬದವರು 54 ಎಕರೆಯವರೆಗೆ ಅಡಿಕೆ ತೋಟವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ನನಗೂ ಅಡಿಕೆ ತೋಟ ಕೆಲವು ಎಕರೆಗಳಿವೆ. ಶಾಶ್ವತವಾದ ನೀರಾವರಿ ಪ್ರಯೋಜನವನ್ನು ಹೊಂದಿದ ತೋಟವಾದರೆ, 27 ಎಕರೆ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಬೇರೆ ಡ್ರೈಗಾರ್ಡನ್ ಆದರೆ 108 ರಿಂದ 216 ಎಕರೆವರೆಗೆ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಕಾನೂನನ್ನು ಬೇಕಾದರೆ ಆಮೇಲೆ ಹೇಳುತ್ತೇನೆ. ಆದ್ದರಿಂದ ಈ ಪರಮಾವಧಿ ಹಿಡುವಳಿ ಬಹಳ ಕಡಿಮೆ ಇದೆಯೆಂದು ಮಾನ್ಯ ಸದಸ್ಯರು ಯಾರು ತಿಳಿದುಕೊಳ್ಳಬೇಕಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ದ್ರಾಕ್ಷಿಯಂತೆ ಇದಕ್ಕೂ ವಿನಾಯಿತಿ ಕೊಟ್ಟಿದ್ದರೆ ಏನಾಗುತ್ತಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯೆಯರು ಆಗಲೂ ಕೂಡ ಶಾಸನ ಸಭಾಸದಸ್ಯೆಯಾಗಿದ್ದರು. ಈ ವಿಷಯ ಕೂಲಂಕಷವಾಗಿ ಚರ್ಚೆಯಾಗಿ, "ಸಭೆಯ ತೀರ್ಮಾನದಂತೆ" ಸರಕಾರದವರು ನಡೆದುಕೊಂಡಿದ್ದಾರೆ. ನಾನು ಈಗ ತಾನೆ ಅರಿಕೆ ಮಾಡಿಕೊಂಡೆ : ನಾನು ಮೂಲ ವಿಧೇಯಕದಲ್ಲಿ ಈ ಬಾಬುಗಳಿಗೆ ವಿನಾಯಿತಿ ಕೊಡಬೇಕು ಎಂದು ನಮೂದು ಮಾಡಿದ್ದೆ ; ಆದರೆ ಶಾಸನ ಸಭಾ ಸದಸ್ಯರು ಒಪ್ಪಲಿಲ್ಲ ಅನ್ನುವುದನ್ನು ಮಾನ್ಯ ಸದಸ್ಯರು ನೆನಪು ಮಾಡಿಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನೇನೊ ಅಮೆಂಡುಮೆಂಟು ತರುತ್ತೀರಿ, ಇದನ್ನು ಏಕೆ ತರಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸರಿ. ಆಮೇಲೆ 1961ರಿಂದ ಆಗಿರತಕ್ಕ ಪರಾಧೀನಗಳನ್ನು ಗೇಣೀದಾರರಿಂದ ಬಿಡಿಸಿಕೊಳ್ಳುವಾಗ ಪ್ರತ್ಯೇಕ ಹಿಡುವಳಿಯನ್ನು ನಿಗದಿಮಾಡಿ ಗಣನೆಗೆ ತೆಗೆದುಕೊಳ್ಳಬಾರದು ಅಂತ ಹೇಳಿ ತಿದ್ದುಪಡಿ ವಿಧೇಯಕದಲ್ಲಿ ನಮೂದಾಗಿದೆ. ಕ್ಲಾಸು 16ರಲ್ಲಿ ಇರತಕ್ಕ ತಿದ್ದುಪಡಿ ನ್ಯಾಯವಾದುದು. ಭೂಮಾಲಿಕನಾದವನು 1961ನೇ ಇಸವಿಯಿಂದ ಭೂಮಿಯನ್ನು ಪರಾಧೀನ ಮಾಡುವುದಕ್ಕೆ, ಕಾಯಿದೆ ಜಾರಿಗೆ ಬಂದನಂತರ ಗೇಣೀದಾರನಿಂದ ಪುನಃ ಭೂಮಿಯನು ವಶಪಡಿಸಿಕೊಳುವುದಕೆ ಆಸ್ಪದವಿರಬಾರದು. ಇದು ಅವಶ್ಯಕವಾಗಿದೆ.

(ಶ್ರೀ ಕಡಿದಾಳ್ ಮಂಜಪ್ಪ)

ಇನ್ನು 30ನೇ ಕ್ಲಾಸಿನಲ್ಲಿ ಅದೇ ವಿಧವಾದ ಒಂದು ನಿಬಂಧನೆ ಇದೆ. ಕೆಲವು ಸಂದರ್ಭಗಳಲ್ಲಿ ಭೂಮಾಲೀಕರಿಂದ ಭೂಮಿಯನ್ನು ಗೇಣೀದಾರರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ. ಅಂಥ ಸಂದರ್ಭಗಳಲ್ಲಿ ಭೂಮಾಲಕರಿಗೆ ತೊಂದರೆ ಆಗದೆ ಇದ್ದಹಾಗೆ ಏನಾದರೂ ತಿದ್ದುಪಡಿ ಮಾಡುವುದು ಅವಶ್ಯಕವೆಂದು ನನ್ನ ಅಭಿಪ್ರಾಯ.

ಇಷ್ಟನ್ನು ಹೇಳಿ, ಈ ಮಸೂದೆಯನ್ನು ಸ್ವಾಗತಿಸುತ್ತೇನೆ ಸ್ವಾಮಿ.

Mr. SPEAKER.—Before I call upon any other Member, I have to settle the details. Now, I am suggesting and the House will kindly agree that we will sit for one hour more to-day only. As the Hon'ble Minister stands committed for some other work, we will excuse him. His reply will not be to-day, but there will be other Ministers who will attend to the work. That will give an opportunity to more Members to participate. Regarding the agreement, I do not know what to say and what not to say. Therefore, we came to some conclusion and the information was circularised. It was put in the shape of Business Advisory Committee Report. There is a change, but an uncertain change. So, I will call another Business Advisory Committee tomorrow and we will settle it. So far as this Bill is concerned, we will have the reply tomorrow and finish it before Lunch. I will also say that we meet at Twelve noon tomorrow rather than at One p.m. That will give one hour more, which means as good as sitting in the morning for two hours.

Sri M. R. PATIL (Hubli).—Tomorrow we shall meet at One.

Mr. SPEAKER.—How to find time ? I am not here to concede to the request of everyone. If the Hon'ble Member finds it inconvenient, there are others who will participate.

Sri S. S. KOLKE BAIL (Coondapoor).—We are not having good food also for the last two months.

Mr. SPEAKER.—Why do individual Members carry their opinion in their own mind and not convey it to the Whips. Then I will dissolve the Business Advisory Committee and I will put it on the Floor of the House. Do you want to make me a Dictator ?

Sri SIDDAIAH KASIMATH (Shirahatti).—The Minister has also agreed that tomorrow also we will sit up to 6 O'clock.

Mr. SPEAKER.—Then what should happen to the Amending Bill, the Resolution and the Panchayat Raj Bill ?

Sri SIDDAIAH KASIMATH.—We will finish all the work before the 22nd.

Mr. SPEAKER.—That is what is called talking with the Hat in the hand. Please analyse and tell me. I have an unprecise labelling. We have allotted two days for non-official business, 23rd and 24th, and how are we going to finish all the work ? What is all this unpractical things ? What time will the Hon'ble Minister require for his reply ?

Sri M. V. KRISHNAPPA.—About an hour, Sir.

Mr. SPEAKER.—There are twelve amendments put. Each amendment means a minimum of five minutes ; the Minister must reply and I will put it to the Vote of the House. Therefore, half-an-hour to forty minutes will be required for that stage.

Sri SIDDIAH KASIMATH.—I have also sent my amendments.

Mr. SPEAKER.—I do not know it. I have got twelve amendments. Are there any amendments from Sri V. S. Patil? Yes, there are. Is it included in twelve? My difficulty comes in when every Member or any Member gets up and says that this is the only thing. When I suggest that we may drop the Question Hour, Members say : 'No, No'. When I suggest that we may extend the time by sitting late, Members say : 'no'. All these things should be resolved and presented to me.

Sri SIDDIAH KASIMATH.—I have sent my amendments on Saturday only.

Mr. SPEAKER.—Are the amendments at least over? I suppose there are no more amendments. I may say that the number of amendments has gone up to 16. Will Sri Keshava Murthy tell me how many amendments he has sent?

Sri H. R. KESHAVA MURTHY (Gandasi).—I have sent about eight amendments, Sir.

Mr. SPEAKER.—Still we are receiving amendments. I really dissolve into your hands. We will have about 20 amendments.

Sri M. R. PATIL.—It appears that the Government have also sent some amendments.

Mr. SPEAKER.—Are there Government amendments ?

Sri M. V. KRISHNAPPA.—Yes, Sir, there are.

Sri V. M. DEO (Gubbi).—We can spend one more day for this Bill, Sir.

Mr. SPEAKER.—Suppose we spend the whole of tomorrow and one more day, how should the other business be finished ?

Sri C. J. MUCKANNAPPA.—This is a very important and complicated matter. Let us finish this by tomorrow and it will be a sort of leisure to you also.

Mr. SPEAKER.—I have got enough leisure. Do not worry about me.

I have told the Hon'ble members that it will be taken up immediately and finished and nobody should ask for extension of time. We have got Panchayat Raj Bill and Resolution. We must finish all these by 24th. Nobody should ask for more time. I cannot create more than 24 hours a day. Shall we sit upto 6 p.m. to-day? In the meanwhile let the Hon'ble members think over it. Now I call up on Sri Gopala Gowda. The Hon'ble member may take not more than 15 minutes.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಭೂಸುಧಾರಣಾ ತಿದ್ದುಪಡಿ ಮಸೂದೆ ಸ್ವಾತಂತ್ರ್ಯಾನಂತರ ಭಾರತದಲ್ಲಿ ನಮ್ಮ ದೇಶದ ಹೊಲ, ಗದ್ದೆ ಹಾಗೂ ತೋಟಗಳಿಗೆ ಅನ್ವಯವಾಗುವುದರಲ್ಲಿ ನಡೆದಿರುವ ಒಂದು ದೊಡ್ಡ ದುರಂತ ನಾಟಕದ ಚಿತ್ರ ಇದ್ದಂತೆ ಇದೆ. 1947 ನೇ ಇಸವಿಯಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂತು. 17 ವರ್ಷಗಳು ಕಳೆದು ಹೋದವು. ಆದಾಗ್ಯೂ ಉಳುಮೆ ಮಾಡತಕ್ಕ ರೈತನಿಗೆ ಸ್ವಾತಂತ್ರ್ಯ ದೊರೆಯಲಿಲ್ಲ, ಅವನು ಬಂಧನದಿಂದ ಪಾರಾಗಲು ಸಾಧ್ಯವಾಗಿಲ್ಲ. ಹಾಗೂ ಹೀಗೂ ಭೂಸುಧಾರಣೆಯನ್ನು ತರುತ್ತೇವೆ,

(ಶ್ರೀ ಎಸ್. ಗೋಪಾಲಗೌಡ)

ಅಗೋ ತಂದೆವು, ಇಗೋ ತಂದೆವು ಇನ್ನೇನು ಮಸೂದೆ ಬರುವುದರಲ್ಲಿದೆ, ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಹೋಗಿ ವಾಪಸು ಬರುವುದರಲ್ಲಿದೆ, ತಿದ್ದುಪಡಿ ತರುತ್ತೇವೆ ಎನ್ನುವ ಒಂದೇ ರಾಗವನ್ನು ಹಾಡುತ್ತಾ 17 ವರ್ಷಗಳನ್ನು ಕಳೆದಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೂ ಗೊತ್ತಿರುವ ಹಾಗೆ ಅನೇಕ ಸಂಸಾರಗಳು ಅಥವಾ ಈ ಮಸೂದೆಯ ಸೂತ್ರವನ್ನು ಹೊತ್ತಿರುವ ನಾಟಕದ ನಾಯಕ ನಾಯಕಿಯರುಗಳು ಮಸಣದ ಹಾದಿಯಲ್ಲಿ ಹೋಗಿದ್ದಾರೆ. ರಾಷ್ಟ್ರದಲ್ಲಿ ಬೆಳೆಯನ್ನು ಮಾಡುತ್ತಿದ್ದ ಅನೇಕ ಸಂಸಾರಗಳು ಸ್ಮಶಾನಕ್ಕೆ ಹೊರಟು ಹೋಗಿದ್ದಾರೆ ಎಂದು ಹೇಳಲು ಬಹಳ ದುಃಖ ಪಡುತ್ತೇನೆ. ಆದಾಗ್ಯೂ ಇಂತಹ ಒಂದು ಸನ್ನಿವೇಶದಲ್ಲಿ ಯಾವ ರೈತರು ಹಗಲೂ ಇರುಳೂ ಹಂದಿ ಅಥವಾ ನಾಯಿ ಇಂತಹ ಪ್ರಾಣಿಗಳಿಗಿಂತ ಕೀಳಾಗಿ ತಮ್ಮ ಯೋಜನೆಗಳನ್ನು ಮಾಡುವುದರಲ್ಲಿ ದೇಶದಲ್ಲಿ ದುಡಿಯುತ್ತಿದ್ದಾರೆ, ಅವರಿಗೆ ರಕ್ಷಣೆ ಕೊಡುವುದಕ್ಕೆ ಈ ರಾಜ್ಯಕ್ಕೆ ಆಗಲಿಲ್ಲ. ಅಂತಹ ಒಂದು ಸನ್ನಿವೇಶ ಇವೊತ್ತು ಕೂಡ ಇದೆ. ಈಗಲೂ ಕಾಂಗ್ರೆಸ್ಸು ಪಕ್ಷದವರು ಉಳುಮೆ ಮಾಡತಕ್ಕ ರೈತನಿಗೆ ಅವನು ಉಳುಮೆ ಮಾಡತಕ್ಕ ಜಮೀನಿನ ಪಟ್ಟೆ ಕೊಡದಂತೆ ಮಾಡುತ್ತಿದ್ದಾರೆ. ಏನೋ ಒಂದು ದೊಡ್ಡ ಉಪಕಾರ ಮಾಡುತ್ತೇವೇನೋ ಎಂದು ಭಾವಿಸಿದ್ದಾರೆ. ಇದು ಬಹಳ ವಿಷಾದದ ಸಂಗತಿ. ಒಂದು ಕಡೆ ಆಹಾರದ ಉತ್ಪತ್ತಿಯನ್ನು ಹೆಚ್ಚು ಮಾಡಬೇಕು ಎನ್ನುವ ಕೂಗು ಎದ್ದಿದೆ. ಲಕ್ಷಗಟ್ಟಲೆ ಹಣ ಸೊಸೈಟಿಗಳಲ್ಲಿ ಕೊಟ್ಟು ಹೆಚ್ಚು ಆಹಾರ ಬೆಳೆಯಬೇಕು ಎಂದು ಹಳ್ಳಿಗಳ ಕಡೆ ಹೇಳುತ್ತಿದ್ದಾರೆ. ಇದರ ಮೇಲೆ ಉಳುವವನೇ ಹೊಲದೊರೆಯನಾಗಬೇಕು ಎನ್ನುವ ಮಾತನ್ನು ಕಾಂಗ್ರೆಸ್ಸಿನವರು ತತ್ವಶಃ ಒಪ್ಪಿಕೊಂಡು ಅದನ್ನು ಕಾರ್ಯಗತ ಮಾಡಿಲ್ಲ. ಈ ವಿಳಂಬ ಹಾಗೂ ಅನಿಶ್ಚಿತತೆ ಕಳೆದ 17 ವರ್ಷಗಳಿಂದಲೂ ಈ ದೇಶದಲ್ಲಿ ಇದೆ. ಇದರೊಳಗೆ ದೇಶದಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಿಲ್ಲ. ರೈತನ ಆರ್ಥಿಕ ಸ್ಥಿತಿ ಸುಧಾರಣೆಯಾಗಲಿಲ್ಲ. ಈ ದೇಶದಲ್ಲಿ ಮೂರು ಯೋಜನೆಗಳನ್ನು ಮಾಡಿದರೂ ಕೂಡ ಇವೊತ್ತಿನ ಸ್ಥಿತಿಯಲ್ಲಿ ಇನ್ನೂ ಆಹಾರದ ಅಭಾವದ ಪರಿಸ್ಥಿತಿ ಇದೆ. ಮತ್ತು ನಮ್ಮ ರೈತನ ಆದಾಯ, ಜೀವನ ಮಟ್ಟ ಹಿಂದಕ್ಕೆ ಹೇಗಿತ್ತೋ ಈಗಲೂ ಹಾಗೇ ಇದೆ. ಇದನ್ನು ನಾವು ನೋಡುತ್ತಿದ್ದೇವೆ. ಈ ಸುಧಾರಣೆಗಳಲ್ಲಿರುವ ಕಲಮುಗಳನ್ನು ಚರ್ಚಿಸುವುದರಲ್ಲೇ ಆನಂದವಾಗುತ್ತಿದೆ.

ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರು ಹೇಳಿದ ಹಾಗೆ ನಂಬಿದ ಕೋಣ ಕರು ಹಾಕುವ ಹೊತ್ತು ಬಂದಿದೆ. 1959 ನೇ ಇಸವಿಯಲ್ಲಿ ನಡೆದಂತಹ ನಾಗಪುರದ ಅಧಿವೇಶನದಲ್ಲಿ ಆಳುವ ಪಕ್ಷವಾದ ಕಾಂಗ್ರೆಸ್ಸು ಈ ಭೂಮಿಗೆ ಸಂಬಂಧಪಟ್ಟ ಸುಧಾರಣೆಯ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿತು. ಆ ನಿರ್ಣಯದಲ್ಲಿ ಅವರು ಈ ರೀತಿ ಹೇಳಿದ್ದಾರೆ:

> "The organisation of the Village should be based on the Village Panchayats and Village Co-operatives, both of which should have adequate powers and resources to discharge the functions allotted to them."

> "The future agrarian pattern should be that of Co-operative joint farming, in which the land will be pooled for joint cultivation, the farmers continuing to retain their property rights and getting a share from the net produce in proportion to their land".

ಇದನ್ನು ಹೇಳುತ್ತಾ:

> "The ceilings should be fixed on existing and future holdings and legislation to this effect as well as for the abolition of intermediaries should be completed in all States by the end of 1959".

ಈ ಎಲ್ಲ ಕಾರ್ಯಗಳನ್ನೂ ಮಾಡುವುದರ ಸಲುವಾಗಿ ಈ ಮಸೂದೆಯನ್ನು ತರಬೇಕು, ಉಳುಮೆ ಮಾಡತಕ್ಕ ಹಾಗೂ ಒಕ್ಕಲು ಮಾಡುವವರನ್ನು ಭೂಮಿಯಿಂದ ಎಬ್ಬಿಸಿದಂತೆ ನೋಡಿಕೊಳ್ಳಬೇಕು ಇತ್ಯಾದಿ ಇತ್ಯಾದಿಗಳನ್ನು ಮಾಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಆದರೆ 61ನೇ ಇಸವಿಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಕೂಡ ಇಂತಹ ಒಂದು ಮಸೂದೆಯನ್ನು

ತರುವುದಕ್ಕೆ ತಮ್ಮ ಕಾಂಗ್ರೆಸ್ಸು ಪಕ್ಷದವರುಗಳಿಂದಲೇ ಎಷ್ಟೋ ಆರೋಪಣೆಗಳನ್ನು ಕೇಳಬೇಕಾಯಿತು ಮತ್ತು ಯಾವ ಯಾವ ರೀತಿಯಲ್ಲಿ ಇದಕ್ಕೆ ಅಡಚಣೆಯಾಯಿತು ಎನ್ನುವುದನ್ನು ಹೇಳಿಕೊಂಡಿದ್ದಾರೆ. ಇಂತಹ ಒಂದು ಕಾನೂನು ಕೂಡ ಕಾರ್ಯಗತವಾಗುವುದಕ್ಕೆ ಕಾಲ ಬರಲಿಲ್ಲ. ಭೂಮಾಲೀಕರು ನಮಗೆ ಅನ್ಯಾಯವಾಯಿತು ಎಂದು ಹೇಳುತ್ತಾ ಅವರುಗಳು ಕೋರ್ಟಿಗೆ ಹೋಗಿ ಇಂಜಂಕ್ಷನ್ನು ಆರ್ಡರು ತಂದು ತಡೆ ಮಾಡಿದರು ಎಂದು ರಾಜ್ಯದ ಕಂದಾಯ ಮಂತ್ರಿಗಳು ಕೋರ್ಟಿಗೆ ಹೋಗಿರತಕ್ಕ ವಿವಾದಾಸ್ಪದವಾದ ವಿಧಿಗಳನ್ನು ಕೈಬಿಟ್ಟು ಎಲ್ಲಿ ಈ ವ್ಯವಸ್ಥೆ ಜಾರಿಯಲ್ಲಿಲ್ಲವೋ ಅಲ್ಲಿ ಕೂಡ ಇದು ಜಾರಿಗೆ ಬರುವಂತೆ ಮಾಡಲಿಲ್ಲ, ಮತ್ತು ಇನ್ನೇನೋ ಕಷ್ಟಗಳು ಬಂದವು ಎಂದು ಇದನ್ನು ಮುಂದೂಡುತ್ತಾ ಕಾಲಹರಣ ಮಾಡಿಕೊಂಡು ಬಂದರು.

[MR. DEPUTY SPEAKER in the Chair]

4-30 P.M.

ಬೊಂಬಾಯಿ ರಾಜ್ಯದಲ್ಲಿ ಇರತಕ್ಕ ರೈತರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಸ್. ಪಾಟೀಲರವರು ಹೇಳಿದ್ದಾರೆ. 1956ನೇ ಇಸವಿಯಲ್ಲಿ ಈ ರಾಜ್ಯಕ್ಕೆ ಬೊಂಬಾಯಿ ಕರ್ನಾಟಕ ಪ್ರದೇಶ ಬಂದ ಮೇಲೆ ಅಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಉಳಿದಿರತಕ್ಕಂಥ ಕಾನೂನು ಆಧಾರದ ಮೇಲೆ ರೈತರು ಭೂಮಾಲೀಕರು ಆದರು. ಆಗ್ಗೆ ಶ್ರೀ ಎಂ. ಪಿ. ಪಾಟೀಲರು ರೈತರ ಹಿತ ದೃಷ್ಟಿಯಿಂದ ಕಲಮು ರದ್ದು ಮಾಡುತ್ತೇವೆ ಜಾರಿಗೆ ಕೊಡುವುದಿಲ್ಲ ಎಂದು ಹೇಳಿದರು. 1956ನೇ ಇಸವಿಯಿಂದ ಕರ್ನಾಟಕ ಆದ ಮೇಲೆ ಆ ಭಾಗದ ರೈತರಿಗೆ ಇದರಿಂದ ಅಪಾರ ಹಾನಿ ನಷ್ಟ ಆಯಿತು. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಒಂದು ಪ್ರೊಜೆಕ್ಟಿನಲ್ಲಿ ಮಹಾರಾಷ್ಟ್ರ ಪ್ರದೇಶಕ್ಕೆ ಸೇರಿರತಕ್ಕಂಥ ಗೇಣಿದಾರರಿಗೆ ಭೂಮಿ ಮುಳುಗಡೆಯಾದ ಬಗ್ಗೆ ಪರಿಹಾರ ಕೊಡುವ ನೀತಿ ಇದೆ. ಆದರೆ ಕರ್ನಾಟಕ ಭಾಗದಲ್ಲಿ ಮಾತ್ರ ಪರಿಹಾರ ಸಿಕ್ಕುವುದಿಲ್ಲ. ಇಂಥ ಏಕ ರೂಪತೆಯ ಕಾನೂನು ತರುತ್ತಾರೆ. ಕರ್ನಾಟಕ ಏಕೀಕರಣವಾದ ಮೇಲೆ ಎಷ್ಟು ಕಾನೂನುಗಳನ್ನು ಜಾರಿಗೆ ಕೊಟ್ಟಿದ್ದೀರಿ? ಏಕರೂಪತೆಯಾಗಲು ನಿಜವಾಗಿಯೂ ರೂಲ್ಸು ಮಾಡಿ ಕಾರ್ಯಗತ ಮಾಡಿದ್ದೀರಾ? ಈ ರೀತಿ ಸುಧಾರಣೆ ಮಾಡುವ ನಾಟಕವಾಡುತ್ತಿದ್ದೀರಿ. ಇದೊಂದು ದುರಂತ ನಾಟಕ ನಡೆಯುತ್ತಿದೆ ಎಂದು ಹೇಳಬಹುದು. ದುರದೃಷ್ಟವಶಾತ್ ಇಂದು ರೈತರಲ್ಲಿ ಸಂಘಟನೆಯಿಲ್ಲ ಜಾಗ್ರತಿಯಿಲ್ಲ. ಸರಕಾರದ ವಿರೋಧವಾಗಿ ಹೋರಾಡಿ ಹಕ್ಕು ಸ್ಥಿರೀಕರಿಸುವ ಶಕ್ತಿ ಅವರಲ್ಲಿ ಇಲ್ಲ. ಇಂಥ ಸನ್ನಿವೇಶದಲ್ಲಿ ಈ ತಿದ್ದುಪಡಿಯನ್ನು ಮಾನ್ಯ ಕಂದಾಯ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. 1947ನೇ ಇಸವಿಯಿಂದ ಈಚೆಗೆ ಭೂಮಾಲೀಕರಿಗೆ ಹೊರಲಾರದಷ್ಟು ಗೇಣಿ ತೆತ್ತಿದ್ದಾರೆ. ಅಂಥ ರೈತನನ್ನು ಇಂದು ಮುಕ್ತ ಮಾಡಬೇಕು. ಸ್ವಾತಂತ್ರ್ಯ ಬಂದ ಮೇಲೆ ರಾಜಕೀಯ ಸಂತ್ರಸ್ಥರಿಗೆ ಐದು, ಹತ್ತು ಎಕರೆ ಜಮೀನು ಕೊಟ್ಟಿದ್ದೀರಿ. ಇದಲ್ಲದೆ ಅನೇಕ ಲಕ್ಷ ಎಕರೆ ಜಮೀನು ಹಂಚಿದ್ದೀರಿ. ಜೀವನದಲ್ಲಿ ಬೇರೆ ಏನೂ ಮಾರ್ಗವಿಲ್ಲದೆ, ಬೇರೆ ಯಾವ ಕಸಬೂ ಗೊತ್ತಿಲ್ಲದೆ ಭೂಮಿಯನ್ನೇ ನೆಚ್ಚಿಕೊಂಡು ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಕಾರಣಾಂತರದಿಂದ ಗೇಣೀದಾರನಾಗಿ ಭೂಮಿಯಲ್ಲಿ ಇರತಕ್ಕಂಥ ಮನುಷ್ಯನಿಗೆ ಸರಕಾರದವರೇ ಖಾತೆ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲವೇ? ಇನ್ನೂ 20 ವರ್ಷ ಪ್ರೀಮಿಯಂ ಕೊಡಿ ಎಂದು ಹೇಳುತ್ತೀರಲ್ಲಾ? ಇದುವರೆಗೆ 17 ವರ್ಷ ಪ್ರೀಮಿಯಂ ಕೊಟ್ಟಿದ್ದಾರೆ. ಇನ್ನೂ 20 ವರ್ಷ ಏತಕ್ಕೆ ಕೇಳುತ್ತೀರಿ? 48ನೇ ಕಲಮಿನ 4ನೇ ಸಬ್-ಕ್ಲಾಜನ್ನು ಹೊಡೆದು ಹಾಕಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಇದರಿಂದ ಸರಕಾರಕ್ಕೆ ಲುಕ್ಸಾನಾಗುವುದಿಲ್ಲ. ಸರಕಾರವೇನೂ ಮುಳುಗಿ ಹೋಗುವುದಿಲ್ಲ. ಸರಕಾರದ ಆರ್ಥಿಕ ವ್ಯವಸ್ಥೆ ಕುಸಿದು ಬೀಳುವುದಿಲ್ಲ. ರೈತನಿಗೆ ಪ್ರೀಮಿಯಂ ಬಾಧಕ ತಂದೊಡ್ಡಿದೆ. "Where any tenant makes a statement that he is not willing to be registered as an occupant" ಭೂಮಿ ಬೇಡ ಎಂದು ಹೇಳುವವರು ಯಾರೋ ಇರಬಹುದು. ಆದರೆ ಇವತ್ತಿನ ದಿವಸ ನಿಜವಾಗಿಯೂ ದುಡಿಯತಕ್ಕಂಥ, ರೈತಾಪಿ ಕೆಲಸ ಮಾಡತಕ್ಕಂಥ ಯಾವ ರೈತನೂ ತನಗೆ ಖಾತೆ ಹಾಕಿ ಕೊಡಬೇಡಿ ಎಂದು ಹೇಳುತ್ತಾನೆ? ಅದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ. ಕೆಲವು ಕಡೆ ಆಗದೇ ಇರಬಹುದು, ಇನ್ನಿತರ ಅನನುಕೂಲವಿರಬಹುದು. ಇದನ್ನು ಟ್ರಿಬ್ಯೂನಲ್ ವಿಚಾರ ಮಾಡಬೇಕು. ಅವನು ರಿಜಿಸ್ಟರ್ ಮಾಡಿಸಿ ಹೇಳಿಕೆ ಕೊಟ್ಟರೆ ಅವನ ಹೆಸರಿನಲ್ಲಿ ರಿಜಿಸ್ಟರ್ ಆಗತಕ್ಕದ್ದು ಎಂದು ಬರೆದುಕೊಂಡಿದ್ದೀರಿ. ಇದು ಆಗಬಾರದು. All tenants entitled to be registered as occupants shall be registered. Such lands shall be registered in their names. ಹೀಗೆ ಸ್ಪಷ್ಟವಾಗಿ ಬರೆಯಬೇಕು. ಯಾರು ಯಾರಿಗೆ ಸೆಕ್ಷನ್ 45ರ ಪ್ರಕಾರ ಪಟ್ಟಾ

(ಶ್ರೀ ಎಸ್. ಗೋಪಾಲಗೌಡ)

ಪಡೆಯುತಕ್ಕ ಅಧಿಕಾರ ಬರುತ್ತದೆಯೋ ಅವರೆಲ್ಲರಿಗೂ ಪಟ್ಟಾ ಹಾಕಿ ಕೊಡತಕ್ಕದ್ದು. ಟ್ರಿಬ್ಯೂನಲ್ ಪಟ್ಟಾ ಹಾಕಿಸಿ ಕೊಡಬೇಕು ಎಂದು ನಿರ್ದೇಶನ ಕೊಟ್ಟು ಡೈರೆಕ್ಟ್ ಮಾಡಬೇಕು. ಎಂದು ಬರೆದು ಅಂಥ ಲ್ಯಾಂಡ್ಸ್ ರಿಜಿಸ್ಟರ್ ಮಾಡಿ ಕೊಡಬೇಕು. ಪ್ರೀಮಿಯಂ ತೆಗೆದು ಕೊಳ್ಳಬಾರದು. ಮತ್ತೆ ಮತ್ತೆ ಈ ವಿಷಯವನ್ನು ಹೇಳುತ್ತಿದ್ದೇನೆ. ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಳೆದ 17 ವರ್ಷಗಳಲ್ಲಿ ಅನೇಕ ಕಷ್ಟನಿಷ್ಠೂರಗಳನ್ನು ಅನುಭವಿಸಿ ಗೇಣಿ ವ್ಯವಸ್ಥೆಯಲ್ಲಿ ಸಿಕ್ಕುಬಿದ್ದು ಪಶುಗಿಂತ ಕಡೆಯಾಗಿ ಬದುಕಿದ್ದರೂ ಕೂಡ ಈ ಗೇಣಿ ಹೊಣೆಯಿಂದ ಅವನನ್ನು ಮುಕ್ತ ಮಾಡಿ, ಇನ್ನು ಪ್ರೀಮಿಯಂ ಹೊರೆ ಹೇರಬೇಡಿ ಎಂದು ಸರಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನೊಂದು ಮಾತು ಕಾನೂನಿನಲ್ಲಿ ಇದೆ. ಸೆಕ್ಷನ್ 44ನೇ ವಿಧಿಯಲ್ಲಿ ....

ಡೆಪ್ಯೂಟಿ ಸ್ಪೀಕರ್.—ಮೊದಲಿನ ಆಕ್ಟು ಈಗ ಚರ್ಚೆಗೆ ಇಲ್ಲ. ಈಗ ಸಭೆಯ ಮುಂದೆ ತಿದ್ದುಪಡಿ ಮಸೂದೆ ಎಷ್ಟು ಇದೆ ಅಷ್ಟಕ್ಕೆ ಮಾತನಾಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಆಕ್ಟನ್ನು ತಿದ್ದುಪಡಿ ಮಾಡಬೇಕು ಎಂದು ಸೂಚಿಸುತ್ತೇನೆ.

ಡೆಪ್ಯೂಟಿ ಸ್ಪೀಕರ್.—ಅದು ಇದರಲ್ಲಿ ಬರುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—48ನೇ ತಿದ್ದುಪಡಿಯಲ್ಲಿ ಬರುತ್ತದೆ. 44ನೇ ಸೆಕ್ಷನ್‌ನಲ್ಲಿ

> "As soon as may be after the determination of the non-resumable lands under sub-section (4) of section 14, by each Tribunal, the State Government may by notification declare that with effect from such date as may be specified in such notification............"

ಈ ಒಂದು ಮಾತು ಇದೆ. ಇದನ್ನು ಅನುಭವಿಸಿದ್ದೇವೆ. ಸರಕಾರ ನೋಟೀಫೈ ಮಾಡುವುದಿಲ್ಲ. ನನಗೆ ಒಂದು ಭಯ ಇದೆ. ಮಂಗಳೂರು ಜಿಲ್ಲೆಯನ್ನು ವಿನಾಯಿತಿ ಮಾಡಿ ಬಿಡಬಹುದು ಎಂದು. ಯಾತಕ್ಕೆಂದರೆ ಮಂಗಳೂರು ಜಿಲ್ಲೆಯೇ ಆಡಳಿತದಲ್ಲಿ ಇರುವುದು. ಆದುದರಿಂದ 5 ವರ್ಷ ಆದರೂ ನೋಟೀಫೈ ಮಾಡದಂತೆ ಅವರು ನೋಡಿಕೊಳ್ಳಬಹುದು. ಟ್ರೈಬ್ಯೂನಲ್ ಸೇರಬಹುದು ಬರವಣಿಗೆಯಲ್ಲಿ ಬರಬಹುದು. ಇದನ್ನು ಚೆಕ್ ಮಾಡುವುದು ಸರಿ. ಆದರೆ ಸರಕಾರವೇ ನೋಟೀಫೈ ಮಾಡದೇ ಹೋದರೆ ಇವರಿಗೆ ಪಟ್ಟಾ ಬರುವುದಿಲ್ಲ. ಪಟ್ಟಾ ಬರುವ ತನಕ ಇದೇ ರೀತಿ ಗೇಣಿದಾರರು ಮುಂದುವರಿಯುತ್ತಾರೆ. ಆದ್ದರಿಂದ ಈ ಭಾಗ ತೆಗೆದು ಹಾಕಿದರೆ ಏನೂ ಅಪಾಯ ಇಲ್ಲ. ಟ್ರೈಬ್ಯೂನಲ್ ಆಯಾಯ ಗ್ರಾಮದಲ್ಲಿ ವಿಚಾರಣೆ ಮಾಡಿ ರಿಕಾರ್ಡ್ ಆದ ತಕ್ಷಣ ಸರಕಾರ ಪಟ್ಟಾ ಕೊಡುವ ಏರ್ಪಾಡು ಮಾಡಬೇಕು. ಈ ವರ್ಷವೇ ಆದರೆ ಬಹಳ ಒಳ್ಳೆಯದು. ಸಾಕಷ್ಟು ನಿಮ್ಮ ಹತ್ತಿರ ಪಹಣಿ ಇದೆ ರಿಜಿಸ್ಟರ್ ಇದೆ ಎಲ್ಲಾ ಇದೆ. ತಂದಿರುವ ಕೆಲವು ತಿದ್ದುಪಡಿಗಳನ್ನು ಬಿಟ್ಟು ಬಿಡಬೇಕು ಎಂದು ಹೇಳುತ್ತೇನೆ. ನಿಜವಾಗಿಯೂ ಇನ್ನೂ ಕೆಲವು ತಿದ್ದುಪಡಿಗಳನ್ನು ತರಬೇಕಾಗಿತ್ತು. ಕೇಂದ್ರ ಸರಕಾರದವರು ಪ್ಲಾನಿಂಗ್ ಕಮಿಷನ್ ಅವರು ಆದೇಶ ಕೊಟ್ಟಿದ್ದಾರೆ. ಏನೇನು ಆದೇಶ ಕೊಟ್ಟಿದ್ದಾರೆ ಎನ್ನುವುದು ಕೂಡ ಸರಕಾರದ ಮುಂದೆ ಇದೆ. ಅದಕ್ಕೆ ಅನುಗುಣವಾಗಿ ಸರಕಾರದವರು ಸಮಗ್ರವಾದ ತಿದ್ದುಪಡಿ ತಂದಿಲ್ಲ. ಅದಕ್ಕಾಗಿ ಈ ಮಸೂದೆಯನ್ನು ತಾವು ಪುನಃ ಸಾಕಷ್ಟು ವಿಮರ್ಶೆ ಮಾಡಬೇಕೆಂದು ನಾನು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ವಿನಾಯಿತಿಗಳ ವಿಚಾರದಲ್ಲಿ ಶ್ರೀ ಕಡಿದಾಳರು ಹೇಳಿದ್ದಾರೆ. ಈ ವಿನಾಯಿತಿಗಳ ವಿಚಾರವೂ ಹಾಗೆ ಒತ್ತಟ್ಟಿಗಿರಲಿ, ಈ ಭೂಸುಧಾರಣೆಯ ಕಾನೂನೇ ಜಾರಿಗೆ ಬರುತ್ತದೆಯೋ ಇಲ್ಲವೊ ಎನ್ನತಕ್ಕ ಅನುಮಾನವೇ ಎಲ್ಲರಲ್ಲೂ ಇದ್ದುದರಿಂದ ಆ ಕಾರಣಗಳು ಯಾವುವೋ, ಅವೆಲ್ಲವೆಯೋ ಅದು ಒಬ್ಬರಿಗೂ ಗೊತ್ತಿಲ್ಲ. ಆದಾಗ್ಗೂ ಇಲ್ಲಿ ಇವರು ಯಾವುದೋ ಒಂದು ವರ್ಗವನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಪದಗಳನ್ನು ಮಾತ್ರ ಬಹಳ ಎಚ್ಚರಿಕೆಯಿಂದ ಹಾಕಿಕೊಂಡು ಬಂದಿದ್ದಾರೆ. ಇಲ್ಲಿರತಕ್ಕ ಮುಖ್ಯ ವಿಚಾರ ಅಂದರೆ, ಭೂಮಿಯನ್ನು ಉಳತಕ್ಕವನಿಗೂ ಮತ್ತು ಭೂಮಿಗೂ ಮಧ್ಯೆ ಯಾರೂ ಇರಬಾರದು ಎಂಬುದು ಬಹಳ ಮುಖ್ಯವಾದ ವಿಚಾರ. ಭೂಮಿಯ ಮಾಲೀಕತ್ವ ಯಾವತ್ತೂ ಸರ್ಕಾರದವರಲ್ಲಿರುತ್ತೆ. ಯಾವುದೋ ಒಂದು ಹಳ್ಳಿಯಲ್ಲಿ ಒಬ್ಬ ರೈತ ಕುಗ್ರಾಮಾವಸ್ಥೆಯಲ್ಲಿದ್ದುಕೊಂಡು ಅಲ್ಲಿ ಬೇರೆ ನಾಗರೀಕ ಪ್ರಪಂಚದ ಸಂಪರ್ಕ ಹೊಂದಲು ಯಾವ ಒಂದು ರಸ್ತೆ

ಸಾರಿಗೇ ಅನುಕೂಲವೂ ಇಲ್ಲದೆ, ಅಂಥ ಕಡೆಯಲ್ಲಿದ್ದುಕೊಂಡು ಉಳುಮೆ ಮಾಡುತ್ತಿದ್ದರೆ ನನ್ನ ದೃಷ್ಟಿಯಲ್ಲಿ ಅಂಥ ಮನುಷ್ಯನಿಗೆ ತಿಂಗಳೊಂದಕ್ಕೆ 200 ರೂಪಾಯಿನ್ನಾದರೂ ಕೊಡಲೇಬೇಕು ಅಂತ ಹೇಳುತ್ತೇನೆ. ನಮಗೆ ಯಾವುದಾದರೊಂದು ಅಂಥ ಹೊಣಗಾರಿಕೆ ಇದ್ದರೆ ನಾವು ಅಷ್ಟು ದುಡ್ಡನ್ನು ಕೊಟ್ಟೇ ಕೊಡಬೇಕಾಗುವುದು. ಈ ಕಸುಬು ಅಂಥಾದ್ದು. ಈ ದಿವಸ ಇಲ್ಲಿ ಪೇಟೆಯಲ್ಲಿ ಷೋಕಿ ಮಾಡಿಕೊಂಡು ತಿರುಗುತ್ತಿರುವ ಒಬ್ಬ ಮನುಷ್ಯನಿಗೆ ಆ ಶೃಂಗೇರಿಯ ಹತ್ತಿರ ಎಲ್ಲಿಯೋ ಒಂದು ಕಡೆಯಲ್ಲಿ ಮಾಫಿಯಾಗೇ ಇಂತಿಷ್ಟು ಜಮೀನನ್ನು ಕೊಡುತ್ತೇವೆಂದು ಹೇಳಿ ನೋಡಿ ಆತನು ಅಲ್ಲಿಗೆ ಹೋಗುತ್ತಾನೇನೋ. ಅಂಥ ಕಡೆಗೆ ಹೋಗಿ ಕೆಲಸ ಮಾಡುವುದಕ್ಕೆ ಯಾರೂ ತಯಾರಿಲ್ಲ. ಆಗ ತಮಗೇ ಗೊತ್ತಾಗುತ್ತದೆ ಈ ಭೂಮಾಲೀಕತ್ವ ಯಾರಲ್ಲಿರಬೇಕು ಎಂಬುದು. ಆದರೆ ಇಲ್ಲಿ ಜಮೀನ್ದಾರನಿಗೆ ಯಾವ ರಕ್ಷಣೆ ಕೊಡಬೇಕು ಎನ್ನತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಲ್ಲಿ ನಾವೆಲ್ಲರೂ ಮುಖ್ಯವಾಗಿ ಗಮನಿಸಬೇಕಾದ್ದು ಜಮೀನು ಉಳತಕ್ಕ ಮನುಷ್ಯನಿಗೆ ನಾವು ಯಾವ ಯಾವ ರಕ್ಷಣೆಗಳನ್ನು ಕೊಡಬೇಕು ಎಂಬುದೇ ಇಂದಿನ ಮುಖ್ಯ ಪ್ರಶ್ನೆ. ಅದನ್ನು ನಾವು ಈ ದಿವಸ ಕೈಬಿಟ್ಟು ಭೂಮಾಲೀಕ ಯಾರಿರಬೇಕು ಸರ್ಕಾರವೇ, ಸಾಹುಕಾರನೇ ಅಥವಾ ಸಕ್ಕರೆ ಕಂಪೆನಿಯವರೇ ಅಥವಾ ಮಠದವರೇ ಎಂಬುದನ್ನು ಆಲೋಚಿಸತಕ್ಕದ್ದು ಅನುಚಿತ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳಿದರು ಎಲ್ಲಿಯೋ ಹಗ್ಗ ತಿನ್ನತಕ್ಕ ಹನುಮಂತರಾಯ ದೇವರಿದ್ದಾನೆ ಎಂದು. ಇನ್ನು ಶ್ರೀಮಾನ್ ಪಾಟೀಲ್‌ರವರು ಆ ಶ್ರೀರಂಗಪಟ್ಟಣದ ದೇವರ ವಿಚಾರವನ್ನೂ ಹೇಳಿದರು. ಆದರೆ ಈ ಒಂದು ನೆಪದಲ್ಲಿ ಯಾರೊಬ್ಬರಿಗೂ ತೊಂದರೆಯಾಗಬಾರದು. ಯಾವುದಕ್ಕೆ ಬೇಕಾದರೂ ಕೊಡೋಣ. ಆದರೆ ಯಾವುದೋ ಒಂದು ವಿಚಾರವನ್ನು ಸರ್ಕಾರದವರು ತಮ್ಮ ದೃಷ್ಟಿಯಲ್ಲಿಟ್ಟು ಕೊಂಡು ಇಡೀ ರಾಜ್ಯದಲ್ಲಿರತಕ್ಕ ದೇವಸ್ಥಾನಗಳನ್ನು.........

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅದಕ್ಕೂ ತಿದ್ದುಪಡಿಯನ್ನು ತರಲಾಗುವುದು.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಒಂದಾನೊಂದು ಕಾಲದಲ್ಲಿ ದೇವರು, ಗೋವು ಬ್ರಾಹ್ಮಣ ಎಂಬ ಭಾವನೆಯಿತ್ತು ಜನರಲ್ಲಿ. ಈ ದಿವಸ ಅದು ಹೋಗಿ ಮೊದಲು ಭೂಮಿ ಆನಂತರ ರೈತ ಇವರಿಬ್ಬರೂ ಅದಮೇಲೆ ಇನ್ನುಳಿದವರೆಲ್ಲರೂ ಬರುತ್ತಾರೆ. ರೈತನಿಗೆ ನಾವು ಈ ದಿನ ಸಾಕಷ್ಟು ಭೂಮಿಯನ್ನು ಉಳುವುದಕ್ಕೆ ಒದಗಿಸಿಕೊಡತಕ್ಕ ಕಾಲ ಬಂದಿದೆ. ಆದ್ದರಿಂದ ಇಂಥ ರೈತನಿಗೂ ಮತ್ತು ಭೂಮಿಗೂ ಮಧ್ಯೆ ಯಾರು, ಬಂಧನಕಾರರು ಇರಬಾರದು. ಭೂಮಿಯನ್ನು ಉಳತಕ್ಕವ ಇದು ನನ್ನ ಭೂಮಿ, ನಾನು ಇದರ ಮಾಲೀಕ, ಎಂಬ ವಿಶ್ವಾಸ ಅವನಲ್ಲಿ ಬೆಳೆಯಬೇಕು ಆಗಲೇ ಅದರಲ್ಲಿ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವನಲ್ಲಿ ಶ್ರದ್ಧೆ ಹುಟ್ಟುತ್ತದೆ. ಆದರೆ ಈ ಹಿಂದೆ ಮಾತನಾಡಿದ ಮಳೆಯನ್ನು ತರತಕ್ಕ ದೇವೇಂದ್ರಪ್ಪ ಯಾರಾದರೂ ಶಾಲೆಯನ್ನು ನಡೆಸುತ್ತಿದ್ದರೆ ಅಂಥವರ ಜಮೀನಿಗೇನು ಮಾಡುವುದು ಎಂದು ಕೇಳಿದರು. ನಾವು ಈ ಹಿಂದೆ ಆ ಶೃಂಗೇರಿ ಇನಾಮನ್ನು ರದ್ದುಮಾಡತಕ್ಕ ಕಾಲದಲ್ಲಿ ಆ ದಿವಸ ಗೇಣಿ ಮೂಲಕ ಆ ಸಂಸ್ಥೆಗೇನು ಒಂದು ಉತ್ಪತ್ತಿ ಬರುತ್ತಾ ಇತ್ತು ಅಷ್ಟನ್ನು ಆ ಇನ್‌ಸ್ಟಿಟ್ಯೂಷನ್ನಿಗೆ ಕೊಟ್ಟುಬಿಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಯಾರೂ ಈ ದಿವಸ ತಕ್ರಾರನ್ನು ಮಾಡುವ ಹಾಗಿಲ್ಲ. ಹಾಗೆಯೇ ಇಲ್ಲಿಯೂ ಒಪ್ಪಿಕೊಂಡರಾಯಿತು. ಯಾವುದಾದರೂ ಇನ್‌ಸ್ಟಿಟ್ಯೂಷನ್ನು ಈ ದಿವಸ ಗೇಣಿರೂಪದಲ್ಲಿ ಏನಾದರೂ ವರಮಾನ ಪಡೆಯುತ್ತಿದ್ದಲ್ಲಿ ಆ ಜಮೀನನ್ನು ಹಿಂದಕ್ಕೆ ತೆಗೆದುಕೊಂಡು ಅದಕ್ಕೆ ಆ ವರಮಾನವನ್ನು ಕೊಡೋಣ. ಅಷ್ಟು ಉತ್ಪತ್ತಿ ಬಂದಮೇಲೆ ಅದನ್ನು ಬಿಟ್ಟುಕೊಡಲು ತೊಂದರೆಯೇನಿದೆ? ಎಂದಿದ್ದರೂ ಭೂಮಿ ಉಳತಕ್ಕ ರೈತನ ಕೈಲಿರಬೇಕು. ಆದರೆ ಒಂದು ಪಾರುಪತ್ಯ ಇತರರ ಕೈಲಿರುವುದು ಬೇಡ ಎಂದು ಹೇಳುತ್ತೇನೆ. ಇನ್ನು ಕೆಲವು ದೊಡ್ಡ ದೊಡ್ಡ ಹಿಡುವಳಿಗಳ ವಿಚಾರದಲ್ಲಿ ಪ್ಲಾಂಟೇಷನ್‌ಗಳ ವಿಚಾರದಲ್ಲಿ ಬೇರೆ ಬೇರೆ ಕಾನೂನುಗಳಿವೆ. ಅಲ್ಲಿ ಸಹಸ್ರಾರು ಜನರು ಕೂಲಿಮಾಡುತ್ತಿರುತ್ತಾರೆ ಅವುಗಳಿಗೆಲ್ಲಾ ಈ ಕಾನೂನನ್ನು ಅನ್ವಯಿಸುವುದು ಬೇಡ. ಆದರೆ ಇಲ್ಲೀಗ ಈ ಇನ್‌ಸ್ಟಿಟ್ಯೂಟುಗಳ ವಿಚಾರ ಬಂದಿರುವುದರಿಂದ ಇಂಥ ಒಂದು ವಿನಾಯಿತಿಯನ್ನು ಕೊಡತಕ್ಕದ್ದು ರೈತನದೃಷ್ಟಿಯಿಂದಲೂ ಹಿತವಲ್ಲ, ಆ ಇನ್‌ಸ್ಟಿಟ್ಯೂಗಳದೃಷ್ಟಿಯಲ್ಲೂ ಹಿತವಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಸೀಲಿಂಗಿನ ವಿಚಾರದಲ್ಲಿ ಕೆಲವರು ಇದು ಬಹಳ ಕಡಮೆಯಾಯಿತು ಎಂಬುದಾಗಿ ಒಂದು ಅನುಮಾನಪಡುತ್ತಿರುವಂತೆ ಕಾಣುತ್ತದೆ. ಭೂಮಿಯ ಬಗ್ಗೆ ಯಾರಿಗೆತಾನೆ ಆಶೆಯಿಲ್ಲ? ಕೇವಲ 2 ಕುಂಟೆ ಜಮೀನಿಟ್ಟುಕೊಂಡಿರತಕ್ಕವನೂ ಸಹಾ ರೆಟರ್‌ಹೆಡ್ಡಿನಲ್ಲಿ ತಾನೊಬ್ಬ ಲ್ಯಾಂಡ್‌ಲಾರ್ಡ್ ಎಂದು ಹಾಕಿಸಿಕೊಂಡಿರುತ್ತಾನೆ. ಅಷ್ಟು ಜಮೀನಿದ್ದರೂ ಅದರಲ್ಲೇ ತೃಪ್ತಿಪಟ್ಟುಕೊಂಡಿರತಕ್ಕ ಜನರೂ ಇದ್ದಾರೆ. ಇನ್ನು ಕೆಲವರಲ್ಲಿ ಭೂಮಿ ವ್ಯಾಮೋಹ ಜಾಸ್ತಿ ಇರುತ್ತದೆ. ಕೆಲವರಿಗೆ 200 ಎಕರೆ ಇದ್ದರೂ ಸಾಲದು, ಇನ್ನು ಕೆಲವರಿಗೆ 2000 ಎಕರೆಗಳಿದ್ದರೂ ಸಾಲದು. ಇದು ಅಂಥ

(ಶ್ರೀ ಎಸ್. ಗೋಪಾಲಗೌಡ)

ವಿಚಾರ ಸಾಲದ್ದಕ್ಕೆ ಈ ಭೂಮಾಲೀಕನಾಗತಕ್ಕ ವ್ಯಕ್ತಿ ಎಲ್ಲಿದ್ದರೂ ಇರಬಹುದು ಎಂಬುದಾಗಿ ಶ್ರೀ ಕಡಿದಾಳ್ ಮಂಜಪ್ಪನವರು ಬೇರೆ ತೀರ್ಮಾನ ಮಾಡಿದ್ದಾರೆ. ಅಂದರೆ ಪರ್ಸನಲ್ಲಾಗಿ ಕಲ್ಟಿವೇಟ್ ಮಾಡತಕ್ಕ ವ್ಯಕ್ತಿ........

ಶ್ರೀ ಕಡಿದಾಳ್ ಮಂಜಪ್ಪ.—ನಾನಲ್ಲ ಮಾಡಿದ್ದು, ಸಭೆಯವರು ಆ ರೀತಿ ತೀರ್ಮಾನ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಆ ಜಮೀನಿರತಕ್ಕ ಗ್ರಾಮದಲ್ಲೇ ನೆಲಸಿದ್ದರೂ ಆ ಕೆಲಸವನ್ನು ನಿರ್ವಹಿಸುವುದು ಬಹಳ ಕಷ್ಟ ಎನ್ನುತ್ತಿರುವಾಗ, ಈ ದಿವಸ ಮತ್ತೆ ಇದಕ್ಕೆ ಒಂದು ಅವಕಾಶ ಕೊಟ್ಟಲ್ಲಿ ಈ ಬೆಂಗಳೂರಿನಲ್ಲಿರತಕ್ಕವರೂ ಭೂಸ್ವಾಮಿಗಳಾಗಿ ಆ ಹಿಂದಿದ್ದ ಆ ಗೇಣೀದಾರರನ್ನೇ ಪುನಹ ತಿಂಗಳಿಗೆ 40 ರೂಪಾಯಿಗಳ ಪ್ರಕಾರ ಕೊಡುತ್ತ ಅವರನ್ನ ಕೂಲಿಯಾಳುಗಳೋಪಾದಿಯಲ್ಲಿ ಇಟ್ಟು ಕೊಂಡು ಅದರಿಂದಲೇ ದುಡಿಸಿ ಅವರ ಹಕ್ಕಿಗೆ ಧಕ್ಕೆ ತರಲು ಇದರಿಂದ ಅವಕಾಶವಾಗುತ್ತದೆ. ಆದುದರಿಂದ ಇಂಥ ಕೆಲವಾರು ಲೋಪದೋಷಗಳನ್ನು ಜಾಗ್ರತೆ ಸುಧಾರಣೆಮಾಡಿ ಈ ಕಾನೂನನ್ನು ಬೇಗ ಜಾರಿಗೆ ತಂದು ಭೂರಹಿತರಾದ ರೈತರಿಗೆ ಭೂಮಿಯನ್ನು ಹಂಚಿ ತನ್ಮೂಲಕ ದೇಶದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಇರತಕ್ಕ ಮೈಸೂರು ಲ್ಯಾಂಡ್ ರಿಫಾರಂಸ್ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ.

ಈಗಾಗಲೇ ಅನೇಕ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಇನ್ನು ಕೆಲವರು ಇದರಲ್ಲಿರತಕ್ಕ ಲೋಪದೋಷಗಳನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಎಲ್ಲರೂ ಆದಷ್ಟು ಬೇಗ ಭೂಸುಧಾರಣೆಯಾಗಬೇಕು, ಉಳತಕ್ಕವನೇ ಭೂಮಿಗೆ ಒಡೆಯನಾಗಬೇಕು ಎಂದು ಏನು ಒಂದು ಮೂಲ ಭೂತ ಪ್ರಶ್ನೆಯನ್ನು ಪ್ರಸ್ತಾಪಮಾಡಿದ್ದಾರೋ ಅದನ್ನು ನಾವು ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲಿಂದಲೂ ಹೇಳುತ್ತಲೇ ಇದ್ದೇವೆ, ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ನಾವು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೇವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಾವು ಈ ಹಿಂದೆ ಗೇಣೀದಾರರ ಅನುಕೂಲಕ್ಕಾಗಿ ಟೆನೆನ್ಸಿ ಕಾನೂನನ್ನೂ ದೊಡ್ಡ ದೊಡ್ಡ ಇನಾಂ ರದ್ದಿಯಾತಿ ಕಾನೂನುಗಳನ್ನೂ ಜಾರಿಗೆ ತಂದಿದ್ದೇವೆ. ಈ ಮಸೂದೆಗಳನ್ನು 1961ರಲ್ಲೇ ಪಾಸ್ ಮಾಡಿ ಸದರಿ ಕಾನೂನುಗಳಿಂದ ದೇಶಕ್ಕೆ ಅನುಕೂಲವಾಗಿದೆಯೋ ಅಥವಾ ಪ್ರತಿಕೂಲವಾಗಿದೆಯೋ ಎಂಬುದನ್ನು ವೀಕ್ಷಿಸುತ್ತಿದ್ದೇವೆ. ನಾವು ಇಲ್ಲಿಯವರೆಗೂ ಇಲ್ಲಿ ಎಷ್ಟೋ ಕಾನೂನುಗಳನ್ನು ಪಾಸ್ ಮಾಡಿದ್ದರೂ ರೈತನಾದವನಿಗೆ ಈ ದಿವಸ ಒಂದು ಸರಿಯಾದ ನಿಲುವಿಲ್ಲದೆ ಬಹಳ ಕಷ್ಟಕ್ಕೆ ಸಿಕ್ಕಿ ಬಿದ್ದಿದ್ದಾನೆ. ಅಂಥ ರೈತರುಗಳಿಗೆಲ್ಲಾ ನಾವು ಈ ದಿವಸ ಅನುಕೂಲಗಳನ್ನು ಕಲ್ಪಿಸಿಕೊಡ ಬೇಕಾದ್ದು ಅವಶ್ಯಕ. ಉದಾಹರಣೆಗಾಗಿ ಹೇಳುವುದಾದರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇನಾಂ ರದ್ದಿಯಾತಿ ಕಾನೂನು ಜಾರಿಗೆ ಬಂದಿದ್ದರೂ ಅಲ್ಲಿ ಬೂದನಿಕೆ, ಕನ್ನಾಪುರ ಮತ್ತು ನಾಗಲಾಪುರ ಎಂಬ ಇನಾಂ ಗ್ರಾಮಗಳಲ್ಲಿರತಕ್ಕ ರೈತರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಆದುದರಿಂದ ನಾವು ಇಲ್ಲಿಯವರೆಗೂ ಮಾಡಿರತಕ್ಕ ಕಾನೂನುಗಳು ರೈತರಿಗೇನಾದರೂ ರಕ್ಷಣೆ ಮಾಡಿವೆಯೋ, ಅವರಿಗೇನಾದರೂ ಅನುಕೂಲವಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ನಾವು ಇಂದು ಪರಿಶೀಲಿಸಬೇಕಾದ್ದು ಅವಶ್ಯಕ.

ಈ ತಿದ್ದುಪಡಿ ಮಸೂದೆ ಪಾಸ್ ಆದನಂತರ ಭೂಮಾಲೀಕರಿಗೆ ಹಾಗೂ ರೈತರಿಗೆ ಮತ್ತು ಲಾಯರುಗಳಿಗೆ ಆಗತಕ್ಕ ಅನುಕೂಲ ಅನಾನುಕೂಲಗಳ ಬಗ್ಗೆ ಮೊದಲು ಸರ್ಕಾರ ದೃಷ್ಟಿಯಲ್ಲಿಡುವುದು ತುಂಬಾ ಆವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯನ್ನಿಟ್ಟು ಇದನ್ನು ಪಾಸ್ ಮಾಡಿದರೆ ನಿಜವಾಗಿಯೂ ಸಹ ಸರ್ಕಾರದ ಉದ್ದೇಶ ಸಾಧನೆಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ತಿದ್ದುಪಡಿಯಲ್ಲಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪೂರ್ವ ಕಾಲದಿಂದಲೂ ಸಹ ನಮ್ಮ ದೇಶದಲ್ಲಿ ದೇವಸ್ಥಾನಗಳು ಅಭಿವೃದ್ಧಿಯಾಗ ಬೇಕಾದರೆ ದೇವಸ್ಥಾನಗಳನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಬರಬೇಕಾದರೆ ಅವಕ್ಕೆ ಒಳ್ಳೆಯ ಭೂಮಿ ಬೇಕು ಎನ್ನತಕ್ಕ ಉದಾತ್ತವಾದ ಒಂದು ತತ್ವವನ್ನು ಇಟ್ಟುಕೊಂಡು ಈ ದೇಶದಲ್ಲಿ ಇಂಗ್ಲೀಷ್ ನವರ ಮತ್ತು ಮೊಗಲರ ಕಾಲದಿಂದಲೂ ಜಮೀನುಗಳನ್ನು ಅವುಗಳಿಗೆ ಉಳಿಸಿಕೊಂಡು ಬಂದಿದ್ದಾರೆ. ಅದು ನಮ್ಮ ದೇಶದ ಸಂಸ್ಕೃತಿಗೆ ಒಂದು ಬುನಾದಿ ಎಂದು ತಿಳಿದುಕೊಂಡು ಬಂದಿದ್ದೇವೆ. ಈಗ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳು ಹಾಗೆಯೇ ಇರಬೇಕೆಂಬ ದೃಷ್ಟಿಯಿಂದ ಈ

ತಿದ್ದುಪಡಿಯನ್ನು ಮಾಡಿದ್ದಾರೆ. ಅದರಿಂದ ರೈತನಿಗೂ ಕೂಡ ಅನುಕೂಲವಾಗುತ್ತದೆ. ಆದ್ದರಿಂದ ದೇವಸ್ಥಾನಗಳ ಜಮೀನನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಹೋಗುವುದಕ್ಕೆ ಈ ಒಂದು ಅವಕಾಶವನ್ನು ಮಾಡಿಕೊಡುವುದು ಬಹಳ ಅವಶ್ಯಕ. ಇದರಲ್ಲಿ ಕಾಫೀ ಜಮೀನಿಗೆ ವಿನಾಯಿತಿಯನ್ನು ನೀಡಿದ್ದಾರೆ. ಪರದೇಶಗಳಿಗೆ ಇದನ್ನು ಕಳುಹಿಸಿ ವಿದೇಶೀವಿನಿಮಯವನ್ನು ಸಂಪಾದನೆ ಮಾಡುವುದಕ್ಕೆ ಇದು ಬಹಳ ಅವಶ್ಯಕ. ಅಲ್ಲದೆ ಕೂಲಿಗಾರರ ಹಿತದೃಷ್ಟಿಯಿಂದ ಕಾಫಿ ಬೆಳೆಗೆ ಪ್ರೋತ್ಸಾಹ ಕೊಟ್ಟಿದ್ದೀರಿ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಾವಿರಾರು ಜನ ಕೂಲಿಗಾರರಿಗೆ ಅನುಕೂಲ ಮಾಡಿಕೊಡತಕ್ಕ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಇದರಿಂದ ಭೂಮಾಲೀಕರಿಗೂ ಕೂಡ ಅನುಕೂಲವಾಗತಕ್ಕ ದೃಷ್ಟಿಯಿಂದ ಅಲ್ಲದೇ ದೇಶದ ಆರ್ಥಿಕಾಭಿವೃದ್ಧಿ ಮತ್ತು ಕೂಲಿಗಾರರಿಗೆ ಅನುಕೂಲವಾಗತಕ್ಕ ದೃಷ್ಟಿಯಿಂದ ಮುಂದಾಲೋಚನೆ ಮಾಡಿ ಮಾಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ಕಾನೂನಿನಿಂದ ಹಳೇ ಮೈಸೂರಿನಲ್ಲಿ ಅಷ್ಟು ಕಾಣುವುದಿಲ್ಲ ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕದಲ್ಲಿ ಅನೇಕ ಕಡೆ ಭೂಮಾಲೀಕರು 10—20 ಸಾವಿರ ಎಕರೆ ಜಮೀನನ್ನು ಹೊಂದಿರುವವರು ಇದ್ದಾರೆ ಎಂದು ಕೇಳುತ್ತಾ ಇದ್ದೇವೆ, ಮೈಸೂರಿನಲ್ಲಿ ಅಂತಹ ಜನ ಬಹಳ ಕಡಿಮೆ ಇದ್ದಾರೆ, 1961ನೇ ಇಸವಿಯಿಂದ, ಈ ಕಾನೂನು ಬಂದ ನಂತರ ಅನೇಕ ಜನ ಭೂಮಾಲೀಕರು ತಮ್ಮ ಜಮೀನನ್ನು ಮಾರಿ ಕೊಂಡಿದ್ದಾರೆ ಎಂದು ಕೆಲವರು ಹೇಳುತ್ತಾ ಇದ್ದಾರೆ. ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕಾದರೆ ಸಣ್ಣ ಪುಟ್ಟ ಹೋಲ್ಡಿಂಗ್ ಇಂದ ಬೆಳೆಯುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ರೈತನೇ ಭೂಮಾಲೀಕನಾದ ಪಕ್ಷದಲ್ಲಿ ಆಗಬಹುದೇ ಹೊರತು ಇತರ ಸಂದರ್ಭಗಳಲ್ಲಿ ಹೆಚ್ಚಿನ ಉತ್ಪನ್ನವನ್ನು ಮಾಡಬೇಕಾದರೆ ಹೆಚ್ಚು ಹೋಲ್ಡಿಂಗ್ ಇರುವುದರಿಂದಲೇ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇವೆ. ಸುಮ್ಮನೆ ಎರಡು ನಾಲ್ಕು ಎಕರೆ ಜಮೀನನ್ನು ಕೊಟ್ಟರೆ ಸಾಲದು ಅದಕ್ಕೆ ಬೇಕಾದ ನೆರವನ್ನು ಕೊಟ್ಟರೆ ಪ್ರಾರಂಭದಲ್ಲಿ ವ್ಯವಸಾಯ ಮಾಡಬಹುದೇ ಹೊರತು, ವ್ಯವಸಾಯದ ಕಸಬನ್ನೆ ಅವಲಂಬಿಸಿರತಕ್ಕವರು 50—100 ಎಕರೆಗಳಿದ್ದ ಪಕ್ಷದಲ್ಲಿ ಸುಲಭವಾಗಿ ಹೆಚ್ಚು ಆಹಾರ ಉತ್ಪಾದನೆ ಮಾಡಬಲ್ಲರು. ಹೊಸದಾಗಿ ಜಮೀನನ್ನು ಕೊಟ್ಟು ಜನರಿಂದ ಅಷ್ಟು ಮಟ್ಟಿಗೆ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಖಂಡಿತವಾಗಿಯೂ ತಾವು ತಿಳಿದುಕೊಳ್ಳಬೇಕು. ಆದ್ದರಿಂದ ಭೂಮಿಯನ್ನು ಬಹಳ ಚಿಕ್ಕಚಿಕ್ಕದಾಗಿ ಒಂದು ಎಕರೆ ಎರಡು ಎಕರೆಯಂತೆ ಹಂಚಿಕೆ ಮಾಡುವುದರಿಂದ ಹೆಚ್ಚು ಆಹಾರದ ಉತ್ಪನ್ನವಾಗುವುದಿಲ್ಲ. ಒಂದು ವೇಳೆ ಆ ರೀತಿ ಮಾಡಬೇಕೆಂದು ಇದ್ದರೆ ಈ ದೇಶದ ಆಡಳಿತದ ಪರಿಸ್ಥಿತಿಯೇ ಬದಲಾಗಬೇಕು, ಆಗ ಮಾಡಬಹುದೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ ವ್ಯವಸಾಯ ಮಾಡತಕ್ಕವನಿಗೆ ಯಾವ ರೀತಿ ಒಂದು ಸ್ಟ್ಯಾಂಡರ್ಡ್ ಏಕರ್ ಎಂದು ಮಾಡುತ್ತ ಇದ್ದೀರೋ ಅದೇ ರೀತಿ ಪಟ್ಟಣಗಳಲ್ಲಿ ವಾಸ ಮಾಡತಕ್ಕ ಮನೆಗಳನ್ನು ಕಟ್ಟಿಕೊಂಡಿರತಕ್ಕವರಿಗೆ ಮತ್ತು ಬ್ಯಾಂಕುಗಳಲ್ಲಿ ಷೇರುಗಳನ್ನು ಹಾಕಿಕೊಂಡಿರತಕ್ಕವರಿಗೂ ಒಂದು ನಿಗದಿಯನ್ನು ಹಾಕದೇ ಹೋದರೆ ಸರಿಯಾಗುವುದಿಲ್ಲ. ಅವರನ್ನು ಬಿಟ್ಟು ರೈತನ ಮೇಲೆ ಮಾತ್ರ ಏಕೆ ಕಣ್ಣು ಹಾಕುತ್ತಾ ಇದ್ದೀರಿ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಅಂಥ ಒಂದು ಪ್ರಭುತ್ವ ದೇಶದಲ್ಲಿ ಜಾರಿಗೆ ಬರಬಹುದು, ಅಂತಹವರ ಮೇಲೆ ಕಣ್ಣು ಬಿಟ್ಟು ನೋಡಬಹುದು. ಬಡ ರೈತ ಎಷ್ಟು ಕಂದಾಯ ಹಾಕಿದರೂ ಕೊಡುತ್ತಾನೆ, ಎಷ್ಟು ಸಾರಿ ತಾಲ್ಲೂಕು ಆಫೀಸಿಗೆ ಅಡ್ಡಾಡು ಎಂದರೂ ಅಡ್ಡಾಡುತ್ತಾನೆ. ಇಂತಹ ಜನಗಳ ವಿಷಯದಲ್ಲಿ ಹೆಚ್ಚಿನ ನಿಗಾ ಕೊಡುವುದು ಅಗತ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ಮತ್ತು ನಮ್ಮ ಸರ್ಕಾರದವರು ಈ ತಿದ್ದುಪಡಿಯನ್ನು ಮಾಡುವಾಗ ಯುದ್ಧಕ್ಕೆ ಹೋದವರು, ಎಂದರೆ, ಹಡಗಿನ ಸೈನ್ಯದಲ್ಲಿ, ಭೂಸೈನ್ಯದಲ್ಲಿ ಅಥವಾ ವಾಯುಸೈನ್ಯದಲ್ಲಿ, ಕೆಲಸ ಮಾಡುತ್ತಾ ಇರುವವರಿಗೆ ಅಲ್ಲದೇ ವಿಧವೆಯರಿಗೆ ಅನುಕೂಲ ಮಾಡಬೇಕೆಂದು ಹೇಳಿದ್ದಾರೆ. ದೇಶದ ರಕ್ಷಣೆಯ ದೃಷ್ಟಿಯಿಂದ ಮತ್ತು ಶ್ರಮಜೀವಿಗಳ ದೃಷ್ಟಿಯಿಂದ ಇದು ಸ್ವಾಗತಾರ್ಹ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಎಲ್ಲಾ ಜಮೀನುಗಳಿಗೆ ರಿಯಾಯಿತಿಯನ್ನ ಕೊಟ್ಟು ಉಪಕಾರ ಮಾಡಿದ್ದಾರೆ. ಆದರೆ ಅಡಿಕೆ, ತೆಂಗಿನ ಬಗ್ಗೆ ಸರ್ಕಾರದವರು ಯಾವುದೇ ರಿಯಾಯಿತಿಯನ್ನೂ ತೋರಿಸಿಲ್ಲ ಎಂಬ ಮಾತನ್ನು ಈ ಶಾಸನ ಸಭೆಯಲ್ಲಿ ಕೇಳುತ್ತಾ ಇದ್ದೇವೆ. ಅಡಕೆ, ತೆಂಗು ಬಹಳ ಕಷ್ಟಪಟ್ಟು ಬೆಳೆಯತಕ್ಕ ಬೆಳೆ. 15-20 ವರ್ಷ ವ್ಯವಸಾಯ ಮಾಡಿದ ರೈತ, ತಾನೇ ಖುದ್ದು ವ್ಯವಸಾಯ ಮಾಡಿ ಆ ಬೆಳೆಯನ್ನು ಪಡೆಯುತ್ತಾ ಇದ್ದಾನೆ. ಅಡಕೆ, ತೆಂಗು ಬೆಳೆಯತಕ್ಕ ಜಮೀನಿನ ವಿಸ್ತಾರ ಎಷ್ಟು ಎಕರೆ ಇರಬೇಕೆಂಬುದು ನಿಖರವಾಗಿ ಇನ್ನೂ ಗೊತ್ತಾಗಿಲ್ಲ, ಇದರ ಬಗ್ಗೆ ರಿಯಾಯಿತಿ ತೋರಿಸಿದರೆ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಅಡಕೆ ತೆಂಗಿನ ಮೇಲೆ ಹೆಚ್ಚು ಪರಿಣಾಮವಾಗಲಾರದು ಎಂದು ಹೇಳಿದರು.

(ಶ್ರೀಮತಿ ಬಿ. ಎರ್. ಸುಬ್ಬಮ್ಮ)

ಸ್ಟ್ಯಾಂಡರ್ಡ್ ಏಕರ್ ಇಷ್ಟೇ ಎಂದು ಗೊತ್ತಾದರೆ ಆಗ ಹೆಚ್ಚಿನ ವ್ಯವಸಾಯ ಮಾಡತಕ್ಕ ಮನೋವೃತ್ತಿ ಇರತಕ್ಕ ರೈತನ ಮೇಲೆ ಇದರ ಪರಿಣಾಮವಾಗುತ್ತದೆ. ಆ ರೀತಿ ಆದರೆ ಸರ್ಕಾರದವರ ಉದ್ದೇಶ ಸಾಧನೆಯಾಗುತ್ತದೆಯೇ ಎಂಬುದನ್ನು ನೋಡಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಭೂ ಸುಧಾರಣೆಯನ್ನು ಮಾಡಿದಿರಿ, ಇದರಿಂದ ನಿಜವಾಗಿಯೂ ಅನುಕೂಲವಾಗುತ್ತದೆ ಎಂದು ಭಾವಿಸಿದ್ದ ಜನಕ್ಕೆ ಬೇಸರವಾಗಿದೆ. ಆದ್ದರಿಂದ ಈ ಕಾನೂನಿನಲ್ಲಿ ಏನು ಅನಾನುಕೂಲವಿದೆ ಎಂಬುದನ್ನು ಯೋಚನೆ ಮಾಡಿ ಇದನ್ನು ಜ ರಿಗೆ ತರುವುದು ಬಹಳ ಅವಶ್ಯಕ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಸಕ್ಕರೆ ಕಂಪೆನಿಗಳಿಗೆ ರಿಯಾಯಿತಿ ಕೊಡಬೇಕೆಂದು ಹೇಳಿದ್ದೀರಿ, ದೊಡ್ಡ ದೊಡ್ಡ ಸಕ್ಕರೆ ಕಂಪೆನಿಗಳು ಇರುವಾಗ ಒಂದು ಎರಡು ಎಕರೆಗಳನ್ನು ನಿಗದಿ ಮಾಡಿದರೆ ಅವರಿಗೆ ಪ್ರಯೋಜನವಾಗುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈ ಭೂ ಸುಧಾರಣೆ ತಿದ್ದುಪಡಿ ಮಸೂದೆ ಬಂದಿವೆ. ಈ ತಿದ್ದುಪಡಿಯಿಂದ ನಿಜವಾಗಿಯೂ ಇಷ್ಟು ವರ್ಷಗಳಿಂದಲೂ ವ್ಯವಸಾಯವನ್ನು ಮಾಡಿಕೊಂಡು ಬಂದಿರತಕ್ಕ ರೈತರ ಎಂದರೆ ಭೂ ಮಾಲೀಕರಾಗಿರಲಿ, ಕಾಫಿ ವ್ಯವಸಾಯ ಮಾಡುವವರಾಗಿರಲಿ ಯಾರೇ ಆಗಲಿ ಎಲ್ಲರ ಹಿತದೃಷ್ಟಿಯಿಂದಲೂ ಅವರವರ ಹಿತವನ್ನು ಕಾಪಾಡಬೇಕಾಗಿದೆ. ಒಂದು ಭಾಗದವರಿಗೆ ತೊಂದರೆ ಕೊಟ್ಟು ಇನ್ನೊಂದು ಭಾಗದವರಿಗೆ ಸುಖವನ್ನುಂಟುಮಾಡುವುದು ಸರಿಯಾದ ನೀತಿಯಲ್ಲ, ಆ ನೀತಿ ಕಾರ್ಯಗತವಾಗುವುದಿಲ್ಲ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನ ಮುಗಿಸುತ್ತೇನೆ.

†ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ),—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ ಭೂಸುಧಾರಣಾ ವಿಧೇಯಕದ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತ ಈ ಸನ್ನಿವೇಶದಲ್ಲಿ ನನಗೆ ತಿಳಿದ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ಈ ಭೂಸುಧಾರಣಾ ವಿಧೇಯಕ ಜಾರಿಗೆ ಬರಬೇಕು ಎಂದು ಬಹಳ ದಿವಸಗಳಿಂದ ನಮ್ಮ ಕಾಂಗ್ರೆಸ್ ಸಂಸ್ಥೆಯವರು ಆಸೆಯನ್ನು ಇಟ್ಟುಕೊಂಡಿದ್ದರು. ಅದನ್ನು ಇವತ್ತು ನೆರವೇರಿಸುವುದಕ್ಕೆ ಈ ಸಭೆ ಚರ್ಚೆಮಾಡುತ್ತಿದೆ. ಅನೇಕ ಕಾರಣಗಳಿಂದ ಇದು ಜಾರಿಗೆ ಬರುವುದಕ್ಕೆ ತಡವಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುವುದಾದರೂ ಕೂಡ ನಾವು ಈಗ ಪರಿಶೀಲನೆ ಮಾಡುವಾಗ ಯಾವ ಒಂದು ನೀತಿಯನ್ನು ಇಟ್ಟುಕೊಂಡು ಈ ಕಾನೂನನ್ನು ತರಬೇಕು ಮತ್ತು ಭೂ ಮಾಲೀಕತ್ವವನ್ನು ಉಳುವವನಿಗೇ ಕೊಡಬೇಕು ಎನ್ನುವ ಆಸೆಯನ್ನು ನೆರವೇರಿಸಬೇಕೆನ್ನುವ ಧ್ಯೇಯವನ್ನು ಇಟ್ಟುಕೊಂಡಿದ್ದೇವೆಯೋ ಅದು ಈ ವಿಧೇಯಕದಿಂದ ಆಗುತ್ತದೆಯೋ ಇಲ್ಲವೋ ಎನ್ನುವುದನ್ನು ವಿಚಾರ ಮಾಡತಕ್ಕದ್ದು ಬಹಳ ಅವಶ್ಯಕವಿದೆ. ಈ ಒಂದು ತಿದ್ದುಪಡಿಯಲ್ಲಿ ನಾವು ನೋಡುವುದಾದರೆ 1961ನೇ ಭೂಸುಧಾರಣಾ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ತರುವುದರಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಇದರಲ್ಲಿ ತೋರಿಸುವುದಕ್ಕೆ ಹೊರಟಂತಾಗಿದೆ. 1961ನೇ ವಿಧೇಯಕವನ್ನು ನೋಡುವುದಾದರೆ, ಈ ಭೂ ಸುಧಾರಣೆಯನ್ನು ತಂದು, ಉಳುವವನಿಗೆ ಜಮೀನು ಕೊಡಬೇಕು, ಅವನು ಜಮೀನು ತನ್ನದೇ ಎಂದು ಭಾವಿಸಿ ಹೆಚ್ಚಿನ ಮಟ್ಟದಲ್ಲಿ ಆಸಕ್ತಿಯನ್ನು ವಹಿಸಿ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ದೇಶದ ಅನ್ನ ಪರಿಸ್ಥಿತಿಯನ್ನೂ ಉತ್ತಮಪಡಿಸುವುದಕ್ಕೆ ಅವಕಾಶವಾಗಬೇಕು ಎನ್ನುವ ಉದ್ದೇಶ ನಮ್ಮಲ್ಲಿತ್ತು. ಅದನ್ನು ಸಾಧಿಸಬೇಕಾದರೆ ಸಾಕಷ್ಟು ಪ್ರಮಾಣದಲ್ಲಿ ಹಂಚುವುದಕ್ಕೆ ನಮ್ಮಲ್ಲಿ ಭೂಮಿ ಇದೆಯೇ, ಈ ರೀತಿಯಲ್ಲಿ ವಿನಾಯಿತಿಗಳನ್ನು ಕೊಡುವುದು ನ್ಯಾಯವಾದುದೇ ಎನ್ನುವುದನ್ನು ಯೋಚನೆ ಮಾಡಬೇಕು. ಲ್ಯಾಂಡ್ ಲಾಸ್ ಕಮಿಟಿಯವರು ಸ್ಥೂಲವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ದೇಶದಲ್ಲಿ 71·2 ಭಾಗ ಜನರು ವ್ಯವಸಾಯದ ಮೇಲೆ ಜೀವನವನ್ನು ನಡೆಸಿಕೊಂಡಿರತಕ್ಕ ಜನರಿದ್ದಾರೆ ; ಅದರಲ್ಲಿ 47.6 ಭಾಗ ಓನರ್ ಕಲ್ಟಿವೇಟರ್ಸ್, 9·3 ಭಾಗ ಟಿನೆಂಟ್ ಕಲ್ಟಿವೇಟರ್ಸ್, 10.9 ಭಾಗ ವ್ಯವಸಾಯದ ಕಾರ್ಮಿಕರು, 3.4 ಭಾಗ ರೆಂಟ್ ರಿಸೀವರ್ಸ್ ಎಂದು 1951ನೆ ಇಸವಿಯಲ್ಲಿಯೇ ಹೇಳಿದ್ದಾರೆ. ಅಲ್ಲಿಂದ ನಾವು ಈ ಕಾನೂನನ್ನು ತರುವುದಕ್ಕೆ ಪ್ರಯತ್ನ ಪಡುವಾಗ ಎಷ್ಟು ಜನ owner cultivators ಆಗುವುದಕ್ಕೆ ಪ್ರಯತ್ನ ಪಟ್ಟರು ಎಂದು ಯೋಚನೆ ಮಾಡಿದರೆ ನಾವು ಇವತ್ತು ಈ ಕಾನೂನನ್ನು ಜಾರಿಗೆ ತಂದ ತಕ್ಷಣ ಎಷ್ಟು ಆದರಿಂದ ಉಪಯೋಗವಾಗಬಹುದು ಎನ್ನುವ ಉದ್ದೇಶವಿತ್ತೋ ಅದು ಆಗಲಾರದು ಎಂದು ನಾನು ಶಂಕಿಸುತ್ತೇನೆ. ಇದಕ್ಕೆ ಅನೇಕ ಅವಕಾಶಗಳನ್ನು ಕೊಟ್ಟಿದ್ದರಲ್ಲಿ ಮೊದಲನೆಯದಾಗಿ ನನ್ನ ಆಕ್ಷೇಪಣೆ ಇರತಕ್ಕದ್ದು ಕಾಫಿ ಪ್ಲಾಂಟೇಷನಗಳಿಗೆ ಈಗ ಇರತಕ್ಕ ವಿಸ್ತೀರ್ಣದ ಜೊತೆಗೆ ಮುಂದೆ ಬೇಕಾದಷ್ಟು ವಿಸ್ತೀರ್ಣವನ್ನು ಮಾಡಿಕೊಳ್ಳ ಬಹುದು ಎನ್ನುವ ವಿನಾಯಿತಿಯನ್ನು ತೋರಿಸುವುದಕ್ಕೆ. ಈಗ ಇರತಕ್ಕದ್ದೇ ಜಾಸ್ತಿ. ಇದರ ಜೊತೆಗೆ ಇನ್ನು ಮುಂದೆ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಹೊಸದಾಗಿ ಕಾಫಿ ಪ್ಲಾಂಟೇಷನ್ ಬೇರೆಯವರಿಗೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಬಗ್ಗೆ ಕೆಲವರ ವಾದ ಏನಿದೆ ಎಂದರೆ, ಈ ಉದ್ಯಮ ಬಹಳ ಕಷ್ಟದಾಯಕವಾದುದು, ಫಾರಿನ್ ಎಕ್ಸ್‌ಛೇಂಜ್‌ಗಳಿಸತಕ್ಕ ಬೆಳೆ, ಇದನ್ನು ಬೆಳೆಯ

ವುದಕ್ಕೆ ಹಣ ಹೇರಳವಾಗಿರಬೇಕು ಎಂದು. ಈಗಾಗಲೇ ಈ ಉದ್ಯಮವನ್ನು ಹೊಂದಿರುವವರು ಕೆಲಸ ಮಾಡುತ್ತಿದ್ದಾರೆ. ಹೊಸದಾಗಿ ಅದಕ್ಕೆ ಬರುವವರಿಗೆ ಪ್ರೋತ್ಸಾಹ ಕೊಡಬೇಕು. ನಮ್ಮ ದೇಶದಲ್ಲಿ ಎಲ್ಲರಿಗೂ ಸಮಾನಾವಕಾಶ ದೊರಕಬೇಕಾಗಿದೆ. ಅದ್ದರಿಂದ ಕಾಫಿ ತೋಟಗಳಿಗೆ ಒಂದು ಮಿತಿ ಇಲ್ಲದೆ ಇದ್ದರೆ ಹೊಸಬರು ಬರುವುದಕ್ಕೆ ಅವಕಾಶವಾಗುವುದಿಲ್ಲ. 1961ನೇ ಕಾನೂನಿನಲ್ಲಿ 100 ಎಕರೆವರೆಗೆ ಹೊಂದಿರುವುದಕ್ಕೆ ಅವಕಾಶವಿತ್ತು. ಆದರೆ ನಮ್ಮ ಮುಂದೆ ಬಂದಿರುವ ತಿದ್ದುಪಡಿಯಲ್ಲಿ ಅನಿರ್ಬಂಧವಾಗಿ ಎಷ್ಟು ಪ್ರದೇಶ ಬೇಕಾದರೂ ಹೊಂದಿರಬಹುದು ಎಂದು ಸೂಚಿಸಿದ್ದಾರೆ. ಇದನ್ನು ಸರ್ಕಾರದವರು ಪುನಃ ಪರ್ಯಾಲೋಚಿಸಿ ಮೊದಲಿದ್ದಂತೆ ನಿರ್ಬಂಧ ಇರಬೇಕು, ಆ ರೀತಿಯಾಗಿ ಮಾಡಬೇಕು ಎಂದು ಸೂಚಿಸುತ್ತೇನೆ.

ಹಣ್ಣಿನ ತೋಟಗಳಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿಯನ್ನು ಕೊಟ್ಟಿಲ್ಲ. ಕೆಲವರು ಈ ಎರಡು ತರಹ ತೋಟಗಳಿಗೂ ವಿನಾಯಿತಿಬೇಕು ಎಂದು ಕೇಳುತ್ತಿದ್ದಾರೆ. ಆದರೆ ನಾನು ವಿನಾಯಿತಿಬೇಕು ಎಂದು ಕೇಳುವುದಿಲ್ಲ. ಅದು ಸಾಧುವಾದುದಲ್ಲ. ಅಡಕೆ ತೋಟವಾಗಲೀ, ತೆಂಗಿನ ತೋಟವಾಗಲೀ ಕಾನೂನಿನಲ್ಲಿ ವಿಧಿಸಿರುವ ಸೀಲಿಂಗ್ ಲಿಮಿಟ್ ಏನಿದೆ ಅದು ಸಾಕಷ್ಟು ಇರುತ್ತದೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಭೂಮಿಯ ಮೇಲೆಯೇ ಆಶ್ರಯಿಸಿರತಕ್ಕ ಭೂಹೀನರಿಗೆ ಸಾಕಷ್ಟು ಭೂಮಿಯನ್ನು ಹಂಚುವುದಕ್ಕೆ ಅವಕಾಶವಿಲ್ಲದೆ ಇರುವ ಈ ಸನ್ನಿವೇಶದಲ್ಲಿ ವಿನಾಯಿತಿಯನ್ನು ತೋರಿಸುವುದಕ್ಕೆ ಹೋಗದೆ ಆದಷ್ಟೂ ವಿನಾಯಿತಿಯನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ.

ಸಕ್ಕರೆ ಕಾರ್ಖಾನೆಗಳಿಗೆ ವಿನಾಯಿತಿಯನ್ನು ಕೊಟ್ಟು ಅವರು ಸಾವಿರಾರು ಎಕರೆ ಜಮೀನನ್ನು ಹೊಂದಿರುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಕಾರ್ಖಾನೆಯವರಿಗೆ ಅವರದೇ ಆದ ಜಮೀನು ಇರಬೇಕು; ಅವರಿಗೆ ಜಮೀನು ಇದ್ದರೆ ಮಾತ್ರ ಕಾರ್ಖಾನೆಯನ್ನು ನಡೆಸಬಹುದು ಎಂದು ತಿಳಿದುಕೊಂಡಿರುವ ಹಾಗೆ ಕಾಣುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಮೊನ್ನೆಯ ದಿನ ಪತ್ರಿಕೆಗಳಲ್ಲಿ ಓದುವಾಗ ಅಲ್ಲಿ ಏನು ಪರಿಸ್ಥಿತಿ ಇದೆ ಎಂದು ತಿಳಿದುಕೊಂಡೆ. ಕಾರ್ಖಾನೆಗಳಿಗೆ ಕೊಟ್ಟಿರತಕ್ಕ ಜಮೀನಿನಲ್ಲಿ ಬೆಳೆದಂಥ ಕಬ್ಬನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ ರೈತರು ಹೋಗಿ ಕೇಳಿದಾಗ ರೈತರು ಕಬ್ಬನ್ನು ತೆಗೆದುಕೊಳ್ಳುವುದಕ್ಕೆ ಇಷ್ಟ ಪಡದೆ, ರೈತರಿಗೆ ಪ್ರೋತ್ಸಾಹ ಸಿಕ್ಕದೆ ತೊಂದರೆಯಾಗುತ್ತಿದೆ. ಯಾವ ಉದ್ದೇಶಕ್ಕಾಗಿ ರೈತನಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವುದಕ್ಕಾಗಿ ಕಾನೂನು ಮಾಡುತ್ತಿದ್ದೇವೆಯೋ ಅದರಿಂದಲೇ ರೈತನಿಗೆ ಅನ್ಯಾಯವಾಗುತ್ತದೆ ಎನ್ನುವುದನ್ನು ನಾವು ಕಾಣುತ್ತಿದ್ದೇವೆ. ಲ್ಯಾಂಡ ಲಾಸ್ ಕಮಿಷನ್ ಅವರು ಸಹ ತಮ್ಮ ವರದಿಯಲ್ಲಿ ಕಾರ್ಖಾನೆಗೆ ಕಬ್ಬನ್ನು ಒದಗಿಸಲು ಬೇಕಾಗುವಷ್ಟು ಜಮೀನಿನಲ್ಲಿ ಆರನೇ ಒಂದು ಭಾಗ ಕಾರ್ಖಾನೆ ಹೊಂದಿರಬೇಕು ಎಂದು ಹೇಳುತ್ತಾರೆ. ಆದರೆ ಹೆಚ್ಚಿಗೆ ಜಮೀನು ಕೊಡುವುದರಿಂದ ಬಹಳ ಅನಾನುಕೂಲವಾಗುತ್ತದೆ. ಅವರು ಡೆಮಾನ್‌ಸ್ಟ್ರೇಷನ್ ಪ್ಲಾಟುಗಳನ್ನು ಮಾಡುವುದಕ್ಕೆ, ಕಬ್ಬನ್ನು ಬೆಳೆದು ಪ್ರಯೋಗ ಮಾಡುವುದಕ್ಕೆ ಎಷ್ಟು ಭೂಮಿ ಬೇಕೋ ಅಷ್ಟನ್ನು ಮಾತ್ರ ಕೊಡಬಹುದು. ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಜಮೀನು ಕಾರ್ಖಾನೆಗಳಿಗೆ ಇದ್ದರೆ ರೈತರಿಗೆ ಕಬ್ಬು ಬೆಳೆಯುವುದಕ್ಕೆ ಪ್ರೋತ್ಸಾಹ ಸಿಕ್ಕುವುದಿಲ್ಲ. ರೈತರು ಬೆಳೆಯುವ ಕಬ್ಬಿಗೆ ಸರಿಯಾದ ಬೆಲೆ ಸಿಕ್ಕದೆ ತೊಂದರೆಯಾಗಬಹುದು ಎಂದು ಕಮಿಷನ್ ಅವರು ಹೇಳಿದ್ದಾರೆ. ನಮ್ಮ ಅನುಭವದಲ್ಲಿ ಕೂಡ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚು ಜಮೀನು ಕೊಟ್ಟಿರುವುದರಿಂದ ರೈತ ತನ್ನ ಜಮೀನಿನಲ್ಲಿ ಬೆಳೆಯುವುದಕ್ಕೆ ಸರಿಯಾದ ಕಾಲದಲ್ಲಿ ಬೆಳೆಯನ್ನು ಪಡೆಯುತ್ತಿಲ್ಲ. ಇಂಥ ಮಿತಿಯನ್ನು ಕಡಮೆ ಮಾಡುವುದರಿಂದ ರೈತನಿಗೆ ಹೆಚ್ಚಿಗೆ ಸಿಕ್ಕುವುದಕ್ಕೆ ಅವಕಾಶವಾಗುತ್ತದೆ. ಕಾರ್ಖಾನೆಗಳಿಗೆ ಕೊಟ್ಟಿರುವ ವಿನಾಯಿತಿ ನ್ಯಾಯವಾದುದಲ್ಲ, ಅದನ್ನು ತೆಗೆದು ಹಾಕಿ ಕಾರ್ಖಾನೆಗಳವರಿಗೂ ಸಹ ಮಿತಿಯನ್ನು ಅನ್ವಯಿಸುವಂತೆ ಕಾನೂನನ್ನು ತರಬೇಕು ಎಂದು ಹೇಳುತ್ತೇನೆ. ಹೋದ ವರ್ಷ ಬೆಲ್ಲದ ಬೆಲೆ ಜಾಸ್ತಿಯಾಗಿ, ಕಬ್ಬಿನಿಂದ ಬೆಲ್ಲವನ್ನು ರೈತರು ಮಾಡಿಕೊಳ್ಳುವುದಕ್ಕೆ ಹೊರಟಾಗ ಸರ್ಕಾರ ಒಂದು ಕಾನೂನು ತಂದು ಸಕ್ಕರೆ ಕಾರ್ಖಾನೆಗೆ ಇಷ್ಟು ಕಬ್ಬನ್ನು ಕೊಡಲೇ ಬೇಕು ಎಂದು ಮಾಡಿದರು. ಸರ್ಕಾರಕ್ಕೆ ಇಂಥ ಅಧಿಕಾರವಿರುವಾಗ ರೈತರು ಕಾರ್ಖಾನೆಗಳಿಗೆ ಕಬ್ಬನ್ನು ಒದಗಿಸುವುದರಲ್ಲಿ ತೊಂದರೆ ಆಗುತ್ತದೆ ಎನ್ನುವುದಕ್ಕೆ ಅವಕಾಶವಿಲ್ಲ. ಸಕ್ಕರೆ ಕಾರ್ಖಾನೆಗಳವರಿಗೆ ಭೂ ಮಾಲೀಕತ್ವ ಕೊಡತಕ್ಕದ್ದು ಸರಿಯಲ್ಲ. ಇದರಿಂದ ಭೂಹೀನರಿಗೆ ಇರತಕ್ಕ ಜಮೀನೂ ಸಿಕ್ಕದೆ ಇರುವ ಸನ್ನಿವೇಶ ಇರುವುದರಿಂದ ಇಂಥದ್ದಕ್ಕೆ ವಿನಾಯಿತಿ ಕೊಡುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಮೈಸೂರಿನಲ್ಲಿರತಕ್ಕ ಜಮೀನುಗಳನ್ನು ಸರ್ಕಾರ ತೆಗೆದುಕೊಂಡು ರೈತರಿಗೆ ಕೊಡದೆ ಇರತಕ್ಕ ತಿದ್ದುಪಡಿ ನಮ್ಮ ಮುಂದೆ ಬಂದಿದೆ. ಅದಕ್ಕೆ ಮಾನ್ಯ ಸರ್ಕಾರದವರು ಕೆಲವೊಂದು ತಿದ್ದುಪಡಿ ತಂದು ಕೆಲವೊಂದು ದೇವಸ್ಥಾನಗಳಿಗೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ನಮ್ಮ ಹಳೇಯ ಮೈಸೂರಿನಲ್ಲಿ ಈ ರೀತಿ ಇದ್ದರೆ, ಹೊಸ ಮೈಸೂರಿನಲ್ಲಿಯೂ ಅನೇಕ ದೇವಸ್ಥಾನಗಳು ಇವೆ. ಇದರಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಪೂಜಾರಿಗಳಿಗೆ, ಎಣ್ಣೆ ಹಾಕು ವವರಿಗೆ, ಅಲ್ಲಿ ಸಣ್ಣ ಪುಟ್ಟ ಕೆಲಸಮಾಡುವವರಿಗೆ ತಮ್ಮ ಜಮೀನಿನ ಪೈಕಿ 30-40-50 ಎಕರೆ ಗಳನ್ನು ಕೊಟ್ಟಿದ್ದಾರೆ. ಅವರು ಅದರ ಉಪಯೋಗವನ್ನು ಹೊಂದಿ ಅಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಅಲ್ಲಿರುವ ರೈತರಿಗೆ ಆ ಹಕ್ಕನ್ನು ಕೊಡದೇ ಇದ್ದರೆ ಅಲ್ಲಿನ ರೈತರನ್ನು ಕಾನೂನಿಗೆ ಒಳಪಡಿಸಿದರೆ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ. ಅದಕ್ಕಾಗಿ ಅಂತಹ ಎಲ್ಲಾ ಸ್ಥಳಗಳಲ್ಲಿ ಪೂಜಾರಿಗಳಿಗೆ, ಇತರ ಸಿಬ್ಬಂದಿವರ್ಗದವರನ್ನು ಬಿಟ್ಟು ರೈತರ ಜಮೀನಿನಲ್ಲಿ ಯಾರು ಭೂಮಿ ಉಳುತ್ತಾರೋ ಅವರಿಗೆ ಈ ಹಕ್ಕಿನ ಅವಕಾಶವಾಗಬೇಕು. ಸೇವೆ ಸಲ್ಲಿಸುವವರಿಗೆ ಅದರ ಉತ್ಪನ್ನವನ್ನು ಹಾಗೂ ನಿಗದಿ ಯಾದ ಸಂಬಳವನ್ನು ಅವರಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ಇಂತಹ ವ್ಯವಸ್ಥೆಯನ್ನು ಮಾಡಿ ನಮ್ಮ ಭೂಹೀನರಿಗೆ ಹೆಚ್ಚಿನಮಟ್ಟದಲ್ಲಿ ಭೂಮಿ ಸಿಗುವಂತೆ ಮಾಡಬೇಕು. ಅದನ್ನು ಟ್ರಿಬ್ಯೂನಲ್ ನಿರ್ಧರಿಸಬೇಕು. ಜಮೀನುಗಳ ಬಗ್ಗೆ ಆಕ್ಯುಪೆನ್ಸಿ ರೈಟ್ಸ್ ಕೊಡಬೇಕೆಂದು ಕಾನೂನಿ ನಲ್ಲಿರುವುದರಿಂದ ನಮ್ಮ ಅನುಭವದಲ್ಲಿ ತೊಂದರೆಯಾಗಿರುವುದನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನಾಂ ಅಬಾಲಿಷನ್ ಆಕ್ಟ್ ಬಂತು. ಸುಮಾರು 7-8-10 ವರ್ಷಗಳಾದರೂ ಕೂಡ ಇವತ್ತು ಅದಕ್ಕಾಗಿ ನೇಮಿಸಿರತಕ್ಕ ಅಧಿಕಾರಿಗಳು ಅಲ್ಲಿರತಕ್ಕ ಅರ್ಜಿಗಳನ್ನು ಇನ್ನೂ ಇತ್ಯರ್ಥಮಾಡಲಿಲ್ಲ. ನಾಳೆಯೂ ಅದೇ ಸನ್ನಿವೇಶ ಬರುತ್ತದೆ. ಆಕ್ಯುಪೆನ್ಸಿ ರೈಟ್ಸನ್ನು ಟ್ರಿಬ್ಯೂ ನಲ್ ತೀರ್ಮಾನ ಮಾಡಿದರೆ ಇನ್ನು 10 ವರ್ಷಗಳಾದರೂ ಇದರಲ್ಲಿ ಪ್ರಗತಿಯನ್ನು ಸಾಧಿಸುವುದ ಕ್ಕಾಗುವುದಿಲ್ಲ. ಹೀಗಾಗದಂತೆ ಟ್ರಿಬ್ಯೂನಲ್ ಅವರಿಗೆ ನ್ಯಾಯ ಖಾತೆ ಇಷ್ಟೇ ಕಾಲದಲ್ಲಿ ತೀರ್ಮಾನ ಮಾಡಬೇಕೆಂಬ ನಿರ್ಬಂಧವಿಡಬೇಕು. ಅದನ್ನು ಮಾಡುವ ವ್ಯವಸ್ಥೆ ಬಹಳ ನಿರ್ದಿಷ್ಟವಾಗಿ ಗೊತ್ತು ಪಡಿಸಿ ಕಾರ್ಯಗತ ಮಾಡಬೇಕು. ಕೊನೆಯದಾಗಿ, ಈ ಕಾನೂನಿನ ಉಪಯೋಗ ಎಲ್ಲರಿಗೂ ತಕ್ಷಣ ಆಗುವಂತೆ ವ್ಯವಸ್ಥೆಯಾಗಬೇಕೆಂದು ಈ ಸನ್ನಿವೇಶದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ವನ್ನು ಕೊಟ್ಟಂಥ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್.—ಸ್ವಾಮಿ, ಸರ್ಕಾರ ಈ ದಿನ ಅನುಸರಿಸಿಕೊಂಡು ಹೋಗುತ್ತಿರುವ ದಾರಿ ನಿಜವಾಗಿ ಅತಿ ತೀವ್ರವಾದ ಕಳವಳಕ್ಕೆ ಕಾರಣವಾಗಿದೆಯೆಂದು ಹೇಳಬಯಸುತ್ತೇನೆ. ಏಕೆಂದರೆ, ಈ ಪ್ರಪಂಚದಲ್ಲಿ ಮನುಷ್ಯನಲ್ಲಿರುವ ನಡವಳಿಕೆ ದೃಷ್ಟಿಯಿಂದ ನೋಡುವುದಾದರೆ, ಸಮಾಜದಲ್ಲಿ ನ್ಯಾಯ ಅಥವಾ ನೀತಿ ಯಾವುದೂ ಇಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಒಂದು ಕಾರಣವಿದೆ. ಕಾಫಿಗೆ ಮೊದಲು ಅಷ್ಟೋ ಇಷ್ಟೋ ಸೀಲಿಂಗ್ ಇತ್ತು. ಅದನ್ನು ತೆಗೆದು ಹಾಕಿದರು. ಜೊತೆಗೆ ಪ್ಲಾಂಟರ್ಸ್ ಗದ್ದೆಗಳನ್ನು ಎಷ್ಟಾದರೂ ಇಟ್ಟುಕೊಳ್ಳಬಹುದು, ಸೀಲಿಂಗ್ ಇಲ್ಲ, ಕಾಫಿ ತೋಟದ ಮಧ್ಯದಲ್ಲಿ ಗದ್ದೆ ಇರುತ್ತದೆಂದು ಹೇಳಿದರು. ಕಾಫಿ ತೋಟ ಯಾವಾಗಲೂ ಬೆಟ್ಟಗಳಮೇಲೆ ಮತ್ತು ಅವುಗಳ ಮಧ್ಯೆ ಅಥವಾ ವ್ಯಾಲಿಗಳಲ್ಲಿರುತ್ತದೆ. ಇದಕ್ಕೂ ಅನ್ಯಾಯ ವಾಗುತ್ತದೆಂದು ಹೇಳುವುದು ಸತ್ಯಕ್ಕೆ ಬಹಳ ದೂರವಾದಂಥ ಮಾತು. ಇದರಲ್ಲಿ ಹುರುಳಿಲ್ಲ. ಒಟ್ಟಿನಲ್ಲಿ ಇವರು ನೀತಿಗೆಟ್ಟಿದ್ದಾರೆಂದು ಖಡಾಖಂಡಿತವಾಗಿ ಗೊತ್ತಾಗುತ್ತದೆ. ಅದರ ಜೊತೆಗೆ ದೇವಸ್ಥಾನಕ್ಕೆ ಈ ವಿನಾಯಿತಿ ಇಲ್ಲವೆಂದು ಒಬ್ಬರು ಹೇಳಿದರು. ಇದುವರೆಗೆ ಕೇಳಿದ್ದರಲ್ಲಿ ಶ್ರೀಮಾನ್ ಮಾದೇಗೌಡರು, ಕಡಿದಾಳ್ ಮಂಜಪ್ಪನವರು ಕೆಲವು ವಿಚಾರಗಳನ್ನು ಹೇಳುವಾಗ ಮೂಲಕ್ಕೆ ಹೋಗಿ ಮಾತನಾಡಿದ್ದಾರೆ. ಸೆಕ್ಯುಲರ್ ಸ್ಟೇಟ್ ಎಂಬುದನ್ನು ನಾನು ಖಂಡಿತ ಒಪ್ಪು ತ್ತೇನೆ. ಆದರೆ ಕೆಲವರು ಸ್ಕೂಲ್ ವಿದ್ಯಾಸಂಸ್ಥೆಗಳು ಇವೆಲ್ಲವನ್ನೂ ನಡೆಸುತ್ತಾರೆ. ಆ ಸಂಸ್ಥೆಗಳಿಗೆ ಆಸ್ತಿ ಇಲ್ಲದಿದ್ದರೆ ಅವನ್ನು ನಡೆಸುವುದು ಕಷ್ಟ. ಅದನ್ನು ಆಳವಾಗಿ ಯೋಚನೆ ಮಾಡಿ ಇದರಲ್ಲಿ ಏನಾದರೂ ಮಾಡಲು ಸಾಧ್ಯವೇ ಎಂಬುದನ್ನು ನೋಡಬೇಕಾಗುತ್ತದೆ. ರೆವಿನ್ಯೂ ಸೆಟಲ್‌ಮೆಂಟ್ ವಿಷಯದಲ್ಲಿ ನಿಮ್ಮ ಪಕ್ಷದಲ್ಲೇ ಭಿನ್ನಾಭಿಪ್ರಾಯವಿದೆಯೆಂದು ಕೇಳಿದ್ದೇನೆ. ಅದನ್ನು ನೋಡಿದರೆ ಕಣ್ಣಿಗೆ ಮಣ್ಣು ಎರಚುವ ಹಾಗೆ ಇದೆ. ಈ ನಡವಳಿಕೆ ಸರಿಯಲ್ಲ. ಖಡಾಖಂಡಿತವಾಗಿ ಇಂತಹ ಆಡಳಿತದಲ್ಲಿ ಜನರು ಹೋರಾಟವನ್ನು ಹೂಡಿ ಆಡಳಿತ ಮುರಿದು ಕ್ರಾಂತಿಗೆ ಖಂಡಿತವಾಗಿ ದಾರಿ ಆಗುತ್ತದೆ. ಸಾಮಾನ್ಯವಾಗಿ ನಮ್ಮ ಹಳ್ಳಿಯಲ್ಲಿ ಇಂತಿಂಥ ತೋಟಗಳಿಗೆ ಇಷ್ಟಿಷ್ಟು ಕಂದಾಯ ಬೀಳುತ್ತದೆಂಬುದು ಗೊತ್ತಾಗುತ್ತದೆ. ಹೇಗೆಂದರೆ, ಶ್ಯಾನುಭೋಗರು ಬಂದು ಇಷ್ಟಿಷ್ಟು ಜಾಸ್ತಿ ಕಂದಾಯವಾಗುತ್ತದೆಂದು ಹೇಳುತ್ತಿದ್ದಾರೆ. ಒಂದು ರೂಪಾಯಿಗೆ ಬದಲಾಗಿ 5 ರೂಪಾಯಿ ಗಳನ್ನು ಹಾಕಿ ಸಣ್ಣ ಹಿಡುವಳಿದಾರರ ಹಿಡುವಳಿ ಕೇವಲ 3-4 ಎಕರೆಗಳು. ಒಂದು ಉದಾಹರಣೆ ಯನ್ನು ಕೊಡುತ್ತೇನೆ. ನಮ್ಮ ಸಿರಾ ಬಾರ್ಡರಿನಲ್ಲಿ ಯಾವನೋ ಒಬ್ಬ ಉಪಾಧ್ಯಾಯನಿಗೆ ಸ್ವಲ್ಪ ಡ್ರೈಲ್ಯಾಂಡ್ ಇತ್ತು ಎನ್ನೋಣ. ಅವನಿಗೆ ತೋಟವೂ ಸ್ವಲ್ಪ ಇರುತ್ತದೆ. ಅವನ ತೋಟದ

ಮೇಲೆ ಒಂದು ನ್ಯಾಯವಾದ ಮತ್ತು ನಿಖರವಾದ ಕಂದಾಯವನ್ನು ಹಾಕಿದ್ದಾರೆ. ಹಾಗೂ ಅವನು
ಎಲ್ಲಾ ವರ್ಷಗಳೂ ಕಂದಾಯ ಕೊಟ್ಟಿಲ್ಲ. ಈಗ ಅವನಿಗೆ ಕಂದಾಯ ಒಂದು ರೂಪಾಯಿಗೆ
ಬದಲಾಗಿ 5 ರೂಪಾಯಿ ಬೀಳುತ್ತದೆ. ಈಗಲೂ ಕೊಡುವುದಿಲ್ಲ. ಆಗ ಏನು ಮಾಡುತ್ತೀರಿ?
ಆ ಕಂದಾಯವನ್ನು ಕೂಲಿ ಮಾಡಿ ಕೊಡುತ್ತೇನೆ ಎಂದು ಹೇಳುತ್ತಾನೆ. ಅಂತಹವನಮೇಲೆ
ಲೆಕ್ಕಾಚಾರವಾಗಿ ಇಷ್ಟು ಕಂದಾಯ ಹಾಕಿದ್ದೇನೆಂದರೆ, ಅದರೊಳಗೆ ಏನು ನ್ಯಾಯವಿದೆ? ಸರ್ಕಾರ
ದವರು ಕಾಫಿ ಪ್ಲಾಂಟರ್ಸ್ ಬಲೆಗೆ ಬಿದ್ದು ನಮ್ಮನ್ನು ಬಲಿ ಹಾಕಬೇಕೆಂದು ಹೊರಟಿದ್ದಾರೆ.
ಮೊದಲನಿಂದಲೂ ಈ ರಿಸೆಟಲ್‌ಮೆಂಟ್ ವಿಚಾರ ಬಹಳ ಅಪಾಯಕಾರಿಯಾಗಿತ್ತು. ಗದ್ದೆ ಮೈದಾನ
ಪ್ರದೇಶದಮೇಲೆ ಮಾಡುವುದರಿಂದ ಕಂದಾಯ ಜಾಸ್ತಿ ಹಾಕಬೇಕೆಂದು ಮಾಡಿದ್ದಾರೆ. ಅದರಿಂದ
ಇವರಿಗೆ ತೊಂದರೆಯಾಗುತ್ತದೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಆದ್ದರಿಂದ ಈಗ
ವಂಚನೆಮಾಡಿ ಮುಂದಿನ ಸಾರಿ ಓಟು ಕಿತ್ತುಕೊಳ್ಳಬೇಕೆಂದು ಮಾಡಿದ್ದಾರೆ. ಇನ್ನೇನು ಇಲ್ಲ.
ಇದರಲ್ಲಿ ನೂರಕ್ಕೆ ನೂರರಷ್ಟು ನಿಜವಿದೆ. ನಾನಾ ರೂಪವಾಗಿ ಇವರು ಮೋಸಮಾಡಿ ಓಟು
ಗಳಿಸುವುದು ಆಗಿದೆ. ಇದಕ್ಕೆ ಬುದ್ಧಿಪೂರ್ವಕವಾಗಿ ನನ್ನ ಒಪ್ಪಿಗೆ ಇಲ್ಲ. ಇದು 'ಆನೆಸ್ಟ್
ಡಿಮ್ಯಾಂಡ್' ಅಲ್ಲ. ಇನ್ನೊಂದು ಮುಖ್ಯವಾದ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.
ಇದರಲ್ಲಿ 30ನೇ ಕ್ಲಾಜ್ ಮಾಡಿದ್ದಾರೆ. ಒಬ್ಬ ರೈತನಿಗೆ 100 ಎಕರೆ ಜಮೀನು ಇರುತ್ತದೆ. ಅವನು
27 ಎಕರೆಯನ್ನು ಸ್ವಂತ ಸಾಗುವಳಿಗೆ ಇಟ್ಟುಕೊಳ್ಳುತ್ತಾನೆ. ಅವನು ಈಗ ಏನು ಮಾಡಿರುತ್ತಾನೆ,
ಇದನ್ನು ಜಾರಿಗೆ ಕೊಡುವುದರೊಳಗೆ 100 ಎಕರೆಯಲ್ಲಿ 50 ಎಕರೆ ಜಮೀನನ್ನು ಮಾರಿರುತ್ತಾನೆ.
ಸುಮಾರು 15 ವರ್ಷಗಳ ಕಾಲ ಎಲ್ಲಾ ಕಾಲದಲ್ಲೂ ದುಡಿದಿರುತ್ತಾನೆ. ಅಂತಹವನನ್ನು
ಒಕ್ಕಲೆಬ್ಬಿಸಬೇಕೆಂದು ಭೂಸುಧಾರಣೆಯನ್ನು ತಂದರೇನು ಪ್ರಯೋಜನ? ಹಿಂದೆ ಇವರು
ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡುವಾಗ ನವಂಬರ್‌ನಿಂದ ಈಚೆಗೆ ಇಂತಹ ಕೇಸು
ಗಳನ್ನು ಸೀಲಿಂಗ್ ಲಿಮಿಟ್ಟಿನೊಳಗೆ ಸೇರಿಸುತ್ತೇವೆಂದು ಹೇಳಿದ್ದರೂ ಆ ರೀತಿ ಮಾಡಲಿಲ್ಲ.
ಆದ್ದರಿಂದ ಇದನ್ನು ಇಲ್ಲಿ ಏಕೆ ತಂದಿರಿ, ಒಕ್ಕಲೆಬ್ಬಿಸಲಿಕ್ಕೆ ತಂದಿದ್ದೀರೋ ಎಂದು ನಾನು
ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಒಬ್ಬೊಬ್ಬ ಮನುಷ್ಯ ಒಂದೊಂದು ರೀತಿಯಲ್ಲಿ ಜೀವನ
ಮಾಡುತ್ತಾನೆ. 4 ಮನೆಗಳು ಇರುತ್ತವೆ, ಆ 4 ಮನೆಯೊಳಗೆ 2 ಮನೆಗಳನ್ನು ಮಾರಿರುತ್ತಾನೆ.

5-30 P.M.

ಆಗ ಅವನು ವ್ಯಾಪಾರವನ್ನು ಮಾಡುವುದಕ್ಕೆ ಹೋಗುತ್ತಾನೆ. ಆಮೇಲೆ ಅವನು ಅದರಲ್ಲಿ
ನಷ್ಟ ಆಗಿ ಕುಳಿತುಕೊಳ್ಳುತ್ತಾನೆ. ಅಂಥಾ ಸಂದರ್ಭದಲ್ಲಿ ನೀವು ಒಂದು ಲಾ ತೆಗೆದುಕೊಂಡು
ಬರುತ್ತೀರಿ, ಯಾರಿಗೂ ಎರಡು ಮನೆಗಳ ಮೇಲೆ ಇರಕೂಡದು ಎಂದು ಮಾಡುತ್ತೀರಿ. ಅದರಲ್ಲಿಯೂ
ಎರಡು ಮನೆಗಳನ್ನು ಮಾರಿದರೂ ಕೂಡ ಸೀಲಿಂಗ್ ಲಿಮಿಟ್ಟಿಗೆ ತೆಗೆದುಕೊಳ್ಳುತ್ತೇವೆ ಎಂದರೆ
ಏನಾಗುತ್ತದೆ ಎಂದರೆ, ನೀವು ಎರಡು ಮನೆಗಳ ಸೀಲಿಂಗನ್ನು ಈಚೆಗೆ ಹಾಕಿದ್ದು ಎಂದು
ಹೇಳುತ್ತಾನೆ. ಒಟ್ಟಿನಲ್ಲಿ ಏನಾಯಿತು? ಅವನು ತನ್ನಲ್ಲಿ ಇದ್ದದ್ದನ್ನು ಎರಡು ಭಾಗಮಾಡಿ
ಆ ಕಾನೂನಿನಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾನೆ. ಆಗ ಅದು will it not
be bad in law? ಈಗ 17th amendment to Constitution ಪ್ರಕಾರ ಒಬ್ಬನ ಆಸ್ತಿ
ಯನ್ನು ಇನ್ನೊಬ್ಬನಿಗೆ ಕೊಡಬೇಕು ಎಂದು ಅವನಲ್ಲಿರತಕ್ಕ ಪೂರ್ತಿ ಆಸ್ತಿಯನ್ನು ಕಿತ್ತುಕೊಳ್ಳು
ವುದಕ್ಕಾಗುವುದಿಲ್ಲ. ಒಬ್ಬ ಮನುಷ್ಯನ ಒಕ್ಕಲೆಬ್ಬಿಸಬೇಕು ಎನ್ನುವುದಕ್ಕೆ ನಿಮ್ಮ ಪಾರ್ಟಿಯಲ್ಲೇ
ನಿಮಗೆ ಬೆಂಬಲ ಸಿಕ್ಕಿಲ್ಲ. ಈಗ ಆ ವಿಷಯವನ್ನು ಇಲ್ಲಿ ಆಲೋಚನೆ ಮಾಡೋಣ ಎಂದು ಮಾಡು
ತ್ತಿದ್ದೀರಿ. ಈಗ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಅದೇನೆಂದರೆ, ಈಗ್ಗೆ
ಕೆಲವು ತಿಂಗಳ ಹಿಂದೆ ನಮ್ಮ ವಿರೋಧ ಪಕ್ಷದಲ್ಲಿ ಇದ್ದ ಕೆಲವು ಸದಸ್ಯರು ಕೋ-ಆಪರೇಟೀವ್
ಸೊಸೈಟಿಗಳಲ್ಲಿ ಹಣವನ್ನು ತಿಂದು ವಿರೋಧ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ.
ಇವರ ವಿಷಯದಲ್ಲಿ ಜನಗಳು ಏನು ಅಭಿಪ್ರಾಯವನ್ನು ಹೊಂದಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ.
ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ಏನಾದರೂ ಮಾಡಬೇಕಾಗಿದ್ದರೆ,
ರೈತನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಮಾಡಬೇಕು. ಸರ್ಕಾರದವರು ಮಾಡತಕ್ಕ ಕಾರ್ಯ
ದಲ್ಲಿ ಒಂದು ನ್ಯಾಯ ನೀತಿಯನ್ನು ಇಟ್ಟುಕೊಂಡು ಅದನ್ನು ಮಾಡಿದ್ದರೆ ಈ ರೀತಿ ಜನಗಳು
ಹಲವಾರು ತರಹ ಮಾತನಾಡುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈ ಭೂಸುಧಾರಣಾ
ಕಾನೂನನ್ನು ಈ ರೀತಿ ಸರ್ಕಾರದವರು ಮಾಡುತ್ತಾರೆಂದು ನಮಗೆ ಗೊತ್ತಿರಲಿಲ್ಲ ಎಂದು ಅನೇಕ
ಜನಗಳು ಹೇಳುತ್ತಾರೆ. ಒಂದು ಒಕ್ಕಲೆಬ್ಬಿಸಿದ ಮೇಲೆ, ಒಬ್ಬ ಮನುಷ್ಯ ನಿರುದ್ಯೋಗಿ ಆದರೆ
ಅವನಿಗೆ ಜೀವನ ಮಾಡಲು ಸರ್ಕಾರದವರು ಕೆಲಸವನ್ನು ಕೊಡುತ್ತಾರೆಯೇ? ಆ ಒಂದು
ಪಾಯಿಂಟನ್ನು ಸರ್ಕಾರದವರು ಇದರಲ್ಲಿ ನಮೂದು ಮಾಡಿಲ್ಲ. ಕಾನ್‌ಸ್ಟಿಟ್ಯೂಷನ್ನಿಗೆ ತಂದಿರತಕ್ಕ

(ಶ್ರೀ ಪಿ. ಎಂ. ದೇವ್)

17ನೇ ಅಮೆಂಡ್‌ಮೆಂಟ್ ಪ್ರಕಾರ ಒಬ್ಬ ಮನುಷ್ಯನಿಗೆ ಜೀವನಾಧಾರವಾಗಿರುವುದನ್ನು ಪೂರ್ತಿಯಾಗಿ ತೆಗೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದೂ ಒಂದು ಅಂಶ ಇದರಲ್ಲಿ ಬರುತ್ತದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈ ಭೂಸುಧಾರಣೆಯ ಕಾನೂನನ್ನು ಮಾಡುವಾಗ ಯಾವುದಾದರೂ ಒಂದು ಮೂಲತತ್ವವನ್ನು ಇಟ್ಟುಕೊಂಡು ಅದನ್ನು ಮಾಡಬೇಕಾಗಿತ್ತು.

ಇನ್ನೊಂದು ವಿಚಾರ ಏನೆಂದರೆ, ಲಿಫ್ಟ್ ಇರಿಗೇಷನ್ ಪಂಪುಗಳನ್ನು ಮ್ಯಾನುಫ್ಯಾಕ್ಚರ್ ಮಾಡತಕ್ಕ ಕಂಪೆನಿಗಳನ್ನು ಬೆಂಗಳೂರಿನಲ್ಲಿಯೇ ಅಥವಾ ಹೈದರಾಬಾದಿನಲ್ಲಿಯೇ ಸ್ಥಾಪನೆ ಮಾಡುತ್ತಾರೆ, technologically it is backward. ಆಗ ಏನಾಗುತ್ತದೆ ಎಂದರೆ, ಅದಕ್ಕೆ ಜಾಸ್ತಿ ಹಣವನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಅದನ್ನು ಲೇಟೆಸ್ಟ್ ಟೆಕ್ನಲಾಜಿಕಲ್ ಲೆವೆಲ್ಲಿಗೆ ತರಬೇಕಾಗುತ್ತದೆ. ಅದೇ ರೀತಿ ಜಮೀನಿಗೂ ಕೂಡ ರೈತ ಹಣವನ್ನು ಇನ್‌ವೆಸ್ಟ್ ಮಾಡಬೇಕು. ಬುದ್ಧಿಶಕ್ತಿಯನ್ನು ಇನ್‌ವೆಸ್ಟ್ ಮಾಡಬೇಕು. ರಟ್ಟೆಬಲವನ್ನು ಇನ್‌ವೆಸ್ಟ್ ಮಾಡಬೇಕು. ಅದರ ಜೊತೆಗೆ ಜಮೀನಿಗೆ ಬೇಕಾದ ಫರ್ಟಿಲೈಜರ್ ಹಾಕಬೇಕಾಗುತ್ತದೆ. ಮತ್ತು ರೈತ ಭೂಮಿಯನ್ನು ಆಳವಾಗಿ ಉಳಬೇಕಾದರೆ ಟ್ರಾಕ್ಟರ್ ಬೇರೆ ಬೇಕಾಗುತ್ತದೆ, ಅವನು ವ್ಯವಸಾಯವನ್ನು ಮಾಡಬೇಕಾದರೆ ಅನೇಕ ಉಪಕರಣಗಳೂ ಬೇಕಾಗುತ್ತದೆ. ಇದನ್ನೆಲ್ಲಾ ರೈತ ಒದಗಿಸಿಕೊಳ್ಳಬೇಕಾದರೆ ಎಷ್ಟು ಕಷ್ಟವಿದೆ ಎಂಬುದನ್ನು ಸಹ ಸರ್ಕಾರದವರು ಯೋಚನೆ ಮಾಡಬೇಕಾಗಿದೆ. I want to bring to your notice the process of peasant life which I have seen in villages. ಅದಕ್ಕೋಸ್ಕರ ನನಗೆ ಸ್ವಲ್ಪ ಹೆಚ್ಚು ಕಾಲಾವಕಾಶವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ, ಮತ್ತು ಕೈಗಾರಿಕೆಗಳ ಅಭಿವೃದ್ಧಿ ಅಷ್ಟು ಹೆಚ್ಚಿನಮಟ್ಟದಲ್ಲಿ ಆಗಿಲ್ಲ. ಹಾಗೆಯೇ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಯೂ ಸಹ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ. ಹಾಗೇನೇ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈಗ ಒಕ್ಕಲನ್ನು ಎಬ್ಬಿಸಬೇಕಾದರೆ immediate effect on industry ಮೇಲಕ್ಕೆ ಬರುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಮಾಡಬೇಕಾಗಿತ್ತು. ಮತ್ತು ಮೊದಲನೆಯದಾಗಿ ಕನ್ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ತಕ್ಷಣ ಮಾಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಶರಾವತಿ ಪ್ರಾಜೆಕ್ಟ್ ಪೂರ್ತಿ ಆದಮೇಲೆ ಈಗ ಎರಡು ಕೋಟಿ ಜನಗಳು ನಮ್ಮ ದೇಶದಲ್ಲಿ ಎಷ್ಟು ಕೆಲಸವನ್ನು ಮಾಡುತ್ತಿದ್ದಾರೆಯೋ ಅಷ್ಟು ಕೆಲಸವನ್ನು ಶರಾವತಿ ಪ್ರಾಜೆಕ್ಟಿನಲ್ಲಿ ಉತ್ಪಾದನೆಯಾಗತಕ್ಕಂಥ ವಿದ್ಯುಚ್ಛಕ್ತಿಯಿಂದ ಮಾಡಬಹುದು ಎಂದು ಎಕ್ಸ್‌ಪರ್ಟ್‌ಗಳು ಹೇಳುತ್ತಿದ್ದರು. ನನ್ನ ಹತ್ತಿರ ಒಂದು ಟ್ರಾಕ್ಟರು ಇತ್ತು. ಅದು 37 ಅಶ್ವಶಕ್ತಿ ಉಳ್ಳದ್ದು. ಅದು ನಾಲ್ಕು ಆಳುಗಳ ಕೆಲಸವನ್ನು ಮಾಡುತ್ತಿತ್ತು. ನಾನು ಈಗ ಅದನ್ನು ಮಾರಿಬಿಟ್ಟೆ. ಏತಕ್ಕೆಂದರೆ, ಮೊದಲು ನಾನು ನನ್ನ ಸ್ವಂತ ಜಮೀನನ್ನು 8-9 ಎಕರೆ ಸಾಗುಮಾಡಿ ನನ್ನ ಅಣ್ಣನ ಜಮೀನನ್ನು ಸುಮಾರು 10 ಎಕರೆ ಜಮೀನನ್ನು ಟೆನೆಂಟಾಗಿ ಸಾಗು ಮಾಡುತ್ತಿದ್ದೆ. ಈ ವರ್ಷ ನಮ್ಮ ಅಣ್ಣನ ಜಮೀನನ್ನು ಬಿಟ್ಟುಬಿಟ್ಟೆ. ಅದಕ್ಕೆ ಇನ್ನೊಂದು ಕಾರಣವೇನೆಂದರೆ, ನನಗೆ ವಯಸ್ಸಾಯಿತು, ಟ್ರಾಕ್ಟರಿನಲ್ಲಿ ಉಳಬೇಕಾದರೆ ಅದು ಶರೀರವನ್ನೇ ಅಲ್ಲಾಡಿಸುತ್ತದೆ. ನನಗೆ ರೊಮ್ಯಾಟಿಕ್ ಪೈನ್ ಬೇರೆ ಇದೆ. ಮೂಳೆಗಳೆಲ್ಲಾ ನೋಯುತ್ತಿವೆ. ಆದ್ದರಿಂದ ಈಗ ನನ್ನ ಕೈಯ್ಯಿನಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು ಟ್ರಾಕ್ಟರನ್ನು ಏತಕ್ಕೆ ಮಾರಿದಿರಿ ?

ಶ್ರೀ ಪಿ. ಎಂ. ದೇವ್.—ನಾನು ಆಗಲೇ ಹೇಳಿದೆ. ನನಗೆ ರೊಮ್ಯಾಟಿಕ್ ಪೈನ್ ಇದೆ. ನನ್ನ ಕೈಯ್ಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಒಂದು ದಿವಸ ಕೆಲಸ ಮಾಡಿದರೆ 15 ದಿವಸ ಸುಧಾರಿಸಿಕೊಳ್ಳಬೇಕು. ಅದಕ್ಕೋಸ್ಕರ ನಾನು ಟ್ರಾಕ್ಟರನ್ನು ಮಾರಿದೆನು, ಅಷ್ಟೆ. ಈಗ ನೀವು ಏನು ಈ ಕಾನೂನಿನಲ್ಲಿ ಮಾಡಿದ್ದೀರೋ ಅದರಲ್ಲಿ ಸಮತಾವಾದ ಸಮಾಜವನ್ನು ರಚನೆ ಮಾಡತಕ್ಕ ಅಂಶಗಳು ಖಂಡಿತ ಇಲ್ಲ. ಈಗ ನೀವು ಈ ಒಂದು ಕಾನೂನನ್ನು ಜಾರಿಗೆ ತರುವುದರಿಂದ ಸುಮಾರು 5 ಲಕ್ಷ ಜನಗಳು ನಿರುದ್ಯೋಗಿಗಳಾಗುತ್ತಾರೆ. ಈಗ ನಮ್ಮ ರಾಜ್ಯದಲ್ಲಿ ಪಬ್ಲಿಕ್ ಫಂಡಿನಿಂದ ನಡೆಯತಕ್ಕ ಕೈಗಾರಿಕೆಗಳು ಏನಿವೆ ಅವುಗಳೆಲ್ಲವೂ ಥೋಗಸ್ ಇಂಡಸ್ಟ್ರೀಸ್. ಈಗ ಸರ್ಕಾರದಲ್ಲಿ ಹಣವಿಲ್ಲ. ಆದರೂ ಸಹ ಸರ್ಕಾರದವರು ಆ ಕೈಗಾರಿಕೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈಗ ದೇಶದ ವ್ಯವಹಾರವನ್ನು ಮಾಡುವುದಕ್ಕೆ ದುಡ್ಡು ಇಲ್ಲ ಎಂದು ರೈತರಿಗೆ ಹೆಚ್ಚು ಕಂದಾಯವನ್ನು ವಿಧಿಸುತ್ತಿದ್ದಾರೆ. "The highest, the fastest, the immediately investiable capital formation takes place

in public sector industries only" ಸರ್ಕಾರದ ಕೈಗಾರಿಕೆಯಾಗಿದ್ದರೆ, ಸಾಮಾನ್ಯವಾಗಿ ಅದರಲ್ಲಿ ಲಾಭ ಬರುವುದಿಲ್ಲ. ಅದರಲ್ಲಿ ನಷ್ಟವಾಗುತ್ತದೆ. ಏತಕ್ಕೆಂದರೆ ಅದರಲ್ಲಿ ಜಾಸ್ತಿ ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳುತ್ತಾರೆ, ಸರಿಯಾದಂತಹ ಮ್ಯಾನೇಜ್‌ಮೆಂಟ್ ಇರುವುದಿಲ್ಲ. ಆದ್ದರಿಂದ ಅಲ್ಲಿ ನಾನಾ ರೀತಿಯಲ್ಲಿ ಮೋಸಗಳು ನಡೆಯುತ್ತವೆ. ಇದಕ್ಕೆ ಮುಖ್ಯವಾಗಿ ಇನ್ನೊಂದು ಕಾರಣವೇನೆಂದರೆ, ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕ ಮಂತ್ರಿಗಳೂ ಸಹ ಒಳ್ಳೆಯ ಬುದ್ಧಿವಂತರು ಮತ್ತು ದಕ್ಷರು ಆಗಿರಬೇಕು. ಈಗ ನಮ್ಮ ರಾಜ್ಯದಲ್ಲಿರತಕ್ಕ ಮಂತ್ರಿಮಂಡಲದವರಿಗೆ ಈ ಲೆಜಿಸ್ಲೇಟೀವ್ ಅಸೆಂಬ್ಲಿಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಹಾಗೆ ಒಂದು ಸರಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಇವರಿಗೆ ಗೊತ್ತಿಲ್ಲ. It is an orderless thing. For this, we have got unfortunately for our State an irrelevent Ministry which we will have to bear for the next two years. ಮುಖ್ಯವಾಗಿ ಇದು ಒಂದು ಅಸಮರ್ಪಕವಾದ ಸರ್ಕಾರ ಎಂದು ಹೇಳಬಹುದು. ಆಹಾರ ಅಭಾವಕ್ಕೆ ಇದು ಮುಖ್ಯವಾಗಿ ನಾಂದಿಯಾಗುತ್ತದೆ. ಪೇಜ್ 13ರಲ್ಲಿ ಒಂದು ಕಡೆ ಹೇಳುತ್ತಾರೆ: ಮಾರಮುಟ್ಟು, ಮೆಶಿನರಿ ಪ್ಲಾಂಟ್ಸು ಏನಾದರೂ ಇದ್ದರೆ, ಅವನ್ನು ತೆಗೆಯಕೂಡದು ಎಂದು ಹೇಳಿದ್ದಾರೆ. ನಾನು ಕೇಳುವುದು ಇಷ್ಟು : ಈಗ ನಾನು ಒಂದು ಸರ್ವೆ ತೋಪು ಬೆಳೆಸಿದರೆ ಏಕೆ ಬೆಳೆಸುತ್ತೇನೆ? ಸಾಮಾನ್ಯವಾಗಿ ಲಾಭ ಪಡೆಯುವುದಕ್ಕೆ. ಅದನ್ನು ಕಟ್ ಮಾಡಬಾರದು ಎಂದರೆ ಹೇಗೆ? ಅಲ್ಲಿ ಲಿಫ್ಟ್ ಇರ್ರಿಗೇಶನ್ನಿನಿಂದ ಸಾಗುವಳಿಯಾಗುವ ಭೂಮಿ ಇರುತ್ತದೆ. ಅದಕ್ಕೆ 5 ಎಚ್. ಪಿ. ಎಲೆಕ್ಟ್ರಿಕ್ ಮೋಟಾರ್ ಇರುತ್ತದೆ. ಹಾರಿಸಾಂಟಲ್ ಇಂಜಿನ್ ಇರುತ್ತದೆ. 5 ಎಚ್. ಪಿ. ಇದ್ದರೆ ಜಾಸ್ತಿ ಕೆಲಸ ಮಾಡುತ್ತವೆ. ಅಂಥದ್ದನ್ನು ಬಿಟ್ಟು ಹೋಗಿ, ತೆಗೆದುಕೊಂಡು ಹೋಗುವುದು ಬೇಡ ಅಂದರೆ ಏನು ಮಾಡುವುದು ! ಅದನ್ನು ಇಂಡಸ್ಟ್ರಿಯಲ್ ಉಪಯೋಗಕ್ಕೂ ಇಟ್ಟುಕೊಳ್ಳಬಹುದು. ಅದನ್ನು ತೆಗೆದುಕೊಂಡು ಹೋಗಿ ಬೇರೆ ಫ್ಯಾಕ್ಟರಿಗಳಿಗೆ ಉಪಯೋಗಿಸಬಹುದು ಈ ಕಾನೂನಿನಲ್ಲಿರುವ ಪ್ರಾವಿಶನ್ನುಗಳನ್ನು ಕಾಂಟ್ರವೀನ್ ಮಾಡಿದರೆ, ಅದಕ್ಕೆ ಪನಿಶ್‌ಮೆಂಟುಗಳನ್ನು ಹೇಳುತ್ತೀರಿ. ಒಬ್ಬ ಮನುಷ್ಯನನ್ನು ಒಕ್ಕಲೆಬ್ಬಿಸುವಾಗ, ಅವನ ಜೀವನಾಧಾರವನ್ನು ಬೇರೆಯವರು ಕಿತ್ತುಕೊಳ್ಳುವಾಗ, ಶೂಟ್ ಮಾಡುತ್ತೇವೆ, ಸಾವಿರಾರು ರೂಪಾಯಿ ದಂಡ ಹಾಕುತ್ತೇವೆಂದು ಹೇಳುವುದು ಸರಿಯಲ್ಲ, ಇಂಥ ಲಾ ಕೊಟ್ಟವರು ಸರಿಯಾದ ಮನಿಷ್ಯರಲ್ಲ. ಈ ಮಾತು ನಾನು ಹೇಳುವುದಲ್ಲ, ಇದು ಜನಜೀವನದಲ್ಲಿ ಬಂದಿದೆ. ನೀವು ಹೀಗೆಯೇ ಮಾಡುತ್ತಿದ್ದರೆ, ನಾವು ನಮ್ಮ ಕರ್ತವ್ಯ ಮಾಡುತ್ತೇವೆ. ಜನಗಳಿಗೆ ಹೇಳುತ್ತೇವೆ : ನಮಗೆ ಪೂರ್ಣ ಸ್ವಾತಂತ್ರ್ಯ ಇನ್ನೂ ಬರಲಿಲ್ಲವೆಂದು. ಇನ್ನುಮೇಲೆ ಜನವರಿ 26 ನೇ ತಾರೀಖಿನಿಂದ ಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಡೋಣ, ಪೂರ್ಣ ಸ್ವಾತಂತ್ರ್ಯವಿದ್ದರೆ ಎಲ್ಲರಿಗೂ ಕೆಲಸ ಸಿಗುತ್ತದೆ, ವ್ಯವಹಾರ ಚೆನ್ನಾಗಿ ನಡೆಯುತ್ತದೆ, ಹೆಚ್ಚು ಭೂಮಿ ಉಳುವವಗೆ ಇರುತ್ತದೆ ಎಂದು ಹೇಳುತ್ತೇವೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಮೈಸೂರು ಲ್ಯಾಂಡ್ ರಿಫಾರಮ್ಸ್ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತೇನೆ. ಲ್ಯಾಂಡ್ ರಿಫಾರಂ ಕೆಲಸ ಯಾವಾಗಲೋ ಆಗಬೇಕಾಗಿತ್ತು. ಏಕೆಂದರೆ ನಮ್ಮ ದೇಶದಲ್ಲಿ 1930ನೇ ಇಸವಿಯಲ್ಲಿ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಭೂಸುಧಾರಣೆ ಘೋಷಣೆ ಮಾಡಲಾಗಿತ್ತು. ಆವಾಗ್ಗೆ ಇಷ್ಟು ಪಕ್ಷಪಂಗಡಗಳು ಇರಲಿಲ್ಲ. ಇದನ್ನು ಸರ್ವಸಾಧಾರಣವಾಗಿ ಎಲ್ಲರೂ ಒಪ್ಪಿಕೊಂಡಹಾಗಿತ್ತು. ಸ್ವಾತಂತ್ರ್ಯ ಬಂದಿರಲಿಲ್ಲದಿದ್ದರೂ ಕಾಂಗ್ರೆಸ್ ಅಧಿವೇಶನದಲ್ಲಿ ಇದನ್ನು ಘೋಷಣೆ ಮಾಡಿದ್ದರು. ಆವಾಗ ಸರ್ವಸಾಧಾರಣವಾಗಿ ಪ್ರಜೆಗಳೆಲ್ಲರೂ ಇದನ್ನು ಒಪ್ಪಿಕೊಂಡಿದ್ದರು. ಆದರೆ ಇದರ ರೂಪರೇಖೆ ಇತ್ತೀಚೆಗೆ ಬಂದಿರಬಹುದು. ಅನಂತರ ಇದಕ್ಕೆ ನಾಂದಿಯಾಗಿ 1947ನೇ ಇಸವಿ ಪರಿಣಮಿಸಿತು. ಅನಂತರವಾದರೂ ಇದು ಕೂಡಲೆ ಬರಬೇಕಾಗಿತ್ತು. ಏನೋ ಎಡರುತೊಡರುಗಳಿಂದ ಅಥವ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಇದು ವಿಳಂಬವಾಗುತ್ತಾ ಬಂದಿತು. ಈಗ ಇದು ಕಾರ್ಯಗತವಾಗುವಂಥ ಸುಮುಹೂರ್ತ ಬಂದಿದೆ. ಇದು ನಿಜವಾಗಿ ಸ್ವಾಗತಾರ್ಹವಾದುದು. ದಿನದಿನಕ್ಕೂ ನಮ್ಮ ಎಡರುತೊಡರುಗಳು, ತೊಂದರೆಗಳು, ಭೂಮಿ ಸಂಬಂಧವಾದ ಸಮಸ್ಯೆಗಳು ಹೆಚ್ಚುತ್ತಾ ಇವೆಯೆ ಹೊರತು, ಏನಾದರೂ ಕಡಿಮೆಯಾಗುತ್ತಾ ಬರಲಿಲ್ಲ. ಇನ್ನೂ ಹೆಚ್ಚಿಗೆ ಹೇಳುವುದಾದರೆ, ಆಹಾರ ಸಮಸ್ಯೆ ಯಾವಾಗಿನಿಂದ ಆಯಿತು ಎಂದು ಹೇಳಿದರೆ, ನಿಜವಾಗಿ ಕೃಷಿಮಾಡುವ ರೈತನಿಗೆ ಅದರಲ್ಲಿ ಆಸಕ್ತಿ ಇಲ್ಲ, ಅದೇ ಆಹಾರ ಸಮಸ್ಯೆಗೆ ಕಾರಣ. ತಾನು ಕಷ್ಟಪಟ್ಟು ಸಾಗುವಳಿ ಮಾಡಿದರೂ ಅದಕ್ಕೆ ಸರಿಯಾದ ಪ್ರತಿಫಲ ಉಳುವವನಿಗೆ ಇಲ್ಲ ; ಆದ್ದರಿಂದ ಸಾಗುವಳಿಯನ್ನು ಯಾರಿಗಾಗಿ ಏಕೆ ಮಾಡ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬೇಕು ಎಂದು ರೈತನ ಮನಸ್ಸಿನಲ್ಲಿದೆ. ಆದರೆ ಭೂಸುಧಾರಣೆಯು ನಿಜವಾಗಿ, ಒಳ್ಳೆಯ ರೀತಿಯಲ್ಲಿ ಕಾರ್ಯಗತವಾದರೆ, ಆಹಾರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವುಂಟು ಎಂದು ನಾನು ತಿಳಿಯುತ್ತೇನೆ.

ದರಖಾಸ್ತು ಮೂಲಕ ಜಮೀನು ಪಡೆಯಲಿಕ್ಕೆ ಕಷ್ಟ ಇದೆ. ಪಡೆದುದನ್ನು ಅಪಹರಿಸಲು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತಾರೆ ಅಂತ ಮೊನ್ನೆಮೊನ್ನೆ ನನ್ನ ಕ್ಷೇತ್ರದಲ್ಲಿ ನಡೆದ ಸಂಗತಿ ಏನೆಂದರೆ, ಒಬ್ಬ ಗಿರಿಜನ ವ್ಯಕ್ತಿಗೆ ಒಂದು ಎಕರೆ ಜಾಗವಿತ್ತು. ಅದರಲ್ಲಿ 400 ಅಡಿಕೆ ಮರಗಳನ್ನು ಬೆಳೆಸಿ, 8 ವರ್ಷ ಕಷ್ಟ ಪಟ್ಟಮೇಲೆ, ಅದು ಫಲ ಕೊಡುವ ಸ್ಥಿತಿಗೆ ಬಂದಿತ್ತು. ಆದಕ್ಕೆ ಒಡನೆ ಒಂದು ಕುಂಟು ನೆಪಮಾಡಿ ರೈತನಿಂದ ಒಂದು ಅಗ್ರಿಮೆಂಟ್ ಬರೆಸಿಕೊಂಡರು ನಾನು ವೃದ್ಧನಾದುದರಿಂದ ನನಗೆ ಗೈಯಲು ಆಗುವುದಿಲ್ಲ. ನನ್ನ ದರಕಾಸ್ತು ನೀವು ತೆಗೆದುಕೊಳ್ಳುವುದಕ್ಕೆ ನನ್ನ ಅಡ್ಡಿ ಇಲ್ಲ ಎಂದು ಹೇಳಿಸಿದರು. ಆದರೆ ಆ ಗಿರಿಜನ ವ್ಯಕ್ತಿಗೆ 3 ಮಕ್ಕಳು ; ಅವನ ಮನೆಯಲ್ಲಿ 10 ಜನರಿದ್ದಾರೆ. ಅವನು ಆ ಅಡಿಕೆ ತೋಟವನ್ನು ಬಿಟ್ಟು; 5—6 ಮೈಲಿ ದೂರ ಹೋಗಿದ್ದಾನೆ. ಅವನ ಮೇಲೆ ನೀರಿನ ವ್ಯಾಜ್ಯಮಾಡಿ, ತೊಂದರೆ ಮಾಡುತ್ತೇವೆಂದು ಬೆದರಿಕೆ ಹಾಕಿದರು ; ಆದ್ದರಿಂದ ಅವನು ಒತ್ತಾಯಪೂರ್ವಕವಾಗಿ ಅಗ್ರಿಮೆಂಟ್ ಬರೆಯಬೇಕಾಯಿತು. ಈ ಸಂದರ್ಭದಲ್ಲಿ ಮಾಡಿರುವ ಅನ್ಯಾಯವನ್ನು ಹೇಳಲಿಕ್ಕೂ ಕೇಳಲಿಕ್ಕೂ ನಾಚಿಕೆಯಾದ ಸಂಗತಿ. ಅದರಲ್ಲಿ ಕೇವಲ ಹೊಣೆ ಸರಕಾರದ್ದು ಅಲ್ಲ, ಪ್ರತಿ ಪಕ್ಷದಲ್ಲಿರುವ ಪ್ರಭಾವಶಾಲಿಗಳೂ ಹೊಣೆಯಾಗಿದ್ದಾರೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಈಗ ನಮ್ಮ ಮುಂದೆ ತಂದಿರುವ ಅಮೆಂಡ್‌ಮೆಂಟನ್ನು ಬಹಳ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ತಂದಿದ್ದಾರೆ. ಆದರೆ ಭೂಮಿ ಇಲ್ಲದವರಿಗೆ, ಭೂಮಿಯಲ್ಲಿ ದುಡಿಯುವವರಿಗೆ ಭೂಮಿ ಸಿಗುತ್ತದೆಯೆ ಅನ್ನುವುದು ಸಮಸ್ಯೆಯಾಗಿದೆ. ಇಲ್ಲಿರುವ ಪಟ್ಟಿ ಪ್ರಕಾರ, ಪ್ಲಾಂಟೇಶನ್ನಿಗೆ ಲಿಮಿಟೇಶನ್ ಇಲ್ಲ, ಅಂದರೆ ಸೀಲಿಂಗ್ ಇಲ್ಲ. ಅದನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಅದರ ವಿಮರ್ಶೆಯನ್ನು ಇತರ ಸದಸ್ಯರು ಮಾಡಿದ್ದಾರೆ. ಮೂಲ ತತ್ತ್ವಗಳನ್ನು ನಾನು ಒಪ್ಪಿರುತ್ತೇನೆ. ಅದೇ ರೀತಿಯಾಗಿ ಗೇರುಬೀಜಕ್ಕೂ ಸೀಲಿಂಗ್ ಲಿಮಿಟೇಶನ್ ಇಲ್ಲದಹಾಗೆ ಮಾಡ ಬಹುದಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ಗೇರುಬೀಜ ಹಣ್ಣೋ, ಬೀಜವೋ ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅದು ಏನೇ ಇದ್ದರೂ, ಅದರ ವಿಂಗಡಣೆಗೆ ಏನೂ ತೊಂದರೆಯಾಗವುದಿಲ್ಲ. ಇದೂ, ಕಾಫಿ, ರಬ್ಬರ್, ಏಲಕ್ಕಿ ಮತ್ತು ಸಾಂಬಾರ ದಿನಸಿ ವಸ್ತುವಿನ ವಿಂಗಡಣೆಯಲ್ಲಿ ಸೇರುತ್ತದೆ. ಅದು ಏನೇ ಇರಲಿ, ಈಗ ಮಾಡಿರುವುದು ತತ್ತ್ವಶಃ ಸ್ವಾಗತಾರ್ಹವಾದುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡಿಕೆ ತೋಟಕ್ಕೆ ಮತ್ತು ತೆಂಗಿನ ತೋಟಕ್ಕೆ ಸೀಲಿಂಗ್ ಲಿಮಿಟ್ ಇರಬೇಕೆ ಅಥವಾ ಅದು ಅನ್‌ಲಿಮಿಟೆಡ್ ಆಗಿ ಇರಬೇಕೆ ಅನ್ನುವುದನ್ನು ಖಚಿತವಾಗಿ ಹೇಳಿ. ಬೇಲಿ ಮೇಲೆ ಕೂತುಕೊಂಡು ಹೇಳಬೇಡಿ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸತ್ಯವಾಗಿ ಹೇಳುತ್ತೇನೆ. ಪ್ಲಾಂಟೇಶನ್ನಿಗೆ ಇತರ ಬೆಳೆಗಳಿಂದ ಮಾಡಿದ ನ್ಯಾಯದೃಷ್ಟಿಯಿಂದ ಬೇಡವೆಂದು ಹೇಳಿದೆ. ತತ್ತ್ವಶಃ ಬೇಕು. ಇಲ್ಲಿ ಕೊಟ್ಟಿರುವ ಪಟ್ಟಿ ಪ್ರಕಾರ plantation land used for specialised farms set apart for live-stock breeding... and such allied operations—sugarcane farms operated by sugar factories—land utilised by an efficiently managed farm .. .. on which heavy investment or permanent structural improvements have been made—orchard land, Government land, Co-operation land ಇವುಗಳಿಗೆಲ್ಲಾ ಸೀಲಿಂಗ್ ಲಿಮಿಟೇಶನ್ ಇಲ್ಲ. ತತ್ತ್ವಶಃ ಹೀಗೆಲ್ಲಾ ನೆಪಮಾಡಿ ವಿನಾಯಿತಿ ಕೊಡುವುದು ಸರಿಯಲ್ಲ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡಕೆ ಹಾಗೂ ತೆಂಗಿಗೆ ನಿಮ್ಮ ಅಭಿಪ್ರಾಯದಲ್ಲಿ ಎಕ್ಸೆಂಪ್‌ಷನ್ನು ಕೊಡಬೇಕೇ ಬೇಡವೇ ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅದಕ್ಕೆ ಸೀಲಿಂಗು ಲಿಮಿಟ್ಟು ಹಾಕುವುದು ಸರಿ ಎಂದು ತತ್ತ್ವಶ: ಹೇಳುತ್ತೇನೆ. 27 ಸ್ಟಾಂಡರ್ಡು ಎಕರೆ ಎಂದು ಹೇಳಿರುವಂತೆ ಡ್ರೈ ಲ್ಯಾಂಡು 216 ಎಕರೆಯವರೆಗೆ ಬರುತ್ತದೆ, ಇದು ಒಂದು ಕುಟುಂಬದಲ್ಲಿ ಐದು ಜನರಿರುವವರಿಗೆ ಸಿಗುತ್ತದೆ. ಆದರೆ ಕುಟುಂಬದಲ್ಲಿ ಆರು ಜನರಿದ್ದ ಅವರಿಗಾಗಿ ಮತ್ತು 6 ಸ್ಟಾಂಡರ್ಡು ಎಕರೆ ಹೆಚ್ಚಾಗುತ್ತದೆ,

ಸುಮಾರು 300 ರಿಂದ 400 ಎಕರೆಗಳಷ್ಟು 6-7 ಜನ ಇರುವ ಕುಟುಂಬವೊಂದಕ್ಕೆ ಭೂಮಿ ಇಟ್ಟು ಕೊಳ್ಳಬಹುದು ಇದೇ ಬಹಳ ಮಾಹತ್ವವಾಯಿತು. ಇನ್ನೂ ಭೂಮಿ ಸಿಗಲಿಕ್ಕಿಲ್ಲ ಎಂದು ಹೇಳು ವಂತಿಲ್ಲ. ಅವರಿಗೆ ಬೇಕಾದರೆ ಎಕ್ಸೆಸ್ ಆಗಿರುವ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಇದರಲ್ಲಿ ಅವಕಾಶಗಳಿವೆ. ಇದರಿಂದ ಯಾರ ಮೇಲೆಯೂ ಆರೋಪಣೆಗಳನ್ನು ಮಾಡುವುದು ಅಷ್ಟು ಸರಿಯಿಲ್ಲ ಎಂದು ನನಗೆ ಕಾಣುತ್ತದೆ.

"Failure to cultivate personally" ಎಂದು ಇದರಲ್ಲಿ ಕೃಷಿ ಮಾಡುವಾಗ ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆ ಎನ್ನುವುದು ಸರಿಯಾಗಿಲ್ಲ. ಇದರ ಉದ್ದೇಶಗಳು ಸರಿಯಾಗಿ ತಿಳಿಯು ವಂತೆ ನಿರ್ದೇಶನ ಕೊಡುವುದು ಒಳ್ಳೆಯದು. ಅನುಕೂಲಸ್ಥರಾದವರು ಹೇಗಾದರೂ ಕೃಷಿ ಮಾಡ ಬಲ್ಲರು. ಆದರೆ ಸಣ್ಣ ಸಣ್ಣ ಹಿಡುವಳಿದಾರರ ಮೇಲೆ ವ್ಯಾಜ್ಯ ಮಾಡಿ ಅವರನ್ನು ಹೆದರಿಸಿ ಕೃಷಿ ಮಾಡಲಿಲ್ಲ ಎಂದು ಅವರಿಂದ ಭೂಮಿಯನ್ನು ಬಿಡಿಸಿ ಅದರಲ್ಲಿ ಏನೂ ಬೆಳೆಮಾಡದೆ ಬಂಜರು ಬೀಳು ವಂತಹ ಸ್ಥಿತಿ ಇರುತ್ತದೆ. ಅಂತಹವನಿಂದ ಭೂಮಿಯನ್ನು ಬಿಡಿಸುವಂತಹ ಪರಿಸ್ಥಿತಿ ಬರಲಾರದು ಎಂದು ಕೆಲವರು ಇಲ್ಲಿ ಹೇಳಿದರು. ದೊಡ್ಡ ದೊಡ್ಡ ಪ್ರಾಜೆಕ್ಟುಗಳಿರುವ ಕಡೆಗಳಲ್ಲಿ ಭೂಹೀನರು ಹೋಗಿ ನೆಲಸಬಹುದು ಎನ್ನುವುದು ಅವಾಸ್ತವ ಮಾತು. ಬರೀ ಅವನ ಹೆಂಡಿರು ಮಕ್ಕಳು ಮತ್ತು ಅವನ ಬಂದಿಷ್ಟು ಸಾಮಾನಿನ ಗಂಟು ಮೂಟೆ ಮಾತ್ರ ಇರುವುದು. ಅಂತಹವರುಗಳು ಬೇರೆ ಪ್ರಾಜೆಕ್ಟು ಗಳಲ್ಲಿ ಕೆಲಸಕ್ಕೆ ಹೋಗಿ ಸೇರಿ ಕೆಲಸ ಮಾಡಬಹುದು. ಆದರೂ ಅವರುಗಳು ಬರೀ ಕೈಯಲ್ಲಿ ಅಲ್ಲಿಗೆ ಹೋಗಿ ಜೀವನ ಮಾಡುವುದು ಕಷ್ಟ. ಅವರ ಆರ್ಥಿಕ ಸ್ಥಿತಿ ಸರಿಯಾಗಿ ಇಲ್ಲ. ಸರಕಾರದವರು ಅವರಿಗೆ ಆರ್ಥಿಕವಾಗಿ ಸಹಾಯ ಮಾಡಿ ಅವರು ಹೊರಕ್ಕೆ ಹೋಗಿ ನೆಲಸುವಂತೆ ಮಾಡಿಕೊಟ್ಟರೆ ಅವರುಗಳು ಅಲ್ಲಿಗೆ ಹೋಗಿ ನೆಲಸಲು ಸಾಧ್ಯವಾಗಬಹುದು. ಇಲ್ಲದಿದ್ದರೆ ಇಲ್ಲ. ಇದರೊಳಗೆ ಇನ್ನೊಂದು ತಿದ್ದುಪಡಿ ತಂದಿದ್ದಾರೆ. ಅದು ಟ್ರಿಬ್ಯುನಲ್ಲಿನವರೆ ಮುಂದೆ ಪಟ್ಟಿಯನ್ನು ಮಾಡಿಕೊಳ್ಳ ಬೇಕು ಎಂದು. ಅವನಿಗೆ ಸರ್ವೆ ನಂಬರು ಯಾವುದು ಎನ್ನುವುದೇ ಗೊತ್ತಿರುವುದಿಲ್ಲ. ಅಥವಾ ಅದಕ್ಕಾಗಿ ಯಾರ ಹತ್ತಿರ ಹೋಗಿ ಅರ್ಜಿ ಕೊಡಬೇಕು ಎನ್ನುವುದೂ ಗೊತ್ತಿಲ್ಲ. ಅಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಅವನಿಗೆದುರುಬೀಳುತ್ತಾರೆ. ಆಗ ಅವನು ಪಟ್ಟಿ ಮಾಡಿಸಿಕೊಳ್ಳಲು ಹೋಗುವುದು ಕಷ್ಟ. ಈಗ ರೈತರು ಸ್ವಲ್ಪಮಟ್ಟಿಗೆ ವಿಚಾರ ತಿಳಿದಿರುವರಾದರೂ ಇಂತಹ ಕಷ್ಟಗಳು ತಪ್ಪಿದ್ದಲ್ಲ ಎಂದು ನಾನು ತಿಳಿಯುತ್ತೇನೆ.

ಈ ಲ್ಯಾಂಡು ರಿಫಾರಂಸ್ ಕಾನೂನಿನಿಂದ ನಮ್ಮ ಜಿಲ್ಲೆಗೆ ಹೆಚ್ಚು ಹಾನಿಯೂ ಹಾಗೂ ಹೆಚ್ಚು ಒಳ್ಳೆಯದೂ ಬರಲಿಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಯಲ್ಲಿ ಶೇಕಡಾ 10·3 ರಷ್ಟು ಸ್ವಂತ ಸಾಗುವಳಿ ದಾರರೂ ಇದ್ದಾರೆ. ಬಾಕಿ ಎಲ್ಲ ಕೃಷಿ ಕೂಲಿಗಾರರು ಇಲ್ಲವೇ ಒಕ್ಕಲು ಮಾಡುವವರು ಹಾಗೂ ಬೇರೆ ರೈತರು ಇದ್ದಾರೆ. ನಿಜವಾಗಿ ಸ್ವಂತವಾಗಿ ಪ್ರತ್ಯಕ್ಷವಾಗಿ ಕೃಷಿ ಮಾಡುವವನಿಗೆ ರೆಕಾರ್ಡು ಮೂಲಕ ಲ್ಯಾಂಡು ಕೊಡಬೇಕು ಸರಕಾರದವರೂ ಸಹಾನುಭೂತಿಯಿಂದ ಸ್ವಂತ ಬೇಸಾಯ ಮಾಡು ವವನ ಕಡೆಗೆ ಗಮನ ಕೊಡಬೇಕು. ಅವನಿಗೆ ಉಪಕಾರವಾಗುತ್ತದೆ. ಅಧಿಕಾರಿಗಳು ಸರಿಯಾಗಿ ಮನಸ್ಸು ಮಾಡದಿದ್ದರೆ ಅದರಿಂದ ಬಡವನಿಗೆ ಹೆಚ್ಚು ಪ್ರಯೋಜನವಾಗಲಿಕ್ಕಿಲ್ಲ, ಅದರಿಂದ ಸಾರ್ಥ ಕತೆಯೂ ಉಂಟಾಗಲಿಕ್ಕಿಲ್ಲ. ನಮ್ಮಲ್ಲಿ ಒಕ್ಕಲು ಮಾಡುವವರೇ ಹೆಚ್ಚಾಗಿರುವಾಗ ಇಂತಹ ಕಾನೂ ನನ್ನು ಎಷ್ಟು ಬೇಗ ಜಾರಿಗೆ ಕೊಟ್ಟರೆ ಅಷ್ಟು ಅದರಿಂದೇನಾದರೂ ಒಳ್ಳೆಯದಾಗಬಹುದು. ಮತ್ತೊಂದು ನಮ್ಮ ಜಿಲ್ಲೆಯ ವಿಷಯವೇನೆಂದರೆ, ಇಲ್ಲಿ ಸಣ್ಣ ಸಣ್ಣ ಹಿಡುವಳಿದಾರರುಗಳೇ ಹೆಚ್ಚು. ಅವರಿಗೆ ಒಂದು ಕಷ್ಟ ಬರುತ್ತದೆ. ಅವರ ಒಕ್ಕಲನ್ನು ಬಿಡಿಸುವುದಕ್ಕಾಗಿ ಇದರಲ್ಲಿ ಒಂದು ಪ್ರಾವಿಷನ್ನು ಇಟ್ಟಿದ್ದಾರೆ. ಇಷ್ಟು ಬೇಸಿಕ್ ಹೋಲ್ಡಿಂಗ್ ಎಂದು ಇರುವಂತಹವರನ್ನು ಅವರಿಗೆ ಇಟ್ಟು, ಅವರಿಂದ ಭೂಮಿ ಮಾಲೀಕ ತನಗೆ ಬೇಕೆಂದು ಬಿಡಿಸಿಕೊಳ್ಳಲು ಅವಕಾಶವಿದೆ. ಭೂಮಿ ಧಣಿ ತನಗೆ ಬೇಕಾ ದಷ್ಟು ಭೂಮಿಯನ್ನು ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಅವನಿಗೆ ಹೇಳಬಹುದು. ಆದರೂ ಭೂಮಿಯ ಧಣಿಯಾದವನು ಸಾಕಷ್ಟು ಪಾಲನ್ನು ಒಕ್ಕಲು ಮಾಡುವವನಿಗೆ ಬಿಟ್ಟು ಕೊಡಲು ಸಾಧ್ಯವಾದಷ್ಟು ಸರಳವಾಗಿ ಈ ಕಾನೂನನ್ನು ಮಾಡಿ ಎಲ್ಲರಿಗೂ ಪ್ರಯೋಜನ ಸಿಗುವಂತೆ ಮಾಡುವುದು ಒಳ್ಳೆಯದು ಎಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತೇನೆ.

†ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈಗಾಗಲೇ ತಂದಿ ರುವ ಈ ಒಕ್ಕಲು ಮಸೂದೆಯ ತಿದ್ದುಪಡಿಯನ್ನು ಹಾಗೂ ಭೂಸುಧಾರಣಾ ಮಸೂದೆಯನ್ನು ಸ್ವಾಗತ ಮಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ.

ಈ ಭೂಸುಧಾರಣಾ ಮಸೂದೆ, ಶ್ರೀಮಾನ್ ಸುಬ್ಬಯ್ಯನಾಯಕರು ಈಗ ತಾನೇ ಹೇಳಿದಂತೆ, 1930 ರ ಕರಾಚಿ ಕಾಂಗ್ರೆಸ್ಸು ಅಧಿವೇಶನದಲ್ಲಿ ನಮ್ಮ ಕಾಂಗ್ರೆಸ್ಸು ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ, ಅವರು ಅಧಿಕಾರ ವಹಿಸಿಕೊಂಡ ಎರಡು ವರ್ಷಗಳೊಳಗಾಗಿ ಪ್ರಥಮತಃ ಇಂತಹ ಒಂದು

(ಶ್ರೀ ಬಿ. ಭಾಸ್ಕರಶೆಟ್ಟಿ)

ಮಸೂದೆ ತರುತ್ತೇವೆಂದು ಕರಾಚಿಯಲ್ಲಿ ಅಂದು ಒಂದು ನಿರ್ಣಯ ಮಾಡಿದ್ದರು. ಆದರೆ ಕೆಲವು ದುಷ್ಟ ಶಕ್ತಿಗಳ, ಎಂದರೆ, ಭೂ ಮಾಲೀಕರ ಕೃಪಾಕಟಾಕ್ಷಗಳಿಗೆ ಪ್ರಭಾವಕ್ಕೆ ಒಳಗಾಗಿ ಈ ಸರಕಾರ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಲು 17 ವರ್ಷಗಳಷ್ಟು ದೀರ್ಘ ಕಾಲ ಹಿಡಿಯಿತು. 1958 ನೇ ಇಸವಿಯಲ್ಲಿ ಈ ಮಸೂದೆಯನ್ನು ಈ ಮಾನ್ಯ ಸಭೆಯ ಮುಂದೆ ಪ್ರಥಮತಃ ಮಂಡಿಸಿದ್ದರು. ಆ ಮೇಲೆ ಸಾಧಾರಣವಾಗಿ 40 ಜನರಿರುವ ಒಂದು ಜಾಯಿಂಟು ಸೆಲೆಕ್ಟು ಕಮಿಟಿಯವರು ಈ ಮಸೂದೆಯನ್ನು ಪರಿಶೀಲನೆ ಮಾಡುವುದಕಾಗಿ ಈ ಸರಕಾರಕ್ಕೆ ಮೂರು ವರ್ಷಗಳಷ್ಟು ಕಾಲ ಹಿಡಿಯಿತು. ಆಮೇಲೆ 1961 ನೇ ಇಸವಿಯಲ್ಲಿ ಈ ಮಸೂದೆಯನ್ನು ಪರಿಶೀಲನೆ ಮಾಡಬೇಕೆಂದು ಸಮಿತಿಯವರಿಂದ ಪುನ : ಈ ಸಭೆಯ ಮುಂದ ಬಂದು ಅನಂತರ ಕೇಂದ್ರ ಸರಕಾರದವರು ಇದರಲ್ಲಿ ಏನೋ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಆ ಎಲ್ಲ ತಿದ್ದುಪಡಿಗಳನ್ನೂ ಸೇರಿಸಿ ಇಲ್ಲಿ ಪುನ: ತರಲು ನಾಲ್ಕು ವರ್ಷಗಳ ಕಾಲ ಹಿಡಿಯಿತು. ಇದರಿಂದ ಏನು ಅನಿಸುತ್ತದೆ ಎಂದರೆ, ಈ ಸರಕಾರದ ಪಾರ್ಟಿಯಲ್ಲಿರುವ ದೊಡ್ಡ ಭೂ ಮಾಲೀಕರುಗಳಿಗೆ ಸಹಾಯ ಮಾಡಬೇಕೆಂದು ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಅಷ್ಟರೊಳಗೆ ತಮ್ಮಲ್ಲಿರುವ ಜಮೀನುಗಳನ್ನು ಬಿಡಿಸಿಕೊಳ್ಳುವ ಅವಕಾಶಗಳನ್ನು ಪಡೆಯುವುದಕ್ಕಾಗಿ ಇಂತಹ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆಂದು ನನಗೆ ಅನ್ನಿಸುತ್ತದೆ.

ಸ್ವಾಮೀ, ಈ ಮಸೂದೆಯಲ್ಲಿ ಸರಕಾರದ ದೇವಾಲಯಗಳಿಗೆ ಮತ್ತು ಸರಕಾರದ ಹಿಡಿತದಲ್ಲಿರುವ ಇನಾಂತಿ ಮಠಗಳಿಗೆ ವಿನಾಯಿತಿ ಕೊಡುತ್ತಾರೆ ಎಂದು ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಇದರಲ್ಲಿ ಹೇಳಿದ್ದಾರೆ.

(8) " Exemption granted to Government lands under Section 107 will also be granted to lands belonging to or held on lease from religious and charitable institutions managed by or under the control of the Government. "

ಇದನ್ನೆಲ್ಲಾ ಇಲಾಖೆಯವರೇ ಕಂಟ್ರೋಲು ಮಾಡುವಂತೆ ಇದ್ದರೆ ನನಗಾದರೂ ಒಂದು ತರಹದ ಭಯವಾಗುತ್ತದೆ. ಮಠಗಳಿಗೂ ಈ ಕಾನೂನು ಅನ್ವಯಾವಾಗುವುದಿಲ್ಲ ಎಂದರೆ, ಇದರ ಪರಿಣಾಮ ಹಾಳಾಗುತ್ತದೆ. ಮಠಗಳಿಗೆ ಯಾವ ತರಹದ ವಿನಾಯಿತಿಗಳನ್ನೂ ಕೊಡಬಾರದು.

Mr. DEPUTY SPEAKER.—We will rise now and re-assemble tomorrow at 1 O' clock.

The House adjourned at Six of the Clock to meet again at One of the Clock on Tuesday, the 20th April 1965.

WD 5036—GPB—500—8-9-65

MYSORE LEGISLATIVE ASSEMBLY

Tuesday, 20th April 1965

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

Mr. SPEAKER.—I must apologise to the House for having arrived 7 minutes late, not that it was deliberately done. Partly I was discussing matters relating to the House. Beyond that I do not have anything to say. I am sure the House will parden me.

Question Nos. 251, 346, 372 and 392 may be taken together.

STARRED QUESTIONS

(to which oral answers were given)

Food Shortage in the State.

**Q.*—251. Sri M. C. BASAPPA (Chamarajanagar).—

Will the Government be pleased to state :—

(a) whether they are aware of the food shortage in the State and the difficulties that the people had to face thereby ;

(b) whether they have assessed the quantum of shortage regarding (i) rice, (ii) Millets ;

(c) what are precautionary steps taken by them to avoid such contingency in the coming year ;

(d) whether any rules are framed to procure paddy at controlled prices ;

(e) whether the procurement work done through Co-operative Agency or by Government direct ;

(f) whether Government have made arrngements to build up stocks to meet the shortage likely to be in lean months of the year ;

(g) what would be the financial implication for building up the buffer stocks required to meet the shortage ?

A.—Sri M. V. KRISHNAPPA (Minister for Revenue).—

(a) Yes.

(b) Yes.

(SRI M. V. KRISHNAPPA)

(c) Steps have been taken to build up buffer stocks of rice and jowar and impose restrictions on the movement of Foodgrains out side the State in order to conserve the available foodgrains so as to meet the demands during the lean periods of the year.

It is also proposed to introduce informal rationing by stages in the industrial Cities and Towns and in important places to meet the demands of the vulnerable section of the population.

(d) Yes.

(e) By Botb.

(f) Yes.

(g) About Rs. 30 Crores.

Shortage of Foodgrains in the State.

*Q—346- Sri K. P. REVANNASIDDAPPA (Tiptur).—

Will the Government be pleased to state :—

(a) the reasons for the shortage of foodgrains in the State;
(b) the steps taken by them to meet this shortage?

A.—Sri M. V. KRISHNAPPA (Minister for Revenue).—

(a) (i) Failure of rains in certain parts of the State and consequent fall in agricultural production.

(ii) Restrictions placed on the movement of rice from Andhra Pradesh to Mysore and other foodgrains from State to State.

(iii) Increase in population.

(b) (i) The State Government are building up buffer stocks of rice and jowar.

(ii) They have decided to introduce informal rationing by stages in Urban pockets and in areas in which there is concentrated labour population.

(iii) They have issued several regulatory and control orders in respect of foodgrains.

(iv) Provision has been made in the Third Five-Year Plan for increased agricultural production, particularly of foodgrains in order to achieve self-sufficiency in food.

(v) Two Centrally sponsored Schemes-one for Organisation of Consumers Co-operative Societies in Urban areas with a population of 50,000 and above and another for distri-

bution of consumer articles in Rural areas through Co-operative Marketing Societies, are under implementation.

(vi) In pursuance of the policy laid down by the Government of India, steps have been taken to set up Fair Price Shops in Industrial Undertakings employing more than 300 workers.

Purchase of Foodgrains.

*Q.—372. Sri S. SIVAPPA (Sravanabelagola).—

Will the Government be pleased to state :—

(a) the quantity of foodgrains Government intend to purchase to build up a buffer stock in the State ;

(b) what is the agency through which they want to make the purchase ;

(c) from where they want to purchase it ;

(d) where they want to stock the foodgrains ;

(e) the rate at which they have decided to purchase it ;

(f) whether any selling rate has been fixed for all the varieties and kinds of grains and if so, what are they ?

A.—Sri M. V. KRISHNAPPA (Minister for Revenue).—

(a) Government expect that they would be able to purchase 1.5 lakh tonnes of paddy and 1 lakh tonnes of jowar.

(b) (i) Departmental agency ;
(ii) Co-operative Societies ;
(iii) Licensed Millers ;
(iv) Association of Licensed Millers or Merchants ;
(v) Individual merchants.

(c) (i) At the Farm or the place where where the producer holds the stocks ;
(ii) At the assembling market or Mandy or at the rice mill.

(d) In Godowns of—
(1) State and Central Governments ;
(2) Co-operative Societies ;
(3) Central and State Warehousing Corporations ;
(4) Rice Mills ;
(5) Hired Private Godowns.

(Sri M. V. Krishnappa)

‡(e) **Purchase Price of Paddy**—*Vide* Schedule appended to the Mysore Paddy (Fixation of Selling Prices) Order, 1964 and (Amendment) Order, 1965.

Purchase Price of Jowar—(1) Yellow or Red Jawar Rupees Fifty per Quintal.

(2) White Jawar—Rupees Fifty-two per quintal.

‡(f) **For varieties of rice.**—*Vide* Schedule placed on the Table of the House. The question of fixing selling price of Jawar is under the consideration of Government.

Restriction or ban on Movement of Foodgrains.

*Q.—392. Sri S. S. KOLKEBAIL (Coondapur).—

Will the Government be pleased to state :—

(a) whether is any restriction or ban on movement of foodgrains from one District to another or from one Taluk to another taluk and onevillage to another village within the State of Mysore ;

(b) if not, whether they are aware that Gates and Barricades had been put up (till 18th December 1964) at *Rulical*, Agumbe, Shiradi Charmadi Ghats etc ;

(c) whether they are aware that movement of food-grains is permitted within the District, inter-Districts, within taluks and State only under permits issued by Food department officials ;

(d) whether they are aware that this artificial restriction was responsible for causing scarcity within the State ?

A.—Sri M. V. KRISHNAPPA (Minister for Revenue).—

(a) The movement of paddy/rice and jowar from one district to another is prohibited excepting under a permit issued by the Deputy Commissioner of the district from which, it has to be transported. There is no restriction on the movement of these foodgrains within the district.

(b) No.

(c) *Vide* reply to clause (a)

(d) No.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ 251ನೆಯ ಪ್ರಶ್ನೆಯ (ಬಿ) ಗೆ ಉತ್ತರವಾಗಿ-'ಹೌದು' ಎಂದು ಹೇಳಿದ್ದಾರೆ. ನಮ್ಮಲ್ಲಿ ಈ ಆಹಾರದ ಕೊರತೆ ಎಷ್ಟಿದೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ ?

---

‡[Copy placed in the Mysore Legislature Library No. 31, dated 20th April 1965.]

† ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಆಗಾಗ್ಗೆ ಕೊರತೆಯಾಗುತಕ್ಕದ್ದನ್ನ ಆಂಧ್ರದಿಂದ ತರಿಸಿಕೊಳ್ಳುತ್ತೇವೆ. ನಾವು ಅಲ್ಲಿಂದ ತರಿಸಿಕೊಳ್ಳುತ್ತಿರುವುದು ಸುಮಾರು ಎರಡು ಎರಡೂವರೆ ಲಕ್ಷ ಟನ್‌ಗಳಷ್ಟು ಅಕ್ಕಿ. ಅಷ್ಟುಬರುತ್ತಿರುವುದರಿಂದ ನಮ್ಮಲ್ಲಿ ಅಷ್ಟುಕೊರತೆಯಿದೆ ಎಂದು ಹೇಳಬಹುದು.

ಶ್ರೀ ಎಂ. ಸಿ. ಬಸಪ್ಪ.—ಮಿಲೆಟ್ಸ್ ಎಷ್ಟು ಕೊರತೆ ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಸಾಮಾನ್ಯವಾಗಿ ಅದರ ಕೊರತೆಯೇನೂ ಇರುವುದಿಲ್ಲ. ಬೆಳೆ ಚೆನ್ನಾಗಿ ಆದರೆ ನಮಗೇನೂ ಕೊರತೆಯಿರುವುದಿಲ್ಲ. ಆದರೆ ಬೆಳೆ ಸರಿಯಾಗಿ ಆಗದೆ ಇದ್ದಾಗ ಹೊರಗಡೆಯಿಂದ ತರಸಿಕೊಳ್ಳಬೇಕಾಗುವುದು.

ಶ್ರೀ ಎಂ. ಸಿ. ಬಸಪ್ಪ.—ಎರಡೂವರೆ ಲಕ್ಷ ಟನ್ ಷಾರ್ಟೇಜ್ ಇದೆ, ಅದರಲ್ಲಿ ಈ ವರ್ಷಕ್ಕೆ ಎಷ್ಟು ಎಂಬುದನ್ನು ಹೇಳುತ್ತೀರಾ ? ಅದನ್ನು ಪೂರೈಸಿಕೊಳ್ಳಲು ಪ್ರೊಕ್ಯೂರಮೆಂಟ್ ಮಾಡಿ ಬಫರ್ ಸ್ಟಾಕ್ ಬಿಲ್ಡ್ ಅಪ್ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ; ಎರಡೂವರೆ ಲಕ್ಷ ಟನ್‌ನಿಂದ 5 ಲಕ್ಷ ಟನ್‌ವರೆಗೂ ಪ್ರೊಕ್ಯೂರ್ ಮಾಡಬೇಕೆಂದು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಅದರಲ್ಲಿ 3 ಲಕ್ಷ ಟನ್‌ಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಇನ್ನು ಎರಡು ಲಕ್ಷ ಟನ್‌ಗಳನ್ನು ನಾವು ಪ್ರೊಕ್ಯೂರ್ ಮಾಡಬೇಕೆಂದು ಇಂಟರ್‌ನಲ್ ಪ್ರೊಕ್ಯೂರ್ ಮೆಂಟ್ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗಾಗಲೇ ಧಾರಣೆ ವಿಪರೀತ ಏರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ದೇಶದ ಒಳಗಡೆ ನಿರ್ಬಂಧ ತೆಗೆಯುವುದಕ್ಕೆ ಇರತಕ್ಕ ತೊಂದರೆ ಏನು ?

† ಶ್ರೀ ಎಂ. ವಿ. ಕೃಷ್ಣಪ್ಪ.—ಧಾನ್ಯದ ಬೆಳೆ ಕಟಾವಿನ ವೇಳೆಯಲ್ಲಿ ಸ್ವಲ್ಪ ಕಡಿಮೆ ಇರುತ್ತದೆ. ತಿಂಗಳು ತಿಂಗಳು ಆಮೇಲೆ ಏರುತ್ತಾ ಹೋಗುತ್ತದೆ. ನಾವು ಪ್ರೊಕ್ಯೂರ್ ಮೆಂಟ್ ಪ್ರೋಗ್ರಾಂ ಹಾಕಿಕೊಂಡಿದ್ದೇವೆ ಆ ಟಾರ್ಜೆಟ್ ರೀಚ್ ಆದಮೇಲೆ ನಿರ್ಬಂಧ ತೆಗೆಯುವ ವಿಷಯ ಯೋಚನೆ ಮಾಡುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪ್ರೊಕ್ಯೂರ್ ಮೆಂಟ್ ಮಾಡುವ ಕಡೆ ಬತ್ತವನ್ನು ಕೊಳ್ಳುವುದಕ್ಕೆ ಹಣ ಇಲ್ಲದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಎಷ್ಟು ಕಡೆ ಆ ರೀತಿ ತಮ್ಮ ಗಮನಕ್ಕೆ ಬಂದಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅದನ್ನು ಸರಿಮಾಡಿಕೊಂಡಿದ್ದೇವೆ. ಪ್ರಾರಂಭದಲ್ಲಿ ಹಣದ ತೊಂದರೆ ಇತ್ತು.

ಶ್ರೀ ಎಂ. ಸಿ. ಬಸಪ್ಪ.—ಪ್ರೋಗ್ರಾಂ ಯಾವ ತಿಂಗಳವರೆಗೂ ಮಾಡುತ್ತೀರಿ ? ಇದು ಅಂತ್ಯವಾಗುವುದು ಯಾವಾಗ ? ಇಲ್ಲಿಯವರೆಗೂ ಎಷ್ಟು ಬತ್ತ ಶೇಖರಣೆ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಮಾರು ಎರಡು ಲಕ್ಷ ಟನ್ ಬತ್ತ ವಸೂಲು ಮಾಡಬೇಕೆಂದು ಅಂದುಕೊಂಡಿದ್ದೇವೆ. ಸುಮಾರು ಒಂದು ಲಕ್ಷ ಇಪ್ಪತ್ತುಸಾವಿರ ಟನ್‌ವರೆಗೂ ಈಗಾಗಲೇ ವಸೂಲಾಗಿದೆ. ಅನೇಕ ಕಡೆ ಇನ್ನೂ ಎರಡನೆ ಬೆಳೆ, ಬೇಸಗೆ ಬೆಳೆ ಚೆನ್ನಾಗಿ ಬರುತ್ತಾ ಇದೆ. ಈ ತಿಂಗಳು ಬರುವ ತಿಂಗಳು ಅನೇಕ ಕಡೆ ಕಟಾವು ಆಗಿ ಬೇಸಗೆ ಬೆಳೆ ಬಂದರೆ ನಮ್ಮ ಟಾರ್ಜೆಟ್ ರೀಚ್ ಆಗುವುದರಲ್ಲಿ ತೊಂದರೆ ಏನೂ ಇಲ್ಲ ಎಂದು ಅಂದುಕೊಂಡಿದ್ದೇವೆ. ಒಂದು ಲಕ್ಷ ಟನ್ ವರೆಗೂ ಜೋಳದ ವಸೂಲ ನಡೆಯಬೇಕೆಂದು ಅಂದುಕೊಂಡಿದ್ದೇವೆ. ಜೋಳದಲ್ಲಿ ಫುಡ್ ಇಯರ್ ಎಂದರೆ ಜಾನವರಿ ಟು ಜಾನವರಿ ಬಡ್ಜೆಟ್ ಹಾಕುತ್ತೇವೆ ಈ ವರ್ಷ ಬರುವ ಬೆಳೆಯನ್ನೂ ಸೇರಿಸಿಕೊಳ್ಳುವ ಅವಕಾಶ ಇದೆ.

Sri S. SIVAPPA.—May I know who are the individual merchants whom the Government have authorised to purchase paddy ? Is the Government going to give them money ?

†**Sri M. V. KRISHNAPPA.**—That is the policy we have enunciated. But we have not yet appointed any individual merchants. The Government are directly purchasing and also through co-operative societies. We have not yet made use of other agencies. If there is need for them we may appoint them.

†Indicates that the speeches or remarks have not been revised by the member concerned.

Sri S. S. KOLKEBAIL.—In answer to my question it is stated that no barricade or anything of the sort has been put in Hulikal, Agumbe and other places. May I know whether this answer is given on the information supplied by the concerned officers or on the basis of any other investigation ?

† Sri M. V. KRISHNAPPA.—There may do some local arrangement. They may put some bamboo across the road. We cannot call it a barricade. We have not asked them to construct gates or barricades.

Mr. SPEAKER.—If there are bamboos put by authorities, it is much more solid than a gate. If it is put unauthorisedly then it is an offence.

Sri M. V. KRISHNAPPA.—I have not asked them to put barricades. We have asked them to restrict the movement. While doing so, I do not know what is the method adopted by them.

Mr. SPEAKER.—Any way it has to be examined.

Sri S. S. KOLKEBAIL.—On what date the Government of Mysore issued order prohibiting movement from district to district ? If a porticular District Officer had put up barricade and put in police and harrassed the people, will the Government order an enquiry into this matter ?

Sri M. V. KRISHNAPPA.—Local Officers are expected to act according to the instructions that we give them. If they have acted without any instructions, we will have to make enquiries and find out.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ರಾಜ್ಯದಲ್ಲಿ ಶೇಖರಣೆ ಮಾಡಿದಂಥ ಒಳ್ಳೆಯ ಅಕ್ಕಿಯನ್ನು ಬೇರೆ ರಾಜ್ಯಗಳಿಗೆ ರವಾನಿಸಿಬಿಟ್ಟು ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಬೆಂಗಳೂರು ಪಟ್ಟಣಕ್ಕೆ ಅಲ್ಲಿಂದ ತಂದಂತಹ ಕೆಟ್ಟ ಅಕ್ಕಿಯನ್ನು ಜನಗಳಿಗೆ ಕೊಡುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಆಂಧ್ರದೇಶದಿಂದಲೇ ಪೂರ್ವದಿಂದಲೂ ಬರುತ್ತಾ ಇದ್ದದ್ದು. ಬೆಂಗಳೂರಿಗೆ ಪೂರ್ತಿ ಅಕ್ಕಿ ಸರಬರಾಯಿ ಮಾಡುವುದನ್ನು ಆಂಧ್ರದವರು ಒಪ್ಪಿಕೊಂಡಿದ್ದಾರೆ. ಬೆಂಗಳೂರಿಗೆ ಒಂದೂವರೆ ಲಕ್ಷಟನ್ ಅಕ್ಕಿ ಬೇಕು, ದೇಶದಲ್ಲೆಲ್ಲಾ ಪ್ರೊಕ್ಯೂರ್‌ಮೆಂಟ್ ಮಾಡಿದರೂ ಸಾಲುವುದಿಲ್ಲ. ಒಂದೂವರೆ ಲಕ್ಷ ಟನ್ ಅಕ್ಕಿಯನ್ನು ಆಂಧ್ರದಿಂದ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇಷ್ಟುರವರೆಗೂ ಅಲ್ಲಿಂದ ಅಕ್ಕಳ್ಳು ಅಕ್ಕಿ ಬರುತ್ತಾ ಇತ್ತು. ಅದು ಸಾಮಾನ್ಯ ಬಡಜನಗಳಿಗೆ ಬೇಕಾದಂತಹ ಅಕ್ಕಿ ಅದೇ ಹೆಚ್ಚಾಗಿ ಬರುತ್ತಾಇತ್ತು. ಇನ್ನು ಮೇಲೆ ಫೈನರ್‌ವೆರೈಟಿ, ಬಂಗಾರ ತೀಗಲು, ಕೃಷ್ಣಕಾಂತ, ಮಲಕಲಕಲು ಈ ವೆರೈಟಿ ಅಕ್ಕಿ ಬೆಳೆ ಅಲ್ಲಿ ಬರುತ್ತದೆ ಅದನ್ನು ಕಳುಹಿಸುತ್ತೇವೆ. ಎಂದು ಹೇಳುತ್ತಾಇದ್ದಾರೆ. ಇನ್ನು ಮುಂದೆ ಬರುವ ಅಕ್ಕಿ ಎಲ್ಲಾ ಬಂಗಾರ ತೀಗಲು, ಕೃಷ್ಣಕಾಂತಲು, ಮಲಕಲಕಲು, ರಸಾಲು ಸಣ್ಣಲು ಇವುಗಳೇ ಬರುತ್ತವೆ.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರಿನಲ್ಲಿ ಅಕ್ಕಳ್ಳು ಅಕ್ಕಿಯನ್ನು ತಿನ್ನುವುದರಿಂದ ಇಲ್ಲಿನ ಜನಗಳ ಆರೋಗ್ಯಕ್ಕೆ ಸ್ವಲ್ಪಮಟ್ಟಿನ ಧಕ್ಕೆ ಬಂದಿದೆ ಎನ್ನುವ ನೂರಾರು, ಸಹಸ್ರಾರು ದೂರುಗಳು ಸರ್ಕಾರವನ್ನು ಮುಟ್ಟಿವೆಯೇ ? ಕಾರ್ಪೊರೇಷನ್‌ನಲ್ಲೂ ಕೂಡ ಈ ಬಗ್ಗೆ ನಿರ್ಣಯಮಾಡಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—15 ಲಕ್ಷ ಜನರು ಇರುವ ಬೆಂಗಳೂರು ನಗರಕ್ಕೆ ಅಕ್ಕಿಯನ್ನು ಹಂಚುವುದು ಬಹಳ ಕಷ್ಟಕರವಾದ ಕೆಲಸವೇ. ಹಾಗೆ ಮಾಡುವಾಗ ಎಲ್ಲೋ ಒಂದೆರಡು ಷಾಪುಗಳಲ್ಲಿ ಹೆಚ್ಚು ಕಮ್ಮಿ ಆಗುತ್ತದೆ. ಹೊರಗಡೆಯಿಂದ ಅಕ್ಕಿಯನ್ನು ತರಿಸುವಾಗ ಒಳ್ಳೆಯ ಅಕ್ಕಿಯನ್ನೇ ಕಳುಹಿಸಿ ಎಂದು ಕೇಳುತ್ತಾಇದ್ದೇವೆ, ಅವರೂ ಸಹ ಅದೇ ಪ್ರಯತ್ನಮಾಡುತ್ತಾ ಇದ್ದಾರೆ. ಇಂಡಿವಿಜ್ಯುಯಲ್ ಕೇಸಸ್ ನಮ್ಮ ಗಮನಕ್ಕೆ ಬಂದಾಗ ಅದನ್ನು ಸರಿಪಡಿಸುತ್ತಾ ಇದ್ದೇವೆ. ಇದನ್ನೆಲ್ಲಾ

ಸರಿಪಡಿಸುವುದಕ್ಕೆ ನಾವು ಸರ್ವಪ್ರಯತ್ನ ಮಾಡುತ್ತಾ ಇದ್ದೇವೆ. ಒಳ್ಳೆಯ ಅಕ್ಕಿ ಕೊಡಬೇಕು ನಿಜ. ಅಕ್ಕಳ್ಳು ಅಕ್ಕಿ ನಿಲ್ಲಿಸಿ ಎಂದು ಶ್ರೀಮಂತರು ಹೇಳುತ್ತಾರೆ, ಅಕ್ಕುಳ್ಳು ನಿಲ್ಲಿಸಬೇಡಿ ಅದೇ ಬಡವರಿಗೆ ಬೇಕಾದ ಅಕ್ಕಿ ಎಂದು ಅನೇಕರು ಬರೆಯುತ್ತಾ ಇದ್ದಾರೆ. ಆದ್ದರಿಂದ ಬೆಂಗಳೂರಿನಲ್ಲಿರತಕ್ಕಂತಹ ಜನರ ಟೇಸ್ಟ್ ಮೀಟ್ ಮಾಡುವುದು ಬಹಳ ಕಷ್ಟಕರವಾದ ಕೆಲಸ. ಆದರೂ ಕೂಡ ಒಳ್ಳೆಯ ಅಕ್ಕಿಯನ್ನು ಕೊಡಬೇಕೆಂದು ಸರ್ವಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ರಾಜ್ಯದ ಹೊರಕ್ಕೆ ಹೋಗಲು ನಿರ್ಭಂಧ ಇದ್ದರೂ ಕೂಡ ಲಾರಿಗಟ್ಟಲೆ ಹೋಗುತ್ತಾ ಇದೆ ಅದನ್ನು ತಡಗಟ್ಟಲು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲಾರಿಗಟ್ಟಲೆ ಹೋಗುತ್ತಾ ಇದೆ ಎಂದರೆ ಎಲ್ಲಿ ಹೋಗುತ್ತಾ ಇದೆ ಎಂಬುದನ್ನು ತಿಳಿಸಿ.

ಶ್ರೀಮತಿ ರತ್ನಮ್ಮ ಮಾಧವರಾವ್.—ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಹೋಗುತ್ತಾ ಇದೆ, ನನಗೆ ಗೊತ್ತಿರುವಂತೆ ಶಿವಮೊಗ್ಗಾದಲ್ಲಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಶಿವಮೊಗ್ಗಾದಿಂದ ಲಾರಿಗಳಲ್ಲಿ ಹೋಗಲೇ ಬೇಕು. ಡಿ.ಸಿ.ಟು ಡಿ. ಸಿ. ಪರ್ಮಿಷನ್‌ಕೊಟ್ಟು ಅನೇಕ ಕಡೆಗಳಿಗೆ ಅಲ್ಲಿಂದ ಹೋಗುತ್ತಾ ಇರುತ್ತದೆ.

ಶ್ರೀ ಜಿ. ವಿ. ಗೌಡ.—ಬತ್ತವನ್ನು ಎಕ್ಸ್‌ಮಿಲ್ ರೇಟ್‌ನಂತೆ ತೆಗೆದುಕೊಂಡು ಅದನ್ನು ಅಕ್ಕಿಯನ್ನಾಗಿ ಪರಿವರ್ತಿಸಿ ಮಾರುವ ಕಾಲಕ್ಕೆ ಒಂದು ಕ್ವಿಂಟಾಲ್‌ಗೆ ಎರಡು ರೂಪಾಯಿನಿಂದ ಐದು ರೂಪಾಯಿವರೆಗೂ ನಷ್ಟವಾಗುತ್ತಾ ಇದೆ ಸೊಸೈಟಿಗಳವರಿಗೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ಸೊಸೈಟಿಯವರು ಹೊರಗಡೆ ಹೋಗಿ ಕೊಳ್ಳುತ್ತಾ ಇದ್ದಾರೆ ಆದ್ದರಿಂದ ಆ ರೀತಿ ತೊಂದರೆಯಾಗಿರಬಹುದು. ಒಟ್ಟಿನಲ್ಲಿ ಸೊಸೈಟಿಗಳಿಗೆ ಕೊಡುತ್ತಾ ಇರತಕ್ಕ ಕಮಿಷನ್ ಸಾಲದು ಎಂಬುದನ್ನು ಅವರು ನಮ್ಮ ಗಮನಕ್ಕೆ ತರುತ್ತಾ ಇದ್ದಾರೆ ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಂಗ್ರಹಣಾಕಾರ್ಯವನ್ನು ಸಹಕಾರಿ ಏಜೆನ್ಸಿ ಮತ್ತು ಸರಕಾರ ಮಾಡುತ್ತಿರುವುದಾಗಿ ಹೇಳಿದ್ದೀರಿ. ಈಗ ಈ ಎರಡನ್ನೂ ಬಿಟ್ಟು ಫುಡ್‌ಕಾರ್ಪೊರೇಷನ್ನಿಗೆ ವಹಿಸಲು ಯೋಚನೆಮಾಡುತ್ತಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ನಾವು ಕೊಂಡಿರುವ ಅಕ್ಕಿಯನ್ನು ಕಾರ್ಪೊರೇಷನ್ ಸ್ವಾಧೀನಕ್ಕೆ ಕೊಡುತ್ತೇವೆ. ಅವರು ಗೋಡೌನ್ ಮುಂತಾದ ಕಡೆಗಳಲ್ಲಿ ಪ್ರಿಸರ್ವ್‌ಮಾಡಿ ನಮಗೆ ಬೇಕಾದಾಗ ಕೊಡುತ್ತಾರೆ. ಅದರಿಂದ ನಮಗೆ ಬಹಳ ಅನುಕೂಲ, ಮತ್ತು ಕೊಳ್ಳಲು ಅವರು ಹಣ ಕೊಡುತ್ತಾರೆ. ಪ್ರಿಸರ್ವೇಷನ್ ಅವರ ಜವಾಬ್ದಾರಿ.

Sri R. S. HEGDE.—Is it a fact that this Government has promised the Government of Kerala to supply 25,000 tons of rice ?

†**Sri M. V. KRISHNAPPA.**—If the Government gives us 1,75,000 tons of rice as against 1,50,000 tons that they have promised, we have also assured that Dabbala sala-boiled rice,—not raw rice, from malnad will be supplied to Kerala.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬತ್ತ ಕೊಳ್ಳುವುದಕ್ಕೆ ಕೊಟ್ಟಿರುವ ಹಣದಮೇಲೆ ಸರಿಯಾದ ಕಂಟ್ರೋಲಿಲ್ಲದಿರುವುದರಿಂದ ಶಿವಮೊಗ್ಗ, ಸಾಗರಗಳಲ್ಲಿ, ಕೆಲವು ಸೊಸೈಟಿಗಳಲ್ಲಿ ಬೇರೆ ವ್ಯಾಪಾರ ಮಾಡುತ್ತಾರೆ, ಒಂದು ಮೂಟೆಗೆ 10 ರೂಪಾಯಿ ಬೆಲೆಯಲ್ಲಿ ವೆತ್ಯಾಸವಿರುತ್ತದೆ. ಇದರಿಂದ ಧಾರಣೆ ಜಾಸ್ತಿಯಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಹೇಳಿದ್ದು ಅರ್ಥವಾಗಲಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಆಹಾರಧಾನ್ಯದ ಮಾರಾಟದ ಮೇಲೆ ನಿರ್ಬಂಧ ಹಾಕಿದ್ದರಿಂದ ಕೇರಳದ ಗಡಿ ಪ್ರದೇಶಗಳಾದ ಪಣಜಿ, ಬಂಟವಾಳ ಮುಂತಾದ ಕಡೆ ಅನೇಕ ಗ್ರಾಮಗಳಲ್ಲಿ ಅಕ್ಕಿ ಸಿಕ್ಕದೆ ಅದರ ಬೆಲೆ ಏರಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇರಳಕ್ಕೆ ಹೋಗುವುದನ್ನು ತಪ್ಪಿಸಲು ಕೇರಳ ಬಾರ್ಡರಿನಲ್ಲಿ 5 ಮೈಲುಗಳ ಬೆಲ್ಟ್ ಕ್ರಿಯೇಟ್‌ಮಾಡಿ ಸ್ಮಗಲ್ ಆಗುವುದನ್ನು ತಪ್ಪಿಸಲು ಅನುಮತಿ ಇಲ್ಲದೆ ಆಹಾರ ಧಾನ್ಯ ಸಾಗಿಸಕೂಡದೆಂದು ಗೊತ್ತುಮಾಡಲಾಗಿದೆ. ಹಿಂದೆ ಸ್ಮಗಲ್ ಆಗುತ್ತಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದರಿಂದ ಈ ಕ್ರಮ ತೆಗೆದುಕೊಂಡು ತಾಸಿಲ್ದಾರರ ಅನುಮತಿಇಲ್ಲದೆ ಹೊರಗೆ ತೆಗೆದು ಕೊಂಡು ಹೋಗದಂತೆ ನಿರ್ಬಂಧ ಮಾಡಿದೆ. ಈಗ ತೊಂದರೆ ಆಗಿರುವುದನ್ನು ಅಧಿಕಾರಿಗಳಿಗೆ ತಿಳಿಸಿ ತಕ್ಕ ಕ್ರಮ ಕೈಕೊಳ್ಳುವಂತೆ ಹೇಳಲಾಗಿದೆ.

ಶ್ರೀ ಜಿ. ರಾಮೇಗೌಡ.—ಕನ್‌ಸ್ಯೂಮರ್ಸ್ ಫೆಡರೇಷನ್ನಿಗೆ ಅಕ್ಕಿ, ಬತ್ತ ಶೇಖರಿಸಲು ಅವಕಾಶ ಕೊಡಲಾಗಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಹಂಚಿಕೆ ಮಾಡುವುದಕ್ಕೆ ಮಾತ್ರ ಅವಕಾಶ ಕೊಡಲಾಗಿದೆ.

Sri R. M. DESAI.—You have said here that the price of Jawar is Rs. 52 per quintal. While collecting jawar, the incidental and handling charges are taken by the Collectors and it is deducted from Rs. 52/. Is the Government going to rectify that matter ?

Sri M. V. KRISHNAPPA.—It only happened in Bijapur, the Hon'ble Member brought it to our notice, and immediately we have told the Deputy Commissioner to give Rs. 50-52 to the producer and not to deduct the incidental charges from the price.

ಶ್ರೀ ಟಿ. ಆರ್. ರಂಗೇಗೌಡ.—ಒಂದು, ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗಿಲ್ಲದಿರುವುದು ಆಹಾರದ ಅಭಾವಕ್ಕೆ ಕಾರಣವೆಂದು ಪ್ಲಾನಿಂಗ್ ಕಮಿಷನ್ ಅಭಿಪ್ರಾಯ ವ್ಯಕ್ತಪಡಿಸಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಸಂಸ್ಥಾನದ ವಿಚಾರದಲ್ಲಿ ಆ ಕಮಿಷನ್ ಕೇಳಿದ ವಿಚಾರದಲ್ಲಿ ಉತ್ತರ ಕಳಿಸಿದ್ದೇವೆ. ನಮಗೆ ಕೇಂದ್ರ ಸರಕಾರದಿಂದ ಫ್ರೀಯಾಗಿ ಒಂದು ದಿವಸಕ್ಕೆ 6 ಸಾವಿರ ಪಲ್ಲ ಅಕ್ಕಿ ಬರುತ್ತಿತ್ತು, ಅದನ್ನು ನಿಲ್ಲಿಸಿದರು. ಜೊತೆಗೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಕೇರಳದವರು, ತಮಿಳರು ಮುಂತಾದವರು ಹೇರಳವಾಗಿ ಬೆಂಗಳೂರಿಗೆ ಬರುತ್ತಿದ್ದಾರೆ. ಕೇರಳಾದವರು ಬಂದು, ಚಿಕ್ಕ ಹೊಟೇಲುಗಳನ್ನು ತೆರೆಯುತ್ತಿರುವುದರಿಂದ ಅಕ್ಕಿ ಮತ್ತು ಸಕ್ಕರೆಗೆ ಅಭಾವ ಜಾಸ್ತಿಯಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗ ಜಿಲ್ಲೆಯಿಂದ ಒಂದು ಲಾರಿ ಅಕ್ಕಿಯನ್ನು ಹೊಸನಗರದ ಮೂಲಕ ತೆಗೆದುಕೊಂಡು ಹೋಗುತ್ತಿದ್ದಾಗ ಅದನ್ನು ಹಿಡಿದುನಿಲ್ಲಿಸಿದಾಗ ಅದರ ಮಾಲೀಕರು ರಾತ್ರೋರಾತ್ರಿ ಹೋಗಿ ಬೆಳಗಾವುದರೊಳಗಾಗಿ ಡೆಪ್ಯುಟಿಕಮಿಷನರಿಂದ ಪರ್ಮಿಟ್ ತೆಗೆದುಕೊಂಡು ಬಂದು ಸಾಗಿಸಿದರು. ಈ ವಿಚಾರದಲ್ಲೇನು ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಪಶೀಲು ಕೊಟ್ಟರೆ ವಿಚಾರಿಸುತ್ತೇನೆ.

Sri S. RAJAGOPAL.—Sir, Government agreed to introduce informal rationing in 18 cities from 1st April onwards. But it is not implemented in KGF; may I know the reason for it ?

Sri M. V. KRISHNAPPA.—We wanted to start informal rationing in 18 cities from the beginning of this month. we have started in certain places and it is going on. We have started in Mangalore, Mysore; Belgaum will start tomorrow, Hubli from 25th by the end of this month, perhaps, all these towns will have come under rationing. There is some delay. I regret for the delay.

ಶ್ರೀಮತಿ ಸುಶೀಲಬಾಯಿ ಹೀರಾಚಂದ್‌ಷಾ.—ಬಿಜಾಪುರದಲ್ಲಿ ಅಕ್ಕಿ ಅಭಾವವಿರುವುದರಿಂದ ಅದಕ್ಕೇನಾದರೂ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಜೋಳ ಬೇಕಾದಷ್ಟಿದೆ, ಧಾರವಾಡದಿಂದ 8 ದಿವಸಗಳಲ್ಲಿ 500 ಪಲ್ಲ ಅಕ್ಕಿ ಹೋದವಾರ ಕಳುಹಿಸಿದೆವು. ಮುಂದೆ ತಕ್ಕ ಏರ್ಪಾಡುಮಾಡುತ್ತಿದ್ದೇವೆ.

ಶ್ರೀ ಅಂದಾನಯ್ಯ.—ಬಫರ್ ಸ್ಟಾಕ್ ಮಾಡಲು 30 ಕೋಟಿ ರೂಪಾಯಿ ಬೇಕೆಂದು ಹೇಳಿರುವುದನ್ನು ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಕೊಡುವುದೇ ಅಥವಾ ಕೇಂದ್ರದಿಂದ ಸ್ವಲ್ಪ ಮಾತ್ರ ನೆರವು ಬರುವುದೇ ?

ಶ್ರೀ ಎಂ. ವಿ. ಕೃಷ್ಣಪ್ಪ.—30 ಕೋಟಿ ಬೇಕಾಗಿಲ್ಲ. ಕೇಂದ್ರ ಸರಕಾರದ ನೆರವಿದೆ. ಕೇಂದ್ರದವರು ಕೊಡುವ 3 ಲಕ್ಷ ಟನ್ನಿಗೆ ಹಣ ಕೊಡುವುದಿಲ್ಲ. ಅವರು ಧಾನ್ಯ ಕಳುಹಿಸುತ್ತಾರೆ, ಅದನ್ನು ಮಾರಿ ನಾವು ಹಣ ಕೊಡುತ್ತೇವೆ. ತಿಂಗಳಿಗೆ ಕೇಂದ್ರ ಸರಕಾರ 15 ಸಾವಿರ ರೂಪಾಯಿ ಬೆಲೆ ಬಾಳುವ ಆಹಾರ ಪದಾರ್ಥಗಳನ್ನು ಕಳುಹಿಸುವುದು. ನಾವು ಪ್ರೊಕ್ಯೂರ್ ಮಾಡಬೇಕಾಗಿರುವುದು 2-3 ಲಕ್ಷ ಟನ್ ಆಹಾರ ಧಾನ್ಯ. ಅದಕ್ಕೆ ಸುಮಾರು 15 ಕೋಟಿ ರೂಪಾಯಿ ಬೇಕಾಗುತ್ತದೆ. ಅದರಲ್ಲಿಯೂ ಒಂದೇ ಸಲ 15 ಕೋಟಿ ರೂಪಾಯಿ ಆಹಾರ ಧಾನ್ಯಗಳನ್ನೂ ನಮ್ಮಲ್ಲಿ ಇಟ್ಟು ಕೊಂಡಿರುವುದಿಲ್ಲ. 10 ಕೋಟಿ ರೂಪಾಯಿ ಇದ್ದರೆ ಸಾಕು.

1-30 P.M.

ಶ್ರೀಮತಿ ಬಸವರಾಜೇಶ್ವರಿ.—ರಾಯಚೂರು ಜಿಲ್ಲೆಯಲ್ಲಿ ಸೊಸೈಟಿಗಳ ಹೆಸರಿನಲ್ಲಿ ಸುಮಾರು 8-10 ಲಾರಿ ಜೋಳವನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡಿದ್ದು, ಅವುಗಳನ್ನು ಗೋಡೌನ್‌ಗಳಲ್ಲಿ ಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಬರೆಯಬೇಕೆಂದು ಕೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶಿಮಠ.—ಇಲಾಖೆಯ ಮುಖಾಂತರ ಜೋಳ ಮತ್ತು ಬತ್ತ ಶೇಖರಿಸುವುದಾಗಿ ಹೇಳಿದರು. ಇದನ್ನು ದಾಸ್ತಾನು ಮಾಡಲು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಆಹಾರ ಕಾರ್ಪೊರೇಷನ್ ಅವರ ಸಹಾಯ ತೆಗೆದುಕೊಳ್ಳುತ್ತೇವೆ. ನಾವು ಹೆಚ್ಚು ದಾಸ್ತಾನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಬೇಕಾದ ಗೋಡೌನ್‌ಗಳಿಲ್ಲ. ಒಂದು ಲಕ್ಷ ಟನ್ ಹಿಡಿಸುವ ಗೋಡೌನ್‌ಗಳನ್ನು ಒಂದು ಕೋಟಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿಸಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಅವರು ಟೆಂಡರುಗಳನ್ನು ಕರೆದಿದ್ದಾರೆ. ಇಲಾಖೆಯಿಂದ ಸಂಗ್ರಹ ಮಾಡಿದ ಆಹಾರ ಧಾನ್ಯಗಳನ್ನು ಆಹಾರ ಕಾರ್ಪೊರೇಷನ್ ವಶಕ್ಕೆ ನಾವು ಕೊಡುತ್ತೇವೆ. ಅವರು ಸೆಂಟ್ರಲ್ ವೇರ್‌ಹೌಸ್, ಸ್ಟೇಟ್ ವೇರ್ ಹೌಸಸ್ ಮತ್ತು ಖಾಸಗಿಯವರ ಗೋಡೌನ್‌ಗಳಲ್ಲಿ ಇಟ್ಟಿರುತ್ತಾರೆ. ಮುಖ್ಯವಾದ ತೊಂದರೆ ಇರುವುದು ಜೋಳಕ್ಕೆ. ಅದನ್ನು ಹೊರಗಡೆ ಇಡುವುದಕ್ಕಾಗುವುದಿಲ್ಲ. ಅದನ್ನು ಹಗೇವಿನಲ್ಲಿ ಇಟ್ಟಿರುತ್ತಾರೆ. ಸರ್ಕಾರ ಹಗೇವಿನಲ್ಲಿ ಇಡುವುದಕ್ಕಾಗುವುದಿಲ್ಲ. ಹೆಚ್ಚು ಜೋಳ ಬರುವಾಗ ಏನು ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ.

Sri S. S. KOLKEBAIL.—Supplementary to (a). Is it not a fact that representatives of South Kanara brought to the notice of the Chief Minister and Revenue Minister that such was the trouble in South Kanara district ?

Sri M. V. KRISHNAPPA.—Government have not passed any restriction on movement within the district. The ban is from district to district. But, in South Kanara, it was brought to our notice and immediately we asked the Deputy Commissioner and he announced in the next day's Kannada paper that there was no ban in South Kanara. Again, the police adopted the old habit. Second time we instructed the Deputy Commissioner of South Kanara to instruct the police that there was no ban on the movement of foodgrains within the district.

ಶ್ರೀ ಬಿ. ನಂಜಪ್ಪ.—ಬೆಂಗಳೂರಿನಲ್ಲಿ ಸರ್ಕಾರಿ ಗೋಡೌನುಗಳಿಂದ ಆಹಾರ ಧಾನ್ಯ ಕೊಡುವಾಗ ಒಟ್ಟು ವ್ಯಾಪಾರ ಮಾಡುವ ಖಾಸಗಿಯವರಿಗೆ ಕೊಟ್ಟು ಸೊಸೈಟಿಗಳವರಿಗೆ ಸರಿಯಾಗಿ ಕೊಡುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿಗೆ ತಿಂಗಳಿಗೆ ಎರಡೂವರೆ ಲಕ್ಷ ಕ್ವಿಂಟಾಲ್ ಆಹಾರ ಬೇಕು. ಅದರಲ್ಲಿ ಎರಡು ಲಕ್ಷ ಕ್ವಿಂಟಾಲ್ ಸೊಸೈಟಿಗಳಿಗೆ ಕೊಡಲಾಗುತ್ತಿದೆ. ಆರು ತಿಂಗಳ ಕೆಳಗೆ ಹಳೆ ವ್ಯಾಪಾರಿಗಳು 8 ಜನ ಇದ್ದರು. ಅವರು ಈಗಲೂ ಇದ್ದಾರೆ. ಮಾನ್ಯ ಸದಸ್ಯರ ಆಪಾದನೆಗೆ ಕಾರಣವಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಇನ್‌ಸಿಡೆಂಟಲ್ ಚಾರ್ಜಸ್ ನಮ್ಮ ಭಾಗದಲ್ಲಿಯೂ ರೈತರಿಂದ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿಗೂ ಇದರ ಬಗ್ಗೆ ಇನ್‌ಸ್ಟ್ರಕ್ಷನ್ಸ್ ಕಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಇನ್‌ಸಿಡೆಂಟಲ್ ಚಾರ್ಜಸ್ ರೈತರಿಂದ ವಸೂಲು ಮಾಡುತ್ತಿದ್ದಾರೆಯೋ ಅದಕ್ಕೆಲ್ಲ ನಾನು ಹೇಳಿದ್ದು ಅನ್ವಯಿಸುತ್ತದೆ. ರೈತರಿಗೆ ಬಿಳಿ ಜೋಳಕ್ಕೆ 52 ರೂಪಾಯಿ ಪ್ರಕಾರ ಮತ್ತು ಕೆಂಪು ಜೋಳಕ್ಕೆ 50 ರೂಪಾಯಿ ಪ್ರಕಾರ ಸೇರಬೇಕು ಎಂದು ತಿಳಿಸುತ್ತೇವೆ.

ಶ್ರೀ ಬಿ. ನಂಜಪ್ಪ.—ಬೆಂಗಳೂರಿನಲ್ಲಿರುವ ಸರ್ಕಾರಿ ಗೋಡೌನುಗಳಲ್ಲಿ ಖಾಸಗಿ ಸಗಟು ವ್ಯಾಪಾರಸ್ಥರಿಗೆ ಪ್ರಿಫರೆನ್ಸ್ ಕೊಡುತ್ತಿದ್ದಾರೆ. ಅದೇ ರೀತಿಯಾಗಿ ಸೊಸೈಟಿಗಳಿಗೆ ಕೊಡುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿರುವುದು ಕೇಂದ್ರ ಸರ್ಕಾರದ ಗೋಡೌನುಗಳು. ಅಲ್ಲಿ ಮಾನ್ಯ ಸದಸ್ಯರು ಹೇಳುವಂತೆ ಇದ್ದರೆ, ಅವರು ಬರೆದರೆ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಜೋಳವನ್ನು ಸಂಗ್ರಹ ಮಾಡಿ ಇಡಲು ತೊಂದರೆಯಾಗುತ್ತದೆ, ಅದಕ್ಕೆ ಹಗೇವುಗಳು ಬೇಕು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಕೇಂದ್ರ ಆಹಾರ ಸಂಶೋಧನಾ ಇಲಾಖೆ ಈ ಬಗ್ಗೆ ಒಂದು ಕ್ರಮ ಕೈಕೊಂಡಿದೆ. ಅವರ ಸಲಹೆಯನ್ನು ಈ ವಿಚಾರದಲ್ಲಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಣಿ ಚೀಲಕ್ಕೆ ಒಂದು ತರಹ ದ್ರಾವಕವನ್ನು ಸವರಿದರೆ ಹುಳ ಬೀಳುವುದಿಲ್ಲ ಎಂದು ಹೇಳಿದ್ದಾರೆ. ನಾವು ಆ ಬಗ್ಗೆ ಇನ್ನೂ ಪ್ರಯತ್ನಪಟ್ಟಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗೋಣಿ ಚೀಲಗಳಿಗೆ ದ್ರಾವಕವನ್ನು ಬಳಿಯುವುದಿಲ್ಲ ; ಒಬ್ಬ ಅಮೆರಿಕದ ಡಾಕ್ಟರು ಬರೆದಿದ್ದಾರೆ. ಅವರು ಹೊಸದಾಗಿ ಒಂದು ವಿಧಾನವನ್ನು ಕಂಡು ಹಿಡಿದಿದ್ದಾರೆ. ಇದರ ಬಗ್ಗೆ ಅವರ ಸಲಹೆಯನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ವಿಚಾರಿಸುತ್ತೇನೆ.

Sri R. M. DESAI.—The Taluk Marketing Societies have started procuring foodgrain. Has it come to the notice of Government that they are feeling short of funds for purchasing foodgrains ?

Sri M. V. KRISHNAPPA.—Yes, it is a fact. That difficulty is removed and they are given enough money. So far as societies are concerned, they have to be given some margin because they are co-operative societies and we must see that they keep some money.

ಶ್ರೀ ಎಸ್. ಗೋಪಾಲಗೌಡ.—ರಾಜ್ಯದಲ್ಲಿ ಆಹಾರ ಧಾನ್ಯಗಳ ಕೊರತೆಗೆ ಸರ್ಕಾರದವರು ಕಾರಣಗಳನ್ನು ಕೊಡುತ್ತ ರಾಜ್ಯದ ಕೆಲವು ಭಾಗಗಳಲ್ಲಿ ಮಳೆ ಬಾರದೆ ಇದ್ದ ಪ್ರಯುಕ್ತ ಮತ್ತು ಇನ್ನೂ ಎರಡು ಕಾರಣ ಕೊಟ್ಟಿದ್ದಾರೆ, ಜನಸಂಖ್ಯೆ ಹೆಚ್ಚು ಮತ್ತು ಆಂಧ್ರ ಪ್ರದೇಶದಿಂದ ಅಕ್ಕಿ ಬರಲಿಲ್ಲ ಎಂದು. ರಾಜ್ಯದಲ್ಲಿ ಯಾವತ್ತಿಗೂ ಆಹಾರ ಧಾನ್ಯಗಳ ಕೊರತೆ ಇದೆ ಎನ್ನುವುದು ನಿಜವಾಗಿದ್ದು ಮೊದಲನೆ ಮತ್ತು ಎರಡನೆ ಯೋಜನೆಯಲ್ಲಿ ಸಣ್ಣ ನೀರಾವರಿ ಕಾರ್ಯಗಳಿಗೆ ಆದ್ಯತೆಯನ್ನು ಕೊಡದೆ ಇರುವುದು ಮತ್ತು ಮುಗಿಸಿರತಕ್ಕ ದೊಡ್ಡ ನೀರಾವರಿ ಯೋಜನೆಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡದೆ ಇರುವುದು ಮುಖ್ಯವಾದ ಕಾರಣಗಳಲ್ಲವೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದ ಎರಡನೆಯ ಕಾರಣ ಬಹುಮಟ್ಟಿಗೆ ನಿಜ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ನೀರಿದ್ದರೂ ಸಹ ಎಷ್ಟು ಸಾಗುವಳಿಯಾಗಬೇಕೋ ಅಷ್ಟು ಜಮೀನು ಸಾಗುವಳಿಯಾಗದೆ ತೊಂದರೆ ಆಗಿದೆ. ಅದಕ್ಕೆ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಮಾಡುತ್ತಿದ್ದಾರೆ. ಸಣ್ಣ ನೀರಾವರಿ ಕೆಲಸಗಳನ್ನು ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಆಗಿರುವಷ್ಟು ಕೆಲಸ ಬೇರೆ ಕಡೆ ಆಗಿಲ್ಲ. ಸರ್ಕಾರದವರು ಅಡಿಷನಲ್ ಫಂಡ್ಸ್ ಸಹ ತೆಗೆದುಕೊಂಡು ಬಾವಿಗಳ, ಚಿಕ್ಕ ಚಿಕ್ಕ ಕೆರೆಗಳ, ಕೆರೆಗಳ ಜೀರ್ಣೋದ್ಧಾರದ ಈ ಕೆಲಸಗಳನ್ನೆಲ್ಲ ಮಾಡಿದ್ದೇವೆ. ಮೈಸೂರು ಸಂಸ್ಥಾನದಲ್ಲಿ 200 ವರ್ಷಗಳಿಂದ ನಡೆಯದೆ ಇರತಕ್ಕ ಕೆಲಸ ಮೂರು ನಾಲ್ಕು ವರ್ಷದಲ್ಲಿ ದೊಡ್ಡ ಪ್ರೋಗ್ರಾಂ ಹಾಕಿಕೊಂಡು ಮಾಡುತ್ತಿದ್ದೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಹಂಚಲು ಸೊಸೈಟಿಗಳ ಜೊತೆಗೆ ನಗಟು ವ್ಯಾಪಾರಿಗಳಿಗೂ ಕೊಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಕ್ಕಿ ವ್ಯಾಪಾರ ಮಾಡುತ್ತಿದ್ದ ಅನೇಕ ಜನ ಅಂಗಡಿಗಳನ್ನು ಖಾಲಿ ಇಟ್ಟುಕೊಂಡು ಕುಳಿತಿದ್ದಾರೆ. ಅವರು 70-80 ಜನರಿದ್ದಾರೆ. ಅವರ ವಿಚಾರವನ್ನು ಸರ್ಕಾರ ಯೋಚನೆ ಮಾಡುತ್ತಿದೆ. ಬೆಂಗಳೂರಿನಲ್ಲಿ ಸೊಸೈಟಿಗಳು ಮುಕ್ಕಾಲು ಭಾಗ ಕೆಲಸವನ್ನು ಮಾಡುತ್ತಿವೆ. ವ್ಯಾಪಾರಿಗಳು ಪೂರ್ವದಿಂದಲೂ ವ್ಯಾಪಾರ ನಡೆಸುತ್ತಿದ್ದುದರಿಂದ ತಮ್ಮಲ್ಲಿ ಸಾಕಷ್ಟು ಸ್ಥಳ ಇರುವುದರಿಂದಲೂ, ಅವರಿಗೆ ಅನುಭವ ಇರುವುದರಿಂದಲೂ ನಮಗೂ ನಗಟು ವ್ಯಾಪಾರಿಗಳಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಒಂದು ಸಂಘ ಮಾಡಿಕೊಂಡು ಬನ್ನಿ, ಪರಿಶೀಲನೆ ಮಾಡುತ್ತೇವೆ ಎಂಬುದಾಗಿ ತಿಳಿಸಿದ್ದೇವೆ. ಅವರು ಒಂದು ಸಂಘ ಮಾಡಿಕೊಂಡು ಬರುವವರಿದ್ದಾರೆ. ಆ ವಿಷಯದಲ್ಲಿ ಸರ್ಕಾರ ಇನ್ನೂ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡಿಪಾರ್ಟ್‌ಮೆಂಟಲ್ ಏಜೆನ್ಸೀಸ್, ಕೋ-ಆಪರೇಟೀವ್ ಸೊಸೈಟೀಸ್, ಲೈಸೆನ್ಸ್ಡ್ ಮಿಲ್ಲರ್ಸ್ ಅಸೋಸಿಯೇಷನ್, ಇವುಗಳಿಗೆಲ್ಲ ಕೆಲವು ರಿಸ್ಟ್ರಿಕ್ಷನ್ಸ್ ಹಾಕಿ ಲೈಸೆನ್ಸ್ ಕೊಟ್ಟಿದ್ದಾರೆ. ಬಂಟವಾಳದ ವೆಂಕಟೇಶ್ವರ ರೈಸ್‌ಮಿಲ್ಸ್ ಮತ್ತು ಕೆನರಾ ರೈಸ್‌ಮಿಲ್ಸ್, ಪಾಣೆಮಂಗಳೂರು, ಇವರು ಸ್ಥಳೀಯ ಅಧಿಕಾರಿಗಳ ಜೊತೆಯಲ್ಲಿ ಕೈ ಸೇರಿಸಿ ಅಕ್ಕಿ ಮಾಡಿ ಕೇರಳಕ್ಕೆ ಕಳಿಸುತ್ತಿರುವುದು ಗೊತ್ತಿದ್ದರೂ ಕೂಡ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಹೆಸರುಗಳನ್ನು ಈ ಕಡೆ ಕೊಟ್ಟರೆ ನಾನು ಡೆಪ್ಯುಟಿ ಕಮಿಷನರಿಗೆ ಬರೆದು, ಫೋನ್ ಮೂಲಕ ಹೇಳುತ್ತೇನೆ. ಹೆಸರುಗಳು ನಿಜವಾದ ಹೆಸರುಗಳಾಗಿದ್ದು, ಅವರು ಆ ರೀತಿ ಮಾಡುತ್ತಿದ್ದರೆ ಅವರನ್ನು ಹಿಡಿಯಿರಿ ಎಂದು ತಿಳಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎಲ್ಲಿಯವರೆಗೆ ಈ ಆಹಾರ ನಿಯಂತ್ರಣವಿರುತ್ತದೋ ಅಲ್ಲಿಯವರೆಗೆ ಕಾಳಸಂತೆ ಇರುತ್ತದೆ. ಪದಾರ್ಥಗಳ ಬೆಲೆಗಳೂ ಸಹ ಜಾಸ್ತಿಯಾಗುತ್ತವೆ. ಸುಮ್ಮನೆ ಕೇಂದ್ರದ ನೀತಿಯನ್ನು ಇವರು ಪಾಲಿಸಿಕೊಂಡು ಬರುತ್ತಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಇವರು ಕೇಂದ್ರದ ಮೇಲೆ ಪ್ರಭಾವ ಬೀರಿ ಕಂಟ್ರೋಲ್ ತೆಗೆದರೆ ಎಲ್ಲಾ ಪದಾರ್ಥಗಳ ಬೆಲೆಗಳೂ ಇಳಿಯುವುದಿಲ್ಲವೇ ? ಆ ರೀತಿ ಏಕೆ ಮಾಡುವುದಕ್ಕಾಗುವುದಿಲ್ಲ ?

† ಶ್ರೀ ಎಂ, ವಿ. ಕೃಷ್ಣಪ್ಪ.—ನನ್ನ ಅಭಿಪ್ರಾಯದಂತೆ ಮಾನ್ಯ ಸದಸ್ಯರ ಅಭಿಪ್ರಾಯವು ಆಗಿದೆ. ಕಂಟ್ರೋಲ್ ಇರುವವರೆಗೂ ತೊಂದರೆ ಇದ್ದೇ ಇರುತ್ತದೆ. ಕೇಂದ್ರ ಸರ್ಕಾರಕ್ಕೆ ನಾವು ಹೇಳುವ ಹಾಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ನನ್ನದೇನೂ ನಡೆಯುತ್ತಾ ಇಲ್ಲ. ಅವರು ಹೇಳಿದ್ದನ್ನೇ ಮಾಡಬೇಕಾಗುತ್ತದೆ.

ಶ್ರೀ ಎನ್. ಒ. ಸಾಮಾಜಿ.—(ಮರಾಠಿ)

ಶ್ರೀ ಎಂ ವಿ. ಕೃಷ್ಣಪ್ಪ.—ಈಗ ಅರ್‌ಬನ್ ಏರಿಯಾದಲ್ಲಿ ಎರಡು ಕಾಲಗಳನ್ನು ಈ ಆಹಾರಧಾನ್ಯಗಳ ವಸೂಲಿ ಕ್ರಮಕ್ಕಾಗಿ ಹಾಕಿಕೊಂಡಿದ್ದೇವೆ. ಈಗ ಏಪ್ರಿಲ್ ತಿಂಗಳಿಂದ 18 ಸಿಟಿಗಳಲ್ಲಿ ಅದನ್ನು ಷುರುಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದನ್ನು ಈಗಾಗಲೇ ಮಾಡುತ್ತಿದ್ದೇವೆ. ಇನ್ನು ಜುಲೈನಿಂದ ಮತ್ತೆ 29-30 ಟೌನುಗಳಲ್ಲಿ ಅದನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಲ್ಲದೆ ಹಳ್ಳಿಗಾಡುಗಳಲ್ಲಿ ಅದರಲ್ಲೂ ಅಭಾವ ಪ್ರದೇಶಗಳಲ್ಲಿ ಒಂದು ಅಂದಾಜು ಇಟ್ಟುಕೊಂಡಿದ್ದೇವೆ. ಬಹುಶಃ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್—ಹೀಗೆ ಐದು-ಆರು ತಿಂಗಳುಗಳಲ್ಲಿ ಅವರು ಕೊಡಬೇಕಾಗುತ್ತದೆ. ಎಷ್ಟು ವಸೂಲಿ ನಡೆಯಬೇಕೋ ಅಷ್ಟು ಮಾಡುತ್ತೇವೆ. ಈಗ ತೊಂದರೆ ಇರುವುದರಿಂದ ರೈತರ ಒಂದು ಹಿತ ದೃಷ್ಟಿಯಿಂದ ಈಗ ಅವನ್ನು ರಿಲೀಜ್ ಮಾಡುತ್ತಾ ಇಲ್ಲ. ಇನ್ನು ಐದಾರು ತಿಂಗಳುಗಳಲ್ಲಿ ಬಂದಂಥ ಆಹಾರ ಧಾನ್ಯಗಳನ್ನು ಅಭಾವ ಪ್ರದೇಶಗಳಲ್ಲಿ ಮೊದಲು ಹಂಚುತ್ತೇವೆ.

ಶ್ರೀ ಚನ್ನಪ್ಪ ವಾಲಿ.—ಕೆಲವು ಭಾಗಗಳಲ್ಲಿ ಅಂದರೆ, ಬೈಲಹೊಂಗಲ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಬರಗಾಲ ಇರುವುದರಿಂದ ಅಲ್ಲಿ ಜೋಳವನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವರ್ಷ ಜೋಳದ ಬೆಳೆ ಬಹಳ ಚೆನ್ನಾಗಿ ಆಗಿದೆ. ಮಾನ್ಯ ಸದಸ್ಯರು ಹೇಳಿದ ಎರಡು ತಾಲ್ಲೂಕುಗಳಲ್ಲಿ ಬರಗಾಲದ ಸಮಯದಲ್ಲಿ ಅಭಾವ ಉಂಟಾಗುತ್ತದೆಂಬುದು ನಿಜ. ಇವುಗಳ ಸುತ್ತುಮುತ್ತಲೂ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳು ಇರುವುದರಿಂದ ಆ ಜನಗಳಿಗೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಈಗ ಏನೂ ತೊಂದರೆ ಬಂದಿಲ್ಲ. ಈಗಾಗಲೇ ಜೋಳದ ವಸೂಲಾತಿ ನಡೆಯುತ್ತಾ ಇದೆ. ಅದ್ದರಿಂದ ಜೋಳ ಪ್ರೊಕ್ಯೂರ್‌ಮೆಂಟ್ ಈಗ ಮಾಡುತ್ತಾ ಇರುವ ಉದ್ದೇಶ ಅಹಾರ ಅಭಾವ ಉಂಟಾದಾಗ ಅದನ್ನು ಸರಬರಾಜು ಮಾಡಬೇಕೆಂಬುದು ಆಗಿದೆ. ಆದರೆ ಆ ಜೋಳವನ್ನು ಯಾವ ದೇಶದವರಿಗೂ ಕೊಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕೆಲವು ವ್ಯಾಪಾರಸ್ಥರ ಮೇಲೆ ಏನು ಲೆವಿ ಆರ್ಡರ್ ಹಾಕಿದ್ದಾರೊ ಅವರು ಸಾವಿರಾರು ಪಲ್ಲ ಬತ್ತವನ್ನು ಶೇಖರಣೆ ಮಾಡಿ ಸಣ್ಣ ಸಣ್ಣ ರೈತರ ಹೆಸರಿನಲ್ಲಿ ಡಿಕ್ಲರೇಷನ್ ಕೊಡಿಸಿ ಸರ್ಕಾರಕ್ಕೆ ಕೊಡಬೇಕಾದ ಬತ್ತ ಏನಿದೆ ಅದನ್ನು ಕೊಡದೆ ತಪ್ಪಿಸಿಕೊಂಡು ಎಕರೇಜ್ ಬೇಸಿಸ್ ಮೇಲೆ ಇರುವ ಈ ಆರ್ಡರ್ ರಕ್ಷಣೆಯಿಂದ ಎರಡು ಎಕರೆ, ನಾಲ್ಕು ಎಕರೆ ಎಂದು ಕೊಡುತ್ತಿದ್ದಾರೆ ಮತ್ತು ಹೆಚ್ಚಿಗೆ ಬತ್ತವದ್ನು ಶೇಖರಣೆಮಾಡಿ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿರುವುದರಿಂದ ಅದನ್ನು ವಸೂಲು ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಕಂಟ್ರೋಲ್ ಇರುವ ಕಡೆ ನಡೆಯುತ್ತಾ ಇದೆ. ಪ್ರೊಕ್ಯೂರ್‌ಮೆಂಟ್ ಪಾಲಿಸಿಗೆ ತಪ್ಪಿಸಿಕೊಳ್ಳುವುದಕ್ಕೋಸ್ಕರ ರೈತರು 20 ಕ್ವಿಂಟಾಲ್‌ವರೆಗೆ ಇಟ್ಟುಕೊಳ್ಳಬೇಕು. ಈ ವಿಷಯದಲ್ಲಿ ಬತ್ತವನ್ನು ಯಾವ ರೀತಿ ಹಂಚಬೇಕೆಂಬ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹೇಳುತ್ತೇವೆ. ಅಂತಹ ಸಂದರ್ಭದಲ್ಲಿ ಸರಿಯಾಗಿ ಜಪ್ತಿ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಚನ್ನಪ್ಪ ವಾಲಿ.—ಜಿಲ್ಲಾಧಿಕಾರಿಗಳು ಇಲ್ಲಿಯವರೆಗೆ ಬಂದ್ ಮಾಡಿದ್ದಾರೆ. ಈಗ ಅವರಿಗೆ ಕಾಳು ಹಂಚಿಕೆ ಮಾಡಿ ಎಂಬುದಾಗಿ ಹೇಳಿದ್ದೀರಿ. ಆದರೂ ಅದಷ್ಟು ಲಗೂನೆ ಕಾಳನ್ನು ತರಿಸಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಇದುವರೆಗೆ ಕೇಳಲಿಲ್ಲ. ಅಲ್ಲಿ ರಿಲೀಫ್ ವರ್ಕ್ಸ್ ಷುರು ಮಾಡಿಸಬೇಕು.

ಶ್ರೀ ಚನ್ನಪ್ಪ ವಾಲಿ.—ಈಗಲಾದರೂ ಅದನ್ನು ಕೇಳಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಪ್ರಯತ್ನ ಮಾಡೋಣ. ಮುಂದೆ ನಾಲ್ಕು ತಿಂಗಳು ಕಷ್ಟ ಇರುತ್ತದೆ. ಅದಕ್ಕಾಗಿ ಪ್ರಯತ್ನಪಡೋಣ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳಿದ್ದಕ್ಕೆ ಸ್ಪೆಸಿಫಿಕ್ಕಾಗಿ ಉತ್ತರ ಬರಲಿಲ್ಲ. ಎರಡು ಎಕರೆ ಗದ್ದೆ ಇರತಕ್ಕವನ್ನು ನಾಲ್ಕು ಕ್ವಿಂಟಾಲ್ ಕೊಡಬೇಕೆಂದು ಆರ್ಡರ್ ಇದೆ. ಇದರ ಪ್ರಕಾರ ಕೊಟ್ಟು ಉಳಿದುದನ್ನು ಬ್ಲಾಕ್ ಮಾರ್ಕೆಟಿನಲ್ಲಿ ಮಾರಿದ್ದಾರೆ. ಅದನ್ನು ಈಗ ರಿಕ್ವಿಸಿಷನ್ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಡಿಕೊಳ್ಳುತ್ತೇವೆ, ಬೇಕಾದಾಗ ಸರ್ಕಾರದವರು ಮಾಡುತ್ತಾರೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಆಹಾರಧಾನ್ಯಗಳನ್ನು ರೈತರಿಂದ ಕೊಂಡುಕೊಳ್ಳುವ ಬೆಲೆಗೂ, ಕೊಂಡು ತಿನ್ನತಕ್ಕ ಜನಗಳಿಗೆ ಆ ಪದಾರ್ಥಗಳನ್ನು ಒದಗಿಸಿರತಕ್ಕ ಬೆಲೆಗೂ ತಾರತಮ್ಯ ವಿರುವುದರಿಂದ ಆ ಬಗ್ಗೆ ಸರ್ಕಾರದವರು ಏನು ವಿಮರ್ಶೆಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾರತಮ್ಯ ಇಲ್ಲ. ವ್ಯಾಪಾರ ಸರಾಗವಾಗಿ ನಡೆಯಬೇಕಾಗಿದೆ. ರೈತನಿಗೆ ಷ್ರಿಂಕೇಜ್, ಷಾರ್ಟೇಜ್, ಇನ್‌ವೆಸ್ಟ್‌ಮೆಂಟ್—ಇವೆಲ್ಲಾ ಇರುತ್ತದೆ. ಕೊಟ್ಟಣ ಚಾರ್ಜಸ್, ಮಿಲ್ಲಿಂಗ್ ಚಾರ್ಜಸ್ ಬೇರೆ ಇರುತ್ತದೆ. ಇವೆಲ್ಲವನ್ನೂ ಲೆಕ್ಕ ಹಾಕಿ ಕೇಂದ್ರ ಸರ್ಕಾರದವರು ಇಂಡಿಯಾ ದೇಶದಲ್ಲಿ ಒಂದು ಸ್ಕೇಲ್ ಮಾಡಿದ್ದಾರೆ. ಅದೇ ಸ್ಕೇಲನ್ನು ನಾವೂ ಕೂಡ ತೀರ್ಮಾನ ಮಾಡಿದ್ದೇವೆ. ಕೇಂದ್ರ ಸರ್ಕಾರ ಏಕರೂಪವಾದ ಧಾರಣೆಯನ್ನು ಜಾರಿಯಲ್ಲಿ ತಂದದ್ದರಿಂದ ಆ ರೀತಿ ನಾವೂ ಸಹ ಇಲ್ಲಿ ತಂದಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಸರ್ಕಾರದವರು ನಿಗದಿ ಮಾಡಿರತಕ್ಕ ಧಾರಣೆ ಬಹಳ ಕಡಿಮೆ ಇರುವುದರಿಂದ ರೈತರು ಆಹಾರಧಾನಗಳನ್ನು ಬೆಳೆಯುವುದಕ್ಕೆ ಬದಲಾಗಿ ಕಮರ್ಷಿಯಲ್ ಕ್ರಾಪ್ಸನ್ನು ಬೆಳೆಯುತ್ತಿದ್ದಾರೆ. ಈಗ ನಿಗದಿ ಮಾಡಿರುವ ಬೆಲೆಯಿಂದ ರೈತನಿಗೆ ತನ್ನ ಕಷ್ಟ ನೀಗದೇ ಇರುವುದರಿಂದ ಆ ಧಾರಣೆಯನ್ನು ಪುನಃ ರಿವೈಜ್ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದು ನಿಜ. ರೈತರಿಗೆ ನ್ಯಾಯವಾದ ಬೆಲೆ ಸಿಗದಿದ್ದರೆ ಹಣ ಬರುವ ಬೆಳೆಯನ್ನು ಮಾಡುತ್ತಾನೆ. ಅವನಿಗೆ ಸಾಲಸೋಲವಿರುತ್ತದೆ, ಮನೆಯಲ್ಲಿ ಮಕ್ಕಳ ಮುಂಜಿ, ಮದುವೆ ಇವೆಲ್ಲಾ ಇರುತ್ತದೆ. ಈಗ ಸರ್ಕಾರ ಕೊಟ್ಟಿರುವ ಬೆಲೆ ನ್ಯಾಯವಾದ ಬೆಲೆ. ಬಹುಶಃ ಇಂತಹ ಬೆಲೆ ಎಂದೂ ಕೊಟ್ಟಿಲ್ಲ. ನಾನು 13 ವರ್ಷಗಳಿಂದಲೂ ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲಸ ಮಾಡಿರುವ ಅನುಭವದಿಂದ ಹೇಳುವುದಾದರೆ ಆಗಿನಿಂದಲೂ ಯಾವ ಸರ್ಕಾರವೂ ಏಕ್‌ದಂ ಒಂದು ಪಲ್ಲಾ ಬತ್ತಕ್ಕೆ 18 ರೂಪಾಯಿಗಳನ್ನು ಹೆಚ್ಚು

ಮಾಡಿದ್ದನ್ನು ನಾನು ನೋಡಲಿಲ್ಲ. 18 ಅಥವಾ 19 ರೂಪಾಯಿಗೆ ಪಲ್ಲ ಇದ್ದುದನ್ನು 36 ಅಥವಾ 38 ರೂಪಾಯಿಗೆ ಪಲ್ಲ ಎಂಬುದಾಗಿ ಯಾವ ಸರ್ಕಾರವೂ ಮಾಡಲಿಲ್ಲ. ಇದು ಈ ವರ್ಷವೇ ಇಂಡಿಯಾ ದೇಶದಲ್ಲಿ ನಡೆದಿರಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಹಿಂದೆ ಅವಲಕ್ಕಿ ನಮ್ಮ ಜಿಲ್ಲೆಯಿಂದ ಕೇರಳಕ್ಕೆ ಹೋಗುತ್ತಿತ್ತು. ಈಗ ನಿಂತು ಹೋಗಿದೆ. ಹಾಗಾದರೆ ಆಹಾರಧಾನ್ಯಗಳಿಗೆ ಸಂಬಂಧಪಟ್ಟಂತೆ ಯಾವ್ಯಾವ ವಸ್ತುಗಳ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವಲಕ್ಕಿ ವಿಷಯ ಮಾನ್ಯ ಸದಸ್ಯರು ಹೇಳಿದರು. ರೈಸ್‌ನಲ್ಲಿ ಪ್ರೆಸ್ಡ್ ರೈಸ್ ಎಂಬುದು ಶ್ರೇಷ್ಠವಾದ ಅಕ್ಕಿ. ರೈಸ್ ಮೂವ್‌ಮೆಂಟ್ ಕಂಟ್ರೋಲ್ ಆರ್ಡರ್‌ನಲ್ಲಿ ಇದನ್ನು ಶ್ರೇಷ್ಠವಾದುದೆಂದು ಹೇಳಿದ್ದಾರೆ. ರೈಸಿನಲ್ಲಿ ಪ್ರೆಸ್ಡ್ ರೈಸ್ ಸಹ ಒಂದು ವಿಧವಾದ ಅಕ್ಕಿ. ರೈಸ್ ಪ್ರಾಡಕ್ಟ್ಸ್‌ನಲ್ಲಿ ಅದೂ ಒಂದು. ಆ ರೀತಿ ಪರಿಗಣಿಸಿರುವುದರಿಂದ ಅವಲಕ್ಕಿ, ಪುರಿ, ಮಂಡಕ್ಕಿ ಇವುಗಳಿಗೆ ಸ್ವಲ್ಪ ತೊಂದರೆ ಇದೆ. ಮೈಸೂರು ಸಂಸ್ಥಾನದಲ್ಲಿರತಕ್ಕ ಬ್ಯಾನನ್ನು ತೆಗೆಯಬೇಕು ಎಂಬುದಾಗಿ ಸರ್ಕಾರದವರು to take away pressed rice Mandakki and puri from rice and rice products ಎಗ್ಸಾಮಿನ್ ಮಾಡುತ್ತಿದ್ದಾರೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಪ್ಲಾಂಟೇಷನ್ ಏರಿಯಾದಲ್ಲಿರತಕ್ಕ ವರ್ಕರ್ಸ್‌ಗೆ ಈಗ ಒದಗಿರುವ ಆಹಾರಾಭಾವವನ್ನು ಎದುರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ, ಅಲ್ಲಿನ ವರ್ಕರ್ಸ್‌ಗೆ ಆಹಾರವನ್ನು ಹಂಚುವ ವ್ಯವಸ್ಥೆಯನ್ನು ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ಲಾಂಟೇಷನ್ ಜಿಲ್ಲೆಗಳಾದ ಚಿಕ್ಕಮಗಳೂರು, ಹಾಸನ, ಕೂರ್ಗ್ ಪ್ರದೇಶಗಳಲ್ಲಿ ಪ್ರೊಕ್ಯೂರ್‌ಮೆಂಟ್ ಸಾಕಷ್ಟು ನಡೆದಿದೆ. ಅಲ್ಲಿಂದ ಅಕ್ಕಿಯನ್ನು ಬೆಂಗಳೂರಿಗೆ ತರಬೇಕೆಂಬ ಇರಾದೆ ಇದೆ. ಮುಂದೆ ಅಕ್ಕಿಯನ್ನು ಕೊಡುವುದಕ್ಕೆ ಷುರುಮಾಡುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬತ್ತವನ್ನು ಮಿಲ್ ಮಾಡತಕ್ಕ ಮಿಲ್‌ಗಳು ಸುಮಾರು 113 ಮಿಲ್‌ಗಳಿವೆ. ಆ ಮಿಲ್ಲುಗಳಿಗೆ ಸಾಕಾಗುವಷ್ಟು ಬತ್ತ ಅಲ್ಲಿ ದೊರೆಯುವುದಿಲ್ಲ. ಇದರಿಂದ ಅಲ್ಲಿ ಅಕ್ಕಿ ಅಭಾವವುಂಟಾಗಿದೆ. ಸಾಮಾನ್ಯವಾಗಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬತ್ತವನ್ನು ತರಿಸಿಕೊಳ್ಳುತ್ತಿದ್ದರು. ಈಗ ಸರ್ಕಾರದವರು ಆಹಾರದಧಾನ್ಯಗಳ ವಿಷಯದಲ್ಲಿ ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ಹಾಕಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ನಿನ್ನೆದಿವಸ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ಸಂಜೀವನಾಥ್ ಐಕಳ.—ನಿನ್ನೆ ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಕೊಟ್ಟಂಥಹ ಉತ್ತರ ತೃಪ್ತಿಕರವಾಗಿರಲಿಲ್ಲ, ಅದಕ್ಕೋಸ್ಕರ ಈಗ ನಾನು ಮತ್ತೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ಉಡುಪಿ ಟೌನ್‌ನಲ್ಲಿ ಆಹಾರದ ಪರಿಸ್ಥಿತಿಯಲ್ಲಿ ತುಂಬಾ ಬಯಂಕರ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ಸರ್ಕಾರದವರು ಏನಾದರೂ ಆಲೋಚನೆಯನ್ನು ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಉಡುಪಿಯಲ್ಲಿ ಏಪ್ರಿಲ್ ಒಂದನೆಯ ತಾರೀಖಿನಿಂದ ಅನೌಪಚಾರಿಕ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಅಲ್ಲಿ ಅಂಥಾ ಭಯಂಕರ ಪರಿಸ್ಥಿತಿಯೇನೂ ಇಲ್ಲ. ಈಗ ಮಂಗಳೂರಿನಲ್ಲಿಯೂ ಸಹ ಏಪ್ರಿಲ್ ತಿಂಗಳಿನಿಂದ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಕಾರ್ಕಳ, ಬಂಟ್ವಾಳ್ ಮತ್ತು ಕುಂದಾಪುರ ಈ ಪ್ರದೇಶಗಳಲ್ಲಿಯೂ ಸಹ ಜುಲೈ ತಿಂಗಳಿನಿಂದ ಅನೌಪಚಾರಿಕ ರೇಷನಿಂಗ್ ಪದ್ಧತಿಯು ಜಾರಿಗೆ ಬರಬಹುದು.

Sri S. S. KOLKEBAIL.—Has it come to the notice of Government that the price of rice is soaring up in Coondapur and other taluks of South Kanara as a result of the ban on the movement of foodgrains from district to district; if so, will Government order free movement of foodgrains ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ನಿಜ. ಸೌತ್ ಕೆನರಾ ಜಿಲ್ಲೆಯ ಅಕ್ಕ ಪಕ್ಕ ಜಿಲ್ಲೆಗಳಲ್ಲಿ ಆಹಾರಧಾನ್ಯಗಳ ಮೂವ್‌ಮೆಂಟ್ ಮೇಲೆ ಬ್ಯಾನ್ ಹಾಕಿರುವುದರಿಂದ ಅಲ್ಲಿನ ಹೆಚ್ಚು ಜನಗಳಿಗೆ ತೊಂದರೆಯಾಗಿದೆ. ಫ್ರೀ ಮೂವ್‌ಮೆಂಟ್ ಇದ್ದರೆ ಸೌತ್ ಕೆನರಾದಿಂದ ಲಾರಿಗಳಲ್ಲಿ ಕೇರಳಕ್ಕೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಅಕ್ಕಿಯು ಹೋಗುತ್ತದೆ ಎಂದು ಅಲ್ಲಿಯ ಜನಗಳು ಹೇಳುತ್ತಾರೆ. ಅದಕ್ಕೋಸ್ಕರ ಆಹಾರಧಾನ್ಯವನ್ನು ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ಸಾಗಿಸುವುದರಮೇಲೆ ಬ್ಯಾನ್ ಹಾಕಬೇಕಾಯಿತು. ಇದರಿಂದ ಸೌತ್ ಕೆನರಾ ಜಿಲ್ಲೆಯ ಜನಗಳಿಗೆ ಸ್ವಲ್ಪ ತೊಂದರೆ ಬರಬೇಕಾಯಿತು. ಅದನ್ನು ಆದಷ್ಟು ಬೇಗ ನಿವಾರಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ರಾಜ್ಯದಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರಧಾನ್ಯಗಳ ಸಾಗಾಣಿಕೆಯ ಮೇಲೆ ನಿರ್ಬಂಧವನ್ನು ಹಾಕಿರುವುದರಿಂದ ಕೆಲವರು ಲಾರಿಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಕ್ಕಿಯನ್ನು ಸಾಗಿಸುವುದಕ್ಕೆ ಹೋಗಿ ಪೋಲೀಸಿನವರ ಕೈಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಇದರಿಂದ ಪೋಲೀಸಿನವರಿಗೆ ಹಬ್ಬ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆಯಲ್ಲವೇ ? ಈ ನಿರ್ಬಂಧವನ್ನು ತಡೆಯುವುದಕ್ಕೆ ಸರ್ಕಾರದವರೇನಾದರೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ನಾವು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರಧಾನ್ಯಗಳ ಸಾಗಾಣಿಕೆಯ ಮೇಲೆ ನಿರ್ಬಂಧವನ್ನು ಹಾಕಿರಲಿಲ್ಲ. ಮದ್ರಾಸ್ ಸರ್ಕಾರದವರು ಈ ನಿರ್ಬಂಧವನ್ನು ಹಾಕಿದ್ದನ್ನು ನೋಡಿ ನಾವು ಇದನ್ನು ಹಾಕಬೇಕಾಯಿತು. ನಾವು ಮೊದಲು ಇಲ್ಲಿ ಆಹಾರಧಾನ್ಯದ ಮೇಲೆ ನಿರ್ಬಂಧವನ್ನು ಹಾಕದೆ ಇದ್ದುದರಿಂದ ಇಲ್ಲಿ ಆಹಾರಧಾನ್ಯದ ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕೆ ಸಾಧ್ಯವೇ ಆಗಲಿಲ್ಲ. ಅದಕ್ಕೋಸ್ಕರ ನಾವು ಅದರ ಮೇಲೆ ನಿರ್ಬಂಧವನ್ನು ಹಾಕಬೇಕಾಯಿತು. ಈಗ ನಾವು ಎಷ್ಟು ಆಹಾರಧಾನ್ಯವನ್ನು ಪ್ರೊಕ್ಯೂರ್ ಮಾಡಬೇಕೆಂದು ಒಂದು ಅಂದಾಜನ್ನು ಹಾಕಿಕೊಂಡಿದ್ದೇವೆಯೋ ಅಷ್ಟನ್ನು ಪ್ರೊಕ್ಯೂರ್ ಮಾಡಿದಮೇಲೆ ಹೆಚ್ಚು ಕಾಲ ಆ ನಿರ್ಬಂಧವನ್ನು ಇಟ್ಟುಕೊಳ್ಳುವುದಿಲ್ಲ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆ ನಿರ್ಬಂಧವನ್ನು ತೆಗೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಸ್ವಾಮಿ, ಪ್ರತಿಯೊಬ್ಬ ಸದಸ್ಯರಿಗೂ ಒಂದೊಂದು ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—60 ನಿಮಿಷಗಳನ್ನು ಈ ಪ್ರಶ್ನೆಗೆ ಕೊಟ್ಟಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ನಾನು ಅನೇಕ ಸಾರಿ ಎದ್ದು ಕುಳಿತುಕೊಂಡಿದ್ದೇನೆ, ನನಗೆ ಒಂದು ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ.

Mr. SPEAKER.—I request all the members to give their supplementaries to me now and I am holding over the question for tomorrow and I will get the answers for the supplementaries also. The matter is important, but I find that the supplementaries are diffused. Let us concentrate on something and let us give replies to the people. Instead, one member asks about beaten rice and another member takes us to the farthest corner.

ಶ್ರೀ ಬಿ. ಚನ್ನಬೈರೇಗೌಡ.—ಕೆಲವರಿಗೆ ಎರಡು ಮೂರು ಸಾರಿ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಶ್ರೀಮಾನ್ ವಾಲಿ ಚನ್ನಪ್ಪನವರಿಗೆ ಮತ್ತು ಇನ್ನೂ ಕೆಲವರಿಗೆ ಎರಡು ಸಾರಿ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ನಮಗೆ ಒಂದು ಸಾರಿಯೂ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ಅಧ್ಯಕ್ಷರು.—ಈ ಸಭೆಯಲ್ಲಿ ಎಷ್ಟು ಜನ ಮಾನ್ಯ ಸದಸ್ಯರಿದ್ದಾರೋ ಅಷ್ಟು ಜನ ಮಾನ್ಯ ಸದಸ್ಯರಿಗೂ ಒಂದು ಪ್ರಶ್ನೆಯ ಮೇಲೆ ಉಪ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಹೇಳಿದರೆ ಹೇಗಾಗುತ್ತದೆ ? ಇವೊತ್ತು ಈ ಪ್ರಶ್ನೆಗಾಗಿ ಒಂದು ಗಂಟೆ ಕಾಲವನ್ನು ವಿನಿಯೋಗ ಮಾಡಿದ್ದೇವೆ. ಶ್ರೀ ವಾಲಿ ಚನ್ನಪ್ಪನವರಿಗೆ ಎರಡು ಸಾರಿ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟು ನಿಮಗೆ ಅವಕಾಶವನ್ನು ಕೊಡದಿದ್ದರೆ ಅದು ನನ್ನ ತಪ್ಪು ಎಂದು ಹೇಳುತ್ತೀರಾ ?

ಶ್ರೀ ಗೋಪಾಲ ಸಾಲೆನ್ನ.—ಸ್ವಾಮಿ, ನನ್ನದೊಂದು ಪ್ರಾರ್ಥನೆ ಈಗ ಕೆಲವರಿಗೆ ಈ ಪ್ರಶ್ನೆಯ ಮೇಲೆ ಸಪ್ಲಿಮೆಂಟರಿ ಪ್ರಶ್ನೆಯನ್ನು ಹಾಕುವುದಕ್ಕೆ ಎರಡು ಮೂರು ಸಾರಿ ಅವಕಾಶವನ್ನು ಕೊಟ್ಟಿದ್ದೀರಿ ಆದರೆ ಕೆಲವರಿಗೆ ಒಂದು ಸಾರಿಯೂ ಸಪ್ಲಿಮೆಂಟರಿ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ.

Mr. SPEAKER.—That is why I said let everybody give me his supplementaries in writing. I will see that answers are got tomorrow or the day after. I am holding over the question. I am prepared to allow a half-an-hour Debate. I cannot understand this unkind criticism. What is the implication of the observation by Sri Gopala Salenna and Sri Channabyre Gowda ?

Sri GOPALA SALENNA.—We are appealing to the Chair.

Mr. SPEAKER.—That is why I said I will allow everybody to give me their supplementaries in writing. ಮಾನ್ಯ ಸದಸ್ಯರು ಅಸೆಂಬ್ಲಿಯಲ್ಲಿ ಹೇಳಿದ ಪ್ರತಿಯೊಂದು ವಿಷಯಕ್ಕೂ ಫಲ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಪ್ರಶ್ನೆಯ ಮೇಲೆ ಪ್ರತಿಯೊಬ್ಬರಿಗೂ ಸಪ್ಲಿಮೆಂಟರಿ ಹಾಕುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯ ? Can anybody spend more than one hour over this Question ? Because you did not get a chance, you say that the whole thing is bad. How am I to know which member is going to put which kind of supplementary ?

ಶ್ರೀ ಬಿ. ಚನ್ನಬೈರೆ ಗೌಡ.—ಜಿಲ್ಲೆಗಳಲ್ಲಿ ನಿರ್ಬಂಧ ಹಾಕಲಿಲ್ಲ...

2.00 P.M.

ಅಧ್ಯಕ್ಷರು.—ಪ್ರಶ್ನೆ ಹಾಕುವುದಕ್ಕೆ ಕೇಳಲಿಲ್ಲ. ಈ ವಿಚಾರದಲ್ಲಿ ನನಗೆ ಹೇಳುವುದು ಏನಾದರೂ ಇದ್ದರೆ ಅದನ್ನು ಹೇಳಿ, ಕೇಳುತ್ತೇನೆ. I think nobody can do more than What I have done. I spent one hour over this Question. I am now permitting members to give supplementaries. If the number is small it will be included in tomorrow's agenda. Otherwise day after tomorrow. I am prepared to give half-an-hour discussion and I am holding over all the questions not taken up today.

Sri M. V. KRISHNAPPA.—Sir, Generally a day is allotted for food Debate. Such being the case, we are very glad for the half-an-hour discussion.

Mr. SPEAKER.—But half-an-hour discussion has its own limitations. There will be scope only for the member who has raised the question and the Minister to reply. I suppose the House agrees for holding over the Question.

ಶ್ರೀ ಕೆ.ಪಿ. ರೇವಣ್ಣ ಸಿದ್ದಪ್ಪ.—ಒಂದು ದಿವಸ ಇದಕ್ಕೆ ಚರ್ಚೆಗೆ ಅವಕಾಶ ಕೊಡಬೇಕು, ಇದು ಬಹಳ ಮುಖ್ಯವಾದ ವಿಷಯ. ಈ ಸಭೆಯು ಕೂಡ ಸದ್ಯದಲ್ಲಿಯೇ ಮುಗಿದುಹೋಗುತ್ತದೆ. ಈ ವಿಷಯದಲ್ಲಿ ದೀರ್ಘವಾದ ಚರ್ಚೆ ಇದ್ದರೆ, ಸರಕಾರಕ್ಕೆ ಮಾರ್ಗ ತೋರಿಸಿದಂತೆ ಆಗುತ್ತದೆ. ಅದರಿಂದ ಜನಕ್ಕೂ ಉಪಕಾರವಾಗುತ್ತದೆ. 3 ಗಂಟೆ ಇದಕ್ಕೆ ಅಲಾಟ್ ಮಾಡಿದರೆ ಒಳ್ಳೆಯದು.

Mr. SPEAKER.—If members are not willing to sit after Six O'clock and are not willing to meet in the morning, what can I do ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—7 ರಿಂದ 12 ಗಂಟೆವರೆಗೆ, 2 ರಿಂದ 6 ಗಂಟೆವರೆಗೆ ಕುಳಿತು ಕೊಳ್ಳುತ್ತೇವೆ.

SHORT NOTICE QUESTIONS AND ANSWERS.

Q.—38 and 39. **Sri H. R. KESHAVA MURTHY** (Gandasi) and **Sri B. BHASKAR SHETTY** (Kaup).—

Will the Government be pleased to state :—

(*a*) whether it has come to their notice that Maharashtra Chief Minister has said in a press conference that the Centre has assured him to settle the question of Goa and Belgaum early ;

(*b*) whether any communication has been received by the Mysore Government from the Centre in this behalf ;

(*c*) if so, whether the Government has protested against that statement ?

A.—**Sri S. NIJALINGAPPA** (Chief Minister).—

(*a*) There are reports in the press to that effect.

(*b*) No

(*c*) Government are in correspondence with the Government of India regarding Goa whenever occasion demands.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಹಾರಾಷ್ಟ್ರ ಚೀಫ್ ಮಿನಿಸ್ಟರು ಮುಂದಿನ ಮೂರು ತಿಂಗಳೊಳಗಾಗಿ......

Sri N. O. SAMAJI.—Point of Order (raised in Marathi) :

Mr. SPEAKER.—"vartha" is not a speech. It is a supplementary. He has something in his hand.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಹಾರಾಷ್ಟ್ರ ಚೀಫ್ ಮಿನಿಸ್ಟರು, ಇನ್ನು ಮೂರು ತಿಂಗಳೊಳಗಾಗಿ ಗೋವಾ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕೆಂದು ಹೇಳಿದ್ದಕ್ಕೆ ಪ್ರೈಮ್ ಮಿನಿಸ್ಟರವರು ಭರವಸೆ ಕೊಟ್ಟಿದ್ದಾರೆಂದು, ಪ್ರೆಸ್-ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ? ಈ ವಿಷಯದಲ್ಲಿ ಪ್ರೈಮ್ ಮಿನಿಸ್ಟರ ಅಭಿಪ್ರಾಯವೇನು ಎಂದು ತಿಳಿದುಕೊಳ್ಳುವುದಕ್ಕೋಸ್ಕರ ಕಮ್ಯೂನಿಕೇಶನ್ ಮಾಡಿದ್ದಾರೆಯೇ ಈ ಸರಕಾರದವರು ?

†ಶ್ರೀ ಎಸ್. ನಿಜಲಿಂಗಪ್ಪ.—ಪತ್ರಿಕೆಯಲ್ಲಿ ಬಂದಿದ್ದನ್ನು ನಂಬಿಕೊಂಡು ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಹೇಳಿಕೆ ಪ್ರೈಮ್ ಮಿನಿಸ್ಟರು ಕೊಟ್ಟಿದ್ದಾರೆಂದು ನಾನು ನಂಬುವುದಿಲ್ಲ ; ಆ ರೀತಿ ಕೊಟ್ಟಿದ್ದರೂ, ಅದು ಸರಿಯಲ್ಲ. ಇದು ಸರಕಾರದ ಸ್ಪಷ್ಟ ಅಭಿಪ್ರಾಯ.

Sri S. M. KRISHNA.—Has it come to the notice of the Government that the prevailing impression both within and outside the State has been that the stand taken by the Chief Minister of Mysore with reference to Goa question is a weak one ?

Sri S. NIJALINGAPPA.—It is only imagination of the member.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಗೋವಾ ಮೈಸೂರಿಗೆ ಸೇರಬೇಕು ಎಂಬ ವಿಷಯವಾಗಿ ನೀವು ಮೈಸೂರಿನ ನಿಲುವನ್ನು ಪುಷ್ಟೀಕರಿಸುವುದಕ್ಕೆ ಏನಾದರೂ ದೆಹಲಿಗೆ ಹೋಗಿ, ಕೇಂದ್ರ ಸರಕಾರಕ್ಕೆ ಅಂಕಿ ಅಂಶಗಳನ್ನು ಇದರ ಸಂಬಂಧದಲ್ಲಿ ಒದಗಿಸಿಕೊಡಲು ಪ್ರಯತ್ನ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಬಗ್ಗೆ ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೋ ಅದನ್ನು ಕೇಂದ್ರಕ್ಕೆ ತಿಳಿಸಿದ್ದೇನೆ. ನಾನೂ ಹೇಳಿದ್ದೇನೆ. ಅವರಿಗೆ ಗೊತ್ತಿದೆ. ಅದಕ್ಕಿಂತಲೂ ಹೆಚ್ಚಿಗೆ ಏನೂ ಮಾಡುವುದಕ್ಕಾಗುವದಿಲ್ಲ.

Sri N. O. SAMAJI.—Marathi.

Mr. SPEAKER.—The Resolution is passed by this House.

ಶ್ರೀ ಎಸ್. ನಿಜಲಿಂಗಪ್ಪ.—ಗೋವಾ ಮೈಸೂರಿಗೆ ಸೇರಬೇಕೆಂಬುದು ಹಳೆಯದು. ಹಳೆಯ ಗೋವಾ ಮೈಸೂರಿಗೆ ಸೇರಿತ್ತು ಮೊದಲು. ಆದ್ದರಿಂದ, ಅದು ನ್ಯಾಯವಾಗಿ ಯಾರಿಗೆ ಬರಬೇಕೆಂದು ಪುನಃ ಹೇಳಬೇಕಾಗಿಲ್ಲ. ಅದನ್ನು ಎಲ್ಲಿ ಹೇಳಬೇಕೋ ಅಲ್ಲಿ ಹೇಳುತ್ತಾ ಬಂದಿದ್ದೇವೆ. ಈಗ ಮಹಾರಾಷ್ಟ್ರದವರು ತಮಗೆ ಅದು ಬರಬೇಕೆಂದು ಗಲಾಟೆ ಮಾಡುತ್ತಿರುವುದರಿಂದ, ಈ ಸಮಸ್ಯೆ ಉಂಟಾಗಿದೆ, ಅಷ್ಟೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗಾಗಲೇ ಮಹಾರಾಷ್ಟ್ರ ಚೀಫ್ ಮಿನಿಸ್ಟರೂ ಹಾಗೂ ಮಹಾರಾಷ್ಟ್ರ ಕಾಂಗ್ರೆಸ್ ಪ್ರೆಸಿಡೆಂಟರೂ ಮೇ 6ನೆ ತಾರೀಖು ದೆಹಲಿಗೆ ಗೋವಾ ಸಲುವಾಗಿ ಪ್ರಯತ್ನ ಮಾಡುವುದಕ್ಕೆ ಹೋಗುವವರಿದ್ದಾರೆ. ಅದೇ ರೀತಿಯಿಂದ ನಮ್ಮ ಸರಕಾರದವರೂ ಪ್ರಯತ್ನ ಮಾಡಲಿಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಹಾರಾಷ್ಟ್ರ ಸರಕಾರದವರು ಏನೇನು ಮಾಡುತ್ತಾರೆ ಮತ್ತು ಅದರ ಮುಖ್ಯ ಮಂತ್ರಿಗಳು ಮೇ 6ನೆಯ ತಾರೀಖು ದೆಹಲಿಗೆ ಹೋಗುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ನಾವು ಏನೇನು ಮಾಡಬೇಕೊ ಅದನ್ನು ಮಾಡುತ್ತಿದ್ದೇವೆ, ಮಾಡುತ್ತೇವೆ ; ಏನೇನು ಹೇಳಬೇಕೋ, ಹೇಳುತ್ತಿದ್ದೇವೆ.

ಶ್ರೀ ಎಲ್. ಬಿ. ಬಿರ್ಜೆ.— (ಮರಾಠಿ)

ಶ್ರೀ ಎಸ್. ನಿಜಲಿಂಗಪ್ಪ.—ಅವರ ಅಭಿಪ್ರಾಯಗಳು ನನಗೆ ಗೊತ್ತಿಲ್ಲ, ಗೋವಾ ವಿಧಾನ ಸಭೆಯಲ್ಲಿ ಮಾಡಿರತಕ್ಕಂಥ ನಿರ್ಣಯ ಗೋವಾ ಜನರ ನಿರ್ಣಯವಲ್ಲ. ಅದನ್ನು ಸ್ಪಷ್ಟಪಡಿಸಿದ್ದಾರೆ. ಗವರ್ನಮೆಂಟ್ ಅದನ್ನು ಮಾಡಿದ್ದರೂ, ಜನ ಒಪ್ಪುತ್ತಾ ಇಲ್ಲ ಎಂದು ನಮಗೆ ಸ್ಪಷ್ಟವಾಗಿ ಕಂಡಿದೆ. ಆ ನಿರ್ಣಯ ನಮ್ಮ ಮೇಲೆ ಬೈಂಡಿಂಗ್ ಅಲ್ಲ. ಗೋವಾ ನಮಗೆ ಸೇರಬೇಕೆಂದು ಎಷ್ಟೋ ಸಲ ಹೇಳಿದ್ದೇವೆ. ಮಹಾರಾಷ್ಟ್ರ ಸರಕಾರದವರು ಅವರಿಗೆ ಏನು ತಿಳಿಯಿತೋ ಅದನ್ನು ಮಾಡಿದ್ದಾರೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ.—ಗೋವಾ ಜನರು ಮೈಸೂರಿಗೆ ಸೇರಬೇಕೆಂದು ಅಪೇಕ್ಷೆ ಪಡುತ್ತಾರೆ. ಆದರೆ ಮಹಾರಾಷ್ಟ್ರ ಸರಕಾರದವರು ಮುಂಬಯಿಯಿಂದ ಮಿನಿಸ್ಟರುಗಳನ್ನು ಗೋವಾಕ್ಕೆ ಕಳುಹಿಸಿ ಪ್ರಚಾರ ನಡೆಸುತ್ತಿದ್ದಾರೆ ; ಸಿನಿಮಾ ನಟನಟಿಯರನ್ನು ಕಳುಹಿಸಿ ಪ್ರಚಾರ ಮಾಡಿಸುತ್ತಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರೂ ಏನಾದರೂ ಕಾರ್ಯಕ್ರಮ ಇಟ್ಟು ಕೊಂಡಿದ್ದಾರೆಯೋ ?

Mr. SPEAKER.—How does the conduct of others arise here.

ಶ್ರೀ ಎಸ್. ನಿಜಲಿಂಗಪ್ಪ.—ಆ ಕೆಲಸ ನಾವು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೇಂದ್ರದ ರಕ್ಷಣಾಮಂತ್ರಿಗಳು ಅಂಥಾ ದೊಡ್ಡ ಹುದ್ದೆಯಲ್ಲಿದ್ದುಕೊಂಡು, ಮಹಾರಾಷ್ಟ್ರಕ್ಕೆ ಗೋವಾ ಸೇರಬೇಕು ಅಂತ ಅನೇಕ ಹೇಳಿಕೆಗಳನ್ನು ಕೊಡುತ್ತಾ ಇದ್ದಾರೆ. ಕೇಂದ್ರ ಸರಕಾರದವರು ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಏನು ಪ್ರಯತ್ನ ಮಾಡಿದ್ದೀರಿ.

ಅಧ್ಯಕ್ಷರು.—ಆಲೋಚನೆ ಮಾಡಿ, ಏನು ಬರೆಯಬೇಕೊ ಅದನ್ನು ಬರೆಯಿರಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ಮೈಸೂರು ಪ್ರತಿನಿಧಿ ಕೇಂದ್ರ ಮಂತ್ರಿಮಂಡಲದಲ್ಲಿ ಇಲ್ಲ. ಆದ್ದರಿಂದ ನಮ್ಮ voice ಅಲ್ಲಿ ಕಡಿಮೆ ಇರುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಕೇಂದ್ರ ಸರಕಾರದಲ್ಲಿ ಈ ಗೋವಾ ಪ್ರಶ್ನೆಯನ್ನು ಆತುರ ಆತುರವಾಗಿ ಮಹಾರಾಷ್ಟ್ರಕ್ಕೆ ಅನುಕೂಲವಾಗುವಂತೆ ಬಗೆಹರಿಸಿಕೊಳ್ಳಬೇಕೆಂದು ಏನೋ ಒಂದು ಒಳಸಂಚು ನಡೆಯುತ್ತಿದೆ. ಆ ಒಳಸಂಚು ಕಾರ್ಯರೂಪಕ್ಕೆ ಬಂದರೆ, ಮಹಾರಾಷ್ಟ್ರ, ಮೈಸೂರು ಸರ್ಕಾರ ಮತ್ತು ಕೇಂದ್ರ ಸರಕಾರದವರ ಮಧ್ಯೆ ಏನು ಸುಮಧುರವಾದ ಬಾಂಧವ್ಯ ಇರಬೇಕೋ, ಅದು ಇರುವುದಕ್ಕೆ ಸಾಧ್ಯವಿಲ್ಲ ಅನ್ನತಕ್ಕಂಥ ಖಚಿತವಾದ ಮಾತನ್ನು ಮೈಸೂರು ಮಂತ್ರಿಗಳು ಆಡತಕ್ಕಂಥ ಧೈರ್ಯವನ್ನು ಮಾಡುತ್ತಾರೋ ?

ಶ್ರೀ ಎಸ್. ನಿಜಲಿಂಗಪ್ಪ.—ಮೈಸೂರು ಮುಖ್ಯಮಂತ್ರಿಗಳು ಸಾಕಷ್ಟು ಧೈರ್ಯ ಮಾಡಿದ್ದಾರೆ. ಯಾವ ರೀತಿ, ಯಾವ ಕಾಲದಲ್ಲಿ ಏನು ಹೇಳಬೇಕೊ ಅದನ್ನು ಅರಿತಿದ್ದಾರೆ. ಸಿಕ್ಕಾಪಟ್ಟೆ ಮಾತನಾಡುವುದರಿಂದ ಏನು ಪ್ರಯೋಜನವಿಲ್ಲ ಅನ್ನುವುದನ್ನು ಚೆನ್ನಾಗಿ ಅರಿತಿದ್ದಾರೆ. ಅದನ್ನು ಮಹಾರಾಷ್ಟ್ರದವರೂ ತಿಳಿದುಕೊಳ್ಳಬೇಕು.

ಶ್ರೀ ಎನ್. ಓ. ಸಾಮಜಿ.—(ಮರಾಠಿಯಲ್ಲಿ ಪ್ರಶ್ನೆ)

ಶ್ರೀ ಎಸ್. ನಿಜಲಿಂಗಪ್ಪ.—ವಿಚಾರಣೆ ಕೋರ್ಟಿನಲ್ಲಿ ನಡೆಯುತ್ತಿದೆ. ಆ ವಿಚಾರದಲ್ಲಿ ನಾವು ಹೇಳತಕ್ಕದ್ದೂ ಸರಿಯಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಶ್ರೀಮತಿ ಸುಶೀಲಾಬಾಯಿ ಷಾರವರು ಈಗ ತಾನೆ ಪ್ರಶ್ನೆ ಕೇಳಿದುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಂತಹ ಪ್ರಚಾರ ಮಾಡುವುದಕ್ಕೆ ಹೋಗುವುದಿಲ್ಲ, ಎಂದು ಹೇಳಿದರು. ಶ್ರೀಮತಿ ಸುಶೀಲಾಬಾಯಿಯವರನ್ನೇ ಅಲ್ಲಿ ಪ್ರಚಾರ ಮಾಡಲು ಕಳುಹಿಸಿ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದೂ ಒಂದು ಸೂಚನೆ.

Mr. SPEAKER.—Question hour is over.

Calling Attention to a matter of urgent Public Importance under rule 63.

Sri C. R. RANGE GOWDA (Magadi).—Sir, I call the attention of the Minister for Home to the assault of a school girl by some goonda elements of Kudur Village, Magadi Taluk.

† Sri B. D. JATTI (Minister for Finance).—It is reported that on 19-3-1965 at about 11 A.M. when a girl aged 17 years was going to her school, she was wrongfully restrained by four persons and dragged to their house and assaulted with chappal and shoes, as a result of which the girl sustained injuries. The incident is reported to have taken place in the main Bazaar Street of Kudur and witnessed by many persons including the father of the girl.

The girl immediately lodged a complaint at Kudur Police Station about this incident and a case in Cr. No. 19/65 under section 341-323 I. P. C. of Kudur Police Station was taken on file and investigated. The Deputy Superintendent of Police, Channapatna, visited Kudur, made enquiries and gave instructions to put down rowdism. The investigation of the case disclosed offences under sections 354-355-342 read with 34 I. P. C. against the accused and as such the accused were arrested and interrogated, but they denied the incident. As per wound certificate, the injuries sustained by the complainant could be caused by blunt substance and they are simple in nature.

After completion of the investigation, a chargesheet was submitted to the Court of the Special First Class Magistrate, Ramanagaram, against all the accused on 15-4-1965.

Necessary protection has been given to the complainant and her relatives.

The local police has taken prompt action in this behalf and subsequently no incident has been reported.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಗೂಂಡಾಗಿರಿ ಮಾಡಿದವರ ಮೇಲೆ ಇನ್‌ವೆಸ್ಟಿಗೇಷನ್ನು ಮಾಡುವುದರಲ್ಲಿ ಪೋಲೀಸಿನವರು ವಿಳಂಬ ಮಾಡಿದುದರಿಂದಾಗಿ ಡಿ. ಐ. ಜಿ. ಯವರು ಇಲ್ಲಿಂದ ಆ ಪೋಲೀಸು ಸ್ಟೇಷನ್ನಿಗೆ ಬರೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—The matter is sub judice. Can't the member understand that by any comment by the Government or anybody the investigation gets a certain percentage of purity, or impurity? I do not want anything to be done like that. Suppose the delay is admitted, investigation gets filtered. It is sub judice. I am not allowing any discussion.

ಶ್ರೀ ಮಾದಯ್ಯ ಗೌಡ (ರಾಮನಗರ).—ಸ್ವಾಮೀ ಈ ಊರಿನಲ್ಲಿ ಶಾಂತಿ ಭಂಗ ಮಾಡಲು ಅವಕಾಶವಿಲ್ಲದಂತೆ ಪೋಲೀಸಿನವರು ಅಲ್ಲಿಗೆ ಏನಾದರೂ ಪ್ರೊಟೆಕ್ಷನ್ನನ್ನು ಕೊಟ್ಟಿದ್ದಾರೆಯೇ. ಏಕೆಂದರೆ ಈ ಊರಿನಲ್ಲಿ ಆಗಿಂದಾಗ್ಗೆ ಜಾಸ್ತಿಯಾಗಿ ಒಬ್ಬರಿಗೊಬ್ಬರಿಗೆ ವ್ಯಾಜ್ಯವಾಗುತ್ತಿದೆ, ಇದನ್ನು ನಿವಾರಣೆ ಮಾಡಲು ತಕ್ಕ ಪೋಲೀಸು ಬಂದೋಬಸ್ತು ಇದೆಯೇ ?

Sri B. D. JATTI.—I made it clear that protection is given to the girl and relatives and all other persons who are likely to be again disturbed.

ಶ್ರೀ ಕೆ. ಲಕ್ಕಪ್ಪ.—ಗೂಂಡಾಗಳು ಎಂದು ಯಾರು ಇಲ್ಲಿ ಹೇಳಿದರೋ ಅವರುಗಳಿಂದಲೇ ಪದೇ ಪದೇ ಈ ಊರಿನಲ್ಲಿ ಅನೇಕ ವ್ಯಾಜ್ಯಗಳಾಗಿ ಅವುಗಳ ವಿಚಾರಣೆ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ).

Mr. SPEAKER.—That directly affects the accused !

Sri G. V. GOWDA (Palya).—It cannot be allowed, Sir.

Mr. SPEAKER—The Hon'ble member must advise Sri K. Lakkappa off and on.

THIRTY-THIRD REPORT OF THE BUSINESS ADVISORY COMMITTEE.

Sri A. R. PANCHAGAVI (Deputy Speaker).—Sir, I beg to present the Thirty-third Report of the Business Advisory Committee.

Mr. SPEAKER.—In view of what transpired yesterday, I called an urgent meeting of the Business Advisory Committee and the Report is circulated. I suppose the House agrees with the Report. The necessity for an urgent meeting arose like this. Even in the Circular letter and the Report that was previously presented, it was mentioned that in order to facilitate the discussion on the Resolution relating to the Revenue Settlement, perhaps in response to the criticism on the Floor of the House and other matters which have been represented in various ways to the Government, that certain amendment was deemed necessary. That was mentioned more than once a few days back, not even yesterday. It was necessary not by mere mentioning, but by bringing an amending Bill. The amending Bill was published, it was introduced yesterday; it was almost with the consent that it was to be discussed. There is one further point to be borne in mind. Unless that Bill is taken, discussed and passed by this House, it cannot go to the other House. The Bill has to go to the other House for its discussion and when it gets concurrence, it has to go to higher authorities or whomsoever for assent. It has to undergo an effective discussion. Final conclusion

(MR. SPEAKER)

can take place after that. That is why the Business Advisory Committee considered deeply and decided that in to-day's business that Bill might be taken up first and after that is over, the demand made by Members in large number to admit more time for discussion of the Land Reforms Bill could also be dealt with. So, I propose to take this Bill and then allow the other Bill because Members are very anxious and I have also been feeling that such important matters must have a fuller discussion. So, the rest of the time and the whole of to-morrow will be devoted for the Land Reforms Bill only.

ಶ್ರೀ ಕೆ. ಲಕ್ಕಪ್ಪ.—ನಾನು ಈ ಅಡ್ವೈಜರಿ ಕಮಿಟಿಯವರು ತೀರ್ಮಾನ ಏನು ತೆಗೆದುಕೊಂಡಿದ್ದಾರೋ ಅದರ ಬಗ್ಗೆ ಸುಮಾರು ಒಂದು ವಾರದಿಂದ ನೋಡುತ್ತ ಬರುತ್ತಿದ್ದೇನೆ. ಸರಕಾರದವರು ಯಾವ ಒಂದು ನಿರ್ದಿಷ್ಟವಾದ ವಿಚಾರವನ್ನೂ ಈ ಸಭೆ ಮುಂದೆ ಇಡುತ್ತಿಲ್ಲ.

ಅಧ್ಯಕ್ಷರು.—ಇವೊತ್ತಿನ ಅಜೆಂಡಾವನ್ನು ಮಾನ್ಯ ಸದಸ್ಯರು ನೋಡಿದರೆ ಅದರಲ್ಲಿ ಎಲ್ಲ ಪೂರ್ತಿಯಾಗಿ ನಮೂದಾಗಿ ಬಂದಿದೆ. ಅದನ್ನು ಪೂರ್ತಿಯಾಗಿ ತೆಗೆದುಕೊಂಡು ಮುಗಿಸಿದರೆ ಅದರಲ್ಲಿ ಯಾವ ತೊಂದರೆಯೂ ಇಲ್ಲ, ಇದನ್ನು ಸರಿಯಾಗಿ ಮಾಡಬೇಕು. ಅದಕ್ಕೋಸ್ಕರವಾಗಿ ಇಲ್ಲಿ ತಂದಿರುವ ಅಡ್ವೈಜರಿ ಕಮಿಟಿಯವರ ರಿಪೋರ್ಟನ್ನು ಒಪ್ಪಬೇಕೆಂದು ಇಲ್ಲಿ ತರಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಸರಕಾರದವರು ಒಂದು ರೀತಿಯಾದ ಅಜೆಂಡಾ ಕೊಡುತ್ತಿದ್ದಾರೆ. ಅವರ ಪಾರ್ಟಿಯೊಳಗೆ ಆಗುತ್ತಿರುವ ಜಗಳಗಳಿಂದಾಗಿ ಯಾವ ಪ್ರೋಗ್ರಾಂ ಕೂಡ ಸರಿಯಾಗಿ ಬರುತ್ತಿಲ್ಲ, ಹಿಂದೆ ಇದ್ದ ಪ್ರೋಗ್ರಾಂನ್ನು ಮುಂದಕ್ಕೆ ಹಾಕುತ್ತಾರೆ. ಮುಂದೆ ಇದ್ದುದನ್ನು ಹಿಂದಕ್ಕೆ ಹಾಕುತ್ತಾರೆ. ಇವೊತ್ತಿನ ದಿವಸ ಲ್ಯಾಂಡು ರಿಫಾರಂಸ್ ಆಕ್ಟು ಬರುತ್ತದೆ ಎಂದು ನಮ್ಮಲ್ಲಿ ಕೆಲವರು ಇಲ್ಲಿ ಮಾತನಾಡಬೇಕೆಂದು ಬಂದಿದ್ದರು. ಆದರೆ ಈಗ ಲ್ಯಾಂಡ್ ರೆವೆನ್ಯೂ ಅಮೆಂಡುಮೆಂಟು ಬಿಲ್ಲಿನ ಮೇಲೆ ಮಾತನಾಡಬೇಕೆಂದು ಹೇಳಿದರೆ ಅದಕ್ಕೆ ನಾವು ತಯಾರಾಗಿಲ್ಲ ಮತ್ತು ಅದನ್ನು ಓದಿಕೊಂಡು ಬರುವುದಕ್ಕೂ ಅವಕಾಶವಾಗಲಿಲ್ಲ. ಈ ರೀತಿಯಾಗಿ ಬದಲಾವಣೆಯಾಗುತ್ತಿರುವುದರಿಂದ ಚರ್ಚೆಯಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಈ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

Sri A. R. PANCHAGAVI.—I beg to move :

"That this House agrees with the 33rd Report of the Business Advisory Committee."

Mr. SPEAKER.—Before I put it to the House I want to clarify the position.

Sri ANNARAO GANAMUKHI (Afzalpur).—Is it the opinion of the Speaker that unless this Bill is passed, the Land Revenue Act cannot be taken up or unless it becomes an Act this Bill cannot be taken up ? I do not know the difference between the two. I can very well understand that unless this becomes an Act, the resolution cannot become effective. Even if it is passed here, it will have to go to the other House, then to the Governor and then possibly to the President.

Sri B. D. JATTI.—All these matters have been thoroughly considered. The amendment before the House has to be passed and in order to tacilitate that this resolution has to be moved.

Mr. SPEAKER.— The Speaker cannot have opinions or intentions in these matters. The Speaker is concerned with arranging the Business

of the House. I am saying this because somebody mentioned to me that I am interested in Panchayat Raj Bill. I have not read it and I do not propose to do it unless it is necessary for me to assist the House. I want to wipe out the impression in the minds of members that the Speaker has any interest, intention, or association of ideas with regard to any of the Bills. All that I am concerned is that the Business before the House is transacted properly. Yesterday when the discussions were over, is was perfectly open to me to put it to the House. But because there it the Business Advisory Committee, I sommoned an emergent meeting and caused so much of incovenience to the members. They were good enough to respond to my invitation and deliberated up on the matters. As a result, I came 7 minutes late to the House and I apologised. I am only trying to observe the rules and see that there is no voilation of the rules either by me or by anybody regardless of the party to which he belongs. Sri Annarao was pleased to say that for the Bill to become law much time would be required. The Speaker is not interested in it. The member can understand things as he likes. Sri Annarao knows much better than me. He was in the Cabinet for a longer time than I.

Sri ANNARAO GANAMUKHI.—You were pleased to remark that unless this is passed, the resolution cannot be passed or its passage facilitated.

Mr. SPEAKER.—That is not my concern. My concern is that whatever is to be done, is done properly. I am going to disturb the normal schedule, that is, continuation of the discussion on the Land Reforms Bill. Sri K. Lakkappa is right in saying that he bestowed all attention on the previous Bill and he finds himself in an unhappy situation. In democracy, we have to go by the majority vote and everybody's wishes cannot be satisfied.

Sri K. LAKKAPPA.—But the minorities must be safeguarded.

Mr. SPEAKER.—It should not become a tyranny of the minority over the majority.

The question is :

"That this House agrees with the 33rd Report of the Business Advisory Committee".

The motion was adopted.

PAPERS LAID ON THE TABLE.

Sri B. D. JATTI.—I beg to lay on the Table the Appropriation Accounts of the Government of Mysore for the Year 1963-64 and the Audit Report 1965 in pursuance of Clause (2) of Article 151 of the Constitution of India.

Sri S. SIVAPPA (Shravanabelagola).—I want to know whether the report should be discussed in the House.

Mr. SPEAKER.—I have always requested the Leader of the Opposition that he should get in to touch with the Leader of the House and talk over these matters.

MYSORE LAND REVENUE (AMENDMENT) BILL, 1965.

† Sri M. V. KRISHNAPPA (Minister for Revenue).—I beg to move :

"That the Mysore Land Revenue (Amendment) Bill, 1965, be taken into consideration".

Mr. SPEAKER.—Motion moved :

"That the Mysore Land Revenue (Amendment) Bill, 1965, be taken into consideration.

†ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಮೈಸೂರು ಲ್ಯಾಂಡ್ ರೆವೆನ್ಯೂ ಆಕ್ಟಿನಲ್ಲಿ ಕಂದಾಯ ನಿಷ್ಕರ್ಷೆ ಮಾಡುವಾಗ್ಗೆ ಒಂದು ಪ್ರಿನ್ಸಿಪಲ್ ಅದರಲ್ಲಿ ನಿಷ್ಕರ್ಷೆಯಾಗಿದೆ. ಆ ಪ್ರಿನ್ಸಿಪಲ್ ಪ್ರಕಾರ ಆರೂಕಾಲು ಪರ್ಸೆಂಟ್ ಖುಷ್ಕಿ ಜಮೀನು ತರೀಜಮೀನು ಬಾಗಾಯಿತು ಜಮೀನು ಇವುಗಳಿಗೆ ಹಾಕಬೇಕೆಂದು ಅದರಲ್ಲಿದೆ. ಇದರ ಪ್ರಕಾರ ಸರ್ವೆ ಸೆಟ್ಲ್‌ಮೆಂಟ್ ಕೆಲಸ ಪೂರೈಸಿ ರಿವಿಜನ್ ಸೆಟ್ಲ್‌ಮೆಂಟ್ ರಿಪೋರ್ಟು ಸಭೆಯ ಮುಂದೆ ಇದೆ. ಈ ರಿಪೋರ್ಟಿನ ವಿಷಯಕ್ಕೆ ಐದಾರು ದಿವಸ ಮಾನ್ಯ ಸಭೆ ಕೂಲಂಕಷವಾಗಿ ಚರ್ಚೆ ನಡೆಸಿದೆ. ಈ ಮಧ್ಯೆ ಆರೂಕಾಲು ಪರ್ಸೆಂಟ್ ಪ್ರಕಾರ ಲೆಕ್ಕ ಹಾಕಿದರೆ ರೈತನಿಗೆ ಬಹಳ ಜಾಸ್ತಿಯಾಗುತ್ತದೆ ಸರ್ವೆ ಸೆಟ್ಲ್‌ಮೆಂಟಿನಲ್ಲಿ ಇರುವ ಕಂದಾಯ ಸರಕಾರ ಯೋಚನೆ ಮಾಡಿ ಆರೂ ಕಾಲು ಪರ್ಸೆಂಟು ಎಲ್ಲದಕ್ಕೂ ಹಾಕುವುದಕ್ಕಿಂತ ಆ ಬೆಳೆಗಳ ಕಷ್ಟದುಃಖ ಗಮನಕ್ಕೆ ತೆಗೆದುಕೊಂಡು ಅದರ ಪ್ರಕಾರ ಕಂದಾಯ ಹಾಕಬೇಕು ಎಂದು ಹೇಳಿ ಈ ರೆವೆನ್ಯೂ ಆಕ್ಟಿನಲ್ಲಿ ಸೂಕ್ತ ಬದಲಾವಣೆ ಮಾಡುವುದಕ್ಕೋಸರ ಈ ತಿದ್ದುಪಡಿ ತಂದಿದ್ದೇವೆ. ಇದರ ಪ್ರಕಾರ ಈಗ ಇರುವ ಆರೂಕಾಲು ಪರ್ಸೆಂಟ್ ಹೊರಟು ಹೋಗುತ್ತದೆ.

[MR. DEPUTY SPEAKER in the Chair.]

2-30 P.M.

ಎಲ್ಲ ಖುಷ್ಕಿ ಜಮೀನಿಗೂ ಶೇಕಡ ಆರೂಕಾಲು ಎಂದು ಇದ್ದುದನ್ನು ಇನ್ನು ಮುಂದೆ ಶೇಕಡ 4ಕ್ಕೆ ಇಳಿಸಲಾಗುವುದು. ಮೈಸೂರು ಸಂಸ್ಥಾನದಲ್ಲಿ 2 ಕೋಟಿ 80 ಲಕ್ಷ ಎಕರೆ ಖುಷ್ಕಿ ಜಮೀನಿದೆ. ಇದರಲ್ಲಿ ಸಾಮಾನ್ಯವಾದ ಖುಷ್ಕಿ ಜಮೀನು 2 ಕೋಟಿ 55 ಲಕ್ಷ ಎಕರೆಗಳಿವೆ. ಖುಷ್ಕಿ ಜಮೀನನ್ನು ಇಟ್ಟುಕೊಂಡಿರತಕ್ಕ ರೈತರಿಗೆ ಹೆಚ್ಚಿನ ಕಂದಾಯದ ಹೊರೆ ಆಗಬಾರದೆಂದು ಈ ಕಂದಾಯದ ರೇಟನ್ನು ಆರೂಕಾಲು ಪರ್ಸೆಂಟಿನಿಂದ 4 ಪರ್ಸೆಂಟಿಗೆ ಇಳಿಸಲಾಗಿದೆ. ಈ ಕಂದಾಯವನ್ನು ಆವರೇಜ್ ಗ್ರಾಸ್ ಇನ್‌ಕಂ ಮೇಲೆ ಹಾಕುವುದಾಗಿರುತ್ತದೆ. ಇನ್ನು ಮುಂದಕ್ಕೆ ತರೀ ಜಮೀನಿಗೂ ಹೀಗೆ ಖುಷ್ಕಿ ಕಂದಾಯವನ್ನೇ ಆಧಾರವಾಗಿಟ್ಟುಕೊಂಡು ಖುಷ್ಕಿ ಕಂದಾಯ ಮತ್ತು ಅದಕ್ಕೆ ವಾಟರ್ ರೇಟನ್ನು ಮಾತ್ರ ಹಾಕಲಾಗುವುದು. ಅದೇ ರೀತಿ ಇನ್ನು ಮುಂದಕ್ಕೆ ಈ ರೇನ್‌ಫೆಡ್ ವೆಟ್‌ಲ್ಯಾಂಡ್ ಮತ್ತು ರೇನ್‌ಫೆಡ್ ಗಾರ್ಡನ್ ಲ್ಯಾಂಡುಗಳಿಗೂ ಹೀಗೆ ಕಂದಾಯವನ್ನು ನಿಗದಿ ಮಾಡಲಾಗುವುದು. ಇಂಥ ಜಮೀನು ರಾಜ್ಯದ ಧಾರ್ವಾಡ, ಖಾನಾಪುರ, ಬೆಳಗಾಂ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿ ಜಾಸ್ತಿಯಾಗಿರುತ್ತದೆ. ಅಲ್ಲಿರತಕ್ಕ ಭೂಮಿಯಲ್ಲಿ ರೇನ್‌ಫೆಡ್ ತರೀ ಭೂಮಿಯೇ ಜಾಸ್ತಿ. ಅಲ್ಲಿ ಸರ್ಕಾರದವರೇನೂ ಕೆರೆ ಕಟ್ಟೆಗಳನ್ನು ಮಾಡಿಸಿ ಆ ಭೂಮಿಗಳಿಗೆ ನೀರನ್ನೊದಗಿಸುತ್ತಿಲ್ಲ. ಅಲ್ಲಿ ದೇವರೇ ಮಳೆಯನ್ನು ಸುರಿಸಿ ಅಲ್ಲಿ ಬೆಳೆಯಾಗುತ್ತದೆ. ಇಂಥ ಜಮೀನನ್ನೆಲ್ಲಾ ಇನ್ನು ಮುಂದಕ್ಕೆ ರೇನ್‌ಫೆಡ್ ತರಿ ಮತ್ತು ರೇನ್‌ಫೆಡ್ ಗಾರ್ಡನ್ ಲ್ಯಾಂಡುಗಳೆಂದು ನಿಗದಿ ಮಾಡಿ ಅವುಗಳಿಗೂ ಈ ಖುಷ್ಕಿ ಕಂದಾಯವನ್ನೇ ಅಂದರೆ ಶೇಕಡ 4ನ್ನೇ ಹಾಕಬೇಕೆಂದು ಹೇಳಿದೆ. ಇಂಥ ಜಮೀನು ನಮ್ಮಲ್ಲಿ ಅಂದರೆ ರೇನ್‌ಫೆಡ್

ವೆಟ್ ಜಮೀನು ಎರಡೂವರೆ ಕೋಟಿ ಎಕರೆಗಳಾಗಬಹುದು, ಇನ್ನು ರೇನ್‌ಫೆಡ್ ಗಾರ್ಡನ್, ಗಾರ್ಡನ್ ಲ್ಯಾಂಡ್ 10 ಲಕ್ಷ ಎಕರೆಗಳಾಗಬಹುದು. ಇದೆಲ್ಲವೂ ಖುಷ್ಕಿ ಜಮೀನಿಗೇ ಸೇರುತ್ತದೆ. ಈ ಭೂಮಿಗಳಿಗೂ ಮುಂದಕ್ಕೆ 4 ಪರ್ಸೆಂಟನ್ನೇ ಹಾಕಲಾಗುತ್ತದೆ. ಇದನ್ನು ಬಿಟ್ಟರೆ ಇನ್ನುಳಿದದ್ದು ಬಾಗಾಯಿತು ಜಮೀನು. ಆದರೆ ಈ ಬಾಗಾಯಿತು ಜಮೀನಿನಲ್ಲಿ ಮುಖ್ಯವಾದ ಒಂದು ವಿಚಾರವೆಂದರೆ ಆ ಕಾಫೀತೋಟಗಳು ಇದರಲ್ಲಿ ಸೇರುವುದಿಲ್ಲ. ಅದನ್ನೇ ಒಂದು ಪ್ರತ್ಯೇಕ ಕ್ಯಾಟಗರಿಯನ್ನಾಗಿ ತೆಗೆದುಕೊಂಡು ಅದಕ್ಕೆ 6 ಪರ್ಸೆಂಟನ್ನು ನಿಗದಿ ಮಾಡಿದರೆ ತೊಂದರೆಯಾಗುತ್ತದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು 2 ಲಕ್ಷ 30—40 ಸಾವಿರ ಎಕರೆಗಳಷ್ಟು ಕಾಫೀತೋಟದ ಜಮೀನಿದೆ. 10—12 ಸಾವಿರ ಎಕರೆ ಮೆಣಸನ್ನು ಬೆಳೆಯತಕ್ಕ ಭೂಮಿ ಇದೆ. ಈ ದಿವಸ ವಸೂಲಾಗತಕ್ಕ ಇನ್‌ಕಂಟ್ಯಾಕ್ಸಿನಲ್ಲಿ ಶೇಕಡ 90 ರಷ್ಟು ಭಾಗ ಈ ಕಾಫೀ ತೋಟಗಳವರಿಂದ ಬರುತ್ತಿದೆ. ಇಡೀ ಹಿಂದೂಸ್ಥಾನದಲ್ಲಿ ಪಡೆಯುತ್ತಿರುವ ಫಾರಿನ್ ಎಕ್ಸ್‌ಛೇಂಜಿನಲ್ಲಿ ಈ ಕಾಫಿ ಬೆಳೆಯಿಂದ ಅಂದರೆ ಮೈಸೂರಿನ ಕಾಫೀ ಬೆಳೆಯಿಂದ ಶೇಕಡ 80 ರಷ್ಟು ಎಕ್ಸ್‌ಛೇಂಜ್ ದೊರೆಯುತ್ತಿದೆ. ಅಂಥ ಒಂದು ಶ್ರೇಷ್ಠಸ್ಥಾನವನ್ನು ಈ ಕಾಫೀತೋಟ ಮೈಸೂರಿಗೆ ದೊರಕಿಸಿ ಕೊಟ್ಟಿದೆ. ಆದುದರಿಂದ ಇಂಥ ಒಂದು ಪರರಾಷ್ಟ್ರಗಳಿಂದ ಆದಾಯ ತರತಕ್ಕ ಬಾಬಿನ ಮೇಲೆ ಹೆಚ್ಚಿನ ಟ್ಯಾಕ್ಸನ್ನು ಹಾಕಬಾರದೆಂದು ಇದಕ್ಕೆ ಕಂದಾಯವನ್ನು ಬಹಳ ಕಡಮೆಯಾಗಿ ಹಾಕಲಾಗಿದೆ. ಮದ್ರಾಸ್ ಮತ್ತು ಕೇರಳದವರು ಈಗಾಗಲೇ ಈ ಕಾಫೀ ತೋಟಗಳು ಬಹುಮಟ್ಟಿಗೆ ಕೇವಲ ಇಳಿಜಾರು ಜಾಗದಲ್ಲಿ ಮಾತ್ರ ಬೆಳೆಯುತ್ತಿರುವುದರಿಂದ ಇವುಗಳಿಗೆ 1 ಪರ್ಸೆಂಟ್ ಕಂದಾಯ ಹಾಕಿದ್ದಾರೆ. ಆದ್ದರಿಂದ ನಾವೂ ಸಹಾ ಇಲ್ಲಿ ಇದರ ಕಂದಾಯವನ್ನು ಆರೂಕಾಲು ಪರ್ಸೆಂಟಿನಿಂದ 1 ಪರ್ಸೆಂಟಿಗೆ ಇಳಿಸಿದರೂ ಈಗ ಹಾಲಿ ಇದರಿಂದ ಏನು ಬರುತ್ತಿದೆಯೋ ಅದರ 6 ರಷ್ಟು ಹೆಚ್ಚಿಗೆ ಬರುತ್ತದೆ. ನಾವು ಈ ಹಿಂದೆ ಹೇಳಿದ್ದ ಆರೂಕಾಲು ಪರ್ಸೆಂಟ್ ಕಂದಾಯವನ್ನು 4 ಪರ್ಸೆಂಟಿಗಿಳಿಸಿದರೆ ಅನೇಕ ಭಾಗದಲ್ಲಿ ಹಾಲಿ ಕೊಡತಕ್ಕ ಕಂದಾಯಕ್ಕಿಂತ 20,30,40, ನ.ಪೈ. ಗಳಷ್ಟು ಕಂದಾಯ ಕಡಮೆಯಾಗುತ್ತದೆ. ಆದರೆ ಎಲ್ಲಿಯೋ ಕೇವಲ 1—2 ಜೋನುಗಳಲ್ಲಿ ಈಗ ಕೊಡುತ್ತಿರುವ ಕಂದಾಯಕ್ಕಿಂತ ಅಂದರೆ ಒಂದು ರೂಪಾಯಿ ಇರತಕ್ಕ ಕಡೆ ಒಂದೂವರೆ ರೂಪಾಯಿ ಕೊಡಬೇಕಾಗಿ ಬರಬಹುದು...

ಕೆಲವು ಮಾನ್ಯ ಸದಸ್ಯರು.—ತಾವು ಹೀಗೆಲ್ಲಾ ಜನರನ್ನು ಮಿಸ್‌ಲೀಡ್ ಮಾಡಬಾರದು.

ಶ್ರೀ ಎಂ. ವಿ. ಕೃಷ್ಣಪ್ಪ.—ಹೀಗೆ ನಾವು ಆ ಆರೂಕಾಲು ಪರ್ಸೆಂಟಿದ್ದುದನ್ನು ಈಗ 4ಪರ್ಸೆಂಟಿಗ್ಗಿಳಿಸುವುದರಿಂದ ಅನೇಕರಿಗೆ ಈಗ ಕೊಡತಕ್ಕ ಕಂದಾಯಕ್ಕಿಂತ ಬಹಳ ಕಡಮೆ ಕಂದಾಯ ವಾಗುತ್ತದೆ. ಇದರಲ್ಲಿ ಯಾರನ್ನು ಮಿಸ್‌ಲೀಡ್ ಮಾಡತಕ್ಕ ಪ್ರಮೇಯವಿಲ್ಲ. ಅನಿವಾರ್ಯವಾಗಿ ಕೆಲವರು ಒಂದು ರೂಪಾಯಿ ಕೊಡತಕ್ಕ ಕಡೆ ಒಂದೂಕಾಲೂ ಅಥವಾ ಒಂದುವರೆ ರೂಪಾಯಿ ಕೊಡಬೇಕಾಗುವುದು. ಆದರೆ ಇಲ್ಲಿಯವರೆಗೂ ಕೊಡುತ್ತಿದ್ದುದಕ್ಕಿಂತ ಭಾಗದ ಜನರು ಕಂದಾಯದಲ್ಲಿ ಬಹುಕಡಮೆ ಕೊಡುತ್ತಾರೆ. ಅಂಥ ನಿದರ್ಶನಗಳು ಬಹು ಜಾಸ್ತಿ ಇರುತ್ತವೆ. ಆದುದರಿಂದ ಇದನ್ನು ತಾವು ಕಂದಾಯವನ್ನು ಹೆಚ್ಚಿಸತಕ್ಕ ಮಸೂದೆಯೆಂದು ಕರೆಯುವುದು ಸಾಧುವಾದ್ದಲ್ಲ. ಇದನ್ನು ತಾವು ಇನ್ನು ಮುಂದೆ ಕಂದಾಯವನ್ನು ಕಡಮೆ ಮಾಡತಕ್ಕ ಮಸೂದೆ ಎಂದು ನಾಮಾಂಕಿತ ಇಡಬೇಕು ಎಂದು ಹೇಳುತ್ತೇನೆ. ಮುಂದೆ ಈ ಬಿಲ್ಲನ್ನು ಸಭೆಯ ಮುಂದೆ ತಂದಾಗ ನಾನು ಪ್ರತಿಯೊಂದು ಜೋನಿನ ಪ್ರತಿಯೊಂದು ದರ್ಜೆಯ ಭೂಮಿಯ ವಿಚಾರವನ್ನೂ ವಿವರವಾಗಿ ತಿಳಿಸುತ್ತೇನೆ. ಹಾಲಿ ಕೊಡತಕ್ಕ ಖುಷ್ಕಿ ಕಂದಾಯವೆಷ್ಟು, ಭಾಗಾಯಿತು ಕಂದಾಯವೆಷ್ಟು, ಪ್ಲಾಂಟೇಷನ್‌ಗಳ ಬಗ್ಗೆ ಕೊಡುತ್ತಿರುವ ಕಂದಾಯವೆಷ್ಟು ಮುಂದೂ ಈ ರಿವಿಜನ್ ಸೆಟಲ್‌ಮೆಂಟ್ ಪ್ರಕಾರ ಹೊಸದಾಗಿ ಕೊಡಬೇಕಾದ ಕಂದಾಯವೆಷ್ಟು ಎಂಬುದನ್ನು ವಿವರವಾಗಿ ಎಲ್ಲವನ್ನೂ ತಿಳಿಸುತ್ತೇನೆ. ಅಷ್ಟೇ ಅಲ್ಲ ಆ ಬಗ್ಗೆ ಒಂದು ಅಚ್ಚಾದ ಪುಸ್ತಕವನ್ನೇ ತಮ್ಮೆಲ್ಲರಿಗೂ ಒದಗಿಸಲಾಗುವುದು. ಮುಂದೆ ಈ ರೆಸಲ್ಯೂಷನ್ ಬರುತ್ತದೆ, ಆಗ ವಿವರಗಳನ್ನು ತಿಳಿಸುವೆನು. ಈಗ ಹಾಕಬೇಕೆಂದಿದ್ದ ಆರೂಕಾಲು ಪರ್ಸೆಂಟನ್ನು ತಪ್ಪಿಸಿದ್ದರಿಂದ ರಾಜ್ಯದ ಅನೇಕ ಭಾಗಗಳಲ್ಲಿರತಕ್ಕ ರೈತರಿಗೆ, ಅದರಲ್ಲೂ ಮುಖ್ಯವಾಗಿ ಮಲೆನಾಡಿನಲ್ಲಿರತಕ್ಕ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಮಲೆನಾಡಿನಲ್ಲಿರತಕ್ಕ ಜನರು ಅಲ್ಲಿ ಬೆಳೆಯನ್ನು ತೆಗೆಯಬೇಕಾಗಿದ್ದರೆ ಅವರಿಗೆ ಬಹಳ ಕಷ್ಟವಿದೆ. ಅಲ್ಲಿ ಭತ್ತದ ಬೆಳೆಯನ್ನು ತೆಗೆಯಬೇಕಾಗಿದ್ದರೂ ಅಲ್ಲಿ ಅವರು ಮೃಗಗಳ ಕಾಟವನ್ನು ತಪ್ಪಿಸಲು ಮಂಚಿಗೆಗಳನ್ನು ಹಾಕಿಕೊಂಡು ರಾತ್ರಿಯೆಲ್ಲಾ ಕಾವಲು ಕಾಯಬೇಕಾಗಿದೆ. ಆದ್ದರಿಂದ ಮಲೆನಾಡಿನ ಜನರಿಗೆ ಈ ವಿಚಾರದಲ್ಲಿ ಒಂದು ಹೆಚ್ಚಿನ ರಿಲೀಫ್ ಸಿಗಬೇಕೆಂದು ಕೆಲವು ಭೂಮಿಗೆ 4 ಪರ್ಸೆಂಟನ್ನೂ ಇನ್ನು ಕೆಲವಕ್ಕೆ ಒಂದು ಪರ್ಸೆಂಟನ್ನೂ ಹಾಕಬೇಕೆಂದಿದ್ದೇವೆ.

ಇದರಲ್ಲಿರತಕ್ಕ ಇನ್ನೊಂದು ವಿಚಾರವೇನೆಂದರೆ: ಇದನ್ನು ಹಿಂದೆ ರೆಜಲ್ಯೂಷನ್ ಪಾಸಾದ ಮಾರನೇ ವರ್ಷದಿಂದ ಜಾರಿಗೆ ತರಬೇಕೆಂದಿತ್ತು. ಆದರೆ ಅದನ್ನೂ ಕೂಡ ಈಗ ಬದಲಾವಣೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಮಾಡಿದ್ದೇವೆ. ಹಾಗೆ ಇದನ್ನು ನಿಧಾನ ಮಾಡುವುದು ಸರಿಯಲ್ಲ, ಈ ರೆಸಲ್ಯೂಷನ್ ಪಾಸಾದ ವರ್ಷವೇ ಜಾರಿಗೆ ತರಬೇಕೆಂದು ತಿದ್ದುಪಡಿ ಮಾಡಿದ್ದೇವೆ. ಆದರೆ ಈ ವರ್ಷ ಮಾತ್ರ ಇದು ಜಾರಿಗೆ ಬರುವುದಿಲ್ಲ. ಇದು 1965—66 ರಿಂದ ಜಾರಿಗೆ ಬರುತ್ತದೆ.

ರೆವಿನ್ಯೂ ಇಯರ್ ಜುಲೈ ಇಂದ ಜೂನ್‌ವರೆಗೆ, ನಾಳೆ ಜುಲೈನಿಂದ ಶುರುವಾಗುತ್ತದೆ, ಆದರೆ ವಸೂಲಿ 66ರಲ್ಲೇ ಜನವರಿಯಿಂದ ಆಗುತ್ತದೆ. ಮತ್ತು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹಿಂದಿನ ಆಕ್ಟ್‌ನಲ್ಲಿ ಕೆಲವು ನ್ಯೂನತೆಗಳು ಇದ್ದವು ಅವನ್ನು ಎಂದರೆ ಪ್ರಿಂಟಿಂಗ್ ತಪ್ಪುಗಳು, ವ್ಯಾಕರಣದ ತಪ್ಪುಗಳು ಮತ್ತು ಅದಕ್ಕೆ ತತ್ಸಂಬಂಧವಾದ ತಪ್ಪುಗಳು ಯಾವು ಯಾವುವು ಇದ್ದವೋ ಅಂತಹ ಚಿಕ್ಕ ತಿದ್ದುಪಡಿಗಳನ್ನು ಇದರಲ್ಲಿ ತಂದಿದ್ದೇವೆ, ಇದನ್ನು ಮಾನ್ಯ ಸಭೆಯವರು ಒಪ್ಪಿಕೊಂಡು ಈ ಕಂದಾಯವನ್ನು ಕಡಿಮೆ ಮಾಡುವ ಬಿಲ್ಲಿಗೆ ತಮ್ಮ ಪೂರ್ಣ ಸಹಕಾರವನ್ನು ಕೊಡುತ್ತಾರೆ ಎಂದು ನಂಬಿದ್ದೇನೆ.

ಶ್ರೀ ಜಿ. ವಿ. ಗೌಡ.—ಬಾವಿ ನೀರಿನ ಬಾಗಾಯ್ತುಗೆ ಹೇಗೆ ಆಗುತ್ತದೆ?

† ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಂತ ಖರ್ಚಿನಿಂದ ಹಾಕಿಸಿಕೊಂಡು ಇರತಕ್ಕ ಸ್ಥಳದಲ್ಲಿ ಖುಷ್ಕಿ ಜಮೀನು ಇದ್ದರೆ ಅದಕ್ಕೆ ಹೆಚ್ಚು ಹಾಕುವುದು ದರ್ಮ ಅಲ್ಲ, ಆ ರೀತಿ ಹಾಕಿಯೂ ಕೂಡ ಇಲ್ಲ. 30 ವರ್ಷ ಏನೂ ಹೆಚ್ಚು ಕಂದಾಯ ಕೊಡುವುದಿಲ್ಲ. ಅವನ ಹುಟ್ಟುವಳಿಮೇಲೆ ಕೊಡುತ್ತಾ ಹೋಗುತ್ತಾನೆ, ಅದು ಖುಷ್ಕಿ ಕಂದಾಯವೂ ಅಲ್ಲ, ಪ್ಲಾಂಟೇಷನ್ ಕಂದಾಯವೂ ಅಲ್ಲ, ತರೀ ಕಂದಾಯವೂ ಅಲ್ಲ, ಬಾಗಾಯ್ತು ಕಂದಾಯ, ಅದರಲ್ಲೂಕೂಡ ಪಟಸ್ತ ಬಾಗಾಯ್ತು, ಮೋಟಸ್ತ ಬಾಗಾಯ್ತು ಅಂತ ಇದೆ. ಏತ, ಕಪಿಲೆ ಇವುಗಳ ಸಹಾಯದಿಂದ ಮಾಡುವುದಕ್ಕೆ ಮೋಟಸ್ತ ಬಾಗಾಯ್ತು ಎಂದು ಅನ್ನುತ್ತಾರೆ ಇದಕ್ಕೆ 30 ವರ್ಷ ಏನೂ ಹಾಕುವುದಿಲ್ಲ 30 ವರ್ಷ ಆದಮೇಲೆ ಸರ್ವೆ ಸೆಟಲ್‌ಮೆಂಟ್ ಆದಾಗ ಸ್ವಲ್ಪ ಹೆಚ್ಚು ಕಂದಾಯ ಹಾಕುತ್ತಾರೆ ಅಷ್ಟೆ. ಪಟಸ್ತ ಬಾಗಾಯ್ತು ಎಂದರೆ ಹರಿಯುವ ನೀರಿನಿಂದ ವ್ಯವಸಾಯ ಮಾಡತಕ್ಕದ್ದಕ್ಕೆ ಪಟಸ್ತ ಬಾಗಾಯ್ತು ಎಂದು ಅನ್ನುತ್ತಾರೆ, ಮೋಟಸ್ತ ಬಾಗಾಯ್ತು ಎಂದರೆ ಲಿಫ್ಟ್ ಇರಿಗೇಷನ್ ಅದಕ್ಕೆ ಯಾವಾಗಲೂ ಕಂದಾಯ ಕಡಿಮೆ ಇರುತ್ತದೆ.

ಶ್ರೀ ಎಸ್. ಶಿವಪ್ಪ.—ಇದು ಕಂದಾಯ ಕಡಿಮೆ ಮಾಡುವ ಮಸೂದೆ ಎಂದು ಮಾನ್ಯ ರೆವಿನ್ಯೂ ಮಿನಿಸ್ಟರು ಹೇಳಿದರು, ದಯವಿಟ್ಟು ಅವರು ಕೋಲಾರ ಜಿಲ್ಲೆಯ ಉದಾಹರಣೆಯನ್ನು ತೆಗೆದುಕೊಂಡು ಕೋಲಾರ ಜಿಲ್ಲೆಯಲ್ಲಿ ಈಗ ಎಷ್ಟು ಕಂದಾಯ ಇದೆ, ಈ ಬಿಲ್ ಇಂಟ್ರೊಡ್ಯೂಸ್ ಮಾಡಿದ್ದಾರಲ್ಲಾ ಇದರಿಂದ ಎಷ್ಟು ಕಡಿಮೆಯಾಗುತ್ತದೆ ಎಂಬುದನ್ನು ಒಂದು ಉದಾಹರಣೆಯಾಗಿ ತಿಳಿಸುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಂಗಾರಪೇಟೆ ಈ ಪ್ರದೇಶದಲ್ಲಿ ಒಂದು ರೂಪಾಯಿ ಕೊಡುತ್ತಾ ಇರುವವರು 20 ಪೈಸೆ ಮಾತ್ರ ಜಾಸ್ತಿ ಕೊಡುತ್ತಾರೆ. ಇಂಡಿವಿಜ್ಯುಯಲ್ ಆಗಿ ಇದನ್ನು ವರ್ಕ್‌ಔಟ್ ಮಾಡಿದರೆ ಕಡಿಮೆಯಾಗುತ್ತದೆ. ಬಾಗೇಪಲ್ಲಿ, ಗುಡಿಬಂಡೆ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಲು ಇಲ್ಲಿ ಒಂದು ರೂಪಾಯಿ ಕೊಡುವವನು ಒಂದೂವರೆ ರೂಪಾಯಿ ಕೊಡಬೇಕಾಗುತ್ತದೆ. ಹಿಂದೆ ಸರ್ಚಾರ್ಜ್ ಕೊಡುತ್ತಾ ಇದ್ದುದಕ್ಕಿಂತಲೂ ಕಡಿಮೆಯಾಗುತ್ತದೆ. ಅದೇ ರೀತಿ ಅನೇಕ ಜಿಲ್ಲೆಗಳಲ್ಲಿ ಕಡಿಮೆಯಾಗುತ್ತದೆ. ಆ ಜಿಲ್ಲೆ ಈ ಜಿಲ್ಲೆ ಅಂತ ಹೇಳಿ ತಾವು ಹೊಡೆದಾಡುವುದಿಲ್ಲ, ಮೊನ್ನೆ ಉಪವಾಸ ಮಾಡಿದಾಗ ಇಡೀ ಸಂಸ್ಥಾನಕ್ಕೆ ಕಂದಾಯ ಕಡಿಮೆಯಾಗಬೇಕು ಎಂದು ಹೇಳಿ ಮಾಡಿದರೇ ಹೊರತು ಒಂದೊಂದು ಜಿಲ್ಲೆಗೆ ಅಂತ ಹೇಳಿ ಮಾಡಲಿಲ್ಲವಲ್ಲ!

† Sri K. LAKKAPPA.—Sir, I rise to a point of order. The Hon'ble Minister has no right to introduce the Mysore Land Reforms (Amendment) Bill, 1965, since it has not been published under the rules of procedure, section 64 and it has not been published in the Gazette. It has been mentioned that it has been published on 18th April 1965. It happens to be a holiday being a Sunday. Therefore, no sanctity can be attached to this Bill. Therefore, this Bill may be

withdrawn by the Hon'ble Minister and it may be published under the Rules of Procedure, clause 64. It should be duly notified in three consecutive copies of the gazette and then only it will be proper and legal.

Mr. DEPUTY SPEAKER.—The Bill has been introduced. The Minister has made the speech. It has been published in the gazette. There is no point of order.

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ರಾಜ್ಯದ ಕಂದಾಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ರೆವಿನ್ಯೂ ಆಕ್ಟ್ ತಿದ್ದುಪಡಿ ಮಸೂದೆಯನ್ನು ತೀವ್ರವಾಗಿ ನಾನು ವಿರೋಧಿಸುತ್ತಾ ಇದ್ದೇನೆ. ಇವತ್ತು ನಮ್ಮ ರೆವಿನ್ಯೂ ಮಂತ್ರಿಗಳು ಎಷ್ಟು ಚಾಕಚಕ್ಯತೆಯಿಂದ ಈ ಬಿಲ್ಲನ್ನು ಮಾಡಿದ್ದಾರೆ ಎಂಬುದನ್ನು ಈ ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಈಗತಾನೆ ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ಈ ಮಸೂದೆಯಿಂದ ಕಂದಾಯವನ್ನು ಕಡಿಮೆ ಮಾಡುತ್ತಾ ಇದ್ದೇವೆ ಎಂಬ ಅರ್ಥ ಬರತಕ್ಕ ರೀತಿಯಲ್ಲಿ ಈ ಮಸೂದೆಯನ್ನು ಈ ಸಭೆಯಲ್ಲಿ ಮಂಡನೆ ಮಾಡಿದ್ದಾರೆ. ಅವರು ಹೇಳಿದ ರೀತಿಯಲ್ಲಿ ಇವೊತ್ತು ನಮ್ಮ ದೇಶದಲ್ಲಿ ಏನು ಕಂದಾಯ ಇದೆ ಅದು 50-60ರಷ್ಟೇ ಅಥವಾ ಎಷ್ಟು ಜಾಸ್ತಿಯಾಗುತ್ತದೆ ಎಂಬುದನ್ನು ಹೇಳಲಿಲ್ಲ. ಮೊದಲಿನಿಂದಲೂ ಕೂಡ ಹೇಳುತ್ತಾ ಇದ್ದೇನೆ, ಈ ರೀತಿಯಾಗಿ ಭೇದಭಾವ ಮಾಡತಕ್ಕ ಮಸೂದೆಯನ್ನು ಈ ಸಭೆಯ ಮುಂದೆ ತರಬಾರದಾಗಿತ್ತು. ಮಾನ್ಯ ಕಂದಾಯ ಸಚಿವರು ಹಳೇ ಕಾಲದ ಪಾಳೇಗಾರರ ನೀತಿಯಮೇಲೆ ಮಾಡಿದ್ದ ಕಂದಾಯದ ನೀತಿಯನ್ನು ರದ್ದು ಮಾಡಿ ಈ ದೇಶದಲ್ಲಿ ಒಂದು ಹೊಸ ರೀತಿಯ ಪದ್ಧತಿಯನ್ನು ತರುತ್ತಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೆ. ಮೊದಲೇ ನಾನು ಹೇಳಿದ್ದೆ. ನಮ್ಮ ದೇಶದಲ್ಲಿ ಈ ಕಂದಾಯ ಪದ್ಧತಿ ಏನಿದೆ ಇದು ಬಹಳ ಹಳೆಯ ಕಾಲದ ಪದ್ಧತಿ. ಇದು ಕಂದಾಚಾರದ ಹಳೇ ಕಾಲದಲ್ಲಿ ಯಾವ ತೆರಿಗೆಯೂ ಇಲ್ಲದೇ ಇರತಕ್ಕ ಕಾಲದಲ್ಲಿ ಭೂಮಿಯ ಮೇಲೆ ಬರತಕ್ಕ ಕಂದಾಯ ಒಂದನ್ನೇ ನೆಚ್ಚಿ ಸರ್ಕಾರವನ್ನು ನಡೆಸುತ್ತಾ ಇದ್ದ ಕಾಲದಲ್ಲಿ ಈ ಪದ್ಧತಿಯನ್ನು ಅಂದು ಜಾರಿಗೆ ತಂದಿದ್ದರು. ಇವತ್ತಿನ ದಿವಸ ರೈತ ನಾನಾ ರೂಪದಲ್ಲಿ ತೆರಿಗೆ ಕೊಡುತ್ತಾ ಇದ್ದಾನೆ ಅವನಮೇಲೆ ಕಂದಾಯವನ್ನು ಬೇರೆ ಬೇರೆ ರೂಪದಲ್ಲಿ ಈ ತಿದ್ದುಪಡಿ ಮುಖಾಂತರ ಕಂದಾಯವನ್ನು ಹೇರುತ್ತಾ ಇರತಕ್ಕ ಪದ್ಧತಿ ಏನಿದೆ ಇದು ಖಂಡಿತವಾಗಿಯೂ ಕೂಡ ಶಾಸ್ತ್ರೀಯವಾದದ್ದಲ್ಲ. ತೆರಿಗೆಯ ಹೊರೆಯನ್ನು ಹೊತ್ತು ಬೆನ್ನು ಮೂಳೆಯನ್ನು ಮುರಿದುಕೊಂಡಿರತಕ್ಕ ರೈತನಮೇಲೆ ಪುನಃ ಈ ಹೊರೆಯನ್ನು ಹಾಕತಕ್ಕ ನೀತಿ ಖಂಡಿತವಾಗಿಯೂ ಕೂಡ ರೈತನಿಗೆ ಕುಠಾರಪ್ರಾಯವಾಗಿದೆ ಇಂತಹ ಕುಠಾರ ಪ್ರಾಯವಾಗಿರತಕ್ಕ ಮಸೂದೆಯನ್ನು ಸರಕಾರದವರು ತರಬಾರದಾಗಿತ್ತು ಎಂದು ಇವತ್ತೂ ಕೂಡ ನಾನು ಹೇಳುತ್ತಾ ಇದ್ದೇನೆ. ರೈತನಿಗೆ ಇವತ್ತು ಆಗುತ್ತಾ ಇರತಕ್ಕ ಅನ್ಯಾಯದ ಪರಂಪರೆ ಇದು. ಈ ಘೋರವಾದ ಅನ್ಯಾಯವನ್ನು ರೈತನ ಮೇಲೆ ಹೇರುತ್ತಾ ಇದ್ದೀರಿ. ಯಾವ ಭೂಮಿಯಿಂದ ಅನ್ನವನ್ನು ಉತ್ಪಾದನೆ ಮಾಡುತ್ತಾನೋ ಆ ರೈತನಮೇಲೆ ಅವನು 100 ರೂಪಾಯಿನ ಬೆಳೆ ಬೆಳೆದರೆ 4 ರೂಪಾಯಿ ಸುಂಕವನ್ನು ಹಾಕುತ್ತೇವೆ ಎಂದು ಹೇಳುತ್ತೀರಿ. ಇದು ಯಾವ ತೆರೆಗೆಯ ಪದ್ಧತಿ ಎಂದು ಕೇಳುತ್ತೇನೆ! ಬೇರೆ ಯಾವ ಕ್ಷೇತ್ರದಲ್ಲಾಗಲಿ, ಕೈಗಾರಿಕೆಯ ಕ್ಷೇತ್ರದಲ್ಲಿ, ವಾಣಿಜ್ಯ ಕ್ಷೇತ್ರದಲ್ಲಿ ಎಲ್ಲೇ ಆಗಲಿ ನೂರು ರೂಪಾಯಿ ವ್ಯಾಪಾರ ಮಾಡಿದರೆ ನಾಲ್ಕು ರೂಪಾಯಿ ಸುಂಕವನ್ನು ಹಾಕುತ್ತಾ ಇದ್ದೀರಾ ಎಂದು ಕೇಳುತ್ತೇನೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡಿ, ದೊಡ್ಡ ದೊಡ್ಡ ಕಾರ್ಖಾನೆಯಕಾರನಾಗಿ ಎಷ್ಟೇ ಹಣ ಬೇಕಾದರೂ ಸಂಪಾದನೆ ಮಾಡಿಕೊಳ್ಳಬಹುದು. ಅವನಿಗೆ ಒಂದು ಲಿಮಿಟ್ ಕೊಡುತ್ತೀರಿ, 4-5 ಸಾವಿರ ರೂಪಾಯಿಗಳ ಒಂದು ಮಿತಿಯನ್ನು ಇಟ್ಟು ಅದರಮೇಲೆ ಸುಂಕವನ್ನು ಕೊಡಿ ಎಂದು ಕೇಳುತ್ತಾ ಇದ್ದೀರಿ. ಅದೇ ಭೂಮಿಯನ್ನು ಅವಲಂಬನೆ ಮಾಡಿರತಕ್ಕವನಿಗೆ ಮಾತ್ರ ಆ ಮಿತಿ ಇಲ್ಲ ಅವನ ನಿವ್ವಳ ಆದಾಯದಮೇಲೆ ನೂರು ರೂಪಾಯಿಗೆ ನಾಲ್ಕು ರೂಪಾಯಿ ಸುಂಕವನ್ನು ಅವನು ಕೊಡಬೇಕೆನ್ನುವುದು ಯಾವ ನೀತಿ ಎಂದು ಸರ್ಕಾರವನ್ನು ಕೇಳುತ್ತೇನೆ.

ಈ ದಿವಸ ನಮ್ಮ ಸರಕಾರದವರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದ್ದಾರೆ. ರೈತ ಉತ್ಪತ್ತಿ ಜಾಸ್ತಿ ಮಾಡಿದರೆ ಅವನ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುತ್ತೀರಿ. ಅದು ಸಾಲದೆಂದು ಈಗ ಕಂದಾಯ ಬೇರೆ ಜಾಸ್ತಿ ಮಾಡಿ ಖಜಾನೆಗೆ ಹಣ ಬರಲು ಮಾರ್ಗ ಮಾಡಿಕೊಂಡಿದ್ದೀರಿ. ಹಳೆಯ ಕಾಲದ ಈ ಮಸೂದೆಯನ್ನು ಖಂಡಿತ ತರಬಾರದಾಗಿತ್ತು. ಇದನ್ನು ಕೈಬಿಡಬೇಕೆಂದು ಪದೇ ಪದೇ ಹೇಳುತ್ತಿದ್ದೇವೆ. ಕಂದಾಯವನ್ನು ರದ್ದುಮಾಡಬೇಕೆಂದು ವಿರೋಧ ಪಕ್ಷ ಒತ್ತಾಯ ಮಾಡುತ್ತಲೇ ಇದೆ. ಈ ಕಂದಾಯವಿಲ್ಲದೆ ಸರಕಾರ ನಡೆಸುವುದಕ್ಕೆ ಸಾಧ್ಯವಿಲ್ಲವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಹಣವಿಲ್ಲದೆ ಸರಕಾರ ನಡೆಸುವುದು ಹೇಗೆ ಎಂದು ಕೇಳುತ್ತಾರೆ.

(ಶ್ರೀ ಎಸ್. ಶಿವಪ್ಪ)

ಆದರೆ ಮೊನ್ನೆ ತಾನೆ 120 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ಅಂಗೀಕಾರ ಮಾಡಿದ್ದೇವೆ. ಅದರಲ್ಲಿ ಕಂದಾಯದಿಂದ ಬರುವುದು ಸುಮಾರು 4 ಕೋಟಿ ಮಾತ್ರ. ಆ 4 ಕೋಟಿಯನ್ನು ವಸೂಲು ಮಾಡಲು ಸಿಬ್ಬಂದಿಗೇ ಒಂದು-ಒಂದೂವರೆ ಕೋಟಿ ರೂಪಾಯಿ ಬೇಕು. ಹಾಗಿರುವಾಗ ಏಕೆ ಇಷ್ಟು ಶ್ರಮಪಟ್ಟು ರೈತರಿಗೆ ಈ ಹೊರೆ ಹೇರಬೇಕು ಎಂದು ಕೇಳುತ್ತೇನೆ. ಈಗ ಆಹಾರದ ಕೊರತೆ ಇರುವುದು ಎಲ್ಲರಿಗೂ ಗೊತ್ತಿದೆ. ನಮ್ಮ ದೇಶಕ್ಕೆ ಬೇಕಾದ ಆಹಾರವನ್ನು ಹೊರ ದೇಶಗಳಿಂದ ತರಿಸುತ್ತಿದ್ದೇವೆ; ಅಮೇರಿಕಾದಿಂದ ನೂರಾರು ಕೋಟಿ ರೂಪಾಯಿಗಳ ಆಹಾರವನ್ನು ಕೊಳ್ಳುತ್ತಿದ್ದೇವೆ, ಒಂದು ದಿವಸಕ್ಕೆ ಸುಮಾರು 15 ಸಾವಿರ ಟನ್ ಗೋಧಿ ನಮ್ಮ ದೇಶಕ್ಕೆ ಅಮೇರಿಕಾದಿಂದ ಬರುತ್ತಿದೆ; ಹೀಗೆ ವರ್ಷಕ್ಕೆ ಸುಮಾರು 2–3 ಕೋಟಿ ರೂಪಾಯಿಗಳ ಆಹಾರವನ್ನು ಕೊಳ್ಳುವಾಗ ಹೆಚ್ಚು ಆಹಾರ ಬೆಳೆಯಬೇಕೆಂಬ ಕೂಗು ಎಲ್ಲಾ ಕಡೆಯೂ ಇರುವಾಗ ಯಾರು ಹೆಚ್ಚು ಬೆಳೆಯುವವರು ಎಂದು ಪ್ರಶ್ನಿಸಬೇಕಾಗಿದೆ. ಆಹಾರ ಬೆಳೆಯುವ ರೈತನಿಗೆ ಈ ದಿವಸ ಸರಿಯಾದ ಸಹಾಯ ದೊರೆಯಬೇಕು. ನಮ್ಮ ದೇಶದಲ್ಲಿ ಇಬ್ಬರು ಯೋಧರಿದ್ದಾರೆ; ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಇರುವಾಗ ಗಡಿ ಕಾಯುವ ಸೈನಿಕ ಒಬ್ಬ ಯೋಧ, ಅವನಿಗೆ ಎಲ್ಲ ವಿಧದಲ್ಲೂ ಸಹಾಯ ಮಾಡುತ್ತಿದ್ದೇವೆ, ಅವನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಯುದ್ಧ ಮುಗಿದ ಮೇಲೆ ಸೈನಿಕ ಕೆಲಸದಿಂದ ನಿವೃತ್ತನಾದ ಮೇಲೆ ಆತನಿಗೆ ಜಮೀನು, ಕೈಗಾರಿಕೆಗೆ ಸಾಲ ಮುಂತಾದ್ದನ್ನು ಕೊಡುತ್ತಿದ್ದೇವೆ. ಆತ ಕೋವಿ ಹಿಡಿದು ದೇಶವನ್ನು ಕಾಯುತ್ತಾನೆ. ಎರಡನೆಯ ಯೋಧ ಹೊಲಗದ್ದೆಗಳಲ್ಲಿ ಅನ್ನ ಉತ್ಪತ್ತಿ ಮಾಡಿ ದೇಶಕ್ಕೆ ಕೊಡುವ ರೈತ. ನೇಗಿಲೇ ಅವನ ಆಯುಧ. ಅವನಿಗೆ ಈ ದಿವಸ ಏನು ಉತ್ತೇಜನ ಕೊಟ್ಟಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ತಾವು ಯಾವಾಗ ರೈತನಿಗೆ ಹೆಚ್ಚು ಆಹಾರ ಉತ್ಪತ್ತಿ ಮಾಡು ಎಂದು ಹೇಳುತ್ತೀರೋ ಆಗ ಜನರಿಗೆ ಶಕ್ತಿ ಕೊಡುವ ಆಹಾರವನ್ನು ಬೆಳೆಯುವ ರೈತನಿಗೆ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಬದಲಾಗಿ ಜಾಸ್ತಿ ಮಾಡುತ್ತಿದ್ದೀರಿ. ಪುನಃ ನಾನು ರೆವೆನ್ಯೂ ಸಚಿವರಿಗೆ ಹೇಳುವುದು : ಧೈರ್ಯ ಮಾಡಿ ಇಡೀ ದೇಶದಲ್ಲಿ ಕಂದಾಯವನ್ನು ರದ್ದು ಮಾಡಿ ಭೂಮಿಯ ಉತ್ಪತ್ತಿ ಹೆಚ್ಚಿಸಲು ಅವಕಾಶಮಾಡಿ ಎಂದು. ಬೇರೆ ದೇಶಗಳಲ್ಲಿ ಕಂದಾಯ ಇದೆ, ಜಾಸ್ತಿ ಇದೆ ಎಂದು ನಾವೂ ಹಾಗೆ ಮಾಡಬೇಕೆಂದು ವಾದ ಮಾಡುವುದು ಬೇಡ. ಹೊಸ ದಾರಿ ನಾವು ಕಂಡುಹಿಡಿಯಬೇಕು. ಕಂದಾಯ ಹಾಕುವುದು ಹಳೇ ಕಾಲದ ನೀತಿ, ಭೂಮಿಯನ್ನೇ ಅವಲಂಬಿಸಿರುವ ರೈತನಿಗೆ ಕಂದಾಯ ಬೇಡ. ಈ ದಿವಸ ಕಾರ್ಖಾನೆಗಳಲ್ಲಿರುವವರು ಎಷ್ಟು ಬೇಕಾದರೂ ಸಂಪಾದನೆ ಮಾಡಬಹುದು, ಅವರಿಗೆ ಕಟ್ಟುನಿಟ್ಟಿಲ್ಲ, ಸುಲಭವಾಗಿ ಅವರು ಸಂಪಾದನೆ ಮಾಡಬಹುದು. ಭೂಮಿಯಿಂದ ಉತ್ಪತ್ತಿ ಮಾಡುವುದು ಕಷ್ಟಕರ ಎಂಬುದನ್ನು ಅರಿತಿದ್ದೀರಾ ? ಅಂಥ ಕಷ್ಟ ಪಡುವವನಿಗೆ ಗಂಡಾಂತರ ಪರಿಸ್ಥಿತಿಯಿರುವಾಗ, ಹೆಚ್ಚು ಅನ್ನ ಬೇಕಾಗಿರುವಾಗ ರೈತನಿಗೆ ಪ್ರೋತ್ಸಾಹ ಕೊಡುವುದು ಸರಕಾರದ ಆದ್ಯ ಕರ್ತವ್ಯ. ಆ ದೃಷ್ಟಿಯಿಂದ ಸರಕಾರ ದೊಡ್ಡ ಮನಸ್ಸು ಮಾಡಿ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕು ರೈತರಿಗೆ ಅನುಕೂಲವಾಗುವ ಮಸೂದೆಗಳನ್ನು ಸಭೆಯ ಮುಂದೆ ತಂದು ರೈತರಿಗೆ ಉತ್ತೇಜನ ನೀಡುವ ನೀತಿಯನ್ನು ಮುಂದುವರಿಸಬೇಕು. ಹಾಗೆ ಮಾಡಿದರೆ ರೈತರಿಗೆ ಒಳ್ಳೆಯ ಉಪಕಾರ ಮಾಡಿದಂತಾಗುತ್ತದೆ. ಈ ಮಸೂದೆಯಲ್ಲಿ ಒಬ್ಬರಿಗೊಂದು ನೀತಿ ಇನ್ನೊಬ್ಬರಿಗೆ ಇನ್ನೊಂದು ನೀತಿ ಇದೆ; ಶೇಕಡ ಆರೂಕಾಲು ಇದ್ದುದ್ದನ್ನು ನಾಲ್ಕಕ್ಕೆ ಇಳಿಸಿದ್ದೀರಿ. ಕಾಫಿ, ಏಲಕ್ಕಿ ಇತ್ಯಾದಿಗೆ, ಪ್ಲಾಂಟೇಷನ್ನಿಗೆ ಶೇಕಡ ಒಂದು ಎಂದು ನಮೂದಿಸಿದೆ. ಹೀಗೆ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬಂತೆ ಭಿನ್ನವಾದ ನೀತಿಯನ್ನು ಅನುಸರಿಸಿರುವಂತೆ ಕಾಣುತ್ತದೆ. ಏಕೆ ಈ ಭೇಧ ? ಪ್ಲಾಂಟೇಷನ್ನಿಗೆ 10—15 ವರ್ಷ ಕಷ್ಟ ಪಡಬೇಕು, ಅದೇರೀತಿಯ ಕಷ್ಟ ಬೇರೆ ಬೆಳೆಗಳ ಸಂಬಂಧದಲ್ಲೂ ಇದೆ, ತೆಂಗಿನ ಬೆಳೆಗೆ 10 ವರ್ಷ ಕಷ್ಟ ಪಡಬೇಕು. ಹಾಗಿರುವಾಗ ತೆಂಗು ಬೆಳೆಯುವವರಿಗೇಕೆ ರಿಯಾಯಿತಿ ಇಲ್ಲ ? ಮಾವಿನ ಗಿಡ ಹಾಕಿ ಫಲಕ್ಕೆ ಬರಬೇಕಾದರೆ 10—15 ವರ್ಷ ಬೇಕು. ಇದೇ ರೀತಿಯ ಅನೇಕ ಬೆಳೆಗಳಿವೆ. ಹೀಗಿರುವಾಗ ನೀವು ಒಂದು ರೀತಿ ವಿಂಗಡಣೆ ಮಾಡಿ ಒಂದು ರೀತಿಯಲ್ಲೇಕೆ ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದ್ದೀರಿ ! ಕೆಲವೊಂದು ಭಾಗದ ಜನರಿಗೆ ಉತ್ತೇಜನ ಕೊಟ್ಟು ಮತ್ತೆ ಕೆಲವು ಭಾಗದವರಿಗೆ ಕೊಡದಿರುವುದು ಸರಿಯಲ್ಲ, ಎಲ್ಲರಿಗೂ ಕೂಡ ಒಂದೇ ಸಮನಾದ ಅನುಕೂಲವಾಗಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್‌ಛಾರ್ಜ್ ಇದ್ದಾಗ ಬಹಳ ಜಾಸ್ತಿಯಾಗುತ್ತಿತ್ತು, ಈಗ ಕಡಮೆಯಾಗುತ್ತದೆ.

ಶ್ರೀ ಎಸ್. ಶಿವಪ್ಪ.—ತಾತ್ಕಾಲಿಕವಾಗಿ ದೇಶಕ್ಕೆ ಹಣ ಬೇಕು, ಆದುದರಿಂದ ಕೇವಲ ಒಂದು ವರ್ಷ ಮಾತ್ರ ಸರ್‌ಛಾರ್ಜ್ ಹಾಕುತ್ತೇವೆ ಎಂದು ಹೇಳಿದಾಗ ರೈತರು ಬಹಳ ಸಂತೋಷದಿಂದ

ಕೊಡಲು ಒಪ್ಪಿದರು, ಮುಂದಿನ ವರ್ಷ ವಜಾ ಮಾಡಬಹುದೆಂದು ನಂಬಿದ್ದರು. ಆದರೆ ಈಗ ಪುನಃ ಬೇರೆ ರೀತಿಯಲ್ಲಿ ಹೆಚ್ಚಿನ ಕಂದಾಯದ ಹೊರೆ ಬಂದಿರುವುದನ್ನು ನೋಡಿ ರೈತರು ಭ್ರಾಂತರಾಗಿದ್ದಾರೆ. ಮಲೆನಾಡಿನ ರೈತರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಕಾಫಿಗೆ ಒಂದು ಪರ್ಸೆಂಟ್ ಹಾಕಿದ್ದೀರಿ. ಅಡಿಕೆ ತೋಟದವರು ಮಲೆನಾಡಿನವರೇ ಅಲ್ಲವೇ? ಅವರಿಗೆ ಮತ್ತು ಇಂಥ ಇತರ ಬೆಳೆಗಾರರಿಗೇಕೆ ಆ ಸೌಲಭ್ಯ ನೀಡಿಲ್ಲ! ಈ ದಿವಸ ಭೂಮಿಯಿಂದ ಆದಾಯ ಕಡಮೆ ಇರುವಾಗ ಬಹಳ ಜಾಸ್ತಿ ಕೊಡಬೇಕಾಗುತ್ತದೆ. ಈ ಪದ್ಧತಿ ಬಿಡಿ. ಈಗ ಆದಾಯ ಅಳತೆ ಮಾಡುವವರು ಯಾರು? ಸರ್ವೆ ಸೆಟ್ಲ್‌ಮೆಂಟ್ ವರದಿಯನ್ನು 19 ಜನ ಅಧಿಕಾರಿಗಳು 19 ರೀತಿಯಲ್ಲಿ ತಯಾರಿಸಿದ್ದಾರೆ, ರಾಗಿ ಬೆಳೆಯುವ ಒಂದೇ ರೀತಿಯ ಜಮೀನಿನ ವಿಚಾರದಲ್ಲಿ ಒಂದು ಕಡೆ ಒಂದು ರೀತಿಯಲ್ಲಿ ಮತ್ತೊಂದು ಭಾಗದಲ್ಲಿ ಮತ್ತೊಂದು ರೀತಿಯಲ್ಲಿ ವರದಿಮಾಡಿದ್ದಾರೆ. ಒಬ್ಬ ಆಫೀಸರು ಒಂದು ಕಡೆ ಒಂದು ರೀತಿ ಬರೆದರೆ ಮತ್ತೊಬ್ಬ ಆಫೀಸರು ಮತ್ತೊಂದು ಕಡೆ ಮತ್ತೊಂದು ರೀತಿಯಲ್ಲಿ ಬರೆದಿದ್ದಾರೆ. ಆದುದರಿಂದ ತಮ್ಮಲ್ಲಿ ಶಾಸ್ತ್ರೀಯ ವಿಧಾನವಿಲ್ಲ, ಶೇಕಡ ನಾಲ್ಕರಷ್ಟು ವಿಧಿಸುತ್ತೇವೆಂದು ಹೇಳುವುದರಲ್ಲೂ ಕೂಡ ಶಾಸ್ತ್ರೀಯವಾದ ವಿಧಾನವಿಲ್ಲ.

Mr. DEPUTY SPEAKER.—The House will now rise and meet after half-an-hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair.]

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಕಂದಾಯದ ಈ ಮಸೂದೆಯನ್ನು ವಿರೋಧ ಮಾಡುತ್ತ ನಾನು ತಮ್ಮ ಮುಖೇನ ಕಂದಾಯ ಸಚಿವರಿಗೆ ಈ ಮಸೂದೆಯನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೆ. ತೆರಿಗೆಯ ಭಾರದಿಂದ ತನ್ನ ಜೀವನವನ್ನು ಸರಿಯಾಗಿ ನಡೆಸಲು ಮುಂದೆ ಏನು ಮಾಡಬೇಕು ಎಂದು ರೈತ ಚಿಂತಾಕ್ರಾಂತನಾಗಿದ್ದಾನೆ. ಅವನಿಗೆ ಬೇಕಾದ ಎಲ್ಲ ವಸ್ತುಗಳೂ ಕೂಡ ದುಬಾರಿಯಾಗುತ್ತಿವೆ. ಅವುಗಳ ಬೆಲೆಗಳು ವಿಷವೇರಿದ ಹಾಗೆ ಗಗನಕ್ಕೆ ಏರುತ್ತಿವೆ. ಇವತ್ತು ಭೂಮಿಯನ್ನು ಅವಲಂಬಿಸಿರತಕ್ಕ ರೈತ ತನ್ನ ಜೀವನವನ್ನು ನಡೆಸುವುದೇ ಕಷ್ಟವಾಗಿದೆ. ಭೋಗ ಜೀವನವಲ್ಲ, ಸಾಮಾನ್ಯವಾದ ಅಂತಸ್ತಿನ ಪ್ರಮಾಣದ ಜೀವನವನ್ನು ಕೂಡ ಮಾಡತಕ್ಕ ಪರಿಸ್ಥಿತಿಯಲ್ಲಿಲ್ಲವೆನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ಅದೃಷ್ಟವಶಾತ್ ನಮ್ಮ ದೇಶದ ರೈತ ವರ್ಗದಲ್ಲಿ ಸಂಘಟನೆ ಇಲ್ಲ. ಎಚ್ಚೆತ್ತ ರೈತ ಜನಾಂಗ ನಮ್ಮ ದೇಶದಲ್ಲಿಲ್ಲ. ಎಚ್ಚೆತ್ತ ಜನಾಂಗವಿದ್ದರೆ, ಸಂಘಟಿತರಾಗಿದ್ದರೆ ಅದರ ವಿಚಾರ ಬೇರೆ ರೀತಿ ಇರುತ್ತಿತ್ತು. ಇವತ್ತಿನ ದಿವಸ ಪಡಬಾರದ ಕಷ್ಟವನ್ನು ಪಡುತ್ತಿದ್ದರೂ ಕೂಡ ತನಗೆ ತಾನೇ ಸಂಕಷ್ಟವನ್ನು ನುಂಗಿಕೊಳ್ಳುತ್ತಾನೆಯೇ ಹೊರತು ಹೊರಗೆ ತೋರಿಸಿ ತನ್ನ ಕಷ್ಟಕ್ಕೆ ಪರಿಹಾರವನ್ನು ಹುಡುಕತಕ್ಕ ಮಾರ್ಗವನ್ನು ಕಾಣದೆ ಕಗ್ಗತ್ತಲೆಯಲ್ಲಿ ಹೋಗುತ್ತಿದ್ದಾನೆ. ಅವನ ಜೀವನವನ್ನು ನೋಡಿದರೆ ಅದು ಜೀವನವೇ ಎನ್ನುವಂಥ ಸ್ಥಿತಿಯಲ್ಲಿದ್ದಾನೆ. ಎಂಥ ಜೀವನವನ್ನು ಮಾಡಿಕೊಂಡಿರುತ್ತಾನೆ! ಅವನ ಮಕ್ಕಳಿಗೆ ವಿದ್ಯೆಯನ್ನು ಕೊಡತಕ್ಕ ಶಕ್ತಿ ಅವನಿಗಿಲ್ಲ. ಇಂಥ ರೈತ ತಾನು ಕಷ್ಟಪಟ್ಟು ಬೆಳೆದಂಥ ಬೆಳೆಗೆ ನಾವು ಸಂತೋಷ ಪಡದೆ ಅವನಿಗೂ ಕಂದಾಯವನ್ನು ಕೊಡು ಎಂದು ಹೇಳತಕ್ಕ ಕಾಲ ಬಂದಿದೆ. ನಾನು ಮೊದಲೇ ಹೇಳಿದ ಹಾಗೆ ಅವನು ಅಧಿಕ ಲಾಭವನ್ನು ಸಂಪಾದನೆ ಮಾಡಿದರೆ ಅವನು ತೆರಿಗೆಯನ್ನು ಕೊಡಬೇಕು. ಆದರೆ ಇವತ್ತು ಲಾಭವಿಲ್ಲದೆ ಇರತಕ್ಕ ರೈತನನ್ನೂ ಕೂಡ ಕಂದಾಯವನ್ನು ಕೊಡು ಎಂದರೆ ಇದು ಯಾವ ನೀತಿ? ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆ, ಸಮಾಜವಾದ ಸರ್ಕಾರವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳುವುದು ಬರೀ ಘೋಷಣೆಗಳಾಗಿವೆ. ನಿಜವಾಗಿ ಬಡ ರೈತನಿಗೆ ಏನೂ ಅನುಕೂಲವಾಗಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ರೈತನು ತಾನು ಜೀವನವನ್ನು ನಡೆಸಲು ಆಗದಂಥ ದುರ್ಧರಸ್ಥಿತಿಯಲ್ಲಿದ್ದಾನೆ. ಈಗಿನ ಕಂದಾಯವನ್ನು ಕೊಡತಕ್ಕ ಶಕ್ತಿ ರೈತನಿಗಿಲ್ಲ. ಈ ಕಂದಾಯದ ಮಸೂದೆಯಿಂದ ಆಗತಕ್ಕ ಭಾರವನ್ನು ರೈತನ ಮೇಲೆ ಹೇರುವುದಾದರೆ ಅನೇಕ ಬಡ ರೈತರು ತಮ್ಮ ಜಮೀನನ್ನು ಮಾರಾಟ ಮಾಡಬೇಕಾಗುತ್ತದೆ. ತಮ್ಮ ಮಕ್ಕಳನ್ನು ಓದುವುದಕ್ಕೆ ಕಳಿಸುವುದನ್ನು ಬಿಟ್ಟು ಜೀತಕ್ಕೆ ಇಡತಕ್ಕ

(ಶ್ರೀ ಎಸ್. ಶಿವಪ್ಪ)

ಪರಿಸ್ಥಿತಿ ಬರಬಹುದು. ಕಂದಾಯವನ್ನು ಕೊಡುವುದಕ್ಕೂ ಜೀತ ಇಡಬೇಕಾಗುತ್ತದೆ. ಇವತ್ತಿನ ದಿವಸ ಬಹುಶಃ ಒಂದು ರೂಪಾಯಿ ಇರತಕ್ಕ ಕಂದಾಯ ಒಂದೂವರೆ ಅಥವಾ ಎರಡು ರೂಪಾಯಿ ಆದರೂ ಕೂಡ ಕಂದಾಯದ ಮೇಲಿನ ಸೆಸ್‌ಗಳನ್ನು ಹಾಕಿದರೆ ಬಹುಶಃ ನೂರಕ್ಕೆ 300 ರಷ್ಟು 400 ರಷ್ಟು ಆಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ರೈತ ಭೂಮಿಯನ್ನು ಅವಲಂಬನೆ ಮಾಡಿರುವವರು ವ್ಯವಸಾಯವನ್ನು ಬಿಡಲಿ ಎನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆಯೇ ಅಥವಾ ರೈತರ ಬಗ್ಗೆ ಏನು ಅಭಿಪ್ರಾಯ ಇದೆ ಎನ್ನುವುದನ್ನು ನಾನು ತಿಳಿಯಬಯಸುತ್ತೇನೆ. ಕಂದಾಯ ಸಚಿವರು ರೈತರ ಮಕ್ಕಳು. ಅವರು ಮನಸ್ಸಿನಲ್ಲಿ ಮನಸ್ಸಿದ್ದು ಈ ಮಸೂದೆಯನ್ನು ತಂದಿದ್ದಾರೋ ಅಥವಾ ಸರ್ಕಾರದ ಬಲಾತ್ಕಾರದಿಂದ ತಂದಿದ್ದಾರೆಯೋ ಗೊತ್ತಿಲ್ಲ. ಇದು ಕಂದಾಯವನ್ನು ಕಡಮೆ ಮಾಡತಕ್ಕ ಮಸೂದೆ ಎಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಬರುವುದಕ್ಕೆ ಮೊದಲೇ ಬಂದಿತ್ತು. ನಾನು ಬಂದು ಅದನ್ನು ಕಡಮೆ ಮಾಡಿದೆ.

ಶ್ರೀ ಎಸ್. ಶಿವಪ್ಪ.—ಕಂದಾಯವನ್ನು ಕಡಮೆ ಮಾಡುವ ಮಸೂದೆ ಎಂದು ಹೇಳುತ್ತಾರೆ. ಆದರೆ ಈ ಮಸೂದೆಯಿಂದ ಕಂದಾಯ ಕಡಮೆ ಆಗುವುದಕ್ಕೆ ಬದಲಾಗಿ ಜಾಸ್ತಿಯಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕಂದಾಯವನ್ನು ಕಡಮೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಈ ದೇಶದಲ್ಲಿ ಕಂದಾಯ ಜಾಸ್ತಿ ಆಗಿರುವುದರಿಂದ ದಯವಿಟ್ಟು ರಾಜೀನಾಮೆ ಕೊಟ್ಟು ಈ ಕಡೆ ಬನ್ನಿ ರೈತರು ನಿಮ್ಮನ್ನು ಹೊಗಳುತ್ತಾರೆ ಎಂದು ಕಂದಾಯ ಮಂತ್ರಿಗಳಿಗೆ ಹೇಳುತ್ತೇನೆ. ರೈತರಿಗೆ ತೊಂದರೆ ಮಾಡತಕ್ಕ ಈ ಮಸೂದೆಯನ್ನು ಶಾಸನ ಸಭೆಯಿಂದ ವಾಪಸು ತೆಗೆದುಕೊಳ್ಳಲು ಉದಾರ-ಮನಸ್ಸು ಮಾಡಿ ಈಗಿನ ಕಂದಾಯ ಪದ್ಧತಿಯನ್ನು ಬದಲಾಯಿಸತಕ್ಕ ವಿಚಾರವನ್ನು ಮಾಡಿ ಕೀರ್ತಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇಲ್ಲದೆ ಹೋದರೆ, ಈಗಿರತಕ್ಕ ರೀತಿಯಲ್ಲಿ ಈ ಮಸೂದೆಯಿಂದ ನಮ್ಮ ದೇಶದ ರೈತರಿಗೆ ದೊಡ್ಡ ಕಷ್ಟವನ್ನು ತಂದೊಡ್ಡಿ ರೈತ ಜೀವನವನ್ನು ಮಾಡುವುದಕ್ಕೂ ಅವಕಾಶವಿಲ್ಲದಂತೆ ಮಾಡಿದ ಹಾಗೆ ಆಗುತ್ತದೆ. ಯಾವ ದೇಶದಲ್ಲಿ ರೈತನನ್ನು ಅನ್ನದಾತ ಎಂದು ಹೊಗಳುತ್ತೇವೆಯೋ, ಯಾವ ರೈತನ ಉದ್ಧಾರ ಮಾಡುತ್ತೇವೆಂದು ಹೇಳುತ್ತೇವೆಯೋ, ಅವನ ಕಲ್ಯಾಣ ಮಾಡತಕ್ಕ ಕಾರ್ಯದಲ್ಲಿ ನಿರತರಾಗುತ್ತೇವೆ ಎಂದು ಸಾರಿ ಸಾರಿ ಹೇಳುತ್ತೇವೆಯೋ ಅಂಥ ರೈತರ ಕಲ್ಯಾಣ ಮಾಡುವುದರಲ್ಲಿ ಆ ರೈತನನ್ನು ಕೊಲೆ ಮಾಡತಕ್ಕ ಪದ್ಧತಿ ಖಂಡಿತವಾಗಿ ದೇಶಕ್ಕೆ ಅಪಾಯಕಾರಿಯಾದ ನೀತಿ. ಇಂಥ ಅಪಾಯಕರವಾದ ಕಾನೂನುಗಳನ್ನು ಈ ಶಾಸನ ಸಭೆಯ ಕಡತದಿಂದ ಹೊರಗೆ ಹಾಕಬೇಕು, ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕು ಎಂದು ನಾನು ಕಂದಾಯ ಮಂತ್ರಿಗಳಿಗೆ ಸೂಚನೆ ಕೊಟ್ಟು ಈ ಮಸೂದೆಯನ್ನು ವಿರೋಧಿಸುತ್ತೇನೆ, ಸ್ವಾಮಿ.

† ಶ್ರೀ ಗಾಂಡಿ ವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕ ಹಿನ್ನೆಲೆ ನಮಗೆಲ್ಲ ಗೊತ್ತಾಗಿದೆ. ಮಾನ್ಯ ಕಂದಾಯ ಸಚಿವರು ಅದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ. ಈವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ ಭಾಷಣವನ್ನು ನಾನು ಕುತೂಹಲದಿಂದ ಕೇಳಿದ್ದೇನೆ. ಅವರು ಒಂದೇ ಒಂದು ವಿಚಾರವನ್ನು ಬಹಳ ಒತ್ತಾಯ ಮಾಡಿ ಸಲಹೆ ಮಾಡಿದ್ದು ಏನೆಂದರೆ, 'ಯಾರು ಹೆಚ್ಚು ಬೆಳೆಯುತ್ತಾರೆಯೋ ಅಂಥವರ ಮೇಲೆ ವ್ಯವಸಾಯ ತೆರಿಗೆಯನ್ನು ಹಾಕಬೇಕು, ಕಂದಾಯ ಪದ್ಧತಿಯನ್ನು ನಾನು ವಿರೋಧ ಮಾಡುತ್ತೇನೆ, ಅದನ್ನು ನಿರ್ಮೂಲ ಮಾಡಬೇಕು, ಕಂದಾಯ ತೆಗೆದುಕೊಳ್ಳುವುದು ಒಳ್ಳೆಯದಲ್ಲ' ಎಂದು ಮೂಲ ತತ್ವದ ಮೇಲೆ ಹೇಳುತ್ತಿದ್ದರು. ಬಹುಶಃ ನಾವು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಬಹಳ ಬಡವರಾಗಿರುವವರು, ಬಹಳ ಕಡಮೆ ಜಮೀನನ್ನು ಯಾರು ಹೊಂದಿರುತ್ತಾರೆಯೋ ಅವರಿಗೆ ಜಮೀನಿನಿಂದ ಸಾಕಷ್ಟು ಬೆಳೆ ಬರದೆ ಅವರ ಹೊಟ್ಟೆ ತುಂಬಿಕೊಳ್ಳುವುದೇ ಕಷ್ಟವಾಗಿರುವಾಗ ಕಂದಾಯವನ್ನು ಕೊಡುವುದಕ್ಕೆ ಹೇಗೆ ಸಾಧ್ಯ? ಅವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅಂಥ ಸಣ್ಣ ಸಣ್ಣ ಹಿಡುವಳಿದಾರರು ಯಾರಾದರೂ ಇದ್ದರೆ ಅವರಿಗೆ ವಿನಾಯಿತಿಯನ್ನು ಕೊಡಬೇಕು ಎಂದು ಹೇಳಿದ್ದಾರೆ, ಆ ಬಗ್ಗೆ ಈ ಮಸೂದೆಯಲ್ಲಿ ಏನೂ ಮಾಡದೆ ಇದ್ದರೂ ಸಮಯಾನುಸಾರವಾಗಿ ಮಾಡುವ ತತ್ವವನ್ನು ಮಾತ್ರ ಒಪ್ಪಿಕೊಳ್ಳಬಹುದು ಎಂದು ನಾನು ವೈಯುಕ್ತಿಕವಾಗಿ ಹೇಳುತ್ತೇನೆ. ಆದಷ್ಟು ಜಾಗ್ರತೆಯಾಗಿ ಈ ಸಣ್ಣ ಹಿಡುವಳಿದಾರರಿಗೆ ಪರಿಹಾರವನ್ನು ಕೊಡಬೇಕು ಎನ್ನುವುದನ್ನು ತಾತ್ವಿಕವಾಗಿ ಒಪ್ಪಿಕೊಳ್ಳಬಹುದು. ವರಮಾನ ತೆರಿಗೆ ಮತ್ತು ಮಾರಾಟ ತೆರಿಗೆ ಇವನ್ನು ವಿಧಿಸುವಾಗ ಸಣ್ಣ ಸಣ್ಣ ವರ್ತಕರಿಗೆ ವಿನಾಯಿತಿಯನ್ನು ಕೊಡುವಂತೆ ವ್ಯವಸಾಯ ಮಾಡುವವರಿಗೂ

ವಿನಾಯಿತಿಯನ್ನು ಕೊಡಬೇಕು ಎನ್ನುವ ಸಲಹೆ ಸಾಧುವಾಗಿದೆ. ಇದಕ್ಕೆ ಐದು ಎಕರೆ ಖುಷ್ಕಿ ಜಮೀನಿಗಿಂತ ಕೆಳಪಟ್ಟು ಇರುವವರು ಕಂದಾಯವನ್ನು ಕೊಡಬೇಕಾಗಿಲ್ಲ ಎಂಬ ವಿನಾಯಿತಿಯನ್ನು ಕೊಡಬೇಕು ಎನ್ನುವ ತತ್ವವನ್ನು ವೈಯುಕ್ತಿಕವಾಗಿ ನಾನು ಒಪ್ಪಿಕೊಳ್ಳುತ್ತೇನೆ.

ಅಂತಹ ಪರಿಸ್ಥಿತಿ ಬರಬೇಕಾದುದು ಅಗತ್ಯ. ಒಂದು ಸಮಾಜದ ರಚನೆಯಲ್ಲಿ ಈ ಜಮೀನ್ದಾರರಲ್ಲಿ ಸಣ್ಣ ಸಣ್ಣ ಹಿಡುವಳಿದಾರರಿಗೆ ರಿಯಾಯಿತಿ ಕೊಡುವ ತತ್ವವನ್ನು ನಾನು ಒಪ್ಪುತ್ತೇನೆ. ಆ ರೀತಿ ಮಾಡಿದ್ದರೆ ನಾವು ಒಪ್ಪುತ್ತಿದ್ದೆವು. ಆದರೆ ಕಂದಾಯವೇ ಇರಕೂಡದು ಎಂದು ಹೇಳುವುದಕ್ಕಾಗುವುದಿಲ್ಲ. ಮೊದಲಿನಿಂದಲೂ ಸರ್ಕಾರಕ್ಕೆ ಬೇರೆ ಯಾವ ತೆರಿಗೆಗಳೂ ಇಲ್ಲದೇ ಇದ್ದ ಕಾಲದಲ್ಲಿ ಮುಖ್ಯವಾದ ವರಮಾನ, ಮೊದಲನೆಯ ಆದಾಯವೆಂದರೆ, ಲ್ಯಾಂಡ್ ರೆವಿನ್ಯೂ ಮಾತ್ರ ಆಗಿತ್ತು. ಹಿಂದೆ ವರಮಾನ ತೆರಿಗೆಯೆಂದು ಇರಲಿಲ್ಲ. ಹಿಂದೆ ಲ್ಯಾಡ್ ರೆವಿನ್ಯೂ ಎಂದು ಏನು ಇತ್ತೋ ಅದನ್ನು ಮೂಲಭೂತವಾಗಿ ಈಗ ತೆಗೆದು ಹಾಕಬೇಕೆಂದು ಹೇಳಿದರೆ ಆಗುವುದಿಲ್ಲ. ಅದನ್ನು ಕೊಡುವ ಶಕ್ತಿ ಇರುವವರು ಕೊಡುತ್ತಾರೆ. ಆ ರೀತಿ ತೆಗೆದುಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಇದೇ ರೀತಿಯ ತತ್ವವನ್ನು ಎಲ್ಲಾ ಕಾಲದಲ್ಲೂ ಅಂಗೀಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಕಮ್ಯೂನಿಸ್ಟ್ ಕಂಟ್ರೀಸ್ ವಿಷಯವಾಗಿ ಸ್ವಲ್ಪ ಯೋಚನೆ ಮಾಡಿ ನೋಡಿ. ಅಲ್ಲಿ ಖಾಸಗಿ ಆಸ್ತಿಯೆಂದು ಇರುವುದಿಲ್ಲ. ಎಲ್ಲಾ ಸರ್ಕಾರೀ ಆಸ್ತಿಯಾಗಿರುವುದರಿಂದ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಗಾಂಜಿ ವೀರಪ್ಪ.—ಇಲ್ಲಿ ಕಮ್ಯೂನಿಸ್ಟ್ ತತ್ವ ಬೇಡ. ಭೂಕಂದಾಯ ವಜಾ ಮಾಡುವ ವ್ಯವಸ್ಥೆ ಎಲ್ಲೂ ಕಾಣುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ ಪದ್ಧತಿ ಅಮೇರಿಕಾ ದೇಶದಲ್ಲಿದೆ. ದಯವಿಟ್ಟು ನೋಡಿ.

ಶ್ರೀ ಗಾಂಜಿ ವೀರಪ್ಪ.—ಶ್ರೀಮಾನ್ ಶಿವಪ್ಪನವರು ಮತ್ತು ಅವರ ಪಕ್ಷದವರು ಸರ್ಕಾರ ನಡೆಸುವಾಗಲೂ ಅವರ ಕೈಲಿ ಇದು ಸಾಧ್ಯವಾಗುವುದಿಲ್ಲ. ಏನೋ ವಿರೋಧ ಮಾಡೋಣವೆಂದು ಮಾತನಾಡುತ್ತಾರೆ ಅಷ್ಟೆ.

ಶ್ರೀ ಎಸ್. ಶಿವಪ್ಪ.—ನಾವು ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಮೇರಿಕಾ ದೇಶದಲ್ಲಿ ಈ ವಿಷಯದ ಬಗ್ಗೆ ಯಾವ ರೀತಿ ಇದೆಯೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಂಡು ಮಾತನಾಡಲಿ.

ಶ್ರೀ ಗಾಂಜಿ ವೀರಪ್ಪ.—ಅವರ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅದು ಎಷ್ಟು ಮಾತ್ರವೂ ಶಾಸ್ತ್ರೀಯವಾದ ವಾದವಲ್ಲ. ಸಾಮಾನ್ಯವಾಗಿ ಒಬ್ಬನಿಗೆ 100 ಎಕರೆ ಖಾಸಗೀ ಜಮೀನು ಇದ್ದರೆ ಏತಕ್ಕಾಗಿ ಕಂದಾಯ ಕೊಡಬಾರದು ! ದೇಶದಲ್ಲಿ ಯಾರೂ ಕಂದಾಯ ರಿಯಾಯತಿ ಕೊಡಿ ಎಂದು ಕೇಳುವುದಿಲ್ಲ. ಅವರು ಇಂತಹ ಪ್ರೊಪಗ್ಯಾಂಡ ಮಾಡಿ ಭಾಷಣ ಮಾಡುವುದಾದರೆ ನಾನೂ ಸಹ ತಾತ್ವಿಕವಾಗಿ ಭಾಷಣ ಮಾಡಬಹುದು. ಆದರೆ ಅದು ನಿಷ್ಪ್ರಯೋಜಕ. ಮೊದಲಿನಿಂದ ಈ ವಿಚಾರದಲ್ಲಿ ಏನೊಂದು ನಿರ್ಣಯವಿತ್ತು ಅದಕ್ಕೆ ಈಗ ನಾವು ತಿದ್ದುಪಡಿಯನ್ನು ಮಂಡಿಸಿದ್ದರಲ್ಲಿ ಏನು ಕಾಣುತ್ತದೆಂದರೆ, ಅದನ್ನು ನಾನು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿ ಹೇಳುತ್ತೇನೆ. ದೇಶದಲ್ಲಿ ಅನೇಕರು ಭೂಕಂದಾಯವನ್ನು ಬಹಳ ಹೆಚ್ಚು ಮಾಡಬಾರದು ಎಂದು ಹೇಳುತ್ತಿದ್ದಂಥ ಒಂದು ಕೂಗು ಇತ್ತು. ಅದಕ್ಕಾಗಿ ಈ ಸಭೆಯ ಅಭಿಪ್ರಾಯವನ್ನು ಪಡೆಯಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇದರ ಹಿನ್ನೆಲೆ ಯೋಚನೆ ಮಾಡಿದರೆ, 30 ವರ್ಷಗಳಿಗೊಮ್ಮೆ ರಿಸೆಟಲ್‌ಮೆಂಟ್ ಏನು ಆಗಬೇಕಾಗಿತ್ತೋ ಅದು ಅನೇಕ ಕಡೆಗಳಲ್ಲಿ ಆಗಲಿಲ್ಲ. 60 ವರ್ಷಗಳ ಹಿಂದೆ ಜಮೀನಿನ ಸ್ವರೂಪ ಏನಿತ್ತೋ ಅದೇ ಈಗಲೂ ಇದೆಯೆ ? ಭೂಮಾಲೀಕರು ಇನ್ನೂ ಜಮೀನನ್ನು ಸುಧಾರಣೆ ಮಾಡಿ ನಿಷ್ಪ್ರಯೋಜಕವಾಗಿರತಕ್ಕ ಜಮೀನುಗಳನ್ನು ಚೆನ್ನಾಗಿ ಸಾಗುವಳಿ ಮಾಡುವ ಹಾಗೆ ಮಾಡಲು, ಆ ಜಮೀನುಗಳಲ್ಲಿ ಆಹಾರ ಧಾನ್ಯಗಳನ್ನು ಚೆನ್ನಾಗಿ ಬೆಳೆಯುವುದಕ್ಕಾಗಿ ಒಂದು ಯೋಜನೆಯನ್ನು ಮಾಡಿ ಆ ಪ್ರಕಾರ ಸರ್ಕಾರ ಪ್ರಯತ್ನ ಮಾಡುತ್ತಿರುವುದರಿಂದ ಅದರ ಸ್ವರೂಪ ಈಗ ಬದಲಾವಣೆಯಾಗಿದೆ ಸರ್ಕಾರದವರು ಯಾವಾಗಲೂ ಬೇಕಾದಷ್ಟು ಅನುಕೂಲಗಳನ್ನು ರೈತರಿಗೆ ಒದಗಿಸುತ್ತಾರೆ. ಯಾವ್ಯಾವ ರೀತಿಯಲ್ಲಿ ರೈತರಿಗೆ ಇತ್ತೀಚೆಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆಂಬುದು ಮಾನ್ಯ ಸದಸ್ಯರೆಲ್ಲರಿಗೂ ಈಗಾಗಲೇ ಗೊತ್ತಾಗಿದೆ. ಜಮೀನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸರ್ಕಾರದವರು ಬೇಕಾದಷ್ಟು ಸೌಲಭ್ಯಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಏನೂ ಕೊಡುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ಸರ್ಕಾರದ ಸೌಲಭ್ಯಗಳಿಂದ ಹೆಚ್ಚು ಬೆಳೆಯನ್ನು ಮಾಡಿರುವವರು ಆಹಾರಧಾನ್ಯಗಳನ್ನು ಚೆನ್ನಾಗಿ ಬೆಳೆದು ಲಾಭ ಸಂಪಾದನೆ ಮಾಡಿ ಕಂದಾಯವನ್ನು ಒಂದಕ್ಕೆರಡರಷ್ಟು ಮಾಡಬೇಕೆಂದು ಹೇಳಿದಾಗ ಅದಕ್ಕೆ ವಿರೋಧ ಮಾಡಿದರೆ ಬಹುಶಃ ಚೆನ್ನಾಗಿಲ್ಲ. ನನಗೂ ಹಲವರು ಗೊತ್ತಿದ್ದಾರೆ. ಒಂದು ತತ್ವವನ್ನು ಹೇಳುತ್ತಾರೆ...

(ಶ್ರೀ ಗಾಂಜಿ ವೀರಪ್ಪ)

ಒಂದಕ್ಕೆ 4-5-10ರಷ್ಟು ಕಂದಾಯವನ್ನು ಖುಷ್ಕಿ ಜಮೀನುಗಳಿಗೆ ಹಾಕಬೇಕೆಂದು ಅಧಿಕಾರಿಗಳು ಈಗಾಗಲೇ ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಅದು ಶಾಸ್ತ್ರೀಯವಾಗಿ ಸರಿ ಎಂದು ಹೇಳುತ್ತೇನೆ. ಅವರ ವರದಿಯಲ್ಲಿ ತಪ್ಪನ್ನು ಕಂಡು ಹಿಡಿಯುವುದಕ್ಕಾಗುವುದಿಲ್ಲ. ಸಕಾರಣಗಳನ್ನು ಕೊಟ್ಟಿದ್ದಾರೆ. ಸಾಯಿಲ್ ಕನ್ಸರ್‌ವೇಷನ್ ಮಾರ್ಕೆಟಿಂಗ್, ಕ್ರಾಪ್ ಕಂಡೀಷನ್ಸ್–ಇವೆಲ್ಲದರ ಗ್ರಾಸ್ ಇನ್‌ಕಂ ನೋಡಿಕೊಂಡು ಶಾಸ್ತ್ರೀಯವಾದ ವರದಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಆ ವರದಿಗಳನ್ನು ತಯಾರುಮಾಡತಕ್ಕ ಅಧಿಕಾರಿಗಳನ್ನು ಆಕ್ಷೇಪಣೆ ಮಾಡುವ ಹಾಗಿಲ್ಲ. ನಾವು ಶಾಸ್ತ್ರೀಯವಾಗಿ ನೋಡುವುದಾದರೆ ಅವರು ತಾತ್ವಿಕವಾಗಿ ಏನು ವರದಿಯನ್ನು ಕೊಟ್ಟಿದ್ದಾರೋ ಅದನ್ನು ಒಪ್ಪಬೇಕಾಗುತ್ತದೆ. ಅದನ್ನು ನಿರ್ಭಯವಾಗಿ ಮಾಡಿರುವುದರಿಂದ ಅದರಲ್ಲಿ ಏನೂ ತೊಂದರೆ ಇಲ್ಲ. ಈಗಿನ ಪರಿಸ್ಥಿತಿಯನ್ನು ಯೋಚನೆ ಮಾಡಬೇಕು. 2 ರೂಪಾಯಿ ಕಂದಾಯ ಕೊಡುತ್ತಿದ್ದವರು 50 ರೂಪಾಯಿಗಳನ್ನು ಕೊಡಬೇಕು, ಕಾಫಿಪ್ಲಾಂಟರುಗಳು 76ರಷ್ಟು ಅಂದರೆ, 76 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದಾಗ ಸೈಕೊಲಾಜಿಕಲ್ ಫೀಲಿಂಗ್ಸ್ ಬರುತ್ತದೆ. ಮಾಡಿರುವುದು ಶಾಸ್ತ್ರೀಯವಾಗಿ ಸರಿಯಾಗಿದ್ದರೂ ಕೂಡ ಮನುಷ್ಯನಿಗೆ ಮನಸ್ಸಿನಲ್ಲಿ ಒಂದು ವಿಚಾರ ಬರುತ್ತದೆ. ಅದನ್ನು ಯೋಚನೆ ಮಾಡಿಯೇ ಸಾರ್ವಜನಿಕರ ಅಭಿಪ್ರಾಯಕ್ಕೆ ಸರ್ಕಾರದವರು ಮನ್ನಣೆ ಕೊಡುತ್ತಾರೆ. ಈ ಸಭೆಯ ಅಭಿಪ್ರಾಯಕ್ಕೂ ಮನ್ನಣೆ ಕೊಡುತ್ತಾರೆ. ಅದಕ್ಕಾಗಿಯೇ ಸರ್ಕಾರದವರು ಈ ತಿದ್ದುಪಡಿಯನ್ನು ಮಾಡಿದ್ದಾರೆ. ಈ ತಿದ್ದುಪಡಿ ಪ್ರಕಾರ ಒಂದಕ್ಕೆ ಎರಡರಷ್ಟು ಕಂದಾಯವಾಗುತ್ತದೆ. 8-10 ಕಡೆಗಳ ವರದಿಗಳನ್ನು ನೋಡಿದರೆ ಅಲ್ಲೆಲ್ಲಾ ಇನ್ನೂ ಜಾಸ್ತಿ ಇದೆ. ಬಾಕಿ ಕಡೆಗಳಲ್ಲಿರುವುದಕ್ಕಿಂತ ಬದರೆ ಕಡೆಯಲ್ಲಿ ಬಹಳ ಕಮ್ಮಿ ಕಂದಾಯವಾಗುತ್ತದೆ. ಮೊದಲನಿಂದಲೂ ಹೈದರಾಬಾದ್ ಕರ್ಣಾಟಕದಲ್ಲಿ ಕೆಲವು ಭಾಗಗಳಿದ್ದುವು. ಅಲ್ಲಿ ಒಂದು ಆಧಾರದ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರು. ಬೊಂಬಾಯಿ ಕರ್ಣಾಟಕದಲ್ಲಿ ಆಗಿನ ಸರ್ಕಾರ ಯಾವುದೋ ಒಂದು ಆಧಾರದ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರು. ಯಾವ್ಯಾವ ಭಾಗದಲ್ಲಿ ಯಾವ್ಯಾವ ಆಧಾರದ ಮೇಲೆ ಕಂದಾಯವನ್ನು ನಿಗದಿ ಮಾಡಿದ್ದರೋ ಆಯಾ ರೀತಿಯಲ್ಲಿ ಲ್ಯಾಂಡ್ ರೆವಿನ್ಯೂ ರಿಸೆಟಲ್‌ಮೆಂಟ್ ಆಗಿದೆ. ಹೀಗೆ ಕೆಲವು ರಾಜ್ಯಗಳಲ್ಲಿ ಕೆಲ ಕೆಲವು ರೀತಿಯಾಗಿ ಮಾಡಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪ್).—ಸೌತ್ ಕೆನರಾದಲ್ಲಿ ಯಾವಾಗ ರಿಸೆಟಲ್‌ಮೆಂಟ್ ಆಗಿದೆಯೆಂಬುದು ಸರ್ಕಾರಕ್ಕೆ ಗೊತ್ತೇ ?

ಶ್ರೀ ಗಾಂಜಿ ವೀರಪ್ಪ.—ಅದನ್ನೂ ಮುಂದೆ ಹೇಳುತ್ತೇನೆ. ಬೊಂಬಾಯಿ ಮತ್ತು ಮೈಸೂರಿನಲ್ಲಿ ಕೆಲವು ಆಧಾರಗಳ ಮೇಲೆ ಕಂದಾಯ ನಿಗದಿ ಮಾಡಿದರು. ಒಂದೊಂದು ಕಡೆ ಒಂದೊಂದು ರೀತಿಯ ಆಧಾರದ ಮೇಲೆ ಮಾಡಿರುವುದಾಗಿದೆ ಮೊದಲೇ ಬಹಳ ಜಾಸ್ತಿಯಾಗಿತ್ತು ಎಂದು ಹೇಳಿದರೆ ಅದು ಸತ್ಯಕ್ಕೆ ಬಹಳ ದೂರವಾದುದು. ಆ ರೀತಿಯೇನೂ ಆಗಲಿಲ್ಲ. ಕೆಲವು ಕಡೆ ಆ ರೀತಿ ಮಾಡಿರಬಹುದು. ರಿಸೆಟಲ್‌ಮೆಂಟ್ 30 ವರ್ಷಗಳಿಗೊಮ್ಮೆ ಮಾಡುವುದು ಈಗ ಅದೇ ಒಂದು ಆಧಾರದ ಮೇಲೆ ತಯಾರು ಮಾಡಿರುವಾಗ, ಅದು ಬೇಡ, ಜಾಸ್ತಿ ಎಂದು ತಿದ್ದುಪಡಿ ತಂದಾಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಸ್ವಾಗತ ಮಾಡುವಂತೆ ನಡೆದಿಲ್ಲ. ಆದರೆ ಅವರ ಒಂದು ಉಪವಾಸಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಇವನ್ನೆಲ್ಲಾ ಮೊದಲೇ ತಿಳಿದುಕೊಂಡು ಉಪವಾಸ ಮಾಡಿದ್ದಾರಷ್ಟೆ. ಆದರೆ ಈಗ ಇದು ನಮ್ಮಿಂದಾಯಿತು, ನಮ್ಮ ಉಪವಾಸದಿಂದ ಇಂತಹ ತಿದ್ದುಪಡಿಯಾಯಿತೆಂದು ಅವರು ಸಮಾಧಾನವಾಗಿರಬಹುದು. ಮಂತ್ರಿಗಳು ಹೇಳಿದ ಹಾಗೆ ಆ ವರದಿಗಳನ್ನು ಈ ಸಭೆಯ ಮುಂದೆ ಮಂಡಿಸಿದಾಗ ಇವರಂತೆಯೇ ಸರ್ಕಾರದವರು ಮೊದಲೇ ತೀರ್ಮಾನ ಮಾಡಿದ್ದರು. ಈಗ ಈ ಸಭೆಯ ಅಭಿಪ್ರಾಯವನ್ನು ತಿಳಿದು ತಿದ್ದುಪಡಿ ಮಾಡಬೇಕೆಂದು ತಂದರೇ ವಿನಹ ಮಾನ್ಯ ಸ್ನೇಹಿತರು ಈ ಬಗ್ಗೆ ಪ್ರಚಾರ, ಚಳುವಳಿ, ಉಪವಾಸ ಮಾಡಲಿ ಎಂದೇನೂ ತರಲಿಲ್ಲ. ಸರ್ಕಾರದವರು ಆ ರೀತಿ ಏನೂ ತಿಳಿದುಕೊಂಡಿಲ್ಲ. ಅದಕ್ಕಾಗಿ ಸರ್ಕಾರ ಯಾರಿಗೂ ಹೆದರಬೇಕಾಗಿಲ್ಲ.

ಶ್ರೀ ಎಸ್. ಶಿವಪ್ಪ.—ಜನಗಳಿಗಾದರೂ ಹೆದರಿ ಮಾಡಿ.

ಶ್ರೀ ಗಾಂಜಿ ವೀರಪ್ಪ.—ಈಗ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿ. ರೈತರಿಗೆ ಇದರಿಂದ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಸರ್ಕಾರದವರು ಒಂದು ತತ್ವದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದಾರೆಯೇ ವಿನಹ ಮತ್ತೇನೂ ಇಲ್ಲ ಇದಕ್ಕಾಗಿ ಕ್ರೆಡಿಟ್ ಯಾರೂ ತೆಗೆದುಕೊಳ್ಳಬೇಕಾಗಿಲ್ಲ. ಆದ್ದರಿಂದ ಆಡಳಿತಪಕ್ಷ ಅಂತಹ ಒಂದು ತೀರ್ಮಾನಕ್ಕೆ ಬಂದು ಈಗ ಮತ್ತೊಂದು ತಿದ್ದುಪಡಿಯನ್ನು ತಂದಿದ್ದಾರೆ. ನಮಗೆ ಬಹುಮತವೇನೋ ಇದ್ದೇ ಇದೆ. ಮುಖ್ಯವಾಗಿ ರೈತರಿಗೆ ಇದರಿಂದ ಜಾಸ್ತಿ ತೆರಿಗೆ ಹೊರೆ ಆಗಬಾರದೆಂದು ಮಾಡಿದ್ದಾರೆ. ಇದರಲ್ಲಿ ಯಾರ್ಯಾರಿಗೆ ಬಹಳ ಜಾಸ್ತಿಯಾಗಿ ಹೊರೆ ಆಗುತ್ತದೆಯೋ ಎಂಬ ಅಭಿಪ್ರಾಯ ಬಂತು. ಕಾಫಿ ಮತ್ತು ಅಡಿಕೆ ಪ್ಲಾಂಟರು

ಗಳಿಗೆ ಮತ್ತು ಖುಷ್ಕಿ ಜಮೀನು ಪಡೆದಿರುವವರಿಗೆ ಸ್ವಲ್ಪ ಮಟ್ಟಿಗೆ ಶ್ರೀಮಾನ್ ಬಸಪ್ಪನವರು ಮಲ್ಬರಿ ಪ್ಲಾಂಟೇಷನ್ನವರಿಗೆ ಪ್ರೊಟೆಕ್ಷನ್ ಬೇಕೆಂದು ಹೇಳಿದರು. ಸರ್ಕಾರದವರು ಆ ವಿಚಾರ ಮಾಡಬೇಕು. ಇದನ್ನು ಗಾರ್ಡನ್‌ಆಗಿ ಟ್ರೀಟ್ ಮಾಡಿದರೆ ಏನು ತೊಂದರೆ ಬರುತ್ತದೆಂಬುದನ್ನು ನೋಡಬೇಕು. ಅದು ನ್ಯಾಯವೇ ಎಂದು ಹೇಳುತ್ತಾರೆ. ರಕ್ಷಣೆ ಎಲ್ಲೆಲ್ಲಿ ಅಗತ್ಯವಿದೆಯೋ, ಎಲ್ಲೆಲ್ಲಿ ಹಾರ್ಡ್‌ಷಿಪ್ ಇದೆಯೋ ಅದನ್ನು ರಿಮೂವ್ ಮಾಡಲು ಈ ರೀತಿ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಶೇಕಡ 4-5 ರಷ್ಟು ಅನ್ಯಾಯವಾಗುತ್ತದೆ. ಆದರೆ ಎಲ್ಲಕ್ಕೂ ಒಂದೇರೀತಿ ಮಾಡುದಕ್ಕಾಗುವುದಿಲ್ಲ. ಕಾನೂನು ರೀತ್ಯಾ ಕೆಲವು ಕಷ್ಟಗಳಿವೆ.

ಕಾನೂನಿನ ಚೌಕಟ್ಟಿನಲ್ಲಿ ಏನು ಮಾರ್ಪಾಡನ್ನು ಮಾಡಬೇಕೋ ಅದನ್ನು ಮಾಡಿ ಹೊರೆಯನ್ನು ಕಡಿಮೆ ಮಾಡಿ ಅದನ್ನು ಯಾವರೀತಿ ಮಾಡಬೇಕೆಂಬುದನ್ನು ಯೋಚನೆಮಾಡಿ ಸರ್ಕಾರದವರು ಮಾಡಿದ್ದಾರೆ. ಆದ್ದರಿಂದ ಇದನ್ನು ಈ ಮಾನ್ಯ ಸಭೆಯವರು ಒಪ್ಪಿಕೊಳ್ಳುವುದರಲ್ಲಿ ಯಾರಿಗೂ ತೊಂದರೆಯಾಗುವುದಿಲ್ಲ. ಇದನ್ನೆರಾಲ್ಲ ಲೆಕ್ಕಹಾಕಿ ನೋಡಿದ್ದರಲ್ಲಿ ಬಹುಶಃ ಖುಷ್ಕೀ ಕಂದಾಯ ದಿಂದ 80 ಲಕ್ಷ ರೂಪಾಯಿಗಳು ಜಾಸ್ತಿ ಬರುತ್ತದೆ ಎಂದು ಗೊತ್ತಾಯಿತು. ಇಡೀ ಸ್ಟೇಟಿಗೆ 80 ಲಕ್ಷ ರೂಪಾಯಿಗಳ ಖುಷ್ಕೀ ಕಂದಾಯ ಜಾಸ್ತಿಯಾಗುತ್ತದೆ ಎಂದು ಹೇಳಿದರೆ ಅದೇನೂ ಅಷ್ಟು ಹೆಚ್ಚೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ವಿರೋಧಪಕ್ಷದವರು ಇದನ್ನು ವಿರೋಧಮಾಡಿ ಇದರಿಂದ ಯಾರಿಗಾದರೂ ತೊಂದರೆಯಾಗುತ್ತದೆ ಎಂದು ಹೇಳುವ ವಾದ ನಮಗೆ ಸರಿಯಾಗಿ ಕಾಣುವುದಿಲ್ಲ. ಈಗ ಈ ಮಸೂದೆಯಲ್ಲಿ ಏನು ಅಡಕವಾಗಿದೆಯೋ ಅದರಂತೆ ಇದನ್ನು ಒಪ್ಪಿಕೊಂಡು ಮುಂದೆ ಇದನ್ನು ಕಾರ್ಯಗತ ಮಾಡುವಾಗ ಏನಾದರೂ ತೊಂದರೆಗಳು ಬಂದರೆ ಅವುಗಳನ್ನು ಪರಿಹಾರ ಮಾಡುವುದಕ್ಕೆ ಅಧಿಕಾರ ಇದೆ. ಮತ್ತು ಮುಂದೆ ಈ ಮಸೂದೆಗೆ ಸರ್ಕಾರದವರು ತಿದ್ದುಪಡಿಯನ್ನು ಮಾಡುವ ಪ್ರಸಂಗ ಬಂದಾಗ ಯಾವ ತೊಂದರೆಗಳು ಇದ್ದರೂ ಕೂಡ ಅವುಗಳನ್ನು ಪರಿಹರಿಸಿಕೊಳ್ಳಬಹುದು. ಸರ್ಕಾರದವರು ಈ ಮಸೂದೆಯನ್ನು ಬಹಳ ಸಹಾನುಭೂತಿಯಿಂದ ತಯಾರು ಮಾಡಿ ಇದನ್ನು ಈ ಸಭೆಯಮುಂದೆ ತಂದಿದ್ದಾರೆ. ಆದ್ದರಿಂದ ಈ ಮಾನ್ಯ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕು. ಸಣ್ಣ ಸಣ್ಣ ರೈತರಿಗೆ ಪ್ರೋತ್ಸಾಹವನ್ನು ಕೊಡುವುದಕ್ಕೋಸ್ಕರವಾಗಿ 5 ಎಕರೆಗಿಂತ ಕಡಿಮೆ ಇರತಕ್ಕ ಖುಷ್ಕಿ ಹಿಡುವಳಿಗಳಿಗೆ ಕಂದಾಯವನ್ನು ವಿನಾಯ್ತಿ ಕೊಡಬೇಕೆಂದು ಮಾಡಿದರೆ ಒಳ್ಳೆಯದು. ಆದ್ದರಿಂದ ಈ ಬಗ್ಗೆ ಸರ್ಕಾರದವರು ಆದಷ್ಟು ಬೇಗ ಯೋಚನೆ ಮಾಡಿ ಸೂಕ್ತ ಕಾಲದಲ್ಲಿ ಆ ಒಂದು ವಿಷಯವನ್ನು ಈ ಸಭೆಯಮುಂದೆ ತರುತ್ತಾರೆಂದು ನಂಬಿ ಈ ಮಸೂದೆಗೆ ನನ್ನ ಒಪ್ಪಿಗೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Before I call upon the next speaker I may inform that it has been agreed that we must finish this Bill by 5 O' clock. It is decided in the Business Advisory Committee and from tomorrow onwards we are taking up the Revenue Resettlement Report.

† ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಕಳೆದ 7—8 ವರ್ಷಗಳಿಂದ ಈ ರಾಜ್ಯದಲ್ಲಿ ಅತಿವೃಷ್ಟಿ ಅನಾವೃಷ್ಟಿ ಮತ್ತು ನೆರೆಹಾವಳಿಗಳಿಂದ ರೈತರು ಬಹಳವಾಗಿ ನೊಂದಿದ್ದಾರೆ. ಈ ಸಮಯದಲ್ಲಿ ರೈತರು ಹೆಚ್ಚು ಆಹಾರಧಾನ್ಯವನ್ನು ಬೆಳೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಅಂಥಾದ್ದರಲ್ಲಿ ರೈತ ಉತ್ಸಾಹದಿಂದ ಹೆಚ್ಚು ಬೆಳೆಯನ್ನು ಬೆಳೆದು ಅದಕ್ಕೆ ಒಂದು ಹೆಚ್ಚಿನದಾದ ಬೆಲೆ ಸಿಕ್ಕುತ್ತಾ ಇರುವುದರಿಂದ ಅವನಿಗೆ ಹೆಚ್ಚಿನದಾದ ಕಂದಾಯವನ್ನು ಏರಿಸಬೇಕೆಂದು ಈಗ ಸರ್ಕಾರದವರು ಏನೊಂದು ಮಸೂದೆಯನ್ನು ಈ ಸಭೆಯಮುಂದೆ ತಂದಿದ್ದಾರೆಯೋ ಅದನ್ನು ನಾನು ಬಹಳ ವಿಷಾದದಿಂದ ವಿರೋಧ ಮಾಡಬೇಕಾಗಿದೆ. ನಾನಾದರೂ ಸರ್ಕಾರದವರನ್ನು ಕಳಕಳಿಯಿಂದ ಕೇಳುತ್ತೇನೆ, ಈ ಕಂದಾಯ ಏರಿಕೆಯ ಬಗ್ಗೆ ರಾಜ್ಯಾದ್ಯಂತ ಸಾರ್ವಜನಿಕರ ಅಭಿಪ್ರಾಯವನ್ನು ಪಡೆದುಕೊಂಡು ಅದನ್ನು ಈ ಸಭೆಯಮುಂದೆ ಇಟ್ಟಿದ್ದಾರೆಯೇ ಎಂದು. ಈ ಬಗ್ಗೆ ಯಾರಾದರೂ ಸರ್ಕಾರದವರಿಗೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಸರ್ಕಾರದವರಿಗೆ ಇದ್ದಾರೆಯೇ ? ರಾಜ್ಯದ ಮೂಲೆ ಮೂಲೆಗಳಿಂದ ಈ ಕಂದಾಯ ಏರಿಕೆಯ ಬಗ್ಗೆ ಜನಗಳು ಸಾಕಷ್ಟು ವಿರೋಧವನ್ನು ಮಾಡಿರುವುದು ಸರ್ಕಾರಕ್ಕೆ ತಿಳಿದ ವಿಚಾರವೇ ಆಗಿದೆ. ನಿನ್ನೆಯ ದಿವಸ ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುತ್ತಾ ಕಾಂಗ್ರೆಸ್ ಹೈಕಮ್ಯಾಂಡ್‌ನಿಂದ ಮತ್ತು ಪ್ಲಾನಿಂಗ್ ಕಮಿಷನ್ನಿನವರಿಂದ ಒತ್ತಾಯ ಬಂದದ್ದರಿಂದ ಈ ಲ್ಯಾಂಡ್ ರಿಫಾರಮ್ಸ್ ಮಸೂದೆಯನ್ನು ಈ ಸಭೆಯ ಮುಂದೆ ಇಡಬೇಕಾಯಿತು, ರೈತರ ಕಷ್ಟಸುಖಗಳೇನೆಂಬುದು ನನಗೂ ಗೊತ್ತಿತ್ತು ಎಂದು ಹೇಳಿದರು.

Sri KADIDAL MANJAPPA.—I did not say so. I said that as desired by the Congress Party and as suggested by the Planning Commission and as recommended by the Jatti committee the Bill was drafted and introduced.

ಶ್ರೀ ಅಂದಾನಯ್ಯ (ಕುಣಿಗಲ್).—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಅಫಿಷಿಯಲ್ ಗ್ಯಾಲರಿಯಲ್ಲಿ ಕುಳಿತುಕೊಂಡಿದ್ದಾರೆ. ಅವರು ಆರೀತಿ ಕುಳಿತುಕೊಳ್ಳುವುದಕ್ಕೆ ಅವಕಾಶವಿದೆಯೇ ?

Mr. DEPUTY SPEAKER.—No member of this House should be in any gallery. (The Hon'ble member Sri Kolkebail returned to his seat from the Officials' gallery).

ಶ್ರೀ ಸಿದ್ದಯ್ಯ ಕಾಶೀಮಠ್.—ನಾನಾದರೂ ಹೇಳಿದ್ದು ಅದೇ ವಿಷಯ. ಇವೊತ್ತಿನ ದಿವಸ ಸಾಮಾನ್ಯ ರೈತನಿಗೆ ಬಹು ಕಷ್ಟ ಪರಿಸ್ಥಿತಿ ಉಂಟಾಗಿದೆ. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಈಗಾಗಲೇ ಈ ಸಭೆಯಲ್ಲಿ ನಿವೇದನೆ ಮಾಡಿಕೊಂಡಿದ್ದಾರೆ. ಈಗ ಈ ಮಸೂದೆಯಲ್ಲಿ ಹೇಳಿರುವ ಹಾಗೆ ಕಂದಾಯದ ಸ್ಟ್ಯಾಂಡರ್ಡ್ ರೇಟನ್ನು ಗೊತ್ತು ಮಾಡುವುದರಲ್ಲಿ ಮೊದಲು $6\frac{1}{4}$ ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಬೇಕೆಂದು ನಿಗದಿ ಮಾಡಿದ್ದರು ; ಈಗ ಅದನ್ನು 4 ಪರ್ಸೆಂಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೂ ಸಹ ರೈತ ಹೆಚ್ಚಿನ ಕಂದಾಯವನ್ನು ಕೊಡಬೇಕಾಗುತ್ತದೆ. ಈಗಾಗಲೇ ರೈತ ಅನೇಕ ವಿಧವಾದ ತೆರಿಗೆಗಳನ್ನು ಕೊಡುತ್ತಿದ್ದಾನೆ. ಅದಕ್ಕೋಸ್ಕರವಾಗಿ ನಾನಾದರೂ ಕೂಡ ಹೇಳುವುದೇನೆಂದರೆ, ಸಾಮಾನ್ಯವಾದ ಸಣ್ಣ ಸಣ್ಣ ಹಿಡುವಳಿದಾರರಿಗೆ ಕಂದಾಯದ ರಿಯಾಯಿತಿಯನ್ನು ತೋರಿಸಿ ಈಗ ಯಾರು ಯಾರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡುತ್ತಿದ್ದಾರೆಯೋ ಅವರಿಗೆ ಇನ್ನೂ ಹೆಚ್ಚಿನ ತೆರಿಗೆಯನ್ನು ವಿಧಿಸಬಹುದು ಎಂದು ನಾನು ಹೇಳುತ್ತೇನೆ. ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡುವವರಿಗೆ ಸರ್ಕಾರದವರು ಕೆಲವೊಂದು ರಿಯಾಯಿತಿಯನ್ನು ತೋರಿಸಿದ್ದಾರೆ. ಹೀಗಿರುವಾಗ ದೇಶದ ಬೆನ್ನುಮೂಳೆಯಾಗಿರಕ್ಕ ರೈತನಿಗೆ ರಿಯಾಯಿತಿ ತೋರಿಸಿದರೆ ಅದರಿಂದ ತಪ್ಪೇನೂ ಆಗುವುದಿಲ್ಲ.

ಆಮೇಲೆ ಮಾನ್ಯ ರೆವಿನ್ಯೂ ಮಂತ್ರಿಗಳು ಮಾತನಾಡುತ್ತಾ ಕಾಫೀ ಪ್ಲಾಂಟೇಷನ್‌ಗಳಿಗೆ ಒಂದು ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಿದರೂ ಕೂಡ ಅದು ಅವರಿಗೆ 600 ಪರ್ಸೆಂಟ್ ಕಂದಾಯ ಜಾಸ್ತಿ ಆಗುತ್ತದೆ ಎಂದು ಹೇಳಿದರು. ರೈತರು ಬೆಳೆಯತಕ್ಕ ಮಾಲಿಗೆ ಒಂದು ವರ್ಷ ಹೆಚ್ಚಿನ ಬೆಲೆ ಸಿಗುತ್ತದೆ ಒಂದು ವರ್ಷ ಹೆಚ್ಚಿನ ಬೆಲೆ ಸಿಕ್ಕುವುದಿಲ್ಲ, ಆದರೆ ಕಾಫೀ ಮುಂತಾದ ಪ್ಲಾಂಟೇಷನ್ ಬೆಳೆಗಳಿಗೆ ಯಾವಾಗಲೂ ಹೆಚ್ಚಿನ ಬೆಲೆ ಇದ್ದೇ ಇರುತ್ತದೆ. ಆದ್ದರಿಂದ ಪ್ಲಾಂಟೇಷನ್‌ಗಳಿಗೆ ಹೆಚ್ಚಿನ ಕಂದಾಯವನ್ನು ಹಾಕಿದರೂ ಕೂಡ ಅವರಿಗೇನೂ ತೊಂದರೆಯಾಗುವುದಿಲ್ಲ.

ಇನ್ನು ಕಡೆಯದಾಗಿ, ರಾಜ್ಯದ ಒಂದು ಭಾಗದಲ್ಲಿ ಒಂದು ರೀತಿಯ ಕಂದಾಯವನ್ನು ಹಾಕುವುದು ಇನ್ನೊಂದು ಭಾಗದಲ್ಲಿ ಇನ್ನೊಂದು ರೀತಿಯ ಕಂದಾಯವನ್ನು ಹಾಕುವುದು ಸರಿಯಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸಹ ಅದು ಡ್ರೈಲ್ಯಾಂಡ್ ಆಗಿರಲಿ, ವೆಟ್‌ಲ್ಯಾಂಡ್ ಆಗಿರಲಿ ಅಥವಾ ಗಾರ್ಡನ್ ಲ್ಯಾಂಡ್ ಆಗಿರಲಿ ಪ್ರತಿಯೊಂದಕ್ಕೂ ಪ್ರತಿಯೊಂದು ಕಡೆಯೂ ಸಹ ಏಕ ರೂಪವಾದ ಕಂದಾಯವನ್ನು ವಿಧಿಸಬೇಕೆಂದು ಹೇಳಿ ಈಗ ಈ ಸಭೆಯ ಮುಂದೆ ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ಈ ಹಿಂದೆ ಲ್ಯಾಂಡ್ ರೆವಿನ್ಯೂ ಸೆಟ್ಲ್‌ಮೆಂಟ್ ವರದಿಗಳಿಗೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ಸರ್ಕಾರದವರು ಈ ಸಭೆಯ ಮುಂದಿಟ್ಟು ಅದರ ಬಗ್ಗೆ ಚರ್ಚೆಮಾಡಿ ಆಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಂಡಿದ್ದರು. ಆದ್ದರಿಂದ ನಾನಾದರೂ ತಿಳಿದುಕೊಂಡಿದ್ದೆ, ಸರ್ಕಾರದವರಿಗೆ, ಕಾಂಗ್ರೆಸ್ ಪಕ್ಷದವರಿಗೆ ಈಗಲಾದರೂ ಜ್ಞಾನೋದಯವಾಯಿತು, ಅವರು ರೈತರ ಸ್ಥಿತಿಗತಿಗಳನ್ನು ಅರಿತುಕೊಂಡಿದ್ದಾರೆ, ಅವರಿಗೆ ತಿಳುವಳಿಕೆ ಬಂದಿದೆ ಎಂದು. ಆದರೆ ಮತ್ತೆ ಈಗ ಈ ಸಭೆಯ ಮುಂದೆ ಮೈಸೂರು ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕವನ್ನು ತಂದಿರುವುದನ್ನು ನೋಡಿದರೆ ಹೋಯಿತಪ್ಪಾ ದೆವ್ವ ಎಂದರೆ ಇಲ್ಲ ಪುನಃ ಬಂದೇ ಗವಾಕ್ಷಿಯಲ್ಲಿ ಎಂದು ಹೇಳುವ ಹಾಗೆ ಪುನಃ ಈ ಸಭೆಯ ಮುಂದೆ ಈ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕವನ್ನು ಸರ್ಕಾರದವರು ತಂದಿದ್ದಾರೆ. ನಾನು ಬಹಳ ವಿಷಾದದಿಂದ ಈ ವಿಧೇಯಕವನ್ನು ವಿರೋಧಿಸಬೇಕಾಗಿದೆ. ಅಕ್ಕಿ ಮತ್ತು ರಾಗಿಯ ಬೆಲೆ ಜಾಸ್ತಿಯಾಗಿದೆ, ಮತ್ತು ಹಾಗೆಯೇ

ಇನ್ನೂ ಅನೇಕ ಆಹಾರ ಧಾನ್ಯಗಳ ಬೆಲೆಗಳು ಜಾಸ್ತಿಯಾಗಿವೆ, ಅದಕ್ಕೋಸ್ಕರ ನಾವು ಕಂದಾಯವನ್ನು ಏರಿಸಿದ್ದೇವೆ, ಈ ಕಂದಾಯವನ್ನು ಕೊಡುವುದರಲ್ಲಿ ಏನೂ ತಪ್ಪಿಲ್ಲ, ಈಗ ಏರಿಸಿರತಕ್ಕ ಕಂದಾಯವನ್ನು ಕೊಡುವುದಕ್ಕೆ ಪ್ರತಿಯೊಬ್ಬರಿಗೂ ಶಕ್ತಿ ಬಂದಿದೆ ಎಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ, ರೈತನ ಜೀವನಮಟ್ಟ ಹೇಗಿದೆ, ಅವನ ಆರ್ಥಿಕ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಿಲ್ಲ ಎಂದು ನನಗನಿಸುತ್ತದೆ. ರೈತನ ಜೀವನ ಮಟ್ಟ ಹೆಚ್ಚಾಗಿದೆ ಎಂದು ತಾವು ಹೇಳಿದಿರಿ, ಅದಕ್ಕೆ ತಮಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವೊತ್ತಿನ ದಿವಸ ಯಾವ ತಾಲ್ಲೂಕಿಗೇ ತಾವು ಹೋಗಿ ನೋಡಿದರೂ ಕೂಡ ರೈತರು ತಮ್ಮ ಜಮೀನನ್ನು ಸೊಸೈಟಿಗಳಿಗಾಗಲೀ ಅಥವಾ ಸರ್ಕಾರಕ್ಕಾಗಲೀ ಈಡುಮಾಡಿದ್ದಾರ. ನಮ್ಮ ತಾಲ್ಲೂಕಿನಲ್ಲಂತೂ 100ಕ್ಕೆ 80 ಜನ 90 ಜನ ರೈತರು ತಮ್ಮ ಜಮೀನುಗಳನ್ನು ಸೊಸೈಟಿಗಳಿಗೆ ಆಧಾರ ಮಾಡಿದ್ದಾರೆ. ನಮ್ಮ ಇಡೀ ಕೋಲಾರ ಜಿಲ್ಲೆಯಲ್ಲಿ ಉತ್ಕೃಷ್ಟವಾದ ಮತ್ತು ಶ್ರೇಷ್ಠವಾದ, ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇರುವುದು ಗೌರೀಬಿದನೂರಿನಲ್ಲಿ. ಇವೊತ್ತಿನ ದಿವಸ ಆ ಪ್ರದೇಶದ ಜನಗಳೇ ಕಷ್ಟಪರಿಸ್ಥಿತಿಯಲ್ಲಿರುವಾಗ ಮಿಕ್ಕವರು ಯಾವ ರೀತಿ ಇದ್ದಾರೆ ಎಂಬುದನ್ನು ಊಹೆ ಮಾಡುವುದಕ್ಕೆ ನಾನು ಮಾನ್ಯಮಂತ್ರಿಗಳಿಗೇ ಬಿಡುತ್ತೇನೆ. ಇಂಥಾ ಒಂದು ಕಷ್ಟ ಪರಿಸ್ಥಿತಿಯಲ್ಲಿರತಕ್ಕ ರೈತ ವ್ಯವಸಾಯವನ್ನು ಮಾಡಿ ಅದರಿಂದ ಬರತಕ್ಕ ಉತ್ಪಾದನೆಯಿಂದಲೇ ತನ್ನ ಸಂಸಾರದ ಎಲ್ಲಾ ಖರ್ಚುಗಳನ್ನೂ ನಿರ್ವಹಿಸಬೇಕಾಗಿದೆ. ರೈತರು ಈಗಿರುವಂಥಾ ಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಸರಿಯಾಗಿ ಸಾಕುವುದಕ್ಕಾಗಲೀ ಮತ್ತು ಅವರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕಾಗಲೀ ಸಾಧ್ಯವಿಲ್ಲ. ಹಳ್ಳಿಗಾಡುಗಳಲ್ಲಿ ಡಾಕ್ಟರು ಹೋಗಿ ಜನಗಳನ್ನು ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ, 100ಕ್ಕೆ 20, 30, 40 ಜನಗಳು ಮಾಲ್ ನ್ಯೂಟ್ರಿಷನ್ನಿಂದ ಸಫರ್ ಮಾಡುತ್ತಿದ್ದಾರೆ. ಹಳ್ಳಿಗಾಡುಗಳಲ್ಲಿ ರೈತ ಬಹಳ ದುಸ್ಥಿತಿಯಲ್ಲಿದ್ದಾನೆ. ಈಗ ಇರುವಂತಹ ಕಂದಾಯವನ್ನೇ ಕೊಡುವುದಕ್ಕೆ ಅವನಿಗೆ ಶಕ್ತಿಯಿಲ್ಲ. ರೈತರು ಕೊಳ್ಳತಕ್ಕ ಸಾಮಾನುಗಳ ಬೆಲೆಗಳೂ ಕೂಡ ವಿಪರೀತವಾಗಿ ಏರಿಹೋಗಿದೆ. ವ್ಯವಸಾಯಕ್ಕೆ ಬೇಕಾದ ಉಪಕರಣಗಳು, ಗೊಬ್ಬರ, ಹಿಂಡಿ ಇತ್ಯಾದಿ ಸಾಮಾನುಗಳ ಬೆಲೆಗಳು ಒಂದಕ್ಕೆ 10ರಷ್ಟು 15ರಷ್ಟು ಏರಿವೆ. ಸರ್ಕಾರದಲ್ಲಿ ರೈತನಿಗೆ ಸಣ್ಣಪುಟ್ಟ ಕೆಲಸಗಳಲ್ಲಿಯೂ ಕೂಡ ಸರಿಯಾದಂತಹ ನ್ಯಾಯ ದೊರಕುವುದಿಲ್ಲ.

4.00 P.M.

ಪ್ರತಿಯೊಂದು ಕಡೆಯೂ ಅವನನ್ನು ಕುಯ್ಯುತ್ತಲೇ ಇರುತ್ತೀರಿ. ತನ್ನ ಕೆಲಸ ಮಾಡಿಕೊಳ್ಳಬೇಕೆಂದರೆ, ನ್ಯಾಯವಾದ ಬೇಡಿಕೆಗಳಿಗೆ ಸರಕಾರದಿಂದ ಸೌಲಭ್ಯ ಪಡೆಯಬೇಕೆಂದರೆ, ಲಂಚ ಕೊಡದಿದ್ದ ಪಕ್ಷದಲ್ಲಿ ಹಾಗೂ ಅನೀತಿಗೆ ಬೀಳದಿದ್ದ ಪಕ್ಷದಲ್ಲಿ ಕೆಲಸ ಆಗುವುದೇ ಇಲ್ಲ. ಹತ್ತು ರೂಪಾಯಿ ಸಾಲ ತೆಗೆದುಕೊಂಡರೆ, 4 ರೂಪಾಯಿ ಆ ತರಹ ಖರ್ಚಾಗುತ್ತದೆ. ಈರೀತಿ ಇರುವಾಗ, ಕಂದಾಯ ಜಾಸ್ತಿ ಮಾಡಿದರೆ ರೈತನಿಗೆ ಕೊಡುವ ಶಕ್ತಿ ಇಲ್ಲ. ಈ ಕಂದಾಯವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಪಂಚಾಯಿತಿ ಆಕ್ಟ್ ಇಂಟ್ರಡ್ಯೂಸ್ ಮಾಡಿದ್ದೀರಿ; ಅದರ ಪ್ರಕಾರ, ರೂಪಾಯಿಗೆ 30 ಪೈಸೆ ಸೆಸ್ ಬೀಳುತ್ತದೆ; ಈಗಾಗಲೆ 12 ಪೈಸೆ ವಸೂಲು ಮಾಡುತ್ತಾ ಇದ್ದಾರೆ; ಇದರ ಮೇಲೆ 9 ಪೈಸೆ ಹೆಲ್ತ್ ಸೆಸ್ ಹಾಕುತ್ತೀರಿ; ಎಜುಕೇಷನ್ ಸೆಸ್ 19 ಪೈಸೆ ಇದೆ; ಲೈಬ್ರರಿ ಆಕ್ಟ್ ಪಾಸ್ ಮಾಡಿಕೊಂಡಿದ್ದೀರಿ; ಅದನ್ನ ಜಾರಿಗೆ ತಂದಾಗ 6 ಪೈಸೆ ಸೆಸ್ ಬೀಳುತ್ತದೆ. ಇದೆಲ್ಲವನ್ನೂ ಲೆಕ್ಕಹಾಕಿದರೆ, ಒಬ್ಬ ರೈತನಿಗೆ ಒಂದು ರೂಪಾಯಿಗೆ 80-90 ಪೈಸೆ ಬೀಳುತ್ತದೆ. ರೈತನಿಗೆ ಕೊಡುವುದಕ್ಕಾಗುವುದಿಲ್ಲ. ಇವತ್ತು ಒಂದು ಪ್ರಶ್ನೆಗೆ ಉತ್ತರ ಕೊಡುವಾಗ, ಆಹಾರದ ನೀತಿಯನ್ನು ಕೇಂದ್ರ ಸರಕಾರ ಬದಲಾಯಿಸಬೇಕು, ಅಲ್ಲಿಯವರೆಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಶ್ರೀ ಕೃಷ್ಣಪ್ಪನವರು ಹೇಳಿದರು. ಶ್ರೀ ಕೃಷ್ಣಪ್ಪನವರು ರೈತರ ಕುಟುಂಬಕ್ಕೆ ಸೇರಿದವರು, ಮತ್ತು ಹಳ್ಳಿಯಲ್ಲಿ ಬೆಳೆದವರು. ಈ ಕಾನೂನು ಅವರಿಗೆ ಸಂಬಂಧಪಟ್ಟದ್ದು. ಅವರ ಬಂಧುಗಳು ಅವರ ತಾಲ್ಲೂಕಿನಲ್ಲಿದ್ದಾರೆ, ಅವರು ಯಾವ ರೀತಿ ಅನುಕೂಲವಾಗಿದ್ದಾರೆಂದು ಯೋಚನೆ ಮಾಡಲಿ. ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಸಾಮರ್ಥ್ಯವಿಲ್ಲದೆ, ಅವರನ್ನು ಹಳ್ಳಿಯೊಳಗೇ ಇಟ್ಟುಕೊಂಡಿದ್ದಾರೆ. ಲಿಟರೆಸಿ ಜಾಸ್ತಿ ಇದೆ ಎಂದು ಹೇಳುತ್ತಾರೆ. ಸಿಟಿಗೆ ಬಂದವರು, ಗವರ್ನ್‌ಮೆಂಟ್ ಆಫೀಸಿನಲ್ಲಿ ಕೆಲಸದಲ್ಲಿರುವವರು, ಅಥವಾ ವ್ಯವಸಾಯವನ್ನು ಬಿಟ್ಟು ಇನ್ನು ಯಾವುದಾದರೂ ಉಪಕಸಬನ್ನು ತೆಗೆದುಕೊಂಡವರು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಿರಬಹುದು. ರೈತ ಅವನ ಮಕ್ಕಳನ್ನು ಪ್ರೈಮರಿ ಸ್ಕೂಲಿಗೆ ಕಳುಹಿಸುತ್ತಿರಬಹುದು; ಅವನ ಮಕ್ಕಳು ಕಾಲೇಜು ಮುಟ್ಟುವ ಹಾಗೇ ಇಲ್ಲ; ಅವನ ಸ್ಥಿತಿ ಚೆನ್ನಾಗಿಲ್ಲ. ಅವನ ಮಕ್ಕಳು ಮುಂದಕ್ಕೆ ಬರುವುದಕ್ಕೆ ಯಾವ ರೀತಿ ಸೌಲಭ್ಯವನ್ನೂ ಕೊಟ್ಟಿಲ್ಲ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಈ ಲ್ಯಾಂಡ್ ಸೆಟಲ್‌ಮೆಂಟ್ ವರದಿಯನ್ನು ಓದಿದರೆ, ನಮ್ಮ ತಾಲ್ಲೂಕಿನ ಬಗ್ಗೆ ಬಹಳ ವಿಚಿತ್ರವಾಗಿದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಒಂದು ಎಕರೆಯಲ್ಲಿ ಮೆಣಸಿನಕಾಯಿನಿಂದ 1,250 ರೂಪಾಯಿ ಲಾಭ ಬರುತ್ತದೆಂದು ಹೇಳುತ್ತಾರೆ. ನಾನೇ 55 ಎಕರೆಯಲ್ಲಿ ಮೆಣಸಿನಕಾಯಿ ಬೆಳೆಯುತ್ತೇನೆ. ನಾನು ಸರಕಾರ ಹೇಳಿದ ಡೋಸೇಜಿನಲ್ಲಿ ಗೊಬ್ಬರ, ಸೂಪರ್ ಫಾಸ್‌ಫೇಟ್, ಉಪ್ಪು ಎಲ್ಲಾ ಹಾಕಿ, ಅವರು ಹೇಳಿದ ಹಾಗೆ ಬೆಳೆಯುತ್ತೇನೆ. ನನಗೆ ಎಕರೆಗೆ ಒಂದು ಸಾವಿರ ರೂಪಾಯಿನಂತೆ ಕೊಡಲಿ, ಬಹಳ ಸಂತೋಷವಾಗಿ ಒಪ್ಪಿಕೊಳ್ಳುತ್ತೇನೆ. ಈ ರೀತಿ ಸರ್ವೆ ಸೆಟಲ್‌ಮೆಂಟು ವರದಿಯನ್ನು ಅಧಿಕಾರಿಗಳು ಬಹಳ ಆಶ್ಚರ್ಯಕರವಾಗಿ ತಯಾರಿಸಿದ್ದಾರೆ. ಎಲ್ಲೋ ಆ ಅಧಿಕಾರಿಗಳಿಗೆ ಜನ ಮೆಣಸಿನಕಾಯಿ, ಬೆಲ್ಲ ಕೊಟ್ಟಿಲ್ಲ, ಅದರಿಂದ ಸಿಟ್ಟಿನ ಮೇಲೆ ವರದಿ ಬರೆದಿರಬೇಕು. ವ್ಯವಸಾಯಗಾರರ ಮೇಲೆ ಈ ಹೆಚ್ಚಿನ ಕಂದಾಯವನ್ನು ಹೊರಿಸುವುದು ಸರಿಯಲ್ಲ. ರಾಜಕೀಯ ಬಂಧುಗಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳೂ, ಹೆಚ್ಚು ಅನುಕೂಲ ವಿರುವವರೂ, ಎಲ್ಲಾ ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬರುತ್ತಾ ಇದ್ದಾರೆ; ವ್ಯವಸಾಯ ಬಿಡುತ್ತಾ ಇದ್ದಾರೆ. ಇಂಥಾದ್ದರಲ್ಲಿ ವ್ಯವಸಾಯ ವೃತ್ತಿ ಲಾಭದಾಯಕ ವೃತ್ತಿ ಎಂದು ತಿಳಿದುಕೊಂಡಿದ್ದಾರೆ. ಹಳ್ಳಿಯಲ್ಲಿ ಉನ್ನತಸ್ಥಿತಿಗೆ ಬರುವ ಅವಕಾಶವಿದ್ದರೆ, ಏಕೆ ಅವರು ಹಳ್ಳಿಯಲ್ಲಿ ನೆಲಸುತ್ತಿಲ್ಲ? ಹೀಗಾದರೆ, ಯಾವ ವಿದ್ಯಾವಂತನೂ, ಸಂಪ್ರದಾಯಸ್ಥನೂ ಹಳ್ಳಿಯಲ್ಲಿ ವಾಸಮಾಡುವುದಕ್ಕೆ ಆಗುವುದಿಲ್ಲ. ವ್ಯವಸಾಯದಿಂದ ಬರತಕ್ಕ ಉತ್ಪತ್ತಿ ಬಹಳ ಕಡಿಮೆ. ಒಬ್ಬ ಕೂಲಿಗೆ ಒಂದು ದಿನಕ್ಕೆ ಎರಡು ರೂಪಾಯಿ ಕೊಡಬೇಕು. ಹಳ್ಳಿಯಲ್ಲಿ ಎಷ್ಟು ಪರ್ಸೆಂಟ್ ರೈತರು ಜಮೀನಿನಿಂದ ದುಡ್ಡು ಮಾಡಿಕೊಂಡಿದ್ದಾರೆ, ನೋಡಿ. 100ಕ್ಕೆ 80 ಭಾಗದ ಜನ ಬರೀ ಜಮೀನು ಇಟ್ಟುಕೊಂಡಿದ್ದಾರೆ; ಅದರಲ್ಲಿ 40 ಭಾಗ ಜನ 5 ಎಕರೆಗಿಂತ ಕಡಿಮೆ ಜಮೀನು ಇರುವವರಿದ್ದಾರೆ. ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳಿದ ಹಾಗೆ 5 ಎಕರೆವರೆಗೆ ಖುಷ್ಕಿ ಜಮೀನಿಗೆ ಕಂದಾಯ ವಿನಾಯಿತಿ ಕೊಟ್ಟರೆ ಅಥವಾ ಕಡಿಮೆ ಮಾಡಿದರೆ, ರೈತರು ಬದುಕುತ್ತಾರೆ; ಇಲ್ಲದೆ ಈ ರೀತಿ ಮಾಡಿದ ಪಕ್ಷದಲ್ಲಿ ರೈತ ಉದ್ಧಾರವಾಗುವುದಿಲ್ಲ. ರೈತ ಉದ್ಧಾರವಾಗಿ, ಆಹಾರ ಬೆಳೆಯದಿದ್ದ ಪಕ್ಷದಲ್ಲಿ, ದೇಶ ಉದ್ಧಾರವಾಗುವುದಿಲ್ಲ. ಆಹಾರ ಸಮಸ್ಯೆಯನ್ನು ಕಂಟ್ರೋಲ್ ಮಾಡಿ, ಭಾಷಣಮಾಡಿ, ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಬಗೆ ಹರಿಸುತ್ತೇವೆಂದರೆ ಸಾಧ್ಯವಿಲ್ಲ. ರೈತ ಮನಸ್ಸುಮಾಡಿ, ಉಳುಮೆಯಲ್ಲಿ ಆಸಕ್ತಿ ವಹಿಸದಿದ್ದರೆ ಆಹಾರ ಉತ್ಪತ್ತಿ ಆಗುವುದಿಲ್ಲ. ರೈತ ಆಹಾರೋತ್ಪತ್ತಿಗೆ ಏಕೆ ಸಹಕಾರ ಕೊಡಬೇಕು! ಏಕೆಂದರೆ ಸರಕಾರದ ನೀತಿ ಅವನ ಪ್ರಗತಿಗೆ ಅಡಚಣೆಯಾಗಿದೆ. ಆದ್ದರಿಂದ, ಸ್ವಾಭಾವಿಕವಾಗಿ ಅವನಿಗೆ ಸರ್ಕಾರದಮೇಲೆ ಸಿಟ್ಟು ಇರುತ್ತದೆ. ನಾನು ಆಹಾರದ ಬೆಳೆಗಳನ್ನು ಬೆಳೆದು ಬಡವನಾಗಿಯೇ ಇರಬೇಕು. ಇದಕ್ಕೆ ಬದಲು ಕಮರ್ಶಿಯಲ್ ಕ್ರಾಪ್ಸ್ ಬೆಳೆದು ಜಾಸ್ತಿ ಸಂಪಾದನೆ ಮಾಡುತ್ತೇನೆ ಎಂದು ರೈತ ಹೇಳುತ್ತಾನೆ. ಅವನು ದುಡ್ಡು ಹೆಚ್ಚಾಗಿ ಬರುವ ಮಾರ್ಗ ಹುಡುಕುತ್ತಾನೆ. ಅವನಿಗೆ ಸರಕಾರದ ಮೇಲೆ ಒಂದು ವೆಂಜೆನ್ಸ್ ಇರುತ್ತದೆ. ಆದ್ದರಿಂದ ಅವನು ನಾನ್-ಕೋಅಪರೇಟ್ ಮಾಡುತ್ತಾನೆ. ಆದ್ದರಿಂದ ಖಂಡಿತವಾಗಿ ರೈತನಿಗೆ ಸಾಧ್ಯವಾದಷ್ಟೂ ಕೂಡ ಜಾಸ್ತಿ ಅನುಕೂಲ ಮಾಡಿಕೊಡಿ. ಇಲ್ಲದೆಹೋದರೆ, ಅವನು ನಿಮಗೆ ಯಾವರೀತಿ ಸಹಕಾರವನ್ನೂ ಕೊಡುವುದಿಲ್ಲ. ಬೇರೆ ದೇಶಗಳಲ್ಲಿ, ಅದರಲ್ಲಿಯೂ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ, ಜಮೀನಿನಮೇಲೆ ಕಂದಾಯವಿಲ್ಲ. ಯಾವ ಒಂದು ದೇಶವನ್ನು ನೋಡಿದರೂ, ಭೂಮಿಯಮೇಲೆ ಕಂದಾಯ ಹಾಕಿಲ್ಲ, ಕೇಳಿ ನೋಡಿ. ಪಂಚಾಯಿತಿಯವರು ಲೋಕಲ್ ಡೆವಲಪ್‌ಮೆಂಟ್ ಸಂಬಂಧವಾಗಿ ಸೆಸ್ ಹಾಕಿಕೊಂಡು ವಸೂಲು ಮಾಡುತ್ತಾರೆಯೆ ವಿನಾ, ಈ ತರಹ ಕಂದಾಯ ತೆರಿಗೆಯನ್ನು ಹಾಕುವುದಿಲ್ಲ. ಇನ್ನೂ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕುತ್ತಾರೆ. ಆಸ್ಟ್ರೇಲಿಯಾ ದೇಶದಲ್ಲಿ ಅಗ್ರಿಕಲ್ಚರಲ್ ಟ್ಯಾಕ್ಸ್ ಇದೆ. ಇಲ್ಲಿಯೂಕೂಡ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕಿ, ಯಾವ ರೀತಿ ಭೂಕಂದಾಯವೂ ಇಲ್ಲದಂತೆ ಮಾಡಿ, ರೈತರಿಗೆ ಅನುಕೂಲ ಮಾಡಿಕೊಡಬೇಕು. ಆ ಹೊರ ದೇಶಗಳಲ್ಲಿ ಯಾವುದೇ ಒಬ್ಬ ರೈತನಿಗೆ ಸರ್ಕಾರವಾಗಲಿ, ಯಾವುದೇ ಸಂಸ್ಥೆಯಾಗಲಿ ಸಾಲ ಕೊಟ್ಟರೆ, 20 ವರ್ಷಕ್ಕೆ ಕಡಿಮೆ ಇಲ್ಲದೆ ಅವಧಿ ಕೊಟ್ಟು, ಸಾಲವನ್ನು ಸುಲಭ ಕಂತುಗಳಲ್ಲಿ ತೀರಿಸುವುದಕ್ಕೆ ಸೌಲಭ್ಯ ಮಾಡಿಕೊಟ್ಟಿದ್ದಾರೆ. ಈ 20 ವರ್ಷಗಳಲ್ಲಿ, ಯಾವಾಗಲಾದರೂ ಫಸಲು ನಷ್ಟವಾದರೆ, ಅರ್ಜಿಕೊಟ್ಟ ತಕ್ಷಣ ಆ ವರ್ಷ ಬಡ್ಡಿಗೆ ವಿನಾಯಿತಿ ಕೊಟ್ಟು, ಕಂತನ್ನು ಮುಂದಕ್ಕೆ ಹಾಕುತ್ತಾರೆ. ವ್ಯವಸಾಯಗಾರರಿಗೆ ಅಷ್ಟು ಉತ್ತೇಜನ ಕೊಡುತ್ತಾರೆ. ಅದ್ದರಿಂದ ಆ ದೇಶಗಳಲ್ಲಿ ಆಹಾರ ಧಾನ್ಯಗಳನ್ನು ಅಷ್ಟು ಸಮೃದ್ಧಿಯಾಗಿ ಬೆಳೆಯುತ್ತಾರೆ. 30 ವರ್ಷಕ್ಕೊಂದುಸಾರಿ ಕಂದಾಯ ಪುನರ್ವಿಮರ್ಶೆ ಮಾಡಬೇಕೆಂದರೆ, ಅದನ್ನು ಜಾಸ್ತಿ ಮಾಡಬೇಕೆಂದು ಅರ್ಥವಲ್ಲ, ಕಡಿಮೆ ಮಾಡಬಹುದು. ಜಾಸ್ತಿ ಮಾಡುವುದಕ್ಕೆ ಮಾನ್ಯ

ಕೃಷ್ಣಪ್ಪನವರ ಕಾಲದಲ್ಲಿ ಅವಕಾಶ ಕೊಡುತ್ತಿದ್ದಾರಲ್ಲಾ ಎಂದು ನನಗೆ ದುಃಖವಾಗುತ್ತದೆ. ಈ ನಿರ್ಣಯವನ್ನು ಮಂಡಿಸುವಾಗ ಈ ವರದಿಯನ್ನು ನಾನು ತಯಾರು ಮಾಡಲಿಲ್ಲ, ಇದನ್ನು ಹಿಂದೆಯೇ ಮಾಡಿದ್ದು ಯತ್ನವಿಲ್ಲದೆ ಮಂಡಿಸುತ್ತಿದ್ದೇನೆ. ನಾನು ಸಾಂಕೇತಿಕವಾಗಿ ಇಲ್ಲಿ ಕುಳಿತಿದ್ದೇನೆಂದು ಹೇಳಿದರು. ಹಾಗಿದ್ದರೆ ರಾಜೀನಾಮೆ ಕೊಡಲಿ, ಮನೆಯಲ್ಲಿ ಅವರಿಗೆ ಹೆಚ್ಚು ಗೌರವ ಕೊಡುತ್ತಾರೆ. ನಮ್ಮ ಕಡೆ ಬಂದು ಸೇರಬೇಕೊ ಎಂದು ಒಬ್ಬ ಕಾಂಗ್ರೆಸ್ ಸದಸ್ಯರು ಕೇಳುತ್ತಿದ್ದಾರೆ. ಈ ಕಡೆ ಬಂದರೂ ರಾಜಕೀಯಕ್ಕೆ ಸೇರಿಕೊಂಡುಬಿಡುತ್ತಾರೆ ಅವರು, ಅದೂ ಬೇಡ. ನಾನು ಸರಕಾರದವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇರುವ ಕಂದಾಯವನ್ನು ವಜಾಮಾಡಿ, ಇದರಿಂದ ಕೊರತೆ ಬೀಳುವ ಹಣವನ್ನು ಭರ್ತಿ ಮಾಡುವುದಕ್ಕೆ ಬೇರೆ ದಾರಿಗಳಿವೆ. ಸೇಲ್ಸ್‌ಟ್ಯಾಕ್ಸಿನಲ್ಲಿ ಬಹಳ ಲೀಕೇಜ್ ಇದೆ. ಅದೆಲ್ಲವನ್ನೂ ಮುಚ್ಚಿಬಿಡುವುದಾದರೆ ಭೂಗಂದಾಯವನ್ನು ಹಾಕಲೇ ಬೇಕಾಗಿಲ್ಲ. ನೀವು ಕಂದಾಯದಿಂದ ಏನು ನಿರೀಕ್ಷಣೆ ಮಾಡುತ್ತೀರೊ, ಅದರ ಎರಡು-ಮೂರರಷ್ಟು ಬರುತ್ತದೆ. ಇಂಥ ದಾರಿಗಳನ್ನು ಹುಡುಕುವುದು ಬಿಟ್ಟು, ಕಂದಾಯವನ್ನು ಏಕೆ ಜಾಸ್ತಿ ಮಾಡುತ್ತೀರಿ ? ವ್ಯವಸಾಯ ಕಸಬನ್ನು ಅವಲಂಬಿಸುವುದಕ್ಕೆ ಯಾರಿಗೂ ಇಷ್ಟವಿಲ್ಲ ಈಗ. ಎಲ್ಲಿಯಾದರೂ ಒಂದು ಬೀಡಿ ಅಂಗಡಿ ಇಟ್ಟುಕೊಂಡು ಜೀವನ ಮಾಡುವುದು ವ್ಯವಸಾಯಕ್ಕಿಂತ ಮೇಲು ಎಂಬ ಭಾವನೆ ಬಂದಿದೆ; ಇಲ್ಲದಿದ್ದರೆ ಯಾವುದಾದರೂ ಆಫೀಸಿನಲ್ಲಿ ಕೆಲಸಮಾಡುವುದು ಅದಕ್ಕಿಂತ ಬಹಳ ಲೇಸು ಎಂದು ಅವರಿಗೆ ಅನ್ನಿಸಿದೆ. ಈ ಆಫೀಸುಗಳ ಕೆಲಸಗಳಲ್ಲಿ ಸಂಬಳಕ್ಕೆ ಕಾಯಬೇಕಾಗಿಲ್ಲ, ಬೇರೆ ವರಮಾನವಿರುತ್ತದೆ ಎಂದು ಸಾಮಾನ್ಯವಾಗಿ ಎಲ್ಲ ರೈತರಿಗೂ ಗೊತ್ತಿದ್ದು, ಅವರು ವ್ಯವಸಾಯ ಬೇಡ ಅನ್ನುತ್ತಾರೆ. ರೈತರ ಕಷ್ಟ ಹೇಳತೀರದು; ಅವರಿಗೆ ಕೂಲಿಯವರು ಸಿಗುವುದಿಲ್ಲ; ಅವರಿಗೆ ಇನ್ನೂ ಅನೇಕ ತೊಂದರೆಗಳಿವೆ; ಅವುಗಳನ್ನು ಇಲ್ಲಿ ವಿವರಿಸುತ್ತಾ ಕಾಲಹರಣ ಮಾಡಲು ಇಷ್ಟ ಪಡುವುದಿಲ್ಲ. ಆಹಾರ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿರುವಾಗ, ವ್ಯವಸಾಯಕ್ಕೆ ಎಲ್ಲ ಉತ್ತೇಜನ ಕೊಡಬೇಕು, ಎಲ್ಲ ಸಹಕಾರ ಕೊಡಬೇಕು ; ಅದನ್ನು ಪುಷ್ಟೀಕರಿಸಬೇಕು ಆಗ ದೇಶದ ಕಲ್ಯಾಣವಾಗುತ್ತದೆ. ವ್ಯವಸಾಯಗಾರರಲ್ಲಿ ಸಹಾನುಭೂತಿ ಇರಬೇಕು. ರೈತರನ್ನು ಕಡೆಗಣ್ಣಿನಿಂದ ನೋಡುತ್ತಿರುವಾಗ, ಮಾನ್ಯರೆವಿನ್ಯೂ ಮಂತ್ರಿಗಳಾದ ಕೃಷ್ಣಪ್ಪನವರು ರಾಜೀನಾಮೆ ಕೊಡುವುದಕ್ಕೆ ಸಿದ್ಧವಾಗಿರಬೇಕು.

Sri KADIDAL MANJAPPA (Sringeri).—Mr. Speaker, Sir, while welcoming this measure, I wish to make a few observations. I am glad that the Government, after considering the suggestion made by this House during the discussions on the reports of the Resettlement officers, have proposed to reduce the standard rate from 6¼ to 4 per cent in the case of lands except plantations, and in the case of plantations they have proposed to reduce it to one per cent. I wish to point out a few anomalies appearing in the Reports of the Settlement Officers from the different Zones in Malnad pertaining to the same crop. I do not know how the Government propose to deal with this matter. For instance, Sir, if the standard rate is reduced from 6¼ to 4 per cent, that reduced rate will be applicable to the standard rates proposed by the different Settlement Officers in the different Zones. In the case of Areca nut, it is a crop grown in malnad Taluks of Shimoga District, Chickmagalur, South Kanara aud Hassan. It is interesting to note that in Tarikere Zone the Officer has proposed Rs. 56.70 for Areca; in the Shimoga Zone he has proposed Rs.99-00 and in the Chickmagalur Zone he has proposed Rs, 67.65 per acre. If the revised standerd rate is made applicable to the different zones, there will be a proportionate reduction. But the anomaly will remain. The crop is the same, the climatic condition prevailing in different zones is the same and the price fetched in the market is the same. In puttur Taluk, in South Kanara, it is 120 Rupees. Because there was no Co-ordinated discussion or decision, this anomaly has appeared in these reports. For the folly of Officers, the ryots in Thirthahally Taluk will have to pay a standard rate of Rs. 99 and odd and the ryots in the adjoining Taluks, where the same crop is grown pay only Rs. 66/- and those rates will be

(SRI KADIDAL MANJAPPA)

reduced proportionately when the standard rate is reduced. I wish the Government had thought over this matter to apply some formula to make the standard rate uniformally applicable to the same crop in similar zones.

In the case of Coffee in Tarikere Zone the Officer has proposed 300 % increase. In Chikmagalur it is 100%.

Sri S. SIVAPPA.—In view of these anomalies, is it not necessary that there should be a re-survey ?

Sri KADIDAL MANJAPPA.—I should like the Government to consider this point and to get over this difficulty. In Coorg for Coffee they have proposed 76 rupees. If the standard rate is applied to different zones, I think there will be a certain amount of chaos and unnecessary hardships. This has to be considered by Government. A suggestion has been made from time to time by some members that the levy of land revenue should be abolished altogether and that it should be replaced by Agricultural Incometax. No doubt, it is a scientific way of dealing with the problem.

There cannot be a more scientific method than the levy of agricultural income tax. But in this country 80% of the peasants are ignorant and illiterate. I am not against the proposal to levy agricultural income tax if the conditions are favourable in this State. But in view of the fact that a large majority of our people are illiterate and ignorant, if agricultural incometax is introduced, they will be under the mercy of petty and corrupt officials and harrassment will be greater if agricultural incometax is introduced. In the case of Sales Tax, the merchant pays the money collected from the customer. In the case of Incometax, the assessee pays because he has income over and above the ceiling prescribed. Entertainment tax is collected from the customers. Unfortunately in the case of lands, irrespective of the income he is required to pay taxes. Particularly in the case of dry lands, the plight of the agriculturists is miserable. Even to-day, in the year 1965 the petty farmers and tenants are not in a position to give even one saree to their women-folk every year. Therefore, there is some force in the contention that petty farmers, particularly the owners of dry lands, should be given certain concession in the matter of levy of land revenue. The Government have now reduced the standard rate from 6¼% to 4%. I think they will get some concession.

With regard to Areca and other garden crops—Mulberry has been removed from the category—of garden crop and several other crops will be removed from this category the ruling rate now obtaining may not be permanent. It all depends upon the import policy of the Government of India. Supposing the Government of India proposes to encourage import, then the prices will go down. If the Government goes through the report of the Settlement Officers, they will understand the difficulties of growing Areca, particularly in Malnad where it is subject to the attack of a pest known as *Kole Roga*. Therefore I woul d sugges

that in the case of Areca 3% would be a reasonable rate. The rate proposed now is 99 Rupees. If it is reduced to 4 per cent it will be 66 Rupees. The assessment now being paid is Rs. 12 or 15. Therefore, I think, the Government may make up their mind to reduce the standard rate in the case of Areca and Coconut.

There is an impression in the minds of some Hon'ble members that the standard rate of 6¼ per cent was fixed by me when I was Revenue Minister. That is a wrong impression. Government had not taken the decision that the standard rate should be fixed at 6¼ per cent When I was the Revenue Minister. I want to make clear this aspect.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ) ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮೈಸೂರು ಭೂಕಂದಾಯದ ಮಸೂದೆಯನ್ನು ತಿದ್ದುಪಡಿ ಮಾಡುವುದಕ್ಕೆ ಈ ಮಸೂದೆಯನ್ನು ಮಂಡಿಸುತ್ತಾ ಇದು ಕಂದಾಯವನ್ನು ಹೆಚ್ಚು ಮಾಡುವ ಮಸೂದೆಯಲ್ಲ, ಕಡಮೆ ಮಾಡುವ ಮಸೂದೆ, ಆದಕಾರಣ ನಾವೆಲ್ಲ ಇದನ್ನು ಸ್ವಾಗತಿಸಬೇಕೆಂದು ಹೇಳಿದರು. ಇದರ ಬಗ್ಗೆ ಯಾವ ವಿವರಣೆಯನ್ನೂ ಕೂಡ ಒದಗಿಸಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ರೆಸಲ್ಯೂಷನ್ನು ಬಂದಾಗ ಅದನ್ನು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಯಾವ ಯಾವ ಕಡೆ ಎಷ್ಟೆಷ್ಟು ಇದೆ, ಎಷ್ಟು ಕಡಿಮೆಯಾಗುತ್ತದೆ ಎನ್ನುವುದೊಂದನ್ನೂ ಹೇಳದೆ ಹೋದರೆ ಇದರಲ್ಲಿ ನಮಗೇನೂ ಅರ್ಥವಾಗುವುದಿಲ್ಲ. ಕೆಲವು ಕಾರಣಗಳಿಗಾಗಿ ಈ ಮಸೂದೆಯನ್ನು ನಾನು ಇಲ್ಲಿ ವಿರೋಧಿಸಬೇಕಾಗಿದೆ.

ಈಚೆಗೆ ರಾಜ್ಯದಲ್ಲಿ ರೆವೆನ್ಯೂ ಕಂದಾಯಕ್ಕೆ ಸಂಬಂಧಪಟ್ಟ ಮಸೂದೆಯ ಕಾನೂನನ್ನು ನಾವು ಅಂಗೀಕಾರ ಮಾಡಿದ್ದೇವೆ. ಅದಕ್ಕೆ ಹೊಸದಾಗಿ ಕಂದಾಯ ಹಾಕತಕ್ಕ ವಿಷಯಕ್ಕೆ ಸಂಬಂಧಪಟ್ಟ ಕೆಲವು ಕ್ಲಾಜುಗಳನ್ನು ತಿದ್ದುಪಡಿ ಮಾಡುವುದಕ್ಕೆ ಇದರಲ್ಲಿ ಹೊರಟಿದ್ದಾರೆ. ಈ ವಿಷಯದಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅವರೂ ಕೂಡ ಕಾಂಗ್ರೆಸ್ಸು ಪಕ್ಷದವರೊಡನೆ ಸೇರಿಕೊಂಡು ಅವರ ಜೊತೆಯಲ್ಲೇ ಹೋಗುತ್ತಾ ಅವರ ಅಭಿಪ್ರಾಯಗಳನ್ನೆಲ್ಲಾ ಅವರಿಗೇನೆ ಮಾರಿಕೊಂಡಿದ್ದಾರೆ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮ್ಮ ಸರಕಾರ ಅಧಿಕಾರಕ್ಕೆ ಬಂದರೆ ಅವರು ನಿಮ್ಮ ಮಾತು ಕೇಳುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಮೊನ್ನೆ ತಾನೆ ಲ್ಯಾಂಡ್ ರೆವೆನ್ಯೂ ಕಾನೂನನ್ನು ಕಷ್ಟಪಟ್ಟು ಮಾಡಿದ್ದಾರೆ. ಅದರಲ್ಲಿ ತಿದ್ದುಪಡಿ ಮಾಡಬೇಕಾಗಿದೆ. ಪ್ರಿಂಟಿಂಗ್ ಮಿಸ್ಟೇಕ್ಸ್ ಇವೆ, ತಿದ್ದುಪಡಿ ಮಾಡುವುದಕ್ಕೆ ಬಂದಿದ್ದೇವೆ ಎಂದು ಒಂದು ಮಾತು ಹೇಳಿದರು. ನಿಮ್ಮ ಅಧಿಕಾರಿಗಳ ದಕ್ಷತೆ ಎಷ್ಟಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವ ರೀತಿ ಕಾನೂನು ಬರೆಯುತ್ತಾರೆ ಎನ್ನುವುದನ್ನು ಇದು ಪ್ರತಿಬಿಂಬಿಸುತ್ತದೆ. ಇದಕ್ಕೆ ಕೋರ್ಟಿನ ಜಡ್ಜ್‌ಮೆಂಟ್ ನೋಡಿದರೆ ಗೊತ್ತಾಗುತ್ತದೆ ಇರತಕ್ಕಂಥ ಕಾನೂನನ್ನು ಹೊಡೆದು ಹಾಕಿ ಕ್ರಮ ತೆಗೆದುಕೊಂಡ ಬಗ್ಗೆ ಅಬ್ಸರ್ವೇಷನ್ಸ್ ಮಾಡಿದ್ದಾರೆ. ಇದನ್ನು ನೋಡಿದರೆ ವಿಧಾನ ಸಭೆಗೆ ಬರತಕ್ಕಂಥ ಸದಸ್ಯರು, ಕಾನೂನು ಬರೆಯತಕ್ಕಂಥ ಅಧಿಕಾರಿಗಳು ಇವರಿಗೆ ಏನಾದರೂ ಪರಿಜ್ಞಾನ ಇದೆಯೇ ಎಂಬ ಭಾವನೆ ಬರುತ್ತದೆ. ಅಂತೂ ಆಶ್ಚರ್ಯಕರವಾಗಿ ನಡೆಕೊಂಡು ಹೋಗುತ್ತಿದೆ. ಇಲ್ಲಿ ಪುನಃ ಖುಷ್ಕಿ ಅಂದರೆ ಏನು ಎಂದು ತಿದ್ದುಪಡಿ ಮಾಡಿ ಹೇಳಿದ್ದಾರೆ ಸ್ವಾಮಿ, ಇವತ್ತಿನ ದಿವಸ ವಿರೋಧ ಪಕ್ಷದವರು ಇದಕ್ಕಾಗಿ ಉಪವಾಸ ಮಾಡಿದರು, ಸಾರ್ವಜನಿಕರ ಅಭಿಪ್ರಾಯಕ್ಕೆ ಮಣಿದು ಕಂದಾಯ ಕಡಿಮೆ ಮಾಡುವುದಕ್ಕೆ ಹೊರಟಿಲ್ಲ ನಮಗೆ ಅರಿವು ಉಂಟಾಗಿದೆ ನಾವೇ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಅರಿವು ಬೇಗ ಉಂಟಾದರೆ ದೇಶಕ್ಕೆ ಕ್ಷೇಮ. ದೇಶಕ್ಕೆ ಒಳ್ಳೆಯದು ಆದರೆ ಶ್ರೀಮಾನ್ ಗಾಂಜಿ ವೀರಪ್ಪನವರು ಈ ಮಸೂದೆಯನ್ನು ಸಮರ್ಥಿಸುತ್ತಾ ಸರ್ಕಾರದ ಧೋರಣೆಯ ಬಗ್ಗೆ ಮಾತನಾಡಿದರು. ವ್ಯವಸಾಯಗಾರರ ಹರಿಹರ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆ ಆದರೆ ಅವರು ವ್ಯಾಪಾರಸ್ಥರ ಪ್ರತಿನಿಧಿಗಳಾಗಿದ್ದಾರೆ. ಆದರೆ ಅವರು ವೃತ್ತಿಯಿಂದ ವಕೀಲರು. ಪಟ್ಟಣದಲ್ಲಿ ವಾಸ ಮಾಡುತ್ತಿದ್ದರೂ ಕೂಡ ಹಳ್ಳಿಯವರ ಓಟು ತೆಗೆದುಕೊಂಡು ಇಲ್ಲಿಗೆ ಬಂದಿದ್ದಾರೆ. ನಾನೂ ಅಷ್ಟೇ. ಅರವತ್ತು ವರ್ಷಗಳ ಹಿಂದೆ ಸರ್ವೇ ಸೆಟ್ಲ್‌ಮೆಂಟ್ ಆಗಿತ್ತು. ಈಗ ವಿಜ್ಞಾನದ ರೀತಿಯಲ್ಲಿ ಅಳತೆ ಮಾಡಿ, ತೂಕ ಹಾಕಿ ಅಧಿಕಾರಿಗಳು ರಿಪೋರ್ಟು ತಯಾರು ಮಾಡಿದ್ದಾರೆ. ಅದನ್ನು ಒಪ್ಪಿ

(ಶ್ರೀ ಎಸ್. ಗೋಪಾಲಗೌಡ)

ಕೊಂಡು ಕಂದಾಯ ಪುನರ್ ವ್ಯವಸ್ಥೆ ಮಾಡದೇ ಹೋದರೆ ಅದು ಸರಿಯಾಗಿರುವುದಿಲ್ಲ, ವಿರೋಧ ಪಕ್ಷದವರು ಇದನ್ನು ಸ್ವಾಗತಿಸದೆ ವಿರೋಧ ಮಾಡುವುದು ಅನ್ಯಾಯ ಎಂದು ಅವರು ಹೇಳಿದರು. ಅನೇಕ ವಿಷಯಗಳನ್ನು ನಾವು ಪುನಃ ಪುನಃ ವಿಚಾರ ಮಾಡಬೇಕಾಗುತ್ತದೆ. ಕಾರಣಾಂತರದಿಂದ ಇದುವರೆಗೆ ಸರ್ವೆ ಸೆಟ್ಲಮೆಂಟ್ ಮಾಡುವುದಕ್ಕಾಗಿರಲಿಲ್ಲ. ಶ್ರೀ ಜತ್ತಿಯವರು ಸಹ ಈ ಸಭೆಯಲ್ಲಿ ಒಂದು ಮಾತು ಹೇಳಿದ್ದಾರೆ. ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದರಿಂದ ಸರಿಯಾದ ರೀತಿಯಲ್ಲಿ ಸರ್ವೆ ಮಾಡುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿಯ ಪರಿಸ್ಥಿತಿ ಅಧಿಕಾರಿಗಳಿಗೆ ಸರಿಯಾಗಿ ಗೊತ್ತಿರುವುದಿಲ್ಲ ಬಾಗಾಯಿತ ಜಮೀನನ್ನು ತರಿ ಭೂಮಿ ಎಂದೂ, ತರಿ ಇರುವುದನ್ನು ಖುಷ್ಕಿ ಎಂದೂ ಹೇಳಿರುವುದು ರಿಪೋರ್ಟಿನಲ್ಲಿ ಕಂಡು ಬರುತ್ತದೆ. ಮೂರು ನಾಲ್ಕು ತಾಲ್ಲೂಕಿಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಒಂದು ಊರಿಗೆ ಹೋಗಿ ವ್ಯಾಪಾರ ಮಾಡುವ ಹಾಗೆ ಒಂದು ವಸ್ತುವಿನ ಬೆಲೆ ಮಾರ್ಕೆಟ್ಟಿನಲ್ಲಿ ಹೇಗೆ ಇದೆ ಎಂದು ತಿಳಿದುಕೊಳ್ಳುವ ಹಾಗೆ ಈ ರಿಪೋರ್ಟಿನಲ್ಲಿ ಬರೆದಿದ್ದಾರೆ. ನಾನು ಅಧಿಕಾರಿಗಳ ಬಗ್ಗೆ ದೂರುವುದಿಲ್ಲ. ಸರ್ವೇ ಮಾಡುವುದು ಅದು ಒಂದು ದೊಡ್ಡ ಕೆಲಸ, ಜವಾಬ್ದಾರಿ ಕೆಲಸ. ಅದರಲ್ಲಿ ನುರಿತ ಕಾರ್ಯಕರ್ತರು ಬೇಕು. ಒಂದು ಹಳ್ಳಿಯನ್ನು ವೈಜ್ಞಾನಿಕ ರೀತಿಯಲ್ಲಿ ಸರ್ವೇ ಮಾಡುವುದಕ್ಕೆ ಕೊನೆಯ ಪಕ್ಷ 20 ಜನ ಅಧಿಕಾರಿಗಳಿಗೆ ಒಂದು ತಿಂಗಳ ವರೆಗೆ ಕೆಲಸ ಹಿಡಿಯುತ್ತದೆ. ಆದುದರಿಂದ ವೈಜ್ಞಾನಿಕ ಎಂದು ಎನ್ನುವ ಮಾತು ನಿಜವಲ್ಲ. ಅಂಥ ವೈಜ್ಞಾನಿಕವಾದಂಥ ರೀತಿ ಉಪಯೋಗಿಸಿ ಕೊಂಡಿಲ್ಲ. ವೈಜ್ಞಾನಿಕ ರೀತಿಯಲ್ಲಿ ಅನೇಕ ವಿಷಯಗಳು ಅಡಕವಾಗಿರುತ್ತವೆ. ಹಾಗೆ ಪರಿಶೀಲನೆ ಮಾಡಿದ್ದಾದರೆ ಆ ರೀತಿ ಬರೆಯಬಹುದಾಗಿತ್ತು. 30 ವರ್ಷಗಳ ನಂತರ ವಿಷಯ ಬರೆಯುವುದಾದರೆ ಅದು ವೈಜ್ಞಾನಿಕವಾಗುವುದಿಲ್ಲ. ಅದು ಅನ್ವಯಿಸುವುದಿಲ್ಲ. ಇಂದು ಬೆಲೆ ಏನು ಇದೆ? ಬೆಲೆ ಏರಿದೆ ನಿಜ. ಎರಡನೇ ಮಹಾ ಯುದ್ಧದ ನಂತರ 1942-43 ನೇ ಇಸವಿಯಿಂದ ಈಚೆಗೆ ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಾ ಹೋಗುತ್ತಿದೆ. ವ್ಯವಸಾಯಕ್ಕೆ ಸಂಬಂಧಪಟ್ಟ ರೈತನು ಬೆಳೆಯುತಕ್ಕ ವಸ್ತುವಿನ ಬೆಲೆ ಒಂದಕ್ಕೆ ನಾಲ್ಕು ಪಟ್ಟು ಐದು ಪಟ್ಟುದರ ಏರಿದೆ. ಆದರೆ ರೈತ ಕೊಂಡುಕೊಳ್ಳತಕ್ಕ ಸಾಮಾನುಗಳಾಗಲಿ ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳಾಗಲಿ ಒಂದಕ್ಕೆ ಹತ್ತರಷ್ಟು, ಇಪ್ಪತ್ತರಷ್ಟು, ಐವತ್ತರಷ್ಟು ಔಷಧಿ ಮುಂತಾದ ವಸ್ತುಗಳು ನೂರರಷ್ಟು ಬೆಲೆ ಏರಿದೆ. ನಮ್ಮ ರಾಜ್ಯಕ್ಕೆ ಬರಬೇಕಾದ ಸುಮಾರು 60-70 ಕೋಟಿ ರೂಪಾಯಿಗಳಲ್ಲಿ ನೂರಕ್ಕೆ ಎಂಭತ್ತರಷ್ಟು ಜನ ಇರತಕ್ಕ ರೈತರಿಂದ ಸೇಲ್ಸ್ ಟ್ಯಾಕ್ಸ್ ಮೂಲಕ, ಎಕ್ಸೈಜ್‌ಸುಂಕ ಮೂಲಕ ಅಪರೋಕ್ಷವಾಗಿ ತೆರಿಗೆಯ ಮೂಲಕ 40 ಕೋಟಿ ರೂಪಾಯಿಗಳ ವರೆಗೆ ಅವರು ಕಾಂಟ್ರಿಬ್ಯೂಟ್ ಮಾಡುತ್ತಾರೆ. ಇದನ್ನು ಮುಚ್ಚಿಟ್ಟು ರೈತ ಒಳ್ಳೇ ಸ್ಥಿತಿಯಲ್ಲಿದ್ದಾನೆ. ವಿಮಾನದಲ್ಲಿ ಓಡಾಡುತ್ತಾನೆ ಎಂಬ ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಹೆಚ್ಚಾದ ಬೆಲೆಗಳಿಂದ ದಲ್ಲಾಳಿಗಳ ಲಾಭ ಮಾತ್ರ ಹೆಚ್ಚಾಗಿದೆ. ಬೇರೆಯವರಿಗೆ ಅನುಕೂಲವಾಗಿದೆ. ರೈತರಿಗೆ ಎಷ್ಟು ಅನುಕೂಲವಾಗಿದೆ ಎನ್ನುವುದನ್ನು ವಿಮರ್ಶೆ ಮಾಡಿ ನೋಡಬೇಕು. ತೋಟಗಾರರ ಬಗ್ಗೆ ವಿಮರ್ಶೆ ಮಾಡಿ. ಒಂದು ಎಕರೆ ತೋಟದಲ್ಲಿ ನೂರು ಜನರನ್ನು ಕೆಲಸಕ್ಕೆ ಹಚ್ಚಬೇಕಾಗುತ್ತದೆ. ಇವತ್ತಿನ ದಿವಸ ಒಂದು ಕ್ವಿಂಟಾಲ್ ಅಕ್ಕಿಗೆ 70-80 ರೂಪಾಯಿ ಕೊಟ್ಟು ತಂದು ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಕಿಲೋ ಅಕ್ಕಿ ಎರಡು ರೂಪಾಯಿ ಕೂಲಿ ಕೊಟ್ಟರೆ ಮಾತ್ರ ಅವನು ಕೆಲಸಕ್ಕೆ ಬರುತ್ತಾನೆ. ಈ ರೀತಿ ಪರಿಸ್ಥಿತಿ ಇರುವುದರಿಂದ ತೋಟದ ಬೇಸಾಯ ಹಾಳು ಬಿದ್ದಿದೆ. ಇದನ್ನು ಹೋಗಿ ನೋಡಬಹುದು. ತರಿ ಜಮೀನು ಇರುವುದಿಲ್ಲ, ಭತ್ತ ಬೆಳೆಯುವುದಿಲ್ಲ. ಇಂಥ ಅನೇಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ವಿಚಾರ ಮಾಡುತ್ತಾ ಇಲ್ಲ. ಆದರೆ ಒಂದು ಮಾತು ಮಾತ್ರ ಇದೆ. ನಮಗೆ ದುಡ್ಡು ಬೇಕು. ನಾವು ಬಹಳ ಅಪಾಯದಲ್ಲಿದ್ದೇವೆ ತೊಂದರೆಯಲ್ಲಿದ್ದೇವೆ, ಕೊರತೆಯಲ್ಲಿದ್ದೇವೆ ಎಂದು ಹೇಳುತ್ತಾರೆ. ಸರಕಾರಕ್ಕೆ ಹಣ ಬೇಕು. ಆ ಮಾತು ಒಪ್ಪ ಬೇಕಾಗಿದೆ. ಶ್ರೀಮಾನ್ ಶಿವಪ್ಪನವರು ಮೊನ್ನೆ ದಿನ ಉಪವಾಸ ಮಾಡುತ್ತಾ ಇರುವಾಗ್ಗೆ ಅಲ್ಲಿಗೆ ಶ್ರೀ ಜತ್ತಿಯವರು ಬಂದಿದ್ದರು. ಆಗ್ಗೆ ಅಕಸ್ಮಾತ್ತಾಗಿ ಒಬ್ಬರು ಕೇಳಿದ ಪ್ರಶ್ನೆಗೆ ಶ್ರೀ ಜತ್ತಿಯವರು ಹೀಗೆ ಹೇಳಿದರು. ನನಗೆ ಹಣ ಕೊಡಿ. ಭೂಕಂದಾಯದಿಂದಲೇ ದುಡ್ಡು ಬರಬೇಕು ಎಂದು ಆಗ್ರಹವಿಲ್ಲ ಎಂದು ಅವರು ಹೇಳಿದರು. ಖರ್ಚು ಮಾಡುವುದಕ್ಕೆ ಹಣ ಬೇಕು ಎಂದು ಕಾರಣವಿಲ್ಲದೆ ಲ್ಯಾಂಡ್ ರೆವಿನ್ಯೂ ಆಕ್ಟ್ ಮನಸ್ಸಿಗೆ ಬಂದ ಹಾಗೆ ತಿದ್ದುಪಡಿ ಮಾಡುವುದು ಇಂದು ಸಂಜೆ ಐದು ಗಂಟೆಗೆ ಅವಸರದಲ್ಲಿ ಗಿಲಟಿನ್ ಮಾಡಿ ಪಾಸು ಮಾಡಿಕೊಳ್ಳುವುದು ನೋಡಿದರೆ ಕಾಂಗ್ರೆಸ್ ಪಕ್ಷದಲ್ಲಿರುವ ಒಳಗುದಿ ನೆನಗುದಿ ಹೊರಗೆ ಬಂದಿದೆ. ಬಹುತರವಾಗಿ ಈ ಒಳಗುದಿಯಿಂದ ಶ್ರೀಮಾನ್ ಕೃಷ್ಣಪ್ಪನವರು ಪಾರಾಗಿ ಬಂದಿದ್ದಾರೆ ಎಂದು ಕಾಣುತ್ತದೆ.

4-30 P.M.

ಹೀಗೆ ನೀವು ಒಂದು ಮೆಜಾರಿಟಿ ಪಕ್ಷವಾಗಿ ಇರುವುದರಿಂದ ನೀವು ಏನು ಬೇಕಾದರೂ ತೀರ್ಮಾನ ಮಾಡಬಹುದು. ಖುಷ್ಕಿ ಜಮೀನನ್ನು ತರಿಗೆಳೆದು, ತರೀ ಜಮೀನನ್ನು ಭಾಗಾಯತಿಗೆಳೆದು, ಭಾಗಾಯತು ಜಮೀನನ್ನು ಪ್ಲಾಂಟೇಷನ್ನಿಗೆಳೆದು ಹೀಗೆ ಒಂದನ್ನೊಂದು ಅದಲಬದಲೀ ಮಾಡಿ ಇದನ್ನು ಒಂದು ಹದಕ್ಕೆ ಹೇಗೋ ತಂದಿದ್ದೀರಿ. ಅಂತೂ ಈ ಬಾಬಿನಿಂದ ಸರ್ಕಾರಕ್ಕೆ ಹೆಚ್ಚು ಕಂದಾಯಬರುವಂತೆ ಮಾಡಿಕೊಂಡಿದ್ದೀರಿ. ಆದರೆ ನಮಗೇನೂ ಇದರ ವಿಚಾರವಾಗಿ ಅಷ್ಟು ಆಗ್ರಹವಾಗಲೀ ದುಃಖವಾಗಲೀ ಅಥವಾ ವಿಷಾದಗಳಾಗಲೀ ಯಾವುದೂ ಇಲ್ಲ. ಆದರೆ ಲ್ಯಾಂಡ್ ರೆವಿನ್ಯೂ ಕೋಡನ್ನು ಬರೆದಿರತಕ್ಕದ್ದೂ ಮತ್ತು ಅದನ್ನು ತಿದ್ದುಪಡಿ ಮಾಡತಕ್ಕದ್ದೂ ಬೇರೆ ಸಂದರ್ಭಗಳು. ಆದರೆ ಸರ್ವೆ ಅಂಡ್ ಸೆಟಲ್‌ಮೆಂಟ್ ಕೆಲಸ ನಿಂತು ಹೋಗಿದೆ, ಆದಕ್ಕಾಗಿ ಈಗ ತಿದ್ದುಪಡಿಯನ್ನು ಲ್ಯಾಂಡ್ ರೆವಿನ್ಯೂ ಕೋಡಿಗೆ ತರರಾಗಿದೆ, ಇದನ್ನು ನೀವುಗಳು ಒಪ್ಪಬೇಕು ಅಂತ ಹೇಳತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ. ಆದರೆ ತಮಗೆ ಈ ಒಂದು ತಿದ್ದುಪಡಿಯಿಂದ ಮುಂದೆ ಏನೇನು ಪರಿಣಾಮಗಳಾಗುತ್ತವೆ ಎಂಬುದನ್ನು ತಾವೇ ನೋಡುತ್ತೀರಿ. ಈಗ ಇರತಕ್ಕ ನಮ್ಮ ಭೂಕಂದಾಯದ ಒಂದು ಪದ್ಧತಿಯೇನಿದೆ ಅದು ಬಹಳ ಹಿಂದಿನದು, ಇದು ಆ ಒಬೀರಾಯನ ಕಾಲದಿಂದಲೂ ಹೀಗೆ ನಡೆದುಕೊಂಡು ಬರುತ್ತಿದೆ ಎಂಬ ವಿಷಯವನ್ನು ನಾವು ಇದೇ ಸಭೆಯಲ್ಲಿ ಹತ್ತಾರಾವರ್ತಿ ಹೇಳಿದ್ದೇವೆ. ಈ ವಿಚಾರವನ್ನು ಶ್ರೀ ಕಡಿದಾಳ್ ಮಂಜಪ್ಪನವರೂ ಕೂಡ ಒಪ್ಪಿಕೊಂಡಿದ್ದರು. ಅದನ್ನು ಬದಲಾವಣೆ ಮಾಡುವುದಕ್ಕೆ ಹೊರಟವರು ಆದರ ಮೇಲೆ ಮತ್ತಿಷ್ಟು ಹೊರೆಯನ್ನು ಅಂದರೆ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂತ ಬೇರೆ ಹಾಕಿದರು. ಕಂದಾಯವನ್ನು ಬಿಟ್ಟುಬಿಡಬೇಕೆಂಬ ತತ್ವವನ್ನು ಒಪ್ಪಿದ್ದವರು ಈ ದಾರಿಯನ್ನು ಹಿಡಿದರು. ಈಗಲೂ ಈ ಬಾಬಿನಿಂದ ತೆರಿಗೆ ಹಣ ವಸೂಲಾಗುತ್ತಿದೆ. ಈ ಒಂದು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸಿನಿಂದಲೇ ಸರ್ಕಾರಕ್ಕೆ ಅವರ ಲೆಕ್ಕದಪ್ರಕಾರ 2 ಕೋಟಿ 50 ಲಕ್ಷ ಎಕರೆಗಳಿಂದ ಸುಮಾರು 4 ಕೋಟಿಗಳಷ್ಟು ಹಣ ಬೊಕ್ಕಸಕ್ಕೆ ಬಂದು ಬೀಳುತ್ತಿದೆ. ಅಷ್ಟಕ್ಕೂ ತೃಪ್ತರಾಗದೆ ಕಂದಾಯದ ಮೇಲೆ ಮತ್ತೆ ಸರ್‌ಛಾರ್ಜ್ ಅಂತ ಹಾಕಿ ಆದರಿಂದಲೂ ಸುಮಾರು ಏಳೂವರೆ ಅಥವಾ 8 ಕೋಟಿ ರೂಪಾಯಿಗಳಷ್ಟು ವರಮಾನವನ್ನು ಸರ್ಕಾರದವರು ಪಡೆಯುತ್ತಿದ್ದಾರೆ. ಹೀಗೆ ಈ ದಿವಸ ಸರ್ಕಾರದವರು ಈ ಭೂಮಿಯಿಂದಲೇ ಒಟ್ಟು 19-20 ಕೋಟಿ ರೂಪಾಯಿಗಳನ್ನು ಪಡೆಯತಕ್ಕಂಥ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ಈ ದಿವಸ ನಾವು ಅಂಗೀಕಾರಮಾಡತಕ್ಕ ತಿದ್ದುಪಡಿಯ ಪರಿಣಾಮ ರೈತರಮೇಲೆ ಇನ್ನು ಮುಂದಿನ 30 ವರ್ಷಗಳ ಕಾಲ ಒಂದೇ ಸಮನಾಗಿದ್ದು ರೈತರು ಸರ್ಕಾರದ ಬೊಕ್ಕಸಕ್ಕೆ ರಾಜ್ಯದಲ್ಲಿರತಕ್ಕ 2 ಕೋಟಿ 80 ಲಕ್ಷ ಎಕರೆ ಭೂಮಿಯ ಬಗ್ಗೆ ಕಂದಾಯದ ರೂಪದಲ್ಲಿ ಪ್ರತಿ ವರ್ಷವೂ 18 ಕೋಟಿ ರೂಪಾಯಿಗಳನ್ನೂ, ಲ್ಯಾಂಡ್ ರೆವಿನ್ಯೂ ಆಧಾರದ ಮೇಲೆ ವಿಧಿಸತಕ್ಕ ಅಂದರೆ, ಪ್ರತಿಯೊಂದು ರೂಪಾಯಿನ ಮೇಲೂ ಕೊಡತಕ್ಕ 90 ಪೈಸೆ ಸೆಸ್ಸಿನ ರೂಪದಲ್ಲೂ ಮತ್ತು ಸರ್‌ಛಾರ್ಜ್ ರೂಪದಲ್ಲಿ 2 ಕೋಟಿ 50 ಲಕ್ಷ ಎಕರೆಗಳಮೇಲೆ 7-8 ಕೋಟಿ ರೂಪಾಯಿಗಳನನ್ನೂ ತುಂಬಬೇಕಾಗಿರುತ್ತದೆ.........

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಯಾವ ಆಧಾರದ ಮೇಲೆ ಅಷ್ಟಾಗುತ್ತದೆಂದು ಹೇಳುತ್ತೀರಿ? ಇದೆಲ್ಲಾ ಸೇರಿದರೂ ಎರಡೂವರೆ ಮೂರು ಕೋಟಿಗಳಿಗಿಂತ ಜಾಸ್ತಿಯಾಗುವುದಿಲ್ಲ. ಆದರೆ ತಾವು ಹೇಳುತ್ತಿರುವ 18-19 ಕೋಟಿ ರೂಪಾಯಿಗಳೆಂಬುದು ಸುಳ್ಳು.

ಶ್ರೀ ಎಸ್. ಗೋಪಾಲಗೌಡ.—ತಾವು ತಮ್ಮಲ್ಲಿರತಕ್ಕ ಕರಾರುವಾಕ್ ಲೆಕ್ಕಗಳನ್ನು ಸಭೆಯ ಮುಂದಿಡಿ, ಅವು ಸರಿಯಾಗಿದ್ದರೆ ಅದನ್ನು ನಾವೂ ಸಹಾ ಒಪ್ಪಿಕೊಳ್ಳುತ್ತೇನೆ. ತಾವು ನನಗೆ ಜೋನರ್ ವಿವರಗಳನ್ನೆಲ್ಲಾ ಸರಿಯಾಗಿ ಒದಗಿಸಿಕೊಟ್ಟಲ್ಲಿ ನಾನು ಇಲ್ಲಿಯವರೆಗೂ ಹೇಳಿರತಕ್ಕದ್ದು ಒಂದು ಆಧಾರವನ್ನೇ ಅವಲಂಬಿಸಿದೆ ಎಂಬುದನ್ನು ತೋರಿಸಿಕೊಡುತ್ತೇನೆ. ನಾನು ಒಟ್ಟಿನಲ್ಲಿ ಏನೊಂದು ಮಾತನ್ನು ಹೇಳಬೇಕಾಗಿದೆ ಎಂದರೆ : ಬಹಳ ಮಟ್ಟಿಗೆ ನಾವು ಖುಷ್ಕಿ ಜಮೀನುಗಳೆಂದು ಏನು ಕರೆಯುತ್ತಿದ್ದೇವೋ ಆ ಭೂಮಿಗೆ ಹೆಚ್ಚಿನ ರಿಯಾಯಿತಿಗಳನ್ನು ತೋರಿಸಬೇಕಾಗಿತ್ತು. ಈಗ ಅದನ್ನು ಬಿಟ್ಟು ಪ್ಲಾಂಟೇಷನಗಳಿಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಿದ್ದೀವೆ. ಅದಕ್ಕೆ ಕಾರಣ ಅದು ಒಂದು ಹೆಚ್ಚಿನ ಫಾರಿನ್ ಎಕ್ಸ್‌ಛೇಂಜನ್ನು ತರುತ್ತೆ ಎಂದು ಹೇಳಿದ್ದಾರೆ. ಇನ್ನೂ ಒಂದು ವಿಚಾರವೆಂದರೆ, ಆ ಭೂಸುಧಾರಣಾ ಮಸೂದೆಯಲ್ಲಿ ಈ ಪ್ಲಾಂಟೇಷನ್‌ಗಳ ಬಗ್ಗೆ ಇರತಕ್ಕ ಸೀಲಿಂಗ್ ಪರಿಮಿತಿಯನ್ನು 100 ಎಕರೆಗಳಿಂದ ಇದನ್ನು ಹೊರತುಪಡಿಸಿದ್ದಾರೆ. ಮತ್ತು ಈ ಪ್ಲಾಂಟೇಷನ್‌ಗಳ ಮಧ್ಯದಲ್ಲಿರತಕ್ಕ ಗದ್ದೆಯ ಭೂಮಿಯನ್ನು ಅಂದರೆ, ಸುತ್ತಲೂ ಪ್ಲಾಂಟೇಷನ್‌ಗಳಿಂದ ಸುತ್ತುವರಿದಿರತಕ್ಕ ಗದ್ದೆಯ ಜಮೀನನ್ನು, ಅಂದರೆ ಹೀಗೆ ಏಳು ಸುತ್ತಿನ ಕೋಟೆಯ ಮಧ್ಯೆ ಎಲ್ಲಿ ಅಂಥ ಜಮೀನಿದೆಯೋ ನನಗಂತೂ ಗೊತ್ತಿಲ್ಲ, ಅದನ್ನೂ ಅವರಿಗೇ ಕೊಡಬೇಕು ಅಂತ

(ಶ್ರೀ ಎಸ್. ಗೋಪಾಲ ಗೌಡ)

ಹೇಳಿದ್ದಾರೆ. ಇದನ್ನು ನೋಡಿದರೆ ಈ ಸರ್ಕಾರ ಇನ್ನೂ ಆ ವಿಮಾನದಲ್ಲಿ ಓಡಾಡತಕ್ಕ ಪ್ಲಾಂಟರುಗಳಿಗೇ ಅನುಕೂಲ ಮಾಡಿ, ಆ ಪಾತಾಳದಲ್ಲಿ ಬಿದ್ದು ಹುಳುಗಳಂತೆ ಕೆಸರಿನಲ್ಲಿ ಬಿದ್ದು ಒದ್ದಾಡತಕ್ಕ ಜನರ ಬಗ್ಗೆ ಕನಿಕರಪಡದೆ ಅವರನ್ನ ಮೇಲಕ್ಕೆತ್ತುವುದಕ್ಕೆ ಪ್ರಯತ್ನ ಪಡದೆ ಅವರ ಮೇಲೆ ಮತ್ತಷ್ಟು ಮಣ್ಣು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು ರಬ್ಬರ್, ಕೋಕೊ ಇತ್ಯಾದಿ ಪ್ಲಾಂಟೇಷನ್‌ಗಳವರೂ ಕೂಡ ಹೆಚ್ಚಿನ ಆದಾಯವನ್ನು ಪಡೆಯುತ್ತಾರೆ, ಅಂಥವರು ಟ್ಯಾಕ್ಸ್ ಅಷ್ಟೇ ಅಲ್ಲ ಸೂಪರ್ ಟ್ಯಾಕ್ಸನ್ನೂ ಸಹಾ ಕೊಡುತ್ತಾರೆ. ಇನ್ನು ಮುಂದೆ ಇಂಥವರ ಅಭಿವೃದ್ಧಿಗಾಗಿ ಪ್ಲಾಂಟೇಷನ್‌ಗಳಿಗೆ ಮುಂದಕ್ಕೆ ಒಂದು ಪರ್ಸೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ಹೇಳಿರತಕ್ಕದ್ದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಆದರೆ ಶ್ರೀಮಾನ್ ಅಪ್ಪಣ್ಣನವರು ಮಾತನಾಡುತ್ತಾ ಪ್ಲಾಂಟರುಗಳಲ್ಲಿ ದೊಡ್ಡ ದೊಡ್ಡ ಪ್ಲಾಂಟರುಗಳೂ ಇದ್ದಾರೆ ಸಣ್ಣ ಸಣ್ಣ ಪ್ಲಾಂಟರುಗಳೂ ಇದ್ದಾರೆಂದು ಹೇಳಿದರು. ಆದರೆ ಅವರು ಸಣ್ಣ ಪ್ಲಾಂಟರುಗಳಾಗಿದ್ದರೂ ಅವರು ತೆರಿಗೆಯನ್ನಾದರೂ ಕೊಡತಕ್ಕ ಸ್ಥಿತಿಯಲ್ಲಿದ್ದಾರೆಂದು ಹೇಳುತ್ತೇನೆ. ಆದರೆ ಈ ಅನೇಕರು ಅನಿಶ್ಚಿತವಾಗಿರತಕ್ಕ ಮಳೆಮಾರುಗಳನ್ನು ನಂಬಿಕೊಂಡಿರತಕ್ಕವರ ಪಾಡೇನಾಗಬೇಕು ? ಆದುದರಿಂದ ಇಂಥ ಪ್ಲಾಂಟರುಗಳಿಗೆ ರಿಯಾಯಿತಿಯನ್ನು ತೋರಿಸುವುದಕ್ಕೆ ಬದಲಾಗಿ ಸಮಾಜದಲ್ಲಿ ಈ ದಿವಸ ಯಾವ ಒಬ್ಬ ರೈತ ಕೇವಲ ಖುಷ್ಕಿ ಜಮೀನನ್ನೇ ನಂಬಿಕೊಂಡು ಇರುತ್ತಾನೋ ಅಂಥ ಮನುಷ್ಯನಿಗೆ 1200 ರೂಪಾಯಿಗಳ ವರಮಾನ ತರತಕ್ಕ ಇಲ್ಲವೇ ಎರಡು ಬೇಸಿಕ್ ಹೋಲ್ಡಿಂಗ್ ಎಂತ ನಾವೇನು ಹೇಳುತ್ತೇವೆ ಅಷ್ಟು ಜಮೀನಿರತಕ್ಕವರಿಗೆಲ್ಲಾ ಈ ಕಂದಾಯವನ್ನು ಮಾಫೀ ಮಾಡಬೇಕೆಂದು ನಾನು ಹೇಳುತ್ತೇನೆ. ಆದರೆ ಈ ದಿವಸ ಈ ಕಂದಾಯ ಹೇಗೆ ತಲೆ ಎತ್ತಿತು ಎಂಬುದರ ಬುನಾದಿಯನ್ನು ವಿಮರ್ಶೆ ಮಾಡುವುದಕ್ಕೆ ಸರ್ಕಾರ ತಯಾರಾಗಿಲ್ಲದಿದ್ದರೂ, ಯಾವ ರೈತನಿಗೆ ಬಿತ್ತನೆ ಮಾಡಿದ ನಂತರ ಆತನಿಗೆ ಬೆಳೆ ಬಾರದಿದ್ದರೆ ಹೋಗಲಿ ಅವನು ಬಿತ್ತಿದ ಕಾಳೂ ಕೂಡ ಅವನಿಗೆ ಮಳೆ ಬಾರದೆಹೋಗಿ ಬೆಳೆಯಾಗದೆ ಇದ್ದಾಗ ಅಂಥವನಿಗೆ ಕಂದಾಯವನ್ನು ಮಾಫೀ ಮಾಡದೆ ಹೋದರೆ ಆತನ ಸ್ಥಿತಿ ಬಹಳ ಚಿಂತಾಜನಕವಾಗುವುದು. ಆದುದರಿಂದ ಅಂಥ ರೈತರಿಗೆ ಕಂದಾಯದ ಮಾಫಿಯನ್ನು ಮಾಡಲೇಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಕಂದಾಯ ಸಚಿವರು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ನಾನು ಸ್ವಾಗತಿಸುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತಾ ಕೆಲವು ಸದಸ್ಯರೇನು ಮಾತನಾಡಿದ್ದಾರೆ ಅದರ ಬಗ್ಗೆ ಎರಡು ಮಾತುಗಳನ್ನಾಡುತ್ತೇನೆ.

ಇದುವರೆಗೂ ಮಾತನಾಡಿದ ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಈ ತಿದ್ದುಪಡಿ ಮಸೂದೆಯಿಂದ ದೇಶಕ್ಕೇನೂ ಅನುಕೂಲವಾಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಇಂಥ ಒಂದು ಪ್ರಯೋಜನವಿಲ್ಲದ ಮಸೂದೆಯನ್ನು ರೆವಿನ್ಯೂ ಸಚಿವರು ಸಭೆಯ ಮುಂದೆ ತರಬಾರದಾಗಿತ್ತು ಎಂದು ಹೇಳಿದರು. ಬಹುಶಃ ರೆವಿನ್ಯೂ ಸೆಟಲ್‌ಮೆಂಟಿನ ವಿಚಾರವನ್ನೇ ಅವರು ಮನಸ್ಸಿನಲ್ಲಿಟ್ಟು ಮಾತನಾಡಿರುವಂತೆ ಕಾಣುತ್ತದೆ. ಹೀಗೆ ಅವರು ಮಾತನಾಡಿರತಕ್ಕದ್ದನ್ನು ನೋಡಿದರೆ ಅವರ ವಾದಕ್ಕೂ ಈ ಬಿಲ್ಲಿಗೂ ಯಾವ ಸಂಬಂಧವೂ ಇದ್ದಂತೆ ಕಾಣುವುದಿಲ್ಲ. ಆದರೆ ಸರ್ಕಾರದವರು ಎಷ್ಟು ರಿಲೀಫನ್ನು ಕೊಡಬಹುದೋ ಅಷ್ಟನ್ನೂ ಕೊಟ್ಟಿದ್ದಾರೆಂದು ನನಗೆನಿಸುತ್ತಿದೆ. ಆದರೆ ನಾವು ಈ ಸರ್ವೆ ಮತ್ತು ಸೆಟಲ್‌ಮೆಂಟ್ ಪದ್ಧತಿಯನ್ನು ಬಹಳ ಪುರಾತನ ಕಾಲದಿಂದಲೂ ನಡೆಸಿಕೊಂಡು ಬರುತ್ತಿದ್ದೇವೆ. ಪ್ರತಿಯೊಂದು ರೂಪಾಯಿನ ಮೇಲೂ ಒಂದಾಣೆಯಂತೆ ಬರತಕ್ಕ ಉತ್ಪತ್ತಿಯಿಂದಲೇ ಬಹುಕಾಲ ನಮ್ಮ ಸರ್ಕಾರವನ್ನು ನಡೆಸಿಕೊಂಡು ಬರಲಾಗುತ್ತಿತ್ತು, ಇದಕ್ಕಿಂತಲೂ ಹೆಚ್ಚಿನ ವರಮಾನ ತರುತ್ತಿದ್ದಂಥ ಬಾಬು ಮತ್ತೊಂದಿರಲಿಲ್ಲ ಎಂಬುದಾಗಿ ನಾವು ಚರಿತ್ರೆಗಳಲ್ಲಿ ಓದಿದ್ದೇವೆ. ಆದರೆ ಇತ್ತೀಚೆಗೆ ರೈತನಾಗಲಿ ಅಥವಾ ನಾಗರಿಕರಾಗಲೀ ನಾನಾ ರೀತಿಯ ತೆರಿಗೆಗಳನ್ನು ಕೊಡುತ್ತಾರೆ. ಅದರಲ್ಲೂ ಅನೇಕ ಸದಸ್ಯರು ಹೇಳಿದ ಹಾಗೆ ರೈತನೂ ಕೂಡ ಆ ತೆರಿಗೆ ಎಲ್ಲವನ್ನೂ ಕೊಡುತ್ತಾನೆ ಜೊತೆಗೆ ಲ್ಯಾಂಡ್ ರೆವಿನ್ಯೂವನ್ನೂ ಕೂಡ ಕೊಡುತ್ತಾನೆ. ಆದ್ದರಿಂದ ಅವನಿಗೆ ರಿಲೀಫ್ ಕೊಡುವುದು ಸಾಧುವಾದದ್ದು ಎಂದು ಹೇಳಿ ಸರ್ಕಾರದವರು ಯೋಚನೆ ಮಾಡಿ ಆರೂಕಾಲು ಪರ್ಸೆಂಟ್ ಇದ್ದುದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಅನೇಕ ಸದಸ್ಯರು ಅಂಕಿ ಅಂಶ ಇಲ್ಲ ಏನು ರಿಲೀಫ್ ಕೊಟ್ಟರಿ ಎಂಬುದು ಅರ್ಥವಾಗಿಲ್ಲ ಎಂದು ಹೇಳಿದರು; ಆ ಭಯಕ್ಕೆ ಆಸ್ಪದವಿಲ್ಲ ಎಂದು ಹೇಳುತ್ತೇನೆ. ನೂರು ರೂಪಾಯಿ ಕೊಡುತ್ತಾ ಇದ್ದವನಿಗೆ ಎರಡು ಪರ್ಸೆಂಟು ಕಡಮೆಯಾಗುತ್ತದೆ. ಆರೂಕಾಲ. ಪರ್ಸೆಂಟ್ ಕೊಡಬೇಕಾಗಿತ್ತು, ಈಗ ನಾಲ್ಕು ಪರ್ಸೆಂಟ್ ಕೊಡುತ್ತಾನೆ. ಆರೂಕಾಲು ಪರ್ಸೆಂಟ

ಕೊಡುವವನಿಗೆ ಎರಡು ರೂಪಾಯಿ ರಿಯಾಯಿತಿ ದೊರೆತಿದೆ ಎಂಬುದನ್ನು ಮೊಟ್ಟಮೊದಲನೆಯದಾಗಿ ಒಪ್ಪಿಕೊಳ್ಳಬೇಕಾದ್ದು ಅಗತ್ಯ. ಅಂದಮೇಲೆ ಅದಕ್ಕೆ ಅಂಕಿ ಅಂಶ ನಮ್ಮ ಮುಂದೆ ಇಡಿ ಎಂದು ಹೇಳಬೇಕಾಗಿಲ್ಲ. ಸರ್ವೆ ಸೆಟ್ಲಮೆಂಟ್ ರಿಪೋರ್ಟಿನಲ್ಲಿ ಎಲ್ಲಾ ಅಂಕಿ ಅಂಶಗಳನ್ನೂ ಇಟ್ಟಿದ್ದಾರೆ, ಅದನ್ನು ಅಪ್ರೂವ್ ಮಾಡುವುದಕ್ಕೆ ಮುಂಚೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಹಾಗೆ ಎರಡು ಪರ್ಸೆಂಟ್ ರೆಡ್ಯೂಸ್ ಮಾಡಿದರೆ ಎಷ್ಟು ಕಂದಾಯ ಫೈನಲ್ ಆಗಿ ನಿಂತುಕೊಳ್ಳುತ್ತದೆ ಎಂಬ ಅಂಕಿ ಅಂಶಗಳನ್ನು ಕೂಡ ಈ ಸಭೆಯ ಮುಂದೆ ಇಟ್ಟು ಆಮೇಲೆ ಅದಕ್ಕೆ ಸಭೆಯ ಒಪ್ಪಿಗೆಯನ್ನು ಕೇಳು ತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಎಂದಮೇಲೆ ಯಾವ ರಿಯಾಯಿತಿಯೂ ದೊರೆತಿಲ್ಲ ಎಂದು ಹೇಳುವುದು ಸರಿಯಾದ ವಾದ ಅಲ್ಲ. ನಿಜವಾಗಿಯೂ ಕೂಡ ಯೋಗ್ಯವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಬಹುದು. ಬಹುಶಃ ಅನೇಕರ ವಾದ ಜಮೀನಿನಮೇಲೆ ಕಂದಾಯ ಇರಬಾರದು, ಅದರಲ್ಲೂ ಸಣ್ಣ ಹಿಡುವಳಿ ಮೇಲೆ ಕಂದಾಯ ಇರಬಾರದು ಎಂಬ ವಾದ ಸರಿಯಾಗಿದೆ, ಆದರೆ ತತ್ಕಾಲಿಕವಾಗಿ ಅದನ್ನು ತೆಗೆದು ಹಾಕುವುದರಿಂದ ಸರ್ಕಾರಕ್ಕೆ ಬರತಕ್ಕ ವರಮಾನವನ್ನು ಬೇರೆ ಯಾವ ರೀತಿಯಲ್ಲಿ ಸರಿತೂಗಿಸಿಕೊಳ್ಳಬಹುದು ಎಂಬ ಪ್ರಶ್ನೆ ಬರುತ್ತದೆ. ಅದು ಸ್ವಲ್ಪ ಕ್ಲಿಷ್ಟವಾದ ಸಮಸ್ಯೆಯಾಗಿರುವುದರಿಂದ ಈಗ ಸಾಧ್ಯವಾದಷ್ಟು ರಿಲೀಫ್ ಕೊಡೋಣ ಮುಂದೆ ಬಹುಶಃ ರೈತನಿಗೆ ಕೊಡತಕ್ಕ ರಿಲೀಫ್‌ಗಳಲ್ಲಿ ಇದೇ ಮೊಟ್ಟಮೊದಲನೆಯದಾಗಲಿ ಎಂದು ಹೇಳಿ ಈ ರಿಲೀಫ್ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸರ್ವೇ ಸೆಟ್ಲಮೆಂಟ್ ಹುಟ್ಟಿದ ಕಾಲದಿಂದ ಅಲ್ಲಿಯವರೆಗೂ ಆರೂಕಾಲು ಪರ್ಸೆಂಟ್ ಕೊಡುತ್ತಾ ಇದ್ದೆವು ಈಗ ನಾಲ್ಕು ಪರ್ಸೆಂಟ್‌ಗೆ ಇಳಿಸುತ್ತಾ ಇದ್ದೇವೆ ಮುಂದೆ ಉತ್ತರೋತ್ತರ ಸಣ್ಣ ಹಿಡುವಳಿ ಮೇಲೆ ಮತ್ತು ವರಮಾನ ಬರದೆ ಇರತಕ್ಕ ಹಿಡುವಳಿ ಮೇಲೆ ಕಂದಾಯ ತೆಗೆದುಹಾಕುವುದಕ್ಕೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿ ಯೋಚನೆ ಮಾಡಿದರೂ ಮಾಡಬಹುದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಇವತ್ತು ರೈತನಮೇಲೆ ಇರತಕ್ಕ ಹೊರೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ರೈತರು ಕೊಡುತ್ತಾ ಇರುವುದರಲ್ಲಿ ತಾವು ರಿಯಾಯಿತಿ ತೋರಿಸಿದ್ದೀರಾ ಅಥವಾ ಪ್ರಪೋಸ್ ಮಾಡಿರುವ ಕಂದಾಯದಲ್ಲಿ ರಿಯಾಯಿತಿ ತೋರಿಸಿದ್ದೀರ ?

ಶ್ರೀ ಎಂ. ಸಿ. ಬಸಪ್ಪ.—ರೈತ ಕೊಡತಕ್ಕ ಕಂದಾಯದಲ್ಲಿ ರಿಲೀಫ್ ಕೊಡಬೇಕೇ ಬಿಡಬೇಕೇ ಎನ್ನುವುದು ಸರ್ಕಾರದ ಮುಂದೆ ಇರತಕ್ಕ ಪ್ರಶ್ನೆ ಅಲ್ಲ. ಸರ್ಕಾರದ ಮುಂದೆ ಎರಡು ಪ್ರಶ್ನೆಗಳು ಇವೆ. ಸರ್ವೆ ಸೆಟ್ಲಮೆಂಟ್‌ಗೆ ಸಂಬಂಧಪಟ್ಟಂತೆ 30 ವರ್ಷಕ್ಕೆ ಒಂದು ಸಾರಿ ಸಾಯಿಲ್ ಕ್ಲಾಸಿಫಿಕೇಷನ್ ಮಾಡಿ ಅದರಿಂದ ಬರತಕ್ಕ ವರಮಾನದ ಮೇಲೆ ರೂಪಾಯಿಗೆ ಒಂದಾಣೆ ಹಾಕಬೇಕೆನ್ನುವುದು ಅದರಲ್ಲಿ ನಮೂದಾಗಿದೆ. ಆ ವರದಿಯನ್ನು ಈ ಸಭೆಯಲ್ಲಿಟ್ಟು ಅದು ಇಲ್ಲಿ ಚರ್ಚೆಯಾಗಿದೆ. ಮತ್ತು ಸರ್ಕಾರದ ಗಮನಕ್ಕೂ ಕೂಡ ಅನೇಕ ವಿಷಯಗಳನ್ನು ತಂದು ಎರಡು ಕಡೆಯ ಸದಸ್ಯರೂ ಕೂಡ ಮಾತನಾಡಿದ್ದಾರೆ. ಅದರಲ್ಲಿ ರೈತನಿಗೆ ಯಾವುದಾದರೂ ರಿಲೀಫ್ ಕೊಡುವುದು ಸಾಧುವಾದುದು ಎಂದು ಹೇಳಿದ್ದಾರೆ. ಅದರಲ್ಲಿ ರೈತನಿಗೆ ಯಾವ ರೀತಿಯಲ್ಲಿ ರಿಲೀಫ್ ಕೊಡಬೇಕೆಂಬುದನ್ನು ಯೋಚನೆ ಮಾಡಿ ಆರೂಕಾಲು ಪರ್ಸೆಂಟ್ ಇದ್ದುದನ್ನು ನಾಲ್ಕು ಪರ್ಸೆಂಟ್ ಕೊಟ್ಟರೆ ಸಾಕು ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದಿರುವುದರಿಂದ ಎರಡು ರೂಪಾಯಿ ಇಪ್ಪತ್ತೈದು ಪೈಸೆ ಆತ ಕೊಡಬೇಕಾಗುತ್ತದೆ. ಇಷ್ಟುಮಟ್ಟಿನ ರಿಲೀಫ್ ಕೊಡೋಣ ಎಂಬ ದೃಷ್ಟಿಯಿಂದ ಈ ಮಸೂದೆಯನ್ನು ಈ ಸಭೆಯಲ್ಲಿ ತಂದಿದ್ದಾರೆ. ಆದ್ದರಿಂದ ಇದು ಈಗಿರತಕ್ಕ ಕಂದಾಯ ಅಥವಾ ಮುಂದೆ ಬರತಕ್ಕ ಕಂದಾಯದ ಮೇಲೆ ಮಾಡಿದ್ದಾರೆಯೇ ಎಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಈಗಿರತಕ್ಕ ಕಂದಾಯದ ಮೇಲೆ ಎಷ್ಟು ಕಡಿಮೆ ಯಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಎಂ. ಸಿ. ಬಸಪ್ಪ.—ಈಗಿರತಕ್ಕದ್ದನ್ನು ತೆಗೆದು ಹಾಕಬೇಕೆಂದು ವಿರೋಧ ಪಕ್ಷದವರು ಅಭಿಪ್ರಾಯಪಡಬಹುದು ಆದರೆ ಜವಾಬ್ದಾರಿ ಹೊತ್ತಿರತಕ್ಕ ಸರಕಾರದವರು ಎಷ್ಟು ರಿಲೀಫ್ ಕೊಡಬಹುದು ಎಂಬುದನ್ನು ಯೋಚನೆ ಮಾಡಿ ಹೆಚ್ಚಿನ ರಿಲೀಫ್ ಕೊಟ್ಟಿದ್ದಾರೆ ಎಂದು ಹೇಳಿ ನಾನು ಹೇಳುತ್ತೇನೆ. ಸಿಂಪಲ್ ಮ್ಯಾಥಮ್ಯಾಟಿಕಲ್ ಕ್ಯಾಲ್ಕುಲೇಷನ್ ಪ್ರಕಾರ ಹೇಳಬಹುದೇ ಹೊರತು, ಅಳತೆ ಮಾಡಿ ಈ ಮನೆಯಲ್ಲಿ ಕುಳಿತುಕೊಂಡು ಇಷ್ಟೇ ಆಗುತ್ತದೆ ಎಂದು ನಿಗದಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಶ್ರೀಮಾನ್ ವೆಂಕಟೇಗೌಡರಿಗೆ ಹೇಳುತ್ತೇನೆ ಮ್ಯಾಥಮ್ಯಾಟಿಕಲ್ ಕ್ಯಾಲ್ಕುಲೇಷನ್ ಪ್ರಕಾರ ನಿಗದಿ ಮಾಡುತ್ತೇವೆ ಅದನ್ನು ಆಧಾರವಾಗಿಟ್ಟುಕೊಂಡು ಅಧಿಕಾರಿಗಳು ಸರ್ವೇ ನಂಬರು ಬರೆಯುತ್ತಾರೆ, ನೋಡುತ್ತಾರೆ, ಅದರ ಮೇಲೆ ಕಂದಾಯ ನಿಗದಿ ಮಾಡುತ್ತಾರೆ ಅವನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಕ್ಕೆ ಬರುವುದಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು ಪ್ಲಾಂಟೇಷನ್ ಕ್ರಾಪ್ ವಿಷಯದಲ್ಲಿ ವಿಶೇಷವಾದ ಒಂದು ರಿಯಾಯಿತಿಯನ್ನು ಕೊಟ್ಟಿದ್ದಾರೆ ಎಂಬು

(ಶ್ರೀ ಎಂ. ಸಿ. ಬಸಪ್ಪ)

ದನ್ನು ಒಪ್ಪಿಕೊಳ್ಳಬೇಕು. ಇದರಲ್ಲಿ ಒಂದು ಪರ್ಸೆಂಟ್ ರೆಡ್ಯೂಸ್ ಮಾಡಿದ್ದಾರೆ. ಅದು ಹೆಚ್ಚಾಗುತ್ತದೆಯೋ ಕಡಿಮೆಯಾಗುತ್ತದೆಯೋ ಎಂದು ಮಾನ್ಯ ಸದಸ್ಯರು ಕೇಳಲು ಅಪೇಕ್ಷೆಪಡುತ್ತಾರೆ ಆದರ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಅದಲ್ಲ. ನಮ್ಮ ಮುಂದೆ ಇರತಕ್ಕ ಪ್ರಶ್ನೆ ಬರತಕ್ಕ ವರಮಾನದಲ್ಲಿ ಸರಕಾರಕ್ಕೆ ಎಷ್ಟು ಕೊಡಬೇಕು ಎನ್ನುವುದು ಪ್ರಶ್ನೆ. ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಲ್ಯಾಂಡ್ ಎಂದರೆ ಏನು ಎಂಬುದನ್ನು ಡಿಫೈನ್ ಮಾಡಿದ್ದಾರೆ. ರೆವಿನ್ಯೂ ಸೆಟ್ಲಮೆಂಟ್ ರಿಪೋರ್ಟ್‌ನಲ್ಲಿ ನಮ್ಮ ಜೋನ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಮೂರು ಭಾಗವಾಗಿ ವಿಂಗಡಿಸದೇ ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ, ಡ್ರೈ, ವೆಟ್, ಮಲ್ಬರಿ, ಗಾರ್ಡನ್ ಎಂದು ಮಾಡಿದ್ದಾರೆ. ಮಲ್ಬರಿಗೆ ಒಂದು ಪ್ರತ್ಯೇಕ ಕೇಡರ್‌ನ್ನೇ ಕ್ರಿಯೇಟ್ ಮಾಡಿದ್ದಾರೆ. ಈಗ ಇರತಕ್ಕ ಆಕ್ಟ್‌ನಲ್ಲಾಗಲಿ ಅಥವಾ ತಿದ್ದುಪಡಿ ತಂದಿರತಕ್ಕ ಆಕ್ಟ್‌ನಲ್ಲಾಗಲಿ ಅದಕ್ಕೆ ಸ್ಥಾನವೇ ಇಲ್ಲ. ಇದನ್ನು ಮಂತ್ರಿಗಳು ಹಾಗೂ ಅಧಿಕಾರಿಗಳು ಡ್ರೈಲ್ಯಾಂಡ್ ಎಂದರೆ ಏನು ಎಂಬುದನ್ನು ಡಿಫೈನ್ ಮಾಡುವಾಗ 'ಡ್ರೈಲ್ಯಾಂಡ್ ಗ್ರೋಯಿಂಗ್ ಮಲ್ಬರಿ ಆಲ್‌ಸೋ' ಎಂದು ಡಿಫೈನ್ ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ. ಅಧಿಕಾರಿಗಳ ಹತ್ತಿರ ಡ್ಯಾಟಾ ಇರುತ್ತದೆ ಅದನ್ನು ಯಾವ ಕ್ಯಾಟಗರಿಯಲ್ಲಿ ಹಾಕಬೇಕು ಎಂಬುದನ್ನು ಸರಿಯಾಗಿ ಆಲೋಚನೆ ಮಾಡದೇ ಅದನ್ನೆ ಒಂದು ಕ್ಯಾಟಗರಿಯಾಗಿ ಮಾಡೋಣ ಎಂದು ಮಾಡಿದ್ದಾರೆ, ಈ ಒಂದು ನ್ಯೂನತೆಯನ್ನು ತೆಗೆದುಹಾಕುವುದಕ್ಕೆ All mulberry growing land comes under dry land ಎಂದು ಮಾಡಿದರೆ ಒಳ್ಳೆಯದು. ಇವನ್ನು ಆಲೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಸಭೆಯ ಮುಂದೆ ತಂದಿರುವ ಈ ಅಮೆಂಡಿಗ್ ಬಿಲ್ಲು ಬಹಳ ಸ್ವಾಗತಾರ್ಹವಾದದ್ದಾಗಿದೆ. ಇದು ರೈತನ ಮೇಲೆ ಇರತಕ್ಕ ಹೊರೆಯನ್ನು ಕಡಿಮೆ ಮಾಡುತ್ತಾ ಇದೆ. ಆದ್ದರಿಂದ ವಿರೋಧ ಪಕ್ಷದವರು ಮಾತ್ರವಲ್ಲದೆ ಎಲ್ಲರೂ ಕೂಡ ಇದನ್ನು ಸರ್ವಾನುಮತದಿಂದ ಒಪ್ಪಿಕೊಂಡು ಇದಕ್ಕೆ ತಮ್ಮ ಬೆಂಬಲ ವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗೆ ಮಂಡಿಸಲ್ಪಟ್ಟಿರತಕ್ಕ ಮೈಸೂರು ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಬಿಲ್ 1965ನ್ನು ಸಂಪೂರ್ಣವಾಗಿ ವಿರೋಧಿಸತಕ್ಕ ಕಾಲದಲ್ಲಿ ಸರ್ಕಾರದವರಿಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಲ್ಯಾಂಡ್ ರೆವಿನ್ಯೂ ಅನ್ನು ವಸೂಲು ಮಾಡತಕ್ಕ ಕಾಲದಲ್ಲಿ ಸರ್ಕಾರದ ಒಂದು ಘೋಷಣೆ ಏನಿದೆ ಎಂದರೆ ಆಹಾರ ಪದಾರ್ಥಗಳ ಧಾರಣೆ ಹೆಚ್ಚಾಗಿದೆ, ರೈತನಿಗೆ ಬರತಕ್ಕ ಹೆಚ್ಚಿನ ಉತ್ಪನ್ನದಲ್ಲಿ ಕೇವಲ ಒಂಡಕ್ಕೆ ಎರಡರಷ್ಟು ಕಂದಾಯವನ್ನು ಹೆಚ್ಚು ಮಾಡಿದ್ದೇ ಆದರೆ ಅವನಿಗೇನೂ ಅಂತಹ ಮಹಾ ದೊಡ್ಡ ಪೆಟ್ಟು ಆಗುವುದಿಲ್ಲ ಎಂಬ ವಾದವನ್ನು ಮುಂದೊಡ್ಡಿ ಸರ್ವೆ ಸೆಟ್ಲಮೆಂಟ್ ರೂಪದಲ್ಲಿ ಸಂಸ್ಥಾನದ ನಾನಾ ಭಾಗಗಳ ವರದಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಸಭೆಯಲ್ಲಿ ಆಗಲೇ ಬಹಳ ಜನ ಸದಸ್ಯರು ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ತಮ್ಮಲ್ಲಿ ಒಂದು ಪ್ರಶ್ನೆಯನ್ನು ಕೇಳಲು ಇಚ್ಛೆಪಡುತ್ತೇನೆ. ಈ ದಿವಸ ಲ್ಯಾಂಡ್ ರೆವಿನ್ಯೂ ಲೆವಿ ಮಾಡತಕ್ಕ ಕಾಲದಲ್ಲಿ ಏನು ತಮ್ಮ ಈ ಒಂದು ಅಮೆಂಡಿಂಗ್ ಬಿಲ್‌ನ್ನು ತಂದಿದ್ದೀರಿ ಆರೂಕಾಲು ಪರ್ಸೆಂಟ್ ಹಿಂದೆ ಇತ್ತು ಅದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ, ಇದನ್ನು ಮಾನ್ಯ ಬಸಪ್ಪನವರು ಮ್ಯಾಥಮ್ಯಾಟಿಕಲ್ ಕ್ಯಾಲ್ಯುಕಲೇಷನ್ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದರು. ಆ ಮ್ಯಾಥಮ್ಯಾಟಿಕಲ್ ಕ್ಯಾಲ್ಕ್ಯುಲೇಷನ್ ನಮಗೆ ಬೇಕಾಗಿಲ್ಲ. ಮೊದಲು ಆರೂಕಾಲು ಪರ್ಸೆಂಟ್ ಇತ್ತು ಅದನ್ನು ನಾಲ್ಕು ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದರಿಂದ ಎರಡು ರೂಪಾಯಿ ಉಳಿತಾಯವಾಗಿದೆ, ಕನ್‌ಸೆಷನ್ ಕೊಟ್ಟಿದ್ದೇವೆ ಎಂದು ಹೇಳಿ ಈ ಸಭೆಯ ಮುಂದೆ ಇಟ್ಟ ವಾದವನ್ನು ಪ್ರಶ್ನೆ ಮಾಡಿ ಅವರಿಗೆ ಒಂದು ಅಂಶವನ್ನು ನಾನು ಕೇಳಲು ಇಚ್ಛೆಪಡುತ್ತೇನೆ. 30 ವರ್ಷದ ಹಿಂದೆ ತಯಾರಾದ ಈ ಸರ್ವೇ ಸೆಟ್ಲಮೆಂಟ್ ರಿಪೋರ್ಟ್‌ನ ಪ್ರಕಾರ ಆಗ ಅವರು ಕಂದಾಯವನ್ನು ನಿಗದಿ ಮಾಡಿದರು. ಆ ದಿನ ಇದ್ದಂತಹ ಧಾರಣೆವಾಸಿ ಏನಿತ್ತು ? ಇವತ್ತು ಇರತಕ್ಕ ಧಾರಣೆವಾಸಿ ಏನಿದೆ ಎಂಬುದನ್ನು ವಿಮರ್ಶೆ ಮಾಡಿ ನೋಡಬೇಕು. ಹಿಂದೆ ಒಂದು ಪಲ್ಲಾ ಬತ್ತಕ್ಕೆ 8–10 ರೂಪಾಯಿ ಇದ್ದುದು ಈ ದಿವಸ 35 ರಿಂದ 40 ರೂಪಾಯಿಗಳಿಗೇರಿದೆ. ಸರಕಾರವೇ ಈಗ ನಿಗದಿ ಮಾಡಿರುವ ಬೆಲೆ ಇದು. ಈ ದಿವಸವಿರುವುದರದ ಪ್ರಕಾರ ಲೆಕ್ಕಹಾಕಿದರೆ ಸರಾಸರಿ ಒಂದು ಎಕರೆಯಲ್ಲಿ 400 ರೂಪಾಯಿಗಳ ಉತ್ಪತ್ತಿ ಇದ್ದರೆ ಶೇಕಡ 4 ರಂತೆ 16 ರೂಪಾಯಿ ಕಂದಾಯ ಹಾಕಬೇಕಾಗುತ್ತದೆ. ಈಗ ಒಂದು ರೂಪಾಯಿ ಕಂದಾಯವಿರುವುದಕ್ಕೆ ಮುಂದೆ ಮೂರು ರೂಪಾಯಿ ಹೆಚ್ಚಾಗಿ ಕೊಡಬೇಕಾಗುತ್ತದೆ ಇದನ್ನು ಗಮನಿಸಿ ರೈತರಿಗೆ ಯಾವ ರೀತಿ ರಿಯಾಯಿತಿಯನ್ನು ಕೊಟ್ಟಿದ್ದೀರೆಂಬುದನ್ನು ಯೋಚನೆ ಮಾಡಬೇಕು. ಈಗ ಗ್ರಾಸ್ ಇನ್‌ಕಂ ಮೇಲೆ ಕಂದಾಯ

ಹಾಕುತ್ತಿದ್ದೀರಿ. ರೈತರ ವ್ಯವಸಾಯದ ಖರ್ಚೇನು ಎಂದು ನೋಡಿ ಅವರಿಗೆ ಉಳಿಯುವ ನಿವ್ವಳ ಆದಾಯದ ಮೇಲೆ ಕಂದಾಯ ನಿಗದಿ ಮಾಡುವುದಾದರೆ ನಾವು ಅದಕ್ಕೆ ಸಮ್ಮತಿ ಕೊಡುತ್ತೇವೆ. ಇದನ್ನೇಕೆ ಹೇಳುವುದೆಂದರೆ, ಈಗ ಉತ್ಪತ್ತಿ ಮಾಡಲು ಖರ್ಚು ಹೆಚ್ಚಿದೆ. ರೈತನು ಕೊಳ್ಳುವ ವ್ಯವಸಾಯದ ಉಪಕರಣಗಳ ಬೆಲೆ ಎಷ್ಟು ಏರಿದೆ. ವ್ಯವಸಾಯದ ಕೂಲಿಗಾಗಿ ಎಷ್ಟು ಖರ್ಚಾಗುತ್ತದೆ ಎಂದು ನೋಡಿ ಉಳಿಯುವ ನಿವ್ವಳ ಆದಾಯದ ಮೇಲೆ ಕಂದಾಯ ನಿಗದಿ ಮಾಡುವುದು ಸರ್ವಸಮ್ಮತವಾದುದು ಎಂದು ತಿಳಿಸುತ್ತೇನೆ. ಬಾಯಿದ್ದವನು ಬರದಲ್ಲಿ ಗೆದ್ದ ಎಂದು ಒಂದು ಗಾದೆ ಇದೆ. ಶ್ರೀಯುತರಗಳಾದ ಬಸಪ್ಪನವರು, ಅಪ್ಪಣ್ಣನವರು ಮುಂತಾದವರ ಕಾಫಿ ತೋಟಗಳಿಗೆ, ಟೀ ತೋಟಗಳಿಗೆ ರಿಯಾಯಿತಿಬೇಕು, ಮಲ್ಬರಿ ತೋಟಕ್ಕೆ ರಿಯಾಯಿತಿಬೇಕು, ಅದಕ್ಕಾಗಿ ಪಕ್ಷದಲ್ಲಿ ವಾದಿಸಿ ತಿದ್ದುಪಡಿ ತರಲು ಅವರು ಪ್ರಯತ್ನ ಮಾಡಿದ್ದಾರೆ. ಖುಷ್ಕಿ ಜಮೀನಿರುವ ರೈತರ ಪರಿಸ್ಥಿತಿ ಹೇಗಿವೆ, ರೂರಲ್ ಕ್ರೆಡಿಟ್ ಹೇಗಿದೆ ಎಂದು ಸರ್ವೆಮಾಡಿ, ರೈತರ ಆರ್ಥಿಕ ಪರಿಸ್ಥಿತಿ ಹೇಗಿದೆಯೆಂದು ನೋಡಿ ಆ ಮೇಲೆ ಯಾವ ಮಟ್ಟದಲ್ಲಿ ಕಂದಾಯ ಹೆಚ್ಚಿಸಬೇಕೆಂದು ಯೋಚಿಸಿ ಸರ್ವೆ ಸೆಟ್ಲ್‌ಮೆಂಟ್ ವರದಿಯನ್ನು ಸಭೆಯ ಮುಂದೆ ತಂದರೆ ಸ್ವಾಗತ ಮಾಡಬಹುದು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುವಾಗ ರೈತರಿಗೆ ತಮ್ಮ ಹೆಂಡತಿಗೆ ವರ್ಷಕ್ಕೊಂದು ಸಲ ಬಟ್ಟೆ ತೆಗೆದುಕೊಡುವುದಕ್ಕೆ ಎಷ್ಟೋ ಕಷ್ಟವಿದೆ ಎಂದು ಹೇಳಿದರು. ಈ ದಿವಸ ತಾವು ಹಳ್ಳಿಗಾಡಿ ವರ ಕಷ್ಟವನ್ನರಿತಿದ್ದರೆ ಈ ತಿದ್ದುಪಡಿ ಮಸೂದೆಯಲ್ಲಿ ಗ್ರಾಸ್ ಇನ್‌ಕಂ ಎಂದಿರುವುದನ್ನು ಬದಲಾಯಿಸಿ ನೆಟ್ ಇನ್‌ಕಂ ಎಂದು ಮಾಡಿ ಜನರಿಗೆ ಅನುಕೂಲವಾಗುವಂತೆ ತರಬೇಕು. ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ. ಈ ದಿವಸ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇದೆ. ಅದು ಇರುವಾಗ ಯಾವ ಆಧಾರದ ಮೇಲೆ ರೈತರಿಗೆ ಎರಡು ತೆರಿಗೆ ಹಾಕುತ್ತೀರಿ? ಇದರಿಂದ ಭೂಮಿ ಇರುವವರಿಗೆ ಎಷ್ಟು ಹೊರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಏಕೆ ಹೀಗೆ ಎರಡು ವಿಧವಾದ ತೆರಿಗೆ ಹಾಕುತ್ತಿದ್ದಾರೆಂಬು ಅರ್ಥವಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಯ ಮಂತ್ರಿಗಳು).—ಹಾಗಾದರೆ ಎಲ್ಲವನ್ನೂ ಬಿಟ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದನ್ನು ಒಪ್ಪುತ್ತೀರಾ ?

(ಒಪ್ಪುತ್ತೇವೆಂದು ವಿರೋಧ ಪಕ್ಷದ ಅನೇಕರು ಹೇಳಿದರು)

ಶ್ರೀ ಎಚ್. ಡಿ. ದೇವೇಗೌಡ.—ವೈಯಕ್ತಿಕವಾಗಿ ಹೇಳುವುದಾದರೆ ಸರಕಾರದ ವತಿಯಿಂದ ಬಂದ ಉತ್ತರಕ್ಕೆ ನನ್ನ ಸ್ವಾಗತ ಸಂಪೂರ್ಣವಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾಳೆ ಅದಕ್ಕೆ ಲೆಕ್ಕಪತ್ರ ಇಡಬೇಕೆಂದು ಗಲಾಟೆ ಮಾಡುತ್ತೀರಿ.

ಶ್ರೀ ಎಚ್. ಡಿ. ದೇವೇಗೌಡ.—ಜತ್ತಿ ಸಮಿತಿ ವರದಿಯ ಪ್ರಕಾರ ನಮ್ಮ ದೇಶದಲ್ಲಿ ಶೇಕಡ 85 ರಷ್ಟು ಸಣ್ಣ ಹಿಡುವಳಿಗಳಿವೆ. ಐದು ಎಕರೆಗೆ ಒಳಪಟ್ಟಿರುವವರು 3,200ರ ಮೇಲಿಲ್ಲ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸಿನಿಂದ ಶೇಕಡ 85 ಜನರಿಗೆ ರಿಯಾಯಿತಿ ಇದೆ. ಇನ್ನು ಶೇಕಡ 15 ಜನ ಹೆಚ್ಚು ಜಮೀನಿರುವವರಿಗೆ ತೆರಿಗೆ ಹಾಕುವುದಕ್ಕೆ ವಿರೋಧಿಸುವುದಿಲ್ಲ. ಈ ಮಸೂದೆಯನ್ನು ವಾಪಸು ತೆಗೆದುಕೊಂಡು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬಹುದು. ಈಗಾಗಲೆ ಯಾವ ದೇಶದಲ್ಲಿ ಕಂದಾಯ ವಜಾ ಮಾಡಿದ್ದಾರೆಂದು ಶ್ರೀ ಜಿ. ವಿ. ಗೌಡರು ಹೇಳಿದರು. ಬರ್ಮಾದಲ್ಲಿ ಕಂದಾಯ ವಜಾ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಓದಿದ್ದೇನೆ. ಇಂಥ ಸನ್ನಿವೇಶದಲ್ಲಿ ಇನ್ನೊಂದು ದೇಶದೊಡನೆ ಹೋಲಿಕೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ವಾದ ಸರಿಯಲ್ಲ. ಮಂತ್ರಿಗಳಿಗೆ ರೈತರ ಮೇಲೆ ಕರುಣೆ ಇದೆ, ಸುಮಾರು 8-10 ದಿವಸಗಳಿಂದ ಈ ವಿಷಯ ಚರ್ಚೆಮಾಡುವಾಗ ಅವರು ಹೇಳಿದ್ದಾರೆ. ಆದರೂ ಕೂಡ ರೈತರಿಗೆ ಸಾಕಾದಷ್ಟು ಅನುಕೂಲವಾಗಿಲ್ಲ. ಆದುದರಿಂದ ಗ್ರಾಸ್ ಇನ್‌ಕಂ ಎಂದಿರುವುದನ್ನು ತೆಗೆದು ನೆಟ್ ಇನ್‌ಕಂ ಎಂದು ತಿದ್ದುಪಡಿ ಮಾಡಬೇಕೆಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ) —ಸ್ವಾಮಿ, ಮಾನ್ಯ ಸದಸ್ಯರಾದ ಗಾಂಜಿ ವೀರಪ್ಪನವರು ಮತ್ತು ಸಿ. ಆರ್. ಬಸಪ್ಪನವರು ಸಣ್ಣ ಹಿಡುವಳಿದಾರರಿಗೆ ಕಂದಾಯದ ರಿಯಾಯಿತಿ ಇರಬೇಕು, ಜಾಸ್ತಿ ಮಾಡಬಾರದು ಎಂಬುದಾಗಿ ಹೇಳಿದರು. ಆದರೆ ಈಗ ಶೇಕಡ 4ರಷ್ಟು ವಸೂಲುಮಾಡಬೇಕೆಂದು ತಿದ್ದುಪಡಿಯನ್ನು ತಂದಿದ್ದಾರೆ. ಸಣ್ಣ ಹಿಡುವಳಿದಾರರಿಗೆ ಈಗ ತಂದಿರುವ ತಿದ್ದುಪಡಿಯಲ್ಲಿ ಯಾವ ರಿಯಾಯಿತಿಯೂ ಇಲ್ಲ. ಲ್ಯಾಂಡ್ ರೆವೆನ್ಯೂ ಆಕ್ಟಿನಲ್ಲಿ ಶೇಕಡ ಆರೂಕಾಲು ಇದ್ದುದನ್ನು ಶೇಕಡ 4 ಕ್ಕೆ ಇಳಿಸಲು ಅವಕಾಶವಿರುವುದಲ್ಲದೆ ಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಡುವುದಕ್ಕೂ ಅವಕಾಶವಿದೆ. ಕಾಂಗ್ರೆಸ್ ಪಕ್ಷದವರು ಸಮಾಜವಾದಿ ಧೋರಣೆಯನ್ನು ಭಾಷಣಗಳಲ್ಲಿ ಮಾತ್ರ ಇಟ್ಟುಕೊಂಡಿದ್ದಾರೆ. ಅವರು ಸೂಚಿಸುತ್ತಿರುವುದು ಬರೀ ಲಿಪ್ ಸಿಂಪತಿ. ಬೂಟಾಟಿಕೆಯ ರೂಪದಲ್ಲಿ ಅವರು ವರ್ತಿಸುತ್ತಿದ್ದಾರೆಯೇ ವಿನಾ ಬಡಜನರ ಬಗ್ಗೆ ಅವರಿಗೆ ನಿಜ

(ಶ್ರೀ ಪಿ. ವೆಂಕಟಗಿರಿಯಪ್ಪ)

ವಾಗಿಯೂ ಕನಿಕರವಿಲ್ಲ. ವಿರೋಧಪಕ್ಷದ ಎಲ್ಲ ಸದಸ್ಯರು ಮತ್ತು ಕಾಂಗ್ರೆಸ್ಸಿನ ಕೆಲವರು ಸಣ್ಣ ಹಿಡುವಳಿದಾರರಿಗೆ ರಿಯಾಯಿತಿ ಕೊಡಬೇಕು ಎಂದು ಎಷ್ಟೋ ಒತ್ತಾಯ ಮಾಡಿದರೂ ಕೂಡ ಸಮಾಜವಾದಿಗಳು ಸ್ವಲ್ಪವೂ ಯೋಚನೆಮಾಡದೆ ತತ್ವಶಃ ಅದನ್ನು ಒಪ್ಪಿದರೂ ಮಾಡುವುದಕ್ಕೆ ಕಷ್ಟವಿದೆ ಎಂದು ಹೇಳುತ್ತಾರೆ. ನಾನು ಗಾಂಜಿ ವೀರಪ್ಪನವರಿಗೆ ಮತ್ತು ಬಸಪ್ಪನವರಿಗೆ ಹೇಳುವುದಿಷ್ಟೆ: ಈ ಬೂಟಾಟಿಕೆ ಬೇಡ, ವಿನಾಯಿತಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಿಜವಾಗಿಯೂ ಕೂಡ ಸಣ್ಣ ಹಿಡುವಳಿದಾರರಿಗೆ ಕಡಮೆಮಾಡುವುದು ನ್ಯಾಯವೆಂಬುದನ್ನು ಒಪ್ಪಿದ್ದರೆ, ಆ ತತ್ವದಲ್ಲಿ ನಂಬಿಕೆ ಇದ್ದರೆ ಹಾಗೆ ಮಾಡಲು ಆಸಕ್ತಿ ವಹಿಸಬಹುದಾಗಿತ್ತು. ಪಕ್ಷದ ಮೀಟಿಂಗಿನಲ್ಲಿ ಪಂಚಾಯಿತಿ ಮಾಡಿದರೆಂದು ಹೇಳಿದರು. ಅಲ್ಲೇಕೆ ಇದನ್ನು ಯೋಚನೆಮಾಡಲಿಲ್ಲ? ಸಣ್ಣ ಹಿಡುವಳಿದಾರರಿಗೆ ಕಡಮೆಮಾಡಬೇಕೆಂದು ಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಬಹುದಾಗಿತ್ತು.

ಮಾನ್ಯ ರೆವೆನ್ಯೂ ಮಂತ್ರಿಗಳು, ತಿದ್ದುಪಡಿ ಮಸೂದೆಯಿಂದ ಕಂದಾಯವನ್ನು ಕಡಮೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ತಿಳಿಸುತ್ತಿದ್ದರು. ಕೆಲವು ಪತ್ರಿಕೆಗಳಲ್ಲಿ ಕೂಡ ಕಂದಾಯವನ್ನು ಕಡಮೆ ಮಾಡುವುದಕ್ಕೆ ಪರಿಶೀಲಿಸುತ್ತಿದ್ದಾರೆ ಎಂದು ಬಂದಿದೆ. ಪತ್ರಿಕೆಗಳಲ್ಲಿ ಬಂದುದನ್ನು ನೋಡಿ ಮೊದಲು ಇದ್ದುದಕ್ಕಿಂತ ಕಡಮೆ ಮಾಡುತ್ತಾರೆ ಎಂದು ನನಗನ್ನಿಸಿತು. ಇವರ ಉದ್ದೇಶವೇನೆಂದರೆ ಜಾಸ್ತಿ ಮಾಡುತ್ತೇವೆಂದು ಏನು ಹೇಳಿದ್ದರೋ ಅದರಲ್ಲಿ ಸ್ವಲ್ಪ ಕಡಮೆ ಮಾಡುತ್ತೇವೆ ಎಂದು. ಕಂದಾಯವನ್ನು ಕಡಮೆ ಮಾಡುವ ಉದ್ದೇಶ ಇವರಿಗೆ ಇರುವ ಹಾಗೆ ಕಾಣುವುದಿಲ್ಲ. ಕೆಲವು ಸ್ನೇಹಿತರು ಹೇಳಿದ ಹಾಗೆ ಕಾಫಿ ಪ್ಲಾಂಟರುಗಳಿಗೆ, ಕಾಫಿ ಬೆಳೆಯುವ ಜಮೀನುಗಳಿಗೆ ಮತ್ತು ಇತರ ಪ್ಲಾಂಟೇಷನ್‌ಗಳಿಗೆ, ಒಟ್ಟು ವರಮಾನದ ಶೇಕಡ ಒಂದರಷ್ಟು ಕಂದಾಯ ಹಾಕಿದ್ದಾರೆ. ಇದರಿಂದ ಪ್ಲಾಂಟೇಷನ್ ಮಾಲೀಕರಿಗೆ ಸರ್ಕಾರದಲ್ಲಿ ಹೆಚ್ಚು ಪ್ರಭಾವ ಇದೆ ಎನ್ನುವುದು ಸ್ಪಷ್ಟವಾಗುತ್ತದೆ.

5-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಕೇರಳದ ಕಾಫಿ ತೋಟಗಳಲ್ಲಿ ನಾವು ಹಾಕಿರುವುದರ ಐದನೆಯ ಒಂದು ಭಾಗವನ್ನು ಕೂಡ ಹಾಕಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೇರಳದಲ್ಲಿರುವವರೂ ನಿಮ್ಮ ಅಣ್ಣತಮ್ಮಂದಿರು ತಾನೇ ಈಗ ಅಲ್ಲಿ ಯಾವ ಸರ್ಕಾರವೂ ಇಲ್ಲ. ರಾಷ್ಟ್ರಾಧ್ಯಕ್ಷರ ಆಡಳಿತ ಇದೆ.

ಕಾಫಿ ತೋಟದಲ್ಲಿ ಬರುವ ಆದಾಯವೇನು, ಅಲ್ಲಿ ಮಳೆ ಬೀಳುವುದು ಏನು? ವರ್ಷಕ್ಕೆ 20—22 ಅಂಗುಲ ಮಳೆ ಬಿದ್ದು ರಾಗಿ, ಹುರುಳಿ ಬೆಳೆಯುವ ಜಮೀನುಗಳಿಗೆ ಒಟ್ಟು ಉತ್ಪತ್ತಿಯ ಮೇಲೆ ಸೇಕಡ ನಾಲ್ಕರಷ್ಟು ಕಂದಾಯವನ್ನು ಕೊಡಬೇಕು. ಇದರಲ್ಲಿ ಏನು ನ್ಯಾಯವಿದೆ? ಇಷ್ಟು ಚರ್ಚೆ ಮಾಡಿ ರೈತರಿಗೆ ದೊರೆತ ಪರಿಹಾರ ಇಷ್ಟು ಮಾತ್ರವೇ? ನನಗೆ ಕಾಣುವುದು ಏನು ಎಂದರೆ ಕಾಂಗ್ರೆಸ್ ಪಕ್ಷದಲ್ಲಿ ನ್ಯಾಯ, ನೀತಿಗೆ ಏನೇನೂ ಅವಕಾಶವಿಲ್ಲ? ಯಾರು ಗಲಾಟೆ ಮಾಡುತ್ತಾರೆಯೋ, ಯಾರಿಗೆ ಸರ್ಕಾರದ ಮೇಲೆ ಹೆಚ್ಚು ಪ್ರಭಾವವಿದೆಯೋ ಅವರು ಹೇಳಿದ್ದಕ್ಕೆ ಹೊಂದಿಕೊಂಡು ಕೆಲವು ವರ್ಷ 27 ಜನ ಒಟ್ಟಿಗೆ ಮಂತ್ರಿಗಳಾಗಿ ಕಾಲ ಹಾಕಿಕೊಂಡು ಹೋಗೋಣ ಎನ್ನುವ ಉದ್ದೇಶ ಇದ್ದ ಹಾಗೆ ಕಾಣುತ್ತದೆ. ಸರ್ವೆ ಸೆಟಲ್‌ಮೆಂಟ್ ಬಹಳ ವೈಜ್ಞಾನಿಕವಾಗಿದೆ ಎಂದು ಹೇಳಿದರು. ಒಂದು ಕಡೆ ಸೇಕಡ ನಾಲ್ಕರಷ್ಟು, ಇನ್ನೊಂದು ಕಡೆ ಸೇಕಡ ಒಂದರಷ್ಟು ಕಂದಾಯ ಎಂದು ಮಾಡಿರುವುದು ವೈಜ್ಞಾನಿಕವಾಗಿದೆಯೇ? ಇದರಲ್ಲಿ ಯಾವ ವಿಧವಾದ ನ್ಯಾಯವೂ ಇಲ್ಲ, ತೀರ ಅನ್ಯಾಯವಾಗಿದೆ. ಮುಖ್ಯವಾಗಿ ಸಣ್ಣ ಹಿಡುವಳಿದಾರನಿಗೆ ರಿಯಾಯಿತಿಯನ್ನು ಕೊಟ್ಟಿಲ್ಲ. ಸಮಾಜವಾದಿ ಸರ್ಕಾರ ಕಟ್ಟುವ ನೀತಿಯೆಂದು ಏನು ಹೇಳುತ್ತಾರೆಯೋ ಅದಕ್ಕೆ ವಿರುದ್ಧವಾಗಿದೆ, ಸಾಮಾನ್ಯ ಜನರ ವಿರುದ್ಧವಾಗಿದೆ ಎಂದು ಹೇಳಬಯಸುತ್ತೇನೆ ಸ್ವಾಮಿ.

(The Hon'ble Revenue Minister was called upon to reply and several members rose).

Sri V. S. PATIL (Belgaum I).—My objection is that during these 2 or 3 hours, the Hon'ble members who spoke referred to the Report, the quantum of assessment, etc., and none of them referred to the provisions of this Bill. I fail to understand how the Chair allowed these members to go aside from the provisions of this Bill.

Mr. DEPUTY SPEAKER.—They come in incidentally.

Sri V. S. PATIL.—How can they come in incidentally? You have allowed all these members to refer to the Report which is completely irrelevant so far as the provisions of this Bill are concerned.

Mr. DEPUTY SPEAKER.—The Hon'ble member was also in the House then and he did not object to it then.

Sri V. S. PATIL.—How can I object? It is the duty of the Chair to pull up members when they go astray.

Mr. DEPUTY SPEAKER.—The Bill has to be passed by 5-30. P.M.

Sri V. S. PATIL.—If the Bill is to be passed by 5-30 P.M., I have no objection. I should however protest and as a protest I walk out.

ಶ್ರೀ ಎಸ್. ಶಿವಪ್ಪ.—ಈ ಮಸೂದೆ ಬಹಳ ಪ್ರಾಮುಖ್ಯವಾದುದು. ಇದರ ಮೇಲೆ ಮಾತನಾಡುವುದಕ್ಕೆ ಸದಸ್ಯರಿಗೆ ಸಾಕಷ್ಟು ಅವಕಾಶವನ್ನು ಕೊಡಬೇಕಾಗಿದೆ. ಯಾವ ಸದಸ್ಯರೇ ಆಗಲಿ ಇದರ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡುವ ಹಕ್ಕನ್ನು ಹೊಂದಿರುತ್ತಾರೆ. ಸರ್ಕಾರದವರು ಇದರ ಚರ್ಚೆಗೆ ಕಾಲವನ್ನು ಕೊಡದೆ ಇದ್ದಾರೆ. ಅದನ್ನು ಪ್ರತಿಭಟನೆ ಮಾಡಿ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಸಭೆಯಲ್ಲಿ ಹಾಜರಿಲ್ಲದೆ ನಾವು ಸಭಾತ್ಯಾಗ ಮಾಡುತ್ತೇವೆ.

(ಅನೇಕ ವಿರೋಧಪಕ್ಷದ ಸದಸ್ಯರು ಸಭೆಯಿಂದ ಹೊರಗೆ ಹೋದರು).

† **ಶ್ರೀ ಎಂ. ವಿ. ಕೃಷ್ಣಪ್ಪ.**—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವಿ. ಎಸ್. ಪಾಟೀಲರು ಹೇಳಿದ ಹಾಗೆ ಮಸೂದೆಗೆ ಸಂಬಂಧಪಟ್ಟ ಹಾಗೆ ಯಾವ ಸದಸ್ಯರೂ ಮಾತನಾಡಲಿಲ್ಲ. ಅದು ಅವರ ತಪ್ಪೇ ವಿನಾ ಸರ್ಕಾರದವರ ತಪ್ಪಲ್ಲ. ಮಾನ್ಯ ಸದಸ್ಯರು ಯಾರೂ ಮಸೂದೆಯ ವಿಷಯ ಸರಿಯಾಗಿ ಹೇಳಲಿಲ್ಲ. ಇದರಲ್ಲಿರುವುದು ಎರಡೇ ವಿಷಯ. ಮೊದಲನೆಯದು ಸೇಕಡ ಆರೂಕಾಲು ಎಂದು ಇದ್ದುದನ್ನು ಎಲ್ಲ ಜಮೀನುಗಳಿಗೂ ಸೇಕಡ ನಾಲ್ಕಕ್ಕೆ ಇಳಿಸುವುದು ಮತ್ತು ಪ್ಲಾಂಟೇಷನ್‌ಗಳ ಸಂಬಂಧದಲ್ಲಿ ಸೇಕಡ ಒಂದಕ್ಕೆ ಇಳಿಸುವುದು ಮತ್ತು ಇದೇ ಕಂದಾಯದ ವರ್ಷದಿಂದ ಜಾರಿಗೆ ತರುವುದು ಮತ್ತು ಕಲವು ಅಚ್ಚು ದೋಷಗಳನ್ನು ಸರಿಪಡಿಸುವುದು. ಮಾನ್ಯ ಸದಸ್ಯರು ಮಾತನಾಡುವಾಗ ಇದನ್ನೆಲ್ಲ ಬಿಟ್ಟು ಬೇರೆ ವಿಷಯಗಳನ್ನು ಹೇಳಿದರು. ನಾನೂ ಕೂಡ ಇತರ ವಿಷಯಗಳನ್ನು ನಿರ್ಣಯದ ಮೇಲೆ ಮಾತನಾಡುವಾಗ ಹೇಳುತ್ತೇನೆ. ಕಂದಾಯದ ವಿಷಯ ಮತ್ತು ರೀಸೆಟಲ್‌ಮೆಂಟ್ ವಿಷಯ ಇದನ್ನೆಲ್ಲ ನಿರ್ಣಯದ ಮೇಲೆ ಮಾತನಾಡುವಾಗ ಹೇಳಬಹುದು. ನಾನು ಆ ವಿಷಯಗಳಿಗೆ ಹೋಗುವುದಿಲ್ಲ. ಶ್ರೀ ಎಸ್. ಗೋಪಾಲಗೌಡರು ಮಾತನಾಡುತ್ತ 18 ಕೋಟಿ, 20 ಕೋಟಿ, 30 ಕೋಟಿ ರೂಪಾಯಿ ಕಂದಾಯದಿಂದ ಬರುತ್ತದೆ ಎಂದು ಹೇಳಿದರು. ಇದು ಸತ್ಯಕ್ಕೆ ದೂರವಾದ ಮಾತು ಎಲ್ಲ ಬಾಬುಗಳಿಂದಲೂ ಸಿಕ್ಕುತ್ತಿರುವ ಕಂದಾಯ 3 ಕೋಟಿ 75 ಲಕ್ಷ ರೂಪಾಯಿ. ಇದರ ಮೇಲೆ ಸೆಸ್ ಸೇರಿದರೆ ನಾಲ್ಕು ಕೋಟಿ ಚಿಲ್ಲರೆ ಆಗುತ್ತದೆ. ಡ್ರೈ ಅಸೆಸ್‌ಮೆಂಟಿನಲ್ಲಿ ಈಗ ಸೇಕಡ ನಾಲ್ಕಕ್ಕೆ ಇಳಿಸಿದ್ದರಿಂದ 87 ಲಕ್ಷ ರೂಪಾಯಿ ಕಡಮೆಯಾಗುತ್ತದೆ. ಮೈಸೂರು ಸಂಸ್ಥಾನದಲ್ಲಿರುವ 280 ಲಕ್ಷ ಎಕರೆಯಲ್ಲಿ 260 ಲಕ್ಷ ಎಕರೆ ಖುಷ್ಕಿ ಜಮೀನಿದೆ. ಸಾಮಾನ್ಯವಾಗಿ ಬಡವರ ಕೈಯಲ್ಲಿರುವುದೆಲ್ಲ ಖುಷ್ಕಿ ಜಮೀನು. ಇದಕ್ಕೆ ಏರಿಸಿರುವುದೆಲ್ಲ ಸೇರಿದರೂ ಸೇಕಡ 40 ರಷ್ಟು ಜಾಸ್ತಿಯಾಗುವುದಿಲ್ಲ. ಇದರಿಂದ 2 ಕೋಟಿ 40 ಲಕ್ಷ ರೂಪಾಯಿ ಖುಷ್ಕಿ ಜಮೀನಿನ ಕಂದಾಯ ಇದ್ದುದು 3 ಕೋಟಿ 27 ಲಕ್ಷ ರೂಪಾಯಿ ಆಗುತ್ತದೆ, ಎಂದರೆ 87 ಲಕ್ಷ ರೂಪಾಯಿ ಮಾತ್ರ ಏರುತ್ತದೆ. ಅದನ್ನು ಲೆಕ್ಕ ಹಾಕಿದರೆ ಸೇಕಡ 40 ಕೂಡ ಆಗುವುದಿಲ್ಲ. ಕಂದಾಯ ಕೊಡುವವರು ಒಂದು ರೂಪಾಯಿ ಕೊಡುವ ಕಡೆ ಒಂದು ರೂಪಾಯಿ 40 ಪೈಸೆ ಕೊಡಬೇಕಾಗುತ್ತದೆ. ಈಗಾಗಲೇ ಅನೇಕ ಕಡೆ ಸರ್ಚಾರ್ಜ್ ಸೇರಿ ಒಂದು ರೂಪಾಯಿ 75 ಪೈಸೆ ಕೊಡುತ್ತಿದ್ದಾರೆ. ಇನ್ನು ಮುಂದೆ ಕೊಡಬೇಕಾಗುವುದು ಇದಕ್ಕಿಂತ ಕಡಮೆಯಾಗುತ್ತದೆ. ಅದೂ ಅಲ್ಲದೆ ಒಟ್ಟು ಉತ್ಪತ್ತಿಯ ಸೇಕಡ ನಾಲ್ಕರಷ್ಟು ಎಂದು ಹಾಕುವುದರಿಂದ ಅನೇಕ ಕಡೆ ಕಡಮೆ ಕೊಡಬೇಕಾಗುತ್ತದೆ. ಬಿದರೆ ಜಿಲ್ಲೆಯಲ್ಲಿ ಸೇಕಡ ಐವರಷ್ಟು ಕಡಮೆ ಆಗುತ್ತದೆ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಡ್ರೈ ಅಸೆಸ್‌ಮೆಂಟ್‌ನಲ್ಲಿ ಸೇಕಡ 20ರಷ್ಟು ಕಡಮೆಯಾಗುತ್ತದೆ. ಸರ್ಚಾರ್ಜ್ ಅಲ್ಲದೆ ಪೂರ್ವದಿಂದಲೂ ಕೊಡುತ್ತಿದ್ದ ಅಸೆಸ್‌ಮೆಂಟಿನಲ್ಲಿ ಸೇಕಡ 20ರಷ್ಟು ಕಡಮೆಯಾಗುತ್ತದೆ. ಬೇರೆ ಜಿಲ್ಲೆಗಳಲ್ಲಿ ಸೇಕಡ 20ರಿಂದ 60ರ ವರೆಗೂ ಕಡಮೆಯಾಗುತ್ತದೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಒಟ್ಟು ಸೇರಿಸಿದರೆ ಖುಷ್ಕಿ ಜಮೀನಿಗೆ 2 ಕೋಟಿ 40 ಲಕ್ಷ ರೂಪಾಯಿಗಳು ಕೊಡಬೇಕಾಗಿತ್ತು. ಈಗ 3 ಕೋಟಿ 27 ಲಕ್ಷ ಇದರಿಂದ ಬರಬೇಕಾಗುತ್ತದೆ. ಶೇಕಡ 40ರಷ್ಟು ಜಾಸ್ತಿಯಾಗಿರುತ್ತದೆ. ಅನೇಕರು ಕಂದಾಯವನ್ನೇ ಕೊಟ್ಟಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಹಾಗಾದರೆ ಹಳ್ಳಿಯವರನ್ನು ತಲೆ ಹೊಡೆದು ಅವರಿಗೆ ಜಾಸ್ತಿ ಕಂದಾಯ ಹಾಕುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಲೆ ಹೊಡೆದೇನೂ ಮಾಡುವುದಕ್ಕಾಗುವುದಿಲ್ಲ. ಧಾರವಾಡ, ಬೆಳಗಾಂಗಳಲ್ಲಿ ಈ ಬಗ್ಗೆ ಕೆಲವಾರು ಕಂಡೀಷನುಗಳಿವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೋಸ್ಕರ ಶೇಕಡ 40ರಷ್ಟು ತಂದಿದ್ದೀರಾ ? ಅದನ್ನು ಕೊಡುತ್ತಾ ಇರುವುದರಲ್ಲಿ ಅವರಿಗೆ ತೊಂದರೆ ಇಲ್ಲವೇ ? ಇವರ ತಲೆ ಹೊಡೆದು ಅವರಿಗೆ ಒಳ್ಳೆಯದು ಮಾಡುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನಾವು ಸೈಂಟಿಫಿಕ್ಕಾಗಿ ಹೋಗುತ್ತಿದ್ದೇವೆ. ಅವರಿಗೆ ಕಡಿಮೆಯಾಗುತ್ತದೆ. ಅವರು ಮೊದಲಿನಿಂದಲೂ ಜಾಸ್ತಿಯಾಗಿ ಕೊಡುತ್ತಿದ್ದರು. ಒಟ್ಟಿನಲ್ಲಿ ಈಗ ಡ್ರೈಲ್ಯಾಂಡ್ ಅಸೆಸ್‌ಮೆಂಟಿನಲ್ಲಿ ಮೈಸೂರಿನಲ್ಲಿ 3 ಕೋಟಿ 40 ಲಕ್ಷ ರೂಪಾಯಿಗಳು ಬರುತ್ತಿತ್ತು. ಈಗ ಕಂದಾಯ ಏರಿಸುತ್ತಿರುವುದರಿಂದ 3 ಕೋಟಿ 27 ಲಕ್ಷ ರೂಪಾಯಿಗಳು ಆಗುತ್ತದೆ. ಅಂದಮೇಲೆ 87 ಲಕ್ಷ ರೂಪಾಯಿಗಳು ಜಾಸ್ತಿಯಾಗುತ್ತದೆ. It is less than 40 per cent on the whole. In some cases, it comes to zero per cent. In some cases, 70-80 per cent, but in majority of the cases less than 40 per cent. ಹೀಗೆ ಶೇಕಡ 40ರಷ್ಟು ಜಾಸ್ತಿಯಾಗುತ್ತದೆ. This is the major land revenue in Mysore State. 2 ಕೋಟಿ 60 ಲಕ್ಷ ಎಕರೆಯಷ್ಟು ಡ್ರೈಲ್ಯಾಂಡ್ ಇವೆ. ಡ್ರೈಲ್ಯಾಂಡಿಗೆ 11 ರೂಪಾಯಿ ಕೊಡುತ್ತಿದ್ದುದು ಈಗ 40 ಪೈಸೆ ಜಾಸ್ತಿ ಕೊಡಬೇಕು. ಅಧಿಕಾರದಲ್ಲಿರುವವರು ಯಾವಾಗಲೂ ಕಂದಾಯ ತೆಗೆದು ಹಾಕುತ್ತೇವೆಂದು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಹೇಳುವ ಪದ್ಧತಿ. ಆದರೆ ಅಧಿಕಾರಕ್ಕೆ ಬಂದಾಗ ಅದನ್ನು ಒಬ್ಬರೂ ತೆಗೆಯುವುದಿಲ್ಲ. ಏಕೆಂದರೆ ಅಭಿವೃದ್ಧಿ ಕೆಲಸ ಮಾಡಬೇಕು, ಕೆರೆಗಳನ್ನು ಕಟ್ಟಬೇಕು, ರಸ್ತೆ ಮಾಡಬೇಕು, ಜನಗಳಿಗೆ ಎಲ್ಲ ಸೌಕರ್ಯಗಳನ್ನೂ ಕೊಡಬೇಕು. ಕಂದಾಯವಿಲ್ಲದೆ ಯಾವ ಸರ್ಕಾರವೂ ಆಡಳಿತ ಮಾಡುವುದಕ್ಕಾಗುವುದಿಲ್ಲ. ರೈತನ ಹಿತದೃಷ್ಟಿಯಿಂದ ಎಲ್ಲರೂ ಸೇರಿ ಹೊಂದಾಣಿಕೆ ಮಾಡಿಕೊಂಡು ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡಿಕೊಳ್ಳಬೇಕು. ಈಗ ಕಂದಾಯ ಜಮೀನುಗಳ ಮೇಲೆ ಹಾಕಿ 50 ವರ್ಷಗಳಾದುವು. 30 ವರ್ಷಗಳಿಗೊಮ್ಮೆ ಕಂದಾಯ ಬದಲಾವಣೆಯಾಗಬೇಕು. ಅದು ಪೂರ್ವದಿಂದ ಪದ್ಧತಿ ಇದೆ. ಅನೇಕ ಕಡೆ ರಿಸೆಟಲ್‌ಮೆಂಟ್ ಆಗಿ 50 ವರ್ಷಗಳಾಗಿವೆ. ಕಂದಾಯ ನಿಷ್ಕರ್ಷೆಯ ಮೇಲೆ ರೈತರು ತಾವು ಎಷ್ಟು ಕೊಡಬೇಕು ಎಂಬುದಾಗಿ ಹೇಳುವ ಕಾಲ ಬಂದಿದೆ. ಪೂರ್ವದಲ್ಲಿ ರೈತರ ಮೇಲೆ ಮಾತ್ರ ಕಂದಾಯ ಹಾಕುವಂಥ ಪದ್ಧತಿ ಬರೀ ಮೈಸೂರಿನಲ್ಲಿ ಮಾತ್ರವಿರಲಿಲ್ಲ. ಎಲ್ಲಾ ಕಡೆಯೂ ಇತ್ತು. ಅಲ್ಲಿಯೂ ಕಂದಾಯವನ್ನು ವಿರೋಧ ಮಾಡುತ್ತಿದ್ದರು. ರೈತರು ಹೇಗೋ ತಮ್ಮ ಹೊಲದಲ್ಲಿ ಕೆಲಸ ಮಾಡಿಕೊಂಡು ಬರುವಂತಹ ನಿಷ್ಠೆ ಇತ್ತು. ನಮ್ಮ ಕಂದಾಯ ಸಾಮಾನ್ಯವಾಗಿ ನಮ್ಮಲ್ಲಿಯೇ ಇರುವುದಿಲ್ಲ ; ಅದನ್ನು ಪಂಚಾಯಿತಿಗಳಿಗೆ ಕೊಡುತ್ತೇವೆ. ಇದರಿಂದ ಬರತಕ್ಕ ಕಂದಾಯವನ್ನೆಲ್ಲಾ ಪೂರ್ತಿಯಾಗಿ ಪಂಚಾಯಿತಿಯವರ ಕೈಗೇ ಕೊಡುತ್ತೇವೆ. ಪಂಚಾಯಿತಿಗಳಲ್ಲಿ ರೈತರಿಗೆ ವಿಶ್ವಾಸ ಇರುವಂತಹವರನ್ನು ಆರಿಸಿಟ್ಟುಕೊಂಡು ತಮ್ಮ ಗ್ರಾಮದ ಅಭಿವೃದ್ಧಿ ಮಾಡಬೇಕು. ಆ ಬಗ್ಗೆ ಚೆನ್ನಾಗಿ ವಿಚಾರ ಮಾಡಬೇಕು. ಪಂಚಾಯಿತಿ ಎಂದರೆ, ನಮ್ಮ ಸಮಾಜದಲ್ಲಿ ಲೋಯೆಸ್ಟ್ ಯೂನಿಟ್ ಪಂಚಾಯಿತಿ ಚೇರ್‌ಮನ್ ಎಲೆಕ್ಟ್ ಆಗಿ ಬರುತ್ತಾರೆ. ಅವರಲ್ಲಿ ಏನಾದರೂ ರೈತರಿಗೆ ನಂಬಿಕೆ ಇಲ್ಲವೆಂದು ಹೇಳಿದರೆ ಅವರ ಕೈಲಿ ಹಣ ಕೊಡುವುದಕ್ಕಾಗುತ್ತದೆಯೇ ? ಅವರು ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಡುತ್ತೇನೆಂದು ಹೇಳಿದರೆ ಹಣ ಇಲ್ಲದೆ ಅದು ಹೇಗಾಗುತ್ತದೆ. ಪಂಚಾಯಿತಿಗಳಿಗೆ, ಜಿಲ್ಲಾ ಪರಿಷತ್ತುಗಳಿಗೆ ಪೂರ್ತಿ ಹಣವನ್ನು ಕೊಡಬೇಕೆಂಬುದಾಗಿ ಈ ಆಕ್ಟಿನಲ್ಲಿ ತೀರ್ಮಾನವಾಗಿದೆ. ಕಂದಾಯದಿಂದ ಬರತಕ್ಕ ವರಮಾನ 6-7-10 ಕೋಟಿಯಾಗಲೀ ಆ ರೀತಿ ಬರುವ ಉತ್ಪತ್ತಿಯನ್ನು ಲೋಕಲ್ ಸೆಲ್ಫ್‌ಗೌರ್ನಮೆಂಟಿಗೆ ಬಹಳವಾಗಿ ಕೊಡುತ್ತೇವೆ. ತಾಲ್ಲೂಕು ಬೋರ್ಡಿಗೆ ಸ್ವಲ್ಪ ಕೊಡುತ್ತವೆ. ಉಳಿದುದನ್ನು ಸ್ವಲ್ಪ ಜಿಲ್ಲಾ ಪರಿಸ್ಥಿತಿಗೂ ಕೊಡುತ್ತೇವೆ. ಕಂದಾಯದ ಹಣವೆಲ್ಲಾ ಜಿಲ್ಲಾಲೆವಲ್ಲಿನಿಂದ ಬೆಂಗಳೂರು ಲೆವಲ್ಲಿಗೆ ಬರುವುದಿಲ್ಲ. ಹಳ್ಳಿಗಳ ಜನ ರಸ್ತೆ, ಸ್ಕೂಲು, ಬಾವಿ ಕಟ್ಟಿಸುವುದಕ್ಕೆ ಹಣ ಬೇಕು ಎಂದು ಕೇಳುತ್ತಾರೆ. ಗ್ರಾಮದಲ್ಲಿ ಬಡವರೂ ಇರುತ್ತಾರೆ. ಆದರೂ ಗ್ರಾಮಗಳಲ್ಲಿ ದೇವರ ಕೆಲಸ, ಊರಹಬ್ಬ, ಊರಿನ ಕಾರ್ಯ ಇತರ ಹಬ್ಬ, ಹುಣ್ಣಿಮೆಗಳು ಹೀಗೆ ಅನೇಕ ಕೆಲಸ ಕಾರ್ಯಗಳು ನಡೆಯು

ಬೇಕಾದಾಗ ಅದಕ್ಕಾಗಿ ಗ್ರಾಮಗಳಲ್ಲಿ ಜನರಿಂದ ಚಂದಾ ಎತ್ತಿ ಆ ಕಾರ್ಯಗಳನ್ನು ಮಾಡುತ್ತಾರೆ. ಹಾಗೆಯೇ ಸರ್ಕಾರ ಅವರಿಗಾಗಿ ಮಾಡತಕ್ಕ ಅಭಿವೃದ್ಧಿ ಕಾರ್ಯಗಳಿಗೆ ಹಣ ಬೇಕಾಗುತ್ತದೆ. ಹೀಗಿರುವಾಗ ಕಂದಾಯವಿಲ್ಲದೆ ರಾಜ್ಯವನ್ನು ಆಳುತ್ತೇನೆಂದರೆ ಹೇಗೆ? ಯಕ್ಷಿಣಿ ಮಾಡಿ ದುಡ್ಡು ತರಲು ಸಾಧ್ಯವೆ?

ಶ್ರೀ ಎಸ್. ಶಿವಪ್ಪ.—ಕಂದಾಯ ಈಗ ವಸೂಲು ಮಾಡುವುದಕ್ಕೆ ಎಷ್ಟು ಖರ್ಚು ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ವಸೂಲು ಮಾಡುವುದಕ್ಕೆ ಏನೂ ಖರ್ಚಿಲ್ಲ. ರೆವಿನ್ಯೂ ಇಲಾಖೆ ಇರುವುದು ಅದೇ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಭೂಮಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಇಡುವುದು, ರೈತರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸುವುದು, ಸಾಲಸೋಲಗಳನ್ನು ಕೊಡುವುದು, ಕಂದಾಯ ವಸೂಲು ಮಾಡುವುದು, ಹೀಗೆ ರೈತರಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿಯೇ ನಿರತವಾಗಿರುತ್ತದೆ. ಆದ್ದರಿಂದ ರೆವಿನ್ಯೂ ಇಲಾಖೆಗೆ ಖರ್ಚು ಮಾಡುವುದು ಕಂದಾಯ ವಸೂಲಿಗಾಗಿ ಎಂಬುದಾಗಿ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ರೈತರು ಒಗ್ಗಟ್ಟಾಗಿ ನಿಂತು ದೇಶದ ಹಿತದೃಷ್ಟಿಯಿಂದ ಕಂದಾಯ ರೂಪದಲ್ಲಿ ಬೇಕಾದಷ್ಟು ಹಣವನ್ನು ಕೊಡಬೇಕು ಎಂದು ಹೇಳುವಾಗ, ಅದೇ ದೃಷ್ಟಿಯಿಂದ ಪಟ್ಟಣದಲ್ಲಿರುವವರು, ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿ ಬೇಕಾದಷ್ಟು ಹಣವನ್ನು ಮಾಡಿಟ್ಟು ಕೊಂಡಿರುವವರೂ ಮಾಡಬಾರದೆ? ಅಂತಹವರ ಮೇಲೆ ಏಕೆ ಈ ಸರ್ಕಾರದ ದೃಷ್ಟಿ ಬಿದ್ದಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ದೇಶದಲ್ಲಿ ಅಂತಹವರೂ ಸಹ ಬಹಳ ದಿನ ಉಳಿಯುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಅವರ ಮೇಲೆ ಇವರ ಕೃಪಾದೃಷ್ಟಿ ಬಿದ್ದಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಜನರ ಆಸ್ತಿಪಾಸ್ತಿಯನ್ನು ನೋಡಿ ಹೇಳುವುದಾದರೆ it is just the question of postponing their doomsday ultimately. ನಾನು ಪ್ರಪಂಚವನ್ನೆಲ್ಲಾ ತಿರುಗಿ ತಿಳಿದುಕೊಂಡು ಬಂದು ಇಲ್ಲಿ ಹೇಳುತ್ತಿದ್ದೇನೆ. ಎಲ್ಲಾ ದೇಶಗಳನ್ನೂ ನೋಡಿಕೊಂಡು ಬಂದಿರುವುದರಿಂದ ಹೇಳುತ್ತಿದ್ದೇನೆ. ಈ ಪಟ್ಟಭದ್ರಹಿತಗಳು ಭದ್ರವಾಗಿ ಇರುತ್ತದೆಯೆಂಬುದಾಗಿ ಯಾರಾದರೂ ಮಾನ್ಯ ಸದಸ್ಯರು ಮನಸ್ಸಿನಲ್ಲಿಟ್ಟುಕೊಂಡದ್ದರೆ ಅದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಬಹಳ ದಿನಗಳು ಇರುವುದಿಲ್ಲ 10-15 ವರ್ಷಗಳವರೆಗೂ ಮೋಸ ಮಾಡಿದರೂ ಕೂಡ ಅದು ಒಂದಲ್ಲ, ಒಂದು ದಿನ ಹೋಗಲೇಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ತಮಗೂ ಅನ್ವಯಿಸುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗಿಂತಲೂ ಹೆಚ್ಚಾಗಿ ಅವರು ರೈತರ ಪ್ರತಿನಿಧಿಗಳು ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ನಾವೂ ಕೂಡ ರೈತರಲ್ಲಿ ಓಡಾಡುತ್ತಿದ್ದೇವೆ. ಇವರು ನಮ್ಮ ಮೇಲೆ ಎಷ್ಟು ಅಪಪ್ರಚಾರ ಮಾಡಿದರೂ ಚುನಾವಣೆ ಕಾಲದಲ್ಲಿ ನಾವು ಜನಗಳಿಗೆ ವಿಷಯಗಳನ್ನು ತಿಳಿಸಿದ ನಂತರ ನಮ್ಮ ಮೇಲೆ ವಿಶ್ವಾಸ ಬೆಳೆದುಬಿಡುತ್ತವೆ. ನಾವು ಹೇಳುವುದು ನಿಜ ಎಂದು ಜನ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದರು. ನಿಜ ಅವನ್ನೂ ಸಹ ಒಪ್ಪಿಕೊಳ್ಳುತ್ತೇನೆ. ಒಟ್ಟಿನಲ್ಲಿ ಇಷ್ಟೇ ಮದ್ರಾಸ್ ಮತ್ತು ಆಂಧ್ರದಲ್ಲಿ ರೈತ ಏನು ಕಂದಾಯ ಕೊಡುತ್ತಿದ್ದಾನೆ ಎಂಬ ಬಗ್ಗೆ ವಿರೋಧಪಕ್ಷದವರು ಈಗಾಗಲೇ ಮಾತನಾಡಿದರು. ಅನಂತಪುರದಿಂದ ಹಿಂದೂಪುರಕ್ಕೆ 40 ಮೈಲಿಗಳಿವೆ. ಒಂದು ಎಕರೆ ಖುಷ್ಕಿಗೆ ಎಷ್ಟು ಕಂದಾಯ ಕೊಡುತ್ತಾರೆ, ತಮಿಳುನಾಡಿನಲ್ಲಿ ಗದ್ದೆಗೆ ಎಷ್ಟು ಕಂದಾಯ ಕೊಡುತ್ತಾರೆಂಬುದನ್ನು ನೋಡಿ. ಆದರೆ ಕಂದಾಯ ವಿಧಿಸುವುದೇ ಬೇಡವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇದರ ಅರ್ಥವೇನು? ಈಗ ನಾವು ಹಾಕಿರುವ ಡ್ರೈಲ್ಯಾಂಡ್ ರೇಟ್ಸ್ ಆಂಧ್ರಕ್ಕೂ ತಮಿಳುನಾಡಿಗೂ ಕಡಿಮೆ ಬೇಕಾದರೆ ನಾನು ಚಾಲೆಂಜ್ ಮಾಡುತ್ತೇನೆ. ಅಂಕಿ ಅಂಶಗಳೂ ಇವೆ. ಹೊಸೂರು 25 ಮೈಲಿ ದೂರದಲ್ಲಿದೆ. ಸೇಲಂ ಜಿಲ್ಲೆಯವರಿಗಿಂತಲೂ ನಾವು ಹೆಚ್ಚಿಗೆ ಕಂದಾಯ ಹಾಕುತ್ತಿಲ್ಲ.

SRI S. SIVAPPA.—What is the irrigation potential?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಕಡೆ ಇರುವುದಕ್ಕೂ ಈ ಕಡೆ ಇರುವುದಕ್ಕೂ ಏನೂ ವ್ಯತ್ಯಾಸವಿಲ್ಲ. ಅಲ್ಲಿ ನಮಗಿಂತಲೂ ಶ್ರೇಷ್ಠವಾದ ಭೂಮಿ ಉಳ್ಳವರು, ಅವರು ಡೆಲ್ಟಾದಲ್ಲಿರುವವರು.

ಈಗ ನಾವು ವಿಧಿಸಿರತಕ್ಕ ಕಂದಾಯ ಅಷ್ಟೇನೂ ಹೆಚ್ಚಾಗಿಲ್ಲ. ಸುಮ್ಮನೆ ರೈತರಿಗೆ ಸರ್ಕಾರದವರು ಕಂದಾಯವನ್ನು ಜಾಸ್ತಿ ಮಾಡಿದ್ದಾರೆ ಎಂದು ವಿರೋಧ ಪಕ್ಷದವರು ಪ್ರಚಾರ ಮಾಡತಕ್ಕದ್ದು ಸರಿಯಲ್ಲ. ಈಗ ನಾವು ಖುಷ್ಕಿಜಮೀನಿಗೆ ಹೆಚ್ಚಿಸಿರತಕ್ಕ ರೇಟ್ಸ್ ಏನಿದೆ ಅದು ನಮ್ಮ ಅಕ್ಕ ಪಕ್ಕದ ಸಂಸ್ಥಾನಗಳಿಗಿಂತ ಹೆಚ್ಚಾಗುತ್ತಿಲ್ಲ. ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಕಂದಾಯದ ದರಕ್ಕಿಂತಲೂ ನಮ್ಮದು ಕಡಿಮೆಯಾಗಿದೆ. ಪ್ಲಾಂಟೇಷನ್‌ಗಳವರಿಗೆ ಸರ್ಕಾರದವರು ವಶವಾಗಿ ಬಿಟ್ಟಿದ್ದಾರೆ ಎಂದು ಹೇಳತಕ್ಕದ್ದು ಸರಿಯಲ್ಲ. ಕಾಫಿ ಬೆಳೆಯುತಕ್ಕವರಿಗೆ ಎಕರೆಗೆ 1½ ರೂಪಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

2 ರೂಪಾಯಿಗಳ ಕಂದಾಯ ಇದ್ದದ್ದು ಈಗ 12 ರೂಪಾಯಿಗಳಾಗುತ್ತಿದೆ. ಈಗ ಅವರಿಗೆ 4½ಯಷ್ಟು 6 ರಷ್ಟು ಕಂದಾಯವನ್ನು ನಾವು ಹಾಕುತಿದ್ದೇವೆ. ಕಾಫಿ ಬೆಳೆಗೆ ನಾವು ಇನ್ನೂ ಅನುಕೂಲ ಮಾಡಿ ಕೊಡಬೇಕು. ಅದು ಇನ್ನೂ ಹೆಚ್ಚು ಅಭಿವೃದ್ಧಿಯಾಗಬೇಕು. ಏತಕ್ಕೆಂದರೆ ಅದರಿಂದ ನಮ್ಮ ದೇಶಕ್ಕೆ ಕೀರ್ತಿ ಬರುತ್ತಿದೆ. ಅದರಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಫಾರಿನ್ ಎಕ್ಸ್‌ಚೇಂಜ್ ಬರುತ್ತದೆ. ಈಗ ಕಾಫಿಪ್ಲಾನ್‌ಟೇಷನ್‌ನವರಿಗೆ ಹಾಕುವ ಒಂದು ಪರ್ಸೆಂಟ್ ಕಂದಾಯ ಕಡಿಮೆ ಯೇನಲ್ಲ. ಈಗ ಅವರು ಕೊಡುತ್ತಿರುವ ಕಂದಾಯದ ಶೇಕಡಾ 600 ರಷ್ಟು ಜಾಸ್ತಿ ಯಾಗುತ್ತಿದೆ. ಡ್ರೈರೇಟ್ಸ್ 20-30 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. Where is 30 per cent and where is 600 per cent? ಮುಳಬಾಗಿಲು ಮತ್ತು ಕೋಲಾರದಲ್ಲಿ 20 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಒಂದುರೂಪಾಯಿ 20 ನಯಪೈಸಾ ಕಂದಾಯ ಜಾಸ್ತಿ ಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಮುಳಬಾಗಿಲಿಗೆ ನೀವು ಹೋಗಿ ಅಲ್ಲಿ ನೀವು ಭಾಷಣಮಾಡಿ ಆಗ ನಿಮಗೆ ಗೊತ್ತಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ರೀತಿ ಸುಮ್ಮನೆ ನೀವು ವಿರೋಧಪಕ್ಷದವರು ಚಾಲೆಂಜ್ ಮಾಡುತ್ತಾ ನೀವು ಅಲ್ಲೇ ಇದ್ದೀರಿ, ನಾವು ಇಲ್ಲಿ ಇದ್ದೇವೆ. ಇದು ಪೂರ್ವದಿಂದ ನಡೆದು ಬಂದದ್ದು. ಇದು ಹೊಸದೇನೂ ಅಲ್ಲ. ಈಗ ನಮ್ಮ ರಾಜ್ಯದಲ್ಲಿ ರೈನ್‌ಫೆಡ್‌ವೆಟ್ ಏರಿಯಾ ಒಂದು ಮಿಲಿಯಾನ್ ಎಕರ್ಸ್ ಇದೆ. ಈಗ ಮಲೆನಾಡಿನಲ್ಲಿ ಬತ್ತವನ್ನು ಬೆಳೆಯುತ್ತಾರೆ. ಅದು ಬಹಳ ಕಷ್ಟಕರವಾದ ಬೇಸಾಯ ಮಲೆನಾಡಿನಲ್ಲಿ ಗದ್ದೆಗಳಿಗೆ ಮೃಗಗಳು ಬಂದು ಬೆಳೆಯನ್ನು ನಾಶಮಾಡುತ್ತವೆ ಎಂದು ಗದ್ದೆಯ ಹತ್ತಿರ ರೈತರು ಕೋವಿಯನ್ನು ಹಿಡಿದುಕೊಂಡು ಕುಳಿತುಕೊಂಡಿರುತ್ತಾರೆ. ಆ ರೀತಿ ಅಲ್ಲಿ ಕಷ್ಟಪಟ್ಟು ಅವರು ಬತ್ತವನ್ನು ಬೆಳೆಯುತ್ತಾರೆ. ಸೌತ್ ಕೆನರ, ನಾರ್ತ್ ಕೆನರಾದಲ್ಲಿ ಸುಮಾರು 10ಲಕ್ಷ ಎಕರೆಗಳಲ್ಲಿ ಬತ್ತವನ್ನು ಬೆಳೆಯುತ್ತಿದ್ದಾರೆ. ಖಾನಾಪುರ, ಕೂರ್ಗ್ ಸೌತ್ ಕೆನರಾ ನಾರ್ತ್ ಕೆನರಾ ಈ ಪ್ರದೇಶಗಳಲ್ಲಿ ಸುಮಾರು 20 ಪರ್ಸೆಂಟ್ ಕಂದಾಯ ಜಾಸ್ತಿ ಆಗುತ್ತದೆ. ಈಗ ರೈನ್ ಫೆಡ್‌ವೆಟ್ ಏರಿಯದಿಂದ 33 ಲಕ್ಷ ರೂಪಾಯಿಗಳ ಕಂದಾಯ ಬರುತ್ತದೆ. ಈಗ ಕಂದಾಯದ ದರಗಳನ್ನು ಜಾಸ್ತಿ ಮಾಡುವುದರಿಂದ 39 ಲಕ್ಷರೂಪಾಯಿಗಳಾಗುತ್ತದೆ. ಎಂದರೆ ಒಟ್ಟನಲ್ಲಿ 6 ಲಕ್ಷರೂಪಾಯಿಗಳು ಮಾತ್ರ ಜಾಸ್ತಿ ಆಗುತ್ತದೆ. ಅದು 15 ಅಥವಾ 16 ಪರ್ಸೆಂಟ್ ವರ್ಕ್‌ಅಪ್ ಆಗುತ್ತದೆ. ಒಂದು ಎಕರೆಗೆ 1ರೂ 15 ನಯಾಪೈಸಾ ಅಥವಾ ಒಂದು 16 ನಯಾಪೈಸಾ ಬರುತ್ತದೆ. ಇದು ಬಹಳ ಹೆಚ್ಚೇನೂ ಅಲ್ಲ.

ಆಮೇಲೆ ರೈನ್ ಫೆಡ್‌ಗಾರ್ಡನ್‌ನಲ್ಲಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದಂತೆ ನಾರ್ತ್ ಕೆನರದಲ್ಲಿರತಕ್ಕ ಅಡಿಕೆ ತೋಟ ಸೌತ್ ಕೆನರಾದಲ್ಲಿರತಕ್ಕ ತೆಂಗಿನತೋಟ ಮತ್ತು ಮಲೆ ನಾಡಿನಲ್ಲಿರತಕ್ಕ ತೋಟಗಳೂ ಬರುತ್ತವೆ. ಇದರ ಏರಿಯಾ ಸುಮಾರು 1,15,000 ಎಕರೆಗಳಿದೆ. ಈಗ ಅವರು 7ಲಕ್ಷ ರೂಪಾಯಿಗಳ ಕಂದಾಯವನ್ನು ಕೊಡುತಿದ್ದಾರೆ. ಈಗ ಅದಕ್ಕೆ ಕಂದಾಯ ವನ್ನು ಜಾಸ್ತಿ ಮಾಡುವುದರಿಂದ ಒಂದು ಎಕರೆಗೆ ಆವರೇಜ್ 6 ರೂಪಾಯಿ ಅಥವ 7 ರೂಪಾಯಿಗಳು ಬರುತ್ತದೆ. ಎಂದರೆ ಒಟ್ಟನಲ್ಲಿ ಮೊದಲು 7 ಲಕ್ಷ ರೂಪಾಯಿಗಳ ಕಂದಾಯವನ್ನು ಕೊಡುತ್ತಿದ್ದರು. ಇನ್‌ಕ್ರಿಸ್ಡ್‌ರೇಟ್ ಪ್ರಕಾರ 15 ಲಕ್ಷರೂಪಾಯಿಗಳ ಕಂದಾಯವನ್ನು ಕೊಡುತ್ತಾರೆ. ಈ ವಿಚಾರದಲ್ಲಿ ಯಾರೂ ವಾದ ಮಾಡುವುದಿಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಇನ್ನೂ ಇಂಟಿಗ್ರೇಟೆಡ್‌ವೆಟ್ ಏರಿಯಾಕ್ಕೂ ಮತ್ತು ಡ್ರೈ ಏರಿಯಾಕ್ಕೂ ಯಾವ ರೀತಿ ರೇಟು ಜಾಸ್ತಿಯಾಗುತ್ತದೆಯೋ ಅದೇರೀತಿ ವೆಟ್ ಏರಿಯಾಕ್ಕೂ ಕಂದಾಯಜಾಸ್ತಿ ಆಗುತ್ತದೆ. ವೆಟ್ ಏರಿಯಾಕ್ಕೆ ವಾಟರ್ ರೇಟ್ ಜೇರೆ ಮಿಕ್ಸ್ ಆಗುತದೆ. ಇದರಿಂದ ಈಗ 14 ಲಕ್ಷ ರೂಪಾಯಿಗಳು ಬರುತ್ತಿದೆ. ಆ ಜಮೀನುಗಳಿಗೆ ಕಂದಾಯನ್ನು ಜಾಸ್ತಿ ಮಾಡುವುದರಿಂದ 20 ಲಕ್ಷ ರೂಪಾಯಿಗಳು ಬರುತ್ತದೆ. ಎಂದರೆ ಒಟ್ಟನಲ್ಲಿ 6 ಲಕ್ಷ ರೂಪಾಯಿಗಳು ಜಾಸ್ತಿ ಯಾಗುತ್ತದೆ.

ಈಗ ಒಟ್ಟು ಲ್ಯಾಂಡ್‌ರೆವಿನ್ಯೂನಿಂದ ಸರ್ಕಾರಕ್ಕೆ 3,05,00,000ರೂಪಾಯಿಗಳು ಬರು ತ್ತಿದೆ. ಕಂದಾಯದ ದರವನ್ನು ಜಾಸ್ತಿ ಮಾಡಿರುವುದರಿಂದ 4,4400,00 ರೂಪಾಯಿಗಳು ಆಗು ತ್ತದೆ. ಎಂದರೆ ಒಟ್ಟನಲ್ಲಿ 1,40,00,000 ರೂಪಾಯಿಗಳು ಮಾತ್ರ ಜಾಸ್ತಿಯಾಗುತ್ತದೆ. "It works out to less than 50 per cent increase" ವಾಟರ್‌ರೇಟ್, ಇಂಟಿಗ್ರೇಟೆಡ್ ವಾಟರ್‌ರೇಟ್ ಡ್ರೈಅಸೆಸ್‌ಮೆಂಟ್ ಮತ್ತು ಗಾರ್ಡನ್ ಅಸೆಸ್‌ಮೆಂಟ್ ಎಲ್ಲಾಸೇರಿದರೂ ಕೂಡ ಅದರಿಂದ 5 ಕೋಟಿ ರೂಪಾಯಿಗಳು ಮಾತ್ರ ಬರುತ್ತದೆ. ರೈತ ಎಲ್ಲಾ ರೀತಿಯಿಂದಲೂ ಕೊಡುವ ಕಂದಾಯದಮೊತ್ತ 10 ಕೋಟಿ ರೂಪಾಯಿಗಳಿಗೆ ಮೀರದರೀತಿಯಲ್ಲಿ ಮಾಡುತ್ತೇವೆಂದು

ಮುಖ್ಯ ಮಂತ್ರಿಗಳೇ ಭರವಸೆಯನ್ನು ಕೊಟ್ಟಿದ್ದಾರೆ. ಈಗ ವಾಟರ್‌ರೇಟ್ ಡ್ರೈ ಅಸೆಸ್‌ಮೆಂಟ್, ಗಾರ್ಡನ್ ಅಸೆಸ್‌ಮೆಂಟ್ ಎಲ್ಲಾ ಸೇರಿದರೂ ಕೂಡ 5 ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ. ಇದನ್ನು ಎರಡರಷ್ಟು ಮಾಡುವುದಕ್ಕೆ ಅನೇಕಸಲ ನೀವೆಲ್ಲರೂ ಒಪ್ಪಿದ್ದೀರಿ. ನಾವು ಮೊದಲು ಏನು ಕಂದಾಯವನ್ನು ಜಾಸ್ತಿ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೋ ಅದಕ್ಕಿಂತಲೂ ಈಗ ಕಡಿಮೆ ಮಾಡಿದ್ದೇವೆ. ಅವರೆ ವಿರೊಧ ಪಕ್ಷದವರು ಉಪವಾಸ ಮಾಡಿದಕ್ಕೋಸ್ಕರ ಈಗ ನಾವು ಕಂದಾಯದ ರೇಟನ್ನು ಕಡಿಮೆ ಮಾಡಿದ್ದೇವೆಂದು ತಾವು ತಿಳಿದು ಕೊಳ್ಳಬಾರದು. ಮೊದಲು ಹಾಕಿದ್ದು ಸ್ವಲ್ಪ ಜಾಸ್ತಿ ಎಂದು ನಮಗೆ ಕಂಡುಬಂದದ್ದರಿಂದ ಮೊದಲು ಹಾಕಿದ $6\frac{1}{4}$ ಪರ್ಸೆಂಟಿಗೆ ಬದಲು ಶೇಕಡಾ 4ಕ್ಕೆ ಇಳಿಸೋಣ ಎಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ದೃಷ್ಟಿಯಿಂದ ಈ ತಿದ್ದುಪಡಿಮಸೂದೆಯನ್ನು ನಾವು ಇಲ್ಲಿ ತಂದಿದ್ದೇವೆ. ಇದಕ್ಕೆ ಈ ಮಾನ್ಯ ಸಭೆಯವರು ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—The question is :

"That the Mysore Land Revenue (Amendment) Bill, 1965, be taken into consideration."

The motion was adopted.

CLAUSE 2.

Mr. DEPUTY SPEAKER.—There are two amendments, but as they have come late, I am rejecting the amendments.

The question is :

"That clause 2 stand part of the Bill."

The motion was adopted.

Clause 2 was added to the Bill.

CLAUSES 3 to 9.

Mr. DEPUTY SPEAKER.—The question is :

"That clauses 3 to 9, both inclusive, stand part of the Bill."

The motion was adopted.

Clauses 3 to 9, both inclusive, were added to the Bill.

CLAUSE 1, TITLE AND PREAMBLE

Mr. DEPUTY SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass

Sri M. V. KRISHNAPPA.—Sir, I move:

"That the Land Revenue (Amendment) Bill, 1965, be passed."

Mr. DEPUTY SPEAKER—The question is :

"That the Mysore Land Revenue (Amendment) Bill, 1965, be passed."

The motion was adopted.

MYSORE LAND REFORMS (AMENDMENT) BILL, 1965

(Debate continued)

5-30 P.M.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ನಾನು ನಿನ್ನೆ ಮಾತನಾಡುವಾಗ, ಭೂಮಸೂದೆಯ ಮೂಲ ಮಸೂದೆಯನ್ನು ಸ್ವಾಗತಿಸಿದ್ದರೂ, ಈ ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿರುವ ಕೆಲವು ತಿದ್ದುಪಡಿಗಳನ್ನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಏಕೆಂದರೆ, ಈ ತಿದ್ದುಪಡಿಯಿಂದ ಇನ್ನೂ ಕೆಲವು ಚಾಲಗೇಣಿ ರೈತರನ್ನು ನೆಲ ಬಿಟ್ಟು ಓಡಿಸುವ ಪರಿಸ್ಥಿತಿ ಇದೆ. ಈಗಾಗಲೇ ಈ ಮಸೂದೆಯನ್ನು ಜಾರಿಗೆ ತರುವವರಾದ ತಾವು ದೀರ್ಘ ಕಾಲವನ್ನು ಇದರಲ್ಲಿ ಕಳೆದಿದ್ದೀರಿ. ಸಾಧಾರಣವಾಗಿ ಈ 17 ವರ್ಷಗಳಿಂದ ಯಾರ್ಯಾರು ಭೂಮಾಲಿಕರಿದ್ದಾರೋ ಅವರ ಹಿತರಕ್ಷಣೆಯನ್ನು ಕಾಪಾಡುತ್ತಿದ್ದೀರಿ. ಯಾರು ನಿಜವಾದ ನೇಗಿಲಯೋಗಿಯೊ ಅವನು ನೆಲ ಬಿಟ್ಟು ಹೋಗುವಂತೆ ತಾವು ಮಾಡಿದ್ದೀರಿ. ಈಗಾಗಲೇ ಸಾಧಾರಣವಾಗಿ ಶೇಕಡ 50ಕ್ಕೂ ಮೀರಿ ಚಾಲುಗೇಣಿ ರೈತರು ತಮ್ಮ ಹೊಲವನ್ನು ಬಿಟ್ಟು ಹೋಗಿ, ಭಿಕ್ಷೆ ಬೇಡುತ್ತಿದ್ದಾರೆ; ತಿರುಕರ ಹಾಗೆ ತಿರುಪೆಗೆ ಹಚ್ಚಿದ್ದಾರೆ. ಇದರಲ್ಲಿಯೂ ಕೂಡ ಇನ್ನೂ ಒಂದು ಸಮನ್ವಯ ಕಾನೂನನ್ನು ತರದೆ, ಇನ್ನೂ ಕೆಲವು ಒಕ್ಕಲುಗಳು ತಮ್ಮ ಸಾಗುನೆಲವನ್ನು ಬಿಟ್ಟು ಹೋಗುವಂತೆ ತಾವು ಬಿಲ್ಲಿನಲ್ಲಿ ಕೆಲವು ತಿದ್ದುಪಡಿಗಳನ್ನು ಅಡಕ ಮಾಡಿದ್ದೀರಿ. ಈ ಮಠಗಳ ವಿಷಯದಲ್ಲಿ ಈಗಾಗಲೇ ಸರಕಾರದ ವತಿಯಿಂದ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ನನಗೆ ಅರ್ಥವಾಗುವುದಿಲ್ಲ. ಕೆಲವು ದೇವಸ್ಥಾನಗಳನ್ನು ಬಿಟ್ಟು, ಬಾಕಿ ಮಠಗಳಿಗೆ ಮಸೂದೆಯ ಮಿತಿ ಬರುತ್ತದೆ ಎಂದು ಹೇಳುವ ಸಂದರ್ಭವನ್ನು ಇಲ್ಲಿ ಒದಗಿಸಿ ಕೊಟ್ಟಿದ್ದಾರೆ. ಈ 20 ದೇವಸ್ಥಾನಗಳ ಬಗ್ಗೆ ಒಂದು ಸಂಶಯವಾಗುತ್ತಿದೆ. For the words "from Government" the words "from the Government or lands belonging to or held on lease from religious or charitable institutions managed by or under the control of the State Government shall be substituted." ಎಂದು ಹೇಳಿದ್ದಾರೆ. ರಿಲಿಜಿಯಸ್ ಇನ್‌ಸ್ಟಿಟ್ಯೂಶನ್ನುಗಳು ಎಂದರೆ ನನಗೆ ಅರ್ಥವಾಗುವುದಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಮತ್ತು ಮೈಸೂರು ರಾಜ್ಯದ ಮಟ್ಟಿಗೆ ಹೇಳುವುದಾದರೆ, ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮ ಭೂಮಿಯನ್ನು ಹೊಂದಿವೆ; ಮಾತ್ರವಲ್ಲದೆ, ಕೆಲವು ಧಾರ್ಮಿಕ ಸಂಸ್ಥೆಗಳು ಮತ್ತು ಮಠಗಳು ರಾಜಕೀಯದ ಒಂದು ದೊಡ್ಡ ಬೀಡು ಆಗಿವೆ. ಇಲ್ಲ ಇರುವಷ್ಟು ರಾಜಕೀಯ, ರಾಜಕೀಯ ಪಕ್ಷಗಳು ಇನ್ನೆಲ್ಲಿಯೂ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಮಠಗಳಿಗೆ ಸಂಬಂಧಪಟ್ಟಂತೆ, ಸಾಧಾರಣವಾಗಿ 100-150 ಒಕ್ಕಲುಗಳು ಮಠದ ನೆಲವನ್ನು ಸಾಗು ಮಾಡುತ್ತಿದ್ದಾರೆ. ಒಂದು ವೇಳೆ ಈ ಮಠಗಳಿಗೆ ಈ ರಿಯಾಯಿತಿ ಕೊಟ್ಟಲ್ಲಿ, ನಾನು ಸರಕಾರಕ್ಕೆ ಹೇಳುತ್ತೇನೆ. ತಾವು ಏನು ಮೂಲ ಉದ್ದೇಶವನ್ನು ಇಟ್ಟುಕೊಂಡಿದ್ದೀರೊ, ಒಕ್ಕಲುಗಳ ಹಿತವನ್ನು ರಕ್ಷಿಸುವ, ಉಳುವವನಿಗೆ ಹೊಲವನ್ನು ದೊರಕಿಸುವ ಧ್ಯೇಯವನ್ನು ಏನು ಇಟ್ಟುಕೊಂಡಿದ್ದೀರೊ, ಆ ಧ್ಯೇಯ ಇದರಲ್ಲಿ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ.

ತಾವು ಕೆಲವು ಪರಿಮಿತಿಯನ್ನು ವಿನಾಯಿತಿ ಗೊಳಿಸಿದ್ದೀರಿ.

As regards plantations, the limit of one hundred acres for development of plantation fixed in clause (ii) of the explanation to section 104 will be deleted, and the limitation on the interspersed land specified by clause (iii) of the same explanation will also be deleted.

ಇದನ್ನು ವಿಚಾರ ಮಾಡಲಿಕ್ಕೂ ಕಷ್ಟವಾಗುತ್ತದೆ. ತೋಟಗಳು (ಪ್ಲಾಂಟೇಶನ್ನುಗಳು) ಏನಿವೆ, ಅವುಗಳಿಗೆ ತಾವು ಯಾವ ಮಿತಿಯನ್ನೂ ಹಾಕದೆ, ವಿನಾಯಿತಿಯನ್ನು ಕೊಟ್ಟಿದೆ ಎಂದು ಹೇಳುವಾಗ ಇವು ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುವ ವಸ್ತುಗಳಾದ್ದರಿಂದ ಇವಕ್ಕೆ ವಿನಾಯಿತಿ ಕೊಡಲಾಗಿದೆ ಎಂದು ಹೇಳಿದಿರಿ. ತಾವು ತೋಟಗಳಿಗೆ ವಿನಾಯಿತಿ ಕೊಟ್ಟದ್ದು ಮಾತ್ರವಲ್ಲದೆ, ತೋಟಗಳ ಮಧ್ಯ ಭಾಗದಲ್ಲಿರುವ ಭೂಮಿಗೂ ಕೊಟ್ಟು, ಈ ಮಸೂದೆಗೆ ಲಗತ್ತು ಆಗದ ಸಂದರ್ಭವನ್ನು ಇದರಲ್ಲಿ ಒದಗಿಸಿ ಕೊಟ್ಟಿದ್ದೀರಿ. ತೋಟಗಳ ಮಧ್ಯದಲ್ಲಿ ಸಾಧಾರಣವಾಗಿ 200 ಎಕರೆಗಳಿಗಿಂತಲೂ ಹೆಚ್ಚು ಭೂಮಿ ಈ ರೈತರ ಸ್ವಾಧೀನದಲ್ಲಿರುತ್ತದೆ. ಭೂಮಾಲಿಕನಿಗೆ ಮಿತಿಯನ್ನು ಹಾಕಬಾರದು ತೋಟಗಾರರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿದರೆ, ಇದರಿಂದ ಏನು ಅರ್ಥವಾಗುತ್ತದೆ. ಕೆಲವು ಭಿಕ್ಷುಕರುಗಳು ಭಿಕ್ಷೆ ಬೇಡುವುದಕ್ಕೆ ಕೃತಕ ಅಂಗಗಳನ್ನು ದಾರಿಯಲ್ಲಿ ಪ್ರದರ್ಶಿಸುತ್ತಿರುತ್ತಾರೆ. ಅಂತೆಯೆ ನಮ್ಮ ಸರ್ಕಾರ ಮಾಡುತ್ತಿದೆ. ಒಂದು ಕಡೆ ಹಾವೂ ಸಾಯಬಾರದು, ಕೋಲೂ ಮುರಿಯಬಾರದು. ಈ ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ಮಸೂದೆಯನ್ನು ತಂದಂತೆ ತೋರುತ್ತದೆ. ತಾವು ದೊಡ್ಡ ಭೂಮಾಲಿಕರ, ಇಲ್ಲವೆ ತೋಟಗಾರರ, ಈ ಒಂದು ದುಷ್ಟ ಶಕ್ತಿಗಳಿಗೆ ಒಳಗಾಗಿ ಈ ಒಂದು ವಿನಾಯಿತಿಯನ್ನು ಅವರಿಗೆ ತೋರಿಸಿದ್ದೀರಿ, ಆದರೆ ಇಷ್ಟು ಮಾತ್ರಕ್ಕೆ ತೋರಿಸಬಾರದು. ಇದಕ್ಕೂ ಕೂಡ ಮಿತಿ ಹಾಕಬೇಕು. ಈ ಮಧ್ಯೆ ಭೂಮಿಯನ್ನು ಅವರಿಗೆ ಬಿಟ್ಟಲ್ಲಿ, ಅದು ರೈತರ ಸ್ವಾಧೀನದಲ್ಲಿದ್ದರೆ, ರೈತ ಭೂಮಿಯನ್ನು ಬಿಟ್ಟು ಹೋಗಬೇಕಾಗುತ್ತದೆ. ತಾವು ಇದಕ್ಕೂ ಕೂಡ ಮಿತಿಯನ್ನು ಹೇರಿಸಬೇಕು. ಈ ಭೂಮಿಯನ್ನು ರೈತರಿಗೆ ವರ್ಗಾಯಿಸಿ ಕೊಡಬೇಕು.

ಅಮೇಲೆ the amount of compensation payable in cash under section 51 will be limited to two thousand rupees instead of ten thousand rupees ಎಂದು ಹೇಳಿ ತಿದ್ದುಪಡಿ ತಂದಿದ್ದೀರಿ. ತಾವು ಏನೋ ಶುರುವಿನಲ್ಲಿ 10 ಸಾವಿರ ರೂಪಾಯಿ ಕೊಟ್ಟು, ಆಮೇಲೆ ಮಿಕ್ಕದ್ದನ್ನು ಬಾಂಡಿನಲ್ಲಿ ಕೊಡುವುದೆಂದು ಮೂಲ ಮಸೂದೆಯಲ್ಲಿ ಹೇಳಿದ್ದರೂ, ಆ 10 ಸಾವಿರ ರೂಪಾಯಿಯನ್ನು ಇಲ್ಲಿ 2 ಸಾವಿರ ರೂಪಾಯಿಗೆ ತಂದಿಟ್ಟಿದ್ದೀರಿ. ಕೆಲವು ವೇಳೆ ನಿರ್ಗತಿಕರಾದ ಭೂಮಾಲಿಕರಿದ್ದಾರೆ. ಅವರು ಭೂಮಿಯನ್ನೇ ನಂಬಿ ಕೊಂಡಿರುತ್ತಾರೆ; ಅವರು ಸ್ವಂತ ಭೂಮಿಯನ್ನು ಕಳೆದುಕೊಂಡರೆ ಅವರ ಗತಿ ಏನು ? ತಮ್ಮ ಸರಕಾರದಲ್ಲಿ ರೂಪಾಯಿಯ ಮೌಲ್ಯ 17 ಪೈಸೆ ಆಗಿದೆ. ಎರಡು ಸಾವಿರ ರೂಪಾಯಿ ತೆಗೆದುಕೊಂಡು ಒಂದು ಸಣ್ಣ ಬೀಡಿ ಅಂಗಡಿಯನ್ನೂ ಇಡುವುದಕ್ಕಾಗುವುದಿಲ್ಲ. ಕಾಂಗ್ರೆಸ್ ಸರಕಾರ ಬಂದ ಮೇಲೆ ನಾಣ್ಯ ಮಾಡಿದರು ; ಅದರ ಬೆಲೆ ದಿವಸಾ ಕುಂದುತ್ತಾ, ತಗ್ಗುತ್ತಾ ಹೋಗುತ್ತಿವೆ. ಇಷ್ಟು ಸಣ್ಣ ಪ್ರಮಾಣದ ಹಣದಿಂದ ಒಂದು ಸಣ್ಣ ಬೀಡಿ ಶಾಪ್ ಇಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅವರಿಗೆ ಮೂಲ ಮಸೂದೆಯಲ್ಲಿ ಹೇಳಿದ್ದಂತೆ 10 ಸಾವಿರ ರೂಪಾಯಿಯಷ್ಟನ್ನಾದರೂ ಕಾಂಪೆನ್ಸೇಶನ್ನಾಗಿ ಕೊಡಬೇಕು. ಈ ಬಾಂಡುಗಳನ್ನು ಕೊಡುವುದು ಹಾಸ್ಯಾಸ್ಪದವಾಗಿದೆ. ಬಿಹಾರ ಮತ್ತು ಇನ್ನಿತರ ರಾಜ್ಯಗಳಲ್ಲಿ ಈ ಬಾಂಡಿನ ಸ್ಥಿತಿ ಏನಿವೆ ಅನ್ನುವುದು ಗೊತ್ತಿದೆ. ರೈತನಿಗೆ ಬಾಂಡ್ ಕೊಟ್ಟರೆ, ಅದು ಮಾರ್ಕೆಟ್ಟಿನಲ್ಲಿ ಹೋಗುವುದಿಲ್ಲ; ಯಾವುದಾದರೂ ಬ್ಯಾಂಕಿನಲ್ಲಿ ಅಡವು ಇಟ್ಟುಕೊಂಡು ಹಣ ಕೊಡುವುದಿಲ್ಲ. ಇಂಥ ಬಾಂಡ್ ತೆಗೆದುಕೊಂಡು ಬೆಲ್ಲ ಹಾಕಿ ನೆಕ್ಕಬೇಕು. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಮೈಸೂರು ರಾಜ್ಯದ ಬಂಡವಾಳದ ಸ್ಥಿತಿಯನ್ನು ಶ್ರೀಮಾನ್ ಜತ್ತಿಯವರು ಹೇಳಿರುವುದನ್ನು ನಾವೆಲ್ಲಾ ಕೇಳಿದ್ದೇವೆ. ಇಂಥ ಬಂಡವಾಳವಿಲ್ಲದ ಸರಕಾರದ ಬಂಡವಾಳವನ್ನು (ಬಾಂಡನ್ನು) ತೆಗೆದುಕೊಂಡು ರೈತನು ಏನು ಮಾಡಬೇಕು ? ಬಾಂಡುಗಳಿಂದ ಏನೂ ಪ್ರಯೋಜನವಿಲ್ಲ. ಬಾಂಡುಗಳನ್ನು ಕೊಡುವ ಬದಲು, ಇಷ್ಟಿಷ್ಟು ಕಂತುಗಳಲ್ಲಿ ಹಣವನ್ನು ಕ್ಯಾಶಿನಲ್ಲಿ ಕೊಡಿ. ಶುರುವಿಗೆ ಕೊಡುವಂಥ ಮೊಬಲಗು 10 ಸಾವಿರ ರೂಪಾಯಿಯಾದರೂ ಇದ್ದು, ಇನ್ನು ಮಿಕ್ಕದ್ದನ್ನು ಕಂತಿನಲ್ಲಿ ಹಣದ ರೂಪವಾಗಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನೊಂದು ಸ್ಪೆಷಲ್ ಪ್ರಾವಿಷನ್ ಮಾಡಿದ್ದಾರೆ. ಅದೇನೆಂದರೆ :

> Special provisions made in favour of the members of the Armed Forces of the Union are made applicable to the personnel of the Merchant Navy.

ಮಿಲಿಟರಿಯವರಿಗೆ ಸ್ಪೆಶಾಲಿಟಿ ತೋರಿಸುವುದು ತುಂಬಾ ತಪ್ಪು. ಇವರಿಗಿಂತಲೂ ಕೀಳಾದ ಕೆಲಸಗಳನ್ನು ಹೊಂದಿರುವವರು ಇದ್ದಾರೆ. ಉದಾಹರಣೆಗೆ, ಕೆಲವು ಟೀಚರುಗಳಿಗೆ 60 ರೂಪಾಯಿ ಸಂಬಳವಿಲ್ಲ. ಅವರು ಹೇಗೋ ಜೀವನ ಮಾಡಿಕೊಂಡಿದ್ದಾರೆ. ಅವರಿಗೆ ಒಂದೆರಡು ಎಕರೆ ಲ್ಯಾಂಡ್ಸ್

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಮಾತ್ರ ನಮ್ಮ ಊರಿನಲ್ಲಿದೆ. ಇಂಥವರು ಮತ್ತು ಕೆಲವು ಸರ್ಕಾರಿ ನೌಕರರಿಗೆ ಇದೇ ರೀತಿ ವಿನಾಯಿತಿ ಕೊಡಬೇಕು. ಮಿಲಿಟರಿಯವರಿಗೆ ಕೊಟ್ಟರೆ ಇವರಿಗೂ ಕೊಡಬೇಕು. ಮಿಲಿಟರಿಯವರಿಗೆ ಬೇಕಾದಷ್ಟು ಸವಲತ್ತುಗಳನ್ನು ಕೊಡುತ್ತಾ ಇರುತ್ತಾರೆ. ಅವರ ಮಕ್ಕಳಿಗೆ ಧರ್ಮಾರ್ಥ ವಿದ್ಯಾಭ್ಯಾಸವಿದೆ; ಧರ್ಮಾರ್ಥ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ ಇದ್ದೀರಿ. ಇಂಥಾ ಎಲ್ಲಾ ಸೌಲಭ್ಯ ಇವರಿಗೆ ಸಿಗುತ್ತಾ ಇರುವಾಗ, ಅವರು, ಅವರ ಮಕ್ಕಳು ಮರಿಮಕ್ಕಳಿಂದ ಚಾಲುಗೇಣಿ ರೈತ ಭೂಮಿಯನ್ನು ಬಿಡಿಸಿಕೊಳ್ಳುವ ಹಾಗಿಲ್ಲವೆಂತ ಹೇಳಿದರೆ, ಇದು ತುಂಬಾ ತಪ್ಪು. ಆದ್ದರಿಂದ ಈ ಕ್ಲಾಜನ್ನು ತೆಗೆದುಬಿಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಟ್ಟಾರೆ ಹೇಳುವುದಾದರೆ, ಈ ಬಿಲ್ಲಿನಲ್ಲಿ ಅಡಗಿರುವ ಕೆಲವು ತಿದ್ದುಪಡಿಗಳು ನಿಜವಾಗಿಯೂ ರೈತರಿಗಾಗಿ ರಕ್ಷಣೆ ಮಾಡುವಂತಹುವಲ್ಲ ಆದುದರಿಂದ ಈಗಲಾದರೂ ಎಲ್ಲೆಲ್ಲಿ ಯಾವ ರೀತಿಯಾದ ಕಾನೂನುಗಳಿವೆಯೋ ಅವುಗಳನ್ನು ತರಿಸಿಕೊಂಡು ಏಕರೂಪವಾದ ಒಂದು ಕಾನೂನನ್ನು ಮಾಡಿದರೆ ಅದರಿಂದ ಹೆಚ್ಚು ತೊಂದರೆಯಾಗಲಿಕ್ಕಿಲ್ಲ. ಅಲ್ಲವೆ ಈ ಬಿಲ್ಲಿನಲ್ಲಿ ಅತ್ಯಾವಶ್ಯಕವಾದ ತಿದ್ದುಪಡಿಗಳನ್ನು ತರಬೇಕೆಂದು ಕೇಂದ್ರ ಸರ್ಕಾರದವರು ಹೇಳಿವಂತೆ ತರಬೇಕೆಂದು ಹೇಳಿದ್ದರೂ ಅದನ್ನೂ ಇಲ್ಲಿ ಅಷ್ಟು ಮಟ್ಟಿಗೆ ಮಾಡಿ ತರಲಿಲ್ಲ. ಇದನ್ನು ತರಬೇಕಾದರೆ ಈಗಾಗಲೇ 17 ವರ್ಷಗಳ ಕಾಲವನ್ನು ಕಳೆದಿದ್ದಾರೆ. ಆದುದರಿಂದ ಇನ್ನೂ ಸ್ವಲ್ಪ ಸಮಯ ಬೇಕಾದರೆ ತೆಗೆದುಕೊಂಡು ಈ ಸಭೆಯ ಸದಸ್ಯರುಗಳನ್ನೊಳಗೊಂಡ ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸಬಹುದು. ಹಿಂದೆ ಮಾಡಿದಂತಹ ಜಂಟಿ ಸೆಲೆಕ್ಟ್ ಕಮಿಟಿಯವರೇ ಸುಮಾರು ನಾಲ್ಕು ವರ್ಷಗಳ ಕಾಲ ತೆಗೆದುಕೊಂಡರು. ಹಾಗೆ ಮಾಡದೆ ಇಲ್ಲಿ ಮಾಡುವ ಕಮಿಟಿಯನ್ನು ಸ್ವಲ್ಪ ದಿನಗಳಲ್ಲಿ ಅವರ ವರದಿಯನ್ನು ಕೊಡುವಂತೆ ಮಾಡಿ ಮತ್ತು ಸಾರ್ವಜನಿಕರ ಅವಗಾಹನೆಗಾಗಿ ಈಗಿರುವ ಬಿಲ್ಲನ್ನು ಪ್ರಕಟಣೆ ಮಾಡಿ, ನಂತರ ತಂದರೆ ಆಗಲಾದರೂ ಅಲ್ಪಸ್ವಲ್ಪ ದೋಷಗಳನ್ನಾದರೂ ನಿವಾರಣೆ ಮಾಡಬಹುದು. ಅದು ಸಾಧ್ಯವಿಲ್ಲದಿದ್ದರೆ ಒಂದು ಜಂಟಿ ಸೆಲೆಕ್ಟ್ ಕಮಿಟಿ ಮಾಡಿ ಇನ್ನು 10–15 ದಿನಗಳ ಒಳಗೇನೆ ಅವರಿಂದ ರಿಪೋರ್ಟ್ ತರಿಸಿಕೊಂಡು ಈ ಮಸೂದೆಯನ್ನು ಇಲ್ಲಿತಂದು ಆನಂತರ ಪಾಸು ಮಾಡಬಹುದು. ಹೀಗೆ ಅವಸರವಸರವಾಗಿ ತಂದರೆ ರೈತರಿಗೆ ಬಹಳ ತೊಂದರೆಗಳಾಗುತ್ತವೆ. ಆದುದರಿಂದ ನಾನು ಹೇಳಿದಂತಹ ನ್ಯೂನತೆಗಳನ್ನೆಲ್ಲಾ ನಿವಾರಣೆಮಾಡಲು ಈಗಿರುವ ಕಾಂಗ್ರೆಸ್ಸು ಪಕ್ಷದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಇದನ್ನು ಮಾಡುತ್ತಾರೆ ಎಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ ಮತ್ತು ನನಗೆ ಇಷ್ಟು ಅವಕಾಶಕೊಟ್ಟುದಕ್ಕಾಗಿ ಅಧ್ಯಕ್ಷರನ್ನೂ ವಂದಿಸುತ್ತೇನೆ.

† **Sri G. V. GOWDA.**—Mr. Speaker, Sir, I have carefully gone through several amendments that have been suggested to the Mysore Land Reforms Act of 1961. Sir, the excuse for the delay in implementing the Land Reforms Act is that certain suggestions were made by the Planning Commission and the Government of India and the Government of Mysore had to take such a lot of time to consider those suggestions to amend the several provisions of this Act. Sir, when I went through the amendments now brought in, I find that hardly one or two suggestions that have been made by the Planning Commission have been incorporated. In answer to one of my questions, the Government have furnished a reply as to the various suggestions that have been made by the Planning Commission and they go to the extent of 18 to 19 suggestions. The important suggestions that have been made by the Planning Commission have not been considered or I should say they have been completely ignored and given a go-bye. Sir, by adopting these amendments now, little material change would be brought about so far as Land Reforms Act is concerned and it will not, to any extent, serve the cause of the agriculturist. Sir, our slogan has been that people who exert on the land and people who bring about cultivation must be the masters of the soil. To what extent that idea is going to be fulfilled whether there may be any occasion when we may be able to realise that particular

object making those people who actually the soil, masters of the soil has to be considered. Is it possible at any time whether it may be 50 years or 100 years to achieve that objective ? As I could see, it is impossible and we may not be having any occasion when we could make the people who physically exert themselves to be the masters of the soil. Sir, the fundamental principle with which the land reforms are being brought in the country is to see that ultimately the relationship between the tenant and the landlord is eliminated. We must see one day when all the people who work actually on the soil must become the masters of the soil and with that idea the land reforms are being brought about. Unless that is done, we cannot say whether we have done any reform at all. What is the meaning that we can give to the word 'reform' unless we see that justice is done to the man who does work. At least, if not now, ultimately, he must be made the absolute owner. Unless that is secured, I am afraid, we are not able to give any reforms at all so far as land tenure is concerned. Sir, by giving several exemptions, it is definitely not possible at any time, even let it be hundred years, to make the tillers owners of the soil. In the matter of land reforms, we will be doing something which will not serve any purpose at all if the tiller does not become the owner of the soil. One of the most imporant suggestions made by the Planning Commission is to see that the level of ceiling should be brought down to the level provided in Hyderabad law applicable to Karnatak area. That is also my suggestion. In fact when the provisions of Land Reforms Act were discussed in this House, several of us made representations saying that the ceiling limit that you are having in the Land Reforms Act is too much and it should be made to depend on several factors. It is conceded that the man who does actually the work and who tills the soil when he is made the absolute owner, you must see what extent of land he is able to cultivate. Supposing hundred acres are given, it cannot be said that he can physically bring about cultivation of 100 acres. The extent to which he would be able to bring under cultivation, that much of land must be the ceiling limit.

SRI H. D. DEVE GOWDA.—Is there any prohibition to appoint agricultural labour ?

SRI G. V. GOWDA.—Then there is no reform at all. Supposing you hire hundreds and thousands of people, then thousands of acres could be cultivated. Where is the reform ? The man who physically exerts him-self should me made the owner of the soil. When it is the solgan, we cannot justify that solgan by saying that cultivation could be done by hired labour. In fact even the definition that is given to the word' personal cultivation' is not consistent with the slogan that we have been making that the man who actually tills the soil will be the master of the soil. Personal cultivation should include residence in the village during the main agricultural season and this condition should be imposed. This is a suggestion made by the Planning Commission. Where is the amendment to that effect ? That has not been brought about. I was just

(SRI G. V. GOWDA)

mentioning about ceiling limit. We are having 27 standard acres as ceiling limit; one raiyat family of five members can have 27 standard acres as per provision of Section 23 of the Act ; this is first class land it is 36 acres of second class with one crop and assured supply of water, 45 acres where tank water is used and ultimately 250 acres of dry land one family of 5 persons could have.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಜಿ. ವಿ. ಗೌಡರು, ಹೈರ್ಡ್ ಲೇಬರು ಇಟ್ಟುಕೊಂಡು ಮ್ಯಾನೇಜರನ್ನು ಇಟ್ಟುಕೊಂಡು ಪರ್ಸನಲ್ ಕಲ್ಟಿವೇಶನ್ನು ಮಾಡುವುದಾದರೆ ಹೈರ್ಡ್ ಲೇಬರ್ ಎಂದು ರೈತ ಮಾಡಿದರೂ ತಾತ್ವಿಕವಾಗಿ ಅದು ಸರಿಯಾದುದಲ್ಲ. ನಾನು ಹೇಳುತ್ತೇನೆ ನನ್ನ ಸ್ವಂತ ಅನುಭವದಲ್ಲಿ ಒಂದು ಐದು ಎಕರೆಗಳಷ್ಟು ಖುಷ್ಕಿ ಇಟ್ಟುಕೊಂಡು ವ್ಯವಸಾಯ ಮಾಡುವವನು ಅವನ ಮನೆಯಲ್ಲಿ ಆಳನ್ನು ಇಟ್ಟುಕೊಂಡು ಅವನನ್ನೂ ತನ್ನ ಮನೆಯವನಂತೆ ಸೇರಿಸಿ ಕೆಲಸ ಮಾಡುತ್ತಾನೆ. ಇದನ್ನು ನಾವೂ ನೋಡಿದ್ದೇವೆ.

SRI G. V. GOWDA.—Without labour, land cannot be better cultivated. That everybody knows ; but the person who owns the land must supervise and exert something on the land; simply living in Bombay and getting 500 acres through hired labour will not be good; labour can be hired to the extent necessary. Therefore, I am suggesting that the Government should come forward with several important suggestions that have been made by the Planning Commission and there could not be such an amount of delay of four years to incorporate such important amendments. They say that the level of ceiling should be brought down to the level of the Hyderabad Law; 9 standard acres is the uniform limit; supposing 27 standard acres are given; is it possible for a family of five persons to get it cultivated ? Is it possible ? When it is not possible, why do you have such a ceiling limit ? Unless it is given to a tenant, unless it is got cultivated on lease basis; it is impossible to cultivate by personal cultivate 27 first class standard acres. You can mechanise or do anything. It is impossible so far as our country is concerned. Therefore, it is rightly suggested that 9 standard acres should be made the ceiling limit and they have made that suggestion. The Government have not taken care to consider that aspect of the matter and they have delayed it by four years. Nine standard acres means that he would bring 2 crops with assured supply of water. Up to 18 standard acres, one family would have better cultivation, better return and better output. We should take into consideration the point of view of production-wether we can fully derive the benefit of that land in our possession. What is the use of having 200 acres ? This point should have been given the topmost priority by our Government and the Planning Commission suggestions should have been accepted.

Rights accruing and Tenency should not be taken away-that is another important suggestion that has been made and nothing has been done to incorporate any amendment in the existing law. If we are not able to have the limit of ceiling, at least this could have been done. Security of tenure is the most important thing.

There are provisions where resumption could be had if a man is working elsewhere and if he comes back to land after fifteen

years if he wants to cultivate the land personally, if he can convince the tribunal, then he can take and some portion may be given to him. In such cases, security of tenure is the most important thing. We do not want land reforms provided Government makes suitable changes and security must be given, fair rent must be fixed. We only recognise permanent tenants and they have been given some facilities and not tenants who are not called permanent tenants. That distinction need not have been made so far as the provision of this Act is concerned. Supposing he delays three or four years saying that he is not a permanent tenant, then I do not think that we are doing the right thing to the person who delays. Therefore, the Planning Commission's suggestion that the rights accruing and security of tenancy should not be taken away. But attempts have been made in this Act to take away the rights of tenants either by way of security of tenancy. What is the rent that you have fixed? one-fourth of the gross produce must be paid to the land-lord. Supposing he has incurred heavy expenditure that has to be met out of the 3/4 of the gross produce. If he is asked to pay one-fourth, what is it that he has to retain? Because, the cost of cultivation, the tenant is paying and in addition he is putting in his own labour. This aspect nobody has taken into consideration—the labour that he puts in. Supposing the man is working in a factory, he gets 100 per mensem. If he works on the field, should he not get the same income? 100 per mensem which comes to Rs. 1200 per annum. If he is asked to pay 1/4 of the gross produce, that is not fair rent. He should have taken into consideration what should be the fair-rent and what is it that the landlord should get. We expect better production from the land, If we want the tenant to be more energetic, we have to take into consideration all these matters. The personal labour that the tenant puts in is not taken into consideration while calculating the cost of production. That point is totally ignored.

Resumption should not be permitted. That is one of the amendments that is not brought about. All transfers made after 10th May 1957 should be disregarded in computing surplus except *bona fide* sales for valuable consideration. The Planning Commission has suggested that transfers subsequent to 10th May 1957 should be disregarded for purposes of ceiling limit as well as for the purposes of resumption. Our Government have thought it fit to give effect to it from November 1961. There is an apprehension in the minds of some people saying that *bona fide* transfers made and the people who have purchased these lands may be effected. It is not a case where this bona fide transferee is going to be affected in the lease manner. It is only the transferer if he wants to resume the land, this will be taken into consideration while calculating to what extent he is entitled to resume. Supposing the ceiling is 27 standard acres and he has 40 standard acres on that day. For purposes of resumption, he is not entitled because he has already with him 27 standard acres. Only for this purpose, the surplus that has been sold by those people

(SRI G. V. GOWDA)

will be taken into consideration. Therefore, the transferee will not be affected in any manner and there should not be any apprehension in that regard.

Only co-operative societies including land mortgage banks which are genuine should be exempted from ceiling and the ceiling area should be computed taking into account the share of the individual member. Anyway there is no amendment to that effect. It is only said that Government land, Government managed land or religious institutions which they are having under their control, should be exempted from the ceiling limit. In one way it may be accepted. But I want to seriously ask, when our idea is to abolish the tenancy system altogether ultimately, why should we give room for having these things, when they cannot come under personal cultivation at any time. If we cannot take into consideration that aspect of the matter, the only desirable thing is that the lands belonging to the religious institutions must be sold to the people who are really the tillers of the land, so that the temples or religious institutions could derive much more benefit than they are getting now. Sir, I can quote one instance. Our Mahadeswara temple has got 27 acres of wet lands. It is getting hardly Rs. 1000 per annum. If 25 acres of wet land is sold, we can get at least one lakh of rupees and if the temple is made to invest one lakh of rupees by constructing five bungalows in the city, it would fetch a rent of more than Rs. 2000 per annum for the

6-00 P.M.

temple and that amount can be spent for the improvement of the temple. So, we can have a way of eliminating this tenancy system at least in this view. I request the Minister to see that all these religious institutions are improved selling their lands to private individuals and invest that money in some other avocations to get more money for the improvement of those temples.

MR. DEPUTY SPEAKER.—The House will now rise and meet tomorrow at one P.M.

The House adjourned at Five Minutes past Six of the Clock to meet again at One of the Clock on Wednesday the 21st April, 1965.

WD 5040—GPB—500—10-9-65

MYSORE LEGISLATIVE ASSEMBLY

Wednesday, 21st April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Food Shortage in the State

(Starred Questions Nos. 251, 346, 372, 392 continued.)

MR. SPEAKER.—The supplementaries sent by the Members may be read and replies given.

† ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀಮಾನ್ ಚೆನ್ನಬೈರೇಗೌಡರು :—

"Whether it has come to the notice of Government that the Police of Nandagudi have registered a case for having transported broken rice within the limits of Hoskote Taluk; and

Whether on another occasion the Police have seized 26 bags of broken rice on the plea that there is movement restriction".

ಎಂದು ಕೇಳಿದ್ದರು. ಪೋಲೀಸ್ ರಿಪೋರ್ಟ್ ಐ. ಜಿ. ಪಿ. ಆಫೀಸಿನವರು ಟೆಲಿಫೋನ್ ಮುಖಾಂತರ ತಿಳಿಸಿರುವುದು ಏನೆಂದರೆ, ಹೋದ ತಿಂಗಳು 12 ನೇಯ ತಾರೀಖು ಎರಡು ಲಾರಿಗಳು ಬರುತ್ತಾ ಇದ್ದುವು, ಒಂದರಲ್ಲಿ 35 ಚೀಲ ನುಚ್ಚು ಅಕ್ಕಿ ಇತ್ತು. ಇನ್ನೊಂದರಲ್ಲಿ ಹತ್ತು ಚೀಲ ನುಚ್ಚು ಅಕ್ಕಿ ಇತ್ತು. ಅದು ಬಂಗಾರಪೇಟೆಯಿಂದ ಬರುತ್ತಾ ಇತ್ತು. ಕೋಲಾರ ಜಿಲ್ಲೆಯಿಂದ ಬೆಂಗಳೂರು ಜಿಲ್ಲೆಗೆ ಬರಬೇಕಾದರೆ ಟ್ರಾನ್ಸ್‌ಪೋರ್ಟ್ ಪರ್ಮಿಟ್ ಇರಬೇಕು ಅದು ಇಲ್ಲದೇ ಇದ್ದುದರಿಂದ ಹಿಡಿದು ಹಾಕಿದೆ ಎಂದು ತಿಳಿಸಿದ್ದಾರೆ.

Sri G. V. Gowda has put the following supplementaries and the answers are also as follows ;—

Supplementary	*Reply*
1. Whether the Officers concerned have procured the quantity of rice from the growers as per Government Order.	Yes.
2. Has it come to the notice of Government that in Kollegal Taluk, the said Government Order has not been implemented except in a few cases?	No.

† Indicates that the remarks or speeches have not been revised by the member concerned.

(SRI M. V KRISHNAPPA)

Sri S. Rajagopal's Supplementaries and replies are as follows :—

	Reply.
(a) Is it a fact that the Government agreed to introduce informal rationing in 18 cities in our State from 1st April 1965 ? (b) Is it a fact that this agreed thing has not been implemented from 1st April 1965 in many cities ? (c) If so, the steps taken by the Government in this regard ?	It was proposed to introduce informal rationing in 18 towns and areas with effect from 1st April 1965, but it has not been possible to do so in some of the towns and areas on account of various difficulties such as some delay in the setting up of the administrative machinery. Another reason for the delay in introducing informal rationing in some of the Towns is due to the fact that foodgrains are available in the open market in those towns and it was considered that the introduction of informal rationing might be postponed by a few days. Government have however issued instructions to all the Deputy Commissioners that they should introduce informal rationing in all these 18 towns and areas as soon as necessary administrative arrangements are made.
(d) The total number of Fair Price Shops in Industrial Undertakings employing more than 300 workers set up by the Government so far since a year.	This information will have to be collected.

ಶ್ರೀ ಬಿ. ಚೆನ್ನಬೈರೇಗೌಡ.—ಎರಡು ಲಾರಿ ಬರುತ್ತಾ ಇತ್ತು ಎಂದು ಹೇಳಿದಿರಿ. ತಾಲ್ಲೂಕ್‌ನಿಂದ ತಾಲ್ಲೂಕಿಗೆ ಬರುವಾಗ ಬೆಂಗಳೂರು ಬೌಂಡರಿಗೆ ಬರುವವರೆಗೂ ಅದು ಬೆಂಗಳೂರಿಗೆ ಬರುತ್ತದೆ ಎಂದು ಹೇಗೆ ಭಾವಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೋಲೀಸ್‌ನವರು ಹೇಳಿದ ಮೇಲೆ ಅದನ್ನು ಒಪ್ಪಬೇಕಾಗುತ್ತದೆ. ನಂದಿಗುಡಿ ಹತ್ತಿರ ಬರುತ್ತಾ ಇತ್ತು ಎಂದು ಹೇಳುತ್ತಾರೆ. ಬಂಗಾರುಪೇಟೆಯಿಂದ ಬರಬೇಕಾದರೆ ನಂದಿಗುಡಿಯಿಂದ ಬರಬೇಕಾಗಿಲ್ಲ ಚಿಂತಾಮಣಿಯಿಂದ ಬರಬೇಕು. ಪೋಲೀಸ್ ರಿಪೋರ್ಟ್ ಬಂಗಾರುಪೇಟೆಯಿಂದ ಬರುತ್ತಾ ಇತ್ತು ಡಿಸ್ಟ್ರಿಕ್ಟ್ ಪರ್ಮಿಟ್ ಇರಲಿಲ್ಲ ಆದ್ದರಿಂದ ಹಿಡಿದಿದ್ದೇವೆ ಎಂದು ತಿಳಿಸಿದ್ದಾರೆ.

SRI G. V. GOWDA.—Would the Government make an enquiry so far as procurement work in Kollegal Taluk is concerned whether it is not satisfactory and growers have not given as per the demands in the Government Order ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ತಾವು ಹೇಳುವುದು ನಿಜ. ಅಲ್ಲಿ ನಮಗೆ ಬೇಕಾಗಿದ್ದಷ್ಟನ್ನು ರೈತರು ಕೊಟ್ಟಿಲ್ಲ. ಮೊದಲನೆಯದಾಗಿ ಅದು ಬೇರೆ ತಾಲ್ಲೂಕುಗಳಷ್ಟು ಸಮೃದ್ಧಿಯಾಗಿ ಬೆಳೆ

ಬರುವ ತಾಲ್ಲೂಕು ಅಲ್ಲ. ಮತ್ತು ಎಷ್ಟು ವಸೂಲು ಆಗಬೇಕಾಗಿತ್ತೋ ಅಷ್ಟು ವಸೂಲು ಆಗಿಲ್ಲ. ಹೊರಗಡೆ ತಾಲ್ಲೂಕುಗಳಿಂದ ಬಂದು ಸೊಸೈಟಿಗಳವರು ಕೊಂಡುಕೊಳ್ಳುತ್ತಾ ಇದ್ದರು. ಅದೇ ರೀತಿ ತಾವೂ ಸ್ವಲ್ಪ ಆಸಕ್ತಿಯಿಂದ ಮಾಡುತ್ತಾ ಇದ್ದೀರಿ ಎಂದು ಕಾಣುತ್ತದೆ.

SRI GANJI VEERAPPA.—Has it come to the notice of the Government that in Davangere though ration cards have been issued from 1st April this year, no supplies of foodgrains have been made to any of the food depots there and as a result, lot of difficulties have arisen, even foodgrains are not available in the market as local sales are prohibited ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೂ ಬಂದಿದ್ದರು ಅವರಿಗೂ ಕೊಟ್ಟಿದೆ; ದಾವಣಗೆರೆಯಲ್ಲಿ ಪ್ರಾರಂಭ ಮಾಡಿರಬೇಕು. ತಮ್ಮ ತೊಂದರೆ ಗೊತ್ತಿದೆ. ಅಲ್ಲಿ ಅಕ್ಕಿಯ ಅಭಾವ ಮಾತ್ರ ಇದೆ, ಶಿವಮೊಗ್ಗಾದಿಂದ ಅಲಾಟ್ ಮಾಡುತ್ತಾ ಇದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಧಾರವಾಡ ಜಿಲ್ಲೆಯಲ್ಲಿ ಹಣದ ಅಭಾವದಿಂದ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಬರತಕ್ಕ ಜೋಳ ಹಾಗೂ ಬತ್ತ ಖರೀದಿ ಮಾಡುವುದಕ್ಕೆ ಕಷ್ಟವಾಗಿರುವುದರಿಂದ ಅವರಿಗೆ ಹಣ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ !

ಶ್ರೀ ಎಂ. ವಿ. ಕೃಷ್ಣಪ್ಪ.—ಕೋಆಪರೇಟೀವ್ ಡಿಪಾರ್ಟ್‌ಮೆಂಟಿನವರು ಸಾಕಾದಷ್ಟು ಹಣ ಕೊಡುತ್ತಾ ಇದ್ದೇವೆ ಎಂದು ನಮಗೆ ಹೇಳುತ್ತಾರೆ: ನೀವು ಹಣ ಇಲ್ಲ ಎಂದು ನಮಗೆ ಹೇಳುತ್ತಾ ಇದ್ದೀರಿ. ಆದ್ದರಿಂದ ಇದನ್ನು ವಿಚಾರಣೆ ಮಾಡಬೇಕು. ಎಲ್ಲಾ ಸರಿಯಾಗಿದೆ ಪ್ರೊಕ್ಯೂರ್‌ಮೆಂಟ್ ಆಗುತ್ತಾ ಇದೆ, ಸಾಕಾದಷ್ಟು ಹಣ ಇದೆ ಎಂದು ಅವರು ಹೇಳುತ್ತಾರೆ, ನೀವು ಇಲ್ಲ ಎಂದು ಹೇಳುತ್ತೀರಿ ಇದನ್ನು ವಿಚಾರ ಮಾಡಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಕೋಆಪರೇಟೀವ್ ಸೊಸೈಟಿಗಳಿಗೆ ಸಾಕಾದಷ್ಟು ಹಣ ಕೊಟ್ಟಿದೆ, ಅವರು ಜೋಳದ ದಾಸ್ತಾನು ಮಾಡಲಕ್ಕೆ ಅವರಲ್ಲಿ ಶಕ್ತಿ ಇದೆ ಎಂದು ಅರ್ಥ ಬರುವ ರೀತಿಯಲ್ಲಿ ತಾವು ಹೇಳುತ್ತಾ ಇದ್ದೀರಿ. ರೈತರು ತಮ್ಮ ದವಸವನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋದರೂ ಕೂಡ ಅಲ್ಲಿಯ ಸೊಸೈಟಿಗಳವರು ಅದನ್ನು ತೆಗೆದುಕೊಳ್ಳದೆ ಇದ್ದು ಅದನ್ನು ಅವರು ವಾಪಸು ತರುತ್ತಾ ಇದ್ದಾರೆ, ಇದರಿಂದ ಜೋಳದ ಧಾರಣೆ ವಿಪರೀತವಾಗಿ ಜಾಸ್ತಿಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೊಸೈಟಿಗಳವರು ಕೊಳ್ಳುತ್ತಾ ಇಲ್ಲ ನಿಧಾನ ಮಾಡುತ್ತಾ ಇದ್ದಾರೆ ಎಂದು ತಾವು ಹೇಳುತ್ತಾ ಇದ್ದೀರಿ. ಪ್ರಾರಂಭದಲ್ಲಿ ಹಾಗೆ ಆಗಿತ್ತು ಆಮೇಲೆ ಅವರಿಗೆ ಹಣ ಕೊಟ್ಟಿದ್ದೇವೆ ಎಂದು ಡಿಪಾರ್ಟ್‌ಮೆಂಟಿನವರು ಹೇಳಿದ್ದು ನಮ್ಮ ಗಮನಕ್ಕೆ ಬಂದಿದೆ. ಕಾಲವಿಳಂಬವಾದಷ್ಟೂ ಬೆಲೆ ಏರುತ್ತದೆ. ಆ ವಿಷಯದಲ್ಲಿ ಅನುಮಾನವಿಲ್ಲ.

SRI SANJEEVANATH AIKALA.—What are the activities of the Food Corporation of India in procuring and stocking foodgrains in the State ? Do not the activities of the Food Corporation overlap the activities of the Government in this respect ?

SRI M. V. KRISHNAPPA.—They cannot procure foodgrains and they cannot do it also. We procure and hand over stocks to them and they keep in godowns and look after these foodgrains, preserve them, fumigate them and whenever we want it, they will supply according to orders.

SRI SANJEEVANATH AIKALA.—Is it not a fact that they have advertised for purchasing officers, agents and merchants also to procure foodgrains in the State and if it is so, how does it not overlap the activities of the Government.

SRI M. V. KRISHNAPPA.—They might appoint purchase officers for the whole of India and they might procure somewhere else. But so far as Mysore is concerned we procure foodgrains and then hand them over to them.

Sri R. M. DESAI.—Is the Government aware that incidental charges like Hamali and package charges are being collected from the ryots while food grains are purchased in all Districts, more particularly in Bijapur ?

Sri M. V. KRISHNAPPA.—We have instructed the such charge should not be collected hereafter.

Sri R. M. DESAI.—Has it come to the notice of the Government that such things are still going on ? I have given proof in a letter to the Hon'ble Minister. Will the Government take suitable action to see that this practice is stopped immediately and the excess amounts collected is refunded ?

Mr. SPEAKER.—If a Government Order is not respected answer here will be of no use.

Sri M. V. KRISHNAPPA.—We received the complaint only last week from the Hon'ble member and we issued immediate instructions to the Deputy Commissioner. If it is still being collected it should be refunded.

Mr. SPEAKER.—If answers are given on the Floor of the house that Government have issued directions we take it that Government orders would be respected. But if answers are merely given on paper, and if it is flouted by the subordinates, it does not satisfy either the public or the members.

Sri S. S. KOLKEBAIL.—Has it come to the notice of the Government that a grave danger and economic chaos would result in the Country especially from the activities of the Left Communists with the aid of chinese money and literature ?

Sri M. V. KRISHNAPPA.—Some friends tell us that the Chinese are on the seas near South Kanara Coast and are distributing leaflets. We are also told that they are exchanging fountain pens and other articales for rice and some of these have been fund in Shimoga. I think that these are all gossips and rumours and there is no truth in it.

ಶ್ರೀ ಟಿ. ಮಾದಯ್ಯಗೌಡ.—ಬೆಂಗಳೂರು ಸಿಟಿಯೇ ಒಂದು ಜಿಲ್ಲೆಯಾಗಿರುವುದರಿಂದ ಬೆಂಗಳೂರು ರೂರಲ್ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಒದಗಿಸುವ ಧಾನ್ಯವನ್ನು ದಾರಿಯಲ್ಲಿ ಪೋಲೀಸಿನವರು ಹಿಡಿದು ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೋಲೀಸಿನವರು ರಸ್ತೆಗಳಲ್ಲಿ ಎಲ್ಲಾ ಕಡೆಯೂ ಹಿಡಿಯುತ್ತಿದ್ದಾರೆ. ಅನೇಕ ಸಲ ಹಾಗೆ ಹಿಡಿಯಬಾರದೆಂದು ನಾವು ಹೇಳುತ್ತಿದ್ದೇವೆ. ಮಾನ್ಯ ಸದಸ್ಯರು ಸರಿಯಾಗಿ ವಿಷಯ ತಿಳಿಸಿದರೆ ಪೋಲೀಸಿನವರಿಗೆ ತಿಳಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಟ್ಟು ಎಷ್ಟು ಆಹಾರ ಕೊಳ್ಳಬೇಕೆಂದಿದ್ದಿರಿ ? ಅದಕ್ಕಾಗಿ ಕೊಟ್ಟಿರುವ ಹಣವೆಷ್ಟು ? ಕೊಟ್ಟ ಹಣವನ್ನು ಸರಿಯಾಗಿ ವಿನಿಯೋಗಿಸಿ ತೆಗೆದುಕೊಂಡರೇ ಇಲ್ಲವೇ ಎಂಬುದನ್ನ ಚೆಕ್ ಮಾಡುವವರು ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಹಣ ತೆಗೆದುಕೊಂಡರು, ಎಷ್ಟು ಧಾನ್ಯ ಕೊಂಡರು ಎಂದು ಕೋಅಪರೇಟಿವ್ ಇಲಾಖೆಯ ರಿಜಿಸ್ಟ್ರಾರರು ಮುಂತಾದವರು ಚೆಕ್ ಮಾಡುತ್ತಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಜೋಳ ದಾಸ್ತಾನು ಮಾಡುವುದಕ್ಕೆ ಫುಡ್ ಕಾರ್ಪೊರೇಷನ್ ಹಣ ಕೊಡುತ್ತಿಲ್ಲ ; ನಮ್ಮ ಸರಕಾರ ಸೊಸೈಟಿಗಳಿಗೆ ಹಣ ಒದಗಿಸಿದೆ. ಆದರೆ ಕೊಟ್ಟಿರುವ ಹಣ ಸಾಲುವುದಿಲ್ಲ ಎಂದು ಸೊಸೈಟಿಯವರು ಸರಕಾರಕ್ಕೆ ತಿಳಿಸಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೊಸೈಟಿಯಲ್ಲಿ ಹಣವಿದೆ, ಧಾನ್ಯ ಕೊಳ್ಳುತ್ತಿದ್ದೇವೆ ಎಂದು ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ನಿತ್ಯವು ವರದಿಮಾಡುತ್ತಿದ್ದಾರೆ.

Mr. SPEAKER.—I will allow a half-an-hour discussion on this subject tomorrow, if members send their names and points. Does it suit the Hon'ble Minister ?

Sri M. V. KRISHNAPPA.—Yes, Sir. The Council is sitting tomorrow in the after-noon. Are we meeting tomorrow morning, Sir ?

Mr. SPEAKER.—It all depends as to whether it is possible to get matters published in the gazette in time. In that case, we can meet in the morning.

Sri S. R. KANTHI.—I think we can issue a special notification. I think we can meet in the morning.

Mr. SPEAKER.—In any case I will try to allow half-an-hour discussion on this matter. Let the Hon'ble members. read the rules relating to half-an-hour discussion. The member who raises the discussion or any other member who intimates to me will be permitted.

Sri S. SIVAPPA.—Why not we discuss the matter for 2½ hours ?

Mr. SPEAKER.—We may discuss it for 5 hours, but time does not come from the heavens. There are the rules governing the subject.

We will take up question No. 655 because the P.W.D. Minister desires to go away a little earlier.

Supply of Power to I.P. Sets.

*Q.—655 Sri S. S. KOLKEBAIL (Coondapur).—

Will the Government be pleased to state.—

(a) the member of ryots from perdoor, Balkur, Kalvar, Haradalli-Mandalli, Molahalli, Albady, Halady, Shiriyur, Bilady, Yedthadi, Bannadi, Heggunji and Kadur Panchayats who have deposited money with the Electricity Department for supply of power and I.P. Sets.

(b) the date, month and year when money was deposited by them and the action taken there on ;

(c) whether it is a fact that the Chief Minister had assured the ryots of Balkur and other Panchayats on 20-12-1964 to supply electricity by 30-12-1964 ;

(d) if so, the member of I.P. sets that have been supplied with power to Balkur Panchayat subsequent to the Chief Minister's visit to Balkur village ;

(e) if not supplied, the reasons for the same ?

A.—Sri VEERENDRA PATIL (Minister for Public works) [on behalf of Sri S. Nijalingappa (Chief Minister).—

(a) 114.

(b) *Vide* statement appended.

(SRI VEERENDRA PATIL)

(c) An assurance was given that every step will be taken to help the agriculturists.

(d) and (e) A scheme providing for supply of power to I.P. sets is under execution. Six I.P. sets have already been serviced.

Statement of applications received with date of deposit.

Sl. No	Name of village	No. of applications	Date of deposit	Remarks
1	Balkur ...	24	1-12-62	Work is under progress.
2	Kalavar ...	14	1-12-62	Work is under progress.
3	Perdoor ...	34	2-2-61	Work is under progress.
4 & 5	Haradalli- ... Mandalli ...	11 } 9 on 2 on	1-12-62 13-12-62	Work is under progress.
6	Albady ...	9	1-3-63	Work will be taken up shortly.
7	Shiriyar ...	48	2-2-61	Work is under progress.
8	Barandadi ...	4	19-10-63	Work is under progress.

SRI S. S. KOLKEBAIL.—May I know why the Electricity Department failed to supply power to the ryots of Kalvar village though they have submitted completion report as far back as 1964 ?

MR. SPEAKER.—Have electric lines been laid there ?

SRI S. S. KOLKEBAIL.—Electric lines have been drawn and everything is ready. A few I. P. sets were charged and others were not changed inspite of the assurance given by the Chief Minister.

SRI VEERENDRA PATIL.—The Assurance given by the Chief Minister is given in the reply. The deposit for this work was made on 1-12-1962. The work is sanctioned and is in progress and it would be completed shortly.

SRI S. S. KOLKEBAIL.—May I bring it to the notice of Government that all the ryots have submitted completion reports after installing I. P. Sets and yet no connections have been given ?

Sri VEERENDRA PATIL.—It is true that they have deposited the amount. But our difficulty is that we are short of line materials.

Sri S. S. KOLKEBAIL.—May I know by what time the area mentioned in the schedule 2 to 8 would be supplied with power ?

Sri VEERENDRA PATIL.—Sir, supply of line material has improved now and we will do it as early as possible.

ಶ್ರೀ ಟಿ. ಮಾದಯ್ಯಗೌಡ.—ರೈತರಿಗೆ ಪಂಪ್ ಸೆಟ್‌ಗಳನ್ನು ಕೊಟ್ಟ ಮೇಲೆ ಅವರು ಅದರ ಮೇಲೆ ಬಡ್ಡಿ ವಗೈರೆ ಕೊಡಬೇಕಾಗುತ್ತದೆ. ಅವರಿಗೆ ಪವರ್ ಕೊಡದೆ ಇದ್ದರೆ ಅವರ ಮೇಲೆ ಬಡ್ಡಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಜಿ. ನಾರಾಯಣಗೌಡ.—ಸರ್ವಿಸ್ ಕೊಟ್ಟಾಗಿನಿಂದ ಬಡ್ಡಿಯನ್ನು ವಸೂಲ್ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಸಾರೆನ್ನ.—(ಬಿ)ಗೆ ಉತ್ತರ ಕೊಡುತ್ತ ಕೆಲಸ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇದನ್ನು ಪೂರೈಸುವುದಕ್ಕೆ ಎಷ್ಟು ಅವಧಿಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಉತ್ತರ ಕೊಟ್ಟಿದೆ, ಸ್ವಾಮಿ.

ಶ್ರೀ ಜಿ. ವಿ. ಗೌಡ.—ವ್ಯವಸಾಯ ಇಲಾಖೆ ಮತ್ತು ವಿದ್ಯುಚ್ಛಕ್ತಿ ಮಂಡಲ, ಇವೆರಡರ ನಡುವೆ ಹೊಂದಾಣಿಕೆ ಇಲ್ಲದೆ ಫಲಿತಾಂಶ ಸರಿಯಾಗಿ ಬರುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಲೈನ್ ಎಳೆದಿದೆಯೇ ಇಲ್ಲವೆ ಎನ್ನುವುದನ್ನು ನೋಡದಾರದೆ ಒಂದೆರಡು ಕಡೆ ಆ ರೀತಿ ಆಗಿದೆ. ಈಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ಲಿಗೂ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಗೂ ಹೊಂದಾಣಿಕೆ ಇರುವುದರಿಂದ ಎಲ್ಲ ಲೈನ್ ಎಳೆದಿದೆ ಎಂದು ಹೇಳುತ್ತಾರೆ. ಅದರ ಪ್ರಕಾರ ಈಗ ಪಂಪ್‌ಸೆಟ್ ಕೊಡುತ್ತಿದ್ದಾರೆ. ಮೊದಲು ಸ್ವಲ್ಪಮಟ್ಟಿಗೆ ಕಷ್ಟ ಇತ್ತು. ಈಗ ಆ ಕಷ್ಟವಿಲ್ಲ.

Sri S. S. KOLKEBAIL.—According to appendices we find that *raiyats* of Balkur and Shiriyur have deposited earnest money as for back as 1961. May I know how many more years it will take to supply power ?

Sri VEERENDRA PATIL.—I have said the supply position has improved and we will do it as early as possible.

Sri SANJEEVANATH AIKALA.—Is it not a fact that this is the case throughout the district were pump sets have been installed and they have not been serviced at all and consequently the raiyats could not make use of water for the second third crops ?

Mr. SPEAKER.—To ask of electricity in your district ! It is the best in the whole of the area.

Sri SANJEEVANATH AIKALA.—It is because of your interest Sir.

Mr. SPEAKER.—The Hon'ble member should not bring in my name and controvercial points.

ಶ್ರೀ ಟಿ. ಮಾದಯ್ಯಗೌಡ.—ಯಾವ ರೈತರು ಸಾಲ ಮಾಡಿ ಬಾವಿಗಳನ್ನು ತೆಗೆದು ತಯಾರಾಗಿದ್ದಾರೆ ಅವರಿಗೆ ಅವರು ಕೊಟ್ಟಿರತಕ್ಕ ಅಪ್ಲಿಕೇಷನ್ ಪ್ರಕಾರ ಕ್ರಮವಾಗಿ ಪವರ್ ಕೊಡದೆ ಅಪ್ಲಿಕೇಷನ್ ಬಂದ ಕೂಡಲೇ ಕೆಲವರಿಗೆ ಪವರ್ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಲಿಕೇಷನ್ ಬಂದಿರುವುದರ ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಲೈನ್ ಹಾಕಿಲ್ಲದೆ ಹೋದರೆ ಅಲ್ಲಿಗೆ ಕೊಡುವುದು ನಿಧಾನವಾಗುತ್ತದೆ. ಆದರೆ ಲೈನ್ ಎಳೆದು ಸಿದ್ಧವಾಗಿರುವ ಕಡೆ ಅಪ್ಲಿಕೇಷನ್ ಹಾಕಿದ ಕೂಡಲೇ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ತಿರಸ್ಕರಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಅನೇಕ ಕಡೆ ಲೈನ್ ಎಳೆಯದೆ ಇದ್ದರೂ, 30 ಸೆಟ್‌ಗಳಿಗೆ ಪವರ್ ರಿಸರ್ವ್ ಮಾಡಬೇಕೆಂದು ನೆಲಮಂಗಲ ತಾಲ್ಲೂಕಿನ ಬಗ್ಗೆ ಆರ್ಡರ್ ಮಾಡಿರುವುದು ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನೆಲಮಂಗಲ ತಾಲ್ಲೂಕಿನಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಎಫ್. ಎಸ್. ತಾವರೆ.—ವಿದ್ಯುಚ್ಛಕ್ತಿ ಮಂಡಳಿಯವರು 'ಕಾಲು ಕೇಳಿದವರಿಗೆ ಕಣ್ಣು ಕೊಡುತ್ತಾರೆ, ಕಣ್ಣು ಕೇಳಿದವರಿಗೆ ಕಿವಿ ಕೊಡುತ್ತಾರೆ' ಎನ್ನುವ ಧೋರಣೆಯನ್ನು ಮಾಡುತ್ತಿದ್ದಾರೆ. ಹಾವೇರಿ ತಾಲ್ಲೂಕಿನ ನೆಗಳೂರು ಗ್ರಾಮದ 23 ಜನ ಐ. ಪಿ. ಸೆಟ್‌ಗಳನ್ನು ಹಾಕಿಕೊಂಡು ಕುಳಿತಿದ್ದಾರೆ. ಅವರಿಗೆ ಎಷ್ಟು ಕೇಳಿದರೂ ವಿದ್ಯುಚ್ಛಕ್ತಿ ಕೊಡುತ್ತಿಲ್ಲ. ಕಾರಣ ತಂತಿ ಇಲ್ಲ ಎಂದು ಹೇಳುತ್ತಾರೆ. ಆದರೆ ಇನ್ನೊಂದು ಊರಿಗೆ ತಂತಿ ಎಳೆಯುವ ಕೆಲಸವನ್ನು ಮಾಡುತ್ತಿರುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆರು ತಿಂಗಳಿಂದ ಪವರ್ ಇಲ್ಲದೆ ರೈತರು ಬಹಳ ತೊಂದರೆ ಪಡುತ್ತಿರುವುದರಿಂದ ಇದಕ್ಕೆ ಗಮನ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಶ್ನೆ ಇರುವಂಥದ್ದು ದಕ್ಷಿಣ ಕನ್ನಡ ಜಿಲ್ಲೆಯದು. ಮಾನ್ಯ ಸದಸ್ಯರು ಹೇಳುವಂತಹ ತೊಂದರೆಗೆ ಕಾರಣ ವಿವಿಧ ದರ್ಜೆಯ ತಂತಿಗಳನ್ನು ಬೇರೆ ಬೇರೆ ಭಾಗಗಳಲ್ಲಿ ಎಳೆಯಬೇಕಾಗುತ್ತದೆ. ಯಾವುದೋ ತಂತಿಯನ್ನು ಎಲ್ಲಿಯೋ ಹಾಕಿ ಸರ್ವಿಸ್ ಕೊಡುವುದಕ್ಕಾಗುವುದಿಲ್ಲ.

Mr. SPEAKER.—I will hold over question No. 443.

Promotion of Non-S.S.L.C. Gramsevaks as Extension Officers.

*Q.—703. Sri E. NARAYANA GOWDA (Bangarpet).—

Will the Government be pleased to state :—

(a) Whether it is not a fact that the Government have promoted recently some of the non-S. S. L. C. Gramsevaks as Extension Officers in (Agriculture) in grade Rs. 140-320 and if so how many of them have been promoted ;

(b) the number of graduates working as Extension Officers in the Department and their pay scales ;

(c) whether it is not a fact that there was a G.O. stating that 10 per cent of the vacancies of the B.D.Os. will be filled up by promoting Extension Officers ;

(d) if so, how many of the Extension Officers have been promoted ?

A.—Sri RAMAKRISHNA HEGDE (Minister for Development Panchayathi Raj and Co-operation).—

(a) Yes. 24.

(*b*) A E. Os. 136. Informatien in respect of other Extension Officers is not readily available. The same will be placed on the table of the House shortly.

Pay Scales :

		Rs.
1	E.O. (Agri) ...	150-10-250-15-400
2	E.O. (A.H.) ...	175-10-225-15-300-20-400
3	E.O. (Enging.) ...	150-8-190-10-320
4	E.O. (Ind.) ...	150-8-190-10-330
5	E.O. (Co-op.)	120-5-150-8-190-10-240
6	E.O. (Pan.)	120-5-150-8-190-10-240
7	S.E.O.	120-5-150-8-190-10-240
8	Mukhya Sevika	120-5-150-8-190-10-240

(*c*) No.

(*d*) Does not arise in view of reply to clause (c) above.

ಶ್ರೀ ಇ. ನಾರಾಯಣ ಗೌಡ.—ಎಸ್. ಎಸ್. ಎಲ್. ಸಿ. ಆಗದ 24 ಜನರನ್ನು ಗ್ರಾಮ ಸೇವಕರೆಂದು ಆರಿಸಲಾಗಿದೆ. ಎಂದು ಹೇಳಿದ್ದಾರೆ ಎಕ್ಸ್‌ಟೆನ್‌ಷನ್ ಆಫೀಸರ್ ಹುದ್ದೆಗೆ ಆರಿಸಿಕೊಳ್ಳಬೇಕಾದರೆ ಏನು ಅರ್ಹತೆಗಳಿರಬೇಕು, ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ (ಸಹಕಾರ ಶಾಖೆಯ ಉಪಮಂತ್ರಿಗಳು).—ಹಿಂದೆ ಗ್ರಾಮ ಸೇವಕರ ಕೊರತೆ ಬಹಳವಿತ್ತು. ಆವಾಗ ಅಗ್ರಿಕಲ್ಚರಲ್ ಫೀಲ್ಡ್‌ಮೆನ್ ಇರುವವರನ್ನು ನೂರು ಜನರನ್ನು ಆರಿಸಿಕೊಂಡು ಗ್ರಾಮ ಸೇವಕರನ್ನಾಗಿ ನೇಮಕ ಮಾಡಲಾಯಿತು. ಸರ್ಕಾರ ಒಂದು ಕಮಿಟಿಯನ್ನು ನೇಮಿಸಿದರು ಈ ಗ್ರಾಮ ಸೇವಕರ ಪೈಕಿ ಎಷ್ಟು ಜನ ಅರ್ಹರಾಗಿದ್ದಾರೆ, ಅವರ ಹಿಂದಿನ ರಿಕಾರ್ಡ್ ಹೇಗಿದೆ ಎನ್ನುವುದನ್ನು ನೋಡಿ ಅರ್ಹರಾದವರ ಹೆಸರುಗಳನ್ನು ಸಿಫಾರಸು ಮಾಡಲು ತಿಳಿಸಿತು. ಆ ಕಮಿಟಿಯವರು 150 ಜನರನ್ನು ಆರಿಸಿದ್ದಾರೆ. ಅದರಲ್ಲಿ ಮೊದಲನೆ ಹಂತವಾಗಿ 50 ಜನರನ್ನು ನೇಮಿಸಿದ್ದೇವೆ. ಅವರಲ್ಲಿ 24 ಜನ ಎಸ್. ಎಸ್. ಎಲ್. ಸಿ. ಆಗದವರು ಬಂದಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಈ ಎಕ್ಸ್‌ಟೆನ್‌ಷನ್ ಆಫೀಸರುಗಳ ಕೆಲಸಕ್ಕೂ ಗ್ರಾಮ ಸೇವಕರು ಮಾಡತಕ್ಕ ಕೆಲಸಕ್ಕೂ ವ್ಯತ್ಯಾಸವಿದೆಯೇ ಅಥವಾ ಇಬ್ಬರೂ ಒಂದೇ ಕೆಲಸವನ್ನು ಮಾಡುತ್ತಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ವ್ಯತ್ಯಾಸವಿದ್ದೇ ಇದೆ.

ಶ್ರೀ ಇ. ನಾರಾಯಣ ಗೌಡ.—ಅನುಭವ ಇಲ್ಲದೇ ಇರತಕ್ಕ ಗ್ರಾಮ ಸೇವಕರನ್ನು ಗ್ರಾಮಗಳಿಗೆ ಚುನಾಯಿಸುವುದರಿಂದ ಅವರುಗಳಿಂದ ಸಾಕಷ್ಟು ಸೌಲಭ್ಯಗಳು ರೈತರಿಗೆ ದೊರೆಯುತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರಿಗೆ ಅನುಭವ ಇಲ್ಲದೇ ಇಲ್ಲ. ಗ್ರಾಮಸೇವಕರು 3-4 ವರ್ಷಗಳ ಕಾಲ ಫೀಲ್ಡ್‌ಮನ್‌ರಾಗಿ ಕೆಲಸಮಾಡಿರಬೇಕು ಮತ್ತು ಅವರಿಗೆ 8-10 ವರ್ಷಗಳ ಅನುಭವ ಇರಬೇಕು. ಅವರಿಂದ ಸಾಕಷ್ಟು ಸೌಲಭ್ಯ ದೊರೆಯುತ್ತಿಲ್ಲವೆಂಬುದು ನಿಜವಲ್ಲ.

ಶ್ರೀ ಇ. ನಾರಾಯಣ ಗೌಡ.—ಈಗಿರತಕ್ಕ 8 ಜನ ವಿಸ್ತರಣಾಧಿಕಾರಿಗಳ ಸಂಬಳ ಸಾರಿಗೆಯ ವಿಚಾರದಲ್ಲಿ ಒಬ್ಬೊಬ್ಬರಿಗೂ ವ್ಯತ್ಯಾಸವಿದೆ. ಆದರೆ ಒಂದೇ ಇಲಾಖೆಯಲ್ಲಿ ಕೆಲಸಮಾಡುವ ಅಧಿಕಾರಿಗಳಿಗೆ ಸಂಬಳ ಸಾರಿಗೆ ಸಮರ್ಪಕವಾಗಿ ಮತ್ತು ತೃಪ್ತಿಕರವಾಗಿಲ್ಲದೇ ಇರುವುದರಿಂದ ಅದನ್ನು ಸಮೀಕರಣಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದೇ ಪ್ರಶ್ನೆಗೆ ಹಿಂದೆ ಉತ್ತರ ಕೊಟ್ಟಿದ್ದೇನೆ. ಸಂಬಳ ಸಾರಿಗೆಯನ್ನು ಒಂದೇ ಸಮನಾಗಿ ಎಲ್ಲಾ ಆಫೀಸರುಗಳಿಗೆ ಇಡಲಿಕ್ಕಾಗುವುದಿಲ್ಲ. ಪ್ರತಿಯೊಂದು ಇಲಾಖೆಯ ಕೇಡರ್ ರೆಕ್ರೂಟ್‌ಮೆಂಟ್ ರೂಲ್ಸ್ ಬೇರೆ ಬೇರೆ ಇದೆ. ಅವರವರ ರೆಸ್‌ಪಾನ್ಸಿಬಿಲಿಟೀಸ್ ಅಂಡ್ ಡ್ಯೂಟೀಸ್ ನೋಡಿಕೊಂಡು ಸಂಬಳ ಸಾರಿಗೆಗಳನ್ನು ನಿಗದಿ ಮಾಡುತ್ತಾರೆ. ಆದ್ದರಿಂದ ಒಂದೇ ಯೂನಿಫಾರಂ ಸ್ಕೇಲನ್ನು ಮಾಡುವುದಕ್ಕಾಗುವುದಿಲ್ಲ. ಎಕ್ಸ್‌ಟೆನ್‌ಷನ್

(ಶ್ರೀ ಕೊಂಡಜ್ಜಿ ಬಸಪ್ಪ)

ಆಫೀಸರ್, ಸಹಕಾರ ಇಲಾಖೆ, ಅವರಿಂದ ಒಂದು ಪ್ರೊಪೋಜಲ್ ಬಂದಿದೆ. ಅದರಲ್ಲಿ ಅವರ ನಂಬರ್ 120 ರಿಂದ 240 ರವರಿಗೆ ಈಗ ಇದೆ. ಅದನ್ನು 150 ರಿಂದ ಸ್ಟಾರ್ಟ್ ಮಾಡಬೇಕೆಂದು ಬಂದಿದೆ. ಅದನ್ನು ನಾವು ಸಮಾಲೋಚನೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವ ಕಾಲದಲ್ಲಿ ಗ್ರಾಮಸೇವಕರುಗಳು 8-10 ವರ್ಷಗಳ ಅನುಭವದಲ್ಲಿ ಸಾಕಷ್ಟು ಎಫಿಷಿಯಂಟಾಗಿ ಕೆಲಸ ಮಾಡುತ್ತಾರೆಂದು ತಿಳಿಸಿದ್ದಾರೆ. ನಮಗೆ ತಿಳಿದಿರ ವ ಪ್ರಕಾರ ಈಗಿರತಕ್ಕ ಗ್ರಾಮಸೇವಕರುಗಳು ಅವರಿಗೆ ಕೊಟ್ಟಿರತಕ್ಕಂಥ ಅಲ್ಪಕಾಲದ 8-10 ತಿಂಗಳುಗಳ ಶಿಕ್ಷಣದ ಪರಿಮಿತಿಯಲ್ಲಿ ಅವರಿಗೆ ಅಗ್ರಿಕಲ್ಚರಲ್ ಫೀಲ್ಡ್‌ನಲ್ಲಿ ಕೆಲಸಮಾಡುವ ಅನುಭವವಿಲ್ಲವೆಂದು ನಮಗೆ ತಿಳಿದಿದೆ. ಅದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿ ಟ್ರೈನಿಂಗ್ ಪೀರಿಯಡ್ಡನ್ನು ಜಾಸ್ತಿ ಮಾಡಿ ಅಗ್ರಿಕಲ್ಚರಲ್ ಪ್ರೊಡಕ್ಷನ್ನನ್ನು ಹೆಚ್ಚುಮಾಡುವುದಕ್ಕಾಗುತ್ತದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಒಂದು ವೇಳೆ ಸಾಲದು ಎಂದು ತಿಳಿದರೆ ಓರಿಯಂಟೇಷನ್ ಟ್ರೈನಿಂಗ್ ಸೆಂಟರಿಗೆ ಕೂಡ further trainingಗೆ ಕಳುಹಿಸಿ ಕೊಡುತ್ತೇವೆ.

Sri SANJEEVANATH AIKALA.—Has it come to the notice of the Government that the Gramasevaks who were interviewed got promotion as Extension officers and cases of most of the gramasevaks who came from Madras area have not been considered ?

Sri KONDAJJI BASAPPA.—That is not true.

Revenue Appeal Cases pending in the Mysore Divisional Commissioner's Office

*Q.—733. Sri T. D. DEVENDRAPPA (Bhadravathi).—

Will the Government be pleased to state :—

(a) the number of Revenue Appeal cases that were pending in Mysore Divisional Commissioner's Office when the Present Divisional Commissioner, took charge;

(b) the number of cases received month-wise from that date till the end of January 1965.

(c) the number of cases disposed off by the present Divisional Commissioner so far month-wise ?

A.—Sri M. V. KRISHNAPPA (Minister for Revenue).—

(a) 227 (16-3-1963).

(b) 736.

(c) 220 (Statement appended).

(The answers relates to the period during which the Officer who was the Divisional Commissioner at the time question was put was working as the Divisional Commissioner).

Statement showing the receipts and disposals of the Revenue Appeal cases from 16-3-1963 to the end of January, 1965.

Month	Receipt	Disposals
March 63, from 16-3-63 To 13-3-63	7	—
April 1963	43	2
May 1963	35	4
June 1963	34	3
July 1963	47	7
August 1963	39	5
September 1963	34	10
October 1963	24	6
November 1963	67	10
December 1963	27	5
January 1964	57	6
February 1964	60	9
March 1964	39	19
April 1964	27	13
May 1964	11	20
June 1964	20	14
July 1964	24	13
August 1964	15	16
September 1964	26	6
October 1964	33	6
November 1964	15	17
December 1964	27	18
January 1965	25	11
Total ...	736	220

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇಂದಿನ ಡಿವಿಜನಲ್ ಕಮಿಷನರ್ ಅವರು ತಮ್ಮ ಆಫೀಸ್ ಚಾರ್ಜನ್ನು 16-3-63ರಲ್ಲಿ ಹಿಂದಿದ್ದ ಶ್ರೀಮಾನ್ ಬೀರಪ್ಪನವರಿಂದ ತೆಗೆದುಕೊಂಡರು. 227 ಕೇಸುಗಳು ಇತ್ಯರ್ಥವಾಗದೆ ಉಳಿದಿರತಕ್ಕದ್ದು ಎಂಬುದಾಗಿ ಉತ್ತರದಲ್ಲಿ ತಿಳಿಸಿದ್ದಾರೆ. ಅಂದಿನಿಂದ 65ನೇ ಜನವರಿಯವರೆಗೆ ಸುಮಾರು 3 ವರ್ಷಗಳವರೆಗೆ ಕೇಸುಗಳು ಪುನಃ ಬಂದಿರತಕ್ಕದ್ದು 736 ಎಂಬುದಾಗಿ ಉತ್ತರದಲ್ಲಿ ತಿಳಿಸಿದ್ದಾರೆ. ಡಿಸ್‌ಪೋಜ್ ಆಗಿರತಕ್ಕದ್ದು ಕೇವಲ 220 ಮಾತ್ರ. ಹಿಂದೆ ಇವರು ಚಾರ್ಜ್ ತೆಗೆದುಕೊಂಡಾಗ 227 ಕೇಸುಗಳು ಇದ್ದಾಗ್ಗ್ಯೂ ಕೇವಲ 220 ಡಿಸ್‌ಪೋಜ್ ಆಗಿದೆ. ಉಳಿದುದನ್ನು ಪೆಂಡಿಂಗ್‌ನಲ್ಲಿಯೇ ಇಟ್ಟಿದೆಯೆಂದು ಹೇಳುತ್ತಾರೆ. ಮೂರು ವರ್ಷಗಳ ಕಾಲದಿಂದ 736 ಕೇಸುಗಳು ಉಳಿದಿರುವುದನ್ನು ನೋಡಿದರೆ ಈ ವಿಭಾಗಾಧಿಕಾರಿಯವರು ದಕ್ಷತೆಯಿಂದ ಕೆಲಸಮಾಡಿಲ್ಲವೆಂದು ಅರ್ಥವಾಗುತ್ತದಲ್ಲವೇ ?

† ಶ್ರೀ ಎಂ. ವಿ. ಕೃಷ್ಣಪ್ಪ.—ರೆವಿನ್ಯೂ ಕೇಸುಗಳು ಡಿಸ್‌ಪೋಜ್ ಆಗಲಿಕ್ಕೆ ಅವರಿಗೆ ಸರ್ಕಾರದವರು ರಿಕಮೆಂಡ್ ಮಾಡಿ ಬೇಗ ಅವನ್ನು ಡಿಸ್‌ಪೋಜ್ ಮಾಡಬೇಕೆಂದು ತಿಳಿಸಿದ್ದಾರೆ. ಅದಕ್ಕೆ ನಾನಾ ಕಾರಣಗಳಿವೆ. ಈ ಡಿವಿಜನ್ ಮಲೆನಾಡು ಡಿವಿಜನ್ ಆಗಿರುವುದರಿಂದ ಇಲ್ಲಿ ಮೂರು ತರಹ ರೆವಿನ್ಯೂ ಲಾಸ್ ಇವೆ. ಕೂರ್ಗ್ ಲಾಸ್, ಮದ್ರಾಸ್ ಲಾಸ್, ಮತ್ತು ಮೈಸೂರು ಲಾಸ್

(ಶ್ರೀ ಎಂ. ವಿ. ಕೃಷ್ಣಪ್ಪ)

ಎಂಬುದಾಗಿ ಇವೆ. ಜೊತೆಗೆ ಅವರು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ವಿವಿಧ ಹುದ್ದೆಗಳಿಗೆ ಉಮೇದುವಾರರನ್ನು ಚುನಾಯಿಸಬೇಕಾಗುತ್ತದೆ. ಹೀಗೆ ಡಿವಿಜನಲ್ ಕಮಿಷನರ್ ಕೆಲಸ ತುಂಬಾ ಇದೆ. ಕ್ಲಾರ್ಕ್ಸ್ ಮತ್ತು ಉಪಾಧ್ಯಾಯರುಗಳನ್ನು ರೆಕ್ರೂಟ್ ಮಾಡುವುದು ಕೂಡ ಇವರ ಜವಾಬ್ದಾರಿ. ಅದಕ್ಕಾಗಿ 10-16 ಸಾವಿರ ಅಭ್ಯರ್ಥಿಗಳಿಗೆ ಇಂಟರ್‌ವ್ಯೂ ಮಾಡುತ್ತಿದ್ದರು. ಅದನ್ನು ಈಗ ಸರ್ಕಾರದವರು ತೆಗೆದುಕೊಂಡು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೊಡುತ್ತಾರೆ. ಆದ್ದರಿಂದ ಮುಂದೆ ಈ ಕೆಲಸ ಬಹಳ ಬೇಗ ಆಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ವಿಭಾಗಾಧಿಕಾರಿಗಳ ಮುಂದೆ ಹಾಜರಾದಂಥ ವಕೀಲರುಗಳಿಗೆ ಮತ್ತು ಕಕ್ಷಿಗಾರರಿಗೆ ಅವರ ಮುಂದೆ ಬಂದಂಥ ಕೇಸುಗಳನ್ನು ವರ್ಷಾಂತರಗಳಿಂದ ಇತ್ಯರ್ಥ ಮಾಡದೇ ಇಟ್ಟುಕೊಂಡಿರುವುದರಿಂದ ಅವರೆಲ್ಲರಿಗೂ ತೊಂದರೆಯಾಗುತ್ತದೆ ಮತ್ತು ನಷ್ಟವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ವಕೀಲರಿಗೆ ನಷ್ಟವೇ ?

ಶ್ರೀ ಎಸ್. ಎಂ. ಕೃಷ್ಣ.—ವಕೀಲರಿಗೆ ಅಲ್ಲ ಕಕ್ಷಿಗಾರರಿಗೆ.

ಶ್ರೀ ಎಂ. ವಿ. ಕೃಷ್ಣಪ್ಪ.—ವಕೀಲರೇ ನನ್ನ ಹತ್ತಿರ ಬಂದು ಇನ್ನೊಂದು ಹಿಯರಿಂಗ್ ಕೊಡಿ ಎಂದು ಕೇಳುತ್ತಾರೆ.

Sri GANJI VEERAPPA.—May I know whether the Divisional Commissioners and Deputy Commissioners are required to send periodical reports of the pending cases and disposals just like Civil Courts, every year and are Government taking action if delay is found ?

Sri M. V. KRISHNAPPA.—We have instructed that officer that the cases should be disposed of as early as possible. Twice we have instructed him. We get also reports.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು ವಿಭಾಗ ಅಧಿಕಾರಿಗಳು ಹಿಂದೆ ಲೋಕಲ್ ಸೆಲ್ಫ್ ಗೌರ್ನಮೆಂಟ್ ಮತ್ತು ಪಬ್ಲಿಕ್ ಹೆಲ್ತ್ ಸೆಕ್ರೆಟರಿಗಳಾಗಿದ್ದಾಗ......

Mr. SPEAKER.—The Hon'ble Member may please tell me how it is related to the main Question ?

Sri C. J. MUCKANNAPPA.—I shall say how it is relevant. Is it not a fact that the present incumbent, the Divisional Commissioner of Mysore, has proved unworthy when he was the Director of Public Instruction and then Secretary to Government ?

Mr. SPEAKER.—This is not allowed.

Sri C. J. MUCKANNAPPA.—Sir, then how can we tell the Government about the efficiency or inefficiency of the officers ? Please let me know.

Mr. SPEAKER.—Now, we must remember our rights to call for information and to criticise the Government and the officers. If it is a general Debate, I will certainly allow every detail. But if it is a Question time and the Question relates to the pendency of cases, how does the functioning of the Divisional Commissioner, the posts he held previously and all that come in ? Generally the limit of the question is to get details for three years and not unlimited period. When it is so, if a question is asked as to when that officer was the Director of Public Instruction, etc., how can the Revenue Minister answer for Education Minister ? I do not think the Education Minister also can answer off hand.

Sri C. J. MUCKANNAPPA.—Sir, when they promote an officer, they take into consideration the various posts he held and how he functioned and so on. If you tell me that I am not correct, I do not want to put the question. So, may I ask whether it is not proved ?

Mr. SPEAKER.—If the Hon'ble Member thinks that at the time of promoting for selection post there was discussion with the Minister or in the Cabinet collectively, and asks for information about the incumbent or the individual who was promoted as Divisional Commissioner regarding his work as Director of Public Instruction, how is it to be answered ? Suppose the question is asked with regard to his work as Director of Public Instruction, how is it to be answered ?

Sri C. J. MUCKANNAPPA.—I am not asking that, Sir.

Mr. SPEAKER.—We must be fair to the people who are not here.

Sri C. J. MUCKANNAPPA.—Has it not come to the notice of the Government that the Divisional Commissioner has proved inefficient in discharging his duties as Divisional Commissioner of Mysore Division ?

Sri M. V. KRISHNAPPA.—The disposal of revenue cases is not the only test to show one's efficiency. The work has been satisfactory; in other fields he has done well.

ಶ್ರೀ ಎಚ್. ಡಿ. ದೇವೇಗೌಡ.—ಸೂಪರ್ ಸ್ಕೇಲ್ ಅಧಿಕಾರಿಗಳ ಪ್ರಾಮಾಣಿಕತೆ ಮತ್ತು ದಕ್ಷತೆಯನ್ನು ಅಳೆಯಬೇಕಾದರೆ ಯಾವ ರೀತಿ ನಿರ್ಣಯ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ವಹಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡುವುದು ಒಂದೇ ಅವರ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಅಳೆಯುವ ಅಳತೆ ಕೋಲು. ಅವರ ವಿಷಯದಲ್ಲಿ ಅಸೆಂಬ್ಲಿಯಲ್ಲಿ ಪ್ರಶ್ನೆಯನ್ನು ಹಾಕಿದ ಮಾತ್ರಕ್ಕೇ ಅವರು ಇನ್ ಎಫಿಷಿಯೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಡಿವಿಜನಲ್ ಕಮೀಷನರು ಅಧಿಕಾರವನ್ನು ವಹಿಸಿಕೊಂಡ ನಂತರ 736 ಕೇಸುಗಳು ಬಂದಿವೆ, ಅವುಗಳಲ್ಲಿ ಅವರು 220 ಕೇಸುಗಳನ್ನು ತೀರ್ಮಾನ ಮಾಡಿದ್ದಾರೆಂದು ಹೇಳಿದ್ದೀರಿ, ಅವರು ಅಧಿಕಾರವನ್ನು ವಹಿಸಿಕೊಂಡಮೇಲೆ ಇಷ್ಟೊಂದು ಕೇಸುಗಳು ಇತ್ಯರ್ಥವಾಗದೆ ಉಳಿದಿರುವುದಕ್ಕೆ ಕಾರಣ ಆ ಕಮೀಷನರು ನ್ಯಾಯ ವಿಚಾರದಲ್ಲಿ ಪರಿಣತೆಯನ್ನು ಪಡೆಯದೆ ಇರುವುದರಿಂದ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರನ್ನು ಆ ಸ್ಥಾನಕ್ಕೆ ಹಾಕಬೇಕಾದರೆ ಅವರಿಗೆ ಏನೇನು ಕ್ವಾಲಿಫಿಕೇಷನ್‌ಗಳು ಇರಬೇಕೋ ಅವೆಲ್ಲವೂ ಅವರಿಗೆ ಇರುವುದರಿಂದ ಅವರನ್ನು ಆ ಸ್ಥಾನಕ್ಕೆ ಹಾಕಿದ್ದೇವೆ.

Kannada as Official Language of the State.

*Q.—758. Sri GANJI VEERAPPA (Harihar).—

Will the Government be pleased to state :—

(a) when Kannada will be made the official language of State throughout the Mysore State ;

(b) whether Government of Mysore have been asked to state their opinion regarding the holding of examinations of the Union Public Service Commission in Kannada ;

(SRI GANJI VEERAPPA)

(*c*) if so, whether they have furnished their opinion in favour of Kannada ;

(*d*) whether knowledge of Kannada (Both reading & writing) is not made a condition for employment to Government services in the State ;

(*e*) whether it is a fact that several officers in the State do not know Kannada ?

A.—Sri B. D. JATTI (Minister for Finance) [on behalf of SRI S. NIJALINGAPPA (Chief Minister).—

(*a*) The Mysore Official Language Act, 1963 has been passed on 10th October, 1963 making Kannada as Official Language of the State of Mysore.

Under the provisions of the above Act, Government have to notify in the official Gazette that Kannada shall be used in respect of such official purposes and in such areas as may be specified in the Notification.

(*b*) No.

(*c*) Does not arise in view of reply to clause (*b*) above.

(*d*) No.

(*e*) Yes. The New Mysore State is formed by integrating areas from five different States and there are bound to be such instances.

Sri GANJI VEERAPPA.—May I know whether there has been any Notification to make Kannada as official language in any part of the Districts and if so what are the Districts chosen ?

† Sri B. D. JATTI.—So far, no Notification has been issued.

Sri GANJI VEERAPPA.—May I know whether it is the intention of the Government to put the Act into force in the entire State and if so when ?

Sri B. D. JATTI.—The intention of the Government is to introduce by stages and if we succeed by getting some experience, we will extend it to other areas.

Sri GANJI VEERAPPA.—May I know the experience gained so far after having introduced Kannada as the official language ?

Sri B. D. JATTI.—In fact, this was commenced sometime back and Kannada was introduced in some of the Districts and we have the experience.

Sri GANJI VEERAPPA.—May I know when the Government intends to see that in the entire State Kannada will become the official language ? May I know when that stage will come ?

Sri B. D. JATTI.—It is very difficult to give the exact date, month and year.

ಶ್ರೀ ಎಸ್. ಎಂ. ಕೃಷ್ಣ.—ಕನ್ನಡವನ್ನು ರಾಜ್ಯ ಭಾಷೆಯಾಗಿ ಮಾಡಬೇಕು ಎನ್ನತಕ್ಕಂಥ ನಿರ್ಣಯವನ್ನು ಈ ಸದನ ಅಂಗೀಕಾರ ಮಾಡಿದ ಮೇಲೆ ಇದನ್ನು ಜಾರಿಗೆ ತರತಕ್ಕ ವಿಷಯದಲ್ಲಿ ಸರ್ಕಾರಕ್ಕೆ ಸಾಕಷ್ಟು ಕಳಕಳಿ ಇಲ್ಲ ಎನ್ನುವ ಅನುಮಾನ ಪ್ರಬಲವಾಗಿ ಬರುತ್ತಿದೆ. ಅದನ್ನು ನಿವಾರಣೆ ಮಾಡುವ ವಿಚಾರದಲ್ಲಿ ಸರ್ಕಾರದವರು ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಆ ವಿಚಾರದಲ್ಲಿ ಅನುಮಾನಪಡುವವರನ್ನು ಅನುಮಾನ ಪಡಬೇಡಿ ಎಂದು ಹೇಳಿದರೂ ಕೂಡ ಅವರು ಕೇಳುವುದಿಲ್ಲ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಕನ್ನಡ ಭಾಷೆಯನ್ನು ಎಲ್ಲರಿಗೂ ಕಲಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ವಿಧಾನ ಸೌಧದಲ್ಲಿ ಮತ್ತು ಡಿವಿಜನರ್ ಕಮೀಷನರ ಕಛೇರಿಯಲ್ಲಿ ಅಧಿಕಾರಿಗಳಿಗೆ ಕನ್ನಡ ಭಾಷೆಯಲ್ಲಿ ತರಪೇತಿಯನ್ನು ಕೊಡಲಾಗುತ್ತಿದೆ. ಮತ್ತು ಇತರ ಡಿವಿಜನರ್ ಆಫೀಸುಗಳಲ್ಲಿಯೂ ಕನ್ನಡವನ್ನು ಕಲಿಸುವ ಏರ್ಪಾಡು ಮಾಡಲಾಗಿದೆ. ಈ ರೀತಿ ಕನ್ನಡವನ್ನು ಕಲಿಸುವ ಬಗ್ಗೆ ಸರ್ಕಾರದವರು ಅನುಕೂಲ ಮಾಡಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಮ್ಮ ಭಾರತ ದೇಶದಲ್ಲಿ ಅನೇಕ ಭಾಷೆಗಳು ಇರುವುದರಿಂದ, ನಮ್ಮ ರಾಜ್ಯದಲ್ಲಿ ಕನ್ನಡವನ್ನು ರಾಜ್ಯ ಭಾಷೆಯಾಗಿ ಕಡ್ಡಾಯವಾಗಿ ಮಾಡುವುದರಲ್ಲಿ ಏನಾದರೂ ತೊಂದರೆಯಾಗಿದ್ದರೆ ಎಲ್ಲರೂ ಹಿಂದಿಯನ್ನು ಕಲಿಯುವವರೆಗೆ ಇಂಗ್ಲೀಷ್ ಭಾಷೆ ಇರುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಇವೊತ್ತಿನ ಪ್ರಶ್ನೆ ಇರುವುದು ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡುವ ವಿಚಾರ. ಈಗ ಮಾನ್ಯ ಸದಸ್ಯರು ಕೇಳಿದ ವಿಷಯದ ಬಗ್ಗೆ ಪ್ರಶ್ನೆ ಇಲ್ಲ.

ಶ್ರೀ ಗಾಂಜಿ ವೀರಪ್ಪ.—ಪಬ್ಲಿಕ್ ಸರ್ವೀಸ್ ಕಮೀಷನ್ನಿನ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪರೀಕ್ಷೆಗಳನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ನಡೆಸುವ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಭೆಯವರು ಕನ್ನಡವನ್ನು ರಾಜ್ಯ ಭಾಷೆಯಾಗಿ ಮಾಡಬೇಕೆಂದು ತೀರ್ಮಾನ ಮಾಡಿದ ಮೇಲೆ, ಈ ರಾಜ್ಯದ ಬಡ್ಜೆಟ್ಟನ್ನ ಕನ್ನಡದಲ್ಲಿ ಪ್ರಿಂಟ್ ಮಾಡಿಸುವುದಕ್ಕೆ ತಾವು ಇಲ್ಲಿಯವರೆಗೂ ಏತಕ್ಕೆ ಪ್ರಯತ್ನ ಪಟ್ಟಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಈ ವಿಚಾರವನ್ನು ಈ ಸಭೆಯ ಮಾನ್ಯ ಅಧ್ಯಕ್ಷರನ್ನು ಕೇಳಿದರೆ ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕನ್ನಡವನ್ನು ಈ ರಾಜ್ಯದಲ್ಲಿ ರಾಜ್ಯದ ಭಾಷೆಯಾಗಿ ಮಾಡಬೇಕೆಂದು ಒಂದು ವಿಧೇಯಕವನ್ನು ಇಲ್ಲಿ ತಂದು ಪಾಸು ಮಾಡಿ ಸುಮಾರು ಒಂದೂಕಾಲು ವರ್ಷಗಳಾದರೂ ಇಲ್ಲಿಯವರೆಗೆ ಕನ್ನಡವನ್ನು ಆಡಳಿತ ಭಾಷೆಯಾಗಿ ತರಲು ಸರಕಾರ ಏನೇನು ಪ್ರಯತ್ನಗಳನ್ನು ಮಾಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಸರಕಾರ ಈಗಾಗಲೇ ಕೆಲವು ಡಿವಿಜನ್ನುಗಳಲ್ಲಿರುವ ಅಧಿಕಾರಿಗಳಿಗೆ ಕನ್ನಡವನ್ನು ಕಲಿಯಲು ಅದಕ್ಕಾಗಿ ಕ್ಲಾಸುಗಳನ್ನು ಮಾಡಿ ತರಬೇತಿ ಕೊಡಲಾಗುತ್ತದೆ. ಅವರು ಎಷ್ಟು ಬೇಗ ಕಲತರೆ ಅಷ್ಟು ಬೇಗ ಇದನ್ನು ಜಾರಿಗೆ ತರಲು ಪ್ರಯತ್ನ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಸ್. ಕೊಲ್ಕೆಬೈಲ್.—ಈ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಗಾಂಜಿ ವೀರಪ್ಪನವರು ಕಳುಹಿಸುವಾಗ ಕನ್ನಡದಲ್ಲಿ ಬರೆದು ಕಳುಹಿಸಿದ್ದಾರೆಯೇ ಅಥವಾ ಇಂಗ್ಲೀಷಿನಲ್ಲಿ ಕಳುಹಿಸಿದ್ದಾರೆಯೇ ?

Mr. SPEAKER.—The Hon'ble Minister will not be able to answer it. It must come to me. I am not answering any interpellation on the Floor of the House.

ಶ್ರೀ ಎ. ಜೆ. ದೊಡ್ಡಮೇಟಿ.—ಕನ್ನಡ ಆಡಳಿತ ಭಾಷೆಯಾಗುವುದೋ ಇಲ್ಲವೋ ಎನ್ನುವುದು ಒಂದು ಸೋಜಿಗವಾಗಿದೆ. ತಮ್ಮ ಮುಂದಿನ ಬಡ್ಜೆಟ್ಟು ಭಾಷಣವನ್ನು ಕನ್ನಡದಲ್ಲಿ ಮಾಡುತ್ತೀರೋ ಇಲ್ಲವೇ ಇಂಗ್ಲೀಷಿನಲ್ಲೇ ಮಾಡುತ್ತೀರೋ ?

ಶ್ರೀ ಬಿ. ಡಿ. ಜತ್ತಿ.—ಭಾಷಾಂತರ ಮಾಡಿದ ಪ್ರತಿಯನ್ನು ಒದಗಿಸಲಾಗಿತ್ತು.

ಶ್ರೀ ಎ. ಜೆ. ದೊಡ್ಡಮೇಟಿ.—ಭಾಷಾಂತರ ಮಾಡುವುದಲ್ಲ. ತಮ್ಮ ಬಡ್ಜೆಟ್ಟು ಭಾಷಣವನ್ನು ಕನ್ನಡದಲ್ಲಿಯೇ ಮಾಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಮುಂದಿನ ವರ್ಷ ಮಾನ್ಯ ಸದಸ್ಯರಾದ ಶ್ರೀಮಾನ್ ದೊಡ್ಡಮೇಟಿಯವರೂ ಹಾಗೂ ನಾನೂ ಈ ಸಭೆಯಲ್ಲಿದ್ದರೆ ಆಗ ಬೇಕಾದರೆ ಕನ್ನಡದಲ್ಲಿಯೇ ಭಾಷಣ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಸರಕಾರ 1963ನೇ ಇಸವಿ ಅಕ್ಟೋಬರು ತಿಂಗಳಿಂದ ಕನ್ನಡ ರಾಜ್ಯದ ಅಧಿಕೃತ ಭಾಷೆಯಾಗಿ ಬರಬೇಕು ಎಂದು ರಾಜ್ಯ ಭಾಷೆಗೆ ಸಂಬಂಧಪಟ್ಟ ವಿಧೇಯಕ ಇಲ್ಲಿ ಅಂಗೀಕಾರವಾದ ಮೇಲೆ ರಾಜ್ಯ ಸರಕಾರದವರು ಕನ್ನಡವನ್ನು ಜಾರಿಗೆ ತರುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಅಧಿಕಾರಿಗಳಿಗೆ ಕನ್ನಡವನ್ನು ಕಲಿಸಲಿಕ್ಕೆ ಬೇರೆ ಬೇರೆ ಕಡೆ ಏರ್ಪಾಡು ಮಾಡಿದ್ದೇವೆ. ಅದೇ ರೀತಿಯಾಗಿ ಸುಮಾರು 200 ಕನ್ನಡ ಟೈಪುರೈಟರುಗಳನ್ನು ಕೊಂಡುಕೊಂಡಿದ್ದೇವೆ. ಮತ್ತು ಕನ್ನಡದಲ್ಲಿ ಟೈಪು ಮಾಡುವುದನ್ನು ಅಧಿಕಾರಿಗಳು ಕಲಿಯುತ್ತಿದ್ದಾರೆ. ಇವುಗಳೆಲ್ಲಾ ಪೂರ್ತಿಯಾದ ನಂತರ ಕನ್ನಡದಲ್ಲಿ ಕೆಲಸ ಮಾಡುವುದಕ್ಕೆ ಬರುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ವಿಶ್ವವಿದ್ಯಾನಿಲಯದಲ್ಲೇ ಕಲಿಯದೇ ಇಲ್ಲಿರುವ ಅಧಿಕಾರಿಗಳಿಗೆ ಕನ್ನಡವನ್ನು ಕಲಿಸಬೇಕೆಂದು ಹೊರಟರೆ ಅದು ಇನ್ನೂ ಹತ್ತಾರು ವರ್ಷಗಳ ಕಾಲ ಬೇಕಾಗುತ್ತದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಬಿ. ಡಿ. ಜತ್ತಿ.—ಯೂನಿವರ್ಸಿಟಿ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಕನ್ನಡದಲ್ಲಿ ಗುಮಾಸ್ತರುಗಳು ಬರೆದಿರತಕ್ಕ ಆರ್ಡರುಗಳನ್ನು ಇಲ್ಲಿರತಕ್ಕ ಐ.ಎ.ಎಸ್. ಅಧಿಕಾರಿಗಳು ಓದಿ ತಿಳಿದುಕೊಳ್ಳುವಷ್ಟು ತರಬೇತಿ ಪಡೆಯಲು ಮೊದಲು ಐ.ಎ.ಎಸ್. ಅಧಿಕಾರಿಗಳಿಗೆ ಕನ್ನಡವನ್ನು ಕಲಿಸಿದರೆ ಗುಮಾಸ್ತರುಗಳು ಬರೆಯುವ ಮೋಡಿ ಅಕ್ಷರವನ್ನು ತಿಳಿಯಲು ಅನುಕೂಲವಾಗುತ್ತದೆಯಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿ ಐ.ಎ.ಎಸ್. ಅಧಿಕಾರಿಗಳೇ ಅಲ್ಲ ಐ.ಸಿ.ಎಸ್. ಅಧಿಕಾರಿಗಳಾಗಿ ಬಂದಿರುವ ನಮ್ಮ ಚೀಫ್ ಸೆಕ್ರೆಟರಿಯವರೂ ಕೂಡ ಕನ್ನಡವನ್ನು ಚೆನ್ನಾಗಿ ಕಲಿತು ಶುದ್ಧವಾಗಿ ಕನ್ನಡದಲ್ಲಿ ಬರೆಯುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಮುಂದಿನ ವರ್ಷ ಇರುತ್ತವೋ ಇಲ್ಲವೋ ಎಂದು ಹೇಳುತ್ತಿದ್ದಾರೆ. ಆದರೆ ಮುಂದೆ ತಾವು ಇಲ್ಲಿ ತರುವ ಸಪ್ಲಿಮೆಂಟರಿ ಗ್ರಾಂಟುಗಳನ್ನಾದರೂ ಕನ್ನಡದಲ್ಲಿಯೇ ಅಚ್ಚು ಮಾಡಿಸಿ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಇದು ಮಾನ್ಯ ಸದಸ್ಯರು ಕೊಟ್ಟಂತಹ ಒಂದು ಸಲಹೆ. ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಟಿ. ಎನ್. ಕೃಷ್ಣಸಿಂಗ್.—ರಾಜ್ಯದಲ್ಲಿ ಆಡುವ ಭಾಷೆಗಳು ಹೆಚ್ಚಾಗಿ ಯಾವುದು ?

ಶ್ರೀ ಬಿ. ಡಿ. ಜತ್ತಿ.—ಕಾನ್‌ಸ್ಟಿಟ್ಯೂಷನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಗಾಂಜಿ ವೀರಪ್ಪ.—ಸರಕಾರದಲ್ಲಿ ನೌಕರಿಗೆ ಸೇರಬೇಕಾದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಾಗಿರಬೇಕು ಮತ್ತು ಅವರ ಸೆಕೆಂಡು ಲ್ಯಾಂಗ್ವೇಜು ಕನ್ನಡವಾಗಿರಬೇಕು ಎನ್ನುವ ಕನಿಷ್ಠ ಕ್ವಾಲಿಫಿಕೇಷನ್ನು ಇದ್ದವರನ್ನೇ ಕ್ಯಾಂಡಿಡೇಟುಗಳಾಗಿ ತೆಗೆದುಕೊಳ್ಳುತ್ತಾರಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ ; ಆಯಾಯ ಇಲಾಖೆಯ ಮೇಲೆ ಹೋಗುತ್ತದೆ.

Sri SANJEEVANATH AIKALA.—Is it a fact that the wellknown scientists of Tata Institute wrote to the Government that introduction of Kannada would retard the progress in the field of technical education ?

ಶ್ರೀ ಬಿ. ಡಿ. ಜತ್ತಿ.—ಅದೇನೂ ಹೇಳಲಿಲ್ಲ. ಅಸೆಂಬ್ಲಿಯೊಳಗೆ ಪಾಸಾದ ಕಾನೂನನ್ನು ಜಾರಿಯಲ್ಲಿ ತರಬೇಕಾಗಿದೆ.

Enhancement of D. A. to the Workers of Adult Education Council.

*Q.—899. Sri R. KENCHAPPA (Pavagada).—

Will the Government be pleased to state :—

(a) whether they have enhanced D. A. to the workers of Adult Education Council ;

(b) if so, the reasons for not paying it to them so far ?

A.—Sri S. R. KANTHI (Minister for Education).—

(*a*) After considering all the aspects of the request of the Adult Education Council, the Government have agreed to extend the benefit of revised rates of D. A. to the employees of the Council.

(*b*) The Mysore State Adult Education Council is an autonomous body. It is for the Council to arrange payment of the allowance in question if the funds permit.

ಶ್ರೀ ಆರ್. ಕೆಂಚಪ್ಪ.—ಈಗಾಗಲೇ ಹೆಚ್ಚಿಸಿರುವ ಡಿ. ಎ. ಯನ್ನು ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನಲ್ಲಿ ಕೆಲಸ ಮಾಡುತ್ತಿರುವವರಿಗೆ ಇಲ್ಲಿಯುವರಿಗೆ ಕೊಟ್ಟಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಸ್. ಆರ್. ಕಂಠಿ.—ನನಗೆ ಬಂದಿರುವ ವರದಿಯಂತೆ ಅವರುಗಳಿಗೆ ಈಗಾಗಲೇ ಹೆಚ್ಚಿಸಿರುವ ಡಿ. ಎ. ಕೊಡುತ್ತಾರೆಂದು ತಿಳಿದು ಬಂದಿದೆ.

ಶ್ರೀ ಆರ್. ಕೆಂಚಪ್ಪ.—ಆದಷ್ಟು ಬೇಗ ಇಲ್ಲಿರುವ ಜನಕ್ಕೆ ಈ ಹೆಚ್ಚು ಡಿ. ಎ. ಕೊಡಿಸಿ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕೊಡುತ್ತಿದ್ದಾರೆಂದು ಹೇಳಿದ್ದಾರೆ. ಕೊಟ್ಟಿಲ್ಲ ಎಂದು ತಾವು ಹೇಳುತ್ತಿರುವುದರಿಂದ ಅವರಿಗೆ ಕೊಡುವಂತೆ ಹೇಳೋಣ.

Sri SANJEEVANATH AIKALA.—What is the staff pattern in the Adult Education Council ?

Sri S. R. KANTHI.—This question refers to D.A. and not about the entire staff. I want notice.

Mr. SPEAKER.—Question hour is over. Sri Anna Rao's question is held over. If I put it, he will lose the benefit of putting supplementaries. I am not also allowing the question to lapse. I will hold over the question and also that of Sri Lakkappa's.

QUESTION FOR ANSWER ON THE DAY

(but not taken up)

Nomination of Scheduled Castes and Scheduled Tribes Members in several Central Co-operative Societies or Banks in the State.

**Q.*—746. Sri K. H. RANGANATH (Mudigere).—

Will the Government be pleased to state :—

whether any representation is given to the members of Scheduled Castes and Scheduled Tribes while making nominations to Board of management of Central Land Mortgage Bank, Bangalore ; Apex Bank ; State Marketing Co-operative Society and various District, Central Co-operative Banks in the State, and if so, the names of the persons that are functioning at present ?

A.—Sri RAMAKRISHNA HEGDE (Minister for Development, Panchayati Raj and Co-operation).—

Only Government Officers are nominated to these bodies. Hence the question of giving representation to any community does not arise.

Members' Representations

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನಾವು ಎಷ್ಟು ಪ್ರಯತ್ನ ಪಟ್ಟು ಪ್ರಶ್ನೆಗಳನ್ನು ಸರಕಾರಕ್ಕೆ ಕಳುಹಿಸಿದ್ದರೂ ಕೂಡ ಇಲ್ಲಿಯವರೆಗೆ ಯಾವುದಕ್ಕೂ ಉತ್ತರ ಬರಲಿಲ್ಲ ಎಂದು ಇಲ್ಲಿ ವಿಷಾದದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ. ಇದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ತಮ್ಮ ಮೂಲಕ ಕೇಳುತ್ತೇನೆ.

Mr. SPEAKER.—Order, order. If I have included 12 Questions in the list, I cannot possibly feel what the Hon'ble Member has in mind with reference to a particular Question. I do not know what that question is and whether answer is received or not. If it is said here, it cannot be verified here as to whether answer is received or not.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ನಾವು ದೊಡ್ಡದಾಗಿ ಆರು ತಿಂಗಳಿಗೆ ಮೊದಲೇ ನಮ್ಮ ಪ್ರಶ್ನೆಗಳನ್ನು ಕಳುಹಿಸಿ ಅದಕ್ಕೆ ಉತ್ತರಗಳು ಸರಕಾರದಿಂದ ಬರುತ್ತವೆ ಎಂದು ಕುತೂಹಲದಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಆದರೆ ಸರಕಾರದ ಪಾಲಿಸಿ ನೋಡಿದರೆ ಅದರಿಂದ ರೈತರಿಗೆ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ನಾವು ಗ್ರಾಮಾಂತರಗಳಲ್ಲಿ ಹೋಗಿ ಅಲ್ಲಿರುವ ಜನಗಳ ಕೋರಿಕೆಯನ್ನು ಈಡೇರಿಸುವುದಕ್ಕೆ ಅನುಕೂಲ ವಾಗುವಂತೆ ಇಲ್ಲಿ ಸರಕಾರದವರು ಪ್ರಶ್ನೆಗಳಿಗೆ ಉತ್ತರ ಕೊಡದೇ ಹೋದರೆ ನಾವು ಆ ಜನಗಳಿಗೆ ಕೊಟ್ಟ ಭರವಸೆ ಏನಾಗುತ್ತದೆ ಎನ್ನುವುದನ್ನು ಸರಕಾರದವರು ತಿಳಿದು ಕೊಂಡಿದ್ದಾರೆಯೇ ಎನ್ನುವುದನ್ನು ಇಲ್ಲಿ ಗಮನಿಸಬೇಕು.

Mr. SPEAKER.—I will study that problem.

In regard to call attention notice given by Sri Srinivasa Nayak, the Hon'ble minister desires that it may be taken up tomorrow. He has collected information but still some information is flowing in. He will explain the latest position tomorrow. It will be held over.

Now further discussion of the Bill. May I know how much time the Hon'ble minister requires to reply ?

Sri M. V. KRISHNAPPA (Minister for Revenue).—Half an hour.

Mr. SPEAKER.—There are about 18 amendments. The Debate will go on upto 4-30 p. m.

Sri S. SIVAPPA (Sravanabelagola).—The position about tomorrow's business must be known to the House. As it stands now, it is very uncertain.

Sri S. M. KRISHNA (Maddur).—Are we take it that we are meeting in the morning tomorrow and adjourning in the afternoon ? We have to be clear about it.

Mr. SPEAKER.—I entirely agree what we must be clear. So far as the present Bill is concerned the time allotted expires today and I cannot possibly take it over for tomorrow even if there is no work for tomorrow. So I have to adjust the time on the basis that it will be over to day.

MYSORE LAND REFORMS (AMENDMENT) BILL, 1965.

Sri G. V. GOWDA (Palyam).—Sir, yesterday I was submitting how the Government have done hardly any justice to the several recommendations of the Planning Commission and I dealt with 3 important recommendations. The Government seem to deliberately not taken into consideration these 3 important aspects because either they are influenced by vested interests or they do not have the mind to help the cultivator tenants. There has been a long delay of 4 years. The fact that they have not considered these suggestions seriously goes to show that they are not interested in bringing about land reforms in the State.

In respect of the other suggestions, I might nvite the attention of the House to suggestion No. 5, namely, about lands taken possession of by landlords after date specified in clause 7 (2) (i). Nothing has been done so far to incorprate this suggestion in the main Act. As regards suggestion No. 8 about small holders, they have not followed the suggestion of the Planning Commission and no justice has been done even to tne small holders inasmmch has they have not exempted the small holders and allowed the small holders to resume the lands for personal cultivation. The other suggestion about ceiling on plantations also has not been followed. So far as plantation is concerned, we have heard why there must not be any ceiling limit so far as the present holdings are concerned and so far as future acquisitions are concerned we remember that there was hot discussion in this House and it was agreed that there was ceiling should be at 100 acres. The suggestion of the Planning Commission is that it should be fixed at an economic level. Ignoring all this, the Government have said that any extent of land could be acquired even for future expansion so far as plantations are concerned. This is against the very principle of land reforms for creating a socialistic society. Then as regards the other suggestion about the limitation on the interspersed lands, nothing has been done. Under the original Act if it is less than the ceiling area exemption had been given, but now amendment is sought to be made that even if it exceeds the ceiling, exemption must be there because according to Government, otherwise the plantation crops may not be well managed if it is made subject to ceiling. I submit that this amendment will not serve the cause of land reforms.

Then, I wish to deal with some of the amendments proposed. So far as amendment to section of 51 is concerned, under the original Act if the compensation to be paid is less than Rs. 10,000 it is to be paid in a lumpsum, but now the amendment is that if it less than Rs. 2,000 it is to be paid in cash and if it exceeds Rs. 2,000 it is to be paid in instalments or in bonds. Landlords also have to be satisfied when their lands are taken away and so it is desirable that up to Rs. 10,000 the compensation should be paid in a lumpsum. According to the amendment if compensation above Rs. 2,000 is to be paid in bonds, no landlord would

(SRI G. V. GOWDA)

be able to get the compensation at a stroke. This is very unfortunate and I do not think this will satisfy the landlords when they are parting with their lands. Therefore, it is desirable that the Minister withdraws this amendment.

So far as amending section 104 and 107 is concerned, now it says that lands belonging to institutions managed by the Government and controlled by Government must be exempted from the ceiling limit. One thing is, it is desirable that such a thing should be done. But I see an amendment that is sought to be moved by the Hon'ble Minister to the amendment in respect of religious and charitable institutions managed by Government or controlled by Government. Unless exemption could be given for those religious institutions that are controlled or managed by Government, the institutions which are not controlled by the Government, cannot be given exemption. By seeking an amendment to the amendment I fear that all sorts of muts and institutions may induce the Government to see that they are also added in this schedule I A. Therefore, there must be some principle if the Government wants to give exemption to the Government lands and in addition to them, lands belonging to the religious institutions controlled and managed by Government, we are here to agree. But if the Government says that cannot be the principle, even religious institutions which are not under the responsibility of Government must also be found in the list, I believe that will not be desirable and all sorts of biased decisions are likely to take place and power is likely to be abused and thereby institutions though not managed by the Government, are likely to be enlisted in schedule IA. Therefore I am requesting the Hon'ble Minister to confine to the amendment that is found in the printed list, and not in the subsequent amendment which is likely to be misused or abused.

Therefore, unless this is done, I do not think that it is proper for any religious institutions to claim advantage of exemption.

With these observations, I have reason to believe that by accepting these amendments that have been brought in, we cannot claim that we have given any reforms to our people so far as tenure is concerned.

ಶ್ರೀ ಚೆನ್ನಪ್ಪವಾಲಿ (ಸಂಪಗಾಂವ್).—ಮಾನ್ಯ ಅಧ್ಯಕ್ಷರೆ: ನಾನು ಈಗ ಸಭೆಯ ಮುಂದೆ ತಂದಿರತಕ್ಕ ಲ್ಯಾಂಡ್ ರಿಫಾರಂಸ್ ಬಿಲ್ಲನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಇಷ್ಟು ತಡವಾದರೂ ಚಿಂತೆಯಿಲ್ಲ ನಾವು ಈಗಲಾದರೂ ಇದನ್ನು ಧೈರ್ಯದಿಂದ ತಂದಿದ್ದೇವಲ್ಲಾ ಅನ್ನುವುದಕ್ಕೆ ಸ್ವಲ್ಪ ವ್ಯಸನಪಡಬೇಕೋ ಏನು ಮಾಡಬೇಕೋ ತಿಳಿಯದಾಗಿದೆ. ನಾವೇನೋ ಇದನ್ನು ಇಲ್ಲಿ ಇಷ್ಟು ಸುಲಭವಾಗಿ ಅನುಮೋದಿಸುತ್ತಿರುವಾಗ, ಈ ಹಿಂದೆ ಆ ಮುಂಬೈ ರಾಜ್ಯದಲ್ಲಿ ಇದನ್ನು ಅನುಮೋದಿಸತಕ್ಕ ಕಾಲದಲ್ಲಿ ಅಲ್ಲಿ ಏನೇನು ಘಟನೆಗಳು ನಡೆದವು ಎಂಬುದನ್ನೆಲ್ಲಾ ಆಲೋಚನೆ ಮಾಡಿಕೊಂಡರೆ ನಾವು ಇಲ್ಲಿ ಇದರಬಗ್ಗೆ ಅಂಥ ಯಾವ ಒಂದು ಪ್ರಯತ್ನವನ್ನೂ ಮಾಡಿಲ್ಲವೆಂದು ನಾನು ನಿಸ್ಪೃಹತೆಯಿಂದ ಹೇಳಬೇಕಾಗಿದೆ. ನಾನು ಹೇಳುವುದು, ಈ ದಿವಸ ದಿನಸಿಗಳ ಧಾರಣೆ ಏರಿದೆಯೆಂಬುದನ್ನು ನೋಡಿ ಹಪ್ತೆಯನ್ನು ಸರ್ಕಾರದವರು ಏರಿಸಿರುವಂತೆ ಕಾಣುತ್ತಿದೆ. ಹಿಂದೆ ಯಾರು ಹಗೇದಲ್ಲಿ ಕಾಳನ್ನು ಹಾಕುತ್ತಿದ್ದರೋ ಅಂಥವರು ಈ ದಿವಸ ಅವರ ಮನೆಯಲ್ಲಿರತಕ್ಕ ಮಡಕೆಯಲ್ಲಿ ಕೈಹಾಕಿದರೂ ಒಂದು ಕಾಳು ಕೈಗೆ ಸಿಕ್ಕುವುದಿಲ್ಲ. ಅವರ ಮನೆಗಳಲ್ಲೆಲ್ಲಾ ಮಕ್ಕಳ ಸಂಖ್ಯೆ ಜಾಸ್ತಿಯಾಗಿರು

ತ್ತದೆ. ಎಲ್ಲಿ ಹಿಂದೆ ಒಂದು ಕುಟುಂಬದಲ್ಲಿ 5 ಜನರಿದ್ದರೋ ಅಂಥ ಕುಟುಂಬದಲ್ಲಿ ಈ ದಿವಸ 20-25 ಜನರಿರುತ್ತಾರೆ. ಅಂಥ ಒಂದು ಕುಟುಂಬಕ್ಕೆ 5-10 ಎಕರೆ ಭೂಮಿಯಿದ್ದರೆ ಹೆಚ್ಚಾಯಿತು. ಅಂಥವರಿಗೆ ಈಗ ತಿನ್ನಲಿಕ್ಕೆ ಕೂಳಿಲ್ಲದಂತಾಗಿದೆ. ಅವರು ಬೆಳೆಯತಕ್ಕ ಕಾಳು ಅವರಿಗೆ ಸಾಕಾಗುವುದಿಲ್ಲ. ಹೀಗಿರುವಾಗ ಧಾರಣೆ ಜಾಸ್ತಿಯಾಗಿದ್ದರೂ ಕೂಡ ಅದರಿಂದ ಅವರಿಗೇನೂ ಸುಖವಾಗಿಲ್ಲ. ಈ ದಿವಸ ಏರಿರತಕ್ಕ ಧಾರಣೆವಾಸಿಗಳಿಂದ ಯಾರಿಗೆ ಸುಖವಾಗಿದೆ ಎಂದರೆ-ಯಾರು 50, 100, 200, 300 ಎಕರೆಗಳ ಮೇಲೆ ಜಮೀನನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ಈ ದಿನದ ಧಾರಣೆವಾಸಿಗಳಿಂದ ಅನುಕೂಲವಾಗಿದೆ, ಅವರು ಬ್ಲಾಕ್‌ಮಾರ್ಕೆಟ್ ಕೂಡ ಮಾಡುತ್ತಿದ್ದಾರೆ. ಇಂಥ ದೊಡ್ಡ ದೊಡ್ಡ ಭೂಮಾಲೀಕರಿಗಿರತಕ್ಕ ಅವಕಾಶ ಆ 5-10 ಎಕರೆ ಜಮೀನಿಟ್ಟುಕೊಂಡು ಮನೆಯಲ್ಲಿ 25 ಜನರಿರತಕ್ಕ ಕುಟುಂಬದವರಿಗೇನು ಸುಖವಿದೆ ! ಅವರಿಗೆ ಮಾರಾಟ ಮಾಡುವುವದಕ್ಕಾದರೂ ಅವಕಾಶವೆಲ್ಲಿದೆ ? ಸರ್ಕಾರದವರು ಯಾರು ಈ ದಿನ ದೊಡ್ಡ ಆಸ್ತಿಗಳನ್ನಿಟ್ಟುಕೊಂಡಿರುತ್ತಾರೋ ಅಂಥವರ ಮೇಲೆ ಎಷ್ಟು ಕರಭಾರವನ್ನಾದರೂ ಹಾಕಿ ಬೇಡವೆನ್ನುವುದಿಲ್ಲ. ಹಾಗೆ ಮಾಡಿದ್ದರೆ ಇದು ಬಹಳ ಚೆನ್ನಾಗಿರುತ್ತಿತ್ತೆಂದು ನಾನು ಹೇಳುತ್ತೇನೆ. ಆದರೆ ಎಲ್ಲರಂತೆ ಆ ದೊಡ್ಡ ದೊಡ್ಡ ಜಮೀನ್ದಾರರೂ ಕೂಡ ಈ ದಿನ ಎಲ್ಲರಂತೆ ಏನೇನೋ ಹೇಳುತ್ತ ಅದೂ ಕೂಡ ನಡೆದಿದೆ. ಆದರೆ ನಾವು ಈ ದಿವಸ ತಿಳಿದೇ ಇದನ್ನು ಮಾಡುವುದಕ್ಕೆ ಹತ್ತಿದ್ದೇವೋ ಅಥವಾ ತಿಳಿಯದೇನೆ ಇದನ್ನು ಬದಲಾವಣೆ ಮಾಡುವುದಕ್ಕೆ ಹತ್ತಿದ್ದೇವೋ ಅದು ನನಗಂತೂ ಗೊತ್ತಾಗುತ್ತಿಲ್ಲ. ನಮ್ಮಲ್ಲಾದರೋ ಕೇವಲ 5-10 ಎಕರೆ ಭೂಮಿ ಇರತಕ್ಕವರೇ ಜಾಸ್ತಿ, 300-400 ಎಕರೆ ಭೂಮಿ ಇರತಕ್ಕವರು ಬಹಳ ಕಡಿಮೆ. ಈ ಅಲ್ಪಸ್ವಲ್ಪ ಇದ್ದ ದೊಡ್ಡ ದೊಡ್ಡ ಆಸ್ತಿವಂತರು ಈ ಹಿಂದೆ ಮುಂಬೈ ರಾಜ್ಯದಲ್ಲಿ ಟೆನೆನ್ಸಿ ಕಾಯಿದೆ ಬಂದಕೂಡಲೇ ಅವರು ಒಂದು ಸೀಲಿಂಗ್ ಲಿಮಿಟ್ಟಿನಲ್ಲಿದ್ದ ಭೂಮಿಯನ್ನು ಸಹಿತ ಅದಷ್ಟೂ ಮಾರಾಟ ಮಾಡಿಬಿಟ್ಟಿದ್ದಾರೆ. ಇನ್ನು ಸೀಲಿಂಗ್ ಲಿಮಿಟ್ಟಿನಲ್ಲಿರತಕ್ಕದ್ದು ಇದೂ ಕೂಡ ನಾಳೆ ಜಾಸ್ತಿ ಅಂತ ಹೇಳಬಹುದು ಎಂಬ ಅನುಮಾನದ ಮೇಲೆ ಅದನ್ನೂ ಕೂಡ ಮನೆಮಂದಿಗೆಲ್ಲಾ ಹಂಚಿ ಅವರವರೇ ಒಂದು ಸೊಸೈಟಿ ಎಂತ ಬೇರೆ ಮಾಡಿಕೊಂಡಿದ್ದಾರೆ. ಹೀಗೆ ಆ ದೊಡ್ಡ ದೊಡ್ಡ ಆಸ್ತಿವಂತರ ಭೂಮಿಯೆಲ್ಲಾ ಮಾರಾಟವಾಗಿ ಹೋಗಿದೆ. ಇನ್ನು ಈ ಸಣ್ಣಸಣ್ಣ ಹಿಡುವಳಿದಾರರಿಗೆ ಮಾರಾಟಕ್ಕೆ ಅವಕಾಶವಿಲ್ಲ, ಕಾರಣ ಅವರು ಬೆಳೆದದ್ದು ಅವರಿಗೇ ಸಾಲದು. ಸಾಲದ್ದಕ್ಕೆ ಈ ಬಡವರಿಗೆ ವರ್ಷಕ್ಕೊಂದುಸಾರಿ ತಪ್ಪದಂತೆ ಮಕ್ಕಳು ಬೇರೆ ಆಗುತ್ತವೆ. ಇದಕ್ಕಾದರೂ ಒಂದು ನಿಯಂತ್ರಣ ಮಾಡಿದ್ದಾರೆಯೇ ಎಂದರೆ ಅದೂ ಇಲ್ಲ. ಆದರೆ ಇದರಲ್ಲಿ ಹೆಚ್ಚಿಗೆ ಬೊಬ್ಬಾಟ ಬಡವರಿಗೆ ಇರಬೇಕಾದ್ದು ಸಹಜ. ಆದರೆ ಅದಕ್ಕೆ ಬದಲಾಗಿ ಶ್ರೀಮಂತರ ಬೊಬ್ಬಾಟವೇ ಜಾಸ್ತಿಯಾಗಿದೆ. ಇದನ್ನು ನೋಡಿದರೆ ಉಪ್ಪಿನವನು ಮಳೆಯಿಂದ ಕೆಟ್ಟೆ ಎಂದು ಅಳುತ್ತಿದ್ದರೆ, ತೆಂಗಿನಕಾಯಿನವನೂ ಸಹಾ ಅತ್ತನಂತೆ ಎಂಬ ಹಾಗಾಗಿದೆ ಈಗ. ಸರ್ಕಾರದವರೂ ಸಹಾ ಈ ದಿವಸ ಯಾರ ಬೊಬ್ಬಾಟಕ್ಕೆ ಹೆಚ್ಚಿನ ಮನ್ನಣೆ ಕೊಡಬೇಕಾಗಿತ್ತೊ ಅದನ್ನು ಕೊಡದೆ ಯಾರ ಬೊಬ್ಬಾಟಕ್ಕೇನೂ ಮನ್ನಣೆ ಕೊಡಬಾರದಾಗಿತ್ತೋ ಅದಕ್ಕೆ ಹೆಚ್ಚಿನ ಮನ್ನಣೆ ಕೊಡುತ್ತಿದ್ದಾರೆಂದು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ನೋಡಿದರೆ ಸರ್ಕಾರದವರು ಸಣ್ಣ ಸಣ್ಣವರ ಬೊಬ್ಬಾಟಕ್ಕಾಗಿ ಇದನ್ನು ತಂದಿಲ್ಲ, ದೊಡ್ಡ ದೊಡ್ಡವರ ಬೊಬ್ಬಾಟಕ್ಕಾಗಿ ಇದನ್ನು ತಂದಿರುವಂತೆ ಕಾಣುತ್ತಿದೆ. ಆದರೆ ಈ ದಿವಸ ಸರ್ಕಾರದವರು ದೊಡ್ಡ ಭೂಮಾಲೀಕರ ಬಗ್ಗೆ ಹೆಚ್ಚು ತೆರಿಗೆಯನ್ನು ಹಾಕುತ್ತೇವೆಂದು ಹೇಳಿದ್ದರೆ ನಾನು ಇದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತಿದ್ದೆನು. ಆದರೆ ಏನೋ ಒಂದು ಅನುವಾರ್ಯಕ್ಕೊಳಗಾಗಿ ನಾವೀದಿವಸ ಇದಕ್ಕೆ ನಮ್ಮ ಒಪ್ಪಿಗೆಯನ್ನು ಕೊಡಬೇಕಾಗಿದೆ. ಆದರೆ ನಮ್ಮ ರೆವಿನ್ಯೂ ಮಿನಿಷ್ಟರು ನನಗೆ ಏನ್ರೀ ನೀವು ಬರಗಾಲಕ್ಕೊಳಗಾದ ಜಿಲ್ಲೆಗಳಲ್ಲಿದ್ದರೂ ಅಂದರೆ ಬೈಲುಹೊಂಗಲ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿದ್ದರೂ ಹೆಚ್ಚು ಕಂದಾಯವನ್ನು ಹಾಕಿ ನಾನು ಕೊಡುತ್ತೇವೆ ಎಂದು ಹೇಗೆ ಹೇಳುತ್ತೀರಿ ಎಂತ ಕೇಳಿದರು. ಮನೆಯಲ್ಲಿ ನಮಗೆ ಯಥೇಷ್ಟವಾಗಿ ಕಾಳಿರುವಂತೆ ಮಾಡಿದರೆ ನಾವು ತೆರಿಗೆಯನ್ನು ಒಂದಕ್ಕೆ ನಾಲ್ಕು ಪಟ್ಟು ಕೊಡುವುದಕ್ಕೂ ತಯಾರಿದ್ದೇವೆ, ಆದರೆ ಕಾಳೇ ಇಲ್ಲ ಎಂತ ಹೇಳಿದೆ. ಇಲ್ಲಿ ಒಂದು ರೂಪಾಯಿದ್ದವನಿಗೆ 8 ಆಣೆಯನ್ನು ಕೊಡು ಎಂದು ಕೇಳುವುದಕ್ಕೂ 1,000 ರೂಪಾಯಿ ಇದ್ದವನಲ್ಲಿ 1,111 ರೂಪಾಯಿಗಳನ್ನು ಕೊಡು ಎಂದು ಕೇಳುವುದಕ್ಕೂ ಒಂದಕ್ಕೊಂದಕ್ಕೆ ಬಹಳ ವ್ಯತ್ಯಾಸವಿದೆ. ಹೆಚ್ಚು ಹಣವಿದ್ದವನು ಸಂತೋಷದಿಂದ ಕೊಡುವಂತೆ ಕಡಮೆ ಹಣವಿರತಕ್ಕವನು ಸಂತೋಷದಿಂದ ಕೊಡುವುದಿಲ್ಲ. ಆದಕಾರಣ ಇಂಥ ಸಣ್ಣ ಹಿಡುವಳಿದಾರರನ್ನು ಕೈಬಿಟ್ಟಿದ್ದರೆ ಚೆನ್ನಾಗಿತ್ತು. ಅದನ್ನು ಮಾಡದೆ ಸರ್ಕಾರದವರು ಈ ದಿವಸ ಯಾರ ಕಿಸೆಯಲ್ಲಿ ಕೈಹಾಕಲು ಸುಲಭವಾಗಿತ್ತೋ ಅಂಥವರ ಕಿಸೆಗೆ ಅಂದರೆ, ಮೃದುವಾಗಿದ್ದವರ ಕಿಸೆಗೆ ಒಳ್ಳೆಯ ಕತ್ತರಿಯನ್ನೇ ಹಚ್ಚಿದ್ದಾರೆ. ಇಂದಲ್ಲ ನಾಳೆಯಾದರೂ ಈ ಸರ್ಕಾರ ಬೇಕಾದ್ದು ಸಣ್ಣ ಕಿಸೆಯವರಿಗೇ ವಿನಾ ದೊಡ್ಡ ಕಿಸೆಯವರಿಗಲ್ಲ, ಅವರಿಗೇನಿದ್ದರೂ ಎಂದು ಗೂಂಡಾಗಿರಿ ನಡೆಯುವುದೊ ಅಂದು ಮಾತ್ರ ಅವರಿಗೆ ಸರ್ಕಾರದವರ ನೆರವು ಬೇಕಾಗಬಹುದು. ಅವರಿಗೆ

(ಶ್ರೀ ಚೆನ್ನಪ್ಪವಾಲಿ)

ಕಾಂಗ್ರೆಸ್ ಮೇಲೂ ಅಷ್ಟು ಪ್ರೇಮ ವಿಶ್ವಾಸಗಳಿಲ್ಲ. ಆದರೆ ನಾನು ಇಲ್ಲಿ ಸರ್ಕಾರದವರಿಗೆ ತಿಳಿಸಬೇಕೆಂದಿರುವುದಿಷ್ಟೆ: ಮಾನ್ಯ ಮಂತ್ರಿಗಳು ಸ್ವಲ್ಪ ಕಷ್ಟವಾದರೂ ಚಿಂತೆಯಿಲ್ಲ ಇನ್ನೊಮ್ಮೆ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಸಾಲೆನ್ಸ (ಮೂಡಬಿದ್ರೆ).—ಸನ್‌ಮಾನ್ಯ ಅಧ್ಯಕ್ಷರೇ, ಈ ಭೂಸುಧಾರಣೆಯ ಮಸೂದೆಯನ್ನು ತರುತ್ತೇವೆ ಎಂದು ಕಾಂಗ್ರೆಸ್ ಪಕ್ಷವು 1928ನೇ ಇಸವಿಯಿಂದ ಉಳುವವನನ್ನೇ ಭೂಮಿಯ ಒಡೆಯನನ್ನಾಗಿ ಮಾಡುತ್ತೇವೆ ಎಂಬ ಭರವಸೆಯನ್ನು ಕೊಟ್ಟು 1956ನೇ ಇಸವಿಯಲ್ಲಿ ಒಂದು ಬಿಲ್‌ನ್ನು ಈ ಸಭೆಯ ಮುಂದೆ ತಂದು 1961ನೇ ಇಸವಿಯಲ್ಲಿ ಮಸೂದೆಯಾಗಿ ಅದನ್ನು ಮಂಜೂರು ಮಾಡಿದರು. 5 ವರ್ಷಗಳು ಕಳೆದ ನಂತರ ಒಂದು ಕಾಯಿದೆ ಪಾಸ್ ಆಯಿತು. ಹಾಗೆಯೇ ಇನ್ನು 5 ವರ್ಷ ಕಳೆದ ನಂತರ ಈಗ 1965ನೇ ಇಸವಿಯಲ್ಲಿ ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆಯನ್ನು ಯಾವ ಉದ್ದೇಶಕ್ಕೆ ಈ ಸಭೆಯ ಮುಂದೆ ತರಲಾಗಿದೆಯೋ ಆ ಉದ್ದೇಶದ ಸ್ವಲ್ಪ ಅಂಶವೂ ಕೂಡ ಇದರಲ್ಲಿ ಅಡಕವಾಗಿಲ್ಲ. ಯಾರ ಹಿತವನ್ನು ಸಾರಿದ್ದರೋ, ಯಾರ ಹಿತಕ್ಕಾಗಿ ಈ ಮಸೂದೆಯನ್ನು ತಂದಿದ್ದಾರೋ ಅವರ ಹಿತವು ಸಾಧನೆ ಆಗುವುದಿಲ್ಲ. ಇನ್ನು ಭೂ ಹಿಡುವಳಿದಾರರು ಮತ್ತು ಭೂ ಮಾಲೀಕರು ಅಂತ ಯಾರಿದ್ದಾರೆ ಅವರ ಹಿತವೂ ಕೂಡ ಸಾಧಿಸುವುದಿಲ್ಲ. ಇನ್ನು ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸುವ ವಿಚಾರದಲ್ಲಿ ಆದರೂ ಕೂಡ ಏನಾದರು ಸಾಧನೆಯಾಗುತ್ತದೆಯೇ ಎಂದರೆ ಅದೂ ಕೂಡ ಸಾಧನೆಯಾಗುವುದಿಲ್ಲ. ಈಗ ಇರುವ ಈ ಮಸೂದೆಯು ರಾಜ್ಯದಲ್ಲಿ ಒಂದು ದೊಡ್ಡ ಗೊಂದಲವನ್ನು ಎಬ್ಬಿಸಿ ಬಡ ರೈತರಿಗೂ, ಹಿಡುವಳಿದಾರರಿಗೂ ಮತ್ತು ರಾಜ್ಯದ ಜನತೆಯ ಜೀವನಕ್ಕೂ ತುಂಬಾ ಬಾಧಕವನ್ನು ತರುವಂತಹ ಮಟ್ಟದಲ್ಲಿ ಇದ್ದು ಅವರೊಳಗೆ ಘರ್ಷಣೆಯನ್ನು ತಂದು ಕೋರ್ಟು ಕಚೇರಿಗಳಲ್ಲಿ ಅವರ ಕಾಲವನ್ನು ಕಳೆಯುವಂತಹ ಪರಿಸ್ಥಿತಿಯನ್ನು ಈ ಮಸೂದೆಯಿಂದ ತಂದು ಒದಗಿಸಿದ್ದಾರೆ.

ಸ್ವಾಮಿ, ಇದರಿಂದ ರೈತನ ಕಾಲವು ಕೋರ್ಟು ಕಚೇರಿಗಳಲ್ಲಿ, ದಣಿ ವರ್ಗದವರ ಕಾಲವು ಕೋರ್ಟು ಕಚೇರಿಗಳಲ್ಲಿ ಕಳೆಯುವಂತಾಗಿ ರಾಜ್ಯದ ಆಹಾರದ ಉತ್ಪಾದನೆ ಮತ್ತು ಇನ್ನಿತರ ಉತ್ಪಾದನೆಯ ಶಕ್ತಿಯೂ ಕೂಡ ಕುಗ್ಗುವಂತಾಗುವುದಲ್ಲದೆ ರಾಜ್ಯದ ಆಡಳಿತ ಒಂದು ಗೊಂದಲ ಮಯಕ್ಕೆ ಬರುವಂತಹ ಪರಿಸ್ಥಿತಿಯನ್ನು ಈ ಮಸೂದೆಯಿಂದ ತಂದಿದ್ದಾರೆ. ಸ್ವಾಮಿ, ನಾವಾದರೂ ಸ್ವತಂತ್ರ ಪಕ್ಷದವರು. ಒಂದು ಉತ್ತಮವಾದ ಭೂಸುಧಾರಣಾ ಮಸೂದೆಯು ಬರಬೇಕು ಮತ್ತು ಅದರಿಂದ ರಾಷ್ಟ್ರದ ಹಿತವಾಗಬೇಕೆಂಬ ನೀತಿಯನ್ನು ಒಪ್ಪಿಕೊಳ್ಳುತ್ತೇವೆ. ಮತ್ತು ಅಂಥಾದ್ದನ್ನು ಸ್ವಾಗತ ಮಾಡುತ್ತೇವೆ. ಆದರೆ ಈ ರೀತಿಯಾದ ಭೂ ಮಸೂದೆ ಅಲ್ಲ. ಬಡ ರೈತನ ಜೀವನಕ್ಕೆ ತೊಂದರೆಯಾಗಬಾರದು, ಅವನ ವಶದಲ್ಲಿರತಕ್ಕ ಭೂಮಿಯು ಪರರ ವಶವಾಗಬಾರದು, ಅವನಿಗೆ ಶಾಶ್ವತವಾದ ಜೀವನದ ಹಕ್ಕು ಇರಬೇಕು, ಅವನ ಹುಟ್ಟುವಳಿಯಲ್ಲಿ ಅವನಿಗೆ ನ್ಯಾಯವಾದ ಅಂಶವನ್ನು ಕೊಡುವಂತೆ ಆಗಬೇಕು ಅಷ್ಟು ಮಾತ್ರವಲ್ಲ, ರಾಜ್ಯದ ಬೊಕ್ಕಸದಿಂದ ಹಣವೂ ಕೂಡ ವ್ಯಯವಾಗದಾರದು, ರಾಜ್ಯದ ಜನತೆಯ ಮೇಲೆ ತೆರಿಗೆಯ ಹೊರೆ ಬೀಳಬಾರದು ಈ ರೀತಿಯ ಒಂದು ಭೂಸುಧಾರಣೆ ಅಗತ್ಯವಾಗಿದೆ.

Sri H. R. KESHAVAMURTHY.—He is not pleading for payment of compensation.

Mr. SPEAKER.—He is entitled to plead for anything he likes.

ಶ್ರೀ ಎಸ್. ಗೋಪಾಲ ಸಾಲೆನ್ಸ.—ಕಾಂಪೆನ್‌ಸೇಷನ್ ಕೊಡಲೇಬಾರದು ಎಂದು ನಾನು ಹೇಳುತ್ತಾ ಇದ್ದೇನೆ. ಕಾಂಪೆನ್‌ಷೇಷನ್ ಕೊಡುವ ಪರಿಸ್ಥಿತಿ ಬರಬಾರದು ಮತ್ತು ಕಾಂಪೆನ್ ಸೇಷನ್ ಕೊಡುವುದರಿಂದ ರಾಜ್ಯದ ಜನತೆಯ ಸುಖ ಹೆಚ್ಚಲಿಕ್ಕೆ ಇಲ್ಲ ಎಂಬುದನ್ನು ನಾವು ಒಪ್ಪುತ್ತೇವೆ ಮತ್ತು ಅದು ಸರಿಯಲ್ಲ ಎಂದು ಹೇಳುತ್ತೇವೆ. ಕಾಂಪೆನ್‌ಸೇಷನ್ ಕೊಡದೆ ಇರುವುದರಿಂದ ಇವತ್ತಿಗೂ ಅನೇಕ ಕಡೆಗಳಲ್ಲಿ ಖಾಯಂ ಗೇಣಿದಾರ ಎಂದರೆ ಮೂಲ ಗೇಣಿದಾರ ಎಂದು ನಮ್ಮಲ್ಲಿ ಇದೆ ಅವರಿಗೆ ಯಾವ ಬಾಧಕವೂ ಆಗುವುದಿಲ್ಲ. ಅವರಿಗೆ ಗೇಣಿದಾರ ಯಾರು ಎನ್ನುವುದೇ ಗೊತ್ತಿರುವುದಿಲ್ಲ. ಆದ್ದರಿಂದ ನ್ಯಾಯವಾದ ಭೂ ಸುಧಾರಣೆಯಾಗಬೇಕು. ಇದರಿಂದ ರಾಜ್ಯದ ಖಜಾನೆಗೂ ಕಷ್ಟ ಇಲ್ಲ ಮತ್ತು ಉಳುವವನಿಗೂ ಕಷ್ಟ ಇಲ್ಲ, ಗೇಣಿ ವರ್ಗಕ್ಕೂ ಕಷ್ಟ ಇಲ್ಲ ಈ ರೀತಿ ಉತ್ತಮ ಮಟ್ಟದ ಯೋಗ್ಯ ಮಟ್ಟದ ಮತ್ತು ಕಾರ್ಯಗತವಾಗತಕ್ಕ ಒಂದು ಭೂಸುಧಾರಣೆಯನ್ನು ತರದಿದ್ದರೆ, ಈ ರೀತಿಯ ಅವ್ಯವಹಾರ್ಯವಾದಂತಹ ತಿದ್ದುಪಡಿಗಳಿಂದ ಏನೂ ಪ್ರಯೋಜನವಾಗುವುದಿಲ್ಲ.

ಸ್ವಾಮಿ, ಪತ್ರಿಕೆಗಳಲ್ಲಿ ಭೂಸುಧಾರಣೆ ಮಾಡಿದ್ದೇವೆ, ಭೂಮಿಯನ್ನು ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿ ಹೆಡ್ ಲೈನ್‌ದಲ್ಲಿ ತೋರಿಸಲಿಕ್ಕೆ ಈ ತರಹ ಮಸೂದೆಗಳಿಂದ ಸಾಧ್ಯವಾದೀತೇ ಹೊರತು ಸಾಮಾನ್ಯ ಜನಗಳಿಗೆ ಅನುಕೂಲವಾದೀತು ಎಂದು ಹೇಳಲಿಕ್ಕೆ ಬರುವುದಿಲ್ಲ. ಎಷ್ಟು ಎಕರೆ ಭೂಮಿ ಹಂಚಲಿಕ್ಕೆ ಇದೆ ಎಂಬ ಅಂಕಿ ಅಂಶ ಇದೆಯೇ ? ಆ ಅಂಕಿಅಂಶ ನಿಮ್ಮಲ್ಲಿ ಇಲ್ಲದೇ ಇದ್ದರೆ ಇದನ್ನು ಹೇಗೆ ತರುತ್ತೀರಿ ? ಸೀಲಿಂಗ್ ಅಂತ ಹೇಳಿ ಒಂದು ಪರಿಮಿತಿಯನ್ನು ಹಾಕುತ್ತಾ ಇದ್ದೀರಿ, 27 ಎಕರೆ ಸ್ಥಳವನ್ನು ಇಟ್ಟಿದ್ದೀರಿ. ಈಗಲೂ ಕೂಡ ಹೆಚ್ಚು ಭೂಮಿ ಉಳ್ಳವರ ಸಂಖ್ಯೆ ಅಷ್ಟೇ ಉಳಿಯುತ್ತದೆ. ಈ ಪರಿಮಿತಿಯ ಮಟ್ಟದಲ್ಲಿ ಅವರು ತಮ್ಮ ಕುಟುಂಬಕ್ಕೆ ರಕ್ಷಣೆಯನ್ನು ಕೊಡಬಹುದೇ ಎಂದು ಸರ್ಕಾರದವರನ್ನು ಕೇಳುತ್ತೇನೆ. ಭೂಮಿಯನ್ನು ಹಂಚುವ ಈ ಒಂದು ನೀತಿಯಿಂದಾಗಿ ಗೇಣಿದಾರರಲ್ಲಿ ಘರ್ಷಣೆ, ಉಂಟಾಗುತ್ತದೆ. ಮಾತ್ರವಲ್ಲದೇ ಗದ್ದೆಯಲ್ಲಿ ಕೆಲಸ ಮಾಡುತ್ತಾ ಇರುವಂತಹ ವ್ಯವಸಾಯದ ಕೂಲಿಗಾರರು ಯಾರಿದ್ದಾರೆ. ಅವರು ಇದರಲ್ಲಿ ಯಾವ ವರ್ಗಕ್ಕೆ ಬರುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದರಲ್ಲಿ ಎಲ್ಲರಿಗೂ ಕೊಟ್ಟು, ಸ್ವಂತ ಸಾಗುವಳಿದಾರನಿಗೂ ಕೊಟ್ಟು, ಗೇಣಿದಾರನಿಗೂ ಕೊಟ್ಟು ಉಳಿದರೆ ಬೇರೆಯವನಿಗೆ ಬರುವಂತಹ ಸಂದರ್ಭ ಇದೆ. ಹಾಗಿಂದ ಮೇಲೆ ಅವನಿಗೆ ರಕ್ಷಣೆ ಎಲ್ಲಿ ಇದೆ ? ಭೂ ಮಾಲಿಕರ ಒಂದು ಹೊಸ ವರ್ಗ ಉಂಟಾಗಿ ಅವನು ಪುನಃ ಗುಲಾಮಗಿರಿಯನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ.

ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದೀರಿ. ಅದನ್ನು ಕೊಟ್ಟ ಮೇಲೆ ಮತ್ತೆ ಇನ್ನು ಉಳಿಯುವಂತಹದಾದರೂ ಏನು ? ವಿಧವೆಯರಿಗೆ ವಿನಾಯಿತಿ ಇದೆ. ಅವಿವಾಹಿತರಿಗೆ ವಿನಾಯಿತಿ ಇದೆ. ಇವರಿಗೆಲ್ಲಾ ಭೂಮಿಯನ್ನು ಕೊಡುವುದು ಎಂದರೆ ಮತ್ತೆ ಅವರ ಕೈಕೆಳಗೆ ಕೆಲವು ಜನ ಟೆನೆಂಟುಗಳಾಗಿ ಇರಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ನಾವು ಹೊಂದಾಣಿಕೆಯಿಂದ, ಸಮಾಧಾನದಿಂದ ಈ ಭೂಸುಧಾರಣೆಯನ್ನು ಜಾರಿಗೆ ತಂದು ಸುಖಮಯವಾದ ವಾತಾವರಣವನ್ನು ಹುಟ್ಟಿಸುವಂತಹ ಪರಿಸ್ಥಿಗೆ ಬಂದಿಲ್ಲ, ಆದ್ದರಿಂದ ಹಂತ ಹಂತವಾಗಿ ಮುಂದುವರಿಸಿಕೊಂಡು ಹೋಗಿ ಇಂತಹ ಒಂದು ಕಾನೂನನ್ನು ತರುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇದರಿಂದ ಸರಿಯಾದ ರಕ್ಷಣೆ ಅವರಿಗೆ ಯಾವ ವಿಧದಲ್ಲೂ ದೊರೆಯುವುದಿಲ್ಲ. ನಾನು ಭೂ ಸುಧಾರಣೆ ಬೇಡವೆಂದು ಹೇಳುವುದಿಲ್ಲ. ಮುಂದೆ ಪ್ರಾಕ್ಟಿಕಲ್ಲಾಗಿ ಸರಿಯಾದ ಭೂ ಸುಧಾರಣೆ ತನ್ನಿ. ಈಗ ತಂದಿರುವ ಕಾನೂನು ಸರಿಯಾಗಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ತಂದ ಭೂಸುಧಾರಣೆಯ ಮಸೂದೆಗೆ ನಾನು ತುಂಬಾ ಸ್ವಾಗತವನ್ನು ಕೊಡುತ್ತೇನೆ. ಇಲ್ಲಿ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಗಿಂತ ಹಿಂದೆ ಹೋಗಿ ಮೂಲ ಕಾನೂನಿನ ಮೇಲೆ ಹೆಚ್ಚಾಗಿ ಮಾತನಾಡಿದಂತೆ ಕಂಡು ಬರುತ್ತದೆ. ಅದು ಅಷ್ಟು ಅವಶ್ಯವಿತ್ತೋ ಇಲ್ಲವೋ ಗೊತ್ತಿಲ್ಲ. ಆದರೂ ಕೆಲವರು ಮೂಲತಃ ಭೂಸುಧಾರಣೆ ಕಾನೂನಿನ ವಿಷಯದಲ್ಲಿ ಕೆಲವು ತತ್ವಗಳನ್ನು ಗ್ರಹಿಸಿರುವ ಹಾಗೆ ಕಾಣಲಿಲ್ಲ. ಇದರ ಮೂಲ ತತ್ವ ಉಳುವವನೇ ಭೂಮಿಯ ಒಡೆಯನಾಗಬೇಕೆಂಬುದು, ಇಂದಲ್ಲ ನಾಳೆ ಅದನ್ನು ಜಾರಿಗೆ ತರಬೇಕೆಂಬುದು. ಆದರೆ ಈ ಪ್ರಶ್ನೆಯ ಕಡೆ ಹೆಚ್ಚಿನ ಗಮನ ಕೊಡದೆ ಇತರ ಪ್ರಶ್ನೆಗಳ ಕಡೆ ಹೆಚ್ಚು ಗಮನ ಹರಿಸಿ ಆ ಮೂಲಕ ಸಲಹೆಗಳನ್ನು ವ್ಯಕ್ತಪಡಿಸುವುದು ಸರಿಯಲ್ಲವೆಂದು ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮೂಲ ತತ್ವದ ಕಡೆಗೆ ನಮ್ಮೆದುರಿಗಿರುವ ತಿದ್ದುಪಡಿ ಮಸೂದೆ ಎಷ್ಟುಮಟ್ಟಿಗೆ ಗಮನಕೊಟ್ಟಿದೆ, ಎಷ್ಟು ಸಹಾಯಕವಾಗುತ್ತದೆ ಎಂದು ವಿಚಾರ ಮಾಡಬೇಕು. ಎಷ್ಟೋ ಜಮೀನುದಾರರು ಇದು ಕ್ರಾಂತಿಕಾರಕವಾದ ಕಾನೂನಲ್ಲ, ಇದರಿಂದ ರೈತರು ಉದ್ಧಾರವಾಗುವುದಿಲ್ಲ, ಇದೊಂದು ಬಗೆಯ ಮಧ್ಯಂತರ ರಾಜಿ ಸೂತ್ರದ ಪ್ರಕಾರ ತಂದ ಕಾನೂನು ಎಂದು ಹೇಳಬಹುದು. ಈ ಕಾನೂನನ್ನು ಹಿಂದೆ ಪಾಸು ಮಾಡಬೇಕಾದರೆ ಈ ಸಭೆಯಲ್ಲಿ ಎಷ್ಟೋ ಶ್ರಮವಾಯಿತು, ಪಾಪ ಕಡಿದಾಳ್ ಮಂಜಪ್ಪನವರು ಕಷ್ಟಪಟ್ಟು ಹೇಗೋ ಪಾಸುಮಾಡಿಸಿಕೊಂಡರು. ಅನಂತರ 4-5 ವರ್ಷಗಳಿಂದ ಅನೇಕ ಕಾರಣಗಳಿಂದ ಇದನ್ನು ಜಾರಿಗೆ ತರಲು ತೊಂದರೆ ಆಯಿತು. ಆಮೇಲೆ ಜುಲೈ ಒಂದರ ವೇಳೆಗೆ ಇದನ್ನು ಜಾರಿಗೆ ತರುತ್ತೇವೆಂದು ಕಂದಾಯ ಮಂತ್ರಿಗಳು ಘೋಷಣೆಮಾಡಿ ಬಂದ ಸಣ್ಣ ಪುಟ್ಟ ಅಡಚಣೆ, ಅಡ್ಡಿ ಆತಂಕಗಳನ್ನು ತಾಳ್ಮೆಯಿಂದ ಶಾಂತ ರೀತಿಯಿಂದ ಎದುರಿಸಿ ಈ ಮಸೂದೆಯನ್ನು ತಂದಿರುವುದು ಒಳ್ಳೆಯ ಪ್ರಗತಿಯ ಹೆಜ್ಜೆ, ಒಳ್ಳೆಯ ಕೆಲಸ ಎಂದು ಹೇಳಬಹುದು.

ಇನ್ನು ಇದರಲ್ಲಿರುವ ವಿವರಗಳನ್ನು ನೋಡೋಣ. 1961 ನೆಯ ಇಸವಿ ನಂತರ ಆದ ವ್ಯವಹಾರಗಳನ್ನು ಮನ್ನಿಸುವುದಿಲ್ಲ ಎಂದು ತಿಳಿಸಿದ್ದಾರೆ, ಇದೊಂದು ರೀತಿಯಿಂದ ಸರಿಯಾಗಿದೆ ಎಂದು ಹೇಳಬಹುದು. ಆದರೆ ಇದು ಇಡೀ ರಾಜ್ಯದ ದೃಷ್ಟಿಯಿಂದ ಅಲ್ಲದಿದ್ದರೂ ಒಂದು ಭಾಗದ

(ಶ್ರೀ ಎ. ಜೆ. ದೊಡ್ಡಮೇಟಿ)

ದೃಷ್ಟಿಯಿಂದ ನೆಟ್ಟಗಿವೆ. ಉತ್ತರ ಕರ್ಣಾಟಕ ಮತ್ತು ಹೈದರಾಬಾದು ಕರ್ಣಾಟಕಗಳಲ್ಲಿ ಹಿಂದಿನ್ದ ಸೀಲಿಂಗಿಗಿಂತ ಹೆಚ್ಚಿಗೆ ಬಿಡುಗಡೆ ಮಾಡುವುದಕ್ಕೆ ಅಲ್ಲಿನ ಜಮೀನುದಾರರಿಗೆ ಅಧಿಕಾರವಿಲ್ಲ. ಇದು ನ್ಯಾಯವಲ್ಲ ಎಂದು ಹೇಳುವ ಕೆಲವು ಸಂದರ್ಭಗಳಿವೆ. ಇದೊಂದು ತಾರತಮ್ಯ ಭಾವನೆಯನ್ನು ತೋರಿಸುತ್ತದೆಂಬ ವಾದವಿದೆ. ಆದರೆ ತಾರತಮ್ಯದ ಪ್ರಶ್ನೆ ಇಲ್ಲಿಲ್ಲ. ಇದು ಜಮೀನುದಾರರಿಗೆ ಕಾಠಿಣ್ಯತೆಯಲ್ಲ. ಒಮ್ಮೆ ಸಾಗುವಳಿದಾರರಿಗೆ, ರೈತರಿಗೆ ಕೊಟ್ಟ ಹಕ್ಕನ್ನು ಈ ಕಾಯಿದೆ ಮೂಲಕ ಮರಳಿ ಕಿತ್ತುಕೊಳ್ಳುವುದು ಸರಿಯಲ್ಲ ಎಂಬ ಧೋರಣೆಯಿಂದ ತಾರತಮ್ಯ ಭಾವನೆ ಇದೆಯೆಂದು ಕಂಡರೆ ಅದು ಒಳ್ಳೆಯ ಮಾತು ಎಂದು ಹೇಳಬಹುದು. ಕಂದಾಯ ಮಂತ್ರಿಗಳು ಧೈರ್ಯ ಮಾಡಿದ್ದರೆ ಇದನ್ನು ತಪ್ಪಿಸಬಹುದಾಗಿತ್ತು. ಈಗ ಉತ್ತರ ಕರ್ಣಾಟಕದಲ್ಲಿ 48 ಎಕರೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶ ಏನಿದೆ ಅದನ್ನು ಹಳೆಯ ಮೈಸೂರು ಅಥವಾ ಇತರ ಕಡೆಗಳಲ್ಲಿರುವವರಿಗೆ, ಲಾವಣಿದಾರರಿಗೆ ಅನ್ವಯಿಸುವಂತೆ ಮಾಡಿದ್ದರೆ ಪಕ್ಷಪಾತವಿಲ್ಲದೆ ಸಮನ್ವಯ ದೃಷ್ಟಿಯಿಂದ ಮಾಡಿದಂತಾಗುತ್ತಿತ್ತು, ಏಕೆ ಇದಕ್ಕೆ ಧೈರ್ಯ ಮಾಡಲಿಲ್ಲವೋ ಗೊತ್ತಾಗುವುದಿಲ್ಲ. ವಿನಾಯಿತಿ ಪ್ರಶ್ನೆಯ ಮೇಲೆ ಬಹಳಷ್ಟು ಮಾತು ನಡೆದಿದೆ. 20 ದೇವಸ್ಥಾನಗಳಿಗೆ ವಿನಾಯಿತಿ ಇದೆ. ದೇವಸ್ಥಾನದ ಜಮೀನುಗಳನ್ನು ಲಾವಣಿದಾರರು, ಧಡೂತಿ ಜನರು ಕೆಲವರು ಲಾವಣಿ ಹೆಸರಿನಲ್ಲಿ ದುರುಪಯೋಗಪಡಿಸಿಕೊಂಡರೆ ಆ ಜಮೀನುಗಳನ್ನು ಸರಕಾರ ಹರಾಜು ಮಾಡಿ ದೇವರ ಹೆಸರಿನಲ್ಲಿ ಜಮಾಮಾಡುತ್ತಾರೆಂದು ಹೇಳುತ್ತಾರೆ. ಈ ಮಾತಿನಲ್ಲಿ ತಥ್ಯವುಂಟು. ಕೆಲವರು ಈ ಕಾನೂನನ್ನು ದುರುಪಯೋಗ ಮಾಡಿಕೊಂಡು ನೂರಾರು ಎಕರೆ ಜಮೀನನ್ನು ತಾವೇ ಇಟ್ಟುಕೊಂಡು ದೇವಸ್ಥಾನದ ಸದುದ್ದೇಶಕ್ಕೆ ಚ್ಯುತಿ ತರುತ್ತಿದ್ದಾರೆ ಎಂಬ ವಾದವಿದೆ. ಅಂಥವರು ಎಷ್ಟು ಮಂದಿ ಇದ್ದಾರೆ? ಕಂದಾಯ ಮಂತ್ರಿಗಳು ಇದಕ್ಕೆ ವಿವರ ಕೊಡಲಿಲ್ಲ. ಈ 20 ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ 5—10 ಎಕರೆ ಇರುವವರೆಷ್ಟು, ದಡೂತಿ ಆಸಾಮಿಗಳೆಷ್ಟು? ಈಗ ವಿನಾಯಿತಿ ತೆಗೆದುಕೊಳ್ಳಲಿ. ಆದರೆ ಕಾನೂನನ್ನು ಜಾರಿಗೆ ಕೊಡುವಾಗ, ಹರಾಜು ಹಾಕುವಾಗ 4 ಎಕರೆ, 5 ಎಕರೆ 10 ಎಕರೆ, ಇರುವ ದೇವಸ್ಥಾನಗಳಿದ್ದರೆ ಅದಕ್ಕೆ ಸಂಬಂಧಪಟ್ಟವರಿಗೆ ತೊಂದರೆ ಮಾಡಬಾರದು. ಧಡೂತಿ ಜನರು ಲಾವಣಿ ಹಕ್ಕನ್ನು ದುರುಪಯೋಗಮಾಡಿಕೊಳ್ಳುವುದು ನಿಜವಾದರೆ ಮಾತ್ರ ಅಂಥ ಜಮೀನನ್ನು ಮಾತ್ರ "ಪಬ್ಲಿಕ್ ಆಕ್ಷನ್"ನಲ್ಲಿ ಹರಾಜುಮಾಡಿ ಹಣ ದೇವಸ್ಥಾನಕ್ಕೆ ಜಮಾ ಮಾಡಬಹುದು. ಉಳಿದ ಸಣ್ಣಪುಟ್ಟ ಜಮೀನುಗಳಿಗೆ ವಿನಾಯಿತಿ ಕೊಟ್ಟಿರುವುದಕ್ಕೆ ಅದಕ್ಕೆ ಸಂಬಂಧಪಟ್ಟ ದೇವಸ್ಥಾನಗಳವರಿಗೆ ತೊಂದರೆ ಮಾಡಬಾರದು, ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಹೆಚ್ಚು ವಿವರ ಬೇಕು. ಇದನ್ನು ಬಹಳ ಸೂಕ್ಷ್ಮ ರೀತಿಯಿಂದ ಮತ್ತು ಸ್ವತಃ ವಿಚಾರಮಾಡಿ ಸೂಕ್ತ ಕ್ರಮ ಕೈಕೊಳ್ಳಬೇಕು. ನನ್ನ ವೈಯುಕ್ತಿಕ ಅಭಿಪ್ರಾಯ ಈ ದೇವಸ್ಥಾನಗಳಿಗೆ ವಿನಾಯಿತಿ ಕೊಡುವುದರಲ್ಲಿ ಕೆಲವು ಅಗತ್ಯದ ಅನುಕೂಲತೆಗಳು ಆಗಬಹುದಾದರೂ ಕೆಲವೊಂದು ಆರೋಪಗಳು ಬರುತ್ತವೆ. ಆಮೇಲೆ ಇದೇ ರೀತಿ ಮಠಾಧಿಪತಿಗಳಿಗೂ ವಿದ್ಯಾ ಸಂಸ್ಥೆಗಳಿಗೂ ಏಕೆ ಹೀಗೆ ವಿನಾಯಿತಿ ಕೊಡಬಾರದು ಎಂಬ ಪ್ರಶ್ನೆ ಬರುತ್ತದೆ. ಬೇಕಾದರೆ ಏನಾದರೂ ಒಂದು ನಿಬಂಧನೆಮಾಡಿ ಈ ವಿನಾಯಿತಿಯನ್ನು ಷೆಡ್ಯೂಲ್ ಲಿಸ್ಟಿನಲ್ಲಿ ಕೈಬಿಟ್ಟರೆ ಒಳ್ಳೆಯದು. ಇದನ್ನು ವಿಚಾರಮಾಡಿ. ಬಿಟ್ಟರೆ ಹೆಚ್ಚು ಒಳ್ಳೆಯದು, ಇಲ್ಲದಿದ್ದರೆ ಬೇರೆ ಜನರಿಗೇಕೆ ಕೊಡಲಿಲ್ಲ ಎಂದು ಗಲಾಟೆ ಪ್ರಾರಂಭವಾಗುತ್ತದೆ. ಇದಕ್ಕೆ ಇಲ್ಲಿ ಉತ್ತರ ಕೊಡುವುದಲ್ಲದೆ ಹೊರಗೂ ಸಹ ಉತ್ತರ ಹೇಳಬೇಕಾಗುತ್ತದೆ. ಈ ಪ್ರಶ್ನೆಯನ್ನು ವಿಚಾರಮಾಡಿನೋಡಿ.

ಈಗ ರಾಜ್ಯದೊಳಗೆ ಕಾಫಿ ಪ್ಲಾಂಟರುಗಳಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಅದೇ ರೀತಿ ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿ ಕೊಡಬೇಕೆಂದು ತೆಂಗು ಮತ್ತು ಅಡಕೆ ಬೆಳೆಯುವವರು ಕೇಳುತ್ತಾರೆ. ಕಾಫಿ ತೋಟಗಳಿಗೆ ಏಕೆ ವಿನಾಯಿತಿಯನ್ನು ಕೊಟ್ಟಿದ್ದಾರೆಂದರೆ ಅದರಿಂದ ವಿದೇಶಿ ವಿನಿಮಯ ಬರುತ್ತದೆ, ದೊಡ್ಡ ಸಮುದಾಯದ ಮೇಲೆ ಸಾಗುವಳಿ ಮಾಡಬೇಕಾಗುತ್ತದೆ, ಅದಕ್ಕೆ ಅನೇಕ ತೊಂದರೆಗಳಿವೆ ಎಂದು ಹೇಳುತ್ತಾರೆ. ಇಷ್ಟೆ ಅಲ್ಲ, ಇನ್ನೂ ಒಂದು ಮಾತನ್ನು ಸಹ ಹೇಳುತ್ತಾರೆ. ಕಾಫಿ ತೋಟಗಳನ್ನು ಯಾರಾದರೂ ಈಗಲೂ ಮಾಡುವವರಿದ್ದರೆ ಬೇಕಾದಷ್ಟು ಜಮೀನನ್ನು ಅವರಿಗೆ ಕೊಡುತ್ತೇವೆ ಎಂದು ಹೇಳುತ್ತಿರುವ ಮಾತುಗಳು ತಮ್ಮ ಲಕ್ಷಕ್ಕೆ ಬಂದಿವೆ. ಆ ವಿವರಗಳು ನನಗೆ ಸರಿಯಾಗಿ ಗೊತ್ತಿಲ್ಲ. ಇದರ ವಿರುದ್ಧ ಮಾತುಗಳೂ ಇವೆ. ಈಗ ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿ ಕೊಡಬಾರದು ಎಂದು ನಿರ್ಧಾರ ಮಾಡಿರುವುದನ್ನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಅದಕ್ಕೇ ಗಟ್ಟಿಯಾಗಿ ಅಂಟಿಕೊಳ್ಳಬೇಕು. ವಿನಾಯಿತಿಯನ್ನು ಕೊಡಲಿಕ್ಕೆ ಹೋದರೆ ಯಾವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆಯೋ ಆ ಉದ್ದೇಶ ವ್ಯರ್ಥವಾಗುವಂಥ ಸಂಭವವಿದೆ.

ಜಮೀನ್ದಾರರಿಗೆ ಎರಡು ಸಾವಿರ ರೂಪಾಯಿ ಪರಿಹಾರ ಧನವನ್ನು ನಗದಾಗಿ ಕೊಡಬೇಕು ಎಂದು ಮಾಡಿದ್ದಾರೆ. ಇವತ್ತಿನ ಲೇಟೆಸ್ಟ್ ಫಿಗರ್ ಪ್ರಕಾರ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಎಷ್ಟು ಎಕರೆ ಜಮೀನಿಗೆ ಸರ್ಕಾರದವರು ಪರಿಹಾರ ಕೊಡುವ ಸಂಭವವಿದೆ, ಅದರಿಂದ ಎಷ್ಟು ಲಕ್ಷ ಅಥವಾ ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ ಎನ್ನುವುದನ್ನು ಸೂಚನೆ ಮಾಡಿದ ಕಾಲಕ್ಕೆ ಹೇಳಿದ ಹಾಗೆ ಕಾಣುವುದಿಲ್ಲ. ಇದನ್ನು ಹೇಳಬೇಕು. ಹಿಂದೊಮ್ಮೆ ಸೂಚನೆ ಕೊಟ್ಟಾಗ 10 ಸಾವಿರ ರೂಪಾಯಿನಂತೆ ಕೊಟ್ಟರೆ ಸುಮಾರು 50 ಕೋಟಿ ರೂಪಾಯಿ ಸರ್ಕಾರಕ್ಕೆ ಬೇಕಾಗುತ್ತದೆ ಎಂದು ಹೇಳಿದರು. ಇವತ್ತು ಆ ಭೂಮಿಗಳು ಉಳಿದಿರಲಿಕ್ಕಿಲ್ಲ. ಈಗ ಇರುವ ಭೂಮಿಗಳಿಗೆ 25 ಕೋಟಿ ರೂಪಾಯಿ ಕೊಡಬೇಕಾಗುತ್ತದೆ ಎಂದು ಹಿಡಿದುಕೊಂಡರೆ ಎರಡು ಸಾವಿರ ರೂಪಾಯಿ ಪ್ರಕಾರ ಎರಡೂವರೆ ಕೋಟಿ ರೂಪಾಯಿ ಕೂಡ ಬೇಕಾಗುತ್ತದೆ ಎಂದು ಹಿಡಿದುಕೊಳ್ಳೋಣ. ಹತ್ತು ಸಾವಿರ ರೂಪಾಯಿವರೆಗೂ ನಗದು ಕೊಡಬೇಕು ಎಂದು ಕೇಳುವಂಥ ಸ್ನೇಹಿತರು ಸರ್ಕಾರದ ಹತ್ತಿರ ಹಣವಿದೆಯೇ ಇಲ್ಲವೇ ಎಂದು ವಿಚಾರ ಮಾಡಿದರೆ ಗೊತ್ತಾಗುತ್ತಿತ್ತು. ಸರ್ಕಾರ ಎಲ್ಲಿಂದ ತಂದು ಕೊಡಬೇಕು ? ಎರಡು ಸಾವಿರ ರೂಪಾಯಿ ಕೊಡಬೇಕೆಂದು ಮಿತಿ ಹಾಕಿರುವುದು ಸರ್ಕಾರದ ಔದಾರ್ಯ ಎಂದು ಹೇಳುತ್ತೇನೆ. ಆ ಔದಾರ್ಯವನ್ನು ಎಷ್ಟುಮಟ್ಟಿಗೆ ಪಾಲಿಸುವುದಕ್ಕೆ ಸಮರ್ಥವಾಗುತ್ತದೆಯೋ ಗೊತ್ತಾಗುವುದಿಲ್ಲ. ಆ ಸಾಮರ್ಥ್ಯವನ್ನು ಈ ಸಭೆಯಲ್ಲಿ ವಿಷದೀಕರಿಸಬೇಕು ಎಂದು ಹೇಳುತ್ತಿದ್ದೇನೆ. ಎರಡು ಸಾವಿರ ರೂಪಾಯಿ ಪ್ರಕಾರ ರೊಕ್ಕದ ಪರಿಹಾರ ಕೊಡುವುದಕ್ಕೆ ಎಷ್ಟು ರೂಪಾಯಿ ಬೇಕಾಗುತ್ತದೆ, ಅದನ್ನು ಎಲ್ಲಿಂದ ಸಂಪಾದನೆ ಮಾಡುತ್ತಾರೆಂದು ಹೇಳಿದರೆ ನೆಟ್ಟಗೆ ಆದೀತು. ಎರಡು ಸಾವಿರ ರೂಪಾಯಿ ಕೂಡ ಕೊಡದೆ ಅವರಿಗೆಲ್ಲ ಬಾಂಡ್‌ಗಳನ್ನು ಕೊಟ್ಟರೆ ತಪ್ಪಲ್ಲ. ಅನೇಕ ಜನರು ಸಂಬಳ ಸಾರಿಗೆಗಳನ್ನು ಪಡೆಯುತ್ತ ಭೂಮಿಯನ್ನು ಪಡೆದುಕೊಂಡಿದ್ದಾರೆ. ಅಂಥವರಿಗೆ ಬಾಂಡ್ ಕೊಟ್ಟರೆ ತಪ್ಪಲ್ಲ. ಜಮೀನ್ದಾರರಿಗೆ, ಸರ್ಕಾರಿ ಅಧಿಕಾರಿಗಳಿಗೆ ರೊಕ್ಕ ಕೊಟ್ಟರೆ ಬಹಳ ಮಂದಿ ಜಮೀನ್ದಾರರು ರೊಕ್ಕವನ್ನು ಖರ್ಚುಮಾಡಿಕೊಂಡು ಊರಿಗೆ ಹೋಗುತ್ತಾರೆ. ಬಾಂಡ್ ರೂಪದಲ್ಲಿ ಕೊಟ್ಟರೆ ಅವರ ಮಕ್ಕಳು, ಮೊಮ್ಮಕ್ಕಳು ಅದರ ಪ್ರಯೋಜನವನ್ನು ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಕೂಡ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಉತ್ತರ ಕರ್ಣಾಟಕದ ಜಮೀನ್ದಾರರಿಗೆ ಇದ್ದಂಥ ಪರಮಾವಧಿಯನ್ನು ಕೊಡಬೇಕು. ಈ ಒಂದು ಕಾಯಿದೆಯಿಂದ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. 48 ಎಕರೆ ಪರಮಾವಧಿ ಮಿತಿ ಏನಿದೆ ಅದನ್ನೇ ಆ ಕಡೆಗೆ ಅನ್ವಯಿಸಬೇಕೆಂದು ಹೇಳುತ್ತೇನೆ.

ಹಳ್ಳಿಗಳಿಗೆ ಮಾತ್ರ ಸೀಲಿಂಗ್ ಲಿಮಿಟ್ ಹಾಕುತ್ತೀರಿ ಆದರೆ ನಗರಗಳಿಗೆ ಏಕೆ ಬೇಡ ಎಂದು ಕೇಳುವುದು ನ್ಯಾಯವಾದ ಮಾತು. ನಗರಗಳಲ್ಲಿ ಎಷ್ಟೋ ಜನರು ಲಕ್ಷಾವಧಿ ರೂಪಾಯಿ ಗಳಿಸುವವರಿದ್ದಾರೆ. ಐದು ಹತ್ತು ಸಾವಿರ ರೂಪಾಯಿ ಬಾಡಿಗೆ ಬರುವಂಥ ಜನರಿದ್ದಾರೆ. ಸರ್ಕಾರಿ ನೌಕರರು ನೌಕರಿ ಮಾಡುವುದರ ಮೂಲಕ ಸಂಪಾದಿಸುವುದಲ್ಲದೆ ಜಮೀನುಗಳನ್ನು ಇಟ್ಟುಕೊಂಡಿದ್ದಾರೆ. ಅಂಥ ಜಮೀನುಗಳನ್ನು ಕಿತ್ತುಕೊಳ್ಳುವುದರಿಂದ ತೊಂದರೆ ಇಲ್ಲ. ಕೇವಲ ವ್ಯವಸಾಯದ ಮೇಲೆ ಅವಲಂಬಿಸಿರುವ ಜನರಿಗೆ ನಾಲ್ಕು ಎಕರೆ, ಎಂಟು ಎಕರೆ ಇದ್ದವರಿಗೆ ತೊಂದರೆಯಾಗುತ್ತದೆ. ಇದರಿಂದ ಸಾಮಾನ್ಯ ಹಿಡುವಳಿದಾರನಿಗೆ ಸಣ್ಣ ಹಿಡುವಳಿದಾರನಿಗೆ ರಕ್ಷಣೆ ಕೊಡುವುದು ಅವಶ್ಯ. ಸಣ್ಣ ಹಿಡುವಳಿದಾರರಿಗೆ ರಕ್ಷಣೆ ಕೊಡುವ ಭರದಲ್ಲಿ ಶಾಶ್ವತವಾಗಿ ಸರ್ಕಾರ ಮತ್ತು ರೈತ ಇವರ ನಡುವೆ ಜಮೀನ್ದಾರ ವರ್ಗ ಸೂರ್ಯಚಂದ್ರರಿರುವವರೆಗೂ ಮುಂದುವರಿಯಬಹುದು ಎನ್ನುವ ಅನುಮಾನ ನಮಗೆ ಇದೆ ಈ ರೀತಿ ಮಾಡಬಾರದು ಎಂದು ಹೇಳುತ್ತೇನೆ.

ಈ ಕಾನೂನನ್ನು ಜಮೀನ್ದಾರರ ಹಿತ ಸಂಬಂಧವಿದ್ದವರು ವಿರೋಧಿಸಿದ್ದು ದೊಡ್ಡ ತಪ್ಪು ಎಂದು ಹೇಳಲಾರೆ. ವ್ಯವಸಾಯಗಾರರೇ ರೈತರ ಹೆಸರಿನಲ್ಲಿ ವಿರೋಧ ಮಾಡಿದ್ದು ಆಶ್ಚರ್ಯವೆನಿಸುತ್ತದೆ. ಸ್ವತಂತ್ರ ಪಕ್ಷದವರು ಇದನ್ನು ವಿರೋಧಿಸಿದ್ದಾರೆ. ಆದರೆ ಸ್ವತಂತ್ರ ಪಕ್ಷದ ಒಬ್ಬ ಸದಸ್ಯರು ಈ ಮಸೂದೆಯನ್ನು ಬಹಳ ಉತ್ಸಾಹದಿಂದ ಸಮರ್ಥನೆ ಮಾಡಿರುತ್ತಾರೆ. ಇದು ನಮಗೆ ಒಂದು ರೀತಿಯ ಸಂತೋಷ. ಸರ್ಕಾರದವರು ಹೆಚ್ಚು ವಿಳಂಬ ಮಾಡದೆ ನಗರಕ್ಕೂ ಸಹ ಒಂದು ಉತ್ಪತ್ತಿಯ ಮಿತಿಯನ್ನು ಜಾರಿಗೆ ತರಬೇಕು ಎಂದು ಒತ್ತಿ ಹೇಳುತ್ತೇನೆ. ಅಂಥ ಕಾನೂನನ್ನು ಬೇಗನೆ ತರಬೇಕು. ಹಿಂದೆ ಒಂದು ಕಾಯಿದೆಯನ್ನು ತಂದಿದ್ದರು. ಪುನಃ ಆ ಕಾಯದೆಯನ್ನು ತರಬೇಕು ಎಂದು ಹೇಳುತ್ತಿದ್ದೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಭೂ ಸುಧಾರಣಾ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆಯಾಗುತ್ತಿರುವ ಈ ಸಂದರ್ಭದಲ್ಲಿ ನನಗೆ ಕಂಡುಬರುತ್ತಿರುವ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತಂದು, ಅದಕ್ಕೆ ತಕ್ಕ ತಿದ್ದುಪಡಿಯನ್ನು ತರಬೇಕು ಮತ್ತು ಎಲ್ಲರಿಗೂ ನ್ಯಾಯ ದೊರಕಿಸಿಕೊಡಬೇಕೆಂದು ಸೂಚಿಸಲು ನಿಂತಿದ್ದೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುತ್ತ, ತಾವು ಮೊದಲು ಈ ಮಸೂದೆಯನ್ನು ಮಂಡಿಸಿದಾಗ ಬಹಳ ಜನಗಳಿಗೆ ಕೋಪ ಬಂತೆಂದೂ, ಅವರು ಪ್ಲಾನಿಂಗ್ ಕಮಿಷನ್ ಅವರ ಆದೇಶದಂತೆ ಅದನ್ನು ತರಲೇ ಬೇಕಾಯಿತೆಂದೂ, ಇದರಿಂದ ಬಹಳ ರೈತರಿಗೆ ಅನುಕೂಲವಾಗುತ್ತದೆಂದೂ ಹೇಳಿದರು. ಅದಲ್ಲದೆ ಅವರು ಮಾತನಾಡುತ್ತಿದ್ದಾಗ ಹೆಣ್ಣು ಮಕ್ಕಳಿಗೆ ಸಾಕಷ್ಟು ಅನುಕೂಲ ಸಿಕ್ಕಿದೆ ಎಂದೂ ಹೇಳಿದಾಗ ನಾನು ಅದರ ನ್ಯೂನತೆಯನ್ನು ತಿಳಿಸಿದ್ದಕ್ಕೆ, ನಾನೂ ಅಸೆಂಬ್ಲಿಯಲ್ಲಿದ್ದುದರಿಂದ ಅದಕ್ಕೆ ನಾನೂ ಪಾರ್ಟಿ ಎಂದೂ, ಬಹುಮತದಲ್ಲಿ ಪಾಸಾಗಿದೆಯೆಂದೂ ತಿಳಿಸಿದರು.

ಮೊದಲನೆಯದಾಗಿ ನಾನು ಇದಕ್ಕೆ ಖಂಡಿತ ಸಮ್ಮತಿಯನ್ನು ಕೊಟ್ಟಿಲ್ಲ. ಅದಕ್ಕೆ ನಾನು ಪಾರ್ಟಿಯೂ ಅಲ್ಲ. ನಾನು ಮೂರು ಸಾರಿ ಭಾಷಣ ಮಾಡಿರುವ ಪ್ರತಿಗಳನ್ನೂ ಬೇಕಾದರೆ ತರಿಸಿ ನೋಡಬಹುದು. ಆದರೆ ಬಹುಮತದಲ್ಲಿ ಅನುಮತಿ ದೊರೆಯಿತು ಎಂದರೆ ಅದಕ್ಕೆ ನನ್ನ ಬಾಯಿ ಕಟ್ಟಿದೆ. ಏಕೆಂದರೆ, ಈಗ ಏನಾದರೂ ಮೆಜಾರಿಟಿ ಒಪಿನಿಯನ್ ಪ್ರಕಾರ ಹೆಣ್ಣು ಗಂಡು ಮಾಡಿ, ಗಂಡು ಹೆಣ್ಣು ಮಾಡಲು ಬರುತ್ತಿದ್ದರೆ, ಸಾಧ್ಯವಾಗುತ್ತಿದ್ದರೆ ಅದನ್ನೂ ಮಾಡಿ ಅನೇಕ ಕೆಲಸಗಳಿಗೆ ಉಪಯೋಗಿಸುತ್ತಿದ್ದರು. ಆದರೆ 'ಮೆಜಾರಿಟಿ ಸೈನ್ಸ್' ಇನ್ನೂ ಅಷ್ಟು ದೂರ ಮುಂದುವರಿದಿಲ್ಲ. ಆದರೂ ಈ 'ಮೆಜಾರಿಟಿ'ಯಿಂದ ಆಗುತ್ತಿರುವ ಅನಾಹುತ ಅಷ್ಟಿಷ್ಟಲ್ಲ. ಈ ಭೂ ಸುಧಾರಣೆಯಿಂದ ಏನಾದರೂ ಹೆಚ್ಚು ಆಹಾರ ಬೆಳೆಸಲು ಸಾಧ್ಯ ಎಂದರೆ, ಆ ರೀತಿ ಯಾರಾದರೂ ತಿಳಿದುಕೊಂಡಿದ್ದರೆ, ಅದು ಸಮುದ್ರದ ನೀರು ಕುಡಿದರೆ ಬಾಯಾರಿಕೆ ಇಂಗುತ್ತದೆ ಎಂದು ಹೇಳಿದಷ್ಟು ಬಲ (ಸ್ಟ್ರಂಗ್ತ್) ಈ ವಾದದಲ್ಲಿದೆ ಎಂದು ಹೇಳಬಹುದು.

ಸಣ್ಣ ಪುಟ್ಟ ರೈತರೆಲ್ಲ ಸೇರಿ ಕೋ-ಆಪರೇಟಿವ್ ಫಾರಂ ಮಾಡಬೇಕು, ಇಲ್ಲದಿದ್ದರೆ ಸಣ್ಣ ಸಣ್ಣ ಹಿಡುವಳಿಯಲ್ಲಿ rotation of cropsಗೆ ಅನುಕೂಲವಿಲ್ಲ ಎಂದೂ, ಜಾಸ್ತಿ ಜಮೀನು ಇರಬೇಕೆಂದೂ ಒಂದು ಕಡೆ ತಜ್ಞರು ಹೇಳುತ್ತಾರೆ. ಅದಕ್ಕಾಗಿ ಕೋ-ಆಪರೇಟಿವ್ ಫಾರ್ಮಿಂಗ್‌ಗೆ ಉತ್ತೇಜನ ಕೊಡಬೇಕು ಎನ್ನುವ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ. ಅದೇ ಧ್ವನಿಯಲ್ಲಿ ಜಾಯಿಂಟ್ ಫ್ಯಾಮಿಲಿಯಲ್ಲಿ ಒಟ್ಟಾಗಿರುವ ಜಮೀನನ್ನೆಲ್ಲ ಚುಕ್ಕಾ ಚೂರಾಗಿ ವಿಭಾಗ ಮಾಡಿಸಿ, ಅವರ ಮನೆ ಮಠ ಎಲ್ಲವನ್ನೂ ಹಂಚಿ ಅವರಲ್ಲಿರುವ ಒಗ್ಗಟ್ಟನ್ನೆಲ್ಲ ಒಡೆದು ಹಾಳು ಮಾಡಿ ಪುಣ್ಯ ಕಟ್ಟಿಕೊಳ್ಳ ಹೊರಟಿರುವ ಈ ಕಾನೂನೆಲ್ಲ ವಿರೋಧಾಭಾಸ.

ಸರ್ಕಾರ ಹಳ್ಳಿಯವರನ್ನೂ, ಡೆಲ್ಲಿಯವರನ್ನೂ ಒಂದೇ ಸಮನಾಗಿ ಕಂಡು, ಅವರಿಗೆ equal treatment, equal justice, equal facilities ಕೊಡಬೇಕೆಂದು ಬಾಯಲ್ಲಿ ಹೇಳಿಕೊಂಡು, social pattern of society ಸ್ಥಾಪನೆ ಮಾಡುತ್ತೇವೆ ಎಂದು ಎದೆ ತಟ್ಟಿಕೊಂಡು ಹೊರಟ ಸರ್ಕಾರ ಬಗ್ಗಿಕೊಂಡು ಕೆಲಸ ಮಾಡಬೇಕಾದ, ಭೂಮಿಯನ್ನೇ ನೋಡಿಕೊಂಡಿರುವ ಭೂ ಮಾಲೀಕ ಮತ್ತು ರೈತರಿಗೂ, ಪೇಟೆಯಲ್ಲಿ ಸುಸಜ್ಜಿತ ಮನೆಯಲ್ಲಿ ಆರಾಮ ವಾಸ ಮಾಡಿಕೊಂಡಿರುವ ಪಟ್ಟಣದ ಆಸ್ತಿವಂತನಿಗೂ ಮಾಡಿರುವ ವ್ಯತ್ಯಾಸವನ್ನು ನೋಡಿ. ಬ್ಯಾಂಕಿನಲ್ಲಿ ಎಷ್ಟು ದುಡ್ಡು ಇದ್ದರೂ ಪರವಾ ಇಲ್ಲ. ಎಷ್ಟು ಷೇರು ಇದ್ದರೂ ಪರವಾ ಇಲ್ಲ. ಈ ವಿಷಯವಾಗಿ ಶ್ರೀಮತಿ ಸುಬ್ಬಮ್ಮನವರು ಬಹಳ ಚೆನ್ನಾಗಿ ಹೇಳಿದರು. ಪಟ್ಟಣಗಳಲ್ಲಿ ಎಷ್ಟು ಮನೆಗಳಿದ್ದರೂ ಪರವಾಗಿಲ್ಲ, ಪಟ್ಟಣದಲ್ಲಿ ಬಾಡಿಗೆಗೆ ಎಷ್ಟು ಟ್ಯಾಕ್ಸಿ ಅಥವಾ ಕಾರುಗಳನ್ನು ಇಟ್ಟುಕೊಂಡಿದ್ದರೂ ಪರವಾಗಿಲ್ಲ, ಇದಕ್ಕೆಲ್ಲಾ ಯಾವ ತರಹದ ಮಿತಿಯೂ ಇಲ್ಲ. ನಮಗೆ ಈಗ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಬೇಕಾದಷ್ಟು ಹಣ ಬೇಕಾಗಿದೆ. ಬ್ಯಾಂಕುಗಳಲ್ಲಿರುವ ಹಣವನ್ನೆಲ್ಲಾ ತೆಗೆದುಕೊಂಡು ಅವರಿಗೂ ಬಾಂಡುಗಳನ್ನು ಕೊಡಬಹುದು. ವಾಸಕ್ಕೆ ಒಂದು ಮನೆಯನ್ನು ಹೌಸ್ ಓನರ್‌ಗೆ ಕೊಟ್ಟು ಬಾಕಿ ಮನೆಗಳನ್ನು ಸರ್ಕಾರವೇ ವಹಿಸಿಕೊಂಡು ಮನೆ ಇಲ್ಲದೇ ಇರುವವರಿಗೆ ಏಕೆ ಹಂಚಿಕೊಡಬಾರದು ? ಓಡಾಡುವುದಕ್ಕೆ ಒಂದು ಕಾರನ್ನು ಕೊಟ್ಟು ಐದಾರು ಮೋಟಾರು ಕಾರುಗಳನ್ನು ಇಟ್ಟುಕೊಂಡಿರುವವರಿಂದ ಬಾಕಿ ಎಲ್ಲಾ ಕಾರುಗಳನ್ನು ಕಿತ್ತುಕೊಂಡು ಕಾರು ಅವಶ್ಯಕತೆ ಇರುವವರಿಗೆ ಏಕೆ ಕೊಡಬಾರದು ? ಇವರಿಗೆ ಹೇಳುವವರಿಲ್ಲ, ಕೇಳುವವರಿಲ್ಲ. ಆದರೆ ಒಬ್ಬ ಮನುಷ್ಯ ಭೂಮಿಯ ಮೇಲೆ ಇನ್‌ವೆಸ್ಟ್ ಮಾಡಿದನೆಂದು ಅವನು ಈ ತರಹದ ಶಿಕ್ಷೆಗೆ ಏಕೆ ಒಳಗಾಗಬೇಕು ? ಇವೆಲ್ಲಾ ದುರದೃಷ್ಟಕರವೆಂದು ನಾನು ಹೇಳುತ್ತೇನೆ. ಇನ್ನು ತಿದ್ದುಪಡಿಯ ವಿಷಯವಾಗಿ ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡಿದರೆ ಇಲ್ಲಿ ಅವರಿಗೆ ಕೂತುಕೊಳ್ಳುವುದಕ್ಕೆ ಜಾಗವಿರುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಅವರೂ ಕೂಡ ತಿಳಿದುಕೊಂಡಿದ್ದಾರಲ್ಲಾ; ಈಗ ಕ್ಲಾಜು 63ಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದರಲ್ಲಿ ತೆಂಗು ಮತ್ತು ಅಡಿಕೆಗೆ

ಸೀಲಿಂಗ್ ವಿನಾಯತಿ ಕೊಡಕೂಡದು ಎನ್ನುವ ಅರ್ಥಕ್ಕೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಏನಾದರೂ ನ್ಯಾಯವಿದೆಯೇ ? ಒಂದೂವರೆ ವರ್ಷಗಳಿಗೆ ಫಲ ಬರುವ ಹಣ್ಣಿನ ತೋಟಕ್ಕೆ, ಬಾಳೆ ತೋಟಕ್ಕೆ, ಹುಣಿಸೆ ಮತ್ತು ಮಾವಿನ ತೋಪಿಗೆ, ಡೈರಿ ಮಾಡುವವರಿಗೆ, ಕುರಿ ಸಾಕುವವರಿಗೆ, ಸಕ್ಕರೆ ಕಾರ್ಖಾನೆಯವರಿಗೆ, ಕಬ್ಬು ಒದಗಿಸುವವರಿಗೆ, ಕಾಫಿ, ಏಲಕ್ಕಿ, ಮೆಣಸು, ರಬ್ಬರ್, ಗೋಡಂಬಿ ಬೆಳೆಯುವವರಿಗೆ ಎಲ್ಲರಿಗೂ ವಿನಾಯತಿ ಕೊಟ್ಟು ಅಡಿಕೆ ಮತ್ತು ತೆಂಗು ಬೆಳೆಯುತಕ್ಕ ತೋಟದವರಿಗೆ ಮಾತ್ರ ವಿನಾಯತಿ ಕೊಡುವುದಿಲ್ಲವೆಂದು ಹೇಳಿರುವುದು ಯಾವ ನ್ಯಾಯ ? ಇದು ಶುದ್ಧ ತಪ್ಪು. ಒಂದು ತೆಂಗಿನ ಗಿಡವನ್ನಾಗಲೀ ಅಥವಾ ಅಡಿಕೆ ಗಿಡವನ್ನಾಗಲೀ ಸಾಕಲು 8 ವರ್ಷಗಳ ಕಾಲ ಕಷ್ಟಪಡಬೇಕು. ಅದಕ್ಕೆ ದುಂಬಿ ಬೀಳದಂತೆ, ಗೆಜ್ಜಲು ಬರದಂತೆ ಕಾಪಾಡಲು ಮತ್ತು ಅದಕ್ಕೆ ಮಾಳ ಕಂದಾಯ, ಬೇಲಿ, ಅಗೆತ—ಇವೆಲ್ಲಕ್ಕೂ ಖರ್ಚಾಗಬೇಕು. 8ನೇ ವರ್ಷದಿಂದ ಫಲಕ್ಕೆ ಷುರುವಾಗಿ 10-15 ವರ್ಷದಮೇಲೆ ಪೂರ್ತಿಯಾಗಿ ಫಲಕ್ಕೆ ಬರುತ್ತದೆ. ಇಷ್ಟು ಕಷ್ಟಪಟ್ಟು ಸಾಕಿದ ತೋಟವನ್ನು ಕಿತ್ತುಕೊಳ್ಳುವುದು ಎಂದರೆ ಇದು ಯಾವ ನ್ಯಾಯ ? ಕಮ್ಯೂನಿಸ್ಟ್ಸ್ ಇನ್‌ಫ್ಲುಯನ್ಸ್ ಇರುವ ಕೇರಳಾದಲ್ಲಿ, ವೆಸ್ಟ್ ಬಂಗಾಳದಲ್ಲಿ, ಮದ್ರಾಸ್‌ನಲ್ಲೆಲ್ಲಾ ಇದಕ್ಕೆ ವಿನಾಯತಿ ಕೊಟ್ಟಿದ್ದಾರೆ. ಇಡೀ ದೇಶದಲ್ಲಿ ನಮ್ಮ ಮೈಸೂರು ಸಂಸ್ಥಾನ ಇದರಲ್ಲಿ ಎರಡನೆಯದು. ಇದು ಫಾರಿನ್ ಎಕ್ಸ್‌ಚೇಂಜು ಸಂಪಾದನೆ ಮಾಡತಕ್ಕ ಫಸಲು. ಇದಕ್ಕೆ ವಿನಾಯತಿ ಕೊಟ್ಟು ಈ ಫಸಲನ್ನು ಜಾಸ್ತಿಮಾಡಿಸಿ ದೊಡ್ಡ ದೊಡ್ಡ ಕಾಯರ್ ಇಂಡಸ್ಟ್ರಿ ಷುರುಮಾಡಿಸುವುದನ್ನು ಬಿಟ್ಟುಬಿಟ್ಟಿದ್ದಾರೆ. ಮೊದಲಿನಲ್ಲಿಯೇ ಅದನ್ನು ಜುಂಗು ಮಾಡಿ ಕಾಯರ್ ಇಂಡಸ್ಟ್ರೀಸಿಗೆ ಉಪಯೋಗಿಸಲು ರನಿಂಗ್ ವಾಟರ್ ಬೇಕು ಎನ್ನುವ ಒಂದು ನಿಯಮ ವಿತ್ತು. ಅದು ಫರ್ಮೆಂಟಾಗಿ ಕೊಳೆತು ಮಟ್ಟಿ ಆಗಲಿಕ್ಕೆ ಬಹಳ ದಿವಸ ತೆಗೆದುಕೊಳ್ಳುತ್ತಿತ್ತು. ಈಗ ಅನೇಕ ತರಹ ಕೆಮಿಕಲ್ಸ್ ಉಪಯೋಗಿಸಿ ಕಾಯರ್ ಮಾಡಿ ಎಲ್ಲಾ ಕಡೆಯೂ ಈ ಕಾಯರ್ ಇಂಡಸ್ಟ್ರೀಸನ್ನು ಡೆವಲಪ್ ಮಾಡಲು ಅವಕಾಶ ಉಂಟು. ಇಂಥಾ ಸಂದರ್ಭದಲ್ಲಿ ಈ ತೋಟಗಾರರಿಗೆ ಈ ತರಹ ಗದಾ ಪ್ರಹಾರ, ಕತ್ತು ಕುಯ್ಯುವ ಹಾಗೆ ಮಾಡುವುದು ಸ್ವಲ್ಪವೂ ಸರಿಯಲ್ಲ. ಸರ್ಕಾರದವರು ಇದಕ್ಕೆ ವಿನಾಯತಿ ಕೊಡಬೇಕು. ಇದನ್ನು ಜಾಸ್ತಿ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು. ಈ ವಿಚಾರವಾಗಿ ಎಕ್ಸ್‌ಪೋರ್ಟ್ ಪ್ರೊಮೋಷನ್ ಪ್ಲ್ಯಾನರ್‌ನವರು ಒಂದು ದೀರ್ಘವಾದ ರಿಪೋರ್ಟನ್ನು ಕೊಟ್ಟಿದ್ದಾರೆ. ಅದು 4 ದಿವಸಗಳ ಕೆಳಗೇ ಮಂತ್ರಿಗಳಿಗೆ ಗೊತ್ತಿರಬಹುದು. ಎಕ್ಸ್‌ಪೋರ್ಟ್ ಮಾಡಲು ಇದು ಅರ್ಹವಾದ ಬೆಳೆ. ಕೋಕೊನಟ್, ಅರಿಕನಟ್, ಆಯಿಲ್‌ಸೀಡ್ಸ್, ಕಾಟನ್, ಸಿಲ್ಕ್—ಇವುಗಳಿಗೆ ಲಿಮಿಟೇಷನ್ಸ್ ಹಾಕಕೂಡದು ಎಂಬುದಾಗಿ ಹೇಳಿದ್ದೇವೆ. ಆದರೆ ಸರ್ಕಾರದವರು ಈಗ ಮಾಡುತ್ತಿರುವುದು ಅದಕ್ಕೆ ತದ್ವಿರುದ್ಧವಾಗಿದೆ. ಇದು ಸ್ವಲ್ಪವೂ ಸರಿಯಾದುದಲ್ಲ. ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಎವಿಕ್ಷನ್ ಆಫ್ ಟೆನೆಂಟ್ಸ್ ಫಾರ್ ಡಿಫಾಲ್ಟ್‌ನಲ್ಲಿ ಲ್ಯಾಂಡ್ ಲಾರ್ಡ್ ಎಂದರೆ ಮದುವೆ ಆಗದ ಹೆಣ್ಣುಮಕ್ಕಳು, ವಿಧವೆಯರು, ಫಿಸಿಕಲಿ ಹ್ಯಾಂಡಿಕ್ಯಾಪ್ಡ್, ಮೈನರ್ ಎಲ್ಲೋ ಇರುವ ಡಿಫೆನ್ಸ್ ಸರ್ವಿಸ್‌ನವರು—ಇವರಿಗೆ ಗುತ್ತಿಗೆ ಬರಲಿಲ್ಲವೆಂದು ಪ್ರತಿವರ್ಷ ನೋಟೀಸ್ ಕೊಡಬೇಕು. ಅದು ಎರಡು ವರ್ಷಗಳಾಗಬೇಕು. ಆಮೇಲೆ ಅವರು ಲ್ಯಾಂಡನ್ನು ಬಿಡಿಸಿಕೊಳ್ಳಬೇಕು. ಇದೇನು! ಇದಕ್ಕೆ ಏನಾದರೂ ಅರ್ಥವಿದೆಯೇ? ಈ ಎರಡು ವರ್ಷಗಳಕಾಲ ಅವರು ಏನು ತಿನ್ನಬೇಕು, ಏನು ಊಟಮಾಡಬೇಕು, ಕಂದಾಯ ಕೊಡುವುದು ಹೇಗೆ, ಮಣ್ಣು ತಿನ್ನಬೇಕೇ, ಇದು ಯಾವ ನ್ಯಾಯ! ಯಾವ ತರಹ ರಾಜಕೀಯ ! ಅದರಲ್ಲೂ ಈ ಹೆಣ್ಣುಮಕ್ಕಳಿಗೆ, ಹ್ಯಾಂಡಿಕ್ಯಾಪ್ಡ್ ಪೀಪಲ್‌ಗೆ ನಾಲ್ಕುಕಾಳು ಬತ್ತ, ಧಾನ್ಯ ಬರುತ್ತೆ ಎಂದು ಯಾರಾದರೂ ನೆಂಟರನ್ನು ಮನೆಯಲ್ಲಿಟ್ಟುಕೊಳ್ಳುವುದಕ್ಕೂ ಜೋಪಾನಮಾಡುತ್ತಿರುತ್ತಾರೆ. ಅದಕ್ಕೂ ಧಕ್ಕೆ ಬಂದಮೇಲೆ ಅವರು ಬೀದಿಪಾಲಾಗಿ ಬಿಕಾರಿಗಳಾಗಬೇಕು. ಈ ವೆಲ್‌ಫೇರ್ ಸ್ಟೇಟಿನಲ್ಲಿ ಹೆಣ್ಣುಮಕ್ಕಳನ್ನು ವೀಕರ್ ಸೆಕ್ಷನ್ ಎಂದು ಹೇಳಿ ಅವರಿಗೆ ಎಲ್ಲ ತರಹದ ಪ್ರೊಟೆಕ್ಷನ್ ಕೊಡಬೇಕು ಎಂಬುದಾಗಿ ಒಂದು ಕಾನೂನು ಹೇಳಿದರೆ ಇನ್ನೊಂದು ಕಡೆ ಅವರನ್ನು ಬೀದಿ ಬಿಕಾರಿ ಮಾಡತಕ್ಕ ಇನ್ನೊಂದು ಕಾನೂನನ್ನು ಇಲ್ಲಿ ತರುತ್ತಿದ್ದಾರೆ. ಹೆಣ್ಣುಮಕ್ಕಳು ಈ ಅಸಹಾಯಕತೆಯ ಪ್ರಸಂಗ ಇವರಿಗೇ ಬರಬೇಕು, ಅವರಿಗೇ ಬರಬೇಕು ಎನ್ನುವುದೇನಿಲ್ಲ. ಹೆಣ್ಣುಮಕ್ಕಳು ಮದುವೆ ಆಗದೇ ಇರುವುದಾಗಲೀ, ಗಂಡನನ್ನು ಕಳೆದುಕೊಳ್ಳುವುದಾಗಲೀ ಹುಚ್ಚು, ಬೆಪ್ಪು, ಕುಂಟು, ಕುರುಡು ಮಕ್ಕಳು ಹುಟ್ಟುವುದಾಗಲೀ ಇದು ಬರೀ ಬಡವರ ಮನೆಯಲ್ಲಾಗಬೇಕು, ದೊಡ್ಡವರ ಮನೆಯಲ್ಲಿ ಕೂಡದು, ಮಹಾರಾಜರ ಮನೆಯಲ್ಲಿ ಕೂಡದು, ಮಂತ್ರಿಗಳ ಮನೆಯಲ್ಲಿ ಕೂಡದು ಎನ್ನುವ ನಿಯಮವೇನೂ ಇಲ್ಲ. ಈ ದುರಾದೃಷ್ಟ ಯಾವ ಹೆಣ್ಣುಮಗುವಿಗಾಗಲೀ ಯಾವಾಗ ಯಾವ ಘಳಿಗೆಯಲ್ಲಾಗಲೀ ಬರಬಹುದು. ಆದ್ದರಿಂದ ಈ ಹೆಣ್ಣುಮಕ್ಕಳಿಗೆ ಮರ್ಯಾದೆಯಾಗಿ ಬಾಳುವ ದಾರಿ ಇದೇ ಆಗಿದ್ದರೆ ಭೂ ಅವಲಂಬನೆಯಾಗಿದ್ದರೆ ಅವರಿಗೆ ಸರ್ವವಿಧದಲ್ಲೂ ಸಹಾಯಮಾಡಬೇಕಾದುದು ಸರ್ಕಾರದ ಮೊದಲ ಕರ್ತವ್ಯ. ಇಲ್ಲದಿದ್ದರೆ ನಾಯಿ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬಾಲ ಆಡಿಸುವ ಬದಲು ಬಾಲವೇ ನಾಯಿ ಆಡಿಸಿತು ಎಂದಾಗುತ್ತದೆ. ಆದ್ದರಿಂದ ಈ ಎರಡು ವರ್ಷಗಳ ಅಡ್ಡಿ ತೆಗೆದು ಸರ್ಕಾರ ಆ ಹೆಣ್ಣುಮಕ್ಕಳಿಗೆ ಬರಬೇಕಾದ ಧಾನ್ಯವನ್ನು ಕೂಡಲೇ ಕೊಡಿಸಲು ಸಹಾಯಮಾಡುವುದಲ್ಲದೆ, ಅಂಥಹ ಹರಾಮಿ ಟೆನೆಂಟುಗಳನು ತಪ್ಪಿಸಿ ಬೇರೆ ಬೇರೆ ಟೆನೆಂಟುಗಳನ್ನು ಹುಡುಕಿಕೊಟ್ಟು ಅವರಿಗೆ ಅನುಕೂಲಪಡಿಸುವ ಒಂದು ತಿದ್ದುಪಡಿಯನ್ನು ತರಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಕಂಪನ್‌ಸೇಷನ್ ವಿಚಾರ. ಯಾವುದಾದರೂ ಆಸ್ತಿಯನ್ನು ಸರ್ಕಾರ ವಹಿಸಿಕೊಳ್ಳುವಾಗ ಆಗಿನ ಮಾರ್ಕೆಟ್ ರೇಟ್ ಕೊಡುವುದು ಹಿಂದಿನಿಂದಲೂ ಬಂದಿರತಕ್ಕ ಅಭ್ಯಾಸ. ಇವರಿಗೆ ಬಸ್‌ಓನರ್ಸ್, ಬಿ.ಟಿ.ಸಿ., ಕೆ.ಜಿ.ಎಫ್. ಮತ್ತು ಲೈಫ್ ಇನ್‌ಷೂರೆನ್ಸ್‌ನವರು ಆ ರೇಟ್ ಕೊಡಲಲ್ಲ. ಬೆಂಗಳೂರಿನಲ್ಲಿ ಹಾಗೆಯೇ ಕೆಲವು ದೊಡ್ಡ ಮನುಷ್ಯರ ಅದರಲ್ಲೂ ಅವರ ತಾತ, ಮುತ್ತಾತಂದಿರು ಕಟ್ಟಿಸಿದ್ದಂತಹ ಮನೆಗಳನ್ನು ಸರ್ಕಾರ ತೆಗೆದುಕೊಂಡಾಗ ಕ್ಯಾಷ್ ಡೌನ್ ಮಾಡಬೇಕು, ಆಗಿನ ಮಾರ್ಕೆಟ್ ರೇಟ್ ಕೊಡಬೇಕು. ಪುರ್ ಕ್ಯಾಷ್ ಕೊಡಬೇಕು. ಹೀಗಿರುವಾಗ ಈ ಭೂಮಿ ಕಳೆದುಕೊಳ್ಳುವವರು ಮಾಡಿರುವ ಪಾಪವೇನು ! ಇವರಿಗೂ ಅವರ ಹಾಗೆ ಮಾರ್ಕೆಟ್ ವ್ಯಾಲ್ಯು ಕೊಡಲೇಬೇಕು.

ಇನ್ನು ಮೋಡ್ ಆಫ್ ಪೇಮೆಂಟ್. ನಾಲ್ಕು ವರ್ಷಗಳ ಕೆಳಗೆ ಇವರು ನಗದಾಗಿ 10ಸಾವಿರ ರೂಪಾಯಿಗಳನ್ನು ಕೊಡುತಿದ್ದುದನ್ನು ಈಗ 2 ಸಾವಿರಕ್ಕೆ ಇಳಿಸಿದ್ದಾರೆ. ಈ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅವನಾದರೂ ಏನು ಮಾಡಬೇಕು ? ಇವರು ಕೊಡುವ ಬಾಂಡು ಇಟ್ಟುಕೊಂಡು ಜೇನುತುಪ್ಪ ಹಾಕಿ ನೆಕ್ಕಬೇಕಾಗುತ್ತದೆ. ಅದೂ ಶೇಕಡ ನಾಲ್ಕುವರೆ ಬಡ್ಡಿಯನ್ನು ಕೊಡತಕ್ಕ ಬಾಂಡು. ನಮ್ಮ ಹಣದ ಪರ್ಚೇಜಿಂಗ್ ಪವರ್ ಇಷ್ಟು ಕಡಿಮೆಯಾಗಿರುವಾಗ, ಷೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಶೇಕಡ 8 ಅಥವಾ 9ರಷ್ಟು ಬಡ್ಡಿಯನ್ನು ಕೊಡುತ್ತಿರುವಾಗ ತಾತನ ಕಾಲದಿಂದ ಭೂಮಿಯನ್ನು ಕಾಪಾಡಿಕೊಂಡುಬಂದಿದ್ದ ಭೂಮಾಲೀಕನಿಗೆ ಈ ರೀತಿಯಾಗಿ ಕೊಡುವುದು ತುಂಬಾ ಅಪಾರವಾದ ಶುದ್ಧ ಅನ್ಯಾಯ. ಭೂಮಾಲೀಕ ಬದುಕಲು ಏನಾದರೂ ಕಸುಬು ಮಾಡುವಷ್ಟು ಹಣ ಕೊಡಬೇಕು, ಮಾರ್ಕೆಟ್ ರೇಟಿನಂತೆ ಕೊಡಬೇಕು, ಮುಂದೆ ಏನಾದರೂ ಅವನಿಗೆ ಬಾಂಡುಕೊಟ್ಟರೆ ಬ್ಯಾಂಕುಗಳಲ್ಲಿ ಬಡ್ಡಿ ಕೊಡುವಂತೆ ಆ ಬಾಂಡುಗಳಿಗೂ ಬಡ್ಡಿ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಇನ್‌ಸ್ಟಾಲ್‌ಮೆಂಟ್ ರಿಕವರ್ ಮಾಡಿಕೊಳ್ಳುವ ವಿಷಯದಲ್ಲಿ ಸರಿಯಾಗಿ ಅದು ವಸೂಲಾಗದಿದ್ದರೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್‌ನಂತೆ ವಸೂಲು ಮಾಡಬೇಕು; ಎಂಬುದಾಗಿ ಹೇಳಿದ್ದಾರೆ. ಆದರೆ ರೈತರಿಗೆ ಕೊಟ್ಟಿರುವ ಲ್ಯಾಂಡ್ ಗಿಫ್ಟಿನ ಹಾಗೆ ಇದೆ. ಅವನು ಕಂದಾಯ ಕೊಡದಿದ್ದರೆ ಭೂಮಿ ಹರಾಜುಮಾಡುತ್ತಾರೆ. ಇವರ ಲ್ಯಾಂಡ್ ತೆಗೆದುಕೊಂಡರೆ ಅವರಿಗೇನು ಕಷ್ಟವಾಗಬೇಕು ! ಅವರಿಗೆ ಆಗ ಬಂದಷ್ಟೇ ಲಾಭವಾಗುತ್ತದೆ. ಆದ್ದರಿಂದ ಇದನ್ನು ವಸೂಲು ಮಾಡುವಾಗ ಸರಿಯಾದ ನಿಗಾ ತೆಗೆದುಕೊಳ್ಳಬೇಕು. ಏಕೆಂದರೆ ಇವರು ಹಣ ಸರಿಯಾಗಿ ಕೊಡದ ಹೊರತು ಭೂಮಿ ಕಳೆದುಕೊಂಡ ಬಾಂಡು ಹೋಲ್ಡರುಗಳಿಗೆ ಸರ್ಕಾರ ಹಣ ಕೊಡುವುದು ಕಷ್ಟ. ಆ ರೀತಿ ನನ್ನ ಬುದ್ಧಿಗೇನೋ ಕಾಣಲಲ್ಲ. ಈಗಲೇ ಇಷ್ಟು ಕಷ್ಟ. ಇನ್ನು 20 ವರ್ಷಗಳಿಗೆ ನಮ್ಮ ಆರ್ಥಿಕ ಪರಿಸ್ಥಿತಿ ಏನಾಗುತ್ತದೋ ದೇವರಿಗೇ ಗೊತ್ತು. ಆದ್ದರಿಂದ ದಯವಿಟ್ಟು ಈಗಲೇ ಎಚ್ಚರವಾಗಿ ಇವರ ಹತ್ತಿರ ಹಣವನ್ನು ವಸೂಲುಮಾಡುವುದಕ್ಕೆ ತಕ್ಕ ಬಂದೋಬಸ್ತನ್ನು ಇದರಲ್ಲಿ ಮಾಡಬೇಕೆಂದು ನಾನು ಹೇಳುತ್ತೇನೆ.

ಬಾಕಿ ಯಾವ ಇನ್‌ವೆಸ್ಟ್‌ಮೆಂಟಿಗೂ ಹೋಗದೆ ಭೂಮಿಯನ್ನು ನಂಬಿಕೊಂಡಿದ್ದ ಈ ಜನಗಳಿಗೆ ಆಗಿರುವ ಅನ್ಯಾಯವನ್ನು ತಿಳಿಸಿ ಸರ್ಕಾರ ಹೀಗೆ ಕಣ್ಣು ಕೀಳುವ ಹವ್ಯಾಸಕ್ಕೆ ಹೋಗದೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳಿ ಇಷ್ಟು ಹೊತ್ತು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise and meet after half an hour.

The House adjourned for recess at Three of the Clock and re-assembled at Thirty-five Minutes past Three of the Clock.

[Mr. Speaker in the Chair.]

ಶ್ರೀ ಜಿ. ಎನ್. ದೇಸಾಯಿ (ಹಾನಗಲ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಈ ಭೂಸುಧಾರಣಾ ಕಾನೂನನ್ನು ಸ್ವಾಗತಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಕಾನೂನು ಎಷ್ಟೋ ದಿವಸಗಳ ಹಿಂದೆಯೇ ಜಾರಿಯಲ್ಲಿ ಬರಬೇಕಾಗಿತ್ತು. ಆದರೆ ಏನೋ ಕೆಲವು ತೊಂದರೆಗಳಿಂದ ಸರ್ಕಾರದವರು ಇದನ್ನು ಇದುವರೆಗೂ ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಜಾರಿಗೆ ತರುವುದು ವಿಳಂಬವಾದರೂ ಚಿಂತೆಯಿಲ್ಲ, ಈಗಾದರೂ ಇದು ತಿದ್ದುಪಡಿಯಾಗಿ ಜಾರಿಯಲ್ಲಿ ಬರುತ್ತಾ ಇರುವುದು ಸಂತೋಷದ ವಿಷಯ. ಭೂಮಿ ಮಾಲೀಕರಿಗೇ ಹೋಗುತ್ತದೆಯೋ ಅಥವಾ ರೈತನಿಗೆ ಹೋಗುತ್ತದೆಯೋ ಎನ್ನತಕ್ಕ ಒಂದು ಅನಿಶ್ಚತತೆ ಈ ಎರಡು ವರ್ಗಗಳಲ್ಲಿ ಉಂಟಾಗಿತ್ತು. ಸರ್ಕಾರದವರು ನಮಗೆ ಭೂಮಿಯನ್ನು ಕೊಡಿಸುತ್ತಾರೆಂದು ರೈತರು ನಂಬಿಕೊಂಡು ಬಂದಿದ್ದಾರೆ. ಯಾರು ಭೂಮಿಯನ್ನು ಉಳುತ್ತಾರೆಯೋ ಆ ರೈತನಿಗೇ ಭೂಮಿಯನ್ನು ಕೊಡಿಸುತ್ತೇವೆಂದು ಸರ್ಕಾರದವರೂ ಬಹಳ ದಿವಸಗಳಿಂದಲೂ ಹೇಳುತ್ತಾ ಬಂದಿದ್ದಾರೆ. ಆದರೆ ಇದುವರೆಗೂ ಯಾರೂ ಭೂಮಿಯನ್ನು ಉಳುತ್ತಾರೆಯೋ ಅವರಿಗೆ ಭೂಮಿ ಸಿಕ್ಕಿಲ್ಲ. ಭೂಮಿಯನ್ನು ಉಳತಕ್ಕ ರೈತ ತನಗೆ ಭೂಮಿ ಸಿಕ್ಕುತ್ತದೆಯೋ ಇಲ್ಲವೋ ಎನ್ನುವಂತಹ ಸಂಶಯವನ್ನು ಹೊಂದಿ ಅವನು ಭೂಮಿಯ ವಿಷಯದಲ್ಲಿ ಆಸ್ಥೆಯನ್ನು ವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಆ ಮೇಲೆ ಭೂಮಾಲೀಕ ತನ್ನ ಆಸ್ತಿ ಯಾರಿಗೆ ಹೋಗುತ್ತದೆಯೋ ಏನೋ ಎಂದು ಅವನೂ ಸಹ ಭೂಮಿಯ ವಿಷಯದಲ್ಲಿ ಆಸ್ಥೆಯನ್ನು ವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ರೈತರಿಗೆ ಭೂಮಾಲಿಕನಿಂದ ಯಾವ ರೀತಿಯ ಸಹಾಯವೂ ಸಿಕ್ಕದೇ ಇರುವುದರಿಂದ ಅವರು ಜಮೀನಿನ ಮೇಲೆ ಹೆಚ್ಚು ಹಣವನ್ನು ಇನ್‌ವೆಸ್ಟ್ ಮಾಡಿ ಸರಿಯಾದ ರೀತಿಯಲ್ಲಿ ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಎಲ್ಲಾ ಕಾರಣಗಳಿಂದ ರೈತ ಬೆಳೆಯತಕ್ಕ ಬೆಳೆಯ ಪ್ರಮಾಣ ಬಹಳ ಕಡಮೆಯಾಗಿದೆ. ನಮ್ಮ ದೇಶದಲ್ಲಿ ಆಹಾರದ ಕೊರತೆ ಬಹಳವಾಗಿ ಆಗಿದೆ. ಇದರಿಂದ ನಮ್ಮ ದೇಶದ ಮತ್ತು ನಮ್ಮ ರಾಷ್ಟ್ರದ ಸಂಪತ್ತು ಕಡಿಮೆಯಾಗುತ್ತಿದೆ. ಈಗ ತಿದ್ದುಪಡಿಯಾಗಿ ಈ ಸಭೆಯ ಮುಂದೆ ಬಂದಿರತಕ್ಕ ಈ ಭೂಸುಧಾರಣಾ ಕಾಯಿದೆ ನಮ್ಮ ದೇಶದಲ್ಲಿ ಜಾರಿಗೆ ಬರುವುದರಿಂದ ರೈತರಿಗೆ ಜಮೀನಿನಲ್ಲಿ ಆಸ್ಥೆಹುಟ್ಟಿ, ಅವರು ಭೂಮಿಯಲ್ಲಿ ಹೆಚ್ಚು ಕೆಲಸವನ್ನು ಮಾಡಿ ಹೆಚ್ಚು ಬೆಳೆ ಬೆಳೆದು, ನಮ್ಮ ದೇಶದಲ್ಲಿರುವ ಆಹಾರದ ಕೊರತೆಯನ್ನು ನೀಗಿಸುತ್ತಾರೆ ಎಂದು ನಂಬುವುದಕ್ಕೆ ಅಡ್ಡಿಯಿಲ್ಲ ಎನಿಸುತ್ತದೆ. ಜಮೀನ್ದಾರರ ವರ್ಗದಲ್ಲಿ ನಾನೊಬ್ಬ ದೊಡ್ಡ ಜಮೀನ್ದಾರನಾಗಿದ್ದೇನೆ. ವೈಯಕ್ತಿಕವಾಗಿ ನನಗೂ ಬಹಳ ಹಾನಿಯಾಗುತ್ತದೆ. ಆದರೂ ಸಹ ನಾನು ಈ ಕಾಯಿದೆಯನ್ನು ಮೊದಲಿನಿಂದಲೂ ಬೆಂಬಲಿಸುತ್ತಲೇ ಬಂದಿದ್ದೇನೆ. ಈಗಲೂ ಸಹ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಇದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ. ಏತಕ್ಕೆಂದರೆ ಸರ್ಕಾರದವರು ಜನತೆಗೆ ಕಲ್ಯಾಣವಾಗತಕ್ಕಂಥ ಒಂದು ಒಳ್ಳೆಯ ಕೆಲಸವನ್ನು ಮಾಡುವ ಕಾಲದಲ್ಲಿ ಅದಕ್ಕೆ ಬೆಂಬಲವನ್ನು ಕೊಡತಕ್ಕದ್ದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ ಎಂದು ತಿಳಿದುಕೊಂಡಿರುವವರಲ್ಲಿ ನಾನೂ ಒಬ್ಬ. ಈ ದೃಷ್ಟಿಯಿಂದ ಈ ಕಾನೂನನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಇದರ ವಿವರಣೆಯ ಬಗ್ಗೆ ಒಂದೆರಡು ಸೂಚನೆಗಳನ್ನು ಮಾಡಬಯಸುತ್ತೇನೆ.

ಮೊದಲನೆಯದಾಗಿ ಈ ಮಸೂದೆಯ ಕ್ಲಾಜ್ 8 ಸಬ್ ಕ್ಲಾಜ್ 1 (ಬಿ) ನಲ್ಲಿ ಏನು ವಿಷಯಗಳನ್ನು ನಮೂದು ಮಾಡಿದ್ದಾರೆಯೋ ಅದು ಮುಂಬೈ ಪ್ರದೇಶದಿಂದ ಬಂದಿರತಕ್ಕವರಿಗೆ ಅನ್ವಯಿಸುತ್ತದೆ. ಇದರಲ್ಲಿ ಏನು ಹೇಳಿದ್ದಾರೆಂದರೆ 1948 ನೇ ಇಸವಿಯ ಬೊಂಬೆ ಟೆನೆನ್ಸಿ ಮತ್ತು ಅಗ್ರಿಕಲ್ಚರಲ್ ಲ್ಯಾಂಡ್ಸ್ ಆಕ್ಟಿನ ಸೆಕ್ಷನ್ 31ರ ಪ್ರಕಾರ, 1957 ನೇ ಇಸವಿ ಮಾರ್ಚಿ 11 ನೇ ತಾರೀಖಿಗಿಂತ ಮುಂಚೆ ಬೊಂಬಾಯಿ ಕರ್ನಾಟಕದಲ್ಲಿ ಭೂಮಾಲೀಕರಾಗಿರತಕ್ಕವರು ತಮ್ಮ ಸ್ವಂತ ಸಾಗುವಳಿಗೋಸ್ಕರ ಎಷ್ಟು ಭೂಮಿ ಬೇಕೆಂದು ಟೆನೆಂಟುಗಳಿಗೆ ನೋಟೀಸು ಕೊಟ್ಟಿದ್ದರೋ ಅಷ್ಟು ಭೂಮಿಯನ್ನು ಮಾತ್ರ ಅವರು ಸರ್ಕಾರದ ಮುಖಾಂತರ ವಶಪಡಿಸಿಕೊಳ್ಳುವುದಕ್ಕೆ, ಬಿಡಿಸಿಕೊಳ್ಳುವುದಕ್ಕೆ ಅಧಿಕಾರವಿದೆ, ಒಂದುವೇಳೆ ಭೂಮಾಲೀಕರು ಟೆನೆಂಟುಗಳಿಗೆ ಆ ಅವದಿಯೊಳಗೆ ನೋಟೀಸುಗಳನ್ನು ಕೊಡದೆ ಹೋಗಿದ್ದರೆ ಅಂಥಾ ಹೊಲಗಳನ್ನು ಬಿಡಿಸಿಕೊಳ್ಳುವುದಕ್ಕೆ ಅಧಿಕಾರವಿಲ್ಲ ಎಂದು ಈ ಆಕ್ಟಿನಲ್ಲಿ ನಮೂದಾಗಿದೆ. ಇದರಿಂದ ಬಹಳ ಜನಗಳಿಗೆ ಅನ್ಯಾಯವಾಗುತ್ತದೆ ಎಂದು ನಾವು ಮೈಸೂರಿಗೆ ಬಂದಮೇಲೆ ಹಿಂದಿನ ಕಾಯಿದೆಯನ್ನು ರದ್ದು ಮಾಡಿ ಒಂದು ಆರ್ಡಿನೆನ್ಸ್ ಹೊರಡಿಸಿದರು. ಅದರಿಂದ ಮುಂಬೈ ಕರ್ನಾಟಕದ ಎಷ್ಟೋ ಭೂ ಮಾಲೀಕರು ಟೆನೆಂಟುಗಳಿಗೆ ನೋಟೀಸನ್ನು ಕೊಟ್ಟಿಲ್ಲ. ಆರ್ಡಿನನ್ಸಿನಲ್ಲಿ.ಅವರು ಹಿಂದೆ ಕೊಟ್ಟಿದಂತಹ ನೋಟೀಸುಗಳನ್ನೆಲ್ಲಾ ಕ್ಯಾನ್ಸಲ್ ಮಾಡಿದ್ದೇವೆ ಎಂದು ಬರೆದಿದ್ದಾರೆ. ಆದ್ದರಿಂದ ಬೊಂಬಾಯಿ ಕರ್ನಾಟಕದ ಭೂಮಾಲೀಕರಿಗೇ ಪುನಃ ನೋಟೀಸು

(ಶ್ರೀ ಡಿ. ಎನ್. ದೇಸಾಯಿ)

ಕೊಡಲು ಅವಕಾಶಕೊಡಬೇಕು ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ತಿಳಿದುಕೊಂಡು ಅದಕ್ಕಾಗಿ ಈಗ ಈ ಸಭೆಯಮುಂದೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಈ ರೀತಿ ಬೊಂಬಾಯಿ ಕರ್ನಾಟಕದವರಿಗೆ ಅನುಕೂಲವಾಗುವಂತಹ ಒಂದು ತಿದ್ದುಪಡಿಯನ್ನು ತಂದದ್ದಕ್ಕಾಗಿ ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಇದರಲ್ಲಿ ಇನ್ನೊಂದು ದೋಷ ಇದೆ. ಅದೇನೆಂದರೆ ಮುಂಬೈ ಕರ್ನಾಟಕದಿಂದ ಬಂದವರಿಗೆ ಸೀಲಿಂಗ್ ಲಿಮಿಟ್ 48 ಎಕರೆಗಳಿತ್ತು. ಆದ್ದರಿಂದ ಅವರು 48 ಎಕರೆಗಳನ್ನು ಮಾತ್ರ ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. 48 ಎಕರೆಗಳಿಗಿಂತ ಹೆಚ್ಚು ಬಿಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಒಂದು ದೋಷ ಹಾಗೆಯೇ ಉಳಿದಿದೆ. ಇದರಿಂದ ಅಲ್ಲಿಯ ಜನಗಳಿಗೆ ಬಹಳ ಅನ್ಯಾಯವಾಗುತ್ತದೆ. ಮೈಸೂರಿನಲ್ಲಿ 27 ಸ್ಟ್ಯಾಂಡರ್ಡ್ ಎಕರೆ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಮುಂಬೈ ಕರ್ನಾಟಕದ 48 ಎಕರೆ ಸೀಲಿಂಗ್ ಲಿಮಿಟ್ ಏನಿದೆ ಅದು ಮೈಸೂರಿನ 12 ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಜಾಸ್ತಿಯಾಗುವುದಿಲ್ಲ. ಇದರಿಂದ ಮುಂಬೈ ಕರ್ನಾಟಕದಲ್ಲಿ ಒಂದು ಸೀಲಿಂಗ್ ಲಿಮಿಟ್, ಮೈಸೂರಿನಲ್ಲಿ ಒಂದು ಸೀಲಿಂಗ್ ಲಿಮಿಟ್ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಒಂದು ಸೀಲಿಂಗ್ ಲಿಮಿಟ್ ಹಾಕುವುದಾದರೆ ಅದು ತಾರತಮ್ಯ ಆಗುತ್ತದೆ. ಆದ್ದರಿಂದ ಮುಂಬೈ ಕರ್ನಾಟಕದಲ್ಲಿ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಹಿಂದೆ ಇದ್ದಂತಹ ಕಾನೂನನ್ನು ಸಸ್ಪೆಂಡ್ ಮಾಡಿ ಇಡೀ ರಾಜ್ಯಕ್ಕೆಲ್ಲಾ ಅನ್ವಯಿಸುವಂತಹ ಒಂದು ಏಕರೂಪವಾದ ಕಾನೂನನ್ನು ರಚಿಸಿದ್ದರ ಉದ್ದೇಶವೇ ಸಫಲವಾಗುವುದಿಲ್ಲಾ. ಈ ರೀತಿ ಮಾಡುವುದಕ್ಕಿಂತ ಆಯಾ ಮೊದಲಿನ ಕಾನೂನುಗಳನ್ನೇ ಆಯಾ ಭಾಗಗಳಲ್ಲಿ ಮೊದಲನಂತೆ ಜಾರಿಯಲ್ಲಿ ತರುವುದು ಒಳ್ಳೆಯದು ಇತ್ತು. ಈ ವಿಷಯದಲ್ಲಿ ಒಂದೊಂದು ಭಾಗಕ್ಕೆ ಒಂದೊಂದು ರೀತಿಯಾದಂತಹ ಕಾನೂನನ್ನು ಮಾಡುವುದರಿಂದ ಜನಗಳಿಗೆ ಬಹಳ ಅನ್ಯಾಯವಾಗುತ್ತದೆ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದನ್ನು ಕಂದಾಯ ಮಂತ್ರಿಗಳು ವಿಚಾರಮಾಡಬೇಕು. ಇದರ ಪರಿಣಾಮವೇನಾಗುತ್ತದೆ ಎಂದರೆ ನಮ್ಮ ಹಳೆಯ ಮೈಸೂರು ಭಾಗದಲ್ಲಿರುವ ಮೈಸೂರಿನವರಿಗೆ 27 ಎಕರೆಗಳಷ್ಟು ಎಂದರೆ ಸರಿಯಾಗುತ್ತದೆ. ಆದರೆ ನಮ್ಮ ಮುಂಬಯಿ ಭಾಗದಿಂದ ಬಂದಿರುವವರಿಗೆ 12 ಎಕರೆಗಳು ಹಾಗು ಮದರಾಸು ಭಾಗದ ಕಡೆಯಿಂದ ಬಂದಿರುವವರಿಗೆ ಎಷ್ಟಾಗುತ್ತೋ ಸರಿಯಾಗಿ ಗೊತ್ತಿಲ್ಲ. ಅವರಿಗೂ 15-16 ಎಕರೆಗಳಷ್ಟು ಬರಬಹುದು. ಹೈದರಾಬಾದಿನಿಂದ ಬಂದವರಿಗೂ ಅಷ್ಟೇ ಆಗಬಹುದು. ಇದರಿಂದ ಏಕರೂಪವಾದ ಕಾಯಿದೆ ಮಾಡಬೇಕು ಎಂದು ಹಿಂದೆ ಇದ್ದ ಕಾಯಿದೆಗಳನ್ನು ಸಸ್ಪೆಂಡು ಮಾಡಿ, ಏಕರೂಪ ಕಾನೂನು ಮಾಡಿ ಪುನಃ ತಿದ್ದುಪಡಿಮಾಡಿ ಬೇರೆ ಬೇರೆ ಭಾಗಕ್ಕೆ ಬೇರೆ ಬೇರೆ ಕಾನೂನು ಈಗ ಜಾರಿಗೆ ತಂದರೆ ಅದರಿಂದ ಅನ್ಯಾಯವಾಗುತ್ತದೆ. ಹೀಗೆ ಮಾಡಬಾರದು. ಈ ರೀತಿ ಮಾಡುವ ಬದಲು ನಾವು ಏಕರೂಪತೆಯಾದ ಕಾನೂನನ್ನು ಮಾಡುವಾಗ ಮುಂಬಯಿ ಭಾಗದಲ್ಲಿ ಯಾವ ಕಾನೂನು ಇತ್ತೋ ಅದನ್ನೇ ಅಲ್ಲಿಗೆ ಅನ್ವಯವಾಗುವ ಹಾಗೆ, ಹೈದರಾಬಾದು ಕಾನೂನು ಏನಿತ್ತೋ ಅದನ್ನೇ ಅಲ್ಲಿಗೂ ಅನ್ವಯವಾಗುವ ಹಾಗೆ ಮದರಾಸು ಭಾಗದಲ್ಲಿ ಯಾವ ರೀತಿಯಾದ ಕಾನೂನು ಇತ್ತೋ ಅದೇ ರೀತಿಯಾದ ಕಾನೂನು ಅಲ್ಲಿಗೆ ಇರುವಂತೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಆಯಾ ಪ್ರದೇಶದಲ್ಲಿದ್ದ ಕಾಯಿದೆಗಳೇ ಇದ್ದರೆ ಅಲ್ಲಿನ ಜನರು ಅದರ ಅಡ್ವಾಂಟೇಜಸ್‌ಗಳನ್ನು ಪಡೆಯಲು ಅನುಕೂಲವಾಗುತ್ತಿತ್ತು. ಈಗ ಈ ಏಕರೂಪತೆಯ ಕಾನೂನು ಬಂದುದರಿಂದ ಇದರಲ್ಲಿರುವ ಡಿಸ್‌ಅಡ್ವಾಂಟೇಜುಗಳನ್ನೇ ಅನ್ವಯವಾಗುವಂತೆ ಮಾಡುತ್ತೇವೆ ಅದರಿಂದ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ಮೊದಲಿದ್ದಂತೆ ಆಯಾ ಭಾಗದ ಕಾನೂನುಗಳೇ ಅಲ್ಲಿಗೆ ಇರುವಂತೆ ಮಾನ್ಯಮಂತ್ರಿಗಳು ಮಾಡಿದರೆ ಸೂಕ್ತವಾಗಿರುತ್ತದೆ. ನಾನು ಭೂಮಿಯ ಮಾಲೀಕರ ಪರವಾಗಿ ಹೇಳುತ್ತಿಲ್ಲ. ರಾಜ್ಯದ ಜನಕ್ಕೆ ಹಿತವಾಗುವ ಹಾಗಿದ್ದರೆ ಅವರಿಗೇನಾದರೂ ಅನುಕೂಲ ಮಾಡುವ ಹಾಗಿದ್ದರೆ ಮಾಡಲಿ. ಮಾಲೀಕರಿಗಾಗಿ ತೊಂದರೆಯಾದರೂ ನನ್ನ ಅಡ್ಡಿಯಿಲ್ಲ. ಅಂತಹ ಏಕರೂಪವಾದ ಕಾನೂನನ್ನು ಮಾಡುವುದು ಇಲ್ಲಿ ಯೋಗ್ಯವಾಗಿರುತ್ತದೆ ಎಂದು ನನಗನಿಸುತ್ತದೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಾಗಿ 12 ಎಕರೆ, 20 ಎಕರೆ, 16 ಎಕರೆ ಎಂದು ಆಗುವಂತೆ ಮಾಡಬಾರದು ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಇನ್ನು ಕ್ಲಾಸು 20ರಲ್ಲಿ ಕಾಂಪೆನ್ಸೇಷನ್ನು ಕೊಡುವಾಗ ಹತ್ತು ಸಾವಿರ ಎಂದು ಇದ್ದುದನ್ನು ಎರಡು ಸಾವಿರದಷ್ಟು ಮಾತ್ರ ಕ್ಯಾಷ್ ಆಗಿ ಕೊಡಬೇಕೆಂದು ಮಾಡಿದ್ದಾರೆ. ಉಳಿದ ಹಣವನ್ನು ಬಾಂಡುಗಳ ರೂಪದಲ್ಲಿ ಕೊಡಬೇಕೆಂದೂ ಮಾಡಿದ್ದಾರೆ. ಬಾಂಡನ್ನು ಕೊಡುವಲ್ಲಿ ವಿಳಂಬವಾಗು

ವುದು ಅನಿವಾರ್ಯವಿರುವುದರಿಂದ ಮಾಲೀಕರಿಗೆ ಪ್ರಪಂಚಕ್ಕೆ ತೊಂದರೆಯಾಗಬಾರದೆಂಬುದೇ ಉದ್ದೇಶ. ಇದನ್ನು ಕಡಿಮೆಮಾಡಿದರೆ ಹತ್ತು ಸಾವಿರದಷ್ಟು ಕೊಡಬೇಕೆಂದು ಮಾಡುವಾಗ ಯಾವ ಉದ್ದೇಶದಿಂದ ಮಾಡಿದ್ದರೋ ಆ ಉದ್ದೇಶಕ್ಕೆ ಅನ್ಯಾಯವಾಗುತ್ತದೆ ಎಂದು ನಾನು ಇಲ್ಲಿ ತಿಳಿಯಪಡಿಸುತ್ತೇನೆ. ಹಿಂದೆ ಇದ್ದ ಕಾನೂನಿನಲ್ಲಿ ಇದ್ದಂತೆ ಹತ್ತು ಸಾವಿರದಷ್ಟು ಕಾಂಪೆನ್ಸೇಷನ್ನು ಕ್ಯಾಷು ರೂಪದಲ್ಲಿ ಕೊಡುವುದಕ್ಕೆ ಬದಲಾಗಿ ಇದರಲ್ಲಿ ಎರಡು ಸಾವಿರದಷ್ಟು ಮಾತ್ರ ಕ್ಯಾಷು ರೂಪದಲ್ಲಿ ಕೊಡಬೇಕೆಂದು ಮತ್ತು ಉಳಿದ ಹಣವನ್ನು ಬಾಂಡುಗಳ ರೂಪದಲ್ಲಿ ಕೊಡ ವಂತೆ ಮಾಡಿದರೆ ಅದರಿಂದ ಜನಕ್ಕೆ ಕಷ್ಟವಾಗುತ್ತದೆ. ಆದುದರಿಂದ ಹತ್ತು ಸಾವಿರದಷ್ಟೇ ಕ್ಯಾಷ್ ಆಗಿ ಕೊಡಬೇಕೆಂದು ಇದ್ದರೆ ಸರಿ ಎಂದು ನನಗೆ ಕಾಣುತ್ತದೆ. ಬಾಂಡ್ಸ್ ಬಗ್ಗೆ ಹೇಳಬೇಕಾದರೆ ನಾವು ಮುಂಬಯಿ ಭಾಗದಲ್ಲಿ ನೋಡಿದ್ದೇವೆ: ವತನು ಭೂಮಿಯ ಬಗ್ಗೆ ಪರಿಹಾರ ಕೊಡುವಾಗ ಬಾಂಡುಗಳನ್ನು 1951ನೇ ಇಸವಿಯಲ್ಲಿ ಕೊಟ್ಟಿದ್ದರೂ 1956ನೇ ಇಸವಿಯ ಕೊನೆಯ ವೇಳೆಗೆ ಅದರ ಬಾಬತ್ತು ಹಣ ಐದು ವರ್ಷಗಳಾದ ಮೇಲೆ ಕೈಗೆ ಸಿಕ್ಕಿತು. ಅದರಂತೆ ಇಲ್ಲೂ ನಾಲ್ಕು ವರ್ಷಗಳಷ್ಟು ಕಾಲ ಕಾಯಬೇಕು ಎಂದರೆ ಬಡ್ಡಿ ಬರಲಿಕ್ಕೆ ಐದು ವರ್ಷಗಳ ಮೇಲ್ಪಟ್ಟು ಆಗುತ್ತದೆ. ಇದರ ಕಡೆಗೆ ಸರಕಾರ ಸ್ವಲ್ಪ ಯೋಚನೆ ಮಾಡಬೇಕು. ಆದುದರಿಂದ ಹತ್ತು ಸಾವಿರ ಎಂದು ಮಿತಿ ಇರುವುದನ್ನು ಕಡಿಮೆ ಮಾಡಬಾರದು ಎಂದು ನನ್ನ ವಿನಂತಿ ಮತ್ತು ಅವರಿಂದ ಭೂಮಿಯನ್ನು ಕಬ್ಜ ತೆಗೆದುಕೊಂಡು ಇಷ್ಟು ದಿವಸದಲ್ಲಿಯೇ ಕ್ಯಾಷನ್ನು ಮತ್ತು ಬಾಂಡ್‌ಗಳನ್ನು ಕೊಡಬೇಕೆಂದು ಕಾನೂನಿನಲ್ಲಿಯೇ ನಮೂದು ಮಾಡಬೇಕೆಂದು ನನ್ನ ಸಲಹೆ.

ಮೂರನೇದಾಗಿ ಕ್ಲಾಸು 35ರಲ್ಲಿ 107ನೇ ಕಲಮು ತಿದ್ದುಪಡಿಯನ್ನು ಮಾಡಿ ಕೆಲವು ದೇವಸ್ಥಾನದ ಜಮೀನುಗಳನ್ನು (ಸರಕಾರದ ಮುಜರಾಯಿ ಇಲಾಖೆಗೆ ಸೇರಿದವುಗಳಿಗೆ) ವಿನಾಯಿತಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ಏನು ಪರಿಣಾಮವಾಗುತ್ತದೆ ಎಂದರೆ ನಮ್ಮ ರಾಜ್ಯದಲ್ಲಿ ಕೆಲವೇ ದೇವಸ್ಥಾನದ ಜಮೀನುಗಳಿಗೆ ಮಾತ್ರ ವಿನಾಯಿತಿ ಕೊಡುವುದರಿಂದ ಎಲ್ಲ ರೈತರಿಗೆ ಅನುಕೂಲವಾಗುವುದಿಲ್ಲ. ಏಕರೂಪತೆ ಕಾನೂನು ಮಾಡುವಾಗ ಒಂದೊಂದು ಕಡೆ ಒಂದೊಂದು ರೀತಿಯಾಗಿ ಮಾಡುತ್ತಿದ್ದರೆ ಅದರಿಂದ ಎಲ್ಲ ಭಾಗದ ರೈತರಿಗೆ ಅನುಕೂಲಗಳು ಸಿಗುವುದಿಲ್ಲ. ಅಲ್ಲದೆ ಒಂದು ಕಡೆ ಮಾತ್ರ ಎಕ್ಸೆಂಪ್‌ಷನ್ನು ಕೊಟ್ಟು ಬಾಕಿ ಕಡೆಯಲ್ಲಿರುವ ದೇವಸ್ಥಾನಗಳಿಗೆ ವಿನಾಯಿತಿ ಕೊಡದಿರುವುದು ಅನ್ಯಾಯ. ಶಿಕ್ಷಣ ಸಂಸ್ಥೆಗಳಿಗೂ ವಿನಾಯಿತಿ ಕೊಡುವುದು ಯೋಗ್ಯವಾಗಿ ನನಗೆ ಕಾಣಿಸುತ್ತದೆ. ಇದರಂತೆ ನಮ್ಮ ಭಾಗದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೂ ವಿನಾಯಿತಿ ಕೊಡಬೇಕು ಎಂದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಏಕೆಂದರೆ ನಮ್ಮ ಭಾಗದಲ್ಲಿ ಇರುವ ಶಿಕ್ಷಣ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಲವೆ. ಅವುಗಳಿಗೂ ವಿನಾಯಿತಿ ಕೊಡಬೇಕು.

ಅಧ್ಯಕ್ಷರು.—ತಾವು ಶಿಕ್ಷಣ ಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕೆಂಬ ಅಮೆಂಡುಮೆಂಟನ್ನು ಕಳುಹಿಸಿದ್ದೀರಾ ?

ಶ್ರೀ ಜಿ. ಎಸ್. ದೇಸಾಯ್.—ಇಲ್ಲ.

ಅಧ್ಯಕ್ಷರು.—ಇಲ್ಲದಿದ್ದರೆ ಬರೆದುಕೊಡಿ.

ಶ್ರೀ ಜಿ. ಎಸ್. ದೇಸಾಯ್.—ಹಾಗಿದ್ದರೆ ಕೊಡುತ್ತೇನೆ, ಇದಕ್ಕಾಗಿ ಬಹಳ ಸಂತೋಷ. ಕೇವಲ ಶಿಕ್ಷಣ ಒದಗಿಸುವುದಕ್ಕೆ ಎಜುಕೇಷನ್ನು ಟ್ರಸ್ಟುಗಳು ಇರುತ್ತವೆ, ಅವರಿಗೆ ನ್ಯಾಯ ಮಾಡಿದಂತಾಗುತ್ತದೆ. ಇಂಥ ಸಂಸ್ಥೆಗಳಿಗೂ ವಿನಾಯಿತಿ ಕೊಟ್ಟರೆ ಅದಕ್ಕಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಯಾವುದೇ ರೀತಿಯಿಂದ ಮಸೂದೆ ಮಾಡುವಾಗಲೂ ಅದು ಜನಕ್ಕೆ ಒಳ್ಳೆಯದಾಗುವಂತೆ ಮಾಡಬೇಕು ಮತ್ತು ಇಡೀ ರಾಜ್ಯದ ಜನಕ್ಕೆ ಒಂದೇ ರೀತಿಯಾಗಿ ಇರುವಂತೆ ಮಾಡಬೇಕು ಎಂದು ಇಷ್ಟು ಹೇಳಿ ನನಗೆ ಮಾನ್ಯ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ.

†ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸ್ವಾಮೀ, ಭೂಸುಧಾರಣೆಯ ತಿದ್ದುಪಡಿ ಮಸೂದೆ ಏನಿದೆ ಇದು ಮಾಕರಿ ಲೆಜಿಸ್ಲೇಷನ್‌ಗಳಲ್ಲಿ ಇದೂ ಒಂದು ಮಾಕರಿ ಎಂದು ಹೇಳಬಹುದು. ಸುಧಾರಣೆ ಏನೋ ಆಗಿವೆ. ಎಲ್ಲೋ ಯಾವ ರೀತಿಯಲ್ಲೋ ಆಗುತ್ತಿದೆ: 1965ನೇ ಇಸವಿಯಲ್ಲಿ ವ್ಯವಸಾಯ ಯಾವ ಮಟ್ಟದಲ್ಲಿ ಇರಬೇಕೋ ಆ ಮಟ್ಟದಲ್ಲಿ ಮುಂದುವರಿಯುತ್ತಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಇವೊತ್ತು ವ್ಯವಸಾಯವನ್ನು ಮುಂದುವರಿಸಬೇಕು ಎಂದು ಯಾವ ರೀತಿಯಾಗಿ ಮುಂದುವರಿದ ರಾಷ್ಟ್ರಗಳು ಹೋಗುತ್ತಿವೆಯೋ ಆ ರೀತಿಯಾಗಿ ಮಾಡದೆ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಎಂದು ಸಣ್ಣ ಸಣ್ಣ ಹಿಡುವಳಿದಾರರುಗಳನ್ನಾಗಿ ಮಾಡಿ ವ್ಯವಸಾಯವನ್ನು ಮಾಡಿದರೆ ವ್ಯವಸಾಯ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಖಂಡಿತವಾಗಿಯೂ ಮುಂದುವರಿಯುವುದಿಲ್ಲ. ಕಾನೂನನ್ನು ತಂದಿರುವ ಮೂಲ ಉದ್ದೇಶವೇನು ಎಂದರೆ, ಹಿಂದೆ ಮಾನ್ಯ ರೆವೆನ್ಯೂ ಮಂತ್ರಿಗಳಾಗಿದ್ದಾಗ ಅವರೇ ಹೇಳಿರುವ ಒಂದು ರಿಪೋರ್ಟಿನಲ್ಲಿ ಏನು ಹೇಳಿದ್ದಾರೆಂದರೆ :

> "We in this country have resolved to build a socialistic society on the foundations of science and technology by democratic means and methods. Socialistic pattern of society means securing social justice, equal opportunities for all and elimination of disparity. From this point of view also land reforms are necessary"

ಆಗ ಮಿನಿಸ್ಟರ್ ಸ್ಥಾನದಲ್ಲಿದ್ದು ಇದನ್ನು ಹೇಳಿದ್ದಾರೆ. ಇದು ಮೂಲ ಉದ್ದೇಶ. ಇದು ಎಷ್ಟು ಮಟ್ಟಿಗೆ ಸಾಧ್ಯವಾಗಿದೆ ? ಈ ಲ್ಯಾಂಡು ರಿಫಾರಂಸ್ ಎಂದು ಮಾಡುವ ಕಾನೂನಿನಲ್ಲಿ ಸೋಷಿಯಲ್ ಜಸ್ಟಿಸ್ ಬರುವುದಿಲ್ಲ, ಈಕ್ವಿಟಿ ಬರುವುದಿಲ್ಲ ಮತ್ತೆ ಯಾವುದೂ ಬರುವುದಿಲ್ಲ. ಇದರಲ್ಲಿ ಕನ್ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಾಡಿಲ್ಲ. ಮೆಕನೈಸು ಮಾಡಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂದು ಇದ್ದರೂ ಆ ಉದ್ದೇಶ ಸಾಧನೆಯನ್ನು ಸರಕಾರ ಮಾಡದೆ ಈ ಕಾನೂನನ್ನು ಏತಕ್ಕಾಗಿ ರಚನೆ ಮಾಡಬೇಕು ? ಸರಕಾರದ ಮೂಲ ಉದ್ದೇಶ ಸೋಷಿಯಲ್ ಜಸ್ಟಿಸ್ ಮಾಡಬೇಕೆನ್ನುವುದೇ ಆಗಿದ್ದರೆ ಇದರಲ್ಲಿ ಸುಧಾರಣೆ ಮಾಡಿ 27 ಸ್ಟಾಂಡರ್ಡ್ ಎಕರೆ ಎಂದು ಕೆಲವರಿಗೆ ಇನ್ನೊಬ್ಬರಿಗೆ ಒಂದು ರೀತಿಯಾಗಿ ಎಂದು ಮಾಡಿದರೆ ಇದರಲ್ಲಿ ಈಕ್ವಿಟಿ ಹಾಗೂ ಸೋಷಿಯಲ್ ಜಸ್ಟಿಸ್ನು ಬರುತ್ತದೆಯೇ ? ಇದನ್ನು ತಾವು ಆಲೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇವೊತ್ತು ಇರತಕ್ಕ ಸನ್ನಿವೇಶವೇ ಬೇರೆ. ನಾವು ಸುಧಾರಣೆ ಮಾಡಿ ಸಾಮಾನ್ಯವಾಗಿ ಅದನ್ನು ಹೋಲಿಸಿ ನೋಡಿದರೆ ನಮ್ಮ ಮಾನ್ಯ ಜತ್ತಿಯವರ ರಿಪೋರ್ಟ್ ಪ್ರಕಾರ 50 ಎಕರೆಗಳಿಗೂ ಅನ್ವಯಿಸುವುದಿಲ್ಲ. 50 ಎಕರೆಗಳಿಗೂ ಮೇಲ್ಪಟ್ಟು ಇರುವುದಕ್ಕೂ ಅನ್ವಯವಾಗುವುದಿಲ್ಲ ಇದರ ಪರ್ಸೆಂಟೇಜು ಯಾವ ರೀತಿ ಇದೆ ಎಂದರೆ :

60ರಿಂದ 75ರವರಿಗೆ ಶೇಕಡಾವಾರು ಹೇಗಿದೆ ಎಂದರೆ ಶೇಕಡಾ. 66ರಷ್ಟು,

75ರಿಂದ 100 ಎಕರೆಗಳವರಿಗೆ ಶೇಕಡಾ	.53
100ರಿಂದ 150 ಎಕರೆಗಳವರಿಗೆ ಶೇಕಡಾ	.34
150ರಿಂದ 200 ಎಕರೆಗಳವರಿಗೆ ಶೇಕಡಾ	.10
200ರಿಂದ 300 ಎಕರೆಗಳವರಿಗೆ ಶೇಕಡಾ	.07
300 ಎಕರೆಗಳಿಂದ 500 ಎಕರೆಗಳವರಿಗೆ	.03
500 ಎಕರೆಗಳಿಂದ 1000 ಎಕರೆಗಳವರಿಗೆ	.01
1000 ಎಕರೆಗಳಿಗೆ ಮೇಲ್ಪಟ್ಟು ಇರುವುದಕ್ಕೆ	.005

ಒಟ್ಟು 3.46 ಪರ್ಸೆಂಟ್ ಜನರಿಗೆ ಮಾತ್ರ ಇದು ಸ್ವಲ್ಪ ಅಫೆಕ್ಟ್ ಆಗುತ್ತದೆ. ಕೇವಲ 2 ಪರ್ಸೆಂಟ್ ಜನರಿಗೆ ಅಫೆಕ್ಟ್ ಆಗುತ್ತದೆ ಎಂದು ಇಂಥ ರಿಫಾರ್ಮ್ಸ್ ತರಬೇಕೇ ? ಈ ರಿಫಾರ್ಮ್ಸ್ ಜಾರಿ ಮಾಡುವುದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ? ಮಾನ್ಯ ಕೃಷ್ಣಪ್ಪನವರು ಮಸೂದೆಯ ಜೊತೆಗೆ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಕಾಂಪೆನ್‌ಸೇಷನ್ಸ್ ಎಷ್ಟು ಕೊಡಬೇಕಾಗುತ್ತದೆ, ಎಷ್ಟು ಜನ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದಕ್ಕೆ ಫೈನಾನ್ಸಿಯಲ್ ಆಸ್ಪೆಕ್ಟ್ ಇದರಲ್ಲಿ ಸೇರಿಸಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಮಾಡುವುದು ಅಷ್ಟು ಸುಲಭವಲ್ಲ. ಜಪಾನ್ ದೇಶದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬಂದಾಗ್ಗೆ ಒಂದು ಕಡೆ ಈ ರೀತಿ ಹೇಳಿದ್ದಾರೆ :—

> "The land-reform programme was not an easy one to carry out. It involved changes in the property rights of some 6 million families of whom over 2 million had every motive for trying to obstruct its purposes. It required considerable

> executive ability and conscientious integrity from over 36,000 paid officials, 115,000 illremunerated committee members, and some quarter of a million voluntary hamlet auxiliaries.''

ನಮ್ಮ ದೇಶದಲ್ಲಿಯೂ ಕೂಡ ಅಂಥ ಪುಢಾರಿಗಳು ಇದ್ದಾರೆ. ಅವರು ತೊಂದರೆ ಉಂಟುಮಾಡುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಇಷ್ಟು ಬೃಹದಾಕಾರವಾದ ಲ್ಯಾಂಡ್ ರಿಫಾರ್ಮ್ಸ್ ತಂದಿದ್ದೀರಿ. ಇಂಥ ಲ್ಯಾಂಡ್ ರಿಫಾರ್ಮ್ಸ್ ಕಾರ್ಯಗತ ಮಾಡಬೇಕಾದರೆ ಎಷ್ಟು ಹಣ ಕೋಟಿ ಗಟ್ಟಲೆ ವ್ಯಯ ಮಾಡಬೇಕಾಗುತ್ತದೆ ಎನ್ನುವುದಕ್ಕೆ ಗಮನ ಕೊಡಬೇಕು. ಕಂದಾಯ ವಸೂಲ್ಮಾಡುವುದಕ್ಕೆ ಕಷ್ಟವಾಗಿದೆ. ಸರಕಾರಕ್ಕೆ ಟ್ಯಾಕ್ಸ್ ಮೂಲಕ ಬರುವ ಎಲ್ಲ ದುಡ್ಡನ್ನು ಖರ್ಚು ಮಾಡಿದರೂ ಕೂಡ ಕಂದಾಯ ವಸೂಲು ಮಾಡುವುದಕ್ಕೆ ಕಷ್ಟ ಬರುತ್ತದೆ. ಅಷ್ಟರಲ್ಲಿ ಪಾರ್ಟಿ ಚೇಂಜ್ ಮಾಡಿ ಅವರು ಇನ್ನೊಂದು ಪಾರ್ಟಿಗೆ ಹೋದರೆ ಬೇರೆ ರೀತಿಯಾಗಿ ಹೇಳುತ್ತಾರೆ. ದುಡ್ಡು ಮಾತ್ರ ಖರ್ಚಾಗುತ್ತದೆ. ಜನರಿಗೆ ಅನುಕೂಲವಾಗುವುದಿಲ್ಲ. ಈ ರೀತಿ ಮಾಡಿದರೆ ಜನರಿಗೆ ಸೋಷಿಯಲ್ ಜಸ್ಟಿಸ್ ದೊರಕಿಸಿ ಕೊಡುವುದು ಹೇಗೆ ? ಚೈನಾ ದೇಶದಲ್ಲಿ ಮೊದಲು ನ್ಯಾಷನ್‌ಲೈಜ್ ಮಾಡಿ ಜಮೀನು ಹಂಚಿದ್ದಾರೆ. ಈ ವಿಚಾರದಲ್ಲಿ ಗಂಗೂಳಿ ಎಂಬುವವರು ಈ ರೀತಿ ಹೇಳಿದ್ದಾರೆ.

> ''The main principle for land distribution is that land owned by the tiller should not be drawn upon for distribution."

If the tiller has rented out the land in any locality, which he has distributed, he is entitled to compensation in the form of land at the time of land distribution in his own locality.

ಎಲ್ಲಾ ಜಮೀನು ತೆಗೆದುಕೊಂಡು ನ್ಯಾಷನ'ಲೈಜ್ ಮಾಡಿ ಬಿಟ್ಟು ಎಲ್ಲರಿಗೂ ಸಮಾನವಾಗಿ ಹಂಚಿಬಿಟ್ಟರೆ ಒಳ್ಳೆಯದಾಗುತ್ತದೆ. ಹಳ್ಳಿಗಳಲ್ಲಿ 50 ಎಕರೆ 100 ಎಕರೆ ಜಮೀನು ಇಟ್ಟುಕೊಂಡ ರೈತರು ಬಹಳ ಕಡಿಮೆ. ಹಳ್ಳಿಗಳಲ್ಲಿ ಶೇಕಡ 50ರಷ್ಟು ಜನರಿಗೆ ಜಮೀನು ಇರುವುದಿಲ್ಲ. ಜಮೀನು ಇದ್ದವರಿಗೆ ಸಹ ಎರಡು ಎಕರೆ ನಾಲ್ಕು ಎಕರೆ ಇರುತ್ತದೆ. ಜಮೀನು ನಂಬಿಕೊಂಡವರಿಗೆ ಹೊಟ್ಟೆ ತುಂಬಾ ಅನ್ನ ಇರುವುದಿಲ್ಲ, ಮೈ ತುಂಬಾ ಬಟ್ಟೆ ಇರುವುದಿಲ್ಲ. ಜಮೀನಿನಲ್ಲಿ ಕೂಲಿ ಕೆಲಸ ಮಾಡತಕ್ಕಂಥವರಿಗೆ ಸುಖಲೋಲುಪ ಜೀವನ ಹೇಗೆ ಬರುತ್ತದೆ ? ಇದರಿಂದ ಸೋಷಿಯಲ್ ಜಸ್ಟಿಸ್ ಬರುತ್ತದೆಯೇ ! ಈ ಕಾನೂನಿನಲ್ಲಿರುವ ಮೂಲಭೂತವಾದ ಉದ್ದೇಶ ನೆರವೇರುತ್ತದೆಯೇ ಎಂದು ನೋಡಬೇಕು. ಎಕನಾಮಿಕ್ ಕಂಡೀಷನ್ ಗಮನದಲ್ಲಿಟ್ಟುಕೊಂಡು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡಬೇಕು ಅಂದರೆ ಅದು ನಿಜವಾದ ರಿಫಾರ್ಮ್ಸ್ ಆಗುತ್ತದೆ. ರಷಿಯಾ ದೇಶದಲ್ಲಿ ಎಲ್ಲಾ ಜಮೀನು ನ್ಯಾಷನ'ಲೈಜ್ ಮಾಡಿ ಜನರಿಗೆ ಕೊಟ್ಟು ಬಿಟ್ಟರು. ನ್ಯಾಷನ'ಲೈಜ್ ಮಾಡಿದರೆ ಒಳ್ಳೆಯದಾಗುತ್ತದೆ. ಒಟ್ಟಿನಲ್ಲಿ ಸೋಷಿಯಲ್ ಜಸ್ಟಿಸ್, ಸೋಷಿಯಲ್ ಇಕ್ವಾಲಿಟಿ ದೊರೆಯುವ ಹಾಗೆ ಮಾಡಬೇಕಾದುದು ಅಗತ್ಯ. ಪಟ್ಟಣದಲ್ಲಿರುವ ಹಾಗೆ ಹಳ್ಳಿಗಳಲ್ಲಿ ಜನ ಇಂಡಸ್ಟ್ರೀಸ್ ಅವಲಂಬಿಸಿಲ್ಲ. ಜನರು ಹೆಚ್ಚು ಕಷ್ಟದಲ್ಲಿದ್ದಾರೆ. ಪಟ್ಟಣಕ್ಕೂ ಹಳ್ಳಿಗೂ ವ್ಯತ್ಯಾಸವಿದೆ. ಪಟ್ಟಣದಲ್ಲಿರುವ ಹಾಗೆ ಹಳ್ಳಿಯ ಜನರಿಗೆ ಜೀವನ ಕಲ್ಪಿಸಿ ಕೊಡಬೇಕು. ಹಾಗೆ ಮಾಡುತ್ತೀರಾ ? ಹಳ್ಳಿಗಳಲ್ಲಿ ಜಮೀನು ಮೇಲೆ ರಿಸ್ಟ್ರಿಕ್ಷನ್ ಹಾಕಿದ್ದೀರಿ. ಆದರೆ ಪಟ್ಟಣಗಳಲ್ಲಿ ವಾಸ ಮಾಡುವವರ ಐಶ್ವರ್ಯದ ಮೇಲೆ ಯಾವ ಮಿತಿಯನ್ನೂ ವಿಧಿಸಿಲ್ಲ. ಒಂದು ಕಾನೂನು ಮಾಡಿ ಅರ್ಬನ್ ಪ್ರಾಪರ್ಟಿ ಮೇಲೆ ಸೀಲಿಂಗ್ ತರಬೇಕಾಗಿತ್ತು. ಒಂದನ್ನು ಮೊದಲು ಇನ್ನೊಂದನ್ನು ಆಮೇಲೆ ಮಾಡುವುದು ಒಪ್ಪುವುದಕ್ಕಾಗುವುದಿಲ್ಲ. ಎಲ್ಲ ಸುಧಾರಣೆಗಳನ್ನು ಒಟ್ಟಿಗೆ ತರಬೇಕು ಅಂದರೆ ಎಲ್ಲರಿಗೂ ಸಮಾಧಾನವಾಗುತ್ತದೆ. ಯಾಕೆಂದರೆ, ಸರಕಾರ ನಿದಾರ್ಕ್ಷಿಣ್ಯವಾಗಿ ಜಾರಿ ಮಾಡುತ್ತಾರೆಂದು ಜನ ಒಪ್ಪುತ್ತಾರೆ. ತರಬೇಕಾದ ಅಂಥ ರಿಫಾರ್ಮ್ಸ್ ತಂದಿಲ್ಲ. ಲ್ಯಾಂಡ್ಸ್ ಕ್ಲಾಸಿಫಿಕೇಷನ್ಸ್ ಮಾಡುವಾಗ್ಗೆ ಮನಸ್ಸಿಗೆ ಬಂದಂತೆ ಮಾಡಿದ್ದೀರಿ. ಕಾಫಿ ಪ್ಲಾಂಟೇಷನ್‌ಕ್ಕೆ ಅನ್ವಯಿಸಿದ್ದನ್ನು ಕೋಕೋನಟ್ ಪ್ಲಾಂಟೇಷನ್ನಿಗೂ ಹಾಕಿದ್ದೀರಿ. ತೆಂಗಿನಕಾಯಿ ತೋಟ ಪ್ಲಾಂಟೇಷನ್ ಆಗುತ್ತದೆಯೇ ? ಪ್ಲಾಂಟ್ಸ್ ಎಂದು ಇರುವುದರಿಂದ ಅದು ಕಾಫಿ ಪ್ಲಾಂಟೇಷನ್ ತರಹ ಆಗುತ್ತದೆಯೇ ? ಕೇರಳದಲ್ಲಿ ಎಗ್ಜೆಂಪ್ಷನ್ ಕೊಟ್ಟಿದ್ದಾರೆ. ಕಾಫಿ, ಟೀ, ಪ್ಲಾಂಟೇಷನ್ನಿಗೆ ಡಿಸ್ಕ್ರಿಮಿನೇಷನ್ ಮಾಡುವುದಕ್ಕೆ ಕಾರಣವೇನು ! ಕಾಫಿ ಪ್ಲಾಂಟೇಷನ್ ಜನರು ಕಾಂಗ್ರೆಸ್ ಪಕ್ಷದವರು ಆಗಿದ್ದಾರೆ, ತೆಂಗಿನಕಾಯಿ ತೋಟದವರು ವಿರೋಧಪಕ್ಷದವರ ಕಡೆಯವರು ಆಗಿದ್ದಾರೆಂದು ಹೀಗೆ ಮಾಡಿದ್ದೀರಾ ? ತೆಂಗಿನ ಕಾಯಿ ತೋಟಕ್ಕೆ ಲಿಮಿಟ್ ಹಾಕುವುದು ಬೇಡ. ಕಾಫಿ ಮೆಣಸು ಯಾಲಕ್ಕಿ ರಬ್ಬರು ತೋಟಗಳ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಮೇಲೆ ಸೀಲಿಂಗ್ ಲಿಮಿಟ್ ಇಡಬಹುದು. ಇದರಲ್ಲಿ ರಾಜಕೀಯ ಭೇದಭಾವ ಮಾಡುವುದು ಸರಿಯಲ್ಲ. ಕೆಲವು ರಿಫಾರ್ಮ್ಸ್ ಸರಿಯಾಗಿ ಇವೆ. ಹಿಂದಕ್ಕೆ ಶ್ರೀ ಕಡಿದಾಳ್ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿ ವರದಿಯಲ್ಲಿ ಈ ರೀತಿ ಹೇಳಿದ್ದಾರೆ—

"The Joint Select Committee has decided that widows and unmarried women need not have the privilege of leasing out their lands in future."

ಜಾಯಿಂಟ್ ಸೆಲೆಕ್ಟ್ ಕಮಿಟಿಯು ಈ ತೀರ್ಮಾನ ಮಾಡಿದ್ದರೂ ಕೂಡ ಅದಕ್ಕೆ ಈಗ ಮನ್ನಣೆ ಕೊಟ್ಟಿಲ್ಲ. ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ಇಲ್ಲಿ ಕಾಂಪನ್‌ಸೇಷನ್ನನ್ನು ಎರಡು ಸಾವಿರದವರೆಗೂ ನಗದಹಣದಲ್ಲಿ ಕೊಡಬಹುದು ಎಂದು ಹೇಳಿದ್ದಾರೆ. ಅದಕ್ಕೆ ಜಾಸ್ತಿಯಾದಲ್ಲಿ ಅದರ ಬಗ್ಗೆ ಬಾಂಡುಗಳನ್ನು ಕೊಡಬಹುದು ಎಂದು ಹೇಳಿ ಅದಕ್ಕೆ ಕೊಡತಕ್ಕ ಬಡ್ಡಿಯನ್ನು ನಾಲ್ಕೂವರೆ ಪರ್ಸೆಂಟೆಂದು ಹೇಳಿದ್ದಾರೆ. ಇದು ನ್ಯಾಯವಾದ್ದಲ್ಲ. ಈ ದಿವಸ ಅವರಿಗೆ ದೊರೆಯತಕ್ಕ 10 ಸಾವಿರ ರೂಪಾಯಿಗಳನ್ನು ರಿಜರ್ವ್ ಬ್ಯಾಂಕಿನಲ್ಲಿ ಷೇರ್ ರೂಪದಲ್ಲಿಟ್ಟರೆ ಅವರಿಗೆ ಸರಾಸರಿ 8 ಪರ್ಸೆಂಟ್ ಬಡ್ಡಿ ಸಿಕ್ಕುತ್ತೆ. ಸರ್ಕಾರದವರು ಅವರಿಗೆ ಕೊಡತಕ್ಕ ದುಡ್ಡನ್ನಾದರೂ ಕೊಟ್ಟರೆ ಅವರು ಅದನ್ನು ಬೇರೆ ಕಡೆ ಇನ್‌ವೆಸ್ಟ್‌ಮಾಡಿ ಅವರ ಜೀವನ ಮಾಡಿಕೊಳ್ಳುತ್ತಾರೆ. ಸರ್ಕಾರದವರು ಈ ಪರಿಹಾರ ದ್ರವ್ಯವನ್ನು ನಗದಾಗೇ ಕೊಡಬೇಕು, ತಪ್ಪಿದಲ್ಲಿ ಅವರ ಹಣಕ್ಕೆ ಬ್ಯಾಂಕ್ ದರದಲ್ಲಿ ಬಡ್ಡಿಯನ್ನಾದರೂ ಕೊಡಬೇಕಾದ್ದು ಧರ್ಮ. ಇನ್ನು ಸರ್ಕಾರದವರು ಈ ದಿವಸ ಈ ದೊಡ್ಡ ದೊಡ್ಡ ಸ್ಪೆಷಲೈಜ್ಡ್ ಫಾರಂಗಳಿಗೂ, ಎಫಿಷಿಯಂಟ್ಲಿ ಮ್ಯಾನೇಜ್ಡ್ ಫಾರಂಗಳಿಗೂ ಸಾಕಷ್ಟು ಜಮೀನನ್ನು ಬಿಟ್ಟಿರುವಾಗ ಹಳ್ಳಿಗಳಲ್ಲಿರತಕ್ಕ ಸಣ್ಣ ಪುಟ್ಟ ದೇವಾಲಯಗಳಿಗಿದ್ದ 3—4 ಎಕರೆ ಭೂಮಿಯನ್ನು ನಾಳೆ ಈ ಕಾನೂನು ಜಾರಿಗೆ ಬಂದಮೇಲೆ ಆ ದೇವಸ್ಥಾನದ ಪೂಜಾರಿಗಳೇ ಅದಕ್ಕೆ ಖಾಯಂ ಟೆನೆಂಟ್ ಆಗುತ್ತಾರೆ. ಆಗ ಆ ದೇವಸ್ಥಾನದಲ್ಲಿರತಕ್ಕ ದೇವರನ್ನು ಯಾರೂ ಪೂಜೆಮಾಡುವುದಕ್ಕೆ ಇರುವುದಿಲ್ಲ. ಅವುಗಳೆಲ್ಲಾ ಹಾಳುಬಿದ್ದು ಹೋಗಬೇಕಾಗುವುವು. ನಾಳೆ ಈ ದೇವಸ್ಥಾನಗಳಿಗೆಲ್ಲಾ ಸರ್ಕಾರದವರು ದುಡ್ಡುಕೊಟ್ಟು ಪೂಜೆಗೆ ಏರ್ಪಾಡನ್ನು ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಆಯಾ ದೇವಸ್ಥಾನಗಳಿಗಿರತಕ್ಕ ಜಮೀನನ್ನು ಅವುಗಳಿಗೇ ಬಿಟ್ಟುಬಿಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Before I call upon the next member I would like to settle the Business for tomorrow. Can we meet tomorrow morning ?

Sri S. SIVAPPA.—I agree.

Mr. SPEAKER.—But we must get the information about the assent and publication. Is it not better that we meet at 12 ' 0 ' Clock ?

Sri B. D. JATTI (Minister for Finance).—There is a slight difficulty. The Revenue Minister will have to be present in this House and also the other House to-morrow. The other House had met this morning and is to meet tomorrow in the after noon. If we meet in the afternoon, it is not possible to inform all the Council Members to meet in the morning. Therefore, we may meet in the morning here.

Mr. SPEAKER.—But we must be sure that the assent and the publication would be done and information must be given to me that it is done. I suggest that contact may be made immediately and by the time the next speaker finishes I would like to be informed something definitely. The Leader of the Opposition may also be consulted.

† ಶ್ರೀ ಎನ್. ಎ. ಕರಿಲಿಂಗಣ್ಣನವರ್ (ಗೋಕಾಕ್-1).—ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದಿರತಕ್ಕ ಭೂ ಸುಧಾರಣೆಯ ಸಲುವಾಗಿ ನಾನು ಈಗ ಕೆಲವೊಂದು ಮಾತುಗಳನ್ನು ಆಡಬೇಕೆಂದು ಇಚ್ಛಿಸಿದ್ದೇನೆ. ಮುಂಬೈ ಕರ್ಣಾಟಕದವರಾದ ನಮಗೆ ಅಂದರೆ, ನಮ್ಮ ಉತ್ತರ

ಕರ್ನಾಟಕದ 4 ಜಿಲ್ಲೆಯವರಿಗೆ ಈ ಮಸೂದೆಯಿಂದೇನೂ ಅನುಕೂಲವಾಗುವುದಿಲ್ಲ. ಅದಕ್ಕೆ ಕಾರಣ ನಾವು ಇಲ್ಲಿ ಚರ್ಚೆಮಾಡತಕ್ಕ ವಿಷಯವೇನಿದೆ ಇದೂ ನಮ್ಮ ಮುಂಬೈ ಕರ್ನಾಟಕದಲ್ಲಿ ಇಲ್ಲಿಗೆ 10-18 ವರ್ಷಗಳ ಹಿಂದೆಯೇ ಸಂಪೂರ್ಣವಾಗಿ ಮುಗಿದುಹೋಗಿತ್ತು. ಆ ದಿವಸ ಅಲ್ಲಿ ಈ ಸೀಲಿಂಗ್ ಲಿಮಿಟ್ಟನ್ನು 48 ಎಕರೆಗಳೆಂದು ನಿಗದಿ ಮಾಡಲಾಗಿತ್ತು. ಆದರೆ ಇತ್ತೀಚೆಗೆ 5 ರಾಜ್ಯಗಳ ಪ್ರದೇಶಗಳು ಒಂದು ಆಡಳಿತಕ್ಕೆ ಸೇರಿದ ನಂತರ ಈ ಐದು ಭಾಗಗಳಿಗೂ ಒಂದು ಏಕರೂಪತೆಯ ಕಾನೂನನ್ನು ತರಬೇಕೆಂಬ ಉದ್ದೇಶದಿಂದ ಈ ಹಿಂದೆ ಈ ಸೀಲಿಂಗ್ ಮಿತಿಯನ್ನು ಇಲ್ಲಿ 27 ಸ್ಟ್ಯಾಂಡರ್ಡ್ ಎಕರೆಗಳೆಂತೆ ಮಾಡಿದರು. ಇದರಿಂದಲೂ ರೈತರಿಗೆ ಸುಮಾರು ಜಮೀನು ಸಿಗದಂತಾಯಿತು. ಹೀಗಾಗಿ ಈ ಸೀಲಿಂಗ್ ಮಟ್ಟ ಕಡಮೆಯಾಗದೆ ಮೊದಲೇನು ಒಂದು ಪರಿಸ್ಥಿತಿಯಿತ್ತೋ ಅದು ಹಾಗೇ ಉಳಿಯಿತು. ಆದುದರಿಂದ ಇದರಿಂದ ರೈತನಿಗೇನೂ ಲಾಭವಾಗಲಿಲ್ಲ. ಆದುದರಿಂದ ಈಗ ತಂದಿರತಕ್ಕ ಬಿಲ್ಲಿನಿಂದ ಆಗತಕ್ಕ ಉಪಕಾರವೇನಿದ್ದರು ಅದು ಆ ಜಮೀನ್ದಾರನಿಗೇ ಸೇರುವುದಾಗಿದೆ. ಈ ಬಿಲ್ಲಿನ ಸ್ವರೂಪ ಹೀಗಿದ್ದರೂ 1961 ನೇ ಇಸವಿಯಲ್ಲಿ ಯಾರು ಜಮೀನನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೋ ಅದನ್ನು ವಿಚಾರಮಾಡಿ ಅಂಥವರಿಗೇ ಆ ಜಮೀನಿನ ಜೀವದಾನ ಮಾಡಬೇಕು ಅಂತ ಇದರಲ್ಲಿದೆ. ನಮ್ಮ ಮುಂಬೈ ಕರ್ನಾಟಕದಲ್ಲಿ ಸೀಲಿಂಗಿಗಿಂತ ಜಾಸ್ತಿಯಿದ್ದ ಭೂಮಿಯನ್ನು ಅವರು ಮೊದಲೇ ಮಾರಿಕೊಂಡಿದ್ದರು. ರೈತನಿಗೆ ಯಾವ ರೀತಿಯಿಂದ ಪ್ರಯತ್ನಪಟ್ಟಾಗ್ಗೂ ಭೂಮಿ ಅವನಿಗೆ ಸಿಗಬಾರದು ಅಂತ ಅವರೆಲ್ಲರೂ ಅನೇಕ ರೀತಿಯಿಂದ ಭೂಮಿಯನ್ನು ವಿಲೇವಾರಿ ಮಾಡಿದ್ದಾರೆ. ಆದಕಾರಣ ನಾವೀದಿವಸ ಇದರಲ್ಲಿ 1961 ನೇ ಇಸವಿಯಲ್ಲಿ ಯಾವ ಯಾವ ಭೂ ಮಾಲಿಕನಲ್ಲಿ ಎಷ್ಟೆಷ್ಟು ಜಮೀನಿತ್ತು ಎಂಬುದಕ್ಕೆ ಬದಲಾಗಿ 1948 ನೇ ಇಸವಿಯಲ್ಲಿ ಯಾವ ಯಾವ ಭೂ ಮಾಲೀಕನಲ್ಲಿ ಎಷ್ಟೆಷ್ಟು ಜಮೀನಿತ್ತು ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡು ಅದರಂತೆ ಮಾಡಿದ್ದರೆ ಆಗ ರೈತನಿಗೆ ಸ್ವಲ್ಪ ಅನುಕೂಲವಾಗುತ್ತಿತ್ತು. ಆದರೆ ಅದನ್ನು ಮಾಡದಿರುವುದರಿಂದ ಈಗ ಜಮೀನ್ದಾರರಲ್ಲಿ ಏನೇನೂ ಜಮೀನು ಉಳಿದಿರುವುದಿಲ್ಲ. ಇನ್ನು 1961ರ ಸೀಲಿಂಗ್ ಮಟ್ಟಕ್ಕಿಂತ ಯಾರಲ್ಲಿ ಜಮೀನು ಹೆಚ್ಚಿಗೆ ಉಳಿಯುತ್ತದೊ ಅಂಥವರು ಒಂದು ನೋಟೀಸನ್ನು ಕೊಡಬೇಕೆಂದು ಒಂದು ಅಮೆಂಡ್‌ಮೆಂಟನ್ನು ಬೇರೆ ತಂದಿದ್ದಾರೆ. ಹೀಗೆ ಈ ದಿವಸ ಒಂದು ನೋಟೀಸನ್ನು ಕೊಡತಕ್ಕ ಅವಶ್ಯಕತೆ ಇನ್ನೂ ಉಳಿದಿದೆಯೇ ಎಂತ ನೋಡುವುದಾದರೆ ನನ್ನ ಅಭಿಪ್ರಾಯದಲ್ಲಿ ಈ ನೋಟೀಸನ್ನು ಕೊಡತಕ್ಕ ಕಾರ್ಯ ನಮ್ಮ ಮುಂಬೈ ಕರ್ನಾಟಕದಲ್ಲಿ ಈಗಾಗಲೇ ಮುಗಿದಿದೆ ಎಂದು ನಾನು ಹೇಳುತ್ತೇನೆ. ಹಾಗಿದ್ದರೂ ಮತ್ತೆ ಈಗ ಬೇರೆ ಒಂದು ನೋಟೀಸನ್ನು ಕೊಡಬೇಕೆಂದು ಹೇಳಿದರೆ ಅದು ತುಂಬಾ ಅನ್ಯಾಯವಾಗುತ್ತದೆ.

ರೈತನ ಹತ್ತಿರ ಜಮೀನು ಉಳಿಯುತ್ತದೆಯೇ ಹೇಗೆ ಅಂತ ವಿಚಾರ ಮಾಡಿದರೆ ಏನೇನೂ ಉಳಿಯುವುದಿಲ್ಲ ಪುನಃ ನೋಟೀಸ್ ಕೊಡುವಂತಹ ಪರಿಸ್ಥಿತಿ ಮಾಡಬಾರದು ಎಂದು ಕಳಕಳಿಯಿಂದ ಈ ಒಂದು ಸಲಹೆಯನ್ನು ಮಾಡುತ್ತೇನೆ. ಈ ತಿದ್ದುಪಡಿ ತಂದಿರುವುದು ಇದನ್ನೆಲ್ಲಾ ನೋಡಿದರೆ ಜಮೀನ್ದಾರರು ತತ್ ಸಂಬಂಧಿಗಳು ಯಾರಿದ್ದಾರೆ ಅವರ ದೃಷ್ಟಿಯಿಂದಲೇ ತಂದಿರುವುದಾಗಿರುವುದರಿಂದ ರೈತರಿಗೆ ಜಮೀನು ಸಿಕ್ಕುವುದಿಲ್ಲ. ಎಂದಮೇಲೆ ಉಳುವವನೆ ಭೂಮಿಯ ಒಡೆಯನಾಗಬೇಕು, ಭೂಮಿಯನ್ನು ಅವನೇ ಪ್ರತ್ಯಕ್ಷವಾಗಿ ಉಳಬೇಕು ಎಂಬ ಭೂಮಿಕೆಯನ್ನು ಇಟ್ಟುಕೊಂಡು ಯಾವ ಒಂದು ಮಸೂದೆಯನ್ನು ಹಿಂದೆ ತಂದಿತ್ತು ಅದು ಬರೀ ಕಾಗದದ ಮೇಲೆ ಉಳಿದಿದೆಯೇ ಹೊರತು ಉಳುವವನಿಗೆ ಏನೇನೂ ಜಮೀನು ಸಿಕ್ಕುವುದಿಲ್ಲ. ಹೆಸರಿಗೆ ಮಾತ್ರ ಅವನದು ಆದರೆ ಅದನ್ನು ಉಳುವವರೇ ಬೇರೆ ಎನ್ನುವಂತೆ ಇದು ನಡೆದಿದೆ ಎಂಬುದನ್ನು ವಿಚಾರ ಮಾಡಬೇಕು. ಹಾಗಾದರೆ ಉಳುವವನಿಗೆ ಜಮೀನು ಹೇಗೆ ಸಿಕ್ಕುತ್ತದೆ! ಏನೂ ಸಿಕ್ಕುವುದಿಲ್ಲ ಇದನ್ನು ತಿಳಿದುಕೊಂಡು ಉಳುವವನಿಗೆ ಭೂಮಿ ಸಿಕ್ಕಬೇಕಾದರೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗಿದೆ. 18 ವರ್ಷಗಳ ಕಾಲ ಇದನ್ನು ನಿಧಾನ ಮಾಡಿದ್ದರಿಂದ ಇದರ ಹಿತಸಂಬಂಧಿಗಳು ರೈತನಿಗೆ ಯಾವ ರೀತಿಯಲ್ಲೂ ಭೂಮಿ ಸಿಕ್ಕಬಾರದು ಎನ್ನುವ ರೀತಿಯಲ್ಲಿ ತಮ್ಮ ಹೆಂಡಿರು, ಮಕ್ಕಳ ಹೆಸರಿನಲ್ಲಿ ಜಮೀನನ್ನು ಮಾಡಿಕೊಂಡಿದ್ದರೆ ರೈತನಿಗೆ ಯಾವ ಒಂದು ಭೂಮಿಯೂ ಸಿಕ್ಕದ ಪರಿಸ್ಥಿತಿ ಮಾಡಿಬಿಟ್ಟಿದ್ದಾರೆ. ಎಂದಮೇಲೆ ರೈತನಿಗೆ ಹೇಗೆ ಭೂಮಿ ಸಿಕ್ಕುತ್ತದೆ? ಎರಡು ಲಕ್ಷ ಎಕರೆ ಭೂಮಿ ಸಿಕ್ಕುತ್ತದೆ ಎಂದು ತಾವು ತಿಳಿದುಕೊಂಡಿದ್ದೀರಿ, ಅದೂ ಕೂಡ ಸಿಕ್ಕದಂತಹ ಪರಿಸ್ಥಿತಿಯನ್ನು ಅವರು ಮಾಡಿಬಿಟ್ಟಿದ್ದಾರೆ. ಅದರ ಹಿತಸಂಬಂಧಿಗಳು ಎರಡು ಅಂಕಿಯನ್ನು ಅಳಿಸಿಬಿಟ್ಟು ಯಾವ ರೈತರಿಗೂ ಜಮೀನು ಸಿಕ್ಕಬಾರದು ಎಂದು ಹೇಳಿ ಎರಡರ ಮುಂದೆ ಐದು ಪೂಜಿಯನ್ನು ಇಟ್ಟುಬಿಟ್ಟಿದ್ದಾರೆ. ಏನೂ ಜಮೀನು ಸಿಕ್ಕದಂತಹ ಪರಿಸ್ಥಿತಿ ಆಗಿಹೋಗಿದೆ. ಎಷ್ಟೋ ಮಂದಿ ಇಲ್ಲೂ ಸಹ ಸಾಮಾನ್ಯವಾಗಿ ಎಲ್ಲ ಸದಸ್ಯರೂ ರೈತನ ವಿಷಯ ಬಂದರೆ ಬಹಳ ಕಳಕಳಿಯಿಂದ ರೈತನ ಹಿತದೃಷ್ಟಿಯಿಂದ ಕೆಲಸಮಾಡಬೇಕು ಎಂದು ಹೇಳಿ ಮಾತನಾಡುತ್ತಾರೆ. ಆದರೆ ಇದು ಎಂತಹ ಪರಿಸ್ಥಿತಿ ಎಂದರೆ ರೈತನ ಮೂಗಿಗೆ ತುಪ್ಪ ಹಚ್ಚುವ ಪರಿಸ್ಥಿತಿ ಬಂದಿದೆ. ಇದರ ಹಿತಸಂಬಂಧಿಗಳು ಕೊಡುತ್ತಾ ಇರತಕ್ಕ ತುಪ್ಪದ ವಾಸನೆಯನ್ನು

(ಶ್ರೀ ಎಸ್. ಎ. ಕರಿಲಿಂಗಣ್ಣನವರ್)

ಹಿಡಿದುಕೊಂಡು 'ಜಮೀನು ಸಿಕ್ಕುತ್ತದೆ, ಜಮೀನು ಸಿಕ್ಕುತ್ತದೆ' ಎಂದು ರೈತ ಪರಿತಪಿಸುತ್ತಾ ಇರತಕ್ಕ ಪರಿಸ್ಥಿತಿ ಬಂದಿದೆ. ಈ ರೀತಿ ಒಂದು ತಪ್ಪುವನ್ನು ಆತನ ತಲೆಯೊಳಗೆ ಇದರ ಹಿತಸಂಬಂಧಿಗಳು ಹಾಕಿದ್ದಾರೆ. ಆದ್ದರಿಂದ ಉಳುವವನಿಗೆ ಪ್ರತ್ಯಕ್ಷವಾಗಿ ಜಮೀನು ಸಿಕ್ಕಬೇಕಾದರೆ, ಉಳುವವನ ಹಿತವಾಗಬೇಕಾದರೆ ಈ ಬಿಲ್ಲಿನಿಂದ ಏನೇನೂ ಸಾಧನೆಯಾಗುವುದಿಲ್ಲ, ಇದರಿಂದ ಏನೇನೂ ಉಪಯೋಗವಿಲ್ಲ ಎಂದು ನಾನು ಹೇಳುತ್ತೇನೆ. ಇದರ ಹಿತಸಂಬಂಧಿಗಳು ಪೂರ್ವದಿಂದ ಯಾರು ಇದ್ದಾರೆ ಅವರ ಹಿತ ಇದರಿಂದ ಆಗುತ್ತದೆಯೇ ಹೊರತು ಮತ್ತೆ ಏನೇನೂ ಆಗುವುದಿಲ್ಲ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದರ ಸಲುವಾಗಿ ಇನ್ನಾದರೂ ವಿಚಾರ ಮಾಡಿ ನೋಟೀಸ್ ಕೊಡುವಂತಹ ಪರಿಸ್ಥಿತಿಯನ್ನು ಬದಲಾಯಿಸಬೇಕು. ಮುಂಬೈ ಕರ್ನಾಟಕದ ಪರಿಸ್ಥಿತಿಯಂತೆ ಮಾಡಬಾರದು ಇದು ಒಂದನೆಯದು. ಮತ್ತು ಎರಡನೆಯದು 1961 ರಿಂದ ನೋಟೀಸ್ ಕೊಡಬೇಕೆಂದು ಮಾಡಿರುವುದರ ಬದಲಾಗಿ ಮುಂಬೈ ಕರ್ನಾಟಕದಲ್ಲಿ ಯಾವ ದಿವಸ ಈ ಬಿಲ್ ಪಾಸ್ ಆಯಿತೋ ಅಂದಿನವರೆಗೂ ಕೊಡಬೇಕೆಂದೂ ಹೇಳುತ್ತೇನೆ. ಏಕೆಂದರೆ, ಇದರ ಹಿತಸಂಬಂಧಿಗಳು ಅಂದಿನಿಂದ ಅನೇಕ ಅದಲು ಬದಲು ಮಾಡಿದ್ದಾರೆ. ಅದು ಪುನಃ ರೈತನಿಗೆ ಸಿಕ್ಕುವಂತಹ ಪರಿಸ್ಥಿತಿ ಒದಗಬೇಕು. ಕೆಲವರು ತಮ್ಮ ಹೆಂಡಿರು, ಮತ್ತು ಒಂದು ವರ್ಷದ ಮಗುವಿನ ಹೆಸರಿನಲ್ಲೂ ಸಹ ಜಮೀನನ್ನು ಮಾಡಿರುವ ಪರಿಸ್ಥಿತಿ ಇದೆ. ಆದ್ದರಿಂದ 1948 ರಿಂದ ಯಾರು ಅದಲು ಬದಲು ಮಾಡಿದ್ದಾರೆ ಅವರ ಕಡೆಯಿಂದ ಪುನಃ ಜಮೀನು ಸಿಕ್ಕಬೇಕು. ಅಂತಹ ಒಂದು ತಿದ್ದುಪಡಿಯನ್ನು ಹಾಕಬೇಕೆಂದು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಉಳುವವನೇ ಭೂಮಿಯ ಒಡೆಯ ಎಂಬ ಈ ಹಿಂದಿನ ಒಂದು ತತ್ವದ ಮೇಲೆ ಈ ಮಸೂದೆಯನ್ನು ತಂದದ್ದಾಗಿದೆ. ಇವತ್ತಿನ ಪರಿಸ್ಥಿತಿಯನ್ನು ಅವಲೋಕಿಸಿ ನೋಡಿದಾಗ ಮತ್ತು ಈ ತಿದ್ದುಪಡಿ ಮಸೂದೆಯನ್ನು ಅಳವಡಿಸಿದ ರೀತಿಯನ್ನು ನೋಡಿದರೆ ಉಳುವವನಿಗೆ ಯಾವುದೇ ತರಹದ ಸೌಲತ್ತೂ ಸಿಕ್ಕುತ್ತಿಲ್ಲ. ಸಣ್ಣ ಹಿಡುವಳಿದಾರರಿಗೆ ಯಾವ ತರಹದ ರಕ್ಷಣೆಯನ್ನು ತಾವು ಒದಗಿಸುತ್ತೀರಿ ಎಂಬುದನ್ನು ತಾವು ಹೇಳದೇ ಹೋಗತಕ್ಕ ಪರಿಸ್ಥಿತಿ ಇದೆ. ಇವತ್ತು ದೇಶದಲ್ಲಿ ಎಷ್ಟು ಸ್ಥಳ ಜನರಿಗೆ ಉಳಿಯುತ್ತದೆ ಈ ಮಸೂದೆಯಿಂದ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳದೇ ಹೋದರು. ಇವತ್ತಿನ ದಿವಸ ಉತ್ತರವನ್ನು ಹೇಳುವಾಗ ಅದನ್ನು ವಿಸ್ತಾರವಾಗಿ ಹೇಳಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

14ನೇ ಕ್ಲಾಸ್‌ನಲ್ಲಿ ಕೆಲವೊಂದು ರಿಯಾಯಿತಿಗಳನ್ನು ಕೊಟ್ಟಿದ್ದೀರಿ. ವಿಧವೆಯರು ಮತ್ತು ಮದುವೆಯಾಗದೇ ಇರತಕ್ಕವರು ಇಂತಹವರಿಗೆ ವಿನಾಯಿತಿ ಇದೆ. ಮುಂಬೈ ಕರ್ನಾಟಕ ಪ್ರದೇಶದಲ್ಲಿ ದೇವದಾಸಿಯರು ಇದ್ದಾರೆ. ಅವರಿಗೆ ಯಾವ ತರಹದ ಸೌಲಭ್ಯವೂ ಇಲ್ಲದೇ ಹೋದರೆ ಅವರು ಹೇಗೆ ಜೀವನ ಮಾಡಬೇಕು ? ಅವರಿಗೂ ಸಾಕಾದಷ್ಟು ಹೊಲಗಳು ಇವೆ, ಅವರಿಗೆ ವಿನಾಯಿತಿ ಕೊಡದೇ ಇರತಕ್ಕ ಪರಿಸ್ಥಿತಿ ಇರುವುದರಿಂದ ಅವರಿಗೂ ಕೂಡ ವಿನಾಯಿತಿ ಕೊಡಬೇಕೆಂದು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ದೇವದಾಸಿ ಅವರ ಸಲುವಾಗಿ ಏಕೆ ತಮಗೆ ಇಷ್ಟೊಂದು ಕಳಕಳಿ ?

ಶ್ರೀ ಸಿದ್ದಯ್ಯ ಕಾಶೀಮಠ್.—ಮುಂದೆ ಕಾಯಿದೆ ತಂದು ಅದನ್ನೂ ಕೂಡ ತೆಗೆದು ಹಾಕಬಹುದು. ಅಲ್ಲಿಯವರೆಗೂ ಕೂಡ ಪರಿಸ್ಥಿತಿ ಹದಗೆಡಬಾರದು ಎಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ಮದುವೆಯಾಗದೆ ಇರತಕ್ಕವರು ಎಂಬ ಡೆಫನಿಷನ್‌ನಲ್ಲಿ ಅವರನ್ನು ಸೇರಿಸುವುದು ಸರಿಯಾಗುವುದಿಲ್ಲ. ಅವರದೇ ಒಂದು ಪ್ರತ್ಯೇಕ ವರ್ಗ ಇದೆ, ಅದ್ದರಿಂದ ಇದನ್ನೂ ಕೂಡ ತಾವು ಆಲೋಚನೆ ಮಾಡಬೇಕು ಶ್ರೀಮಾನ್ ಜತ್ತಿಯವರಿಗೆ ಈ ವಿಷಯ ಸಾಕಾದಷ್ಟು ಗೊತ್ತಿದೆ ಅವರು ಆ ಭಾಗದಿಂದ ಬಂದವರು.

ಶ್ರೀ ಬಿ. ಡಿ. ಜತ್ತಿ.—ದೇವದಾಸಿ ಬಿಲ್ ಬಂದು ಅದು ಅಬಾಲಿಷ್ ಆಗಿದೆ. ಕಾನೂನು ಪ್ರಕಾರ ಅವರು ಇಲ್ಲವೇ ಇಲ್ಲ. ಆದ್ದರಿಂದ ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಅದನ್ನು ಒಪ್ಪುತ್ತೇನೆ. ಆದರೆ ಈಗಾಗಲೇ ಇದ್ದಂಥವರಿಗೆ ಏನು ಮಾಡುತ್ತೀರಿ ? ಅವರು ಜೀವಂತ ಇರುವವರೆಗೆ ಆದರೂ ಕೂಡ ರೂಲ್ಸ್‌ನಲ್ಲಾದರೂ ತಾವು ಸ್ವಂತಕ್ಕೆ ಎಂದು ಹೇಳಿ ಅವರಿಗೆ ಎಕ್ಸೆಂಪ್‌ಷನ್ ಕೊಡಬೇಕೆಂದು ಹೇಳುತ್ತೇನೆ.

Sri B. D. JATTI.—If they come under the category of unmarried girls, they will get exemptions.

ಶ್ರೀ ಸಿದ್ದಯ್ಯ ಕಾಶೀಮಠ್.—ಅವರಿಗೆ ಏನಾದರೂ ಸೌಲತ್ತು ಕೊಡುವುದಾದರೆ ಎಕ್ಸೆಂಪ್ಷನ್ ಕೊಡಬೇಕೆಂದು ಹೇಳುತ್ತೇನೆ. ಇನ್ನು ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ಎರಡು ವರ್ಷದ ಅವಧಿ ಕೊಟ್ಟು ಅನಂತರ ಬಿಡಿಸುವುದು ಇದೆ. ಇದರಲ್ಲಿ ತಕ್ಷಣವೇ ಬಿಡಿಸಿಕೊಡತಕ್ಕ ಪ್ರೊವಿಜನ್ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಸೆಕ್ಷನ್ 16 ರಲ್ಲಿ

the explanation given is as follows :

"For purposes of this clause, a land shall be deemed to have been transferred, if it has been transferred by act of parties (whether by sale, gift, mortgage with possession, exchange, lease or (*any other disposition*) made *inter vivos*."

ಎನ್ನುವುದು ಸರಿಯೇ ? It also applies to partition. ಅದನ್ನು ಲಾ ಡಿಪಾರ್ಟ್‌ಮೆಂಟಿನವರು ಸರಿಪಡಿಸಿಕೊಂಡು ಸೂಕ್ತವಾದ ವರ್ಡಿಂಗ್‌ನ್ನು ಸೇರಿಸಬೇಕೆಂದು ಹೇಳುತ್ತೇನೆ.

ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ನೋಟೀಸ್ ಕೊಡುವ ಪದ್ಧತಿ ಇದೆ.

It is stated that notice should be given before the 11th March 1957 under the Bombay Tenancy and Agricultural Lands Act, 1948.

ಆ ರೀತಿ ತಾವು ಕೊಡುವುದಾದರೆ ಅದು ತಪ್ಪಾಗುತ್ತದೆ. ಅದನ್ನು 31st Mach 1957 ಎಂದು ಮಾರ್ಪಡಿಸಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಸರೆಂಡರ್ ಆಫ್ ಲ್ಯಾಂಡ್ ಬೈ ಟೆನೆಂಟ್. ಟ್ರಿಬ್ಯೂನಲ್ ಇಂದ ಸರಂಡರ್ ಮಾಡಬೇಕೆಂದು ಹೇಳಿದ್ದೀರಿ. ಲ್ಯಾಂಡ್‌ನ ರೆಂಟ್‌ನ್ನು ಆಗಲಿ, ಉಳಿದ ಬಾಕಿಗಳನ್ನಾಗಲಿ ವಸೂಲು ಮಾಡತಕ್ಕ ಜವಾಬ್ದಾರಿ ತಹಸೀಲ್ದಾರರು ಹೊತ್ತಿರುವುದರಿಂದ. ಮತ್ತು ಈ ಆಕ್ಟ್‌ನಲ್ಲಿ ತಹಸೀಲ್ದಾರರಿಗೆ ಯಾವುದೇ ತರಹದ ಬೇರೆ ಕೆಲಸ ಇಲ್ಲದೇ ಇರುವುದರಿಂದ ಮತ್ತು ಅವರು ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಇರುವುದರಿಂದ ಟ್ರಿಬ್ಯೂನಲ್ ಅನ್ನುವುದಕ್ಕೆ ಬದಲಾಗಿ ತಹಸೀಲ್ದಾರ್ ಎಂದು ಹಾಕಬೇಕೆಂದು ಸಲಹೆ ಮಾಡುತ್ತೇನೆ.

ಇದೇ ರೀತಿಯಲ್ಲಿ 51ನೆಯ ಸೆಕ್ಷನ್ನಿನ ತಿದ್ದುಪಡಿಯಲ್ಲಿ ಮಾಲೀಕರಾದವರಿಗೆ ನಗದು ಹಣ ಕೊಡುವಾಗ 10 ಸಾವಿರ ರೂಪಾಯಿ ಎಂದಿರುವುದನ್ನು 2 ಸಾವಿರ ರೂಪಾಯಿ ಎಂದು ನಮೂದಿಸಿದ್ದೀರಿ. ಹೀಗೆ ಕಡಮೆ ಮಾಡಿದ್ದೀರಿ. ಈ ತಿದ್ದುಪಡಿಯನ್ನು ಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ ಬಹಳ ದಿವಸಗಳಿಂದ ಮಾಲೀಕನಾದವನಿಗೆ ಒಟ್ಟಾಗಿ ಹಣ ಬಂದರೆ ಅವನು ವ್ಯಾಪಾರ ಅಥವಾ ಬೇರೆ ಉದ್ಯಮ ಕೈಕೊಳ್ಳಬಹುದು, ಅದಕ್ಕೆ ಸಹಾಯಕಾರಿಯಾಗುತ್ತದೆ. ಹಾಗಿಲ್ಲದೆ ಕಂತಿನ ಪ್ರಕಾರ ಕೊಟ್ಟರೆ ಅಥವಾ ಹುಂಡಿ ಕೊಟ್ಟರೆ ತೊಂದರೆಯಾಗುತ್ತದೆ. ಆದುದರಿಂದ 10 ಸಾವಿರ ರೂಪಾಯಿಗಳನ್ನು ಒಟ್ಟಿಗೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

63 ನೆಯ ಸೆಕ್ಷನ್ ತಿದ್ದುಪಡಿಯಲ್ಲಿ ತಿದ್ದುಪಡಿ ಮಾಡಿರುವುದು ಸರಿಯಾಗಿ ಕಾಣುವುದಿಲ್ಲ. ಈಗಾಗಲೆ ಸಾಕಾದಷ್ಟು ವಿನಾಯಿತಿಗಳನ್ನು ಕೊಡಲಾಗಿದೆ. ಆದುದರಿಂದ ಅದನ್ನು ಅಡಿಕೆ ಮತ್ತು ತೆಂಗಿನ ಬೆಳಗೂ ಕೊಡಬೇಕೆಂದು ಹೇಳುವುದು ಸಮಂಜಸವಲ್ಲ.

107ನೆಯ ಸೆಕ್ಷನ್ನನ್ನು ತಿದ್ದುಪಡಿಮಾಡಿ ಕೆಲವು ಸರಕಾರಿ ದೇವಸ್ಥಾನಗಳಿಗೆ ರಿಯಾಯಿತಿ ತೋರಿಸಲಾಗಿದೆ. ಸರಕಾರಿ ಅಲ್ಲದೆ ಇತರ ದೇವಸ್ಥಾನಗಳು, ಮಠಗಳು, ಧಾರ್ಮಿಕ ಸಂಸ್ಥೆಗಳು ಮುಂತಾದವುಗಳಿವೆ. ಅವುಗಳಿಗೆ ವಿನಾಯಿತಿ ಕೊಡದಿದ್ದರೆ ಮಲತಾಯಿ ಭಾವನೆ ತೋರಿಸಿದಂತಾಗುತ್ತದೆ. ಆದುದರಿಂದ ಸರಕಾರ ತಂದಿರುವ ತಿದ್ದುಪಡಿಯನ್ನು ವಿರೋಧಿಸಿ ವಿನಾಯಿತಿ ಕೊಡುವುದಾದರೆ ಎಲ್ಲ ಧಾರ್ಮಿಕ ಸಂಸ್ಥೆಗಳಿಗೂ ಕೊಡಿ, ಇಲ್ಲದಿದ್ದರೆ ಯಾವುದಕ್ಕೂ ಕೊಡಬಾರದು ಎಂದು ಸಲಹೆ ಮಾಡುತ್ತೇನೆ.

ಇನ್ನು 137ನೆಯ ಸೆಕ್ಷನ್ ತಿದ್ದುಪಡಿ ಮಾಡಲಾಗಿದೆ. ಒರಿಜನಲ್ ಸೆಕ್ಷನ್ 130 ರಲ್ಲಿ 50 ರೂಪಾಯಿ ಎಂದಿರುವುದನ್ನು 100 ರೂಪಾಯಿ ಎಂದಾದರೂ ಮಾಡಬೇಕು ಅಥವಾ ಈಗ ತಂದಿರುವ ತಿದ್ದುಪಡಿಯನ್ನಾದರೂ ಬಿಡಬೇಕು. ಹಾಗೆ ಮಾಡಿದರೆ ಸರಕಾರದ ಧೋರಣೆ, ಧ್ಯೇಯವೇನಿದೆ ಉಳುವವನೇ ಭೂಮಿಯ ಒಡೆಯನಾಗಬೇಕು, ಅದರಿಂದ ಹೆಚ್ಚು ಆಹಾರ ಬೆಳೆಯಲು ಅವಕಾಶ ಮಾಡಬೇಕು ಎಂಬುದು ಅದು ಸಾರ್ಥಕವಾಗುತ್ತದೆ. ಅದನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ

(ಶ್ರೀ ಸಿದ್ದಯ್ಯ ಕಾಶೀಮಠ್)

ವಿನಾಯಿತಿ ಮಾಡಿರುವುದು ಸರಿಯಾಗಿರುತ್ತದೆ. ಆದರಿಂದ ಉಪಯೋಗವಾಗುತ್ತದೆ. ಉಳುವವನೇ ಭೂಮಿಯ ಒಡೆಯನಾಗಬೇಕೆಂಬುದಕ್ಕೆ ಎಲ್ಲರ ಬೆಂಬಲವೂ ಇದೆ. ಈ ದಿವಸ ಪ್ರತಿಯೊಬ್ಬರೂ ಕೆಲಸ ಮಾಡಬೇಕು, ಉಳುವವನಿಗೆ ಭೂಮಿ ಇಲ್ಲದಿದ್ದರೆ ಯಾವುದೇ ರೀತಿಯಿಂದಲಾದರೂ ಕೊಟ್ಟು ಹೆಚ್ಚಿನ ಆಹಾರ ಉತ್ಪತ್ತಿ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಸಲಹೆ ಮಾಡುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ನಮ್ಮ ಮುಂದಿರುವ ಭೂಸುಧಾರಣೆ ತಿದ್ದುಪಡಿ ಮಸೂದೆ ಹೇಗಿದೆಯೆಂದರೆ ರೈತರಿಗೆ ಸರಕಾರ ಕೊಟ್ಟಂಥ ಒಂದು ವರದಂತಿದೆ. ಎಂಥ ವರ ಎಂದರೆ ಯಾದವ ಕುಲ ಶಾಪದಿಂದ ಒಬ್ಬರಿಗೊಬ್ಬರು ಹೊಡೆದಾಡಿ ನಾಶವಾದಂತೆ ರೈತರೂ ಕೂಡ ಒಬ್ಬರಿಗೊಬ್ಬರು ವೈಮನಸ್ಸಿನಿಂದ ಹೊಡೆದಾಡಿ ಹಾಳಾಗಲು ಅವಕಾಶವಾಗುವಂತಿದೆ. ಈ ಬಿಲ್ಲಿನಲ್ಲಿ ಇಂಥ ವಿಷಯಗಳಿವೆ. ಹೇಗೆಂದರೆ ಈಗ ಹಳ್ಳಿಗಳಲ್ಲಿ ಸೀಲಿಂಗ್ ಲಿಮಿಟ್ ಮಾಡುತ್ತಿದ್ದೀರಿ, ಅದೇ ಸಿಟಿಗಳಲ್ಲಿ ಅದಿಲ್ಲ. ಅರ್ಬನ್ ಪ್ರದೇಶಗಳಲ್ಲಿ ಕೋಟಿಗಟ್ಟಲೆ ಐಶ್ವರ್ಯವನ್ನಿಟ್ಟುಕೊಂಡಿರಬಹುದು, ಹಳ್ಳಿಗಳಿಲ್ಲಿ ಮಾತ್ರ ಬೆಳವಣಿಗೆಗೆ ಅವಕಾಶವೇ ಇಲ್ಲ. ಅವರು ಕೂಲಿ ಕೆಲಸ ಮಾಡಬೇಕು, ಅವಿದ್ಯಾವಂತರಾಗಿಯೇ ಇರಬೇಕು ಎಂಬ ಉದ್ದೇಶ ಸರಕಾರಕ್ಕಿರಬಹುದು. ಸ್ಟಾಂಡರ್ಡ್ ಎಕರೆ ಎಂದರೆ 27 ಎಕರೆ ಎಂದು ನಿಬಂಧನೆ ಇದೆ. ಈ 27 ಎಕರೆಗಳನ್ನು ಉಳಿಸಿಕೊಳ್ಳುವುದು ಹೇಗೆ, ಬೇರೆಯವರಿಗೆ ಗುತ್ತಿಗೆಗೆ ಕೊಟ್ಟಿದ್ದರೆ ಉಳಿಸಿಕೊಳ್ಳುವುದು ಹೇಗೆ ಎಂಬುವರ ಕಡೆ ಸರಕಾರದ ಗಮನವನ್ನು ಸೆಳೆಯುತ್ತೇನೆ. ಕೆಲವರಿಗೆ 2-3 ಎಕರೆ ಜಮೀನುಗಳಿವೆ. ಅವರು ಹಳ್ಳಿಯಲ್ಲಿ ಜೀವನ ಮಾಡುವುದಕ್ಕೆ ಕಷ್ಟವಾಗಿ ಸಿಟಿಗಳಿಗೆ ಬಂದು ಜವಾನರಾಗಿ ಅಥವಾ ಗುಮಾಸ್ತರಾಗಿ ಬರುವ ಸಂಬಳ ಮತ್ತು ತಮ್ಮ ಜಮೀನಿನಿಂದ ಬರುವ ಗುತ್ತಿಗೆಯಿಂದ ಜೀವನ ಮಾಡಿಕೊಂಡು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಹಳ್ಳಿಗಳಲ್ಲಿ ಅವಕಾಶವಿಲ್ಲದಿರುವುದರಿಂದ ಸಿಟಿಗಳಲ್ಲೇ ನಿಂತು ಕಾಲ ಹಾಕುತ್ತಿದ್ದಾರೆ. ಅಂಥವರಿಗೆ ಇರುವ ಎರಡು ಎಕರೆಯನ್ನು ಕಿತ್ತುಕೊಂಡರೆ ಅವರು ಮುಂದೆ ಬರುವುದು ಹೇಗೆ ? ರಿಟೈರ್ ಆದಮೇಲೆ ಅವರ ಗತಿಯೇನು ಎಂಬುದನ್ನು ಸರಕಾರ ಮನಗಾಣಬೇಕು.

ಪ್ಲಾನಿಂಗ್ ಕಮಿಷನ್ ಅವರು ಕಾಫಿ ಬೆಳೆಗೆ ವಿನಾಯಿತಿ ಕೊಡಬೇಕೆಂದು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ಆದುದರಿಂದ ವಿನಾಯಿತಿ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಕಾಫಿ ಬೆಳೆಗಾರರಿಗೆ ಒಂದು ಸಂಘವಿದೆ. ಕಾಫಿ ಬೋರ್ಡ್ ಇದೆ. ನಮ್ಮ ರೈತನಿಗೆ ಯಾವ ಸಂಘವೂ ಇಲ್ಲ. ಒಂದು ಅಡಕೆ ತೋಟವನ್ನು ಬೆಳೆಸಬೇಕಾದರೆ 15-16 ವರ್ಷ ಖರ್ಚು ಮಾಡಿ, ಲುಕ್ಸಾನು ಅನುಭವಿಸಬೇಕು. ಇದಕ್ಕೆ ನಾಲ್ಕಾರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕು. ತೆಂಗಿನ ತೋಟವನ್ನು ಸಹ ಹತ್ತು ವರ್ಷಗಳ ಕಾಲ ಬೆಳೆಸಬೇಕು. ಆ ಕಾಲದಲ್ಲಿ ಬೇರೆ ಕಡೆ ಸಂಪಾದನೆ ಮಾಡಿದ ಹಣವನ್ನು ಇದರಮೇಲೆ ಖರ್ಚು ಮಾಡಿ ಗಿಡಗಳನ್ನು ಬೆಳೆಸುತ್ತಿರುತ್ತಾನೆ. ಇದನ್ನು ಸೀಲಿಂಗ್ ಲಿಮಿಟ್‌ಗೆ ಒಳಪಡಿಸುತ್ತಿದ್ದೀರಿ. ಇವರಿಗೆ ಸಂಘ ಶಕ್ತಿ ಇಲ್ಲ. ಯಾರೂ ಹೇಳುವವರು ಕೇಳುವವರಿಲ್ಲ ಎಂದು ಸೀಲಿಂಗ್ ಲಿಮಿಟ್‌ಗೆ ಒಳಪಡಿಸುವುದು ಸರಿಯಲ್ಲ. ಅಡಿಕೆ ಮತ್ತು ತೆಂಗಿನ ತೋಟಗಳಿಗೂ ವಿನಾಯಿತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದಿಂದ ಕೊಡತಕ್ಕ ಪರಿಹಾರ ಒಂದು ಸಾವಿರ, 1200 ರೂಪಾಯಿ ಆಗಬಹುದು. ಆದರೆ ಈಗ 5-10 ಸಾವಿರ ರೂಪಾಯಿಗಳ ಬೆಲೆ ಆ ಜಮೀನಿಗೆ ಇವತ್ತು ಬರುತ್ತದೆ. ಅದರಮೇಲೆ 5 ಸಾವಿರ ರೂಪಾಯಿ ಸಾಲ ತೆಗೆದುಕೊಂಡಿರುತ್ತಾನೆ. ಕೋರ್ಟಿಗೆ ಹೋದ ಪಕ್ಷದಲ್ಲಿ ಗೇಣಿದಾರ, ಭೂಮಾಲೀಕ ಮತ್ತು ಸಾಲ ಕೊಟ್ಟವನು ಇವರ ಪರಿಸ್ಥಿತಿ ಏನಾಗುತ್ತದೆ ? ಗೇಣಿದಾರ ಇಂಥ ಸಮಯದಲ್ಲಿ ಉಳಿಯುತ್ತಾನೆಯೇ ಎನ್ನುವುದನ್ನು ಸರ್ಕಾರ ಮನಗಾಣಬೇಕು.

ಹಳ್ಳಿಗಳಲ್ಲಿ ಪಕ್ಷ ಪಂಗಡಗಳು ಹುಟ್ಟಿಕೊಂಡು ಆಹಾರ ಪರಿಸ್ಥಿತಿ ಕೆಡುತ್ತಿದೆ. ಸರ್ಕಾರದಿಂದ ಲಕ್ಷಾಂತರ ಎಕರೆ ಜಮೀನು ಭೂಮಿ ಇಲ್ಲದವರಿಗೆ ಸಾಗುವಳಿಗೆ ಕೊಟ್ಟಿದ್ದಾರೆ. ಅದರಿಂದ ಅವನು ಏನು ಉತ್ಪತ್ತಿಯನ್ನು ಪಡೆಯುತ್ತಿದ್ದಾನೆ, ಅವನಿಗೆ ಏನು ಸೌಕರ್ಯವಿದೆ, ಅವನಿಗೆ ಸಾಗುವಳಿ ಮಾಡುವುದಕ್ಕೆ ಶಕ್ತಿ ಇದ್ದರೂ ಕೂಡ ಏನು ಸಹಾಯ ಸರ್ಕಾರ ಮಾಡಿದೆ ಎಂದು ಕೇಳುತ್ತೇನೆ. ಇವತ್ತು ರೈತನಿಗೆ ಜಮೀನು ಕೊಡಿಸಿಕೊಡುತ್ತೀರಿ. ಅವನಿಗೆ ವ್ಯವಸಾಯವನ್ನು ಷುರು ಮಾಡುವುದಕ್ಕೆ ನೇಗಿಲು, ಮುಟ್ಟು, ಗಾಡಿ ಇವುಗಳಿಗೆ ಎರಡು ಸಾವಿರ ರೂಪಾಯಿ ಬೇಕಾಗುತ್ತದೆ. ಅದನ್ನೆಲ್ಲ ಒದಗಿಸದೆ ಇದ್ದರೆ ಆಹಾರ ಪರಿಸ್ಥಿತಿ ಏನಾಗುತ್ತದೆ ಎಂದು ಸರ್ಕಾರ ಮನಗಾಣಬೇಕು.

ದೇವಸ್ಥಾನಗಳ ಭೂಮಿಗಳಲ್ಲಿ ಕೆಲಸಕ್ಕೆ ವಿನಾಯಿತಿ ಕೊಡಬೇಕು ಒಂದು 20-22 ದೇವಸ್ಥಾನಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಹೀಗೆ ಮಾಡುವುದು ಅಕ್ರಮವಾಗಬಹುದು. ಹೈಕೋರ್ಟಿಗೆ ಹೋಗಿ ಇದನ್ನು ರದ್ದು ಮಾಡಿಸುವಂಥ ಪರಿಸ್ಥಿತಿ ಬರುತ್ತದೆ. ಈ ಬಗ್ಗೆ ನ್ಯಾಯ ಶಾಖೆಗೆ ಕಳಿಸಿ,

ಅವರ ಅಭಿಪ್ರಾಯವನ್ನು ತೆಗೆದುಕೊಂಡು ವಿನಾಯಿತಿ ಕೊಡುವುದು ಒಳ್ಳೆಯದು. ಕೆಲವಕ್ಕೆ ಮಾತ್ರ ವಿನಾಯಿತಿ ಕೊಟ್ಟು ಕೆಲವಕ್ಕೆ ವಿನಾಯಿತಿ ಇಲ್ಲ ಎಂದು ಕಾನೂನು ಮಾಡುವುದು ಸೂಕ್ತವಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಜಮೀನಿಗೆ ಪರಿಹಾರವನ್ನು ಕೊಡುವಾಗ ಹಿಂದೆ ಹತ್ತು ಸಾವಿರ ರೂಪಾಯಿಗಳವರೆಗೂ ನಗದಾಗಿ ಕೊಡಬೇಕು ಎಂದು ಕಾನೂನಿನಲ್ಲಿದೆ. ಅದನ್ನು ಕೇವಲ ಎರಡು ಸಾವಿರಕ್ಕೆ ಇಳಿಸಿದ್ದಾರೆ. ಸ್ವಂತ ಆಸ್ತಿಯನ್ನು ಕಳೆದುಕೊಳ್ಳುವವನಿಗೆ ಐದಾರು ಸಾವಿರ ರೂಪಾಯಿ ಪರಿಹಾರ ಬರುವುದಾದರೆ ಅದನ್ನು 20 ವರ್ಷ ಕಾದು ಆ ನಂತರ ತೆಗೆದುಕೊಳ್ಳಬೇಕು ಎಂದರೆ ಅವರು ಜೀವನ ಮಾಡುವುದಾದರೂ ಹೇಗೆ ಸಾಧ್ಯ? ಮುಂದೆ ಅವನ ಸಂಸಾರ ಯಾವ ಸ್ಥಿತಿಗೆ ಇಳಿಯಬೇಕಾಗುತ್ತದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು ಎಂದು ತಿಳಿಸಿ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಸಭಾಪತಿಗಳೇ, ಈಗ ನಮ್ಮ ಮುಂದೆ ತಂದಿರುವ ಮೈಸೂರು ಭೂಸುಧಾರಣಾ ವಿಧೇಯಕವನ್ನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಭೂ ಸುಧಾರಣಾ ವಿಧೇಯಕ ಈಗಿನ ಸಮಯದಲ್ಲಿ ಉಚಿತವಿದೆಯೋ ಹೇಗೆ ಎನ್ನುವಂಥ ಪ್ರಶ್ನೆ ಬರುತ್ತದೆ. ಉಳುವವನೇ ಭೂಮಿಗೆ ಒಡೆಯನಾಗಬೇಕು ಎನ್ನುವ ಕೂಗು ಹಿಂದಿನ ಕಾದ್ದು. ಇವತ್ತಿನ ಮಾತಿಗೆ ಆ ಭಾವನೆ ಏನಾಗಿದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಹಿಂದಿನ ಕಾಲದಲ್ಲಿ ಜಹಗೀರುದಾರರು ಮತ್ತು ದೊಡ್ಡ ದೊಡ್ಡ ನವಾಬರ ಕೈಯಲ್ಲಿ ಭೂಮಿ ಸಿಕ್ಕಿದ್ದು ಒಕ್ಕಲುತನ ಮಾಡುವವನ ಹಿತದೃಷ್ಟಿಯಿಂದ ಆ ಘೋಷಣೆ ಹೊರಟಿತು. ಉಳುವವನಿಗೇ ಭೂಮಿ ಇದ್ದರೆ ಭೂಮಿ ಹಸನಾಗಿ ಉತ್ಪನ್ನ ಹೆಚ್ಚಾಗುತ್ತದೆ ಎನ್ನುವ ಕೂಗನ್ನು ಎಬ್ಬಿಸಿದೆವು. ಆ ಕಾಲದಲ್ಲಿ ಮಾಡಿದ ಘೋಷಣೆಯಿಂದ ಭೂಸುಧಾರಣಾ ಕಾನೂನನ್ನು ಕಾರ್ಯರೂಪಕ್ಕೆ ತರಬೇಕೆಂದು ಸತತ ಪ್ರಯತ್ನ ಮಾಡಿದರೂ ಕೂಡ, ಮೈಸೂರಿನಲ್ಲಿ 1961ರಲ್ಲಿ ಒಂದು ಕಾನೂನು ಮಾಡಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಮಾಡಿದರೂ ಕೂಡ ಕೆಲವೊಂದು ಅನಾನುಕೂಲತೆಯ ಮೂಲಕ ಆ ಕಾನೂನು ಕಾರ್ಯರೂಪದಲ್ಲಿ ಬರಲಿಲ್ಲ ಎಂದು ಹೇಳಿಕೆ ಕೊಡುತ್ತಿದ್ದಾರೆ. ಆದರೆ ಭೂಸುಧಾರಣೆಯನ್ನು ತರಬೇಕಾದರೆ ಕೆಲವೊಂದು ಹಿತಾಸಕ್ತಿಗಳಿಗೆ, ಕೆಲವು ವೈಯುಕ್ತಿಕ ಹಿತಾಸಕ್ತಿಗಳಿಗೆ ಅಷ್ಟು ಗಮನ ಕೊಡುವುದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಒಂದು ಸುಧಾರಣೆ, ಇದು ಕ್ರಾಂತಿಕಾರಕವಾದ ಧೋರಣೆ. ಇಂಥ ಕ್ರಾಂತಿಕಾರಕವಾದ ಧೋರಣೆಯನ್ನು ಅನುಸರಿಸುವಾಗ ಕೆಲವು ವೈಯುಕ್ತಿಕ ಹಿತಾಸಕ್ತಿಗಳಿಗೆ ಅಷ್ಟು ಗಮನ ಕೊಡುವುದು ಸರಿಯಲ್ಲ. ಭೂಸುಧಾರಣೆಯನ್ನು ಈಗ ನಾವು ತರಬೇಕಾದರೆ ಅದರ ಮೂಲ ಉದ್ದೇಶವೇನಿದೆ ಎಂದರೆ, ಉಳುವವನಿಗೇ ಭೂಮಿ ಸಿಕ್ಕಬೇಕು. ಈ ತತ್ವವನ್ನೇ ಆಚರಿಸುವುದಾಗಿದ್ದರೆ, ಈ ತಿದ್ದುಪಡಿ ವಿಧೇಯಕ ಬರುತ್ತಿರಲಿಲ್ಲ. 1961ನೇ ಇಸವಿಯಲ್ಲಿ ಪಾಸ್ ಆದಂಥ ಆಕ್ಟನ್ನು ಇದುವರೆಗೂ ಅಮಲಿನಲ್ಲಿ ಕೊಟ್ಟಿಲ್ಲ. ಯಾವ ಅನಾನುಕೂಲತೆಯಿಂದ ಕೊಟ್ಟಿಲ್ಲ ಎನ್ನುವುದು ತೋರುತ್ತಿಲ್ಲ. 1961ನೇ ಆಕ್ಟನ್ನು ಚಲಾವಣೆಗೆ ಕೊಡದೆ ಅಷ್ಟರಲ್ಲೇ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಇದನ್ನು ಅಮಲಿನಲ್ಲಿ ತಂದ ನಂತರ ಇನ್ನೂ ಎಷ್ಟು ತಿದ್ದುಪಡಿ ಮಾಡಬೇಕಾಗುತ್ತದೆ ಎನ್ನುವುದು ಗೊತ್ತಾಗಿಲ್ಲ. ಇದಕ್ಕೆ ಕಾರಣ ಏನು ಹೇಳುತ್ತಾರೆಂದರೆ, ಪ್ಲಾನಿಂಗ್ ಕಮಿಷನ್ ಅವರು ಈ ತಿದ್ದುಪಡಿ ತರಲಿಕ್ಕೆ ಸೂಚನೆಯನ್ನು ಮಾಡಿದ್ದರಿಂದ ತರಬೇಕಾಯಿತು ಎಂದು. ಪ್ಲಾನಿಂಗ್ ಕಮಿಷನ್ ಅವರೇನಾದರೂ ಭೂಮಿಯ ಸಮಸ್ಯೆಯನ್ನು ತಿಳಿದುಕೊಂಡಿದ್ದಾರೆಯೇ ಹೇಗೆ ಅಥವಾ ರೈತರ ಪರಿಸ್ಥಿತಿಯನ್ನು ತಿಳಿದುಕೊಂಡು ಸಲಹೆ ಮಾಡಿದ್ದಾರೆಯೋ ಹೇಗೆ ಎಂದು ತಿಳಿದುಕೊಳ್ಳಬೇಕು. ನಮ್ಮ ಪರಿಸ್ಥಿತಿ ನಮಗೆ ಗೊತ್ತೇ ಹೊರತು ಮೇಲೆ ಕುಳಿತ ಜನರಿಗೆ ಭೂಮಿಯ ವಿಷಯ ಅಷ್ಟಾಗಿ ಗೊತ್ತಾಗುವುದಕ್ಕೆ ಸಾಧ್ಯವಿಲ್ಲ. ಈಗ ಅವರು ಕೆಲವೊಂದು ಸೂಚನೆಯನ್ನು ಮಾಡಿದ್ದಾರೆ. ಮೈಸೂರು ಒಂದಾದ ನಂತರ ಬೊಂಬಾಯಿ ಕರ್ಣಾಟಕ, ಮದ್ರಾಸ್ ಅಥವಾ ಇನ್ನು ಯಾವುದೇ ಭಾಗ ಬೇರೆಯಿಲ್ಲ. ಆದರೆ ಪ್ಲಾನಿಂಗ್ ಕಮಿಷನ್ ಅವರು ಒಂದು ಸೂಚನೆಯನ್ನು ಮಾಡಿದ್ದಾರೆ:

> 'Under Section 16 of the principal Act the following clause shall be inserted namely...'

ಮುಂಬೈ ಮತ್ತು ಹೈದರಾಬಾದ್ ಭಾಗಗಳಲ್ಲಿ ಅಲ್ಲಿದ್ದ ಹಿಂದಿನ ಆಕ್ಟ್ ಅನುಸರಿಸುವುದು, ಅಲ್ಲಿಯ ಜನಗಳಿಗೆ ಅದನ್ನೇ ಅನ್ವಯಿಸತಕ್ಕದ್ದು ಎನ್ನುವಂಥ ಸೂಚನೆಯನ್ನು ಮಾಡಿದ್ದಾರೆ. ಅದರಿಂದ ಇದ್ದಕ್ಕೆ ತಿದ್ದುಪಡಿ ಬರುತ್ತಿದೆ. ಇದು ಅಷ್ಟು ಸೂಕ್ತ ಕಾಣುವುದಿಲ್ಲ. ಆಗಿನ ಕಾಲದಲ್ಲಿ ಬೊಂಬಾಯಿ ಟೆನೆನ್ಸಿ ಆಕ್ಟ್ ನಮಗೆ ಲಾಗು ಇದ್ದಾಗ ಕೆಲವೊಂದು ಭೂಮಿಯನ್ನು ಪಡೆದು

(ಶ್ರೀ ಎಸ್. ಎಂ. ಗುರೆಡ್ಡಿ)

ಕೊಳ್ಳಲಿಕ್ಕೆ ಸ್ವಾತಂತ್ರ್ಯವಿತ್ತು. ನಿಜವಾಗಿಯೂ ಅಷ್ಟು ಕ್ರಾಂತಿಕಾರಕವಾಗಿದೆ ಎನ್ನಿಸಿ ಕೊಂಡಿದ್ದರೂ ಕೂಡ ಹಾಗೆ ಇರಲಿಲ್ಲ. ಸ್ವಂತ ವ್ಯವಸಾಯ ಮಾಡುವವರಿಗೆ 500 ಎಕರೆವರೆಗೆ ಇಟ್ಟುಕೊಳ್ಳುವಂಥ ಪರಿಸ್ಥಿತಿ ಇತ್ತು. ಆದರೆ ಮೈಸೂರು ರಾಜ್ಯದ ಆಕ್ಟ್ ಬಂದ ನಂತರ 27 ಸ್ಟಾಂಡರ್ಡ್ ಎಕರೆ ಎಂದು ಒಂದು ಮಿತಿಯನ್ನು ಹಾಕಿದ್ದಾರೆ. ಇದನ್ನು ನಿಗದಿ ಮಾಡುವಾಗ ಒಂದು ತತ್ವ ಇಟ್ಟುಕೊಂಡು, ವಿಶಾಲವಾದ ಭಾವನೆಯನ್ನಿಟ್ಟುಕೊಂಡು ಮಾಡುವುದು ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಪ್ಲಾನಿಂಗ್ ಕಮಿಷನ್ ಅವರು ಸೂಚನೆ ಮಾಡುವುದು ಅಷ್ಟು ಸಮಂಜಸವಲ್ಲ ಎಂದು ಹೇಳುತ್ತಿದ್ದೇನೆ.

ಭೂಮಿಯನ್ನು ರೆಸ್ಯೂಮ್ ಮಾಡಬೇಕಾದರೆ 1961ನೇ ಆಕ್ಟ್ ಎಂದು ಪಾಸ್ ಆಯಿತೋ ಅಂದಿನಿಂದ ಆದಂಥ ವ್ಯವಹಾರಗಳೆಲ್ಲ ಇನ್‌ವ್ಯಾಲಿಡ್ ಆಗುತ್ತವೆ ಎನ್ನುವಂಥ ಸೂಚನೆಯನ್ನು ಕೊಟ್ಟಿದ್ದಾರೆ. ಆದುದರಿಂದ ಇವತ್ತಿನ ದಿವಸ ಎಷ್ಟೋ ಜನ ಭೂಮಾಲೀಕರು ತಮ್ಮ ಜಮೀನನ್ನು ಸಾಗು ಮಾಡುತ್ತಿದ್ದ ರೈತನಿಗೆ ಮಾಡಿದ್ದಾರೆ. ಅದೂ ಕೂಡ ಅವನಿಗೆ ದೊರೆಯತಕ್ಕ ಸೀಲಿಂಗ್‌ನಲ್ಲಿ ಕಡಮೆ ಮಾಡಬೇಕು, ಈಗ ಇದ್ದಂಥ 27 ಸ್ಟಾಂಡರ್ಡ್ ಎಕರೆಗಿಂತಲೂ ಭೂ ಒಡೆಯನಿಗೆ ಕಡಮೆ ಆಗುವಂಥ ಪ್ರಸಂಗ ಇದರಲ್ಲಿ ಬರುತ್ತದೆ. ಆದಕಾರಣ ನಾನು ಏನು ಹೇಳುತ್ತೇನೆಂದರೆ, ಈ ಆಕ್ಟ್ ಪಾಸಾಗಿ ಎಂದು ಇದನ್ನು ಜಾರಿಗೆ ಕೊಡುತ್ತೀರೊ ಅಂದಿನಿಂದ ಇದೆಲ್ಲ ಅನ್ವಯಿಸಬೇಕು ಎನ್ನುವ ವಾದವನ್ನು ನಾನು ಮಾಡುತ್ತಿದ್ದೇನೆ.

ಇನ್ನು ಕೆಲವೊಂದಕ್ಕೆ ವಿನಾಯಿತಿ ಕೊಡುತ್ತಿದ್ದಾರೆ. Exemptions granted to Government land under section 7 will also be granted to religious and charitable institutions—ಇದರಲ್ಲಿ religious and charitable institutions ಎಂದು ಹೇಳಿದ್ದಾರೆ. ಇದಕ್ಕಿಂತ ಮಹತ್ವವಾದ ಕೆಲವೊಂದು ಸಂಸ್ಥೆಗಳಿವೆ. ಉತ್ತರ ಕರ್ಣಾಟಕದಲ್ಲಿ ಎಜುಕೇಷನ್ ಟ್ರಸ್ಟ್‌ಗಳಿವೆ. ಇಂಥವು ಎಷ್ಟೋ ಸಂಸ್ಥೆಗಳು ಆ ಭಾಗದಲ್ಲಿವೆ. ಆಗಿನ ಕಾಲದಲ್ಲಿ ಇದ್ದಂಥ ಶ್ರೀಮಂತ ಜನ ತಮ್ಮ ಭೂಮಿಯನ್ನು ಎಜುಕೇಷನ್ ಟ್ರಸ್ಟ್‌ಗಳಿಗೆ ಕೊಟ್ಟು ಹೋದಂಥ ಸಾಕಷ್ಟು ಜನರಿದ್ದಾರೆ.

ಅಂತಹ ಉತ್ತಮವಾದ ಸೇವೆ ಸಲ್ಲಿಸುವಂತಹ ಸಂಸ್ಥೆಗಳಿಗೆ ವಿನಾಯತಿ ಮಾಡದೆಯೇ ಕೇವಲ ರಿಲಿಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳಿಗೆ ಮಹತ್ವ ಕೊಟ್ಟಿದೆ. ಅದು ಸಮಂಜಸ ವಾದುದಲ್ಲ. ನಿಜವಾಗಿ ಹೇಳುತ್ತೇನೆ, ಇದು ಜಾತ್ಯಾತೀತ ರಾಷ್ಟ್ರವಾಗಿದೆ. ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್‌ಗೆ ಮಾತ್ರ ಮಹತ್ವ ಕೊಡುವಾಗ ವಿದ್ಯೆಯನ್ನು ಕೇವಲ ತಮ್ಮ ಗುರಿಯನ್ನಾಗಿ ಇಟ್ಟುಕೊಂಡಂತಹವರಿಗೆ ವಿನಾಯಿತಿ ಕೊಡುವುದು ಬಹಳ ಮಹತ್ವ ವಿಷಯವೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಈಗ ಒಂದು ಪಟ್ಟಿಯನ್ನು ತಯಾರುಮಾಡಿದ್ದಾರೆ. ಅದರೊಳಗೆ ಸುಮಾರು 24 ಸಂಸ್ಥೆಗಳಿಗೆ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ವಿದ್ಯಾಭ್ಯಾಸ ಸಂಸ್ಥೆ ಮಠ ಎಂದೇನು ಕೊಟ್ಟಿದ್ದಾರೆಯೋ ಅವುಗಳ ಪೈಕಿ ವಿದ್ಯಾ ಸಂಸ್ಥೆಗಳೇನಿವೆಯೋ ಅವಕ್ಕೆ ಕಂದಾಯವನ್ನು ಮನ್ನಾ ಮಾಡಬೇಕೆಂದು ಕೇಳಿಕೊಂಡು ನನಗೆ ಇಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Now, what happened to my request to the ministers? Will the Hon'ble Finance Minister tell me what is the position tomorrow?

Sri B. D. JATTI.—Sir, we have discussed this on our side and we hope the Leader of the Opposition also will agree if it is in the morning. It will be convenient to the Hon'ble Members and also the Revenue Minister to be present in the Council in the evening.

Mr. SPEAKER.—I suppose it is convenient to the Hon'ble Members.

Sri V. S. PATIL (Belagaum).—Sir, is it possible to finish the work in a morning session?

Mr. SPEAKER.—Let us have all the hours. I will drop the Question Hour.

Sri SANJEEVANATH AIKALA (Surathkal).—Sir, question hour is important and it should not be dropped.

Mr. SPEAKER.—Question Hour should not be dropped; half an hour discussion should not be dropped; this Bill should not be dropped; and points of order must be taken up and so on; how is it possible to do all this ?

Therefore we begin early tomorrow and sit late. We will assemble at 8-30 A.M.

HON'BLE MEMBERS.—Yes.

Sri S. SIVAPPA.—So, we are meeting tomorrow at 8-30 A.M. and sit upto 1-30 P.M.

Mr. SPEAKER.—Let us see. I want to have a proper debate and not farce of a debate. Now Sri Devegowda will speak.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಮೈಸೂರು ಲ್ಯಾಂಡ್ ರಿಫಾರ್ಮ್ಸ್ ಅಮೆಂಡ್‌ಮೆಂಟ್ ಬಿಲ್-1965ನ್ನು ತಾತ್ವಿಕವಾಗಿ ಸ್ವಾಗತಿಸುತ್ತಾ ಅದು ಒಂದು ಹವ್ಯಾಸಕ್ಕೆ ಹೋಗುವ ಹಾಗೆ ಇದೆಯೆಂದು ಹೇಳಬೇಕಾಗಿದೆ. ಏಕೆಂದರೆ ನಾವು ಈ ಸಭೆಗೆ ಬಂದು 3-3½ ವರ್ಷಗಳ ಕಾಲದಲ್ಲಿ ಈ ಸಭೆಯಲ್ಲಿ ಮಾನ್ಯ ಸದಸ್ಯರು ತೋರಿಸಿದಂಥ ಆಸಕ್ತಿ, ಹಿಂದಿನ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತಂದಂಥ ಒರಿಜಿನಲ್ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಇದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆಂಬ ಬಗ್ಗೆ ಯೋಚನೆ ಮಾಡುವಕಾಲ ಬಂದಿದೆ. ಶ್ರೀಮಾನ್ ಜತ್ತಿಯವರ ಅಧ್ಯಕ್ಷತೆಯಲ್ಲಿ ಕೊಟ್ಟಿರುವ ವರದಿಯನ್ನು ನೋಡಿದರೆ ದೇಶದಲ್ಲಿ ಶೇಕಡ 71ರಷ್ಟು ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನಸಂಖ್ಯೆಯಲ್ಲಿ ಈ ದೇಶದಲ್ಲಿ ಶೇಕಡ 47.6 ರಷ್ಟು ಸ್ವಂತ ವ್ಯವಸಾಯ ಮಾಡುವವರು ಇದ್ದಾರೆ. ಶೇಕಡ 9.3 ರಷ್ಟು ಟೆನೆಂಟ್ಸ್ ಕಲ್ಟಿವೇಟರ್ಸ್ ಇದ್ದಾರೆ. ಶೇಕಡ 10.9 ರಷ್ಟು ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ. ಶೇಕಡ 3.4 ರಷ್ಟು ಗುತ್ತಿಗೆದಾರರು ಇದ್ದಾರೆ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳಮೇಲೆ ನನ್ನ ವಾದವನ್ನು ಮುಂದುವರಿಸುತ್ತಿದ್ದೇನೆ. ಶೇಕಡ 71.2 ರಷ್ಟು ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನರಿರುವ ಈ ದೇಶದಲ್ಲಿ ನಾವು ಅವರಿಗೆ ಅನ್ಯಾಯವಾಗುವ ಲ್ಯಾಂಡ್ ರಿಫಾರ್ಮ್ಸ್ ಬಿಲ್ಲನ್ನು ಈ ಸಭೆಯಲ್ಲಿ ಒಪ್ಪಿಗೆ ಕೊಡುವಕಾಲ ಬಂದಿದೆ. ಆದರೆ ಈ ಲ್ಯಾಂಡ್ ರಿಫಾರ್ಮ್ಸ್ ತರತಕ್ಕ ಧಾಟಿ ನೋಡಿದರೆ ಜಮೀನು ಇಲ್ಲದೇ ಇರತಕ್ಕವರಿಗೆ ಜಮೀನನ್ನು ನಿಜವಾಗಿ ಒದಗಿಸುತ್ತಿದ್ದಾರೆಯೇ ಎಂಬುದನ್ನು ಸರ್ಕಾರ ಉತ್ತರ ಕೊಡುವಾಗ ಹೇಳಬೇಕು. ಶೇಕಡ 9.3 ರಷ್ಟು ಅವರಿಗೇನಾದರೂ ಇದರಿಂದ ಸ್ವಲ್ಪ ರಿಲೀಫ್ ಸಿಗಬಹುದೋ ಏನೋ ಎಂಬುದು ನನ್ನ ಸ್ವಂತ ಅಭಿಪ್ರಾಯ. ಟೆನೆಂಟ್ಸ್ ಮತ್ತು ಕಲ್ಟಿವೇಟರ್ಸ್ ಬಿಟ್ಟು ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್ ಎಂದು ಏನಿದ್ದಾರೆ ಅವರಿಗೆ ಎಷ್ಟರಮಟ್ಟಿಗೆ ಈ ಲ್ಯಾಂಡ್ ರಿಫಾರಮ್ಸ್ ಅಮೆಂಡ್‌ಮೆಂಟ್ ಬಿಲ್ ರಿಲೀಫ್ ದೊರಕುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಈ ದೇಶದಲ್ಲಿ 2 ಕೋಟಿ 67 ಲಕ್ಷ 76 ಸಾವಿರದ 797 ಎಕರೆ ಕಲ್ಟಿವೆಬಲ್ ಲ್ಯಾಂಡ್ಸ್ ಇದೆ. ಇನ್ನು ಆ ವರದಿ ಕೊಟ್ಟಿದ್ದನ್ನು ನಾನು ಸಮರ್ಥಿಸುವುದಾದರೆ ಎರಡು ಕೋಟಿ ಚಿಲ್ಲರೆ ಇರತಕ್ಕ ಜಮೀನನ್ನು 1 ಕೋಟಿ 40 ಲಕ್ಷ ಜನಗಳಿಗೆ ಅದರಲ್ಲೂ ವ್ಯವಸಾಯಗಾರರಿಗೆ ಒಬ್ಬೊಬ್ಬರಿಗೂ ಹಂಚಿದರೆ ಒಂದು ಎಕರೆ ಸಿಗುತ್ತದೆಂಬ ವಾದವನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. 5 ಜನ ಸಂಸಾರ ಇರುವ ಕುಟುಂಬದವರಿಗೆ 27 ಎಕರೆಗಳಷ್ಟು ಜಮೀನು ಬಿಟ್ಟು ಮಿಕ್ಕಿದ್ದನ್ನು ಜಮೀನು ಇಲ್ಲದೇ ಇರತಕ್ಕವರಿಗೆ ಜಮೀನುಗಳನ್ನು ಒದಗಿಸುತ್ತೇವೆ ಎಂಬುದಾಗಿ ಸರ್ಕಾರ ಹೇಳಿದರೆ ಹೇಗೆ ? ಸರ್ಕಾರದವರು ಉತ್ತರ ಕೊಡುವ ಕಾಲದಲ್ಲಿ ಇದನ್ನು ತಿಳಿಸಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಇವರ ತಿದ್ದುಪಡಿ ಮಸೂದೆಯಲ್ಲಿ ಅನೇಕ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಇವತ್ತು ಗದ್ದೆ ತೋಟಗಳನ್ನು ಕೆಲವು ದೇವಸ್ಥಾನಗಳಿಗೆ ಕೊಟ್ಟಿರುವ ಬಗ್ಗೆ ಕೆಲವು ಮಾನ್ಯ ಸದಸ್ಯರು ಈಗಾಗಲೇ ಚರ್ಚೆ ಮಾಡಿದ್ದಾರೆ. ಫಾರಂಗಳಲ್ಲಿ ಹಣ್ಣಿನ ಬೆಳೆ ಬೆಳೆದಿರುವ ಫಾರಂಗಳಿಗೆ ಅನೇಕ ರೀತಿಯಲ್ಲಿ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಹೀಗಾದರೆ ಎಷ್ಟು ಜಮೀನು ಹಂಚುವುದಕ್ಕೆ ಸಿಗುತ್ತದೆಂಬುದೇ ಸಂಶಯಾಸ್ಪದವಾದ ವಿಷಯ.

ಇನ್ನೊಂದು ಕ್ಲಾಜನ್ನು ಹಾಕಿದ್ದಾರೆ. ಈ ತಿದ್ದುಪಡಿ ಮಸೂದೆಯಲ್ಲಿ 1961 ರಲ್ಲಿ ಇದರ ಒಂದು ಪ್ರಿನ್ಸಿಪಲ್ ಆಕ್ಟನ್ನು ಈ ಸಭೆಯೇ ಪಾಸ್ ಮಾಡಿತ್ತು. ಒಟ್ಟಿನಲ್ಲಿ ನೋಡಿದರೆ ನಿಜವಾಗಿ ಜಮೀನಿಲ್ಲದವರಿಗೆ ಜಮೀನನ್ನು ಹಂಚುವುದಕ್ಕೆ

(ಶ್ರೀ ಎಚ್. ಡಿ. ದೇವೇಗೌಡ)

ಹೋದಕಾಲದಲ್ಲಿ ಜಮೀನು ಸಿಗುತ್ತದೆಯೋ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಏತಕ್ಕೆಂದರೆ ಇವೊತ್ತು ನಮಗೆ ಸರ್ಕಾರದವರು ಕೊಟ್ಟಿರತಕ್ಕ ವರದಿಯಿಂದ ಆ ಅಭಿಪ್ರಾಯ ನನಗೆ ಭಾಸವಾಗುತ್ತದೆ. ಈಗ ಈ ಕಾನೂನಿನಲ್ಲಿ ಹೇಳಿರುವ ಹಾಗೆ ಕಾಫಿ ತೋಟ ಮತ್ತು ಹಣ್ಣಿನ ತೋಟ ಮುಂತಾದ ಪ್ಲಾಂಟೇಷನ್‌ಗಳಿಗೆ ಸರ್ಕಾರದವರು ಏನು ರಿಯಾಯಿತಿಯನ್ನ ಕೊಟ್ಟಿದ್ದಾರೆಯೋ ಅದರಿಂದ ದೊಡ್ಡ ದೊಡ್ಡ ಜಮೀನ್ದಾರರಿಗೆ ಅನುಕೂಲವಾಗುತ್ತದೆಯೇ ಹೊರತು ಸರ್ಕಾರದವರು ಯಾರಿಗೆ ಜಮೀನನ್ನ ವಿತರಣೆ ಮಾಡಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ಮಾಡಿದರೋ ಆ ಜನರಿಗೆ ಇದರಿಂದ ಫಲಕಾರಿಯಾಗಲಾರದು ಎನ್ನುವಂಥ ಒಂದು ಸಂಶಯದಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವೊತ್ತು ಸರ್ಕಾರದವರು ಭೂ ಸುಧಾರಣಾ ಕಾನೂನನ್ನು ಜಾರಿಗೆ ತರತಕ್ಕ ಕಾಲದಲ್ಲಿ ಸರ್ಕಾರದವರು ಎರಡು ವಿಷಯಗಳನ್ನು ಯೋಚನೆ ಮಾಡಬೇಕು. ಭೂ ಸುಧಾರಣೆ ತರತಕ್ಕದ್ದನ್ನ ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಈ ಭೂ ಸುಧಾರಣೆ ಕಾನೂನನ್ನ ಜಾರಿಗೆ ತಂದ ಮೇಲೆ ಇದರಿಂದ ನಮಗೆ ಬರತಕ್ಕ ತೊಂದರೆಗಳೇನು ಎಂಬುದನ್ನ ಸರ್ಕಾರದವರು ಯೋಚನೆ ಮಾಡಬೇಕು. ಈ ಭೂ ಸುಧಾರಣೆಯನ್ನು ಕೇವಲ ಘೋಷಣೆಯ ಮುಖಾಂತರವೇ ಕಾರ್ಯ ರೂಪಕ್ಕೆ ತರುತ್ತೇವೆ ಎನ್ನುವಂತಹ ಒಂದು ಹೆಮ್ಮೆಯ ಗೋಜಿಗೆ ಹೋಗದೆ, ಇದನ್ನ ಜಾರಿಗೆ ತಂದ ಮೇಲೆ ಅದರಿಂದ ಏನು ಅನಾನುಕೂಲಗಳಾಗುತ್ತವೆ ಎನ್ನುವುದರ ಬಗ್ಗೆಯೂ ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಇದರಿಂದ ಇನ್ನೂ ಹೆಚ್ಚಿನ ಫ್ರಾಗ್ಮೆಂಟೇಷನ್ ಆಗುತ್ತದೆ. ಈಗ ಭೂ ಮಾಲೀಕನಿಂದ, ಟೆನೆಂಟಿಗೆ, ಜಮೀನು ಇಲ್ಲದೆ ಇರುವವನಿಗೆ ಸರ್ಕಾರದವರು ಜಮೀನನ್ನು ಕೊಡಿಸುತ್ತಾರೆ. ಆ ಜಮೀನಿಗೆ ಸರ್ಕಾರದವರು ಕಾಂಪೆನ್‌ಸೇಷನ್‌ನನ್ನ ನಿಗದಿ ಮಾಡುತ್ತಾರೆ. ಆ ಜಮೀನನ್ನ ಪಡೆದಿರತಕ್ಕ ರೈತ ತಾನು ಕೊಡಬೇಕಾದ ಕಾಂಪೆನ್‌ಸೇಷನ್‌ಅನ್ನ ಸರ್ಕಾರಕ್ಕೆ ಪಾವತಿ ಮಾಡುವವರೆಗೂ ಅವನಿಗೆ ಆ ಜಮೀನಿನ ರೈಟ್ಸ್ ಬರುವುದಿಲ್ಲ. ಯಾವಾಗ ಅವನಿಗೆ ಆ ಜಮೀನಿನ ರೈಟ್ಸ್ ಬರುವುದಿಲ್ಲವೋ ಆಗ ಸರ್ಕಾರದವರು ಆ ರೈತನಿಗೆ ಯಾವ ರೀತಿಯ ಸಹಾಯವನ್ನೂ ಕೊಡುವುದಕ್ಕಾಗುವುದಿಲ್ಲ. ಆ ಜಮೀನನ್ನ ವ್ಯವಸಾಯ ಮಾಡತಕ್ಕ ಬಗ್ಗೆ ಸರ್ಕಾರದವರು ರೈತನಿಗೆ ಕೊಡತಕ್ಕ ಯಾವ ಸಾಲವನ್ನಾಗಲೀ ಅಥವಾ ಕಲ್ಟಿವೇಷನ್ ಇಂಪ್ರೂವ್‌ಮೆಂಟ್ ಬಗ್ಗೆ ಕೊಡತಕ್ಕ ಯಾವ ಸೌಲಭ್ಯಗಳನ್ನಾಗಲೀ ಕೊಡುವುದಕ್ಕೆ ಜಮೀನಿನ ಸೆಕ್ಯೂರಿಟಿಯನ್ನ ಪಡೆದು ಅದರ ಮೇಲೆ ರೈತನಿಗೆ ಅಡ್ವಾನ್ಸ್ ಕೊಡುವ ಹಕ್ಕು ಬರುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇವೊತ್ತಿನ ದಿವಸ ಭೂ ಸ್ವಾಮಿಗೆ ಅಥವಾ ಭೂ ಮಾಲೀಕನಿಗೆ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದಾರೆಯೋ ಆ ಸೌಲಭ್ಯಗಳನ್ನೆಲ್ಲಾ ಈಗ ಈ ಕಾನೂನಿನ ಪ್ರಕಾರ ಜಮೀನನ್ನು ಪಡೆದುಕೊಂಡಿರತಕ್ಕ ಜಮೀನ್ದಾರನಿಗೆ, ರೈತನಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಇದರ ಮುಖಾಂತರ ಫುಡ್ ಪ್ರೊಡಕ್ಷನ್ನಿಗೆ ಯಾವ ರೀತಿ ಸರ್ಕಾರದವರು ಉತ್ತೇಜನವನ್ನ ಕೊಡುತ್ತಾರೆ ಎಂಬುದನ್ನೂ ಸಹ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಒಂದು ಸುಧಾರಣೆಯನ್ನು ಮಾಡತಕ್ಕ ಕಾಲದಲ್ಲಿ ಇದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡದೇ ಹೋದರೆ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಏನು ಒಂದು ಸಂದಿಗ್ಧ ಪರಿಸ್ಥಿತಿ ಇದೆ ಅದನ್ನ ಪುಷ್ಟೀಕರಿಸಿದ ಹಾಗಾಗುತ್ತದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನ ಕೊಡುತ್ತೇನೆ. ಏತಕ್ಕೆಂದರೆ, ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯನ್ನ ರಚನೆ ಮಾಡುತ್ತೇವೆಂದು ಹೇಳಿ ಈ ಭೂಸುಧಾರಣೆಯನ್ನು ತರತಕ್ಕಂಥ ಸರ್ಕಾರದ ಉದ್ದೇಶ ಏನಿದೆ ಅದರಿಂದ ಅವರು ತಮ್ಮ ಕಾಲನ್ನ ತಾವೇ ಸುಟ್ಟುಕೊಳ್ಳುತ್ತಾರೆ ಎಂದು ನಾನು ಸರ್ಕಾರದವರಿಗೆ ಎಚ್ಚರಿಕೆಯನ್ನ ಕೊಡುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಈ ತಿದ್ದುಪಡಿ ಮಸೂದೆಯನ್ನ ಸಭೆಯ ಮುಂದೆ ಮಂಡಿಸುವಾಗ ಭೂ ಮಾಲೀಕರಿಗೆ ಕಾಂಪೆನ್‌ಸೇಷನ್ ನಗದಾಗಿ ಕೊಡತಕ್ಕ ಬಗ್ಗೆ 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂದಿದ್ದುದನ್ನು ಎರೆಡು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಒಂದು ತಿದ್ದುಪಡಿಯನ್ನು ತಂದಿದ್ದೇವೆಂದು ಹೇಳಿದರು. ಇದರ ಬಗ್ಗೆ ಒಂದು ತಿದ್ದುಪಡಿಯನ್ನ ಕೂಡ ನಾನು ಕಳುಹಿಸಿ ಕೊಟ್ಟಿದ್ದೇನೆ. ಭೂಮಿಯನ್ನು ಕಳೆದುಕೊಳ್ಳತಕ್ಕ ಭೂ ಮಾಲೀಕನಿಗೆ ಕೊನೆಯ ಪಕ್ಷ 5 ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ನಾದರೂ ಕೊಡತಕ್ಕದ್ದು ಸರ್ವ ಸಮ್ಮತವಾದದ್ದು. ಯಾರು ಭೂಮಿಯನ್ನು ಕಳೆದುಕೊಳ್ಳುತ್ತಾರೆಯೋ ಅವರಿಗೆ ಬಹಳ ತೊಂದರೆಯಾಗುತ್ತದೆ, ಆದ್ದರಿಂದ ಅವರಿಗೆ ಕಾಂಪೆನ್‌ಸೇಷನ್ ಕೊಡತಕ್ಕ ವಿಚಾರದಲ್ಲಿ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ತಿದ್ದುಪಡಿಗಳು ಈ ಸಭೆಯ ಮುಂದೆ ಬಂದಾಗ ನಾನು ಕಳುಹಿಸಿರತಕ್ಕ ತಿದ್ದುಪಡಿಯ ಬಗ್ಗೆ ನಾನು ಆಗ ಕೆಲವು ವಿಷಯಗಳನ್ನು ಹೇಳುತ್ತೇನೆ.

ಇನ್ನು ಈ ಭೂ ಸುಧಾರಣಾ ತಿದ್ದುಪಡಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಕಾಫಿ ಬೆಳೆಯು ದೇಶಕ್ಕೆ ಫಾರಿನ್ ಎಕ್ಸ್‌ಚೇಂಜ್ ಕೊಡತಕ್ಕದ್ದು, ಆದ್ದರಿಂದ ಅವುಗಳಿಗೆ ಉತ್ತೇಜನವನ್ನು ಕೊಡುವುದಕ್ಕೋಸ್ಕರವಾಗಿ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ನಮ್ಮ ದೇಶಕ್ಕೆ ಹೊರದೇಶದಿಂದ 500 ಕೋಟಿ ರೂಪಾಯಿಗಳ ಆಹಾರವನ್ನು ಖರಿಸಿಕೊಳ್ಳುತ್ತಿದ್ದಾರೆ. ಹೀಗಿರುವಾಗ ಕೇವಲ ಫಾರಿನ್ ಎಕ್ಸ್‌ಚೇಂಜ್ ಪಡೆಯತಕ್ಕ ಬೆಳೆಗಳು ಏನಿವೆ ಅವುಗಳಿಗೆ ಮಾತ್ರ ರಿಯಾಯಿತಿಯನ್ನು ಕೊಟ್ಟು ಆಹಾರ ಧಾನ್ಯದ ಬೆಳೆಗಳಿಗೆ ಏತಕ್ಕೆ ರಿಯಾಯಿತಿಯನ್ನು ಕೊಡಬಾರದು ? ಈ ದೃಷ್ಟಿಯಿಂದ ಈಗ ಕಾಫಿ ಬೆಳೆಗಳಿಗೆ ವಿನಾಯಿತಿ ಕೊಟ್ಟಿರತಕ್ಕ ಕ್ಲಾಜ್ ಏನಿದೆ ಅದನ್ನು ತೆಗೆಯುವುದು ಸೂಕ್ತ. ಇದನ್ನ ಸರ್ಕಾರದವರು ಯೋಚನೆ ಮಾಡಬೇಕು. ಕಾಫಿ ತೋಟವನ್ನು ಮಾಡುವವರಿಗೆ ಸರ್ಕಾರದವರು ಏನು ಒಂದು ಅವಕಾಶ ಮತ್ತು ಅನುಕೂಲತೆಗಳನ್ನು ಮಾಡಿ ಕೊಟ್ಟಿದ್ದಾರೆಯೋ ಅದೇ ರೀತಿ ವ್ಯವಸಾಯಗಾರರಿಗೂ ಅನುಕೂಲತೆಗಳನ್ನು ಮಾಡಿ ಕೊಡಬೇಕು. ಈ ಭೂ ಸುಧಾರಣಾ ಕಾನೂನನ್ನ ಜಾರಿಗೆ ತರತಕ್ಕ ವಿಷಯದಲ್ಲಿ ನಿಮ್ಮ ಒಂದು ಅಭಿಲಾಷೆ ಮತ್ತು ಆಕಾಂಕ್ಷೆ ಏನಿದೆ ಅದು ಕಾರ್ಯಗತವಾಗುವುದು ಕನಸಿನ ಮಾತು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಎನ್. ಪಾಟೀಲ್ (ತಾಳಿಕೋಟೆ).—ಮಾನ್ಯ ಸಭಾಪತಿಗಳೇ, ಇವೊತ್ತಿನದಿವಸ ಈ ಮಸೂದೆಯ ಮೇಲೆ ಮಾತನಾಡುವುದಕ್ಕೆ ನನಗೆ 5 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲು ತಮಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈಗ ಈ ಸಭೆಯ ಮುಂದೆ ಇರುವ ಭೂಸುಧಾರಣೆಗಳ ತಿದ್ದುಪಡಿಗೆ ಸಂಬಂಧಿಸಿದ ವಿಧೇಯಕವನ್ನು ಅನುಮೋದಿಸುತ್ತಾ ನಾಲ್ಕು ವಿಷಯಗಳನ್ನು ಈ ಸಭೆಯ ಮುಂದೆ ಇಡಬಯಸುತ್ತೇನೆ. ಈ ಟೆನೆನ್ಸಿ ಕಾಯಿದೆಯನ್ನು ಅಮಲಿನಲ್ಲಿ ತರಬೇಕು, ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು, ಯಾರು ಭೂಮಿಯನ್ನು ಉಳುತ್ತಾರೆಯೋ ಅವರಿಗೆ ಭೂಮಿಯನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಬಹಳ ದಿವಸಗಳಿಂದ ಪ್ರಯತ್ನಮಾಡುತ್ತಿದ್ದರು. ಇದನ್ನು ಅಮಲಿನಲ್ಲಿ ತರಬೇಕೆಂದು ಪ್ರಯತ್ನಮಾಡುತ್ತಿದ್ದರೇ ಹೊರತು ಇದುವರೆಗೂ ಅದನ್ನ ಜಾರಿಯಲ್ಲಿ ತಂದಿರಲಿಲ್ಲ. ಮಾನ್ಯ ರೆವಿನ್ಯೂಮಂತ್ರಿಗಳು ಆದಷ್ಟು ಬೇಗ ಇದನ್ನು ಅಮಲಿನಲ್ಲಿತರುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ಇದರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಅದರಲ್ಲಿ ಕೆಲವು ಸ್ವಾಗತಾರ್ಹವಾಗಿವೆ, ಮತ್ತೆ ಕೆಲವು ತಿದ್ದುಪಡಿಗಳಿಂದ ತೊಂದರೆಯಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಸ್ಮಾಲ್ ಹೋಲ್ಡರುಗಳು ಎರಡು ಬೇಸಿಕ್ ಹೋಲ್ಡಿಂಗ್ ಇಟ್ಟುಕೊಳ್ಳಬಹುದೆಂದು ಪ್ರಿನ್ಸಿಪಲ್ ಆಕ್ಟಿನಲ್ಲಿ ಇತ್ತು ಆದರೆ ಅದನ್ನು ಈ ಮಸೂದೆಯಲ್ಲಿ ಬದಲಾವಣೆಮಾಡಿದ್ದಾರೆ. ಆದ್ದರಿಂದ ಆ ಸ್ಮಾಲ್ ಹೋಲ್ಡರುಗಳಿಗೂ ಕೂಡ ಈಗ ಟೆನೆನ್ಸಿಲಾ ಅನ್ವಯವಾಗುತ್ತದೆ. ಅವರು ಅಕಸ್ಮಾತಾಗಿ ಏನಾದರೂ ಟೆನೆಂಟುಗಳಿಗೆ ಜಮೀನನ್ನ ಕೊಟ್ಟಿದ್ದಪಕ್ಷದಲ್ಲಿ ಅವರಿಂದ ಜಮೀನನ್ನ ಬಿಡಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಆಸ್ಮಾಲ್ ಹೋಲ್ಡರುಗಳು ಮತ್ತೆ ಟ್ರಿಬ್ಯುನಲ್ಲಿಗೆ ಹೋಗಬೇಕಾಗುತ್ತದೆ. ಇದರಿಂದ ಅವರಿಗೆ ತೊಂದರೆ ಬರುತ್ತದೆ. ಆದ್ದರಿಂದ ಅವರಿಗೆ ಏನಾದರೂಮಾಡಿ ಸರ್ಕಾರದವರು ಪೂರ್ತಿಯಾಗಿ ವಿನಾಯ್ತಿ ಕೊಡಬೇಕು. ಅವರು ಮತ್ತೆ ಕೋರ್ಟಿಗೆ ಹೋಗುವಂತೆ ಅವರಿಗೆ ಅನಾನುಕೂಲ ಮಾಡಬಾರದು ಎಂದು ನಾನು ಹೇಳಬಯಸುತ್ತೇನೆ.

ಇನ್ನು 1948ನೇ ಇಸವಿಯ ಬೊಂಬಾಯಿ ಟೆನೆನ್ಸಿ ಅಗ್ರಿಕಲ್ಚರಲ್ ಆಕ್ಟ್ ಪ್ರಕಾರ ಬೊಂಬಾಯಿ ಕರ್ನಾಟಕದಲ್ಲಿ ಸ್ವಂತ ಸಾಗುವಳಿ ಮಾಡುವವರಿಗೆ ಯಾವುದೇ ತರಹ ಹೋಲ್ಡಿಂಗ್ಸ್ ರಿಸ್ಟ್ರಿಕ್ಷನ್ಸ್ ಇರಲಿಲ್ಲ. ಆದ್ದರಿಂದ ಅವರು ತಮ್ಮ ಜಮೀನನ್ನ ಸ್ವಂತವಾಗಿ ಸಾಗುವಳಿಮಾಡಿಕೊಂಡು ಬಂದು ಕೆಲವು ಕಾಲದಮೇಲೆ ಎಷ್ಟೋಜನರು ತಮ್ಮ ಜಮೀನನ್ನ ಬೇರೆಯವರಿಗೆ ಮಾರಿಕೊಂಡಿದ್ದಾರೆ. 1961ನೇ ಇಸವಿಯಿಂದ ಈಚೆಗೆ ಕೂಡ ಎಷ್ಟೋಜನ ಜಮೀನನ್ನ ಮಾರಿಕೊಂಡಿದ್ದಾರೆ. ಈಗ ಈ ಮಸೂದೆಯಲ್ಲಿ ತಂದಿರತಕ್ಕ 8ನೇ ತಿದ್ದುಪಡಿಯ ಪ್ರಕಾರ 1961ನೇ ಇಸವಿಯಿಂದ ಈಚೆಗೆ ಮಾರಿಕೊಂಡ ಜಮೀನನ್ನು ಕೂಡ ಸೀಲಿಂಗ್ ಲಿಮಿಟ್‌ನಲ್ಲಿ ಹಿಡಿಯಬೇಕು ಎಂದು ಹೇಳುತ್ತಿದ್ದಾರೆ. ನಮ್ಮ ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಎಷ್ಟೋಜನ 400-500-1000 ಎಕರೆ ಜಮೀನನ್ನ ಮಾರಿಕೊಂಡಿದ್ದಾರೆ. ಈಗ ಈ ಕಾಯಿದೆಯ ಪ್ರಕಾರ 1961ನೇ ಇಸವಿಯಿಂದ ಈಚೆಗೆ ಜಮೀನನ್ನ ಮಾರಿಕೊಂಡ ರೈತರಿಗೆ ಒಂದುವೇಳೆ 27 ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಕಡಿಮೆ ಇದ್ದರೂಕೂಡ ಹಿಂದೆ ಮಾರಿದ್ದನ್ನೂ ಗಣನೆಗೆ ತೆಗೆದುಕೊಂಡು ಅವರಿಗೆ ಸೀಲಿಂಗ್ ಲಿಮಿಟ್‌ಅನ್ನ ಫಿಕ್ಸ್‌ಮಾಡಿ ಈಗ ಅವರಲ್ಲಿರತಕ್ಕ ಜಮೀನನ್ನ ಕಿತ್ತುಕೊಳ್ಳುವ ಪ್ರಸಂಗ ಬರುತ್ತದೆ. ಆ ರೀತಿ ಸರ್ಕಾರದವರು 1961ನೇ ಇಸವಿಯ ನಂತರ ಭೂಮಾಲೀಕರು ಪರಭಾರೆಮಾಡಿದ ಜಮೀನನ್ನೂ ಹಿಡುವಳಿಮಿತಿಗೆ ಸೇರಿಸುವುದರಿಂದ ಎಷ್ಟೋಜನಗಳಿಗೆ ಅನಾನುಕೂಲವಾಗಿ ಅವರು ನಿರ್ಗತಿಕರಾಗುವಂತಹ ಪರಿಸ್ಥಿತಿ ಬರುತ್ತದೆ. ಆ ರೀತಿ ಮಾಡಬಾರದು ಎಂದು ನಾನು ಸೂಚಿಸುತ್ತೇನೆ.

(ಶ್ರೀ ಜಿ. ಎನ್. ಪಾಟೀಲ್)

ಆಮೇಲೆ ಈ ಮಸೂದೆಯ 20ನೇ ತಿದ್ದುಪಡಿಯಲ್ಲಿ ಭೂಮಿಯನ್ನು ಕಳೆದುಕೊಂಡ ಭೂಮಾಲೀಕರಿಗೆ ಕಾಂಪೆನ್‌ಸೇಷನ್ ಕೊಡುವ ವಿಚಾರವನ್ನು ಹೇಳಿದ್ದಾರೆ. ಮೊದಲನೆಯ ಪ್ರಿನ್ಸಿಪಲ್ ಆಕ್ಟಿನಲ್ಲಿ 10 ಸಾವಿರ ರೂಪಾಯಿಗಳ ಕಾಪೆನ್‌ಸೇಷನ್ ನಗದಾಗಿ ಕೊಡಬೇಕೆಂದು ಹಾಕಿತ್ತು. ಆದರೆ ಇವೊತ್ತು ತಂದಿರತಕ್ಕ ತಿದ್ದುಪಡಿಯಲ್ಲಿ ಭೂಮಿಯನ್ನ ಕಳೆದುಕೊಳ್ಳತಕ್ಕ ಭೂಮಾಲೀಕನಿಗೆ ಎರೆಡು ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ ಕೊಡಬೇಕೆಂದು ಹಾಕಿದ್ದಾರೆ. ಆದ್ದರಿಂದ ಈ ಭೂಮಾಲೀಕರಿಗೆ ಕೊಡತಕ್ಕ ಕಾಂಪೆನ್‌ಸೇಷನ್ ಏನಿದೆ ಅದನ್ನು 10 ಸಾವಿರ ರೂಪಾಯಿಗಳನ್ನು ಕೊಡುವಂತೆಮಾಡಿ ಅದನ್ನ ಒಂದೇ ಸಾರಿ ಲಂಪ್‌ಸಮ್ ಆಗಿ ಅವರಿಗೆ ಕೊಟ್ಟರೆ ಅವರು ಆ ಹಣವನ್ನು ತಮ್ಮಲ್ಲಿರತಕ್ಕ ಜಮೀನಿನಮೇಲೆ ಹಾಕಿ ಅದನ್ನಾದರೂ ಸುಧಾರಣೆಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಕಾಂಪೆನ್‌ಸೇಷನ್ ಕೊಡುವುದನ್ನ ಕಡಿಮೆಮಾಡಬಾರದು ಎಂದು ನಾನು ಹೇಳುತ್ತೇನೆ

(MR. CHAIRMAN SRI C. R. RANGE GOWDA in the Chair)

ಹತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು. ಹೀಗೆ ಕೊಡುವುದರಿಂದ ಅವರು ಏನಾದರೂ ಅನುಕೂಲತೆಗಳನ್ನು ಅದರಿಂದ ಮಾಡಿಕೊಳ್ಳುವುದಕ್ಕೆ ಅವಕಾಶ ಆಗುತ್ತದೆ. ಕಡಮೆ ಕೊಟ್ಟರೆ ಏನೂ ಕೊಟ್ಟಹಾಗೆ ಆಗುವುದಿಲ್ಲ. ಆದ್ದರಿಂದ ಹತ್ತು ಸಾವಿರ ರೂಪಾಯಿ ಇರಬೇಕು ಎಂದು ನಾನು ಸರ್ಕಾರದಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಕೆಲವೊಂದು ಸಂಸ್ಥೆಗಳಿಗೆ ಸೇರಿದ ಭೂಮಿಗೆ ಈ ಕಾಯಿದೆಯಿಂದ ವಿನಾಯಿತಿಯನ್ನು ಕೊಟ್ಟಿದ್ದಾರೆ. Statement of Objects and Reasons ನಲ್ಲಿ "Exemptions granted to Government lands under section 107 will also be granted to lands belonging to or held on lease from religious and charitable institutions managed by or under the control of the Government." ಎಂದು ಹೇಳಿದ್ದಾರೆ. ಉತ್ತರ ಕರ್ಣಾಟಕದಲ್ಲಿ ಕೆಲವು ಕಡೆ ಬ್ರಿಟಿಷರ ಕಾಲದಲ್ಲಿ ಅಲ್ಲಿಯ ಜನರು ನಮ್ಮ ಜನತೆಗೆ ಉಪಯೋಗವಾಗಬೇಕು, ನಮ್ಮ ಜನ ಮುಂದೆ ಬರಬೇಕು, ನಮ್ಮ ಜನರಿಗೆ ವಿದ್ಯಾಭ್ಯಾಸ ಸಿಕ್ಕಬೇಕು, ಅದರಿಂದ ವಿದ್ಯಾವಂತರಾಗಿ ನಮ್ಮ ದೇಶವನ್ನು ಆಳುವುದನ್ನು ಅರಿತುಕೊಳ್ಳಬೇಕು ಎನ್ನುವ ಘನ ಉದ್ದೇಶದಿಂದ ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳಿಗೆ ಮತ್ತು ಟ್ರಸ್ಟ್‌ಗಳಿಗೆ ಎಷ್ಟೋ ಮಹಾ ಜನರು ಭೂಮಿಯನ್ನು ಕೊಡುತ್ತ ಬಂದಿದ್ದಾರೆ. ಈಗ ದೇವಸ್ಥಾನಗಳಿಗೆ ಸೇರಿರುವ ಕೆಲವೊಂದು ಭೂಮಿಗೆ ವಿನಾಯಿತಿಯನ್ನು ಕೊಡುವಂತೆ ವಿದ್ಯಾಭ್ಯಾಸಕ್ಕೆ ಸಹಾಯಮಾಡಲು ಯಾರಾದರೂ ಭೂಮಿಯನ್ನು ಕೊಟ್ಟಿದ್ದರೆ ಅಂಥದಕ್ಕೂ ಮತ್ತೆ ಕೊಡಬೇಕು ಇವತ್ತಿನ ದಿವಸ ಸಾವಿರಾರು ಜನರು ಇಂಥ ಸಂಸ್ಥೆಗಳಿಂದ ಉಪಯೋಗ ಪಡೆದು ವಿದ್ಯಾವಂತರಾಗಿ ಮುಂದೆ ಬಂದಿದ್ದಾರೆ. ಅವರು ಶಾಸನ ಸಭಾ ಸದಸ್ಯರಾಗಿರಬಹುದ, ಮಂತ್ರಿಗಳಾಗಿರಬಹುದು ದೊಡ್ಡ ಅಧಿಕಾರಿಗಳಾಗಿರಬಹುದು. ಆ ಸಂಸ್ಥೆಗಳಿಂದ ಆಗಿರುವ ಉಪಕಾರವನ್ನು ನಾವು ಸ್ಮರಿಸಬೇಕಾಗುತ್ತದೆ. ಚಾರಿಟಬಲ್ ಇನ್‌ಸ್ಟಿಟ್ಯೂಷನ್ ನಲ್ಲಿ ಇಂಥ ಸಂಸ್ಥೆಗಳನ್ನೂ ಸೇರಿಸಬೇಕು ಎಂದು ತಿಳಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮಿ, ಅಧ್ಯಕ್ಷರೇ, ಈ ಸಭೆಯಲ್ಲಿ ಮಾನ್ಯ ಸದಸ್ಯರು ಭೂ ಸುಧಾರಣೆ ವಿಚಾರದಲ್ಲಿ ಬಹಳ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ನನ್ನ ಅಭಿಪ್ರಾಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈಗ ಸುಧಾರಣೆ ತಂದಿರುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಆದರೆ ಇದರಲ್ಲಿ ಕೆಲವು ವಿಚಾರಗಳಲ್ಲಿ ಬಡ ಜನರ ಕಡೆ ನೋಡಬೇಕೆಂದು ಹೇಳುತ್ತೇನೆ. ರಾಜ್ಯದಲ್ಲಿ ನೂರಾರು ಎಕರೆ ಜಮೀನಿಗೆ ವಿನಾಯಿತಿ ಕೊಟ್ಟಿರುವಾಗ ಕೆಲವು ಜನ ಸಣ್ಣ ಜಮೀನ್ದಾರರು ಎರಡು ಮೂರು ಎಕರೆ ಇಟ್ಟುಕೊಂಡು ಅದರಿಂದರೆ ಅವರ ಜೀವನವನ್ನು ಮಾಡಬೇಕಾಗಿರುವುದು ನಮಗೆಲ್ಲ ತಿಳಿದಿರುವ ವಿಚಾರ. ಇಷ್ಟು ಸ್ವಲ್ಪ ಜಮೀನಿದ್ದರೂ ಅದನ್ನು ಮಾಡಲು ಸಾಧ್ಯವಾಗದೆ ನಿಸ್ಸಹಾಯಕರಾಗಿ ಅದರಲ್ಲಿ ಬರುವುದನ್ನೇ ನಂಬಿಕೊಂಡು ಜೀವನ ಮಾಡುತ್ತಿರುವ ಬಡ ಜನರು ಬಹಳವಾಗಿದ್ದಾರೆ. ಅಂಥವರಿಗೆ ಜಮೀನು ಗೇಣಿಗೆ ಕೊಡಲು ಅನುಮತಿ ಕೊಡದೇ ಹೋದರೆ ಆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಸರ್ಕಾರ ಈ ಬಗ್ಗೆ ಅನುಕೂಲ ಮಾಡಬೇಕು ಎಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ಜಮೀನು ಇಟ್ಟುಕೊಂಡು ಯಾರಿಗಾದರೂ ವ್ಯವಸಾಯ ಮಾಡುವುದಕ್ಕೆ ಕೊಟ್ಟಿದ್ದು ಉತ್ಪತ್ತಿ ಬರುವುದರಲ್ಲಿ ಅರ್ಧ ಭಾಗವನ್ನು ತೆಗೆದುಕೊಳ್ಳುತ್ತಾರೆ. ಇದರಿಂದಲೇ ಜೀವನ ಮಾಡತಕ್ಕ ಎಷ್ಟೋ ಜನರಿದ್ದಾರೆ. ಅವರು ಗೇಣಿಗೆ ಕೊಟ್ಟಿರುವ ಭೂಮಿಯನ್ನು ಅವರಿಂದ ತೆಗೆದು ಕೊಂಡರೆ ಅವರಿಗೆ ಏನೂ ಇಲ್ಲದೆ ಜೀವನ ಮಾಡುವುದೇ ಕಷ್ಟವಾಗುವ ಪರಿಸ್ಥಿತಿ ಬರುತ್ತದೆ. ಸರ್ಕಾರ ದವರು ಇಂಥ ಜನರಿಗೆ ಸೂಕ್ತ ಪರಿಹಾರವನ್ನು ಕೊಡುವುದಕ್ಕೆ ಸಹಾಯ ಮಾಡಬೇಕೆಂದು ಪ್ರಾರ್ಥಿಸು ತ್ತೇನೆ.

ಭೂ ಮಾಲೀಕರಿಂದ ಜಮೀನು ತೆಗೆದುಕೊಂಡು ಸಧ್ಯಕ್ಕೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಉಳಿದುದನ್ನು ಬಾಂಡುಗಳ ರೂಪದಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ತಾವು ಹೊಂದಿರುವ ಜಮೀನಿನಮೇಲೆ ಮುಕ್ಕಾಲು ಭಾಗ ಜನ ಸಾಲ ಮಾಡಿರುತ್ತಾರೆ. ಎರಡು ಸಾವಿರ ರೂಪಾಯಿ ತೆಗೆದುಕೊಂಡು ಅವರು ಮುಂದಿನ ಜೀವನಕ್ಕೆ ಅನುಕೂಲಮಾಡಿ ಕೊಳ್ಳುವುದೇ ಅಥವಾ ಸಾಲಗಾರನಿಗೆ ಕೊಡುವುದೇ ? ಅವರು ಯಾವ ರೀತಿ ಜೀವನ ಮಾಡಬೇಕು ಎನ್ನುವುದನ್ನು ಸರ್ಕಾರ ಪರ್ಯಾಲೋಚನೆ ಮಾಡಬೇಕು. ಸರ್ಕಾರದವರು ಈ ವಿಚಾರದಲ್ಲಿ ಸೂಕ್ತವಾದ ಸಹಾಯವನ್ನು ಮಾಡಬೇಕೆಂದು ಹೇಳುತ್ತೇನೆ.

ಸುಮಾರು 20 ದೇವಸ್ಥಾನಗಳ ವಿಚಾರದಲ್ಲಿ ವಿನಾಯಿತಿ ಕೊಡಲು ಒಂದು ಪಟ್ಟಿಯನ್ನು ಮಾನ್ಯ ಮಂತ್ರಿಗಳು ನಮಗೆ ಕೊಟ್ಟಿದ್ದಾರೆ. ದೇವಸ್ಥಾನದ ಜಮೀನುಗಳನ್ನು ಸ್ವಲ್ಪ ಜನ ಅಕ್ರಮವಾಗಿ ಉಪಯೋಗಿಸುತ್ತಿದ್ದಾರೆ. ಅದನ್ನೆಲ್ಲ ಅವರಿಗೇ ಕೊಡುವುದಕ್ಕಾಗುವುದಿಲ್ಲ, ಸರ್ಕಾರಕ್ಕೆ ತೆಗೆದು ಕೊಳ್ಳಬೇಕು ಎಂದು ತಿಳಿಸಿದ್ದಾರೆ. ಅದು ನ್ಯಾಯವಾದದ್ದು. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಒಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನ್ಯಾಯವಾದ ಮತ್ತು ಸತ್ಯವಾದ ವಿಚಾರ ಸ್ವಾಮಿ. ಬನಶಂಕರಿ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನಿನ ವಿಚಾರ ಹೇಳುತ್ತೇನೆ. ಅಲ್ಲಿರುವವರೆಲ್ಲ ಬಡ ರೈತರು, ಬಹಳ ಉತ್ತಮರು. ಇವರಲ್ಲಿ ಅರ್ಧ ಭಾಗ ಹರಿಜನರಿದ್ದಾರೆ, ಅರ್ಧ ಭಾಗ ಗೌಡರಿದ್ದಾರೆ. ನಾಲ್ಕೈದು ಸಂಸಾರ ಮುಸಲ್ಮಾನರಿದ್ದಾರೆ. 40–50 ವರ್ಷದಿಂದ ಸೇವೆ ಮಾಡಿ ಜಮೀನನ್ನು ಅನುಭವಿಸುತಿದ್ದಾರೆ. ಆ ಜಮೀನುಗಳಲ್ಲಿ ಅವರೇ ಸ್ವಂತವಾಗಿ ತೋಡಿ ಕಲ್ಲು ಕಟ್ಟಡ ಕಟ್ಟಿಸಿರುವ ಬಾವಿಗಳಿವೆ. ಈ ಜಮೀನಿನ ಉತ್ಪತ್ತಿಯಲ್ಲಿ ನಾಲ್ಕಾಣೆ ಭಾಗವನ್ನು ದೇವ ಸ್ಥಾನಕ್ಕೆ ಕೊಡುತ್ತಿದ್ದರು. ದೇವಸ್ಥಾನಕ್ಕೆ ಸ್ವಲ್ಪ ಬಾಕಿ ನಿಂತಿತು. ಅಲ್ಲಿನ ಒಬ್ಬ ದೊಡ್ಡ ಮನುಷ್ಯರು ಆ ಜಮೀನನ್ನು ಹರಾಜು ಮಾಡಿಸಿದರು. ಏನೂ ತಿಳಿಯದ ಜನ ಅವರು. ತಹಸೀಲ್ದಾರರು ಸ್ವಲ್ಪ ಈಗ ಕೊಡಿ, ನಿಮ್ಮ ಜಮೀನನ್ನು ನಿಮಗೇ ಬಿಡುತ್ತೇವೆಂದು ಹೇಳಿದಾಗ ಆ ದೊಡ್ಡಮನುಷ್ಯರು ಅವರ ಮಾತನ್ನು ಕೇಳಬೇಡಿ ಎಂದು ರೈತರಿಗೆ ತಿಳಿಸಿದಾಗ ಬಡ ರೈತರು ಅವರ ಮಾತನ್ನು ಕೇಳಿ ಕೊಂಡು ಸುಮ್ಮನಾದರು. ಸ್ವತ್ತು ಇವತ್ತೂ ಸಹ ಅವರ ಸ್ವಾಧೀನದಲ್ಲಿಯೇ ಇದೆ, ಬೇರೆ ಯಾರೂ ಪ್ರವೇಶ ಮಾಡಿಲ್ಲ. ಅಧಿಕಾರಿಗಳು ಪಣಸಾಲು ಗುತ್ತಿಗೆಯ ಹರಾಜನ್ನು ಪಬ್ಲಿಕ್‌ನಲ್ಲಿ ಮಾಡಲಿಲ್ಲ. ಆ ದೊಡ್ಡಮನುಷ್ಯರಿಗೆ 200 ಎಕರೆ ಜಮೀನನ್ನು 500 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಆ ಜಮೀನು ಮಾಡುತ್ತಿದ್ದ ಜನರು ಈಗ ತಿರಿದುಕೊಂಡು ತಿನ್ನುತ್ತಿದ್ದಾರೆ. 10 ವರ್ಷವಾದರೂ ಪಣಸಾಲು ಗುತ್ತಿಗೆ ಕೊಟ್ಟಿಲ್ಲ. ಇದನ್ನೆಲ್ಲ ಮಾನ್ಯ ಮಂತ್ರಿಗಳು ವಿಚಾರ ಮಾಡಿದರೆ ಗೊತ್ತಾಗುತ್ತದೆ. ಬಡವರ ಬಗ್ಗೆ ಸ್ವಲ್ಪ ಕರುಣೆಯಿಂದ ನೋಡಬೇಕು, ಮಕ್ಕಳು, ಮರಿ ಅನ್ನವಿಲ್ಲದೆ ಸಾಯುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಜಮೀನನ್ನೆಲ್ಲ ಒಬ್ಬ ಮನುಷ್ಯನ ಹೆಸರಿನಲ್ಲಿ ಇಟ್ಟುಕೊಂಡಿದ್ದರೆ, ರೂಲ್ಸ್ ಪ್ರಕಾರ ಅವರಿಗೇ ಹೋಗುತ್ತದೆ, ಬಡವರಿಗೆ ಹೋಗುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ನಾನು 20 ವರ್ಷ ಇದೇ ಸ್ಥಳದಲ್ಲಿದ್ದೇನೆ. ನನಗೆ ಆ ಸ್ಥಳದ ವಿಚಾರ ಚೆನ್ನಾಗಿ ಗೊತ್ತು. ಬೆಟ್ಟ ಗುಡ್ಡ ಇದ್ದ ಈ ಪ್ರದೇಶವನ್ನು ಸಮನಾಗಿ ಮಾಡಿ ಅಲ್ಲಿ ರೈತರು ಕಷ್ಟ ಪಟ್ಟು ಒಂದು ದೇವಸ್ಥಾನ ಕಟ್ಟಿದರು. ಆಗ್ಗೆ ಅವರು ಅಲ್ಲಿ ಬಂಡೆಗಳಮೇಲೆ ಇದ್ದು ಜೀವನ ಮಾಡು ತ್ತಿದ್ದರು ಗ್ರಾಮ ಬಿಟ್ಟು ಹೋದರೆ ಜಮೀನು ಹರಾಜು ಮಾಡುತ್ತಾರೆಂದು ಅವರು ಅಲ್ಲಿಯೇ ಜೀವನ ಮಾಡುತ್ತಾ ಇದ್ದರು. ತಾತ ಕಟ್ಟಿದ ಮನೆ ಗುಡಿಸಲು ಚೆನ್ನಾಗಿ ಮಾಡಿದರು. ಆಗ್ಗೆ ನಾನು ಅಲ್ಲಿ ಇದ್ದೆ. ಅಂಥ ಬಡವರ ಜಮೀನನ್ನೆಲ್ಲಾ ತೆಗೆದುಕೊಂಡಿರುವ ಆ ದೊಡ್ಡಮನುಷ್ಯನಿಗೆ ಮಕ್ಕಳು ಮರಿ ಕೂಡ ಇಲ್ಲ. ಇಂಥ ಅನ್ಯಾಯ ಮಾಡಿದರೆ ಭೂಮಿ ಮೇಲೆ ಅವರು ಬದುಕುತ್ತಾರೆಯೇ ? ಅಲ್ಲಿಯ ಬಡವರು ಬಹಳ ಒಳ್ಳೆಯ ಜನ. ಈ ದೊಡ್ಡಮನುಷ್ಯ ಅಲ್ಲಿ ತನಗೋಸ್ಕರ ಒಂದು ಪೋಲೀಸ್ ಸ್ಟೇಷನ್ ಮಾಡಿಸಿಕೊಂಡಿದ್ದಾನೆ. ಆಗ್ಗೆ ಸರಕಾರ ಅವನ ಮಾತು ಕೇಳುತ್ತಾ ಇತ್ತು. ನನಗೆ ಎಲ್ಲ ವಿಷಯ ಗೊತ್ತಿದೆ. ಈ ವಿಷಯ ಹೇಳಬೇಕೆಂದು ನಿನ್ನೆಯಿಂದ ನಾನು ಕಾದಿದ್ದೇನೆ. ಊರು ಬಿಟ್ಟು ಹೋದರೆ ಜಮೀನು ಬಿಡಿಸುತ್ತಾರೆಂದು ಅವರು ಬಂಡೆಗಳ ಮೇಲೆ ಜೀವನ ಮಾಡುತ್ತಾರೆ. ಅವರನ್ನು ಅಲ್ಲಿಂದ ಓಡಿಸಿಬಿಡಬೇಕೆಂದು ಒಂದು ಆರ್ಡರ್ ಮಾಡಿಸಿದರು. ನಾನು ಈ ವಿಚಾರ ಸರಕಾರಕ್ಕೆ ಕಾಗದ ಬರೆದು ತಿಳಿಸಿದ್ದೇನೆ. ಮಂತ್ರಿಗಳ ಹತ್ತಿರ ಹೋಗಿ ಅವರಿಗೂ ಸಹ ಹೇಳಿದ್ದೇನೆ.

(ಶ್ರೀ ಡಿ. ಮುನಿಚಿನ್ನಪ್ಪ)

ಚಪ್ಪಡಿ ಕಲ್ಲು ದೇಶಕ್ಕೆ ಬೇಕಾಗಿರುವ ಸಾಮಾನು. ಆಗ್ಗೆ ಮಂತ್ರಿಗಳಾಗಿದ್ದ ಶ್ರೀ ಕೆ. ಎಫ್. ಪಾಟೀಲರು ಆರ್ಡರ್ ಕ್ಯಾನ್ಸಲ್ ಮಾಡಿದರು. ಈಗ ತಮ್ಮ ಸರಕಾರ ಬಂದಿದೆ. ಅವರು ಈಗ ಏನೇನೋಮಾಡಿ ಊರು ಬಿಟ್ಟು ಓಡಿಸಬೇಕೆಂದು ಬಹಳ ಅನ್ಯಾಯ ಮಾಡಿದ್ದಾರೆ. ಕೊನೆಯದಾಗಿ ಬಡವರಿಗೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

[MR. SPEAKER in the Chair]

† ಶ್ರೀ ಸಂಜೀವನಾಥ ಐಕಳ.—ಮಾನ್ಯ ಅಧ್ಯಕ್ಷರೇ, 1961 ನೇ ಇಸವಿಯಲ್ಲಿ ತಂದಿದ್ದ ಲ್ಯಾಂಡ್ ರಿಫಾರ್ಮ್ಸ್ ಮಸೂದೆಯಲ್ಲಿ 142 ಕ್ಲಾಜುಗಳಿದ್ದವು. ಈಗ 1965 ನೇ ಇಸವಿಯಲ್ಲಿ ತಂದಿರುವ ಈ ಮಸೂದೆಯಲ್ಲಿ 43 ಕ್ಲಾಜುಗಳಿವೆ. ಈಗ ಈ ಮಸೂದೆಯನ್ನು ಚರ್ಚೆ ಮಾಡಿ ತಕ್ಷಣ ಕ್ರಮ ತೆಗೆದು ಕೊಳ್ಳುವುದಕ್ಕೆ ಸರಕಾರ ತೊಡಗಿದ್ದಾರೆ. ಆದರೆ ಈ ಮಸೂದೆಯಲ್ಲಿ ಅಡಕವಾಗಿರುವ ಕಾರ್ಯಕ್ರಮ 1958 ರಲ್ಲಿ ಪ್ರಾರಂಭವಾಗಿತ್ತು. ಹಿಂದೆ ಮಾನ್ಯ ಅರ್ಥಮಂತ್ರಿಗಳಾಗಿರುವ ಶ್ರೀಮಾನ್ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಲಾಗಿತ್ತು. ಆ ಕಮಿಟಿಯ ಶಿಫಾರಸ್ಸುಗಳಿಗೆ ಅನುಸಾರವಾಗಿ 1961 ರಲ್ಲಿ ಕಾನೂನು ಬಂದಿತ್ತು. ಸರಕಾರ ಮನಸ್ಸು ಮಾಡಿದ್ದರೆ 1961-62ರಲ್ಲಿ ಈ ಕಾನೂನನ್ನು ದೇಶಾದ್ಯಂತ ಜಾರಿಗೆ ತರಬಹುದಾಗಿತ್ತು. ಒಂದು ಕುಂಟು ನೆಪ ಹೇಳಿ ಜಾರಿಗೆ ತರುವುದನ್ನು ಮುಂದಕ್ಕೆ ಹಾಕಿದರು. ಕೇರಳ ಪ್ರದೇಶಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ 33 ಗ್ರಾಮಗಳ ಜಮೀನುದಾರರು ಸುಪ್ರೀಂ ಕೋರ್ಟಿಗೆ ಹೋಗಿ ತಡೆ ಆಜ್ಞೆ ತಂದಿದ್ದರಿಂದ ಇಡೀ ಶಾಸನವನ್ನು ಮೈಸೂರು ರಾಜ್ಯದಲ್ಲಿ ಜಾರಿಗೆತರದೆ ತಡೆ ಹಿಡಿದರು. ಸುಪ್ರೀಂಕೋರ್ಟಿಗೆ ಹೋದ ವ್ಯವಹಾರದಲ್ಲಿ ಕೊಳ್ಳೇಗಾಲದ ಕೆಲವು ಭಾಗ ಸಂಬಂಧಪಟ್ಟದ್ದು ಆಗಿದೆ. ಈ ನೆಪ ಮುಂದೆ ಇಟ್ಟುಕೊಂಡು ಇಡೀ ಮೈಸೂರು ರಾಜ್ಯದಲ್ಲಿ ಜಾರಿಗೆ ತರುವುದನ್ನು ಹಿಂದಕ್ಕೆ ಹಾಕಿ ಈಗ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಕಾಂಗ್ರೆಸ್ ಸರಕಾರಕ್ಕೆ ಬೇಕಾದುದು rich man's money and poor man's vote. ಈಗ ಈ ತಿದ್ದುಪಡಿ ಮಸೂದೆಯ ಹಿನ್ನೆಲೆ ಕೂಡ ಇಷ್ಟೇ ಇದೆ. ಲ್ಯಾಂಡ್‌ಲಾರ್ಡ್ಸ್ ಮನಿ ಪೂಅರ್ ಮ್ಯಾನ್ಸವೋಟ್ ಬೇಕಾಗಿದೆ. ಮುಂದೆ ಬರಲಿರುವ ಇಲೆಕ್ಷನ್‌ನಲ್ಲಿ ವೋಟು ಗಳಿಸುವುದಕ್ಕಾಗಿ ಈ ಪ್ರಯತ್ನ ಇದೆ. Rich man's money and poor man's vote.-Landlord's money and poor man's vote.

Mr. SPEAKER.—Will the member come to the Bill. This is not a general Debate on next elections.

Sri SANJEEVANATH AIKALA.—The Government has got always in view the elections, and that is why they have brought this Bill.

ಗಾಳಿ ಬಂತು ತೆಂಕಣದ ಸೀಮೆಗೆ ಗಾಳಿ ಬಂತು ಎಂದು ಹೇಳುವಹಾಗೆ 1967ನೇ ಇಸವಿಯಲ್ಲಿಇಲೆಕ್ಷನ್ ಬಂತು ಎಂದು ಈ 43 ಕ್ಲಾಜುಗಳಿರುವ ತಿದ್ದುಪಡಿ ಮಸೂದೆ ತಂದ್ದಿದ್ದೀರಿ. ಈ ತಿದ್ದುಪಡಿ ಮಸೂದೆಯ ಒಂದೆರಡು ಕ್ಲಾಜುಗಳ ಬಗ್ಗೆ ಪುನಃ ಯಾರಾದರೂ ಸುಪ್ರೀಂ ಕೋರ್ಟಿಗೆ ಹೋದರೂ ಹೋಗಬಹುದು. ಇಂಥ ಪರಿಸ್ಥಿತಿ ಇದೆ ಎಂದು ಹೆದರಿಕೆಯಾಗುತ್ತದೆ. ವಕೀಲ ವೃತ್ತಿ ಮಾಡದೇ ಇದ್ದ ನಮ್ಮಂಥವರಿಗೆ ಇದು ಅರ್ಥವಾಗುವುದಿಲ್ಲ. ಕೆಲವು ವಿಷಯಗಳ ವಿಚಾರದಲ್ಲಿ ಅಖೈರು ತೀರ್ಮಾನ ಮಾಡುವುದು ಟ್ರಿಬ್ಯೂನಲ್ ತೀರ್ಮಾನಕ್ಕೆ ಬಿಟ್ಟುಕೊಟ್ಟಿದ್ದಾರೆ. ಅಂದರೆ ಕೋರ್ಟಿಗೆ ಟ್ರಿಬ್ಯೂನಲ್‌ಕ್ಕೆ ಹೋಗಲೇ ಬೇಕಾಗುತ್ತದೆ. ಕೋರ್ಟಿಗೆ ಹೋಗುವುದು ಅಂದರೆ ಖರ್ಚು ಮಾಡಲೇ ಬೇಕಾಗುತ್ತದೆ. ಇಂಥ ತಿದ್ದುಪಡಿ ತಂದಿರುವುದರಿಂದ ಎಷ್ಟರಮಟ್ಟಿಗೆ ಜನರಿಗೆ ಹಿತವಾಗುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮಂಥವರಿಗೆ ಇದು ಅರ್ಥವಾಗುವುದಿಲ್ಲ ಎಂದು ಒಪ್ಪಬೇಕಾಗುತ್ತದೆ.

ಕೇಂದ್ರ ಸರಕಾರದ ಆದೇಶದ ಪ್ರಕಾರ ಪ್ರಾಮುಖ್ಯವಾದ 8 ತಿದ್ದುಪಡಿಗಳನ್ನು ಈ ಮಸೂದೆಯಲ್ಲಿ ತಂದಿದ್ದಾರೆ. ರೈತರಿಗೆ ಹಿತವಾಗುವ ರೀತಿಯಲ್ಲಿದೆ ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ರೈತಾಪಿ ಜನರ ಹಿತ ದೃಷ್ಟಿಯಿಂದ ತಂದಿರುವ ಈ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಒಂದು ಮಾತು. ಇದರಿಂದ ಈ ಸಮಸ್ಯೆ ನಿವಾರಣೆಯಾಗುವುದಿಲ್ಲ. ನಮ್ಮ ಜನರಿಗೆ ಲ್ಯಾಂಡ್ ಹಂಗರ್, ಅಂದರೆ, ಭೂಮಿಯ ಹಸಿವು ಬಹಳ ಹೆಚ್ಚಾಗಿದೆ. ಈ ವಿಷಯದಲ್ಲಿ ಘರ್ಷಣೆಯುಂಟಾಗದ ರೀತಿಯಲ್ಲಿ ಮಾಡಬೇಕಾಗಿರುವುದರಿಂದ ಹೊಸದಾಗಿ ರಿಕ್ಲೇಮ್ ಮಾಡಿ ಭೂಮಿ ಕೊಡಬೇಕು. ಯಾರಿಗೂ ತೊಂದರೆಯಾಗದಂತೆ ಭೂಮಾಲೀಕರೂ ಸ್ವಾಧೀನ ಕಡೆಯ

ಬಹುದು, ರೈತರೂ ಭೂಮಿ ಪಡೆಯಬಹುದು. ಇಂಥ ಸಂದರ್ಭದಲ್ಲಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಭೂಮಿಯನ್ನು ಬಿಡಿಸಲ್ಪಡುವುದರಲ್ಲಿ ವೇಸ್ಟ್ ಲ್ಯಾಂಡ್ ಇರುವುದನ್ನು ರಿಕ್ಲೇಮ್ ಮಾಡಿ ಕೊಡಬೇಕು. ಇದು ಸೂಕ್ತವಾದುದು ಸಾಧುವಾದುದು ಎಂದು ನನ್ನ ಅಭಿಪ್ರಾಯ. ಇದರಲ್ಲಿ ಘರ್ಷಣೆಯಾಗುವುದಿಲ್ಲ. ಇಂಥ ವಿಷಯಗಳು ಕೋರ್ಟಿಗೆ ಹೋದರೆ ಎಲ್ಲರಿಗೂ ತೊಂದರೆಯಾಗುತ್ತದೆ ಆದುದರಿಂದ ಇದನ್ನು ಜಾರಿಗೆ ತರುವುದರಲ್ಲಿ ಅಡಚಣೆಯುಂಟು ಮಾಡಬಾರದು. ಇದಲ್ಲದೆ ಈ ಮಸೂದೆಯಲ್ಲಿ ಅಡಿಕೆ ತೋಟ ತೆಂಗಿನ ತೋಟ ಇವುಗಳಿಗೆ ಇರುವ ವಿನಾಯಿತಿ ತೆಗೆದು ಹಾಕಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಸತ್ಯಾಂಶ ಇದೆ ಎಂದು ಹೇಳುತ್ತೇನೆ. ತೆಂಗಿನ ತೋಟಕ್ಕೆ ವಿನಾಯಿತಿ ಕೊಡಬೇಕು. ಅಡಕೆ ತೋಟ ಕಾಫಿ ತೋಟಕ್ಕೆ ಇದ್ದ ಹಾಗೆ ನಮ್ಮ ಜಿಲ್ಲೆಯಲ್ಲಿ ತೆಂಗಿನ ತೋಟಕ್ಕೆ ತೊಂದರೆಯಾಗುವುದಿಲ್ಲ. ಅಡಕೆ ತೋಟ ಇದ್ದರ ಅದಕ್ಕೆ ಸೀಲಿಂಗ್ ಲಿಮಿಟ್ ಇರುತ್ತದೆ. ಸ್ವಂತಾಗಿ ಸಾಗುವಳಿ ಮಾಡಿದ್ದರೆ ತೊಂದರೆಯಾಗುವುದಿಲ್ಲ. ಇಲ್ಲದಿದ್ದರೆ ಈ ಮಸೂದೆಯಿಂದ ತೊಂದರೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಆದುದರಿಂದ ತೆಂಗಿನ ತೋಟ ಹೊರಪಡಿಸುವುದು ಸರಿಯಲ್ಲ.

ವಿದ್ಯಾ ಸಂಸ್ಥೆಗೊಳಪಟ್ಟಿರತಕ್ಕ ಭೂಮಿಗೂ ಸಹಾ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಈ ವಿದ್ಯಾ ಸಂಸ್ಥೆಗಳು ಖರ್ಚುಮಾಡತಕ್ಕ ಹಣದಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ. ಆದುದರಿಂದ ಇವುಗಳಿಗೂ ವಿನಾಯಿತಿಯನ್ನು ಕೊಡಬೇಕು. ಆದರೆ ನಾನೀಗ ಕ್ಲಾಜ್ ಬೈ ಕ್ಲಾಜ್ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಷ್ಟನ್ನು ಹೇಳಿಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಸರ್ಕಾರದ ಮಾನ್ಯ ರೆವಿನ್ಯೂ ಸಚಿವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಭೂಸುಧಾರಣಾ ಮಸೂದೆಯನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಹಾಗೆ ಇದನ್ನು ಸ್ವಾಗತಮಾಡತಕ್ಕ ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಸೂಕ್ಷ್ಮವಾಗಿ ಅಪೇಕ್ಷಿಸುತ್ತೇನೆ.

ಇಲ್ಲಿಯವರೆಗೂ ಸಭೆಯಲ್ಲಿ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ತರುವುದರಿಂದೇನೂ ಪ್ರಯೋಜನವಿಲ್ಲ, ಇದನ್ನು ಸರ್ಕಾರದವರು ಬಹಳ ಕಾಲವಿಳಂಬ ಮಾಡಿ ತಂದಿದ್ದಾರೆ. ಆದ್ದರಿಂದ ಈ ದಿನ ಈ ಕಾನೂನನ್ನು ತಂದರೂ ಇದರಿಂದೇನೂ ರೈತರಿಗೆ ಪ್ರಯೋಜನವಾಗುವುದಿಲ್ಲ ಅನ್ನುವುದಾಗಿ ಹೇಳಿದ್ದಾರೆ. ಇದರಿಂದ ಹಾಲೀ ಕೋರುದಾರರಿಗೆ ಅಥವಾ ಗೇಣೀದಾರರಿಗೆ ಇಲ್ಲವೇ ಗುತ್ತಿಗೇದಾರರಿಗೆ ಹಂಚುವುದಕ್ಕೆ ಭೂಮಿಯಿಲ್ಲದೆ ಅನ್ನತಕ್ಕ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ನಾನಾದರೂ ಅವರನ್ನು ಕೇಳುತ್ತೇನೆ—ನಾವು ಇಲ್ಲಿ ವಿಧಾನ ಸಭೆಯಲ್ಲಿ ಕುಳಿತುಕೊಂಡು ಎಲ್ಲಾ ಸದಸ್ಯರೂ ಈ ಒಂದು ಬಿಲ್ಲನ್ನು ಪಾಸ್‌ಮಾಡಿ, ಈ ಕಾನೂನು ಪ್ರಕಾರ ಜಮೀನನ್ನು ಅವರಿಗೆ ಕೊಟ್ಟರೆ ಮಾತ್ರ ಟಿಲ್ಲರ್ ಆಫ್ ದಿ ಸಾಯಿಲ್ ಮಸ್ಟ್ ಬಿ ದಿ ಓನರ್ ಆಫ್ ದಿ ಲ್ಯಾಂಡ್ ಅನ್ನುವ ತತ್ವವನ್ನು ಜಾರಿಗೆ ತಂದಹಾಗೆ ಆಗುತ್ತದೆ, ಹಾಗೆ ಮಾಡದೆ ಜಮೀನ್ದಾರನಾಗಿರತಕ್ಕವನು ತನ್ನ ವಶದಲ್ಲಿರತಕ್ಕ ಯಾರು ವಾಸ್ತವವಾಗಿ ಉಳುಮೆ ಮಾಡುತ್ತಿದ್ದನೋ ಅಂಥವನಿಗೇ ಆ ಭೂಮಿಯನ್ನು ಖರೀದಿಗೆ ಕೊಟ್ಟರೆ, ಕೊಟ್ಟಿದ್ದರೆ ಆಗ ಜಮೀನು ಆ ರೈತನಾದವನಿಗೆ ಸಿಕ್ಕಿ ಆ ನಮ್ಮ ತತ್ವಕ್ಕೆ ಅದು ಹೊಂದಾವಣಿಕೆಯಾಗುವುದಿಲ್ಲವೇ ಎಂದು ಕೇಳುತ್ತೇನೆ? ನಾನು ಕಂಡ ಹಾಗೆ ಅನೇಕ ರೀತಿಯಲ್ಲಿ ಕಳೆದ 8-10 ವರ್ಷಗಳಿಂದಲೂ ಈ ವಿಚಾರ ಅನೇಕ ಕ್ಷೇತ್ರಗಳಲ್ಲಿ, ಜತ್ತಿ ಸಮಿತಿಯ ಮೂಲಕವೂ, ಅನೇಕ ಸಲೆಕ್ಟ್ ಕಮಿಟಿಗಳ ಮೂಲಕವೂ ಮತ್ತು ಇದೇ ಸಭೆಯಲ್ಲೂ ವಿಫಲವಾಗಿ ಚರ್ಚೆಯಾಗಿದೆ. ಇದನ್ನು ಕಾದು ನೋಡುತ್ತಿದ್ದ ಜಮೀನ್ದಾರರುಗಳು ಒಂದಲ್ಲಾ ಒಂದುದಿನ ಈ ಕಾನೂನು ದೇಶದಲ್ಲಿ ಜಾರಿಗೆ ಬಂದೇ ಬರುತ್ತದೆ, ಆಗ ನಮಗೆ ಈ ಹೆಚ್ಚುವರಿ ಭೂಮಿಯೇನಿದೆ ಅದು ನಮಗೆ ಎಂದಿದ್ದರೂ ಉಳಿಯತಕ್ಕದ್ದಲ್ಲ, ಈ ಹೆಚ್ಚುವರಿ ಭೂಮಿಯನ್ನು ಗೇಣೀದಾರನಾದವನಿಗೆ ಕೊಡಲೇಬೇಕಾಗುವುದು ಎಂಬುದನ್ನೆಲ್ಲಾ ಲೆಕ್ಕಹಾಕಿಕೊಂಡು ಆಭೂಮಿಯನ್ನು ಆ ಗುತ್ತಿಗೆದಾರನಿಗೋ ಅಥವಾ ಕೋರುದಾರನಿಗೋ ಮಾರಾಟ ಮಾಡಿಬಿಟ್ಟಿದ್ದಾರೆ. ಆದರೆ ಎಲ್ಲಿಯೋ ಅಪರೂಪ ಸಂದರ್ಭಗಳಲ್ಲಿ 5-10 ರೂಪಾಯಿಗಳನ್ನು ಜಾಸ್ತಿಕೊಡುತ್ತಾರೆಂದು ಅವರು ಬೇರೆಯವರಿಗೆ ಮಾರಿದ್ದರೂ ಮಾರಿರಬಹುದು. ಅಂಥ ಕೇಸುಗಳು ಬಹಳ ಕಡಮೆ. ಹೀಗೆ ಜಮೀನು ಆ ರೈತರಿಗೆ ದೊರೆತಿದ್ದರೆ ಆಗ ಟಿಲ್ಲರ್ ಆಫ್ ದಿ ಸಾಯಿಲ್ ಮಸ್ಟ್ ಬಿ ದಿ ಓನರ್ ಆಫ್ ದಿ ಲ್ಯಾಂಡ್ ಎಂಬ ತತ್ವಕ್ಕೇನು ಧಕ್ಕೆಬಂದಹಾಗಾಯಿತು ? ಆದ್ದರಿಂದ ಅವರು ಹೇಳತಕ್ಕವಾದ ಸರಿಯಲ್ಲ ಎಂದು ನಾನು ಹೇಳುತ್ತೇನೆ.

Tiller is the owner of the Soil. Tiller is to become the owner by some method or the other—it may be by an enactment by the Legislature—he should become the owner of the land.

(ಶ್ರೀ ಎ. ಮುನಿಯಪ್ಪ)

ಹೀಗೆ ಭೂಮಿ ಈಗಾಗಲೇ ಹಂಚಿಕೆಯಾಗಿದೆ. 1961 ರಿಂದಲೂ ಈ ಕಾನೂನಿನ ಉದ್ದೇಶ ನಮ್ಮೆಲ್ಲ ದೃಷ್ಟಿಯಲ್ಲಿ ಏನಿತ್ತೋ ಅದು ಈಗಾಗಲೇ ಸಾಧನೆಯಾಗಿದೆ ಎಂದು ಹೇಳುತ್ತೇನೆ.

ಇನ್ನೊಂದು ಬಹು ಮುಖ್ಯವಾದ ವಿಚಾರವೇನೆಂದರೆ; ಈ ಹಿಂದೆ ನಾವು 1961ರಲ್ಲಿ ಭೂಸು ಧಾರಣೆಯ ಮೂಲ ಶಾಸನಕ್ಕೆ ನಮ್ಮೆಲ್ಲರ ಒಪ್ಪಿಗೆಯನ್ನು ಕೊಟ್ಟಿದ್ದಂಥ ಶಾಸನದಲ್ಲಿ ಕಾಫೀ ತೋಟದ ಬೆಳೆಗಾರರಿಗೆ 100 ಎಕರೆಗಳ ಒಂದು ಸೀಲಿಂಗನ್ನು ಹಾಕಲಾಗಿತ್ತು. ಈಗ ಇದರಲ್ಲಿ ಅದನ್ನೂ ಸಹಾ ತೆಗೆದು ಹಾಕಿದ್ದಾರೆ. ಹಾಗೆ ತೆಗೆದು ಹಾಕುವುದಕ್ಕೆ ಕಾರಣ ಅದು ಡಾಲರ್ ಅರ್ನಿಗ್ ಬೆಳೆಯಾಗಿದೆ, ಅಂಥ ಒಂದು ಆದಾಯ ನಮಗೆ ಬೇರಾವ ಬೆಳೆಯಿಂದಲೂ ಸಿಕ್ಕುವುದಿಲ್ಲ, ಜನರು ಇನ್ನು ಮುಂದಕ್ಕೆ ಯಾರಾದರೂ ಕಾಫಿಗಿಡಗಳನ್ನು ಬೆಳಸುತ್ತೇವೆಂದು ಮುಂದೆ ಬಂದಲ್ಲಿ ಅವರಿಗೆ ಕೊಡಲು ಸರ್ಕಾರದವರಲ್ಲಿ ಬೇಕಾದಷ್ಟು ಜಮೀನಿದೆ, ಆದುದರಿಂದ ಆ ಸೀಲಿಂಗನ್ನು ತೆಗೆದು ಹಾಕಲಾಗಿದೆ ಎಂದು ಹೇಳಿದ್ದಾರೆ. ಅದೇ ಕಾರಣವನ್ನು ನಾನೂ ಸಹಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ—ಯಾವ ಒಂದು ಕಾರಣದ ಮೇಲೆ ಆ ಪ್ಲಾಂಟೇಷನ್‌ಗಳಿಗೆ ಅವರು ಆ ರೀತಿ ವಿನಾಯಿತಿ ಕೊಡಲು ಒಪ್ಪಿದರು ಎಂದರೆ ಅದು ಆ ಇಂಡಿಯಾ ಸರ್ಕಾರದ ಪ್ಲಾನಿಂಗ್ ಕಮಿಷನ್ನಿನವರ ತೀರ್ಮಾನದ ಪ್ರಕಾರ ಅದಕ್ಕೆ ಆ ಒಪ್ಪಿಗೆ ಕೊಡಲಾಯಿತು. ಅದರೆ ಆ ಪ್ಲಾನಿಂಗ್ ಕಮಿಷನ್ನಿನವರೇ ಈ ಪ್ಲಾಂಟೇಷನ್ ಬೆಳೆಯಲ್ಲಿ ಈ ಅಡಕೆ ಮತ್ತು ತೆಂಗನ್ನೂ ಸಹಾ ಸೇರಿಸಬೇಕು ಎಂಬುದಾಗಿ ಅವರ ವರದಿಯಲ್ಲೇ ಹೇಳಿದೆ.

ನಮ್ಮ ರಾಜ್ಯಕ್ಕಿಂತಲೂ ಎಲ್ಲಿ ಜನ ಒತ್ತಡ ಭೂಮಿಯ ಮೇಲೆ ಹೆಚ್ಚಿಗೆ ಇರುತ್ತದೆಯೋ ಅಂಥ ರಾಜ್ಯಗಳಲ್ಲಿ ಕೂಡ ಅಂದರೆ ಆ ಕೇರಳ ಮತ್ತು ಮದ್ರಾಸ್ ರಾಜ್ಯಗಳಲ್ಲೂ ಕೂಡ ಕಾಪಿಬೆಳೆಯತಕ್ಕ ಪ್ರದೇಶಕ್ಕೂ ಒಂದು ಸೀಲಿಂಗನ್ನು ನಿಗದಿಮಾಡಿ ಆ ಬೆಳೆಯ ಜೊತೆಗೆ ಈ ಅಡಕೆ ಮತ್ತು ತೆಂಗನ್ನೂ ಸೇರಿಸಿದ್ದಾರೆ. ಹಾಗಿರುವಾಗ ಇಲ್ಲಿ ಸರ್ಕಾರದವರೇಕೆ ಈ ಎರಡು ಬೆಳೆಗಳ ಬಗ್ಗೆ ಮನಸ್ಸನ್ನು ಮಾಡಲಿಲ್ಲವೋ ಅದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಎರಡನೇಯದಾಗಿ—ಕಾಫೀ ಬೆಳೆಗೆ ಏನು ಖರ್ಚು ತಗುಲತ್ತದೋ ಮತ್ತು ಅದನ್ನು ಬೆಳೆಸುವುದಕ್ಕೇನು ಕಾಲ ಹಿಡಿಯುತ್ತದೋ ಅಷ್ಟೇ ಖರ್ಚು ಮತ್ತು ಕಾಲ ಈ ಎರಡು ಬೆಳೆಗಳಿಗೂ ಬೇಕು. ಇದನ್ನೆಲ್ಲಾ ಹೋಲಿಸಿ ನೋಡಿದಲ್ಲಿ ಕಾಫಿ ಬೆಳೆಗೆ ವಿನಾಯಿತಿ ಕೊಡಲು ಅದಕ್ಕೇನೇನು ಅರ್ಹತೆಗಳಿವೆಯೋ ಆ ಅರ್ಹತೆಗಳೆಲ್ಲಾ ಈ ಬೆಳೆಗಳಿಗೂ ಇರುತ್ತವೆ. ಆ ವಿನಾಯಿತಿಯನ್ನು ಪಡೆಯಲು ಈ ಬೆಳೆಗಳು ಯಾವ ಅನರ್ಹತೆಯನ್ನೂ ಪಡೆದಿಲ್ಲ. ಆದಾಗ್ಯೂ ಸರ್ಕಾರದವರು ಇವುಗಳಿಗೆ ವಿನಾಯಿತಿ ಕೊಡಲು ಏಕೆ ಮನಸ್ಸನ್ನು ಮಾಡಲಿಲ್ಲ ಎಂದು ಕೇಳಲಿಚ್ಛಿಸುತ್ತೇನೆ. ಇದನ್ನು ಮಾಡುವುದಕ್ಕೆ ಈಗಲೂ ಕಾಲ ಮೀರಿಲ್ಲ. ಸರ್ಕಾರದವರು ಅಮೆಂಡ್‌ಮೆಂಟುಗಳನ್ನು ತರುವಾಗ ಇದನ್ನು ಸೇರಿಸಿ ಆ ಪ್ಲಾಂಟೇಷನ್‌ಗಳ ಜೊತೆಯಲ್ಲಿ ತೆಂಗು ಮತ್ತು ಅಡಕೆ ತೋಟಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—How long we should sit here? The Hon'ble Minister for Revenue will have to reply. How much time the Hon'ble Minister wants to take?

Sri M. V. KRISHNAPPA.—About half-an-hour Sir.

Mr. SPEAKER.—He wants half-an-hour. We have the amendments tomorrow. So let us meet at 8-30 a. m. tomorrow. There will be no "TEA" break. The Hon'ble members must remember that we have to finish this Bill as well as the other Bill tomorrow. There is half-an-hour discussion also. We shall have it in the end tomorrow.

(Some members stood up and said that they have got their amendments and they want to speak)

Mr. SPEAKER.—Unless the Hon'ble members send their names, before hand, their names will not be called up on.

† ಶ್ರೀ ಎಂ. ವಿ. ಕೃಷ್ಣಪ್ಪ.—ಅಧ್ಯಕ್ಷರೇ, ಮೊದಲನೆಯದಾಗಿ ಮಾನ್ಯ ಸಭೆಯ ಸದಸ್ಯರು ಈ ವಿಧೇಯಕಕ್ಕೆ ಕೊಟ್ಟ ಸ್ವಾಗತಕ್ಕಾಗಿ ಅವರನ್ನೆಲ್ಲಾ ಅಭಿನಂದಿಸುತ್ತೇನೆ. ಈವಿಧೇಯಕವನ್ನು ಇನ್ನೂ ಮೊದಲೇ ಜಾರಿಗೆ ತಂದು ಇದರ ಪ್ರತಿಫಲ ಭೂ ರಹಿತರಾದ ರೈತರಿಗೆ ಮತ್ತು ಚಿಕ್ಕ ಚಿಕ್ಕ ಭೂಮಿ

ಇರುವವರಿಗೆ ದೊರೆತು ಅನುಕೂಲವಾಗಿದ್ದರೆ ಚೆನ್ನಾಗಿತ್ತು ಎಂಬ ಭಾವನೆಯನ್ನು ಅನೇಕ ಸದಸ್ಯರು ಹೇಳಿದ್ದಾರೆ. ಬೇಗ ಜಾರಿಗೆ ತರದೇ ಇದ್ದುದಕ್ಕೆ ನಾನಲ್ಲ ಕಾರಣ. ಅನೇಕ ಸಲ ಮಾನ್ಯ ಸಭೆಯಲ್ಲಿ ಇದು ಏಕೆ ವಿಧಾನವಾಯಿತು ಎಂಬ ವಿಷಯವನ್ನು ಹೇಳಿದ್ದೇನೆ. ನಾವೂ ಕೂಡ ತಮ್ಮಷ್ಟೇ ಆಸಕ್ತಿಯಿಂದ ಈ ಭೂ ಸುಧಾರಣೆ ಜಾರಿಗೆ ಬರಬೇಕು, ಬೇಗ ಈ ಕೆಲಸ ಮುಗಿದರೆ ದೇಶಕ್ಕೆ ಕ್ಷೇಮ ಏಂಬ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಇದು ನಮ್ಮಲ್ಲೇ ಅಲ್ಲಿ ಭೂ ಸ್ವಾಮಿಗಳು ಎಂದು ಯಾರನ್ನು ಕರೆಯುತ್ತೇವೆ ಅವರೂ ಕೂಡ ತ್ರಿಶಂಕು ಸ್ವರ್ಗದಲ್ಲಿ ನಮ್ಮನ್ನು ಬಿಟ್ಟಿದ್ದಾರೆ, ಯಾವುದು ನಮ್ಮ ಭೂಮಿ, ಎಷ್ಟು ಭೂಮಿ ನಮಗೆ ಉಳಿಯುತ್ತದೆ ಎಂಬುದು ಗೊತ್ತಾದರೆ ಅಷ್ಟೇ ಸಾಕು, ಬೇಗ ಆಗಲಿಲ್ಲವಲ್ಲಾ ಎಂದು ಅನೇಕರು ಭೂಸ್ವಾಮಿಗಳು ನಮಗೆ ಹೇಳುತ್ತಾ ಇದ್ದುದನ್ನು ಕೇಳಿದ್ದೇನೆ. ಸರ್ಕಾರಕ್ಕಿಂತಲೂ ಭೂಸ್ವಾಮಿಗಳು ಅನೇಕರಿಗೆ ಇದು ಬೇಗ ಬಂದರೆ ಉತ್ತಮ ಎಂಬ ಭಾವನೆ ಬಂದು ಇದು ಬರದೇ ಇದ್ದುದರಿಂದ ಬೇಜಾರು ಪಟ್ಟುಕೊಂಡಿದ್ದಾರೆ. ಕಾರಣಾಂತರದಿಂದ ಇಷ್ಟು ನಿಧಾನವಾಗಿ ಬಂದಿದೆ. ಒಟ್ಟಿನಲ್ಲಿ ಮಾನ್ಯ ಸಭೆಯ ಸದಸ್ಯರೆಲ್ಲರೂ ಕೂಡ ಅನೇಕ ಸಲಹೆಗಳನ್ನು ಕೊಟ್ಟು ಇದು ಬೇಗ ಜಾರಿಗೆ ಬರಬೇಕೆಂದು ಹೇಳಿ ಇದಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ. ಒಬ್ಬಿಬ್ಬರು ಮಿತ್ರರು ಕೆಲವರು ವಿರೋಧಾಭಿಪ್ರಾಯವನ್ನೂ ಸೂಚನೆ ಮಾಡಿದ್ದಾರೆ. ಒಟ್ಟಿನಲ್ಲಿ ಎರಡು ಮೂರು ದಿವಸದ ಈ ಚರ್ಚೆಯಲ್ಲಿ ನಾನು ತಂದಿರುವ ಅಮೆಂಡ್‌ಮೆಂಟ್ ವಿಷಯವನ್ನು ಅವರು ಮಾತನಾಡಲೇ ಇಲ್ಲ. ಮೂಲ ಆಕ್ಟ್‌ನಲ್ಲಿ ಇರತಕ್ಕ ನ್ಯೂನತೆಗಳ ವಿಷಯದಲ್ಲಿ ಅನೇಕರು ಭಾಷಣ ಮಾಡುತ್ತಾ ಇದ್ದರು. ಮೊದಲನೆಯದು ಸೀಲಿಂಗ್. ಕೆಲವರು ಜಾಸ್ತಿ, ಕೆಲವರು ಇನ್ನೂ ಕಡಿಮೆ ಮಾಡಬೇಕಾಗಿತ್ತು, ಈ ರೀತಿ ಮಾಡಿದರೆ ಈ ದೇಶದಲ್ಲಿ ಹಂಚುವುದಕ್ಕೆ ಏನೂ ಭೂಮಿ ಉಳಿಯುವುದೇ ಇಲ್ಲ ಎಂದು ಹೇಳುತ್ತಾ ಹೋದರು. ಇದಕ್ಕೆ ಕಾರಣ ಕರ್ತ ನಾನಲ್ಲ, ಹಿಂದೆ ಈ ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಟ್ಟು ಇದು ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ಪಡೆದು ಬಂದಿದೆ. ಎರಡನೆಯದು, ಎಕ್ಸೆಂಪ್ಷನ್ ವಿಷಯ ಅನೇಕರು ಭಾಷಣ ಮಾಡಿದರು. ಈ ಕೆಲಸ ಏನಾಗಿದೆ ಎಂದರೆ ಹೆಗ್ಗಣ ಹಿಡಿಯಬೇಕೆಂದು ಬೋನು ತಯಾರು ಮಾಡಿ ಅದು ಮುಂದಿನ ಬಾಗಿಲಿನಿಂದ ಒಳಕ್ಕೆ ಬಂದ ಮೇಲೆ ಹಿಂದೆ ತೂತು ಮಾಡಿ ಬಿಡುತ್ತಾ ಇರುವಂತೆ ಆಗಿದೆ. ಇದರಲ್ಲಿ ಲೂಪಹೋಲ್ಸ್ ಬಹಳ ಇವೆ, ಎಕ್ಸೆಂಪ್ಷನ್ ಕೊಡಬಾರದು, ಕೊಡುವುದರಿಂದ ಯಾವ ಉದ್ದೇಶದಿಂದ ಕಾನೂನು ಮಾಡಿದ್ದೀರೋ ಅದು ಸಫಲವಾಗುವುದಿಲ್ಲ, ಬೋನಿಗೆ ತೂತು ಮಾಡಿದ ಹಾಗೆ ಮಾಡಿದ್ದೀರಿ— ಈ ಭೂಸ್ವಾಮಿಗಳು ಹೆಗ್ಗಣಗಳು ಅಲ್ಲಿ ಸಿಕ್ಕುತ್ತವೆ ಎಂದು ಏನು ಅಂದುಕೊಂಡಿದ್ದೀರಿ ಅವು ಸಿಕ್ಕುವುದಿಲ್ಲ ಹೊರಟು ಹೋಗುತ್ತವೆ ಎಂದು ಅನೇಕರು ಸಂಶಯವನ್ನು ವ್ಯಕ್ತ ಮಾಡಿದರು. ಇದೂ ಕೂಡ ಹಿಂದೆಯೇ ತೀರ್ಮಾನವಾಗಿದೆ. ಈ ತಿದ್ದುಪಡಿ ವಿಷಯದಲ್ಲಿ ನಾನು ಇದನ್ನು ಸಭೆಯ ಮುಂದೆ, ತರುವಾಗಲೇ ಹೇಳಿದ್ದೇನೆ. ಈ ಭೂಸುಧಾರಣೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇದ್ದವು. ಈಗಲೂ ಮಾನ್ಯ ಸಭೆಯಲ್ಲಿ ಕೆಲವರು ಇದು ಆಗುತ್ತದೆಯೇ, ಇದು ಜಾರಿಗೆ ಬರುತ್ತದೆಯೇ ? ಸಫಲವಾಗುತ್ತದೆಯೇ ಎಂಬ ಸಂಶಯವನ್ನೂ ಕಂಡು ನಿವೇದನೆ ಮಾಡಿದರು. ಏನಾದರು ಆಗಲಿ ಭೂಮಿಯನ್ನು ಹಂಚಬೇಕು. ಪ್ರಪಂಚದ ಎಲ್ಲಾ ದೇಶಗಳನ್ನೂ ನಾನು ಸುತ್ತಿಕೊಂಡು ಬಂದಿದ್ದೇನೆ. ಅಲ್ಲಿನ ವ್ಯವಸಾಯದ ಪದ್ಧತಿಯನ್ನು ನೋಡಿದ್ದೇನೆ. ಎಲ್ಲಿ ನೋಡಿಕೊಂಡು ಬಂದರೂ ಕೂಡ ಇದರಲ್ಲಿ ಭಿನ್ನಾಭಿಪ್ರಾಯಗಳು ಇವೆ. ಅಮೆರಿಕಾ ದೇಶದ ಪದ್ಧತಿಯ ಪ್ರಕಾರ ಆ ತರಹ ಲಾರ್ಜ್‌ಫಾರಂಸ್ ಇರಬೇಕು ಎಂದು ಹೇಳಿ ಕೆಲವರು ವಾದ ಮಾಡುತ್ತಾರೆ, ಆ ರೀತಿ ಮ್ಯಾಕಿನ್ನೈಸ್ಡ್ ಫಾರಂಸ್ ಇರಬೇಕು, ಅದು ಎಕನಾಮಿಕ್ ಫಾರಂ ಆಗುತ್ತದೆ, ಹೆಚ್ಚು ಆಹಾರಧಾನ್ಯವನ್ನು ಬೆಳೆಯುವುದೇ ನಮ್ಮ ಮುಖ್ಯ ಉದ್ದೇಶವಾದ್ದರಿಂದ ದೊಡ್ಡ ದೊಡ್ಡ ಫಾರಂಸ್ ಮಾಡಬೇಕೆಂಬ ಅಭಿಪ್ರಾಯವನ್ನು ಕೆಲವರು ಇಟ್ಟುಕೊಂಡಿದ್ದಾರೆ. ಇನ್ನು ಕೆಲವರು ಭೂಮಿ ಇಲ್ಲದೇ ಇರುವವರಿಗೆ ಭೂಮಿ ಕೊಟ್ಟರೆ ಅದರಿಂದ ಉಳುವವನಿಗೆ ನನ್ನದು ಭೂಮಿ ಎಂಬ ಆಶೆ ಅವನ ಹೃದಯದಲ್ಲಿ ಬಂದರೆ ಬೆವರು ಸುರಿಸಿ ಬೆಳೆಯುತ್ತಾ ಇರತಕ್ಕ ಫಸಲು ನನಗೆ ಬರುತ್ತದೆ ಎಂಬ ಭಾವನೆಯನ್ನು ಅವನಲ್ಲಿ ಉಂಟುಮಾಡಿದರೆ ಒಂದಕ್ಕೆ ನೂರ್ಮಡಿಯಾಗಿ ಕೆಲಸ ಮಾಡುತ್ತಾನೆ ಅದರಿಂದ ಉತ್ಪಾದನೆ ಜಾಸ್ತಿಯಾಗುತ್ತದೆ ಎಂಬ ಭಾವನೆಯನ್ನು ಇಟ್ಟು ಕೊಂಡಿದ್ದಾರೆ. ಪ್ರಪಂಚದಲ್ಲಿ ದೊಡ್ಡ ದೇಶ, ವ್ಯವಸಾಯದಲ್ಲಿ ಹೆಚ್ಚು ಬೆಳೆಯುವ ದೇಶ ಎಂದರೆ ಅಮೇರಿಕಾ. ಅಲ್ಲಿ ದೊಡ್ಡ ದೊಡ್ಡ ಫಾರಂಗಳು ಇವೆ. ಸಾವಿರಾರು ಎಕರೆ ಫಾರಂಸ್ ಇವೆ. ಅವು ಹೈಲಿ ಮ್ಯಾಕಿನೈಸ್ಡ್ ಆಗಿವೆ. ಅಮೆರಿಕಾ ದೇಶದ ಜನರು ಜಪಾನ್ ಅನ್ನು ಗೆದ್ದರು. ಜಪಾನನ್ನು ಗೆದ್ದು ಜನರಲ್ ಮ್ಯಾಕಾರ್ಥರ್ ಜಪಾನ್‌ನಲ್ಲಿ ಅಧಿಕಾರ ವಹಿಸಿಕೊಂಡ ತಕ್ಷಣ ಯಾವ ಜನಾಂಗ ದೊಡ್ಡ ದೊಡ್ಡ ಫಾರಂಗಳಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೋ, ಯಾವ ಜನಾಂಗ ಅದು ಪೂರ್ತಿ ಮ್ಯಾಕಿನೈಸ್ಡ್ ಆಗಬೇಕೆಂದು ಭಾವನೆ ಇಟ್ಟುಕೊಂಡಿದ್ದಾರೋ ಅವರು ಜಪಾನ್‌ನಲ್ಲಿ ಏನು ಮಾಡಿದರು ಎಂಬುದನ್ನು ನೋಡಿದರೆ ಅಲ್ಲಿ ಇದ್ದ ಭೂಮಿಯನ್ನು ಎಲ್ಲರಿಗೂ ಹಂಚಿದರು. ಜಪಾನ್‌ನಲ್ಲಿ

(ಶ್ರೀ ಎಂ. ವಿ. ಕೃಷ್ಣಪ್ಪ)

5 ಎಕರೆಯ ಮೇಲೆ ಯಾರು ಇಟ್ಟುಕೊಳ್ಳಕೂಡದು ಎಂದು ಹೇಳಿ ಸೀಲಿಂಗ್ ಮಾಡಿದರು ಮತ್ತು ಇಂಟೆನ್ಸೀವ್ ಕಲ್ಟಿವೇಷನ್ ಮಾಡಲಿಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿದರು. ಇದರಿಂದ ಏನು ಅರ್ಥವಾಗುತ್ತದೆ? ದೊಡ್ಡ ಫಾರಂಸ್ ಇರಬೇಕೆಂಬ ಭಾವನೆಯನ್ನು ಇಟ್ಟುಕೊಂಡಿರತಕ್ಕವರು ಜಪಾನ್‌ನಲ್ಲಿ ಏಕೆ ಹಾಗೆ ಮಾಡಿದರು ಎಂದರೆ ಜಪಾನ್‌ನ ಪರಿಸ್ಥಿತಿಯೇ ಬೇರೆ, ಅಮೆರಿಕದ ಪರಿಸ್ಥಿತಿಯೇ ಬೇರೆ. ಜಪಾನ್‌ನಲ್ಲಿ ಇದ್ದ ಪರಿಸ್ಥಿತಿ ಏನು ಎಂದರೆ, ಯುದ್ಧವಾದ ತಕ್ಷಣ ಎಲ್ಲಿ ಹೋದರೂ ಬಾಂಬ್ ಬಿದ್ದು ನಾಶವಾಗಿತ್ತು, ಜನಗಳಿಗೆ ಕೆಲಸ ಇಲ್ಲ, ನಿರುದ್ಯೋಗ ತಾಂಡವವಾಡುತ್ತಾ ಇತ್ತು. ಒಂದು ಎಕರೆ ಭೂಮಿಗೆ 9 ಜನ ಇದ್ದರು, ನಮ್ಮ ದೇಶದಲ್ಲಿ ಒಂದು ಎಕರೆಗೆ ಒಬ್ಬ ಇದ್ದಾನೆ, ಪರ್ ಕ್ಯಾಪಿಟಾ ತೆಗೆದುಕೊಂಡು ಲೆಕ್ಕಹಾಕಿದರೆ ಮುಕ್ಕಾಲು ಎಕರೆ ಬರುತ್ತದೆ, ಅಮೆರಿಕದಲ್ಲಿ 5 ಎಕರೆ, ರಷ್ಯಾದಲ್ಲಿ 5 ಎಕರೆ ಬರುತ್ತದೆ. ಹೀಗೆ ನಮ್ಮ ದೇಶದಲ್ಲಿ ಮುಕ್ಕಾಲು ಎಕರೆ ಆದರೆ ಜಪಾನ್‌ನಲ್ಲಿ ಒಂದು ಎಕರೆಗೆ 9 ಜನ ಇದ್ದರು. ಯುದ್ಧವಾದ ತಕ್ಷಣ ಜನಗಳಿಗೆ ಕೆಲಸ ಸಿಕ್ಕುತ್ತಾ ಇರಲಿಲ್ಲ ನಿರುದ್ಯೋಗ ಬಂದು ಜನಗಳು ಕಂಗಾಲಾಗಿದ್ದರು. ಆಗ ಮೆಕಾರ್ಥರ್ ಅವರು ಅನುಸರಿಸಿದ ಧೋರಣೆ ಏನು ಎಂಬುದನ್ನು ನೋಡಿದ್ದೇ ಆದರೆ ನಮಗೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ, ಬಾಂಬ್‌ನ ಹೊಡೆತಕ್ಕೆ ಸಿಕ್ಕಿ ಸುಟ್ಟು ಹಾಳಾಗಿ ಹೋಗಿದ್ದ ಫ್ಯಾಕ್ಟರಿಗಳನ್ನು ತಕ್ಷಣ ರಿಪೇರಿ ಮಾಡುವುದಕ್ಕಾಗುವುದಿಲ್ಲ ಎಂದು ಭಾವಿಸಿ ದೇಶದ ಸಂಪತ್ತು ಹೆಚ್ಚಿ, ಜನಗಳಿಗೆ ಆಹಾರ ಸಿಕ್ಕಬೇಕಾದರೆ ಇರುವುದು ಒಂದೇ ಮಾರ್ಗ ಅದು ದೇವರು ಕೊಟ್ಟಿರುವ ಭೂಮಿ ಅದನ್ನು ಹಂಚಲೇ ಬೇಕೆಂದು ತೀರ್ಮಾನ ಮಾಡಿ ಎಲ್ಲರಿಗೂ ಹಂಚಿದರು. ಇವತ್ತು ಜಪಾನ್ ಅದರ ಆಧಾರದ ಮೇಲೆ ಒಂದು ಎಕಾನಮಿಯನ್ನು ಬೆಳಸಿಕೊಂಡು ಬಂದಿದೆ. ಯುದ್ಧವಾಗಿ 20 ವರ್ಷಗಳಾದರೂ ಕೂಡ ಅಲ್ಲಿಗೆ ನಾನು ಒಂದೆರಡು ಸಲ ಹೋಗಿದ್ದೇನೆ ಒಂದು ಸಲಕ್ಕಿಂತ ಇನ್ನೊಂದು ಸಲ ನೋಡಿದಾಗ ಎಷ್ಟೋ ಸಂತೋಷವಾಗುತ್ತದೆ. ಜಪಾನ್‌ನಲ್ಲಿ ವ್ಯವಸಾಯವನ್ನು ಅಷ್ಟೊಂದು ಇನ್‌ಟೆನ್ಸೀವ್ ಆಗಿ ಕಲ್ಟಿವೇಟ್ ಮಾಡಿದ್ದಾರೆ. ಐದು ಎಕರೆ ಭೂಮಿ ಇಟ್ಟುಕೊಂಡು ಒಂದು ರೈತ ಕುಟುಂಬ ಸುಖವಾಗಿ ಬಾಳುವೆ ಮಾಡುತ್ತಾ ಇದ್ದಾರೆ. ಒಂದು ಮನೆಗೆ ಎಷ್ಟು ಆಹಾರ ಬೇಕೋ ಅಷ್ಟು ಎಲ್ಲವನ್ನೂ ಬೆಳೆಯುತ್ತಾ ಇದ್ದಾರೆ. ಒಂದು ಎಕರೆಗೆ ಅಲ್ಲಿ ಒಂಭತ್ತು ಜನ ಇದ್ದರೂ ಕೂಡ ಅವರು ಹೆಚ್ಚು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಾ ಇಲ್ಲ, ಸ್ವಯಂಪರಿಪೂರ್ಣವಾದ ರೀತಿಯಲ್ಲಿ ಅವರು ವ್ಯವಸಾಯವನ್ನು ಮಾಡುತ್ತಾ ಇದ್ದಾರೆ. ಭೂಮಿ ಕಡಿಮೆ ಇದ್ದು, ಜನ ಜಾಸ್ತಿ ಇದ್ದರೂ ಕೂಡ ಅವರು ಹೆಚ್ಚು ಆಹಾರವನ್ನು ಆಮದು ಮಾಡಿಕೊಳ್ಳುತ್ತಾ ಇಲ್ಲ. ಅದಕ್ಕೆ ಕಾರಣವೇನೆಂದರೆ, ಇಂಟೆನ್‌ಸೀವ್ ಅಗ್ರಿಕಲ್ಚರಲ್ ಆಪರೇಷನ್ ಮಾಡಿಕೊಂಡಿದ್ದಾರೆ ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನ್ನು ವ್ಯವಸಾಯಕ್ಕೆ ಹೊಂದಾಣಿಕೆ ಮಾಡಿಕೊಂಡು ಇದ್ದಾರೆ. ಪ್ರತಿಯೊಂದು ಎಕರೆಯಲ್ಲಿ ಜಪಾನ್‌ನಲ್ಲಿ ಇರುವಷ್ಟು ಉತ್ಪನ್ನ ಬೇರೆ ಎಲ್ಲೂ ಇಲ್ಲ. ಬತ್ತ ಅಥವಾ ಗೋಧಿ ಅವರ ಟಾರ್ಜೆಟ್ ಏನಿದೆ ಅದು ಅಮೆರಿಕಾದಲ್ಲೂ ಇಲ್ಲ ರಷ್ಯಾದಲ್ಲೂ ಇಲ್ಲ, ಉತ್ಪನ್ನವನ್ನು ಜಾಸ್ತಿ ಮಾಡಬೇಕಾದರೆ ಇನ್‌ಟೆನ್ಸೀವ್ ವ್ಯವಸಾಯ ಮಾಡುವುದು ಮುಖ್ಯವೇ ಹೊರತು ಲಾರ್ಜ್ ಫಾರಂಸ್ ಇದ್ದರೇ ಆಗುತ್ತದೆ ಎಂಬ ತತ್ವ ಸರಿಯಲ್ಲ ಎಂಬುದನ್ನು ಇದೇ ತೋರಿಸುತ್ತದೆ. ಆದರೆ ಇಂಡಿಯಾ ದೇಶದಲ್ಲಿ ಎರಡು ಗುಣಗಳೂ ಕೂಡ ಇವೆ. ಇಂಡಿಯಾ ದೇಶದಲ್ಲಿ ಅನೇಕ ತರಹದ ಕ್ಲೈಮೇಟ್ಸ್ ಇವೆ. ಆರ್ಕ್ಟಿಕ್‌ನ ಜೋನ್‌ನಲ್ಲಿ ರತಕ್ಕ ಕ್ಲೈಮೇಟ್ ಹಿಮಾಚಲ ಪ್ರದೇಶದಲ್ಲಿ ಇದೆ. ಬೆಂಗಳೂರಿಗೆ ಬಂದರೆ ಯೂರೋಪಿಯನ್ ಕ್ಲೈಮೇಟ್ ಇದೆ. ಆದ್ದರಿಂದ ಇಲ್ಲಿ ಯಾವ ಪ್ಲಾನ್ ಹಾಕಿದರೂ ಕೂಡ ಎಲ್ಲಾ ಕಡೆಗೂ ಒಂದೇ ಒಂದು ಸಾದಾಸೀದಾ ಅಂತ ಮಾಡುವುದಕ್ಕೆ ಹೋದರೆ ಎಲ್ಲಾ ನಾಶವಾಗಿ ಹಾಳಾಗಿ ಹೋಗುತ್ತದೆ. ಇಲ್ಲಿನ ವ್ಯವಸಾಯ ಎರಡು ವಿಧವಾಗಿದೆ. ಆರ್ಕ್ಟಿಕ್ ಜೋನ್‌ನಲ್ಲಿರತಕ್ಕ ಕ್ಲೈಮೇಟ್ ಇರುವ ಏರಿಯಾದಲ್ಲಿ ಜಪಾನ್ ಮೆತಡ್ ಪ್ರಾಕ್ಟೀಸ್ ಮಾಡಬಹುದು. ಗ್ಯಾರಂಟಿಯಾಗಿ ನೀರು ಸರಬರಾಯಿ ಆಗುವ ಕಡೆ ಎಷ್ಟು ನೀರು ಬೇಕಾಗುತ್ತದೆಯೋ ಅಷ್ಟು ನೀರನ್ನು ಕೊಟ್ಟು ಬೆಳೆ ಬೆಳೆಸಬಹುದು. ಹಿಂದೂಸ್ತಾನದಲ್ಲಿ ಇರತಕ್ಕ 36 ಕೋಟಿ ಎಕರೆ ಭೂಮಿಯಲ್ಲಿ ಎಂಟು ಅಥವಾ ಒಂಭತ್ತು ಕೋಟಿ ಎಕರೆ ಎಂದರೆ ಸುಮಾರು ಶೇಕಡ 25 ಭಾಗ ಇರಿಗೇಟೆಡ್ ಏರಿಯಾ ಇರುವುದರಿಂದ ಅದರಲ್ಲಿ ಜಪಾನಿನ ಮಾದರಿಯಲ್ಲಿ ಇನ್‌ಟೆನ್ಸೀವ್ ಕಲ್ಟಿವೇಷನ್ ಮಾಡಬಹುದು ಮತ್ತು ಬಿಜಾಪುರ, ಗುಲ್ಬರ್ಗಾ ಏರಿಯಾದಲ್ಲಿ ಜಪಾನಿನಲ್ಲಿರುವಂತೆ ಐದು ಎಕರೆ ಕೊಟ್ಟರೆ ಅದರಲ್ಲಿ ಮನೆಗೆ ಆಗುವಷ್ಟನ್ನೂ ಕೂಡ ಬೆಳೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲಿನ ಪರಿಸ್ಥಿತಿಗೂ ನೀರಿನ ಆಸರೆ ಇರತಕ್ಕ ಪ್ರದೇಶಗಳ ಪರಿಸ್ಥಿತಿಗೂ ವ್ಯತ್ಯಾಸ ಇದೆ. ಒಟ್ಟಿನಲ್ಲಿ ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ, ಯಾರೇ ಆಗಲಿ ಇಂಥದೇ ಒಂದು ಪದ್ಧತಿ ಇರಬೇಕೆಂದು ವಾದ ಮಾಡುವುದು ತಪ್ಪು, ಜಪಾನಿನ ತರಹ ಮಾಡಬೇಕೆಂದು

ಹೇಳುವುದೂ ಕೂಡ ತಪ್ಪು, ಇಂಡಿಯಾದೇಶದಲ್ಲಿ ಎರಡಕ್ಕೂ ಅನ್ವಯ ಮಾಡಿಕೊಂಡು ಹೋಗಬೇಕಾಗುತ್ತದೆ. ನಮ್ಮ ದೇಶದಲ್ಲಿ ಈಗ 46 ಕೋಟಿ ಜನ ಇದ್ದೇವೆ, ಇದನ್ನು ಬಹಳ ಬೇಗ ಹೇಳಬೇಕು ಏಕೆಂದರೆ ಇದು ಇನ್ನೊಂದು ನಿಮಿಷದಲ್ಲಿ ಎಷ್ಟಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ. 1971ನೇ ಸೆನ್ಸಸ್‌ನಲ್ಲಿ ಇಂಡಿಯಾ ದೇಶದಲ್ಲಿ ಜನ ಸಂಖ್ಯೆ 56 ಕೋಟಿ ಆಗುತ್ತದೆಯೆಂತೆ. 1961ನೆಯ ಇಸವಿಯ ಸೆನ್ಸಸ್ ಪ್ರಕಾರ ಜನ ಸಂಖ್ಯೆ 46 ಕೋಟಿ ಇತ್ತು, 1971ರಲ್ಲಿ ಇಂಡಿಯಾ ದೇಶದ ಜನಸಂಖ್ಯೆ 56 ಕೋಟಿ ಆಗಬಹುದೆಂದು ಹೇಳುತ್ತಾರೆ. ವರ್ಷಕ್ಕೆ ಒಂದೂಕಾಲು ಕೋಟಿಯಂತೆ ಏರುತ್ತದೆ. ಆದರೆ ಭೂಮಿ ಮಾತ್ರ ಹೆಚ್ಚಾಗುತ್ತಿಲ್ಲ. ಈಗ 36 ಕೋಟಿ ಎಕರೆ ಭೂಮಿ ಇದೆ, ಇನ್ನೂ 40 ಕೋಟಿ ಎಕರೆ ವ್ಯವಸಾಯಕ್ಕೆ ತರಬಹುದೆಂದು ಹೇಳುತ್ತಾರೆ. ಇಂಡಿಯಾ ದೇಶದಲ್ಲಿ 82 ಕೋಟಿ ಎಕರೆ ಬೆಟ್ಟ, ಗುಡ್ಡ, ನದಿ ವಗೈರೆಗಳಿಂದ ಕೂಡಿದೆ. ಅದರಲ್ಲಿ ಸೇಕಡ 50 ರಷ್ಟು ರೀಚ್ ಆಗಿದೆ, ಯಾವ ದೇಶದಲ್ಲೇ ಆಗಲಿ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚು ಪ್ರದೇಶದಲ್ಲಿ ವ್ಯವಸಾಯ ಮಾಡಬಾರದೆಂದು ಹೇಳುತ್ತಾರೆ. ಅದಕ್ಕಿಂತ ಜಾಸ್ತಿ ಪ್ರದೇಶದಲ್ಲಿ ವ್ಯವಸಾಯ ಮಾಡಿದರೆ ಪ್ರವಾಹಗಳ ಇಂಬ್ಯಾಲೆನ್ಸ್ ಆಗುತ್ತದೆ, ಅರಣ್ಯಗಳಿರುವುದಿಲ್ಲ. ಹೀಗಾದರೆ ಸರಿಯಾಗಿ ಮಳೆ ಬರುವುದಿಲ್ಲ. ಅರಣ್ಯ, ಡ್ಯಾಮ್ಸ್, ತೋಟಗಳು ಮುಂತಾದುವುಗಳಿಗೆ ಅವಕಾಶವಿರಬೇಕು. ಇಂಡಿಯಾ ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗಿರುವಾಗ ಅದಕ್ಕೆ ತಕ್ಕಂತೆ ಜಮೀನು ಒದಗಿಸಬೇಕು. ಅವರಿಗೆ ಕೆಲಸ ಕೊಡಬೇಕು. ನಮ್ಮ ಜೀವನಮಟ್ಟ ಅಥವಾ ಸ್ಟ್ಯಾಂಡರ್ಡ್ ಏರಬೇಕಾದರೆ ಜನ ಕೆಲಸ ಮಾಡಬೇಕು; ಕನ್‌ಸ್ಯೂಮೆಬಲ್ ಗುಡ್ಸ್ ಜಾಸ್ತಿಯಾಗಬೇಕು. ಇದೊಂದು ಮಾರ್ಗ. ಇರುವ ಭೂಮಿಯನ್ನು ಸಾಧ್ಯವಾದಷ್ಟು ಜನರಿಗೆ ಹಂಚಬೇಕು, ಈ ವಿಚಾರದಲ್ಲಿ ಸರಕಾರ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಿ ವ್ಯವಸಾಯಕ್ಕೆ ಬೇಕಾದ ಯಂತ್ರ, ನೇಗಿಲು, ಸಾಲ ಕೊಟ್ಟು ಪ್ರೋತ್ಸಾಹ ನೀಡುತ್ತಿದೆ. ಹಾಗೆ ಮಾಡಿದರೆ ಜಮೀನು ಹಂಚಿದ್ದು ಸಫಲವಾಗುತ್ತದೆ. ಇಲ್ಲದಿದ್ದರೆ ಓಟಿಗಾಗಿ ಭೂಮಿ ಹಂಚಿದಂತಾಗುತ್ತದೆ. ಅದರಿಂದ ಪ್ರಯೋಜನವಾಗುವುದಿಲ್ಲ. ಮೊದಲು ಇರುವ ಭೂಮಿಯನ್ನು ಹಂಚಬೇಕು, ಆಮೇಲೆ ಕೈಗಾರಿಕೆಗಳಿಗೆ ಜನ ಸೇರುವಂತೆ ಮಾಡಬೇಕು, ಅದಕ್ಕೆ ಪ್ಲಾನ್ ಹಾಕಬೇಕು, ಹಾಗೆ ಮಾಡಿದರೆ ಒಳ್ಳೆಯದು. ಈಗ ಸೇಕಡ 20–25 ಜನರು ಕೈಗಾರಿಕೆಯಲ್ಲಿದ್ದಾರೆ, ಆ ಸಂಖ್ಯೆ 50-60ಕ್ಕೆ ಏರಬೇಕು. ಆಗ ಸ್ವಲ್ಪ ಸರಿಹೋಗುತ್ತದೆ. ಈಗ ಸದ್ಯಕ್ಕೆ ಅಮೇರಿಕಾದ ಎಕಾನಮಿ ನೋಡಿ ಮೆಕನೈಜೇಷನ್ ಇರಬೇಕು, ದೊಡ್ಡ ಫಾರಂಗಳಿರಬೇಕು ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. 17 ವರ್ಷಗಳಿಂದ ಕಾಂಗ್ರೆಸ್ಸು ಏನು ಮಾಡಿಲ್ಲ ಎಂದು ಕೆಲವರು ಹೇಳಬಹುದು. ಆದರೆ ಅನೇಕ ಮುಖ್ಯವಾದ ಕೆಲಸಗಳನ್ನು ಮಾಡಲಾಗಿದೆ, ಭೂಸುಧಾರಣೆ ನಿಧಾನವಾಗಿ ಮಾಡುವುದು ಉತ್ತಮವೆಂದು ಅನುಭವದಿಂದ ಅದನ್ನು ಈಗ ಮಾಡಿದ್ದಾರೆ. ಸ್ವಾತಂತ್ರ್ಯ ಬಂದ ತಕ್ಷಣ ದೇಶದಲ್ಲಿದ್ದ 600 ಜನ ಇಸ್ಟೇಟ್ ರಾಜರನ್ನು, ಅನೇಕ ಪ್ರಾಂತಗಳಲ್ಲಿದ್ದ ಅವರನ್ನು ಉಪಾಯವಾಗಿ ತೆಗೆದುಹಾಕಿದರು. ಇದಾಗಬೇಕೆಂದು ಹಿಂದೆ ವಾದ ಮಾಡುತ್ತಿದ್ದರು. ಇಂಡಿಯಾ ದೇಶ ಒಗ್ಗಟ್ಟಾಗಬೇಕಾದರೆ ಈ ರಾಜರನ್ನೆಲ್ಲಾ ಹ್ಯಾಂಗ್ ಮಾಡಬೇಕೆಂದು ಹೇಳುತ್ತಿದ್ದರು ನಮ್ಮ ನಾಯಕರಾದ ವಲ್ಲಭಾಯಿ ಪಟೇಲರು ರಾಜರನ್ನು ತೆಗೆದು ಹಾಕಿದರು ; ಹ್ಯಾಂಗ್ ಮಾಡಲಿಲ್ಲ. ಈಗ ಒಬ್ಬ ರಾಜರೂ ಇಲ್ಲ. 16 ವರ್ಷಗಳಾದಮೇಲೆ ರಾಜರಿಲ್ಲದೆ ಇಂಡಿಯಾ ಒಂದು ಒಗ್ಗಟ್ಟಾದ ದೇಶವಾಗಿದೆ. ಹಿಂದೆ ರಾಜರಿಗೆ ಜನರು ಲಾಯಲ್ ಆಗಿದ್ದರು. ಮೊದಲು ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ಪಡೆಯಬೇಕೆಂದು ಹೊಡೆದಾಡುತ್ತಿದ್ದರು. ಈಗ ಭೂಮಿಯು ಉಳುವವರ ಕೈಲೇ ಇರಬೇಕೆಂದು ಹೇಳುತ್ತಿದ್ದೇವೆ. ಆದರೆ ನಾಲ್ಕೈದು ವರ್ಷಗಳಾದರೆ ವ್ಯವಸಾಯಕ್ಕೆ ಆಳು ಸಿಕ್ಕುವುದೇ ಕಷ್ಟವಾಗುತ್ತದೆ, ಜನರೆಲ್ಲಾ ವಿದ್ಯಾವಂತರಾಗುತ್ತಿದ್ದಾರೆ. ಅವರು ವಿದ್ಯಾವಂತರಾದಮೇಲೆ ಹೊಲ ಉಳಲು ಬರುವುದಿಲ್ಲ, ಚಡ್ಡಿ ಜನ ಇರುವವರೆಗೆ ಪರವಾಗಿಲ್ಲ. ಉಳುವ ಕೆಲಸ ಬಹಳ ಕಷ್ಟದ ಕೆಲಸ. ಅದು ಯಾರಿಗೂ ಬೇಕಾಗಿಲ್ಲ, ಈ ದಿವಸ ಆಠಾರಾ ಕಛೇರಿ ಒಂದು ಜವಾನನ ಕೆಲಸ ಖಾಲಿ ಇದೆಯೆಂದು ಗೊತ್ತಾದರೆ 500 ಅರ್ಜಿಗಳು ಬರುತ್ತವೆ, ಜಮೀನು ಉಳಲು ಮನುಷ್ಯಬೇಕು ಎಂದರೆ ಯಾರೂ ಅರ್ಜಿಹಾಕುವುದಿಲ್ಲ, ಇದೊಂದು ಸಮಸ್ಯೆಯಾಗಿದೆ. ಒಂದು ಫಾರಂ ಮಾಡಿದರೆ ಯಾರೂ ಮುಂದೆ ಬರುವುದಿಲ್ಲ. ಜನರಿಗೆ ರಸ್ತೆ ಮಾಡಿಕೊಡಬೇಕು, ಸೌಕರ್ಯಬೇಕು, ಅದಕ್ಕಾಗಿ ಕಂದಾಯ ಹಾಕುವುದು. ಒಟ್ಟಿನಲ್ಲಿ ರೈತರನ್ನು ಹಾಳುಮಾಡಬಾರದು, ಅವರು ದೇಶಕ್ಕೆ ಒಂದು ಆಸ್ತಿ ಇದ್ದ ಹಾಗೆ, ಅವರಿಗೆ ಸಾಧ್ಯವಾದಷ್ಟು ಭೂಮಿ ಕೊಟ್ಟು ಪ್ರೋತ್ಸಾಹ ಮಾಡಿ ಆಹಾರ ಧಾನ್ಯಗಳ ಬೆಳೆ ಹೆಚ್ಚಿಸಬೇಕು. ಎರಡು—ಮೂರು ಲಕ್ಷ ಎಕರೆ ಸಿಕ್ಕಬಹುದೆಂದು ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದ್ದಾರೆ. ಬಹಳ ಬುದ್ಧಿವಂತರು ಈಗಾಗಲೇ ಜಮೀನನ್ನು ವಿಲೇಮಾಡಿದ್ದಾರೆ. ಯೋಗ್ಯರಾದ ಟೆನೆಂಟ್ಸ್ ಇದ್ದಾರೆ, ಜತ್ತಿ ಸಮಿತಿ ವರದಿಯ ಪ್ರಕಾರ 70 ಲಕ್ಷ ಎಕರೆ ಟೆನೆಂಟ್ಸ್ ವಶದಲ್ಲಿದೆ.

70 ಲಕ್ಷ ಎಕರೆಯಲ್ಲಿ ಈಗಾಗಲೇ ಬಿಡಿಸಿಕೊಂಡಿರುವುದು ಎಲ್ಲ ಸೇರಿ 40-50 ಲಕ್ಷ ಎಕರೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಜಮೀನಿನ ರೈತರಿಗೆ ಅನುಕೂಲವಾಗುತ್ತದೆ. ಇನ್ನು ಮುಂದೆಯಾದರೂ ಭೂಮಿ ನಮ್ಮದಾಯಿತು ಎನ್ನುವ ಭಾವನೆ ಬಂದು ನಮ್ಮ ತಾತಂದಿರ ಕಾಲದಿಂದ ಮಾಡಿಕೊಂಡು ಬಂದದ್ದಕ್ಕೆ ನಮ್ಮ ಭೂಮಿ ಆಯಿತು ಎನ್ನುವ ಭಾವನೆ ಬಂದು ಅಷ್ಟು ಮಾತ್ರಕ್ಕಾದರೂ ತೃಪ್ತಿಯಾಗುತ್ತದೆ ಮತ್ತು ಇನ್ನು ಮುಂದೆ ಹೆಚ್ಚು ಭೂಮಿಯನ್ನು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ ಎನ್ನುವ ಭಾವನೆ ಬರುತ್ತದೆ. ಈ ಭೂಸುಧಾರಣೆ ಮಸೂದೆಯಿಂದ ಹೆಚ್ಚು ಸಾಧನೆ ಮಾಡದೆ ಇದ್ದರೂ ಇದರ ಕೆಳಗೆ ಬರುವ 40-50 ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡುವ ಗೇಣಿದಾರರಿಗೆ ಅದರ ಮೇಲಿನ ಹಕ್ಕು ಬರುತ್ತದೆ. ಇದರಲ್ಲಿ ಸರ್ಕಾರಕ್ಕೆ ಕೂಡ ಸ್ವಲ್ಪ ತರೆನೋವು ಇದೆ. ಈ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ತಾರೀಖನ್ನು ಗೊತ್ತುಮಾಡಿ ಟ್ರಿಬ್ಯುನಲಗಳನ್ನು ನೇಮಕ ಮಾಡಬೇಕು. ನಮಗೆ ಇನಾಂ ಅಬಾಲಿಷನ್ ನಡೆಯುತ್ತಿರುವ ಅನುಭವವಿದೆ. ಆ ಕಾರ್ಯವನ್ನು ಬೇಗನೆ ಮಾಡ ಬೇಕು ಎಂದು ಹೊರಟರೂ ಆ ಕೆಲಸ ಇನ್ನೂ ಆಗುತ್ತಲೇ ಇದೆ. ಇನ್ನೂ ಇತ್ಯರ್ಥವಾಗಿಲ್ಲ. ಅದ ಕ್ಕಾಗಿ ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಅನೇಕರಿಗೆ ನ್ಯಾಯ ದೊರೆತಿದೆ. ಅನೇಕರಿಗೆ ಅನ್ಯಾಯವೂ ಆಗಿದೆ. ನಾವು ಅದರಲ್ಲಿ ಕೈಹಾಕುವ ಹಾಗೆ ಇಲ್ಲ. ಅಲ್ಲಿ ಬರುವುದೆಲ್ಲ ಜುಡಿಷಿಯಲ್ ಮ್ಯಾಟರ್ಸ್ ಆಗುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ನಾವು ಎಷ್ಟು ಭಾವಿಸಿಕೊಂಡಿದ್ದೇವೆಯೋ ಅಷ್ಟೊಂದು ಪ್ರತಿಫಲ ದೊರೆಯದೆ ಇದ್ದರೂ ಕೂಡ ಬೇಗ ಜಾರಿಗೆ ತಂದು ನಾವು ಇದನ್ನು ಮಾಡಿದೆವು ಎನ್ನುವ ಸಂತೋಷದಿಂದಲಾದರೂ ಇರಬಹುದು. ಮುಖ್ಯವಾಗಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಬಹಳ ಶ್ರಮ ಪಟ್ಟರು. ನಾನು ಡೆಲ್ಲಿಯಲ್ಲಿ ದ್ದಾಗಿನಿಂದಲೂ ನೋಡುತ್ತಿದ್ದೇನೆ. ಅವರಿಗೆ ಇಷ್ಟವಿಲ್ಲದೆ ಇದ್ದರೂ ಕೂಡ ಅನೇಕ ಬದಲಾವಣೆ ಗಳಾಗಿವೆ. ವಿನಾಯಿತಿಗಳು ಇಷ್ಟೊಂದು ಬರಬಾರದಾಗಿತ್ತು ಎಂದು ಕಾಣುತ್ತದೆ. ಆರ್ಚರ್ಡ್ಸ್ ಎನ್ನುವ ಒಂದು ಪದದಲ್ಲಿ ಬೇಕಾದಷ್ಟು ತೋಟಗಳು ಬರುತ್ತವೆ. Efficientty managed farms ಎನ್ನುವುದರಲ್ಲಿ ಅನೇಕ ಎಕರೆ ಭೂಮಿ ಹೊರಟು ಹೋಗುತ್ತದೆ. ಹೀಗೆ ಹೆಚ್ಚು ಭೂಮಿ ರೈತರಿಗೆ ಕೊಡುವುದಕ್ಕೆ ಸಿಕ್ಕದೆ ಇದ್ದರೂ ಭೂಸುಧಾರಣೆ ಜಾರಿಗೆ ಬರುತ್ತದೆ.

ಒಟ್ಟಿನಲ್ಲಿ ಈ ದೇಶದಲ್ಲಿ ಬಹಳ ಜನ ಭೂ ಸ್ವಾಮಿಗಳು ಇರಬೇಕು ಎಂದರೆ ಆಗುವುದಿಲ್ಲ. ಅದು ಸಾಧ್ಯವಿಲ್ಲ. ಇನ್ನು ಐದಾರು ವರ್ಷಗಳಲ್ಲಿ 100 ಎಕರೆ, 200 ಎಕರೆ ಭೂಮಿಯನ್ನು ಇಟ್ಟು ಕೊಂಡರೂ ಸಹ ಅದರಲ್ಲಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಕಾಫಿ ತೋಟಗಳ ವಿಚಾರದಲ್ಲಿ ಲೇಬರ್ ಆಕ್ಟ್ ಪ್ರಕಾರ ಕೂಲಿಕಾರರ ಕೂಲಿ ಮತ್ತು ಅವರಿಗೆ ದೊರೆಯಬೇಕಾದ ಅನುಕೂಲತೆ ಗಳಲ್ಲಿ ಸೇಕಡ ಎರಕರಷ್ಟು ಜಾಸ್ತಿ ಮಾಡಿದರೆ ಅನೇಕರು ಆ ಉದ್ಯಮವನ್ನು ಬಿಟ್ಟು ಬಿಡುತ್ತಾರೆ. ಯಾವ ಉದ್ಯಮದಲ್ಲಿಯೇ ಆಗಲಿ ಇನ್ನು ಮುಂದೆ ದೋಚುವ ಕೆಲಸ ಬಹಳ ದಿನ ನಡೆಯುವ ಹಾಗಿಲ್ಲ.

ದೇವದಾಸಿಯರ ವಿಚಾರವಾಗಿ ಕೆಲವು ಮಾನ್ಯ ಸದಸ್ಯರು ಕೇಳಿದರು. ಅವರು ಮದುವೆ ಯಾಗದ ಹೆಣ್ಣು ಮಕ್ಕಳಲ್ಲಿ ? ಬರುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೂ ಹೆಚ್ಚು ವಿವರ ಗಳಿದ್ದರೆ ಕೊಡಿ, ನೋಡೋಣ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಪ್ರೈಮರಿ ಶಾಲಾ ಉಪಾಧ್ಯಾಯರಿಗೆ ಏನೂ ವಿನಾಯಿತಿ ಯನ್ನು ಕೊಟ್ಟಿಲ್ಲವಲ್ಲ, ಸ್ವಾಮಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಮಾಲ್ ಅನ್ ಎಕನಾಮಿಕ್ ಹೋಲ್ಡಿಂಗ್ಸ್‌ಗೆ ವಿನಾಯಿತಿ ಕೊಡ ಬೇಕು ಎಂದು ಇದೆ. ಅದರಲ್ಲಿ ಬಡ ಉಪಾಧ್ಯಾಯರು, ಗುಮಾಸ್ತರು ಬರುತ್ತಾರೆ. ಅನು ಮಾನವಿಲ್ಲ.

ಡಿಸ್‌ಆನರಿಂಗ್ ಟ್ರಾನ್ಸ್ ಫರ್ಸ್ ವಿಷಯದಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದನ್ನು ತಂದಿರುವುದು ನ್ಯಾಯವಾಗಿದೆ. ಬೊಂಬಾಯಿ ಕರ್ಣಾಟಕ ಮತ್ತು ಹೈದರಾಬಾದು ಕರ್ಣಾಟಕದ ಭಾಗಗಳಲ್ಲಿ ಆಗ ಜಾರಿಯಲ್ಲಿದ್ದ ಕಾನೂನುಗಳ ಪ್ರಕಾರ ಸರ್ಕಾರದ ಅನುಮತಿ ಯನ್ನು ಪಡೆದು ಗೇಣಿದಾರರಿಗೆ ಭೂಮಿಯನ್ನು ಮಾರಿದ್ದಾರೆ. ಅಂಥದ್ದಕ್ಕೆ ವಿನಾಯಿತಿ ಕೊಡ ಬೇಕೆಂದಿದ್ದೇವೆ. ಕೆಲವು ನ್ಯಾಯವಾದ ಸಂದರ್ಭಗಳು genuine cases ಇವೆ. ತಮಗೆ ಬೇಕಾದುದನ್ನು ಇಟ್ಟುಕೊಂಡು ತಹಸೀಲ್ದಾರರ ಅನುಮತಿಯನ್ನು ಪಡೆದು ಕಾನೂನು ಪ್ರಕಾರ ಗೇಣಿದಾರರಿಗೆ ಭೂಮಿ ಕೊಟ್ಟಿದ್ದಾರೆ. ಅಂಥ ಭೂಮಿಯನ್ನು ನೀವು ಮಾರಾಟ ಮಾಡಿದ್ದೀರಿ, ನಿಮಗೆ ಅದು ಸಿಕ್ಕಲಾರದು ಎಂದು ಕಿತ್ತುಕೊಳ್ಳುವುದಕ್ಕಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ ಜಮೀನ್ದಾರರಿಗೆ ನೋವು ಕೊಡಬಾರದು.

ಪರಿಹಾರ ಧನವನ್ನು ಕೊಡುವ ವಿಷಯದಲ್ಲಿ ನಗದಾಗಿ ಹೆಚ್ಚು ಕೊಡಬೇಕು ಎನ್ನುವವಾದ ಬಂದಿದೆ. ಪರಿಹಾರ ಕೊಡುವಾಗ ಗೇಣಿ ಮೊಬಲಗಿನ ಹದಿನೈದರಷ್ಟು ಎಂದು ಇರುವುದರ ಬಗ್ಗೆ ಯಾರೂ ಮಾತನಾಡಲಿಲ್ಲ. ನಗದು ಪರಿಹಾರ ಹತ್ತು ಸಾವಿರ ರೂಪಾಯಿ ಕೊಡಬೇಕು ಎಂದು ಇದ್ದುದನ್ನು ಎರಡು ಸಾವಿರ ರೂಪಾಯಿಗೆ ಇಳಿಸಿದರೆ ಅದರಿಂದ ಭೂಮಿಯನ್ನು ಕಳೆದುಕೊಳ್ಳುವವರಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಮೊದಲು ಜಮೀನ್ದಾರರನ್ನು ಬಯ್ಯುತ್ತಿದ್ದರು, ಸರ್ಕಾರ ಜಮೀನ್ದಾರರಿಗೆ ಬಹಳ ಸಹಕಾರ ಕೊಡುತ್ತಿದೆ ಎಂದು ಹೇಳುತ್ತಿದ್ದರು. ಅಂಥವರು ಪರಿಹಾರವನ್ನು ನಗದಾಗಿ ಕೊಡುವ ವಿಷಯ ಬಂದಾಗ ಜಾಸ್ತಿ ಕೊಡಿ ಎಂದು ಹೇಳುತ್ತಾರೆ. ಇದು ಒಂದಕ್ಕೊಂದಕ್ಕೆ ವಿರೋಧಾಭಾಸವಾಗಿದೆ. ದುಡ್ಡು ಕಡಮೆ ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ದುಡ್ಡು ಕೊಟ್ಟರೆ ಬೇಗ ಅದನ್ನೆಲ್ಲ ಖರ್ಚು ಮಾಡುತ್ತಾರೆ. ಅವರ ಮಕ್ಕಳು, ಮೊಮ್ಮಕ್ಕಳಿಗೆ ಏನು ಉಳಿದಿರುವುದಿಲ್ಲ. ಬಾಂಡ್‌ಗಳ ರೂಪದಲ್ಲಿ ಕೊಟ್ಟರೆ 10-15 ವರ್ಷ ಇರುತ್ತದೆ, ಅದರಿಂದ ಅವರ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಭೂಸುಧಾರಣೆಯನ್ನು ಜಾರಿಗೆ ತರುವುದರಿಂದ ಸರ್ಕಾರಕ್ಕೆ 40-50 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇಷ್ಟು ಹಣ ನಮ್ಮ ಹತ್ತಿರ ಇಲ್ಲ. ಪ್ರಾರಂಭದಲ್ಲಿ ಹತ್ತು ಕೋಟಿ ರೂಪಾಯಿ ನಗದಾಗಿ ಕೊಡ ಬೇಕಾಗುತ್ತದೆ. ಅದನ್ನು ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ನಾವು ಬೇಗ ಭೂಸುಧಾರಣೆಯನ್ನು ಜಾರಿಗೆ ತರಬೇಕಾಗಿರುವುದರಿಂದ, ಆ ಬಗ್ಗೆ ತೀರ್ಮಾನ ತೆಗೆದುಕೊಂಡಿರುವುದರಿಂದ ಹತ್ತಿರ ದುಡ್ಡು ಇಲ್ಲದೆ ಜಾರಿಗೆ ತರುವುದು ಸರಿಯಲ್ಲ ಎಂದು ತಿಳಿದು ಬಾಂಡ್‌ಗಳ ರೂಪದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕೆಲವು ಮಹನೀಯರು ಎಲ್ಲಾ ಕಾಫಿ ತೋಟಗಳ ಪ್ಲಾಂಟರುಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ವಿನಾಯಿತಿ ಕೊಟ್ಟಿದೆಯೇ ಹೊರತು ಇನ್ನೇನೂ ಇಲ್ಲವೆಂದು ಹೇಳಿದರು. ಇನ್ನಷ್ಟು ದಿನ ಹೋದರೆ ಅವರನ್ನು ಸಹ ಆ ರೀತಿ ನೋಡುವುದಕ್ಕಾಗುವುದಿಲ್ಲ. ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn and meet to-morrow at 8-30 A.M.

The House adjourned at Six of the Clock to meet again at Thirty Minutes past Eight of the Clock on Thursday, the 22nd April 1965.

WD 5047—GPB—500—13-9-1965

MYSORE LEGISLATIVE ASSEMBLY

Thursday, 22nd April 1965.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS
(to which oral answers were given)

MR. SPEAKER.—There are sixteen questions and one short notice question to be covered in one hour. I am mentioning this because Hon'ble Members are forgetful of this, they go on putting supplementaries. They must bear in mind this point while putting supplementaries.

Supply of Power to Irrigation Pump sets in Haveri and Shiggaon Taluks.

**Q.*—20. SRI F. S. TAVARE (Shiggaon).—

Will the Government be pleased to state :—

(*a*) the names of villages in Haveri and Shiggaon Taluks of Dharwar District from which applications have been received for supply of power to Irrigation Pump sets after depositing the necessary amount in this behalf, together with the number of applicants and the dates of deposit ;

(*b*) out of them, the number and names of villages, for which power has already been supplied and the date of supply of power for them ?

A.—SRI S. NIJALINGAPPA (Chief Minister).—

(*a*) *Vide* statements A and B appended.

(*b*) Power has been supplied to the following villages on the dates noted against them :

1	Shiggaon	...	6-11-1961
2	Savanur	...	26-10-1962
3	Manthrodi	...	29 11-1962
4	Karadgi	...	29-11-1962
5	Chillur-Badni	...	9-2-1963
6	Ganjigatti	...	22-2-1964

(SRI S. NIJALINGAPPA)

STATEMENT 'A'

Statement showing the details of deposits paid by the applicants in Shiggaon Taluk.

Sl. No.	Name of the village	No. of applicants deposited	Date of deposit
1	Allipur	8	2-7-1963
2	Yalavigi	19	"
3	Huvinashigli	12	"
4	Honikoppa	1	"
5	Naikerur	8	"
6	Basavanakoppa	1	"
7	Wadnikoppa	6	"
8	Kundur	4	"
9	Hulikatti	1	"
10	Hothanahalli	9	"
11	Channapur	2	"
12	Bisanahalli	2	"
13	Bankapur	3	"
14	Kurubaramallur	2	"
15	Savanur	7	2-7-1963
16	Kadakol	14	3-7-1963
17	Attigeri	9	8-7-1963
18	Karadagi	4	19-7-1963
19	Chickamallur	3	19-[illegible]-1963
20	Gonal	3	19-7-1963
21	Shiggaon	26+1	19-7-1963, 25-9-1963
22	Ganjigatti	2	19-7-1963
23	Choudal	3	"
24	Belagali	1	"
25	Manthrodi	2	"
26	Kyalakonda	1	"
27	Hulagur	1	"
28	Chillur-Badni	10	"
29	Sompur	1	"
30	Hiremallur	19	"
		6	27-3-1963
		3	20-7-1963
31	Challal	3	20-7-1963
32	Mannur	2	1-8-1963
33	Hosaberigi	2	"
34	Bardalur	2	"
35	Nandihalli	5	1-8-1963

STATEMENT 'B'

Statement showing the No. of I. P. Set applications from Ryots in Haveri Taluk together with dates of Deposit.

Sl. No.	Name of Village		No. of applications received	Date of deposit
1	2		3	4
1	Nagalur	...	18	17-8-1962
			4	30-8-1962
			2	25-1-1963
			—24	
2	Agadi	...	30	29-12-1962
3	Kanavalli	...	23	16-1-1963
4	Budsgatti	}		
5	Basavanakatti	}	11	5-1-1963
6	Karajigi	...	18	11-1-1963
7	Katenahalli	...	10	19-2-1963
8	Hosaritti	...	8	11-1-1963
			3	16-7-1963
			2	4-2-1963
			—13	
9	Karadur	...	9	11-1-1963
10	Kittur	...	6	"
11	Akkur	...	8	"
12	Chennur	...	8	"
13	Naganur	...	4	14-3-1963
14	Konanathambigi	...	18	5-1-1963
15	Dombaramattur	...	5	10-1-1963
16	Hiremaralihalli	...	3	7-1-1963
17	Chickmaralihalli	...	5	18-1-1963
18	Devagiri village	...	9	25-4-1963
19	Kallihal	...	7	31-10-1963
20	Veerapur	...	3	10-7-1963
21	Haveri	...	3	24-7-1963
22	Kabbur	...	12	16-8-1963
23	Kankapur	...	6	6-8-1963
24	Chikkalingadahalli	...	7	2-5-1963
25	Kurubagonda	...	11	21-12-1963
26	Devihosur	...	17	19-12-1963
27	Handiganur	...	6	13-9-1963

(SRI S. NIJALINGAPPA)

1	2		3	4
28	Melmari	...	10	29-7-1963
29	Yettinahalli	...	4	18-9-1963
30	Belavgi	...	9	15-1-1963
31	Galagenath	...	1	18-1-1963
			4	15-1-1963
			—5	
32	Halgi	...	6	10-11-1964
33	Kadkol	...	3	12-7-1964
			3	11-1-1963
			12	3-7-1963
			—18	
34	Gailgundi	...	2	5-7-1963
35	Meundi	...	3	5-7-1963
36	Kaliwal	...	16	1-8-1963
37	Siddapur	...	8	1-8-1963
38	Lakampur	...	5	16-8 1963
39	Guttal	...	29	21-12-1960
			3	8-2-1961
			—32	
40	Havanur	...	2	8-2-1961
			1	18-2-1961
			1	28-2-1961
			6	16-7-1962
			—10	
41	Kancharagatti	...	4	21-12-1964
			1	16-7-1962
			—5	
42	Haralahalli	...	2	21-12-1960
43	Halyal	...	8	8-2-1961
44	Hattimathur	...	19	16-1-1963
			1	16-3-1963
			—20	
		Total	439	

ಶ್ರೀ ಎಫ್ ಎಸ್. ತಾವರೆ.—ಹಾವೇರಿ ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಪ್ರಾಶಸ್ತ್ಯ ಕೊಡುತ್ತೀರಾ ?

† ಶ್ರೀ ಎಸ್. ನಿಜಲಿಂಗಪ್ಪ.—ಜಾಗ್ರತೆ ಕೊಡಬೇಕೆಂದು ಲೈನು ಹಾಕುತ್ತಿದ್ದಾರೆ, ಬಹುಶಃ ಆರೇಳು ತಿಂಗಳುಗಳಲ್ಲಿ ಅನುಕೂಲವಾಗಬಹುದು.

ಶ್ರೀ ಎಫ್. ಎಸ್. ತಾವರೆ.—ಈಗ ಈ ಗ್ರಾಮಗಳಿಗೆ ಪವರ್ ಬಂದು ಬೀದಿ ದೀಪಗಳನ್ನು ಹಾಕುತ್ತಿದ್ದಾರೆ. ಅದನ್ನು ಬಿಟ್ಟು ನೀರಾವರಿಗೆ ಮೊದಲು ಅನುಕೂಲ ಮಾಡಿ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅವೆರೆಡೂ ಮುಖ್ಯವಾಗಿ ಆಗಬೇಕು, ಆದಷ್ಟು, ಜಾಗ್ರತೆ ಒದಗಿಸುತ್ತೇವೆ.

Mr. SPEAKER.—Yesterday regarding pump-sets, I think we spent about 20 minutes. And I put the last supplementary myself saying that special attention should be given to this subject.

Sri S. NIJALINGAPPA.—That will be given the highest priority, and we will see that Houses are also lit. There is plenty of power available.

ಶ್ರೀ ಸಿದ್ದಯ್ಯ ಕಾಶೀಮಠ್.—ಹಾವೇರಿ ತಾಲ್ಲೂಕಿನಲ್ಲಿ 3 ವರ್ಷಗಳಿಂದ ಹಣ ಡಿಪಾಜಿಟ್ ಮಾಡಿ ಪವರ್‌ಗಾಗಿ ನೀರಾವರಿ ವ್ಯವಸಾಯಗಾರರು ಕಾದಿದ್ದಾರೆ. ಆದರೆ ಅವರಿಗೆ ಪ್ರಾಶಸ್ತ್ಯ ಕೊಡದೆ ಹೊಸದಾಗಿ 150 ರೂಪಾಯಿಗಳನ್ನು ಪಂಪುಸೆಟ್ಟಿಗೆ ಮತ್ತು 10 ರೂಪಾಯಿಗಳನ್ನು ಮನೆಗೆ ಪವರನ್ನು ಒದಗಿಸುವುದಕ್ಕೆ ಡಿಪಾಜಿಟ್ ಮಾಡಿದವರಿಗೆ ಮೊದಲು ಹಾವೇರಿ ಡಿವಿಜನ್ನಿನಲ್ಲಿ ಕೊಟ್ಟು ಬಹಳ ಹಿಂದೆಯೇ ಹಣ ಕಟ್ಟಿರುವವರಿಗೆ ಕೊಡದಿರುವುದನ್ನು ಗಮನಿಸಿ ಹಳಬರಿಗೆ ಪ್ರಾಶಸ್ತ್ಯ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಹಳಬರಿಗೆ ಮೊದಲು ಕೊಡಬೇಕಾದ್ದು ನ್ಯಾಯ, ವಿಚಾರ ಮಾಡೋಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಂಪುಸೆಟ್ಟುಗಳಿಗೆ ಪವರ್ ಸಿಕ್ಕದೆ ತೊಂದರೆಯಾಗಿರುವುದರಿಂದ ಅದಕ್ಕೆ ಮೊದಲು ಗಮನ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ವರ್ತಮಾನ ಕೊಡುತ್ತಿದ್ದಾರೆ, ಪರಿಶೀಲಿಸೋಣ.

ಶ್ರೀ ಎಫ್. ಎಸ್. ತಾವರೆ.—ಅನೇಕ ಹಳ್ಳಿಗಳಲ್ಲಿ ಪಂಪುಸೆಟ್ಟು ತಂದು 3-4 ತಿಂಗಳಾಯಿತು, ಪವರ್ ಕೊಟ್ಟಿಲ್ಲ. ಮೆಟೀರಿಯಲ್ ಇಲ್ಲದಿದ್ದರೆ ಬೀದಿ ದೀಪಗಳಿಗೆ ಕೊಡುವುದನ್ನು ನಿಲ್ಲಿಸಿ ಅದಕ್ಕೆ ಉಪಯೋಗ ಮಾಡುವ ಮೆಟೀರಿಯಲ್ ಮತ್ತು ಪವರನ್ನು ಇರಿಗೇಷನ್ನಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಹಾಗೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಯಾರಿಗೂ ತೊಂದರೆಯಾಗದಂತೆ ಒದಗಿಸೋಣ.

Sri KONDAJJI BASAPPA (Deputy Minister for Co-operation).—The Hon'ble Member may also be permitted to put the other held-over question No. 345 on the same subject, Sir.

Mr. SPEAKER.—Question No. 345 also may be put with question No. 531.

Co-operative and Joint Farming Co-operative Societies in the State.

**Q.*—531. Sri K. P. REVANNA SIDDAPPA (Tiptur).—

Will the Government be pleased to state :—

(*a*) the number of Co-operative and Joint Farming Societies in the State ;

(*b*) the extent of land belonging to each Society ;

(*c*) amount of grant and loan sanctioned to these Societies ;

(*d*) whether any recoveries have been made by Government from these Societies ;

(*e*) if so, the amount recovered and the arrears remaining ?

---

†Indicates that remarks or speeches have not been revised by the member concerned.

A.—Sri RAMAKRISHNA HEGDE (Minister for Development, Panchayathi Raj and Co-operation).—

(*a*) 345.

(*b*) *Vide* Statement placed on the Table of the House. (Copy placed in the Mysore Legislature Library).

(*c*) Grant : ... Rs. 5,90,990-00
Loan : ... Rs. 24,10,460-00

(*d*) Yes.

(*e*) (1) Amount recovered : ... Rs. 50,900
(2) Arrears remaining : ... Rs. 23,59,560

Co-operative Farming Societies in the State.

**Q.*—345. Sri K. P. REVANNA SIDDAPPA (Tiptur).—

Will the Government be pleased to state :—

(*a*) the number of Co-operative Farming Societies established by them in the State together with the extent of land pertaining to each Society ;

(*b*) since how many years each Society is working together with the number of members in each of these Societies ;

(*c*) whether they are aware that recently some members of these Societies have disassociated themselves from the Societies and if so, the reasons therefor ?

A.—Sri KONDAJJI BASAPPA (Deputy Minister for Co-operation).—

(*a*) and (*b*) *Vide* statement placed on the Table of the House. (Copy placed in the Mysore Legislature Library No. 33 date 22-4-65.)

(*c*) No.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಒಟ್ಟು ಮೈಸೂರು ದೇಶದಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳಿಗೆ ಕೊಟ್ಟಿರುವ ಜಮೀನೆಷ್ಟು ?

Sri KONDAJJI BASAPPA.—It is a big list of 345 societies, Sir. I am prepared to place it on the Table of the House. My friend may go through.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಈ ಸೊಸೈಟಿಗಳಿಗೆ ಬೇಕಾದಷ್ಟು ಗ್ರಾಂಟು ಮತ್ತು ಸಾಲ ಕೊಟ್ಟಿದ್ದೀರಿ. ಅಲ್ಲಿ ಎಕರೆಗೆ ಸರಾಸರಿ ಉತ್ಪತ್ತಿ ಧಾನ್ಯದ ರೂಪದಲ್ಲಿ ಅಥವಾ ಹಣದ ರೂಪದಲ್ಲಿ ಎಷ್ಟು ?

Sri KONDAJJI BASAPPA.—That we are not able to assess because we have not got proper machinery to assess.

ಶ್ರೀ ಸಿ. ಆರ್. ರಂಗೇಗೌಡ.—ಜಾಯಿಂಟ್ ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಅಡ್ಮಿನಿಸ್ಟ್ರೇಟಿವ್ ಸೆಟಪ್ ಹೇಗಿದೆ ?

Sri KONDAJJI BASAPPA.—In a pilot project, we have one senior co-operative inspector of farming, one for each District. We have 19 projects in 19 districts and 19 Inspectors are there. The Assistant

Registrar in each District will be the inspecting authority. At the state level, the Joint Registrar for Farming and the Special Officer is there to help him. This is the set up.

ಶ್ರೀ ಕೆ. ಲಕ್ಕಪ್ಪ.—23,59,560 ರೂಪಾಯಿಗಳ ಬಾಕಿ ಎಷ್ಟು ವರ್ಷಗಳಿಂದ ಇದೆ? ಇಷ್ಟೊಂದು ಇನ್‌ಸ್ಪೆಕ್ಟರುಗಳಿದ್ದರೂ ಕೂಡ ಏಕೆ ಇದನ್ನು ವಸೂಲು ಮಾಡುವುದಕ್ಕಾಗಿಲ್ಲ ?

Sri KONDAJJI BASAPPA.—These pilot projects have been taken up during the Third Five Year Plan period. It is only for the last four years they have begun to yield and some of them have not paid back the arrears. We have been insisting upon them to pay.

Sri T. MADIAH GOWDA.—Out of them how many are pilot and how many are non-pilot and what is the difference between the two ?

Sri KONDAJJI BASAPPA.—In a pilot project, we have, as I said that there are 19 projects in 19 districts. Each pilot project consists of 10 primary societies. The difference between the pilot and non-pilot is that we give all the finances, except the share capital contribution to the non-pilot project. But recently, the Government of India, have told us that distinction between the two projects should go and similar assistance should be given to non-pilot area also.

ಶ್ರೀ ಎಚ್. ಡಿ. ದೇವೇಗೌಡ.—ಕೊಟ್ಟಿರುವ ಗ್ರಾಂಟು ಮತ್ತು ಸಾಲವನ್ನು ಪೂರ್ಣವಾಗಿ ಉಪಯೋಗಿಸಿದಂತೆ ಕಾಣುವುದಿಲ್ಲ. ಏಕೆ ? ಇದು ರೆಮ್ಯೂನರೇಟಿವ್ ಅಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಉಪಯೋಗಿಸಿದ್ದಾರೆ. But the yield probably is not remunerative.

Sri J. P. SARWESH.—The number of societies that are in Gulbarga Division and the amounts granted to them ?

Mr. SPEAKER.—It has been placed on the Table and if the Hon'ble Member still puts this supplementary, it only means that he is inattentive.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಈ ಸೊಸೈಟಿಗಳವರು ಸರಕಾರದ ಹಣ ದುರುಪಯೋಗ ಮಾಡುತ್ತಿರುವರೆಂಬ ದೂರಿದೆ, ಉದ್ದೇಶಿತ ಗುರಿ ಸಾಧನೆಯಾಗಿಲ್ಲ. ಕೊಟ್ಟಿರುವ ಹಣ ಸರಿಯಾಗಿ ವಸೂಲುಮಾಡುವುದಕ್ಕೆ ಒಂದು ಸೆಲ್ ಆದರೂ ಇಟ್ಟು ನ್ಯಾಯವಾಗಿ ಉಪಯೋಗವಾಗುತ್ತಿದೆಯೇ ಇಲ್ಲವೇ ಎಂದು ನೋಡಲು ಏರ್ಪಾಡು ಮಾಡುತ್ತೀರಾ ?

Sri KONDAJJI BASAPPA.—This question will require a number of answers,—regarding the results achieved I have in my hand some statement prepared about 13 societies which have given good results. I am prepared to place it on the Table of the House. Regarding the machinery that my friend proposes to have, as I have submitted already that there is only an Inspector of Co-operative Farming in a pilot area. So far as technical officers are concerned, the Agricultural Extension Officer in the Block, we have the village level workers, the Industries Extension Officer, the Co-operative Extension Officer—all these officers will be giving technical assistance to co-operative farming societies and this is the only way we can help them.

Mr. SPEAKER.—Placing on the Table means, one copy must be passed on to the Speaker. It must not be overlooked.

Sri KONDAJJI BASAPPA.—Yes Sir, I pass on one copy to the Chair.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸುಮಾರು 345 ಸೊಸೈಟಿಗಳಲ್ಲಿ 13 ಸೊಸೈಟಿಗಳು ಮಾತ್ರ ಚೆನ್ನಾಗಿ ಕೆಲಸಮಾಡುತ್ತಿದ್ದರೆ ಕೊಟ್ಟಿರುವ ಹಣವನ್ನು ಉಳಿದ ಸೊಸೈಟಿಗಳಿಂದ ಹೇಗೆ ವಸೂಲು ಮಾಡುವುದು ?

ಶ್ರೀ ಕೊಂಡಜ್ಜಿ ಬಸಪ್ಪ.—13 ಚೆನ್ನಾಗಿ ಕೆಲಸಮಾಡುತ್ತಿವೆಯೆಂದು ಗೊತ್ತಾಗಿದೆ ಎಂದು ಹೇಳಿದರೆ ಉಳಿದ ಸೊಸೈಟಿಗಳು ಚೆನ್ನಾಗಿ ಮಾಡುತ್ತಿಲ್ಲ ಎಂದು ಅರ್ಥವಾಗುವುದಿಲ್ಲ.

Mr. SPEAKER.—Are there any individual instances ? Hypothetical questions should not be put. The names of districts may please be mentioned.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುಮಕೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಮಾದನಗೆರೆಸೊಸೈಟಿ ಮುಂತಾದ ಸೊಸೈಟಿಗಳಲ್ಲಿ ಮೆಂಬರುಗಳಾಗಿದ್ದವರು ಈಗ ಯಾರೂ ಪತ್ತೆಯಿಲ್ಲ ಅವರು 50 ಸಾವಿರ ರೂಪಾಯಿಗಳವರೆಗೆ ಸಾಲತೆಗೆದುಕೊಂಡಿದ್ದಾರೆ. ಅದನ್ನು ಪಾವತಿಮಾಡಿಲ್ಲ. ಅದನ್ನುಹೇಗೆ ಯಾರಿಂದ ವಸೂಲು ಮಾಡುವುದು ? ಅದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ?

Sri KONDAJJI BASAPPA.—So far as the society, the Hon'ble Member is referring to, I myself visited the farm. They have dug up an irrigation well and they have planted coconut plantation which does not immediately give results to them. It takes 8-10 years to yield. Naturally, the people who were working there on the farm, they must have gone elsewhere because they were all landless labourers, some of whom might have gone in search of labour for their living.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳಲ್ಲಿ ಬಹು ಭಾಗ ಹಣ ದುರುಪಯೋಗವಾಗುತ್ತಿರುವ ಈ ಸಂದರ್ಭದಲ್ಲಿ ಜಾಯಿಂಟ್ ಕೋ-ಆಪರೇಟೀವ್ ಫಾರ್ಮಿಂಗು ಸೊಸೈಟಿ ಎಂದು ಎರಡು ಮೂರು ಸೊಸೈಟಿಗಳು ನನ್ನ ಕ್ಷೇತ್ರದಲ್ಲೇ ಆಗಿವೆ ಎಂದು ಹೇಳುತ್ತಾರೆ. ಅಲ್ಲಿ ಹೋಗಿ ನೋಡಿದರೆ ಅಲ್ಲಿ ಯಾವ ಒಂದು ಬೋರ್ಡು ಇಲ್ಲ ಮತ್ತು ಅಲ್ಲಿ ಸಹಕಾರ ಸಂಘ ನಡೆಸ ತಕ್ಕ ಜನರೂ ಇಲ್ಲ. ಯಾರ ಹೆಸರಿನಲ್ಲೊ ಹಣವನ್ನು ತೆಗೆದುಕೊಂಡು ಇಲ್ಲಿ ದುರುಪಯೋಗಮಾಡಿ ಕೊಳ್ಳುತ್ತಿದ್ದಾರೆ, ಇದರ ಬಗ್ಗೆ ಸರಕಾರ ಸರಿಯಾದ ಒಂದು ಸರ್ವೆ ನಡೆಸಿ ಏನಾದರೂ ತಕ್ಕ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದಾರೆಯೇ, ಹೇಗೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಂತಹ ಸನ್ನಿವೇಶಗಳು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಈಗ ಹೇಳುತ್ತಿರುವುದರಿಂದ ಅದರ ಬಗ್ಗೆ ನನಗೆ ಒಂದು ಕಾಗದ ಬರೆದು ಕಳುಹಿಸಿ ಕೊಟ್ಟರೆ ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ಮಾಡಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಹಕಾರಿ ಬೇಸಾಯ ಪದ್ಧತಿಯಿಂದ ಸರಕಾರಕ್ಕೆ ಆಗ ಬೇಕಾದಷ್ಟು ಪ್ರತಿಫಲ ಸರಿಯಾಗಿ ದೊರೆಯುತ್ತಿಲ್ಲ ಮತ್ತು ನಿರೀಕ್ಷೆ ಮಾಡಿದಂತೆ ಆಗಿಲ್ಲದೇ ಇರು ವುದರಿಂದ ಈಗ ಜಮೀನುಗಳನ್ನು ಸರಕಾರ ಏನು ತೆಗೆದುಕೊಂಡು ಬೇಸಾಯ ಮಾಡುತ್ತಲಿದ್ದಾರೆ ಅದನ್ನು ಸಣ್ಣ ಸಣ್ಣ ಜಮೀನುದಾರರುಗಳಿಗೇನೇ ಕೊಟ್ಟರೆ ಅದರಿಂದ ಇನ್ನೂ ಹೆಚ್ಚು ಆಹಾರದ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುವುದಿಲ್ಲವೇ ? ಆ ರೀತಿ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಿಂದ ಪ್ರಯೋಜನವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹಿಂದೆ ಕೇಂದ್ರ ಸರ್ಕಾರದವರು ಒಂದು ಕಮಿಟಿ ನೇಮಿಸಿದ್ದರು. ಅವರ ರಿಪೋರ್ಟನ್ನು ತರಿಸಿಕೊಂಡು ಅದರ ಆಧಾರದ ಮೇಲೆ ಈ ಸೊಸೈಟಿಗಳನ್ನು ಮಾಡಬೇಕೆಂದು ಮೂರನೆ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಾಗ ಇದನ್ನು ಕೈಗೊಂಡಿದ್ದೇವೆ. ಆದರೆ ಇದರಲ್ಲಿ ಜನರಿಗೆ ಒಂದು ತರಹ ಭಯ ಬಂದಿದೆ. ಅವರ ಜಮೀನುಗಳನ್ನೆಲ್ಲಾ ಸರಕಾರದ ವರೇ ಕಿತ್ತುಕೊಳ್ಳುತ್ತಾರೆ ಎಂದು ಅವರಲ್ಲಿರುವ ಭಯವನ್ನು ನಿವಾರಣೆ ಮಾಡಬೇಕಾಗಿದೆ. ಕಲೆಕ್ಟೀವ್ ಫಾರ್ಮಿಂಗ್ ಸೊಸೈಟಿ ಮಾಡುವಾಗ ಜಮೀನುಗಳನ್ನು ಸದಸ್ಯರಿಂದ ಪಡೆಯುವುದಿಲ್ಲ. ಸರಕಾರದ ಜಮೀನುಗಳನ್ನು ಸೊಸೈಟಿಯವರಿಗೆ ಕೊಟ್ಟು ಅದರ ಮೂಲಕ ಜಾಯಿಂಟು ಕಲ್ಟಿ ವೇಷನ್ನು ಮಾಡುತ್ತಾರೆ. ಸ್ವಲ್ಪ ಜಮೀನುಗಳನ್ನು ಇಟ್ಟುಕೊಂಡಿರುವ ಹಿಡುವಳಿದಾರರನ್ನು ಒಟ್ಟಿಗೆ ಸೇರಿಸಿ ಪೂಲ್ ಮಾಡಿ ಅದನ್ನು ಕಲ್ಟಿವೇಟ್ ಮಾಡಬೇಕು. ಇದರ ಬಗ್ಗೆ ಜನರಲ್ಲಿ ಸರಿಯಾದ ಒಂದು ಪ್ರಾಪೊಗಾಂಡಾ ನಡೆಯಬೇಕು ಮತ್ತು ಜನರಲ್ಲಿ ತಿಳುವಳಿಕೆ ಬರುವಂತೆ ಮಾಡಬೇಕಾಗಿದೆ. ಈಗ ರೈತರಲ್ಲಿ ತಮ್ಮಲ್ಲಿರುವ ಜಮೀನನ್ನುಸರಕಾರವೇ ಕಿತ್ತುಕೊಳ್ಳುತ್ತದೆ ಎನ್ನುವ ಭಯಬಂದಿದೆ. ಇದನ್ನು ತೊಡೆದು ಹಾಕಬೇಕು. ಅವರ ಜಮೀನುಗಳನ್ನು ಸರಕಾರ ತೆಗೆದುಕೊಳ್ಳುವುದಿಲ್ಲ. ಒಂದು

ಅಗ್ರಿಮೆಂಟು ಪ್ರಕಾರ ಹತ್ತಾರು ವರ್ಷಗಳ ಕಾಲ ಅವರಲ್ಲಿರುವ ಜಮೀನುಗಳನ್ನು ತೆಗೆದುಕೊಂಡು ಪೂರ್ ಮಾಡಿ ಕಲ್ಟಿವೇಟು ಮಾಡುವಾಗ ಜಾಯಿಂಟು ಕಲ್ಟಿವೇಷನ್ನು ಎಂದು ಮಾಡುತ್ತೇವೆ. ಆದರೆ ಇದರಲ್ಲಿ ಬಂದಿರುವ ರಿಸಲ್ಟುಗಳು ಅಷ್ಟು ಆಶಾದಾಯಕವಾಗಿ ಬಂದಿಲ್ಲ ಎಂದು ಹೇಳಬಹುದು. ಆದರೆ ತಾವು ಹೇಳುವಂತೆ ಇದರಿಂದ ಜನಕ್ಕೆ ಹೆಚ್ಚು ಅನುಕೂಲವಾಗಿಲ್ಲ ಎನ್ನುವ ಪರಿಸ್ಥಿತಿ ಇ

Starting of Sugar Factories in the State.

**Q.*—656. SRI G. V. GOWDA (Palya).—

Will the Government be pleased to state :—

(*a*) the number of licences granted recently for starting sugar factories in the State and the places where they are to be started ;

(*b*) the number of applications recommended by State Government and pending consideration before Government of India for the grant of licence.

(*c*) whether they would take such steps as are necessary to secure licences at an early date ?

A.—SRI K. MALLAPPA (Minister for Industries and Commerce).—

(*a*) One at Gowribidanur.

(*b*) Ten.

(*c*) Yes

SRI G. V. GOWDA.—We are told that licences have been issued to tsart sugar factories at Hiriyur and some other places.

SRI K. MALLAPPA.—Licences have not been issued.

SRI G. V. GOWDA.—When does the Government expect to get these licences to these places ?

SRI K. MALLAPPA.—We have been waiting for almost every day.

SRI S. M. KRISHNA.—Have the Government understood the attitude of the Central Government in discriminating against the Southern States when it comes to the question of giving licences for co-operative sugar ventures ? They are only favouring the Northern States and ignoring the claims of Southern States. Does the State Government subscribe to this impression ?

SRI K. MALLAPPA.—I am not prepared to admit that.

SRI SANJEEVANATH AIKALA.—If there are 10 applications pending before the Government of India, is it not a fact that two applications, one from Gangavati and another from Kamalapura, both co-operative sugar factories, were withheld due to the intervention of very powerful Parliament Members in New Delhi ?

SRI K. MALLAPPA.—That is not correct.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಈಗ ನಮ್ಮ ರಾಜ್ಯಕ್ಕೆ ಸಾಕಷ್ಟು ನೀರಾವರಿ ಬಂದಿದೆ. ಆದರೆ ಸಕ್ಕರೆ ಕಾರ್ಖಾನೆಗಳ ಕೊರತೆಯಿಂದಾಗಿ ಕಬ್ಬು ಬೆಳೆಯುವಂತಹ ರೈತರಿಗೆ ಸರಿಯಾದ ಒಂದು

(ಶ್ರೀ ಎಸ್. ಎಂ. ಗುರಡ್ಡಿ)

ಬೆಲೆಯೂ ಸಿಗುತ್ತಿಲ್ಲ. ಇದಕ್ಕಾಗಿ ಸೆಂಟ್ರಲ್ ಗವರ್ನಮೆಂಟಿಗೆ ಇದನ್ನು ಶಿಫಾರಸು ಮಾಡಿ ನಮ್ಮ ರಾಜ್ಯಕ್ಕೆ ಸಕ್ಕರೆ ಕಾರ್ಖಾನೆಗಳ ಲೈಸನ್ಸನ್ನು ದೊರಕಿಸಲು ಪ್ರಯತ್ನ ಮಾಡಿದ್ದಾರೆಯೇ ಮತ್ತು ಎಷ್ಟು ಅರ್ಜಿಗಳು ಕೇಂದ್ರ ಸರಕಾರದಲ್ಲಿವೆ ?

ಶ್ರೀ ಕೆ. ಮಲ್ಲಪ್ಪ.—ಪ್ರಯತ್ನ ಮಾಡಿದ್ದೇವೆ. ಈಗಾಗಲೇ ಹತ್ತು ಅಪ್ಲಿಕೇಷನ್ನುಗಳು ಇಂಡಿಯಾ ಸರಕಾರದ ಮುಂದೆ ಇವೆ.

ಶ್ರೀ ವಿ. ಮಸಿಯಪ್ಪ.—ಕೇಂದ್ರ ಸರಕಾರದ ಮಂತ್ರಿಗಳು ನಿನ್ನೆಯ ದಿವಸ ಪಾರ್ಲಿಮೆಂಟಿನಲ್ಲಿ ಜವಾಬು ಕೊಡುತ್ತಾ ಈ ಸಾಲಿನಲ್ಲಿ ಸುಮಾರು ಹತ್ತು ಷುಗರ್ ಫ್ಯಾಕ್ಟರಿಗಳನ್ನು ತೆರೆಯಲು ಲೈಸೆನ್ಸುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಪೈಕಿ ಮೈಸೂರು ಸ್ಟೇಟಿಗೆ ಎಷ್ಟು ಲೈಸನ್ಸುಗಳು ಸಿಗಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ತಿಳಿಸಲು ಸಾಧ್ಯವೇ ?

ಶ್ರೀ ಕೆ. ಮಲ್ಲಪ್ಪ.—ಮೈಸೂರು ಸ್ಟೇಟಿಗೆ ಸದ್ಯದ ಪರಿಸ್ಥಿತಿಯಲ್ಲಿ ಮೂರು ಲೈಸನ್ಸುಗಳು ದೊರೆಯುಬಹುದು ಎಂದು ಸಂಬಂಧಪಟ್ಟ ಇಲಾಖೆಯವರ ಮೂಲಕ ಗೊತ್ತಾಗಿದೆ.

Sri J. P. SARWESH.—Is it not a fact that an application from a Bidar Society is pending since 10 years ?

ಶ್ರೀ ಕೆ. ಮಲ್ಲಪ್ಪ.—ಎಷ್ಟು ವರ್ಷಗಳಿಂದ ಪೆಂಡಿಂಗ್ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಇದು ನಾನು ಬಂದಲಾಗಾಯ್ತು ಪೆಂಡಿಂಗ್‌ನಲ್ಲಿದೆ ಎಂದು ಮಾತ್ರ ಹೇಳಬಲ್ಲೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಕೇಂದ್ರ ಸರಕಾರಕ್ಕೆ ಹತ್ತು ಅಪ್ಲಿಕೇಷನ್ನುಗಳನ್ನು ಕಳುಹಿಸಲಾಗಿದೆ ಎಂದು ಹೇಳಿದಿರಿ. ಯಾವ ಆರ್ಡರಿನಂತೆ ಅಲ್ಲಿಗೆ ಕಳುಹಿಸಲಾಯಿತು ?

Sri K. MALLAPPA.—As and when the application is received, we have forwarded it. If he wants the information, I will give. The list of applications pending before the Government is: Bidar, Hiriyur, Kamalapura, Chickodi, Gangavati, Hassan, Dharwar, Kollegal, Mandya and another place Kalammanadoddi.

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರಕಾರದವರು ಸಕ್ಕರೆ ಕಾರ್ಖಾನೆಗಳಿಗೆ ಲೈಸನ್ಸುಗಳನ್ನು ಕೊಡುವುದರಲ್ಲಿ ಮಲತಾಯಿ ಧೋರಣೆಯನ್ನು ತೋರಿಸುವುದಕ್ಕೆ ಕೇಂದ್ರ ಸರಕಾರದಲ್ಲಿ ಮೈಸೂರು ರಾಜ್ಯದಿಂದ ಸರಿಯಾದ ಪ್ರತಿನಿಧಿಗಳು ಅಲ್ಲಿನ ಮಂತ್ರಿಮಂಡಲದಲ್ಲಿಲ್ಲ ಎನ್ನುವುದೂ ಒಂದು ಕಾರಣವಲ್ಲವೇ ?

Sri K. MALLAPPA.—I have already answered that question.

Damage to Culverts and Causeways in Gandasi Constituency.

*Q.—745. Sri H. R. KESHAVA MURTHY (Gandasi).—

Will the Government be pleased to state :—

(a) the number of culverts and causeways washed out or damaged during the recent flood havocs in the month of November 1964 in Gandasi Constituency;

(b) whether they are aware that the traffic is completely or partially closed on account of such damages;

(c) whether estimates have been prepared to take up such flood damaged works to restore normal traffic;

(d) if so, the amounts of estimates of each work;

(e) the reasons for not taking up such flood damaged works so far;

(f) time required by the concerned authorities to take up and complete such works ?

A.—Sri VEERENDRA PATIL (Minister for Public Works).—

(*a*) 2 Causeways and 2 culverts were damaged.

(*b*) No.

(*c*) The estimates for necessary repairs are under preparation.

(*d*) Does not arise in view of reply to clause (*c*).

(*e*) The damages are not of serious nature.

(*f*) Damages will be repaired early after sanction to estimate.

ಶ್ರೀ ಹೆಚ್. ಆರ್ ಕೇಶವಮೂರ್ತಿ.—ಉತ್ತರದಲ್ಲಿ (ಅ)ಗೆ ಗೊತ್ತಿಲ್ಲ ಮತ್ತು (ಉ)ಗೆ ಉತ್ತರವಾಗಿ ತೀವ್ರವಾದ ಧಕ್ಕೆಗಳೇನೂ ಉಂಟಾಗಿರುವುದಿಲ್ಲ ಎಂದು ಹೇಳಿದ್ದೀರಿ. ನಿಜವಾಗಿ ಇಲ್ಲಿ ನೋಡಿದರೆ ಇಲ್ಲಿರುವ ಸೇತುವೆಗಳು ಮುರಿದು ಟ್ರಾಫಿಕ್‌ಗೆ ಬಹಳ ತೊಂದರೆಯಾಗಿರುವುದರಿಂದ ಇನ್ನೆಷ್ಟು ದಿವಸಗಳಲ್ಲಿ ಇದರ ಎಸ್ಟಿಮೇಟುಗಳನ್ನು ಮಾಡಿ ಕೆಲಸ ಪೂರೈಸಲು ಸಾಧ್ಯವಾಗುತ್ತದೆ?

†Sri G. B. SHANKAR RAO (Parliamentary Secretary to the Minister for Public Works).—The estimates are now ready and we shall take up this work this year.

Construction of Over-Bridges on the Mysore-Arasikere Railway Line

**Q.*—781. Sri H. D. DEVE GOWDA (Holenarasipur).—

Will the Government be pleased to state:—

(*a*) whether they have received any representations from the public and the local bodies requesting to construct over-bridges on the Mysore-Arasikere Railway line near Mavinakere Village and Annechakanahally village;

(*b*) whether it is a fact that Holenarasipur Taluk Development Board has resolved to bear the cost of the approach roads of two bridges on either side of the overbridges;

(*c*) whether they would urge the Central Government for the construction of the above two over-bridges and request them to include these in the first year of the IV Five-Year Plan?

A.—Sri VEERENDRA PATIL (Minister for Public Works).—

(*a*) No.

(*b*) Government are not aware of any such resolution by the Taluk Board.

(*c*) This will be examined.

ಶ್ರೀ ಹೆಚ್. ಡಿ. ದೇವೇಗೌಡ.—ಇಲ್ಲಿ ಓವರ್ ಬ್ರಿಡ್ಜ್ ಮಾಡಬೇಕೆಂದು ತಾಲ್ಲೂಕು ಬೋರ್ಡಿನವರು ರೆಸಲ್ಯೂಷನ್ ಮಾಡಿ ಅದಕ್ಕಾಗಿ ಬಜೆಟ್ಟಿನಲ್ಲಿ ಹಣವನ್ನು ಕೂಡ ಒದಗಿಸಿಕೊಂಡಿದ್ದರೂ ಕೂಡ ಇಲ್ಲಿ ಕಟ್ಟೆಗಳನ್ನು ಕಟ್ಟದೇ ಇರಲು ಕಾರಣಗಳೇನು?

† Sri G. B. SHANKAR RAO (Parliamentary Secretary to the Minister for Public Works).—So far as we are concerned, there is no such communication to the Government. We have not been informed to that effect. We have learnt that the Taluk Board has recently, *i.e.*, in February passed a resolution. Unless there is communication to us, we cannot be definite about it.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಇದನ್ನು ಮೂರನೇ ಯೋಜನೆಯಲ್ಲೇ ಸೇರಿಸಲು ಶಿಫಾರಸು ಮಾಡುತ್ತೇವೆಂದು ಮತ್ತು ಅದರ ಲಿಸ್ಟಿನಲ್ಲಿ ಸೇರಿಸಲು ಸಾಧ್ಯವಿವೆ ಎಂದು ಹೇಳಿರುವುದು ತಮಗೆ ಗೊತ್ತಿದೆಯೇ ?

Sri G. B. SHANKAR RAO.—It is true that Members have represented. It is entirely the concern of the Government of India. We have requested them to construct the over-bridges, under-bridges in a number of places and asked them to give priority to some of them wherever the traffic load is more. The Hon'ble Minister went and inspected the site along with the Superintending Engineer but found that the traffic load is not much. We shall, however, certainly recommend to the Government of India to take them up in the Fourth Plan.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅರಸೀಕೆರೆಯ ಮುನಿಸಿಪಲ್ ಲಿಮಿಟ್‌ನಲ್ಲಿ ಒಂದು ಸೇತುವೆ ಮಾಡಿಕೊಡಬೇಕೆಂದು ಈಗ ಹತ್ತಾರು ವರ್ಷಗಳಿಂದಲೂ ಅಲ್ಲಿಯ ಜನಗಳು ಅರಣ್ಯ ರೋಧನ ಮಾಡುತ್ತಿದ್ದರೂ ಕೂಡ ಸರ್ಕಾರದವರು ಆ ಕಡೆ ಹೆಚ್ಚಿಗೆ ಗಮನ ಕೊಡುತ್ತಿಲ್ಲ. ಅದು ಯಾವ ಮಟ್ಟದಲ್ಲಿ ಇದೆಯೆಂಬುದನ್ನು ಹೇಳುತ್ತೀರಾ ?

Sri G. B. SHANKAR RAO.—This does not pertain to this question. Please put a separate question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಂಡರ್ ಬ್ರಿಡ್ಜ್ ಮತ್ತು ಓವರ್ ಬ್ರಿಡ್ಜ್‌ಗಳನ್ನು ಮಾಡಿಸಿ ಕೊಡಬೇಕೆಂದು ಜನಗಳು ನಮ್ಮನ್ನು ಕೇಳುತ್ತಾರೆ. ನಾವು ತಮಗೆ ಹೇಳುತ್ತೇವೆ. ತಾವು ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆ ಎಂದು ಹೇಳುತ್ತೀರಿ. ಆ ರೀತಿ ತಾವು ಕೇಂದ್ರ ಸರ್ಕಾರಕ್ಕೆ ಬರೆದು ಅವರು ಆ ಕೆಲಸವನ್ನು ಮಾಡದೇ ಇದ್ದರೆ ತಾವು ಕೇಂದ್ರ ಸರ್ಕಾರದವರನ್ನು ಆ ಕೆಲಸವನ್ನು ಮಾಡಿ ಕೊಡುವಂತೆ ಒತ್ತಾಯ ಮಾಡಬೇಕಲ್ಲವೇ ?

ಅಧ್ಯಕ್ಷರು.—ಪಾರ್ಲಿಮೆಂಟ್ ಮೆಂಬರುಗಳಿದ್ದಾರೆ, ಅವರು ಒತ್ತಾಯ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂತ್ರಿಗಳು ಏನು ಮಾಡುತ್ತಾರೆ ?

ಅಧ್ಯಕ್ಷರು.—ಅವರು ಕಾಗದ ಬರೆಯುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಏನಾದರೂ ಮಾಡಬೇಕು, ಇಲ್ಲದಿದ್ದರೆ ರಾಜೀನಾಮೆ ಕೊಡಬೇಕು.

Mr. SPEAKER.—It is allowed.

Development of Bhatkal Port

*Q.—812. Sri R. S. HEGDE (Honnavar).—

Will the Government be pleased to state:—

(*a*) the amount sanctioned so far for the development of the Bhatkal port;

(*b*) when is it proposed to be constructed;

(SRI R. S. HEGDE)

(c) what is the amount ear marked for 1964-65;

(d) whether it is a fact that this port was proposed for completion in the III Five-Year Plan;

(e) the difficulty in the execution of this work;

(f) what is the tonnage capacity expected to be exported through this port;

(g) what facilities will be available at this port after completion to the steamer travelling passengers?

A—Sri VEERENDRA PATIL (Minister for Public Works).—

(a) Rs. 14.46 lakhs.

(b) The work will be started early during the current year.

(c) Rs. 3,000

(d) Originally a sum of Rs. 1 lakh was provided for improvement of passenger and Cargo facilities. As a result of model studies a scheme costing Rs. 14.46 lakhs, in modification of the original proposals is being taken up.

(e) There is no difficulty.

(f) 10,000 tons by the end of 1965-66.

(g) An R. C. C. sheet piled wharf is being provided which on completion will be available for passenger traffic as well as for cargo traffic. The passenger shed existing on the southern bank is proposed to be shifted to the northern bank.

Sri R. S. HEGDE.—In view of the fact that land belonging to a good number of fishing community people is going to be acquired by the Port Department, how does the Government propose to rehabilitate them?

† Sri G. B. SHANKAR RAO (Parliamentary Secretary to the Minister for Public Works).—There are no such large number of families to be rehabilitated. The question of rehabilitation comes in only when the number of families to be replaced is 50. Here it is less than 50. So, there is no question of rehabilitating those families. At the most, we can pay compensation to lands and dwellings which they lose by acquisition.

Sri R. S. HEGDE.—In view of the peculiar circumstances, will the Department recommend that these persons should be given Government lands if available nearby the port premises?

Sri G. B. SHANKAR RAO.—We do not know whether there are any lands.

Mr. SPEAKER.—How can they recommend unless those people apply for them?

Sri G. V. GOWDA.—As against the estimated cost of Rs. 14.46 lakhs, if you provide Rs. 3,000 for 1964-65, I wish to know when the Government hope to complete this project ?

Sri G. B. SHANKAR RAO—Sir, originally in the fourth year of the plan, there was a proposal to spend about 4 lakhs only and ultimately revised estimates were submitted last year and estimates have been sanctioned; money is provided for preliminary work and work has been put to tender; the last date for receipt of tender is 19th of this month. If tender is approved, we will see that the work is taken up and pushed through early.

Sri R. S. HEGDE.—In view of the importance of fishing and Bhatkal being a fishing centre, do the Government propose to make this Port also a fishing harbour ?

Sri G. B. SHANKAR RAO.—Out of this area for commercial port, a portion has been reserved for development of fishing also.

Sri R. S. HEGDE.—When the port is completed, what is the tonnage capacity of this Port ?

Sri G. B. SHANKAR RAO.—By the end of 1965-66, the total traffic that may be handled is about 10,000; by the end of 4th Plan, the total tonnage that will be handled is one lakh tons and at the end of 5th Plan, we hope it may go to a lakh and fifty thousand.

Mr. SPEAKER.—Questions No. 831 and 832 may be put by Sri Sanjeevanath Aikala.

Construction of a Feeder Channel to Dharmapura Tank in Hiriyur Taluk.

**Q.*—831. Sri SANJEEVANATH AIKALA (Suratkal) [on behalf of Sri B. L. Gowda (Challakere)].—

Will the Government be pleased to state :—

(*a*) whether the survey work in connection with the construction of a feeder channel to Dharmapura tank in Hiriyur Taluk from river Suvarnamukhi is over ;

(*b*) whether estimate and plans have been prepared for the said work ;

(*c*) if so, when the work would be started ?

A.—Sri S. NIJALINGAPPA (Chief Minister).—

(*a*) Yes.

(*b*) Not yet.

(*c*) As early as possible after estimate and plans are received and scrutinised and subject to the availability of funds.

Sri SANJEEVANATH AIKALA.—When the survey work was started and when it was completed and why it was delayed so long without sanction ?

†Sri S. NIJALINGAPPA.—It has to be finalised. The report has been received just now and it is under consideration and every attempt will be made to push it through provided we have sufficient funds.

Sri SANJEEVANATH AIKALA.—Is it not a fact that the area covered by this tank and the feeder channel is dry area in Challakere, Hiriyur, Jagalur and Siddavanahalli and as such will the Chief Minister see that the work is undertaken immediately so as to relieve distress in that area and also will he see that funds are made available ?

Sri S. NIJALINGAPPA.—Siddavvanahalli does not belong to this area. I know it is a needy area and scarcity area and it deserves highest amount of attention.

Sri V. MASIYAPPA.—May I know whether the Government have proposed to include this project in the Fourth Five Year Plan ?

Sri S. NIJALINGAPPA.—We will try to do it because it is going to serve a very large area, nearly 10,000 acres. The Government are very seriously thinking of including it.

Inclusion of Salavadgi village under National Rural Water Supply Scheme.

*Q.—905. Sri S. M. GURADDI (Muddebihal).—

Will the Government be pleased to state :—

(a) whether they are aware that the people in Salavadagi villa Muddebihal Taluk, are suffering from guinea worm disease every year ;

(b) whether the villagers of Salavadagi village, B. D. O. and D. C. have not recommended to Government to include this village under National Rural Water Supply Scheme ;

(c) whether the villagers have not agreed to contribute their quota in this behalf ?

A.—Sri RAMAKRISHNA HEGDE (Minister for Development, Panchayathi Raj and Co-operation).—

(a) Yes.

(b) No.

(c) Does not arise in view of reply to Clause (b) above.

Sri KONDAJJI BASAPPA (Deputy Minister for Co-operation).—Answers are as printed with a little modification to (b) as follows :

"There is no written representation from the villagers to include the scheme under National Water Supply Scheme. But a combined water supply scheme estimated to cost Rs. 47,620/- to Bandeppanahalli and Salwadgi has been included in the list of villages prepared by the Assistant Engineer, Rural Water Supply Sub-Division, Dharwar.

(SRI KONDAJJI BASAPPA)

Answer to (c) is as follows:

"The villagers have agreed in the resolution of 15th January 1964 to contribute their share on obtaining loan."

ಶ್ರೀ ಎಸ್. ಎಂ. ಗುರ್‍ರೆಡ್ಡಿ.—ಈ ಪ್ರಶ್ನೆ ಹಿಂದಿನ ವರ್ಷ ಬಂದಿತ್ತು. ಆಗ ಕೂಡ ಇದೇ ಉತ್ತರವನ್ನು ಪಡೆದಿದ್ದೇನೆ. ಈಗ ಒಂದು ವರ್ಷದಲ್ಲಿ ಎಷ್ಟೋ ಹಳ್ಳಿಗಳಿಗೆ ರೂರಲ್ ವಾಟರ್ ಸಪ್ಲೈ ಯೋಜನೆಯಲ್ಲಿ ನೀರು ಒದಗಿಸಿಕೊಟ್ಟಿದ್ದಾರೆ. ಆದರೆ ಈ ಹಳ್ಳಿಗಳಿಗೆ ನೀರನ್ನು ಒದಗಿಸಿಕೊಟ್ಟಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಅಲ್ಲಿನ V. P. arrears ಸುಮಾರು 8 ಸಾವಿರ ರೂಪಾಯಿಗಳಿವೆ. ಅದರಲ್ಲಿ ಡೆಪ್ಯುಟಿ ಕಮೀಷನರು 75 ಪರ್ಸೆಂಟ್ ಅರಿಯರ್ಸ್‌ಅನ್ನು ರೆಕವರ್ ಮಾಡಿ, ಆ ಊರಿನ ವಿಲೇಜ್ ಪಂಚಾಯಿತಿಯ ಫೈನಾನ್ಸಿಯಲ್ ಪೊಜಿಷನ್ ಸೌಂಡ್ ಆಗಿಲ್ಲ ಎಂದು ತಿಳಿಸಿದ್ದಾರೆ. ಈಗ ಆ ಊರಿನ ವಿ.ಪಿ. ಅರಿಯರ್ಸ್ ರೆಕವರ್ ಮಾಡದೆ ಆ ಊರಿಗೆ ರೂರಲ್ ವಾಟರ್ ಸಪ್ಲೈ ಯೋಜನೆ ಯಲ್ಲಿ ನೀರನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾದ ಹಾಗೆ ಕಾಣಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಗೋಸ್ಕರ ಮಂಜೂರಾಗಿದ್ದ ಹಣವೆಷ್ಟು, ಆ ಪೈಕಿ ಖರ್ಚಾ ಗದೆ ಎಷ್ಟು ಹಣ ವರ್ಷೇ ವರ್ಷೇ ಉಳಿಯುತ್ತಾ ಬಂದಿದೆ ?

Sri KONDAJJI BASAPPA.—There was a provision of Rs. 100 lakhs made during the Third Five Year Plan. Out of Rs. 12 lakhs provided for 1961-62, Rs. 9.5 lakhs have been utilised; out of Rs. 16 lakhs that was provided in 1962-63, Rs. 14.42 has been spent; out of Rs. 20 lakhs provided in the year 1963-64, Rs. 16.73 lakhs have been spent; Rs. 20 lakhs have been spent out of the amount provided for the year 64-65; out of non-plan expenditure a total amount of Rs. 12.46 have been so far spent by December 1964.

Sri R. M. DESAI.—In the interest of health of the people, will it not be better if the Government waive the contribution required to be given by the villagers ?

Sri KONDAJJI BASAPPA.—We have reduced it to 10 per cent. Originally it was 25 per cent contribution by the village panchayat. Now we have reduced it to 10 per cent. But in areas where scheduled castes and scheduled tribes live, we have reduced it to 5 per cent.

ಶ್ರೀ ಎಸ್. ಎಂ. ಗುರ್‍ರೆಡ್ಡಿ.—ಆ ಊರಿನ ಜನಗಳಿಗೆ ಒಳ್ಳೆಯ ಕುಡಿಯುವ ನೀರು ಇಲ್ಲದೇ ಇರುವುದರಿಂದ ಅವರು ನಾರು ಹುಣ್ಣಿನಿಂದ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಅವರಿಗೆ ಪರಿಹಾರ ವನ್ನು ಒದಗಿಸುವುದಕ್ಕೆ ಸರ್ಕಾರದವರು ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಖಂಡಿತ ತಾವು ಹೇಳುವ ಅಂಶ ಸತ್ಯಾಂಶ ಎಂದು ಹೇಳುವುದರಲ್ಲಿ ಅನುಮಾನವಿಲ್ಲ. ಇದರಲ್ಲಿ ಆ ಊರಿನವರ ಹಣಕಾಸಿನ ಪರಿಸ್ಥಿತಿಯನ್ನು ಕೂಡ ನಾವು ನೋಡ ಬೇಕಾಗುತ್ತದೆ. ಅವರಿಗೆ 5 ಪರ್ಸೆಂಟ್ ಹಣವನ್ನು ಕೂಡ ಕೊಡುವುದಕ್ಕೆ ಶಕ್ತಿಯಿಲ್ಲ ಎಂದು ಹೇಳಿ ದರೆ ಆ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಒಂದು ವೇಳೆ ಈಗ ಆ ಊರಿನವರು ಕೊಡ ಬೇಕಾಗಿರತಕ್ಕ ಅರಿಯರ್ಸನ್ನಾದರೂ ಕೊಡುತ್ತೇವೆ ಎಂದು ಹೇಳಿದರೆ ಸರ್ಕಾರದವರು ಖಂಡಿತಾ ಆ ಕೆಲಸವನ್ನು ಮಂಜೂರು ಮಾಡುತ್ತಾರೆ.

ಶ್ರೀ ಸಿದ್ಧಯ್ಯಕಾಶೀಮಠ್.—ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ನೂರಾರು ಜನರು ನಾರು ಹುಣ್ಣಿನಿಂದ ತೊಂದರೆ ಪಡುತ್ತಿದ್ದಾರೆ. ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಅಲ್ಲಿ ಜನಗಳಿಗೆ ಗಿನಿ ವರ್ಮ್ಸ್ ಡಿಸೀಜ್ ಬರುತ್ತಿದೆ, ಆದ್ದರಿಂದ ಅಲ್ಲಿಗೆ (Draw-wells) ಡ್ರಾವೆಲ್‌ಗಳನ್ನು ಕೊಡಬೇಕು. ಈ ಬಗ್ಗೆ Comprehensive programme ತಯಾರು ಮಾಡಬೇಕಾಗುತ್ತದೆ.

9-00 A.M.

ಶ್ರೀ ಎಸ್. ಎಂ. ಗುರೆಡ್ಡಿ.—ಅವರು ಕಂಟ್ರಿಬ್ಯೂಷನ್ ಸಂಬಂಧ ಮಾಡುತ್ತಾರೆ. ಈಗಾಗಲೇ ಸರ್ಕಾರದವರು ಶೇಕಡ 25 ರಷ್ಟು ಕೊಡುತ್ತಿದ್ದಾರೆ. ಇದು ಪಂಚಾಯಿತಿಯ ಪ್ರಶ್ನೆಯಲ್ಲ. ಊರಿನವರು ಕಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರು ಆದರೆ ಅದನ್ನು ತೀವ್ರವಾಗಿ ಇನ್‌ಕ್ಲೂಡ್ ಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಶೇಕಡ 25 ರಷ್ಟು ಸಾಲ ಕೊಡಿ ಎಂದು ಕೇಳಿದ್ದಾರೆ. ಅವರು ಕೊಡತಕ್ಕ ಕಾಂಟ್ರಿಬ್ಯೂಷನ್‌ಗೆ ಸರಿಯಾಗಿ ಸರ್ಕಾರದಿಂದ ಸಾಲ ಕೊಡಿ ಎಂದು ಕೇಳಿದ್ದಾರೆ. ಸರ್ಕಾರದ ಮೇಲೆ ಡಿಪೆಂಡ್ ಆಗುವುದರಿಂದ ಸಾಲ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ನಾಳೆ ಫೈನಾನ್ಸ್ ಪೊಸಿಷನ್ ವೀಕ್ ಆದರೆ ಆ ರೀತಿ ಸೌಕರ್ಯಗಳಿಗೆ ಕಷ್ಟ. ಅದಕ್ಕಾಗಿ ಶೇಕಡ 75 ರಷ್ಟು ಕಾಂಟ್ರಿಬ್ಯೂಷನ್ ಮಾಡಿಕೊಡಿ. ಅನಂತರ ಶಿಫಾರಸು ಮಾಡುತ್ತೇನೆಂದು ಡೆಪ್ಯುಟಿ ಕಮಿಷನರು ಉತ್ತರ ಕೊಟ್ಟಿದ್ದಾರೆ.

Sri G. V. GOWDA.—What is the amount provided and what is the expenditure incurred and what is the reason for allowing nearly Rs. 20 lakhs to lapse during the Five-year period ?

Sri KONDAJJI BASAPPA.—That is due to several reasons. ಕೆಲವು ಸಂದರ್ಭಗಳಲ್ಲಿ ಏಜೆನ್ಸಿಗಳು, ಕಂಟ್ರಾಕ್ಟರ್ಸ್ ಮುಂದೆ ಬರುವುದಿಲ್ಲ. ಇಂಜಿನಿಯರಿಂಗ್ ಇಲಾಖೆಯಿಂದ ಪ್ಲಾನ್ಸ್ ಮತ್ತು ಎಸ್ಟಿಮೇಟುಗಳು ಸಕಾಲಕ್ಕೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಅಷ್ಟು ಹಣ ಲ್ಯಾಪ್ಸ್ ಆಗಲು ಕಾರಣವಾಯಿತು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—3ನೇ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟೇ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿದ್ದರೂ ಈಗ ಎಷ್ಟು ತೆಗೆದು ಕೊಂಡಿದೆ ಮತ್ತೆ ಎಷ್ಟು ಪೆಂಡಿಂಗ್‌ನಲ್ಲಿವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಒಟ್ಟು 259 ಯೋಜನೆಗಳು ಪ್ರೋಗ್ರಾಂನಲ್ಲಿ ಮಂಜೂರಾಗಿದ್ದುವು. ಅದರಲ್ಲಿ 79 ಯೋಜನೆಗಳು ಪೂರ್ತಿಯಾಗಿ ಸರ್ವಿಸ್ ಆಗಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟೋ ಜನ ಬಡವರು ಚೈತನ್ಯವಿಲ್ಲದೆ ಕುಡಿಯುವ ನೀರಿನ ಸೌಕರ್ಯ ಹೊಂದದೇ ಇರುವ ಕಡೆಗಳಲ್ಲಿ ಆ ಸೌಕರ್ಯವನ್ನು ಒದಗಿಸಲು ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿನ ಎಲ್ಲಾ ಅಧಿಕಾರಿಗಳ ಮುಖಾಂತರ ಹಾಗೂ ಜಿಲ್ಲಾಧಿಕಾರಿಗಳಿಂದ ಆ ಬಗ್ಗೆ ಶಿಫಾರಸು ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೇವಲ ಶೇಕಡ 10 ರಷ್ಟು ಮಾತ್ರ ಕೆಲವು ಕಡೆಗಳಲ್ಲಿ ಕಂಟ್ರಿಬ್ಯೂಷನ್ ಕೊಟ್ಟಿರಬಹುದು ಅದಕ್ಕಿಂತ ಹೆಚ್ಚಿಗೆ ಯಾವ ಪಂಚಾಯಿತಿಗೂ ಆಗುವುದಿಲ್ಲ. ಅಂದ ಮೇಲೆ ಏನೊಂದು ಪಂಚಾಯಿತಿಯವರು ಕೊಡುವುದಕ್ಕೆ ನಿಗದಿ ಮಾಡಿದ್ದಾರೋ ಅದನ್ನು ಕೊಟ್ಟರೆ ಸರ್ಕಾರದವರು ದೊಡ್ಡ ದೊಡ್ಡ ಹಳ್ಳಿಗಳಿಗೆ ನೀರಿನ ಸರಬರಾಜು ಮಾಡುತ್ತಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾರ್ಯಾರಿಗೆ ಕಂಟ್ರಿಬ್ಯೂಷನ್ ಕೊಡುವುದಕ್ಕಾಗುವುದಿಲ್ಲವೋ ಅಂತಹವರು ಸಾಲ ಕೇಳಿದರೆ ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ.

Community Lift Irrigation Scheme.

*Q.—832. Sri SANJEEVANATH AIKALA (Suratkal) [on behalf of SRI B. L. GOWDA (Challakere)].—

Will the Government be pleased to state :—

(a) the number of proposals received from Challakere Taluk for Community Lift Irrigation Scheme ;

(b) when they were received ;

(c) what is the action taken by Government on these proposals ?

A.—Sri ALUR HANUMANTHAPPA (Deputy Minister for Minor Irrigation).—

(*a*) Two.

(*b*) On 5th July 1963.

(*c*) Plans and estimates are under preparation.

Sri SANJEEVANATH AIKALA.—Is it not a fact that five representations have been received by the Government from Basapura, Bodihalli and three other villages ?

†Sri ALUR HANUMANTHAPPA.—We have received only two applications from Basapura and Bodihalli.

Sri SANJEEVANATH AIKALA.—What is the policy of the Government in promoting community lift irrigation schemes : whether it is to be undertaken by the P.W.D. or if the villagers come forward to undertake them through co-operatives, whether they will be given preference ?

Sri ALUR HANUMANTHAPPA.—In view of the food scarcity in the country and in the State, very recently we have discussed these matters with the Chief Minister and the Finance Minister and the Government has taken a decision to see that some pilot programmes are taken up in each district under a crash programme and we have no objection if co-operative societies constituted for this purpose come forward.

ಶ್ರೀ ಕೆ. ಲಕ್ಕಪ್ಪ.—ಆಲ್ ಇಂಡಿಯಾ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಚಳ್ಳಕೆರೆ ತಾಲ್ಲೂಕಿನಲ್ಲಿ ಮಾತ್ರ ನಡೆಸುತ್ತಿದ್ದೀರೋ ಅಥವಾ ಇಡೀ ಮೈಸೂರು ದೇಶಕ್ಕೆ ಪೂರ್ತಿಯಾಗತಕ್ಕ ಯೋಜನೆಯನ್ನೇನಾದರೂ ಹಾಕಿ ಕೊಂಡಿದ್ದೀರೋ ? ಅಥವಾ ಯೋಜನೆಗಳಲ್ಲಿಯೇ ಕಾಲ ಕಳೆಯುತ್ತಿದ್ದೀರೋ ?

ಶ್ರೀ ಆಲೂರು ಹನುಮಂತಪ್ಪ.—ಕಾಲ ಕಳೆಯುವ ಪ್ರಶ್ನೆ ಏನೂ ಇಲ್ಲ. ಮೈಸೂರು ದೇಶದಲ್ಲಿ ಚಳ್ಳಕರೆ ತಾಲ್ಲೂಕ್ ಒಳಗೊಂಡಂತೆ ಸುಮಾರು 118 ಯೋಜನೆಗಳನ್ನು ಹಾಕಿ 1 ಕೋಟಿ 60 ಲಕ್ಷ ರೂಪಾಯಿಗಳಲ್ಲಿ 50 ಸಾವಿರ ಎಕರೆ ನೀರಾವರಿಯಾಗತಕ್ಕ ಪ್ರೋಗ್ರಾಮನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವರಿಂದ ಹಣ ಬರುವ ನಿರೀಕ್ಷಣೆ ಮಾಡುತ್ತಿದ್ದೇವೆ. ಈಗಾಗಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲೆಕ್ಟ್ರಿಕಲ್ ಮತ್ತು ಪಿ.ಡಬ್ಲ್ಯು.ಡಿ. ಸಿಬ್ಬಂದಿ ಇನ್ಸ್ಪೆಕ್ಷನ್ ಮಾಡಿ ಆ ಬಗ್ಗೆ ಅತಿ ತೀವ್ರವಾದ ವರದಿಯನ್ನು ಸರ್ಕಾರಕ್ಕೆ ಒದಗಿಸಬೇಕು, ಆದಷ್ಟು ಬೇಗ ಅದನ್ನು ಮಾಡಬೇಕೆಂದು ಅವರಿಗೆ ಹೇಳಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಚಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ವೇದಾವತಿ ಮತ್ತು ಸುವರ್ಣಮುಖಿ ನದಿಗಳು ಹರಿಯುವುದರಿಂದ, ಸಾಕಷ್ಟು ನೀರಿನ ಸೌಲಭ್ಯವಿರುವುದರಿಂದ ವಿದ್ಯುಚ್ಛಕ್ತಿ ಸರಬರಾಜು ಜಾಸ್ತಿಯಾಗಿ ಪಡೆದು ಅಲ್ಲಿನ ಜನಗಳಿಂದ ಜಾಗ್ರತೆಯಾಗಿ ಸಹಾಯವಾಗದಿದ್ದರೆ, ಸರ್ಕಾರದವರೇ ನೇರವಾಗಿ ಕೆಲವು ಯೋಜನೆಗಳನ್ನು ಸರ್ವೆ ಮತ್ತು ಎಸ್ಟಿಮೇಟು ಮಾಡಿ ಅವುಗಳಿಗೆ ಮಂಜೂರಾತಿ ತೆಗೆದುಕೊಂಡು ಏತಕ್ಕೆ ಕೆಲಸಗಳನ್ನು ಪ್ರಾರಂಭ ಮಾಡಬಾರದು ?

Sri ALUR HANUMANTHAPPA.—Government is very earnest in taking up lift irrigation schemes as early possible. ಆ ಬಗ್ಗೆ ಸರ್ವೆ ನಡೆಸಿದ್ದೇವೆ. ಸಾಕಷ್ಟು ಅಂದಾಜುಗಳು ನಮ್ಮಲ್ಲಿ ಈಗಾಗಲೇ ಇವೆ.

ಶ್ರೀ ಜಿ. ವಿ. ಗೌಡ.—ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಲಿಫ್ಟ್ ಇರ್ರಿಗೇಷನ್ ವ್ಯವಸ್ಥೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡುವುದಕ್ಕೆ ಒಂದು ಮಾಸ್ಟರ್ ಪ್ಲಾನನ್ನು ಮಾಡಿಸುತ್ತೀರೋ ?

Sri ALUR HANUMANTHAPPA.—We have got sufficient number of lift irrigation schemes on hand in almost all the districts.

ಶ್ರೀ ಎಚ್. ಡಿ. ದೇವೇಗೌಡ.—ಆಲ್ ಇಂಡಿಯಾ ಲಿಫ್ಟ್ ಇರ್ರಿಗೇಷನ್ ಸ್ಕೀಮ್ಸ್ ಕಾರ್ಯಗತ ಮಾಡುವ ಬಗ್ಗೆ ಕೆಲವನ್ನು ಪಿ.ಡಬ್ಲ್ಯು.ಡಿ. ಮತ್ತು ಕೋ-ಆಪರೇಟಿವ್ ಸೆಕ್ಟರ್‌ನಿಂದ ಮಾಡುತ್ತೇವೆಂಬುದಾಗಿ ಮಂತ್ರಿಗಳು ಹೇಳಿದರು. ಈಗ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಿರುವ ಈ ಎರಡು ಯೋಜನೆಗಳ ಸರ್ವೆ ಕಾರ್ಯ ಮುಗಿದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ಯೋಜನೆಗಳ ಪೈಕಿ ಚೆಳ್ಳಕೆರೆ ತಾಲ್ಲೂಕಿನ ಸ್ಕೀಂ ಆಗಿರುತ್ತದೆ. ಸಂಬಂಧಪಟ್ಟ ಇಲಾಖೆ ಮತ್ತೊಂದು ಯೋಜನೆಯನ್ನು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಬೇಕೆಂಬ ಉದ್ದೇಶ ಇರುವುದರಿಂದ ಸರ್ಕಾರದವರು ಈ ನಿರ್ಧಾರವನ್ನು ಕೈ ಗೊಂಡಿದ್ದಾರೆ. ಆದರೆ ಕೋ-ಆಪರೇಟಿವ್ ಸೊಸೈಟಿಗಳು ಅಧಿಕವಾಗಿ ಮುಂದೆ ಬಂದರೆ ಸರ್ಕಾರದವರು ಹಣ ಸಹಾಯ, ತಾಂತ್ರಿಕ ಸಹಾಯ ಕೊಡಲು ಹಿಂದೆಗೆಯುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಬಡ್ಜೆಟ್ಟಿನಲ್ಲಿ ಈ ರೀತಿ ಪ್ರೋಗ್ರಾಂ ಹಾಕಿ ಎಷ್ಟು ಹಣವನ್ನು ಈ ಬಾಬಿಗೆ ಇದುವರೆಗೆ ಒದಗಿಸಿದ್ದೀರಿ ? ಈ ಸಾರಿ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಮಾಸ್ಟರ್ ಪ್ಲಾನಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ ? ಮೈಸೂರು ಸಂಸ್ಥಾನದಲ್ಲಿ ಯಾವ ತಿಂಗಳಿನಲ್ಲಿ ಅವು ಪ್ರಾರಂಭವಾಗುತ್ತವೆ ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒಂದು ಪಟ್ಟಿ ಮಾಡಿ ಕಳುಹಿಸಿದ್ದೇವೆ ಕೇಂದ್ರ ಸರ್ಕಾರದವರು ಬಹಳ ತೀವ್ರವಾಗಿ ಈ ಕೆಲಸಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಆದರಿಂದಾಗಿ ಹೆಚ್ಚಿನ ಹಣ ಸಹಾಯವನ್ನು ನಿರೀಕ್ಷಣೆ ಮಾಡುತ್ತಿದ್ದೇವೆ ಅದು ಬಂದ ಕೂಡಲೆ ಆದಷ್ಟು ಬೇಗ ಆ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಸಣ್ಣ ನೀರಾವರಿ ಯೋಜನೆಗಳಿಂದ ಮಲೆನಾಡಿನ ಪ್ರದೇಶಗಳಲ್ಲಿ ಸಾಕಷ್ಟು ಯಶಸ್ವಿಯಾಗಿದೆ ಇರುವುದರಿಂದ ಅನೇಕರು ಅಲ್ಲಿ ಕಂದಾಯ ಕೊಡುವುದಿಲ್ಲವೆಂದು ಉಗ್ರವಾಗಿ ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ಪರಿಸ್ಥಿತಿ ಏನೂ ಇಲ್ಲ. ಎಲ್ಲಿ ಲಿಫ್ಟ್ ಇರ್ರಿಗೇಷನ್ ಕೊಡುತ್ತೇವೋ ಅಲ್ಲಿ ಎರಡು ಬೆಳೆಯಾಗುತ್ತದೆ. ಅದರಲ್ಲೊಂದು ಅಷ್ಯೂರ್ಡ್ ಕ್ರಾಪ್. ಈ ಬೆಳೆಯಿಂದ ರೈತರಿಗೆ ಹೆಚ್ಚಿನ ಅನುಕೂಲವುಂಟು. ಸುಮಾರು 60-70 ರೂಪಾಯಿ ಖರ್ಚು ಲಿಫ್ಟ್ ಇರ್ರಿಗೇಷನ್ನಿಗೆ ಆಗುವುದರಿಂದ ಕಮರ್ಷಿಯಲ್ ಕ್ರಾಪ್ಸ್ ಮತ್ತು ಫುಡ್ ಕ್ರಾಪ್ಸನ್ನು ಬೆಳೆಯುವುದಕ್ಕೆ ಅನೇಕರು ಸಿದ್ಧರಾಗಿದ್ದಾರೆ. ಅದರಲ್ಲೇನೂ ಬಾಧಕವಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಲಿಫ್ಟ್ ಇರ್ರಿಗೇಷನ್ ಹಾಕುವ ಬಗ್ಗೆ ಹಣ ಸಹಾಯವನ್ನು ಸರ್ಕಾರದ ಮೂಲಕ ಮತ್ತು ಕೋ-ಆಪರೇಟಿವ್ ಸೊಸೈಟಿ ಮೂಲಕ ಎಷ್ಟರ ಮಟ್ಟಿಗೆ ಕೊಡುತ್ತಾರೆ ?

ಶ್ರೀ ಆಲೂರು ಹನುಮಂತಪ್ಪ.—ಆ ವಿಷಯ ಇನ್ನೂ ಪರಿಶೀಲನೆಯಲ್ಲಿದೆ. ಎಲ್ಲೆಲ್ಲಿ ಲಿಫ್ಟ್ ಇರ್ರಿಗೇಷನ್ ಪ್ರಾಜೆಕ್ಟ್ ಆಗುತ್ತದೆ ಎಲ್ಲಿ ವಿದ್ಯುಚ್ಛಕ್ತಿ ಬೇಗ ಸಿಗುತ್ತದೆ ಎಂಬುದನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸರ್ವೆ ನಡೆಸುತ್ತಿದ್ದಾರೆ. ಆದಷ್ಟು ಬೇಗ ಅದನ್ನು ಮಾಸ್ಟರ್ ಪ್ಲಾನಿನಂತೆ ಮಾಡಲು ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೊಡುವ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

Converting of Muddebihal–Bijapur Road into an all-weather road.

Q.*—689. SRI S. M. GURADDI (Muddebihal).—

Will the Government be pleased to state :—

(*a*) whether it has come to their notice that much hardship was caused to the people as communication and transport facilities in Muddebihal taluk were cut off completely for 10-15 days during the last rainy season ;

(*b*) whether it is a fact that at that time the Taluk Congress Committee, Merchants' Association, Lawyers' Association and the

(SRI S. M. GURADDI)

M. L. A. of the above taluk had represented to the Chief Minister, Minister for Public Works to convert the Muddebihal-Bijapur road into an all-weather road ;

(*c*) if so, the action taken by them to improve the Muddebihal-Bijapur road ?

A.—Sri VEERENDRA PATIL (Minister for Public Works).—

(*a*) Yes—for 4-5 days only.

(*b*) Yes.

(*c*) The section from Bijapur to Mangoli is already taken up for improvements under NH 13 original works and work is in progress.

Further work in the section from Mangoli to Muddebihal will be taken up after the alignment is finalised.

ಶ್ರೀ ಎಸ್. ಎಂ. ಗುರೆಡ್ಡಿ.—ಕಳೆದ ಮಳೆಗಾಲದಲ್ಲಿ ಮುದ್ದೇಬಿಹಾಳ್ ಬಿಜಾಪುರ ರಸ್ತೆ ಸಂಪರ್ಕ 10-15 ದಿವಸವಿರಲಿಲ್ಲವೆಂದರೆ, 4–5 ದಿವಸ ಮಾತ್ರವಿರಲಿಲ್ಲವೆಂದಿದ್ದೀರಿ. ಅಲ್ಲಿ ಹಾಲಿ ಒಂದು ಪೈಪ್ ಹಾಕದೆ ಇರುವುದಕ್ಕೆ ಕಾರಣವೇನು ?

† Sri G. B. SHANKAR RAO (Parliamentary Secretary to the Minister for Public Works).—Because of the change in the site of the Project, this alignment had to be changed. There are a number of C.D. Nalas and crossings from this road from Bagewadi *via* Huvinal and Devibag. To provide these Nalas, an estimate has been prepared for Rs. 45,80,000 and as and when sufficient funds are available, we shall include this road and also construct C.D. Nalas on this road.

ಶ್ರೀ ಎಸ್. ಎಂ. ಗುರೆಡ್ಡಿ.-(ಸಿ) ನಲ್ಲಿ, ಎನ್-ಎಚ್ 13 ಕಾಂಗಾರಿಗಳನ್ನು ಮುಂದುವರಿಸುತ್ತಿದೆ ಎಂದು ಹೇಳಿದ್ದೀರಿ. ಬಿಜಾಪುರ—ಮಂಗೋಲಿ ವಿಭಾಗವನ್ನು ಉತ್ತಮಪಡಿಸುವುದಕ್ಕೆ ಎಷ್ಟು ಕೆಲಸಗಳನ್ನು ಹಾಲಿ ತೆಗೆದುಕೊಂಡಿದ್ದೀರಿ ?

Sri G. B. SHANKAR RAO.—The portion of the road from Bijapur to Mangoli is about 15 miles in length. It has about 13 smaller C.D. works, ten culverts, three major bridges and one major bridge at a cost of Rs. 13.72 lakhs has to be constructed for which the Government of India has given approval. Tenders have been invited and as soon as the agency is fixed, the work will be taken up.

Sri R. M. DESAI.—Answer to (c) is that the section from Bijapur to Mangoli is already taken up for improvement under National Highway No. 13 original works and work is in progress. If unfortunately this alignment is changed by the Central Government, what is the fate of the road ?

Sri G. B. SHANKAR RAO.—The road will not be abandoned. It will be there ; it will be State a Highway.

Rural indebtedness in Tumkur District.

*Q.—529. Sri K. LAKKAPPA (Hebbur).—

Will the Government be pleased to state :—

the percentage of rural indebtedness in the Tumkur District since 1962 up-to-date ?

A.—Sri RAMAKRISHNA HEGDE (Minister for Development, Panchayathi Raj and Co-operation).—

No survey has been conducted by Government.

Sri K. LAKKAPPA.—Is any Government proposal from the Department concerned pending to conduct survey in this respect ?

Sri KONDAJJI BASAPPA (Deputy Minister for Co-operation).—No proposal is pending.

ಶ್ರೀ ಕೆ. ಲಕ್ಕಪ್ಪ.—ಡಿಪಾರ್ಟಮೆಂಟಿನವರು ಈ ರೂರಲ್ ಇಂಡೆಟೆಡ್‌ನೆಸ್ ಬಗ್ಗೆ ಮಾಹಿತಿ ಸಂಗ್ರಹಿಸದೆ ಇರುವುದಕ್ಕೆ ಪ್ರಬಲವಾದ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ರೂರಲ್ ಇಂಡೆಟೆಡ್‌ನೆಸ್ ಅಂದರೆ ಬರೀ ಇಲಾಖೆ ಕೊಟ್ಟಿರುವ ಸಾಲ ಒಂದೇ ಅಲ್ಲ. ಪ್ರೈವೇಟ್ ಮನಿಲೆಂಡರುಗಳಿಂದಲೂ ರೈತ ಸಾಲ ತಂದಿರುತ್ತಾನೆ ಅಥವಾ ರೆವಿನ್ಯೂ ಇಲಾಖೆಯಿಂದ ಸಾಲ ತೆಗೆದುಕೊಂಡಿರುತ್ತಾನೆ; ಇದೂ ಅಲ್ಲದೆ ತಕಾವಿ ಮುಂತಾದ ಲೋನುಗಳಿರುತ್ತವೆ. ಇವೆಲ್ಲವುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕೆಂದರೆ, ಪ್ರತಿ ಗ್ರಾಮಕ್ಕೂ ಹೋಗಬೇಕಾಗುತ್ತದೆ. ಕಾಲ ಹೆಚ್ಚು ಬೇಕಾಗುತ್ತದೆ. ಇದುವರೆಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ, ಸಂದರ್ಭ ಬಂದರೆ ತೆಗೆದುಕೊಳ್ಳುತ್ತಾರೆ. It requires a very big and huge machinery.

ಶ್ರೀ ಎಚ್. ಡಿ. ದೇವೇಗೌಡ.—ಈ ರೂರಲ್ ಇಂಡೆಟೆಡ್‌ನೆಸ್ ಬಗ್ಗೆ ಯಾವುದಾದರೂ ಒಂದು ತಾಲ್ಲೂಕನ್ನು, ಪೈಲೆಟ್ ಸ್ಕೀಮು ದೃಷ್ಟಿಯಿಂದ ತೆಗೆದುಕೊಂಡು, ಹಳ್ಳಿಗಾಡಿನ ರೈತನ ಆರ್ಥಿಕ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂದು ಸರ್ವೆ ಮಾಡುತ್ತೀರೊ ? Will the Government give the up-to-date figure ?

Sri KONDAJJI BASAPPA.—It is a suggestion for consideration.

SHORT NOTICE QUESTION AND ANSWER.

Q.—35. Sri S. RAJAGOPAL (K.G.F.).—

Will the Government be pleased to state :—

(a) whether it is a fact that the detenus (Communists) in the Bangalore Central Jail represented to Government that they are not getting proper food and not supplied with magazines and more than one interviews to their families ;

(b) whether it is a fact that they had also referred that their families may be granted family allowance ;

(c) whether it is a fact that the detenus have resorted to hunger strike from 9th April 1965 as the above demands are not conceded ;

(d) the decision taken by them in this behalf ?

A.—Sri B. D. JATTI (Minister for Finance) [on behalf of Sri R. M. Patil (Minister for Home)].—

(*a*) Yes.

(*b*) Yes.

(*c*) Yes, but the hunger strike was discontinued from 11-4-1965.

(*d*) The representation of the detenus is under consideration of the Government.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ಜೈಲಿನಲ್ಲಿರುವಂಥ ಕಮ್ಯೂನಿಸ್ಟರಿಂದ ಬಂದಿರುವ ಮನವಿಗಳು ಕನ್ಸಿಡರೇಷನ್ನಿನಲ್ಲಿ ಇವೆ ಎಂದು ಹೇಳಿದ್ದೀರಿ. ಈ ಕನ್ಸಿಡರೇಷನ್ ಎಷ್ಟು ದಿವಸ ಮಾಡುತ್ತೀರಿ? ಮನವಿಯಲ್ಲಿ ಕೇಳಿರುವುದನ್ನು ತಾವು ಮಾಡಿಕೊಟ್ಟಿದ್ದೀರೋ ?

Sri B. D. JATTI.—Sir, they have represented on different occasions and all the representations have been considered and necessary action has been taken as per rules.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಉಪವಾಸ ನಿಲ್ಲಿಸಿದ್ದಾರೆಂದು ಹೇಳಿದ್ದೀರಿ. ಅವರು ಉಪವಾಸ ನಿಲ್ಲಿಸುವಾಗ ಭರವಸೆ ಕೊಟ್ಟಿದ್ದಿರೊ, ಅವರು ಕೇಳಿದಂಥ ಕೆಲವಾರು ಮನವಿಗಳನ್ನು ಈಡೇರಿಸಿಕೊಡುತ್ತೇವೆಂದು ?

Sri B. D. JATTI.—Sir, whatever can be done by the Government according to rules, has been done. They started hunger strike and they have stopped on their own accord, not on the assurance of the Government.

Sri S. M. KRISHNA.—Has the Central Government given certain set of directions as to how these detenus have to be treated when they are in custody ?

Sri B. D. JATTI.—As per rules which are in force in this State we are giving all the relief.

ಶ್ರೀ ಸಿ. ಆರ್. ರಂಗೇಗೌಡ.—ರಾಜಕೀಯ ಸಂತ್ರಸ್ತರಾಗಿದ್ದು, ತಮಗೆ ಜೈಲಿನಲ್ಲಿದ್ದು ಅದರ ಅನುಭವವಿದ್ದರೆ, ಅಲ್ಲಿಯ ಕಿರುಕುಳಗಳೇನು ಎಂದು ತಿಳಿದುಕೊಂಡು, ಎಚ್ಚೆತ್ತುಕೊಂಡು, ರಾಜಕೀಯ ಬಂದಿಗಳಾಗಿರುವವರಿಗೆ ಸೂಕ್ತ ವ್ಯವಸ್ಥೆ ಮಾಡಲು ಸರಿಹೋಗುತ್ತದೆ ಅಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ಈಗ ಕಿರುಕುಳವಿಲ್ಲ ; ಹೆಚ್ಚಾಗಿ ಅನುಕೂಲವಾಗಿದೆ.

Sri SANJEEVANATH AIKALA.—How many detenus undertook the fast and to which political party they belong ?

Sri B. D. JATTI.—I do not know the political parties, but the total number is seven.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ಅವರು ಕೇಳಿರುವುದು ಬಹಳ simple request. ಇಂಟರ್‌ವ್ಯೂಗಳನ್ನು, ತಿಂಗಳಿಗೊಮ್ಮೆ ಬಿಟ್ಟು, ವಾರಕ್ಕೊಮ್ಮೆ ಕೊಡಿ, ಆಹಾರ ಸರಿಯಾಗಿಲ್ಲ, ಬೆಡ್ಡಿಂಗ್ ಸರಿಯಾಗಿ ಒದಗಿಸಿಕೊಡಿ ಎಂದು ಹೇಳಿದ್ದಾರೆ. ಮನುಷ್ಯ ದೃಷ್ಟಿಯಿಂದ ರಾಜಕೀಯ ಸಂತ್ರಸ್ತರಿಗೆ ಅವುಗಳನ್ನು ಒದಗಿಸಿಕೊಡುವುದಕ್ಕೆ ಹಿಂಜರಿಯಬಹುದೆ ?

Sri B. D. JATTI.—Sir, regarding clothing, there is a scale prescribed, and as per the scale clothing is given. Regarding bedding for both men and women, there is a scale prescribed and according to that scale bedding is given. Scale of diet, both vegetarian and non-vegetarian to Class I and Class II detenus is prescribed and the same was supplied according to rules.

ಶ್ರೀ ಎಸ್. ಗೋಪಾಲ ಗೌಡ.—ಸ್ಥಾನಬದ್ಧತೆಯಲ್ಲಿರುವ ಖೈದಿಗಳು ತಮ್ಮ ಕುಟುಂಬಕ್ಕೆ ಏನಾದರೂ ಪರಿಹಾರ ವೇತನ ಕೊಡಬೇಕೆಂದು ಸರಕಾರವನ್ನು ಕೇಳಿದ್ದಾರೊ ?

Sri B. D. JATTI.—Yes, Sir.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ತರಹ ಇರ್‌-ಟ್ರೀಟ್‌ಮೆಂಟಿಗೆ ಕಾರಣ, ತುರಂಗ ವಾಸದ ಅನುಭವವಿಲ್ಲದಿರುವ ಮಂತ್ರಿಗಳಿಗೆ ಈ ಪೋರ್ಟ್‌ಫೋಲಿಯೊ ಕೊಟ್ಟಿರುವುದಲ್ಲವೇ ? ಆ ಕಾರಣ ಇದಕ್ಕೆ ಅವಕಾಶ ಕೊಟ್ಟಿದೆಯಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ತಾವು ಕೇಳುವಂಥ ಪ್ರಶ್ನೆ ಸರಿಯಲ್ಲ.

ಶ್ರೀ ಸಂಜೀವನಾಥ ಐಕಳ.—ಸ್ಥಾನಬದ್ಧತೆಯಲ್ಲಿರುವ ಖೈದಿಗಳು ಫ್ಯಾಮಿಲಿ ಅಲೊಯನ್ಸ್ ಕೇಳಿದ್ದಾರೆ. ಕೇಳಿದ ಕೂಡಲೆ ಅದನ್ನು ಕೊಡಬೇಕೆಂದು ಡಿಫೆನ್ಸ್ ಆಫ್ ಇಂಡಿಯ ರೂಲ್ಸನಲ್ಲಿದೆ. ಅದನ್ನು ಕೊಡುವುದು ಬಹಳ ತಡ ಮಾಡಿದ್ದರಿಂದ, ಹಿಂದೆ ಜೈಲಿನಲ್ಲಿದ್ದು ಬಿಡುಗಡೆಯಾದವರಿಗೆ ಸಿಕ್ಕಿಲ್ಲ. ಅಂಥವರಿಗೆ ಸಲ್ಲಬೇಕಾದ ಅಲೊಯನ್ಸ್‌ನ್ನು ಅವರಿಗೆ ಈಗಲೂ ಕೊಡುವುದಕ್ಕೆ ಸಾಧ್ಯವಿಲ್ಲವೇ ?

Sri B. D. JATTI.—Government have already asked the detenus to submit individual representations for consideration and the cases will be decided on merits.

ಶ್ರೀ ಎಸ್. ಗೋಪಾಲ ಗೌಡ.—ಸ್ಥಾನಬದ್ಧತೆಯಲ್ಲಿರುವ ಖೈದಿಗಳು ಡಿಫೆನ್ಸ್ ಆಫ್ ಇಂಡಿಯ ರೂರ್ಸ್ ಪ್ರಕಾರ ಇದ್ದಾರೆ, ಇವರನ್ನು ಕೇಂದ್ರ ಸರಕಾರದ ಗೃಹಶಾಖೆ ನಿರ್ದೇಶನದ ಪ್ರಕಾರ ಬಂಧಿಸಲ್ಪಟ್ಟಿದೆಯೊ ಅಥವಾ ಮೈಸೂರು ಸರಕಾರದವರು ತಮ್ಮ ಇಷ್ಟದ ಪ್ರಕಾರ ಬಂಧಿಸಿ ಜೈಲಿನಲ್ಲಿಟ್ಟಿದ್ದಾರೊ ?

Sri B. D. JATTI.—Under the Defence of India Rules.

Sri S. M. KRISHNA.—It is stated in the answer that the representation of the detenus is under consideration of the Government. Would the Government say when the representation was received and what are the contents of the representation ?

Sri B. D. JATTI.—Representations have been given on different dates. If the Hon'ble Member wants the dates, I can give the dates. The detenus demanded for additional facilities and made a representation on 27th January 1965 and before that also they represented. Again they reminded the Government on 16th February 1965. They have submitted another application to Government on 8th March 1965 and on 22nd March 1965 they have made another representation that they have postponed their hunger strike by another 15 days. Again they have represented on 31st March 1965. On 7th April 1965 they gave a letter that if their demands were not immediately dealt with they will go on hunger strike with effect from 9th April 1965. On 9th April 1965 they started their hunger strike and the report was submitted to Government the same day. They continued till 11th April 1965 and broke their hunger strike on 11th April 1965.

Sri S. M. KRISHNA.—Is it not proper for the Government to take immediate decision without any delay on the representations made by the detenus ?

Sri B. D. JATTI.—There is no delay. Whatever action is to be taken has been taken. Every representation of the detenus has been considered.

Sri S. M. KRISHNA.—What is the point in saying that some representations are being considered and what is it the Government is considering ?

Sri B. D. JATTI.—It pertains to family allowance. Each representation has to be considered separately and they are under consideration.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ತಾವು ಕನ್‌ಸಿಡರೇಷನ್ನಲ್ಲಿದೆ ಎಂದು ಹೇಳುತ್ತಿದ್ದೀರಿ. ಅವರಿಗೆ ಏನೇನು ಸೌಕರ್ಯಗಳನ್ನು ಕೊಡಬೇಕೋ ಅದನ್ನು ರೂಲ್ಸು ಪ್ರಕಾರ ಕೊಡುತ್ತಿದ್ದೇವೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ಆ ರೀತಿ ಕೊಡುತ್ತಿಲ್ಲ ಎಂದು ರೆಪ್ರಸೆಂಟೇಷನ್ನು ಕೊಟ್ಟು ಕೊನೆಗೆ ಹಂಗರ್ ಸ್ಟ್ರೈಕ್ ಮಾಡಿರುವುದರಿಂದ ಸರಕಾರ ಈಗಲಾದರೂ ಸಹಾನುಭೂತಿಯಿಂದ ಪರಿಶೀಲನೆ ಮಾಡಲು ಏನು ಆತಂಕವಿದೆ ?

ಶ್ರೀ ಬಿ. ಡಿ. ಜತ್ತಿ.—ಬೇಡಿದಷ್ಟು ಕೊಡುವುದಕ್ಕೆ ಆಗುವುದಿಲ್ಲ. ಕೊಡತಕ್ಕದ್ದು ಎಷ್ಟು ಎಂದು ನಿಗದಿ ಮಾಡಲಾಗಿದೆಯೋ ಅಷ್ಟನ್ನೂ ಕೊಡಲಾಗುತ್ತಿದೆ.

Sri V. M. DEO.—He is a Minister and I am a legislator. The point is, you must always have proper regard for the treatment of members. Before the Revenue Minister went the Finance Minister said to him: "You go, we will pass." and now the Revenue Minister says that what he said is all right. Should he not have any regard for the House? There is a limit to which any Minister can got. The seriousness which you, Sir, attach to these things is not there with the Ministers and that makes us look very small. I always respect decency more than anything else. I have the greatest respect for the Finance Minister, but when once I get a slight doubt, it becomes difficult and it impairs the honour of this House. However, even now I would like to say one thing, let the Finance Minister re-state what he stated and let the Revenue Minister say that he agrees with it. Then we will all be satisfied.

Mr. SPEAKER.—The entire trouble arose this way. When I called upon the Minister for Revenue asking whether he has got anything to say in support, the Finance Minister said that it is so plain that there is nothing more to say. Does not the Hon'ble Minister for Revenue agree with it?

Sri M. V. KRISHNAPPA.—Certainly.

Mr. SPEAKER.—Then what is all this fuss about? I am there to protect the honour of this House and I will see that the honour and dignity of this House is not lowered under any circumstraces.

Sri V. M. DEO.—Thank you, Sir, for having dealt with the matter very discreetly. I take my hat off to you.

Sri S. M. KRISHNA.—At this time I would like to make a submission. We have been sitting from 8-30 in the morning without a break and it is now 12-30. Now it is the wish of many members that we should adjourn.

Mr. SPEAKER.—Shall we re-assemble after half an hour?

Sri S. M. KRISHNA.—Not today. We can take it up later.

Mr. SPEAKER.—The desire of the House expressed to me by members individually and collectively was that we must all go home finishing the work today and therefore we adjourned certain other work. I did not even permit the non-official business on that ground. If we are going to adjourn now without finishing the business, where was the point in rushing through? We passed the Bill and accommodated the Government by passing it early, then it was taken to the Council and hurriedly passed and sent to the Governor and the Governor gave his assent and it was published. That was done for the purpose of closing this business today. I very well appreciate that we have been sitting from 8-30 A.M. in the morning. I am agreeable for a short interval.

Sri M. V. KRISHNAPPA.—In the other House the whole of the business today is my business and it is meeting from 2-15. Before that we must finish it here. There is nothing much left and I think it can be passed now itself.

Mr. SPEAKER.—We can have half an hour's break because we did not have even the tea break.

ಶ್ರೀ ಎಸ್. ಗೋಪಾಲಗೌಡ.—ಈಗ ಇದನ್ನು ಮಾಡಲು ಸಾಧ್ಯವಾಗದೇ ಹೋದರೆ ಇದರ ಬಗ್ಗೆ ಒಂದು ಸ್ಪೆಷಲ್ ಸೆಷನ್ನನ್ನಾದರೂ ಕರೆದು ಆಗ ವಿಚಾರ ಮಾಡುವುದು ಒಳ್ಳೆಯದು ಎಂದು ನನಗನಿಸುತ್ತದೆ.

Mr. SPEAKER.—If the House desires I have no objection to a break of half-an-hour or even one hour.

HON'BLE MEMBERS.—One hour.

Mr. SPEAKER.—Then the House will now adjourn and meet at 1-30 P.M.

The House adjourned at Thirty Minutes past Twelve of the Clock and re-assembled at Forty Minutes past One of the Clock.

[MR. SPEAKER in the Chair]

Mr. SPEAKER.—Please send words to members who are in the lounge and those who are desirous of participating in the debate may come.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಸ್ವಾಮಿ, ಸಭೆಯಲ್ಲಿ ಕೋರಂ ಇರುವುದಿಲ್ಲ. (ಹಾಗೆ ಹೇಳಿದ ನಂತರ ಸಭೆಯಲ್ಲಿದ್ದ ಸದಸ್ಯರುಗಳನ್ನು ಎಣಿಸುವುದಕ್ಕೆ ಪ್ರಯತ್ನ ಮಾಡಿ ಈಗೀಗ ಸದಸ್ಯರು ಬರುತ್ತಿರುವುದರಿಂದ ಈಗ ಕೋರಂ ಭರ್ತಿ ಆಯಿತು ಎಂಬುದಾಗಿ ಹೇಳಿದರು)

Mr. SPEAKER.—The Hon'ble Member must not mislead me. Sri H. D. Deve Gowda, will speak.

Sri K. LAKKAPPA.—ಸ್ವಾಮಿ, ಈಗ ನಾನು ಒಂದು ಆಬ್‌ಜೆಕ್ಷನ್ನನ್ನು ತಮ್ಮ ಗಮನಕ್ಕೆ ತರಲು ತಮ್ಮ ಪರಿಮಿಷನ್ನು ನಾನು ಕೇಳುತ್ತಿದ್ದೇನೆ......

ಅಧ್ಯಕ್ಷರು.—ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಈಲ್ಡ್ ಆದರೆ... ..

(ಮಾನ್ಯ ದೇವೇಗೌಡರು ಮಾತನಾಡುವುದಕ್ಕೆ ನಿಂತಿದ್ದರು......)

The rules provide that if the member who is on his legs yields he can ask.

Sri K. LAKKAPPA.—If the Hon'ble Member yields.

ಅಧ್ಯಕ್ಷರು.—ಮಾತನಾಡತಕ್ಕ ಸದಸ್ಯರಿಗೆ ನಿಮ್ಮ ಭಾಷಣವನ್ನು ನಿಲ್ಲಿಸಿ ಅಂತ ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ......(ಶ್ರೀ ದೇವೇಗೌಡರು ಕುಳಿತುಕೊಂಡರು.)

ಶ್ರೀ ಕೆ. ಲಕ್ಕಪ್ಪ.—ಈಗ ಸಭೆಯ ಮುಂದೆ ತಂದಿರತಕ್ಕ ರೆಸಲ್ಯೂಷನ್ ಏನಿದೆ ಅದು ನಾಳೆ ರೈತರ ಮೇಲೆ ಒಂದು ದೊಡ್ಡ ಅಪಘಾತವನ್ನುಂಟುಮಾಡತಕ್ಕ......

Mr. SPEAKER.—The Hon'ble Member will kindly resume his seat.

ಶ್ರೀ ಕೆ. ಲಕ್ಕಪ್ಪ.—ಇದು ರೈತರ ಮೇಲೆ......

ಅಧ್ಯಕ್ಷರು.—ಏನು ಮೇಲೆ, ಕೆಳಗೆ ......?

ಶ್ರೀ ಕೆ. ಲಕ್ಕಪ್ಪ.—ನಾನು ತಮ್ಮ ಅನುಮತಿಯನ್ನು ಪಡೆದು ನಮ್ರತೆಯಿಂದ ಸರ್ಕಾರದವರು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಹಾಗೆ ಇದನ್ನು ವಾಪಸ್ಸು ತೆಗೆದುಕೊಳ್ಳದೆ ಹೋದರೆ ಅವರು ಮಂಡಿಸಿರತಕ್ಕ ರೆಸಲ್ಯೂಷನ್ನನ್ನು ಚರ್ಚೆ ಮಾಡಲು ನಾನು ಇಲ್ಲಿ ಅವಕಾಶ ಕೊಡದೆ ಇರತಕ್ಕ ರೀತಿಯಲ್ಲಿ ವರ್ತಿಸಬೇಕಾಗಿದೆ, ಅದಕ್ಕೆ ತಮ್ಮ ಪರ್ಮಿಷನ್ ಬೇಕಾಗಿದೆ, ಕೇಳುತ್ತಿದ್ದೇನೆ.

Mr. SPEAKER.—My only permission is, for the member to retire from the House if he wants. That is the invitation from me.

Sri K. LAKKAPPA.—Democracy requires......ತಮಲ್ಲಿ ನಾನು......

Mr. SPEAKER.—I am protecting democracy.

ಶ್ರೀ ಕೆ. ಲಕ್ಕಪ್ಪ.—ನಾನು ತಮ್ಮಲ್ಲಿ ನಮ್ರತೆಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ, ಇದರಿಂದ ಮುಂದೆ ಬಹಳ ತೊಂದರೆಗೆ ರೈತರು ಗುರಿಯಾಗು......

Mr. SPEAKER.—Order, order.

Sri K. LAKKAPPA.—They should hear.

Mr. SPEAKER.—Order, order. Does not the Hon'ble Member know what he is doing when I call him to order ? He must sit whatever may be the feelings on the occasion. He spoke something... The Hon'ble member will adhere to the rules very strictly.

ಶ್ರೀ ಕೆ. ಲಕ್ಕಪ್ಪ.—ಈ ಪ್ರಜಾಪ್ರಭುತ್ವದಲ್ಲಿ ಎಷ್ಟರಮಟ್ಟಿಗೆ...ಸ್ವಾಮಿ, ನಾನು ತಮ್ಮಲ್ಲಿ ಒಂದು ವಿಷಯವನ್ನು ಅರಿಕೆಮಾಡಿಕೊಳ್ಳಬೇಕಾಗಿದೆ. ಅದಕ್ಕೆ ತಾವು ನನಗೆ ಅಪ್ಪಣೆಕೊಡಬೇಕು...

Mr. SPEAKER.—Order, order.

(The Hon'ble Member continued to interrupt).

Mr. SPEAKER.—Order, order, What is the matter ?

Sri M. V. KRISHNAPPA.—He wants publicity.

Mr. SPEAKER.—Order, order.

Sri K. LAKKAPPA.—What is that publicity. He is making an insinuation.

Mr. SPEAKER.—Does the Hon'ble Member know rules ? Or should I enforce rules ? The member will retire from the House for behaving like this. Will the member withdraw ? I will give him two minutes.

ಶ್ರೀ ಕೆ. ಲಕ್ಕಪ್ಪ.—ತಾವು ಹೀಗೆ ಹೇಳಿದರೆ ಈ ಅಸೆಂಬ್ಲಿಯಲ್ಲಿ ನಾವು ಸದಸ್ಯರಾಗಿ ಇರಬೇಕೇ ಬೇಡವೇ......

Mr. SPEAKER.—The member will withdraw from the House.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಇದನ್ನು ವಾಪಸ್ಸು ತೆಗೆದುಕೊಂಡರೆ ನಾನು ಯಾವ ಪ್ರತಿಭಟನೆಯನ್ನೂ ಮಾಡುವುದಿಲ್ಲ. ಇಲ್ಲವಾ......

Mr. SPEAKER.—Second time. Does the member withdraw or not ?

ಶ್ರೀ ಕೆ. ಲಕ್ಕಪ್ಪ.—ನಾನು ತಮ್ಮಲ್ಲಿ ಕೊನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ......

Mr. SPEAKER.—Does the Hon'ble member know what he is doing. He will retire from the House in two minutes. If he does not come out, I know how to enforce it ?

ಶ್ರೀ ಕೆ. ಲಕ್ಕಪ್ಪ.—ನನ್ನ ಆಬ್‌ಜೆಕ್ಷನ್ ಏನೂ ಇಲ್ಲ. ತಾವು ನನ್ನ ಪ್ರಾರ್ಥನೆಯನ್ನು ತಮ್ಮ ಅವಗಾಹನೆಗೆ ತೆಗೆದುಕೊಳ್ಳಿ......

Mr. SPEAKER.—Order, order. Now the House knows how the member has behaved. I asked him to retire; he does not. He does not go out of the House. I asked him to retire from the House. If he does not go out, the Marshall will be called and will be asked to take him out bodily from the House.

ಶ್ರೀ ಕೆ. ಲಕ್ಕಪ್ಪ.—ನಾನು ಹೋಗುವುದಕ್ಕೆ ಸಿದ್ಧವಾಗಿದ್ದೇನೆ. ...ಆದರೆ......

Mr. SPEAKER.—Order, order.

(At this stage the Marshall of the House was sent for.)

Mr. SPEAKER.—If the member does not go out, he will be taken out bodily; he will not come into the House for the day.

Sri K. LAKKAPPA.—I obey the Chair......

Mr. SPEAKER.—First he should obey. If the Hon'ble member speaks one word more he will have to take the consequences.

(At this stage the member withdrew from the House).

Mr. SPEAKER.—After all there must be some decency and limit. By simply talking like this, it serves no purpose. If the member can not behave properly he will get in only when he learns to behave. Sri H. D. Deve Gowda, will speak.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ ಈಗ ಸಭೆಯ ಮುಂದೆ ಮಂಡಿಸಿರತಕ್ಕ ಸರ್ವೆ ಮತ್ತು ಸೆಟಲ್‌ಮೆಂಟ್ ರಿಪೋರ್ಟನ್ನೂ ಮತ್ತು ಅದಕ್ಕೆ ಅನುಗುಣವಾಗಿ ಮಂತ್ರಿಗಳು ತಂದಿರತಕ್ಕ ತಿದ್ದುಪಡಿಗಳನ್ನೂ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಹೀಗೆ ನನ್ನ ವಿರೋಧವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ನಾನು ಒಂದು ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಹಿಂದೆ ಲ್ಯಾಂಡ್‌ರಿಫಾರಂಸ್ ಬಿಲ್ಲನ್ನು ಪಾಸ್‌ಮಾಡಿಸತಕ್ಕ ಕಾಲದಲ್ಲಿ ಮಾನ್ಯ ಸಚಿವರು ಕೆಲವು ಆಶ್ವಾಸನೆಗಳನ್ನು ಕೊಡುತ್ತಾ ರೈತನಿಗೆ ಬರತಕ್ಕ ಆದಾಯದಲ್ಲಿ ಶೇಕಡ 4ರಷ್ಟನ್ನು ಸರ್ಕಾರಕ್ಕೆ ಕಂದಾಯದ ರೂಪದಲ್ಲಿ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದರು. ಕೊನೆಯದಾಗಿ, ಮಾನ್ಯ ಸಚಿವರು ರೈತರಿಗೆ ಉತ್ತರೋತ್ತರ ಇದರಿಂದ ಎಷ್ಟರಮಟ್ಟಿನ ಪರಿಣಾಮವಾಗುತ್ತದೆ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. 1947 ರಿಂದೀಚೆಗೆ ಇಲ್ಲಿ ಪ್ರಜಾಪ್ರಭುತ್ವ ರಾಜ್ಯ ಸ್ಥಾಪನೆಯಾದಮೇಲೆ ಇಲ್ಲಿಯವರೆಗೂ ಯಾವ ಒಂದು ಬಿಲ್ಲಾಗಲೀ ಈ ಸಭೆಯಲ್ಲಿ ಪಾಸಾದ 12 ಗಂಟೆಗಳಲ್ಲಿ ಅಸೆಂಟನ್ನು ಪಡೆದು ಆ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದುದನ್ನು ನಾನು ನೋಡಿಲ್ಲ.........

ರೈತನ ಮೇಲೆ ಕರಭಾರವನ್ನು ಹೊರಿಸತಕ್ಕ ಈ ಒಂದು ಸನ್ನಿವೇಶ ಬಂದು ಕೇವಲ 12 ಗಂಟೆಯೊಳಗೆ ಈ ಸಭೆಯಲ್ಲಿ ಪಾಸ್ ಮಾಡಿದಂತಹ ಬಿಲ್ಲನ್ನು ಈಗ ಈ ರೂಪವಾಗಿ ತಂದು ಇಷ್ಟೊಂದು ತ್ವರಿತವಾಗಿ ಮಾಡುವ ಔಚಿತ್ಯ ಏನಿತ್ತು ಎಂಬುದು ಅರ್ಥವಾಗುವುದಿಲ್ಲ. ಕಾನೂನು ಆಗುತ್ತದೆ, ಆದ್ದರಿಂದ ಈ ಒಂದು ನಿರ್ಣಯವನ್ನು ಪಾಸ್ ಮಾಡಬೇಕು ಎಂಬ ಒಂದೇ ಒಂದು ದೊಡ್ಡ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದೀರಿ. ಆದರೆ ಇದರಿಂದ ಎಷ್ಟುಮಟ್ಟಿಗೆ ರೈತನಿಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಈ ಸಭೆಗೆ ಇವತ್ತು ಮಾನ್ಯ ಸಚಿವರು ಒದಗಿಸಿರತಕ್ಕ ಅಂಕಿ ಅಂಶಗಳ ಪ್ರಕಾರ ನೋಡಿದ್ದೇ ಆದರೆ ರೇನ್‌ಫೆಡ್ ಗಾರ್ಡನ್‌ಗೆ 7 ಲಕ್ಷದ 928 ರೂಪಾಯಿ ಈಗ ಅಸೆಸ್‌ಮೆಂಟ್ ಇದೆ. ನಿನ್ನೆ ರೆವಿನ್ಯೂ ಕೋಡ್ ತಿದ್ದುಪಡಿ ಮಾಡಿರುವುದರ ಪ್ರಕಾರ ಬರುವ ಕಂದಾಯ ಏನಾಗುತ್ತದೆ ಎಂದರೆ ಅದು 23 ಲಕ್ಷದ 35 ಸಾವಿರದ 436 ರೂಪಾಯಿ ಆಗುತ್ತದೆ. ನಿಮ್ಮ ಅಂಕಿ ಅಂಶದ ಪ್ರಕಾರ ಎಷ್ಟು ಪರ್ಸೆಂಟ್ ಜಾಸ್ತಿಯಾಗುತ್ತದೆ ಎಂಬುದನ್ನು ತಾವೇ ಹೇಳಬೇಕು. 7 ಲಕ್ಷ ಚಿಲ್ಲರೆ

ಇದ್ದುದ್ದು 23 ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಹೋದರೆ ಒಂದಕ್ಕೆ ಮೂರೂವರೆಯಷ್ಟು ಜಾಸ್ತಿಯಾಗುತ್ತದೆ ಎಂಬುದನ್ನು ಮಾನ್ಯ ಸಚಿವರೇ ಒಪ್ಪಿಕೊಳ್ಳುತ್ತಾರೆ ಎಂದು ಅವರೇ ಕೊಟ್ಟಂಥ ಅಂಕಿಅಂಶದಲ್ಲಿ ದೃಢ ಪಡಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅವತ್ತು ಒಂದು ರೂಪಾಯಿ ಇದ್ದರೆ 1-20 ರೂಪಾಯಿ ಕೊಡಬಹುದು ಅಥವಾ ಒಂದೂವರೆ ರೂಪಾಯಿ ಕೊಡಬೇಕಾಗಬಹುದು ಎಂದು ಹೇಳಿದ್ದಾರೆ. ಇದರ ಪ್ರಕಾರ 300 ಪರ್ಸೆಂಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಯಾವ ಒಂದು ತಿದ್ದುಪಡಿಯನ್ನು ತಂದು ಆರೂಕಾಲು ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟಿಗೆ ಇಳಿಸಿದ್ದೇವೆ ಎಂದು ಹೇಳುತ್ತಾರೆ, ಅದರಿಂದ ರೈತನು ನೆಮ್ಮದಿಯಾಗಿ ಇರುವುದಕ್ಕೆ ಸಾಧ್ಯವಾಗುತ್ತದೆಯೇ ಅವನಿಗೆ ಸೌಲತ್ತು ದೊರೆಯುತ್ತದೆಯೇ ಎಂದರೆ ಖಂಡಿತವಾಗಿಯೂ ಇಲ್ಲ ಎಂಬುದನ್ನು ಇದರಿಂದಲೇ ಧೃಢಪಡಿಸಲು ಇಚ್ಛೆಪಡುತ್ತೇನೆ. ಮೊನ್ನೆ ದಿವಸ ಇದನ್ನು ತಮ್ಮ ಹತ್ತಿರ ಚರ್ಚೆ ಮಾಡಿದ ಕಾಲದಲ್ಲಿ ಒಂದು ವಿಷಯವನ್ನು ಹೇಳಿದಿರಿ. ಹಾಸನ ಜಿಲ್ಲೆಯಲ್ಲಿ ಈಗಾಗಲೇ ಹೆಚ್ಚು ಕಂದಾಯವನ್ನು ಕೊಡುತ್ತಾ ಇದ್ದಾರೆ. ಈ ಸರ್ವೆ ಸೆಟ್ಲಮೆಂಟ್ ರಿಪೋರ್ಟ್ ಪ್ರಕಾರ ಮಾಡಿದ್ದೇ ಆದರೆ ಒಂದು ರೂಪಾಯಿ ಕೊಡತಕ್ಕವನು 1-30 ರೂಪಾಯಿ ಕೊಡಬೇಕಾಗುತ್ತದೆ. 130 ಪರ್ಸೆಂಟ್ ಹೆಚ್ಚು ತೆರಿಗೆಯನ್ನು ಕೊಟ್ಟಂತೆ ಆಗುತ್ತದೆ. ಇದು ತೋಟಗಳಿಗೆ ಅನ್ವಯಿಸುತ್ತದೆ. ನಿನ್ನೆ ತಿದ್ದುಪಡಿ ಮಾಡಿರತಕ್ಕ ಮಸೂದೆಯ ಪ್ರಕಾರ 4 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದರೆ, ನಮ್ಮ ಜೋನ್‌ನಲ್ಲಿ 4 ಲಕ್ಷ 36 ಸಾವಿರ ರೂಪಾಯಿ ಇದ್ದುದ್ದು 6 ಲಕ್ಷ ರೂಪಾಯಿ ಆಗುತ್ತದೆ. ಎಂದರೆ 38 ಪರ್ಸೆಂಟ್ ಜಾಸ್ತಿಯಾದಂತೆ ಆಯಿತು. ಜೋನ್ ಪ್ರಕಾರ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಸರ್ವೇ ಸೆಟ್ಲಮೆಂಟ್ ರಿಪೋರ್ಟಿನ 70ನೇ ಪುಟದಲ್ಲಿ ಕೊಟ್ಟಿರುವ ಕೆಲವು ಹಳ್ಳಿಗಳನ್ನು ತೆಗೆದುಕೊಂಡು ಲೆಕ್ಕಾಚಾರ ಹಾಕಿದರೆ ಎಷ್ಟು ಪರ್ಸೆಂಟ್ ಜಾಸ್ತಿಯಾಗುತ್ತದೆ ಎಂಬುದನ್ನು ಕೊಟ್ಟಿದ್ದೀರಾ ? ತಾಲ್ಲೂಕು ಫಿಗರ್ಸ್ ಕೊಟ್ಟಿದ್ದೀರಾ ಎಂದು ಹೇಳಿ ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡಬಯಸುತ್ತೇನೆ. ಐನ್ ಕಂದಾಯವನ್ನು ಈ ರೀತಿಯಾಗಿ ಏರಿಸುತ್ತಾ ಇರುವಾಗ ತಾಲ್ಲೂಕು ಬೋರ್ಡಿನವರು, ಜಿಲ್ಲಾಪರಿಷತ್ತಿನವರು ಹಾಕತಕ್ಕ ಎಜ್ಯುಕೇಷನ್ ಸೆಸ್, ಹೆಲ್ತ್ ಸೆಸ್ ಇದನ್ನೆಲ್ಲಾ ಸೇರಿಸಿದರೆ ಈಗ ತಾವು ಹಾಕಿರುವುದು ಒಂದಕ್ಕೆ ಎಂಟು ಪಟ್ಟು ಜಾಸ್ತಿಯಾಗುತ್ತದೆ ಎಂದು ಹೇಳಿ ಲೆಕ್ಕಾಚಾರ ಹಾಕಿ ಬೇಕಾದರೆ, ತಮಗೆ ಸಮರ್ಥನೆ ಮಾಡಿಕೊಡುತ್ತೇನೆ. ತರೀ ಕಂದಾಯ 8 ರೂಪಾಯಿ 80 ಪೈಸೆ ಇದ್ದುದ್ದು 12 ರೂಪಾಯಿ 40 ಪೈಸೆ ಆಗುತ್ತದೆ. ಅದಕ್ಕೆ ನಿಮ್ಮ ಸೆಸ್, ವಾಟರ್ ರೇಟ್, ಮೆನ್‌ಟೆನೆನ್ಸ್ ಚಾರ್ಜಸ್ ಇದನ್ನೆಲ್ಲಾ ಸೇರಿಸಿದರೆ ಒಂದು ಎಕರೆಗೆ 40 ರೂಪಾಯಿ ಆಗುತ್ತದೆ. ಒಟ್ಟಿನಲ್ಲಿ ಅಷ್ಟು ಕೊಡಬೇಕಾಗುತ್ತದೆ. 8 ರೂಪಾಯಿ ಕೊಡತಕ್ಕ ರೈತನಮೇಲೆ ಎಲ್ಲಾ ತೆರಿಗೆಗಳನ್ನೂ ಹಾಕಿ ಅವನು 40 ರೂಪಾಯಿಗಳನ್ನು ಕೊಡಬೇಕೆಂದು ಹೇಳುವುದಾದರೆ ಅದು ಒಂದಕ್ಕೆ 5ರಷ್ಟು ಪ್ರಮಾಣದಲ್ಲಿ ಜಾಸ್ತಿಯಾದ ಹಾಗೆ ಆಯಿತು. ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾರೆ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ನಿನ್ನೆ ದಿವಸ ಹೇಳಿದರು, ಈ ವಿಷಯದಲ್ಲಿ ಸರ್ಕಾರದವರ ನೇರವಾದ ಧೋರಣೆ ಏನಿದೆ ಎಂಬುದನ್ನು ಹೇಳಬೇಕು. ಐನ್ ಕಂದಾಯದ ಜೊತೆಗೆ ತಾವು ಇತರ ಆಕ್ಟ್‌ಗಳ ಪ್ರಕಾರ ಹಾಕತಕ್ಕ ಸೆಸ್ ಮುಂತಾದುವುಗಳನ್ನೆಲ್ಲಾ ಸೇರಿಸಿದರೆ ಈ ಪ್ರಮಾಣ ಎಷ್ಟಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಚನ್ನರಾಯಪಟ್ಟಣದಲ್ಲಿ 400 ಪರ್ಸೆಂಟ್ ಜಾಸ್ತಿಯಾಗುತ್ತದೆ. ಅರಸೀಕೆರೆಯಲ್ಲಿ 439 ಪರ್ಸೆಂಟ್ ಈ ರೀತಿ ಪ್ರಪೋಸ್ ಮಾಡಿರುವುದನ್ನು ಲೆಕ್ಕ ಹಾಕಿದರೆ ಅದರಲ್ಲಿ ಮೂರನೆ ಒಂದು ಭಾಗ ಕಡಿಮೆಯಾದರೂ ಕೂಡ 300 ಪರ್ಸೆಂಟ್ ಆಗುತ್ತದೆ. ಇದು ಒಂದು ಸರಿಯಾದ ತೆರಿಗೆಯಾಗುತ್ತದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಕಂದಾಯ ಜಾಸ್ತಿ ಮಾಡಬೇಕೆಂಬ ವಾದ, ಸರ್ಕಾರದ ಲ್ಯಾಂಡ್ ರೆವಿನ್ಯೂ ಹೆಚ್ಚು ಮಾಡಿಕೊಳ್ಳಬೇಕೆಂಬ ವಾದ ಏನಿದೆ ಅದಕ್ಕೆ ನಾನು ಅಡ್ಡಿ ಬರದೇ ಇದ್ದರೂ ಕೂಡ ಎಷ್ಟು ಪ್ರಮಾಣದಲ್ಲಿ ರೈತ ತೆರಿಗೆ ಹೊರಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಕಂದಾಯವನ್ನು ವಸೂಲು ಮಾಡಬೇಕಾದ್ದು ತಮಗೆ ಬಿಟ್ಟಂಥ ಒಂದು ಜವಾಬ್ದಾರಿ. ಆದರೆ 7-8 ಪಟ್ಟು ಕಂದಾಯವನ್ನು ಜಾಸ್ತಿ ಮಾಡುವುದಾದರೆ ರೈತನಿಗೆ ಅದರಿಂದ ನೋವಾಗುತ್ತದೆ, ರೈತನ ಆರ್ಥಿಕ ಪರಿಸ್ಥಿತಿ ಇವತ್ತು ಏನಿದೆ ಆತನು ರೀಪೆಯಿಂಗ್ ಕೆಪ್ಯಾಸಿಟಿ ಎಷ್ಟಿದೆ ಎಂಬುದನ್ನು ಯೋಚನೆ ಮಾಡಿ ಅವನು ಜಮೀನಿನಲ್ಲಿ ಉತ್ಪನ್ನ ಮಾಡತಕ್ಕ ಇನ್‌ಕಂ ಏನಿದೆ ಅದರ ಮೇಲೆ ಕಂದಾಯವನ್ನು ಹಾಕಬೇಕೇ ಹೊರತು ಮೊನ್ನೆ ಕೂಡ ಹೇಳಿದೆ, ಅವನ ನಿವ್ವಳ ಆದಾಯದಮೇಲೆ ಹಾಕಬೇಕೇ ಹೊರತು ಈ ರೀತಿ ಕಂದಾಯವನ್ನು ಹಾಕುವುದು ಸರಿಯಾದದ್ದಲ್ಲ. ರೈತನ ವ್ಯವಸಾಯದ ಖರ್ಚು ಏನಿದೆ, ಅವನ ನಿವ್ವಳ ಆದಾಯ ಏನಿದೆ ಎಂಬುದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಈ ಪ್ರಮಾಣದಲ್ಲಿ ಹಾಕುವುದರಿಂದ ಅವನು ಇದನ್ನು ಕೊಡುವುದಕ್ಕೆ ಶಕ್ತನಾಗಿದ್ದಾನೆಯೇ ಎಂಬುದನ್ನು ನಾವೂ, ನೀವೂ ಎಲ್ಲರೂ ಕೂಡ ಕುಳಿತುಕೊಂಡು ಯೋಚನೆ ಮಾಡಬೇಕಾದ ಸನ್ನಿವೇಶ ಇವತ್ತಿನ ದಿವಸ ಬಂದಿದೆ.

(ಶ್ರೀ ಎಚ್. ಡಿ. ದೇವೇಗೌಡ)

2-00 P.M.

ಇವತ್ತು ಬಾಗಾಯ್ತಿಗೂ ಕೂಡ ಹೀಗೇ ಮಾಡಲಾಗಿದೆ; ಅದಕ್ಕೆ ನಾಲ್ಕು ಪಟ್ಟು ಹೆಚ್ಚು ಬೀಳುತ್ತದೆ, ಸೆಸ್ಸು ವಗೈರೆ ಎಲ್ಲಾ ಸೇರಿ ಸುಮಾರು 70 ರೂಪಾಯಿಗಳವರಿಗೆ ಬರುತ್ತದೆ. ಹೀಗೆ ಮಾಡಬಾರದು, ಸೆಸ್ಸು ಮುಂತಾದ್ದೆಲ್ಲಾ ಸೇರಿ ರೈತರಿಗೆ ಎಷ್ಟು ಹೊರೆಯಾಗುತ್ತದೆಂಬುದನ್ನು ವಿಮರ್ಶೆ ಮಾಡಬೇಕು. ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ 500 ಕೋಟಿ ರೂಪಾಯಿ ಬೇಕು, ಅದಕ್ಕೆ ಹಣ ಬೇಕು ಎಂಬ ಒಂದೇ ಒಂದು ವಾದದಮೇಲೆ ಸರಕಾರ ಬೇಕಾದ ಹಣ ಸಂಪಾದನೆ ಮಾಡಬೇಕೆಂದು ರೈತರಿಗೆ ಇಷ್ಟು ಹೊರೆ ಹೊರಿಸುವುದಾದರೆ ಬಹಳ ದುಷ್ಪರಿಣಾಮವಾಗುತ್ತದೆ. ಇದರಿಂದ ರೈತರಿಗೆ ಯಾವ ರೀತಿಯಲ್ಲೂ ಉತ್ತೇಜನ ಕೊಟ್ಟಂತಾಗುವುದಿಲ್ಲ. ಆಹಾರದ ಉತ್ಪತ್ತಿ ಹೆಚ್ಚಿಸಲು ಈ ನೀತಿ ಅನಾನುಕೂಲವಾಗಿ ಪರಿಣಮಿಸುತ್ತದೆ, ಅದಕ್ಕೆ ತಡೆಮಾಡಿದಂತಾಗುತ್ತದೆ, ಸಚಿವರು ಇದನ್ನು ವಿಚಾರ ಮಾಡಬೇಕು. ತಮಗೆ ಬಹು ಸಂಖ್ಯೆಯ ಬೆಂಬಲವಿದೆಯೆಂಬ ಆಧಾರದ ಮೇಲೆ ಇದನ್ನು ಜಾರಿಗೆ ತರುವುದಾದರೆ ಇದರಿಂದಾಗುವ ದುಷ್ಪರಿಣಾಮವನ್ನು ಎದುರಿಸಲು ಸಿದ್ಧರಾಗಿರಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

Mr. SPEAKER.—Now, I want to put to the House one thing. I want to give maximum time to the members. I want this to be closed today. I am prepared to give as much time as possible to the members. I may also indicate that the time to be allotted to members will be in the ratio of 75 : 25. Seventy-five per cent to the opposition and twenty-five per cent to the Congress. I have been asking the whips of parties to give me the names and also the time required. Everytime I have been requesting but there is no compliance.

Sri S. SIVAPPA.—Sir, we can go up to 5-30 P.M.

Mr. SPEAKER.—If the members co-operate I can do that. Do you know how a member of your party behaved today. He insulted the House. It does not help anybody. If it serves any good purpose I have no objection.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಸಿವಿನಲ್ಲಿ, ಊಟಮಾಡಿಲ್ಲದ್ದರಿಂದ ಸ್ವಲ್ಪ ಹಾಗೆ ಆಯಿತು, ದಯವಿಟ್ಟು ಒಳಕ್ಕೆ ಕರೆದುಕೊಳ್ಳಿ.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈಗ ಸಭೆಯಮುಂದೆ ಮಂಡಿಸಿರತಕ್ಕ ಕಂದಾಯವನ್ನು ಹೆಚ್ಚುವರಿಮಾಡುವ ಮಸೂದೆಯನ್ನು ಮಾನ್ಯ ಕಂದಾಯ ಮಂತ್ರಿಗಳ ಭಾಷೆಯಲ್ಲೇ ಹೇಳುವುದಾದರೆ ಕಡಮೆಮಾಡುವುದಕ್ಕೆ ತಂದಿದ್ದೇವೆ ಎಂದು ಹೇಳಿದ್ದಾರೆ, ಭಾಷೆಯನ್ನು ತಿರುಗು ಮುರುಗು ಮಾಡಿ ಅವರು ಹೇಳಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—38 ಜೋನುಗಳಲ್ಲಿ 4 ಜೋನುಗಳಲ್ಲಿ ಈಗ ಕಡಮೆಯಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಮಾರ್ಕೆಟ್ಟಿಗೆ ಹೋಗಿ ಚೌಕಾಸಿ ಮಾಡುವ ಹಾಗೆ ಒಂದು ರೂಪಾಯಿದ್ದುದನ್ನು ಏರಿಸಿ ಮತ್ತೆ ಗಲಾಟೆಯಾದಮೇಲೆ 4 ರೂಪಾಯಿಗೆ ಇಳಿಸಿದ್ದಾರೆ. ಸರಕಾರದ ನೀತಿ ಇಂಥ ಚೌಕಾಸಿಯ ನೀತಿಯಾಗಿದೆ. ಸಭೆಯಮುಂದೆ ಮೊದಲು ಕಂದಾಯ ಹೆಚ್ಚು ಮಾಡುವ ಮಸೂದೆ ತಂದಾಗ ನಾಲ್ಕೈದು ಪಟ್ಟು ಹೆಚ್ಚಿಸುತ್ತೇವೆಂದು ಹೇಳಿ ಇವತ್ತು ಚೌಕಾಸಿಮಾಡಿ ಇಷ್ಟಾದರೂ ಕೊಡಿ ಎಂದು ಹೇಳುತ್ತಿದ್ದಾರೆ. ಅದೇನೇ ಇರಲಿ ನಾನು ಮೂಲಭೂತವಾದ ವಿಚಾರವನ್ನು ಮೊದಲಿನಿಂದ ಹೇಳುತ್ತಿದ್ದೇನೆ. ಸರಕಾರ ಒಂದೇ ಒಂದು ವಾದವನ್ನು ಸಭೆಯ ಮುಂದಿಟ್ಟು ತಮಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಹಣ ಬೇಕು ಎಂದು ಹೇಳಿ ಕಂದಾಯವನ್ನು ಹೆಚ್ಚಿಸಲು ಹೊರಟಿದೆ. ಹಣ ಬೇಕಾದರೆ ಕಂದಾಯವನ್ನು ಹೆಚ್ಚಿಸುವುದಕ್ಕೆ ಬದಲು ಬೇರೆ ಮಾರ್ಗ ಹುಡುಕಬಹುದು, ಕಂದಾಯ ಹೆಚ್ಚಿಸಬೇಕಾಗಿಲ್ಲ. ಸುಮಾರು 40-50 ಕೋಟಿಯಷ್ಟು ಹಣ ಕಡಮೆ ಬೀಳುತ್ತದೆ, ಅದನ್ನು ಭರ್ತಿಮಾಡಿಕೊಂಡು ಪಂಚವಾರ್ಷಿಕ ಯೋಜನೆಗೆ ಕೊರತೆಯಾಗಿರುವುದನ್ನು ಸರಿದೂಗಿಸಿಕೊಳ್ಳಬೇಕು ಎಂದು ಬಡ್ಜೆಟ್ ಭಾಷಣದಲ್ಲಿ ಹಣಕಾಸಿನ ಸಚಿವರು ಹೇಳಿದರು. ಹಣವಿಲ್ಲದಿದ್ದರೆ ತೆರಿಗೆ ಹಾಕಲಿ, ನಾವು ಬೇಡವೆಂದು ಹೇಳುವುದಿಲ್ಲ. ಇವತ್ತು ತೆರಿಗೆ ಹೊರೆಯನ್ನು ಯಾರು

ಹೊರಬಲ್ಲರೋ ಯಾರಿಗೆ ಹೊರಲು ಶಕ್ತಿಯಿದೆಯೋ ಅವರಿಗೆ ಹಾಕಿ, ಇಂಥ ಹಳೇ ಕಂದಾಚಾರದ ಪದ್ಧತಿ ಬೇಡ, ಶಾಸ್ತ್ರೀಯವಾದ ಮಾರ್ಗವನ್ನನುಸರಿಸಿ. ರೈತವರ್ಗ ನಮ್ಮ ದೇಶದಲ್ಲಿ ಬಹಳ ಪವಿತ್ರವಾದುದು, ಪುರಾತನವಾದುದು. ಎಂದು ನಿನ್ನೆ ದಿವಸ ಕಂದಾಯ ಸಚಿವರು ಹೇಳಿದರು. ಭೂಸುಧಾರಣಾ ಮಸೂದೆಯನ್ನು ಸಮರ್ಥನೆ ಮಾಡುತ್ತಾ ಚಡ್ಡಿ ಜನ ಎಂದೇನು ಹೇಳಿದರೋ ಅವರಿಗೆ ಒಳ್ಳೆಯದನ್ನು ಮಾಡಬೇಕೆಂಬ ಆಶೆ ಇದೆ ಎಂದರು. ಹಣವಿಲ್ಲದೆ ತೆರಿಗೆ ಹಾಕದೆ ರಾಜ್ಯವಾಳ ಬೇಕೆಂದು ನಾವು ಯಾವತ್ತೂ ಹೇಳಿಲ್ಲ. ಹಾಗೆ ಹೇಳಿದವರು ಇಂದು ತೆರಿಗೆ ಮಸೂದೆಗಳನ್ನು ತಂದು ಅಂಗೀಕಾರ ಪಡೆಯುತ್ತಿದ್ದಾರೆ. ವಿರೋಧ ಪಕ್ಷದವರು ಉಪವಾಸ ಮಾಡಿದ್ದಕ್ಕೆ ಶೇಕಡ ಆರೂ ಕಾಲಿದ್ದುದನ್ನು ನಾಲ್ಕಕ್ಕೆ ಇಳಿಸಲಿಲ್ಲ ಎಂದು ಹೇಳಿದರು. ಅವರು ಇಳಿಸದಿದ್ದರೆ ವನವಾಸಕ್ಕೆ ಹೋಗ ಬೇಕಾಗುತ್ತಿತ್ತು. ಸರಕಾರಿ ಪಕ್ಷದಲ್ಲೂ ಈ ಸಂಬಂಧದಲ್ಲಿ ಗಲಾಟೆಯಾಗಿರಬೇಕು. ಹೇಗಾದರೂ ಆಗಲಿ, ಕೊಂಚ ಕಡಮೆಮಾಡಿದ್ದಾರೆ; ಸಂತೋಷ. ಇನ್ನೂ ಎರಡು ವರ್ಷ ಈ ಸರಕಾರ ರಾಜ್ಯ ವಾಳಲಿ. ಈಗಲೇ ವನವಾಸ ಬೇಡ, ನಾವು ಅವರ ಸ್ಥಾನಕ್ಕೆ ಬರಲು ಪ್ರಯತ್ನಪಡುತ್ತಿಲ್ಲ. ಈ ದಿವಸ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಕೊಲೆಮಾಡುತ್ತಿದ್ದೀರಿ. ದೇಶದಲ್ಲಿ ಕಷ್ಟಪಟ್ಟು ಬೆಳೆಯುವ ರೈತರಿಗೆ ಈ ತೆರಿಗೆ ಭಾರ ಹಾಕುತ್ತಿದ್ದೀರಿ. ಈ ಮಂತ್ರಿಮಂಡಲ ಬಂದಮೇಲೆ ರೈತರಿಗೆ ಕಂದಾಯ ಹೆಚ್ಚಿಸುವುದಲ್ಲದೆ ಅನೇಕ ರೀತಿಯ ಸೆಸ್ಸು, ಹೆಲ್ತ್ ಸೆಸ್, ಇರಿಗೇಷನ್ ಸೆಸ್, ನೀರು ತೆರಿಗೆ, ಬೆಟರ್ ಮೆಂಟ್ ಲೆವಿ ಮುಂತಾದುವನ್ನೆಲ್ಲಾ ಹಾಕಲು ಸಂಬಂಧಪಟ್ಟ ಕಾನೂನುಗಳಿಗೆ ಅಂಗೀಕಾರ ಪಡೆದು ಅವನ್ನು ಕಾನೂನು ಕಡತಕ್ಕೆ ಸೇರಿಸಿದೆ. ರೈತರಮೇಲೆ ತೆರಿಗೆ ಹಾಕಲು ಮೂರು ವರ್ಷಗಳಿಂದ ತರುತ್ತಿರುವ ಶಾಸನಗಳಲ್ಲಿ ಇದು ಮೂರನೆಯದು. ಈ ತೆರಿಗೆ ಕಾನೂನು ತರಲು ಮಾಡಿರುವ ಸಾಹಸ ಖಂಡಿತವಾಗಲೂ ಕೂಡ ಹುಚ್ಚು ಸಾಹಸ. ಇಷ್ಟು ಆತುರವಾಗಿ ರೈತರಮೇಲೆ ಹೊರೆಯಾಗುವ, ಅವರನ್ನು ಪಡಬಾರದ ಕಷ್ಟಕ್ಕೀಡುಮಾಡುವ ಈ ಶಾಸನವನ್ನು ತರಬಾರದಾಗಿತ್ತು. ಸರಕಾರದಲ್ಲಿ ಒಂದು ಸರಿಯಾದ ನೀತಿಯಿಲ್ಲ, ನಿಮ್ಮ ನೀತಿಯಿಂದ ಸದಸ್ಯರನ್ನು ಒಂದು ಇಕ್ಕಟ್ಟಿಗೆ ಸಿಕ್ಕಿಸಿದ್ದೀರಿ. ಮೊನ್ನೆ ದಿವಸ ಒಂದು ಆಕ್ಟಿಗೆ ಸಂಬಂಧಪಟ್ಟಂತೆ ತಿದ್ದುಪಡಿ ಮಸೂದೆ ತಂದು ಬೆಳಿಗ್ಗೆ ಸಭೆ ಕರೆದು ಸಾಯಂಕಾಲ ರಾಜ್ಯಪಾಲರ ಒಪ್ಪಿಗೆ ಪಡೆದು ಜಾರಿಗೆ ತರಲು ಹವಣಿಸಿದಿರಿ. ಈ ಆತುರವೇಕೆ? ದೇಶಕ್ಕೆ ಒಳ್ಳೆಯದಾಗುವ ಕಾನೂನನ್ನು ತಂದು ಸಾಕಾದಷ್ಟು ಕಾಲಾವಕಾಶ ಕೊಟ್ಟು ಅಂಗೀಕಾರ ಪಡೆಯುವುದಾದರೆ ಖಂಡಿತ ಒಪ್ಪುತ್ತೇನೆ.

ಇವತ್ತು ಬೆಳಿಗ್ಗೆ ತಾನೆ ನಾಲ್ಕನೆಯ ಯೋಜನೆಯ ಮೊದಲನೆ ವರ್ಷದಲ್ಲಿ ಜಾರಿಗೆ ಬರತಕ್ಕ ಆಶೋತ್ತರಗಳನ್ನು, ಸ್ಕೂಲ್ ಫೀ ರಿಯಾಯಿತಿಯನ್ನು ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಒಂದು ವರ್ಷ ಮುಂಚೆಯೇ ಪ್ರಕಟಣೆ ಮಾಡಿದ್ದಾರೆ. ಅದನ್ನು ಮಾಡುವುದಕ್ಕೆ ಆತುರವಿಲ್ಲ. ಸೆಕಂಡರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುತ್ತೇವೆ ಎಂದು ಒಂದು ವರ್ಷ ಮುಂಚೆ ಹೇಳಿದ್ದಾರೆ. ಕಂದಾಯದ ಏರಿಕೆಯನ್ನು ಮಾಡುತ್ತಿರುವಾಗ ಈ ರೀತಿಯ ಹೇಳಿಕೆಯಿಂದ ಅನುಕೂಲ ಆಗುತ್ತದೆ ಎಂದು ಹೀಗೆ ಮಾಡಿದ್ದಾರೆ. ಯಾವುದಕ್ಕೂ ಒಂದು ಮಿತಿ ಇರಬೇಕು. ಅವರು ಪ್ರಚಾರಕ್ಕೆ ಮಾಡಿದರೋ ಏನೋ ಅದು ಬೇರೆ ವಿಷಯ. ಅವರು ಅಂಥ ಜಾಣತನವನ್ನು ಮಾಡಿದ್ದಾರೆ. ರೈತರ ಮೇಲೆ ಕಂದಾಯವನ್ನು ಹೇರತಕ್ಕ ಈ ಶಾಸನವನ್ನು ಶಾಸನ ಸಭೆಯ ಮುಂದೆ ಇಟ್ಟು ಒಪ್ಪಿಸುತ್ತೇವೆ, ಈ ಕಂದಾಯ ಏರಿಕೆಯಿಂದ ದೇಶದಲ್ಲಿ ಏನು ಪರಿಣಾಮವಾಗುತ್ತದೆಯೋ ಅದನ್ನು ಸೆಕಂಡರಿ ವಿದ್ಯಾಭ್ಯಾಸ ಪೂರ್ತಿ ಉಚಿತವಾಗಿ ಕೊಡುತ್ತೇವೆ ಎಂದು ಹೇಳಿ ಕಡಮೆ ಮಾಡಬಹುದು ಎಂದು ಯೋಚನೆ ಮಾಡಿ ಅವರು ಈ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅವರು ಚಮತ್ಕಾರವಾಗಿ ಆ ವಿಷಯವನ್ನು ಇವತ್ತು ಪ್ರಕಟಣೆ ಮಾಡಿದ್ದು ಎಷ್ಟು ಔಚಿತ್ಯ ಎನ್ನುವುದನ್ನು ತಾವು ನೋಡಬೇಕಾಗಿದೆ. ಇದನ್ನೆಲ್ಲ ಯೋಚನೆ ಮಾಡುತ್ತ ಹೋದರೆ ಸರ್ಕಾರ ಶೇಕಡ ಆರೂಕಾಲರಂತೆ ಲೆಕ್ಕ ಹಾಕಿ ಸೆಟಲ್‌ಮೆಂಟ್ ವರದಿಯನ್ನು ತಯಾರಿಸಿ ಅದನ್ನು ಈಗ ಶೇಕಡ ನಾಲ್ಕಕ್ಕೆ ಇಳಿಸಿ ಒಂದು ಬದಲಾವಣೆಯಾದ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಮಾಜಿ ರೆವೆನ್ಯೂ ಸಚಿವರಾದ ಮಾನ್ಯ ಕಡಿದಾಳ್ ಮಂಜಪ್ಪ ಅವರು ಮೊನ್ನೆ ಮಾತನಾಡುತ್ತ ಸೆಟಲ್‌ಮೆಂಟ್ ರಿಪೋರ್ಟ್‌ಗಳು ಯಾವ ರೀತಿ ತಯಾರಾಗಿವೆ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಮಂತ್ರಿಗಳಾಗಿದ್ದವರು ಬಹಳ ಅನುಭವದಿಂದ ಈ ಮಾತನ್ನು ಹೇಳಿದ್ದಾರೆ. ಒಂದೇ ತರಹ ಭೂಮಿಯಲ್ಲಿ ಒಂದೇ ವಿಧವಾದ ಬೆಳೆಗೆ ನಾಲ್ಕು ಜನ ಅಧಿಕಾರಿಗಳು ನಾಲ್ಕು ತರಹ ರಿಪೋರ್ಟ್ ಬರೆದಿದ್ದಾರೆ. ಈ ವಿಷಯದಲ್ಲಿ ಒಬ್ಬೊಬ್ಬ ಸೆಟಲ್‌ಮೆಂಟ್ ಅಧಿಕಾರಿಯೂ ತನಗೆ ತೋರಿದ ರೀತಿ ಕಥೆ, ಸ್ಥಳದ ಪುರಾಣ ಎಲ್ಲವನ್ನು ಬರೆದಿದ್ದಾರೆ. ಒಂದು ಕಡೆ 60 ರೂಪಾಯಿ ಧಾರಣೆ ತೋರಿಸಿದ್ದರೆ, ಇನ್ನೊಂದು ಕಡೆ 90 ರೂಪಾಯಿ, ಮತ್ತೊಂದು ಕಡೆ 110 ರೂಪಾಯಿ ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಬರೆದಿದ್ದಾರೆ. ಹೀಗೆಯೇ ಇನ್ನೊಂದು ಕಡೆ ಕಂದಾಯವನ್ನು ಕಡಿಮೆ ಹಾಕುತ್ತೇವೆ ಎಂದು

(ಶ್ರೀ ಎಸ್. ಶಿವಪ್ಪ)

ಬರೆದಿದ್ದಾರೆ? ಅದು ಆ ಪ್ರದೇಶದ ಜನರ ಪುಣ್ಯ. ಬಡವನ ಮತ್ತು ರೈತನ ಕಷ್ಟವನ್ನು ತಿಳಿದವರಿರಬೇಕು ಅವರು. ಒಟ್ಟು ಉತ್ಪತ್ತಿಯ ಮೇಲೆ ಸೇಕಡ ನಾಲ್ಕರಂತೆ ಹಾಕುವುದು ಕುರುಡು ನ್ಯಾಯವಾಗುತ್ತದೆ. ಒಟ್ಟಿನಲ್ಲಿ ಕೆಲವು ಕಡೆ ಅನುಕೂಲವಾಗಿದೆ, ಕೆಲವು ಕಡೆ ಬಹಳ ತೊಂದರೆ ಆಗುತ್ತದೆ. ಶಾಸ್ತ್ರೀಯವಾಗಿ ಸರ್ವೆ ಕೆಲಸ ನಡೆದಿಲ್ಲ. ಸಾಯಿಲ್ ರೀಸರ್ಚ, ಕ್ಲಾಸಿಫಿಕೇಷನ್, ಪ್ರತಿಯೊಂದು ಗ್ರಾಮಕ್ಕೂ ಆಗಿಲ್ಲ. ಜೋನ್ ಪ್ರಕಾರ ಮಾಡಿದ್ದಾರೆ. ಒಂದೇ ಗ್ರಾಮದಲ್ಲಿ ಒಂದೊಂದು ಕಡೆ ಒಂದೊಂದು ತರಹ ಇರುತ್ತದೆ. ಯಾವುದೋ ಊರಿಗೆ ಹೋಗಿ ಚೆನ್ನಾಗಿ ಬೆಳೆದಿರುವ ಜಮೀನಿನ ವಿಷಯವನ್ನು ಸಂಗ್ರಹ ಮಾಡಿ ಅದನ್ನು ಆಧಾರವಾಗಿ ಇಟ್ಟುಕೊಂಡು ಈ ವರದಿಯನ್ನು ಸಿದ್ಧ ಮಾಡಿದ್ದಾರೆ. ಶೇಕಡ ನಾಲ್ಕರಂತೆ ಕಂದಾಯ ಇರಬೇಕು ಎನ್ನುವುದು ಆಧಾರವಿಲ್ಲ.

Sri K. PUTTASWAMY (Minister for Municipal Administration).—He has arrived at average yield and recommended as standard rate.

ಶ್ರೀ ಎಸ್. ಶಿವಪ್ಪ.—ಸರಾಸರಿ ಉತ್ಪನ್ನದ ಲೆಕ್ಕಕ್ಕೆ ಅವರು ಹೋಗಿಲ್ಲ. ಅವರು ಸರಾಸರಿ ರೇಟ್ ತೆಗೆದುಕೊಂಡಿಲ್ಲ. ಹೆಚ್ಚು ಉತ್ಪತ್ತಿ ಏನು ಬರುತ್ತಿತ್ತೋ ಅದನ್ನು ತೆಗೆದುಕೊಂಡಿದ್ದಾರೆ. 1929-30ನೇ ಇಸವಿಯಲ್ಲಿ ಎಷ್ಟು ಧಾರಣೆ ಇತ್ತು ಎಂದರೆ ಆಗಿನ ಬೆಳೆಗಳಲ್ಲಿ ಕಂದಾಯವನ್ನು ಕೊಡಲಾರವೆ ಜಮೀನುಗಳನ್ನು ಮಾರಿದ್ದಾರೆ ಕಾಫಿ ತೋಟಗಳನ್ನು ಈಡು ಮಾಡಿದ್ದಾರೆ. ಬ್ಯಾಂಕಿಗೆ ಆಧಾರ ಮಾಡಿದ್ದುದನ್ನು ಈಚೆಗೆ ಬಿಡಿಸಿಕೊಂಡಿರಬಹುದು. ಕಾಫಿ, ಭತ್ತ, ರಾಗಿ, ತೆಂಗು, ಅಡಕೆ ಇವುಗಳ ಬೆಲೆ ಆ ಹೊತ್ತು ಏನಿತ್ತು ಅದನ್ನು ಗಣನೆಗೆ ತೆಗೆದುಕೊಳ್ಳದೆ ಪೀಕ್ ಪಿರಿಯಡ್‌ನಲ್ಲಿ ಇದ್ದ ಧಾರಣೆಯ ಆಧಾರದ ಮೇಲೆ ರಿಪೋರ್ಟನ್ನು ಬರೆದಿದ್ದಾರೆ. ಇವತ್ತು ಬೆಲ್ಲದ ಧಾರಣೆ ಏನಿದೆ? ಅದಕ್ಕೆ ರಕ್ಷಣೆ ಕೊಡುತ್ತಾರೆಯೇ? ರೆಗ್ಯುಲೇಟೆಡ್ ರೇಟ್ ಸರ್ಕಾರ ಕೊಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಕಂದಾಯವನ್ನು ಹಾಕುತ್ತಿರುವುದು 30 ವರ್ಷಗಳಿಗೆ. ಅಲ್ಲಿಯವರೆಗೂ ಇದರಲ್ಲಿ ವ್ಯತ್ಯಾಸ ಮಾಡುವುದಿಲ್ಲ. ಮಾರಾಟ ತೆರಿಗೆ, ವರಮಾನ ತೆರಿಗೆ ಇವುಗಳನ್ನು ಆದಾಯದ ಮೇಲೆ ಅಥವಾ ಮಾರಾಟ ಆಗುವ ಮೊತ್ತದಮೇಲೆ ಹಾಕುವುದರಿಂದ ಅದು ವ್ಯತ್ಯಾಸವಾಗುತ್ತ ಹೋಗುತ್ತದೆ. ಆದರೆ ಕಂದಾಯವನ್ನು ಒಂದು ಸಲ ಶೇಕಡ ನಾಲ್ಕರಂತೆ ಎಂದು ಮಾಡಿದರೆ ಅದು ಬಹಳ ವರ್ಷ ಇರಬೇಕಾಗುತ್ತದೆ. ವರ್ಷೇ ವರ್ಷೇ ಅದನ್ನು ಏರಿಸುವುದೂ ಇಲ್ಲ, ಇಳಿಸುವುದೂ ಇಲ್ಲ. ಒಂದು ಸಲ ನಿಗದಿ ಮಾಡಿದಮೇಲೆ ಮಳೆ ಬರಲಿ, ಬಾರದೆ ಹೋಗಲಿ ಎಂಟಾಣೆ ಬೆಳೆಯಾಗಲಿ, ಹನ್ನೆರಡಾಣೆ ಬೆಳೆಯಾಗಲಿ ಕಂದಾಯವನ್ನು ಒಂದೇ ರೀತಿ ಕೊಡಬೇಕಾಗುತ್ತದೆ. ಕಂದಾಯವನ್ನು ನಿಗದಿ ಮಾಡತಕ್ಕ ಕಾಲದಲ್ಲಿ ಅಶಾಸ್ತ್ರೀಯವಾದ ನೀತಿಯನ್ನನುಸರಿಸುವುದಕ್ಕೆ ಅವಕಾಶವಿದೆ. ಆ ಕಾರಣದಿಂದಲೇ ನಾನು ಸಲಹೆ ಮಾಡಿದ್ದು, ಭೂಕಂದಾಯದ ರೀತಿ ಏನಿದೆ ಅದನ್ನು ತೆಗೆದು ಬಿಡಿ; ಶಾಸ್ತ್ರೀಯವಾದ ತೆರಿಗೆ ಪದ್ಧತಿ ಈ ದೇಶದಲ್ಲಿ ಇಲ್ಲದೆ ಇದ್ದ ಕಾಲದಲ್ಲಿ ಸರ್ಕಾರವನ್ನು ನಡೆಸಬೇಕಾದರೆ ಒಂದು ತೆರಿಗೆಯನ್ನು ಹಾಕಬೇಕಾಯಿತು. ಆಗ ಭೂಮಿಯ ಮೇಲೆ ಕಂದಾಯವನ್ನು ವಿಧಿಸುವ ಅಶಾಸ್ತ್ರೀಯವಾದ ಕಾನೂನನ್ನು ಮಾಡಿದರು. ಮೈಸೂರು ದೇಶದ ಆದಾಯ ಮೂರು ಕೋಟಿ ರೂಪಾಯಿ ಇದ್ದಾಗ ಕಂದಾಯದಿಂದಲೇ ಒಂದು ಕೋಟಿ 75 ಲಕ್ಷ ರೂಪಾಯಿ ಬರುತ್ತಿತ್ತು. ಕಂದಾಯದಿಂದ ಬರುವ ಉತ್ಪತ್ತಿ ಜಾಸ್ತಿ ಆಗದೆ ರಾಜ್ಯದ ಆದಾಯ 120 ಕೋಟಿ ರೂಪಾಯಿಗೆ ಏರಿದೆ. ಆದುದರಿಂದ ಈ ಕಂದಾಯ ಹೋಗಬೇಕು. ಮಾರಾಟ ತೆರಿಗೆ, ವರಮಾನ ತೆರಿಗೆ ಇಂಥ ಬೇರೆ ಬೇರೆ ರೀತಿಯ ತೆರಿಗೆಗಳನ್ನು ಹಾಕಿ ಬಡವರಿಗೆ ಕಂದಾಯವನ್ನು ವಜಾ ಮಾಡಬೇಕು. ಅದು ಶಾಸ್ತ್ರೀಯವಾದ ಪದ್ಧತಿ ಎಂದು ಹೇಳುತ್ತಿದ್ದೇನೆ. ಈಗ ಏರಿಸಬೇಕು ಎಂದಿರುವ ಪ್ರಕಾರ ಲೆಕ್ಕ ಹಾಕಿದರೆ ಮೂರು ಕೋಟಿಗೆ ಬದಲಾಗಿ ನಾಲ್ಕೂವರೆ ಕೋಟಿ ರೂಪಾಯಿ ಕಂದಾಯ ಬರುತ್ತದೆ ಎಂದು ಅಂದಾಜು ಮಾಡಿದ್ದಾರೆ. ಇದರಲ್ಲಿ ವಾಟರ್ ರೇಟ್, ಬೆಟರ್‌ಮೆಂಟ್ ಲೆವಿ ಎಲ್ಲ ಬಿಟ್ಟಿದ್ದಾರೆ. ಖುಷ್ಕಿ ಕಂದಾಯ ಮಾತ್ರ ನಾಲ್ಕೂವರೆ ಕೋಟಿ ರೂಪಾಯಿ ಎಂದು ಅಂದಾಜು ಮಾಡಿದ್ದಾರೆ- ಒಂದೂವರೆ ಕೋಟಿ ರೂಪಾಯಿ ಹೆಚ್ಚಾಗಿರತಕ್ಕ ಕಾನೂನು ಆಗಿದ್ದ ಪಕ್ಷದಲ್ಲಿ ಇದನ್ನು ಏಕೆ ಇಷ್ಟು ಆತುರಾತುರವಾಗಿ ಮಾಡಿದರು ಎಂದು ಕೇಳುತ್ತೇನೆ ರೈತನು ಈಗ ಇರುವ ಹೊರೆಯನ್ನೇ ಹೊರಲು ಶಕ್ತಿ ಇಲ್ಲದೆ ಇರುವಾಗ ಒಂದೂವರೆ ಕೋಟಿ ರೂಪಾಯಿ ಬರುವುದಾಗಿರುವ ಕಾನೂನು ತರುವುದಕ್ಕೆ ಕೈಹಾಕಬಾರದಾಗಿತ್ತು. ಒಂದೂವರೆ ಕೋಟಿ ರೂಪಾಯಿಗಿಂತ ಜಾಸ್ತಿ ಬರುತ್ತದೆ ಎಂದು ಹೇಳುವುದಾದರೆ ಇದರಲ್ಲಿ ಏನೋ ಮೋಸವಿದೆ ಎಂದು ಹೇಳಬೇಕಾಗುತ್ತದೆ. ಸರ್ಕಾರದವರು ಕೊಟ್ಟಿರತಕ್ಕದ್ದು ಒಂದು ಕೋಟಿ 40 ಲಕ್ಷ ರೂಪಾಯಿ ಬರುತ್ತದೆ ಎಂದು. ಸರಿಯಾಗಿ ಲೆಕ್ಕ ಹಾಕಿದರೆ ಇನ್ನೂ ಜಾಸ್ತಿ ಬರುತ್ತದೆ. ಮೂರು

ಕೋಟಿ ರೂಪಾಯಿ ಇರುವುದು ನಾಲ್ಕು ಕೋಟಿ 40 ಲಕ್ಷ ರೂಪಾಯಿ ಆಗುತ್ತದೆಂದು ಹೇಳಿದ್ದಾರೆ. ಇದು ಸರಿಯಲ್ಲ. ಎಲ್ಲ ಸೇರಿ 10 ಕೋಟಿ ರೂಪಾಯಿ ಬರಬಹುದು ಎಂದು ನಾನು ಹೇಳುತ್ತೇನೆ. ಇದರಲ್ಲಿ ವಾಟರ್ ರೇಟ್, ಬೆಟರ್‌ಮೆಂಟ್ ಲೆವಿ ಇವುಗಳನ್ನೆಲ್ಲ ಸೇರಿಸಿಲ್ಲ. ಇವತ್ತು ನಮ್ಮ ದೇಶದಲ್ಲಿ ಅನ್ನದ ಹಾಹಾಕಾರ ಎಷ್ಟು ಭೀಕರವಾಗಿದೆ ಎನ್ನುವುದನ್ನು ನೋಡಿದ್ದೇವೆ. ಅನ್ನ ಬೆಳೆಯತಕ್ಕ ರೈತನಿಗೆ ಯಾವ ಸರ್ಕಾರವೇ ಆಗಿರಲಿ ಇವತ್ತಿನ ದಿವಸ ಕಂದಾಯವನ್ನು ಹೆಚ್ಚು ಮಾಡುವಂಥದ್ದಲ್ಲ, ಕಂದಾಯವನ್ನು ಬಿಟ್ಟು ಬಿಡಬೇಕು. ಜಾಸ್ತಿ ಬೆಳೆ ಬೆಳೆದರೆ ಬೆನ್ನು ತಟ್ಟಬೇಕು. ನೇಗಿಲ ಯೋಗಿ ಎಂದು ಅವನನ್ನು ಪೂಜೆ ಮಾಡಬೇಕು. ಅಂಥ ಕಾಲದಲ್ಲಿ ರೈತನು ಕಂದಾಯವನ್ನು ಜಾಸ್ತಿ ಕೊಡಬೇಕು ಎಂದು ಸರ್ಕಾರ ಪ್ರಯತ್ನ ಮಾಡುವುದು ಸರಿಯಲ್ಲ. ಅನ್ನದ ಹಾಹಾಕಾರ ದೇಶದಲ್ಲಿರುವಾಗ ಅನ್ನ ಬೆಳೆಯುವವನ ಮೇಲೆ ಕಂದಾಯವನ್ನು ಹೇರುವುದು ಯಾವ ಜಾಣ್ಮೆ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ನಮ್ಮ ಜನ ಪರೀಕ್ಷೆಮಾಡುತ್ತಿದ್ದಾರೆ. ಇವತ್ತಿನ ದಿವಸ 2ಕೋಟಿ 3ಕೋಟಿ ರೂಪಾಯಿಗಳನ್ನು ಬೇರೆ ಕಡೆಯಿಂದ ತರಬಹುದು. ಪಾನ ನಿರೋಧ ಕೆಲವು ಕಡೆಗಳಲ್ಲಿ ಆಚರಣೆಯಲಿಲ್ಲವಾದರೂ ಕೂಡ ಅಲ್ಲಿ ಒಂದು ರೀತಿಯಲ್ಲಿ ಆಚರಣೆಗೆ ತಂದು ಕಪಟವಾದ ಕಾನೂನುಗಳನ್ನು ದೇಶದಲ್ಲಿಟ್ಟು ಅದರಲ್ಲಿ ಹತ್ತಾರು ಕೋಟಿ ರೂಪಾಯಿಗಳ ವರಮಾನವನ್ನು ಕಳೆದುಕೊಂಡು ಈಗ ಸತ್ಯವಂತನಾಗಿ ನಿಷ್ಠೆಯಿಂದ ಭೂಮಿಯನ್ನೇ ಅವಲಂಬಿಸಿಕೊಂಡು ಜೀವನಮಾಡತಕ್ಕ ರೈತನಮೇಲೆ ತೆರಿಗೆ ಹಾಕುತ್ತಿದ್ದಾರೆ. ಕುಡುಕನಾದವನಿಗೆ ಒಂದು ರಿಯಾಯತಿಯನ್ನು ಕೊಡುತ್ತಿದ್ದಾರೆ. ಹತ್ತಾರುಕೋಟಿ ರೂಪಾಯಿಗಳ ವರಮಾನವನ್ನು ಕಳೆದುಕೊಂಡ ಕಾನೂನಿಗೆ ಬೆಲೆ ಏನು ಬಂದಿದೆ ? ಅದು ಇನ್ನೂ ಲೀಲಾಜಾಲವಾಗಿ ತಂಡೋಪತಂಡವಾಗಿ ನಡೆಯುತ್ತಿದೆ. ಇದರಲ್ಲಿ ಲಂಚ ದೇವತೆ ತಾಂಡವವಾಡುತ್ತಿದ್ದಾಳೆ. ಇದನ್ನು ನಿಲ್ಲಿಸಿ ಎಂಬುದಾಗಿ ಹೇಳಿದರೆ ಅದರಲ್ಲಿ ಏನೋ ಒಂದು ಉದಾಸೀನದಿಂದ ನೋಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ದೇವತೆ ಎಂದು ಹೇಳಬೇಡಿ, ಮಾರಿ ಎಂದು ಹೇಳಿ.

ಶ್ರೀ ಎಸ್. ಶಿವಪ್ಪ.—ಮಾರಿ ದೇವತೆಯಾಗಿದ್ದಾಳೆ, ದೇವತೆ ಮಾರಿಯಾಗಿದ್ದಾಳೆ. ಖಜಾನೆಗೆ ಹತ್ತಾರುಕೋಟಿ ರೂಪಾಯಿಗಳು ಬರತಕ್ಕ ಕಾನೂನನ್ನು ಮಾಡದೆ ಏಕಾಏಕಿ ಸತ್ಯವಂತರಾದ ರೈತರ ಹೆಗಲನಮೇಲೆ ಇಂತ ಕಾನೂನಿನ ಭಾರವನ್ನೆಲ್ಲ ಹೊರಿಸುತ್ತಿದ್ದೀರಿ. ಅವನ ಹೆಗಲನ ಮೇಲೆ ಇರತಕ್ಕ ಭಾರ ಎಷ್ಟು ಬಿದ್ದರೂ ತಾನೇ ಸಂಕಟದಿಂದ ಹೊತ್ತುಕೊಂಡು ಅನುಭವಿಸುತ್ತಿದ್ದಾನೆ. ಅವನಿಗೆ ಈ ದೇಶದಲ್ಲಿ ಪ್ರಚಾರಮಾಡಿ ತನಗೆ ಆಗಿರತಕ್ಕ ತೊಂದರೆಯನ್ನು ಹೇಳತಕ್ಕ ಶಕ್ತಿ ಇಲ್ಲ. ಈಗ ನಾವು ನೀವು ಸೇರಿ ಕಂದಾಯವನ್ನು ಹಾಕುತ್ತಿದ್ದೇವೆ. ಇವತ್ತು ಹೇಳುತ್ತೇನೆ, ದೊಡ್ಡಮನಸ್ಸುಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ. ಆಗ ರೈತನಾದವನು ಸಂತೋಷದಿಂದ ಇರುತ್ತಾನೆ. ಇದರಲ್ಲಿ ಬರತಕ್ಕ ಒಂದೆರಡು ಕೋಟಿ ರೂಪಾಯಿಗಳು ಹೆಚ್ಚಲ್ಲ. ನಮ್ಮ ದೇಶದಲ್ಲಿ ಆಹಾರಧಾನ್ಯಗಳು ಜಾಸ್ತಿ ಬೆಳೆಯಾದಾಗ್ಗೆ ಅವಕ್ಕೆ ಎಷ್ಟು ಕೋಟಿ ರೂಪಾಯಿಗಳ ಬೆಲೆ ಕಟ್ಟಿತೆಂಬುದನ್ನು ಯೋಚನೆಮಾಡಬೇಕು. ನಮಗೆ ಇನ್ನೂ ನಾಲ್ಕುವರೆ ಲಕ್ಷ ಟನ್ನುಗಳಷ್ಟು ಆಹಾರ ಬೇಕು. ಸುಮಾರು 30-40 ಕೋಟಿ ರೂಪಾಯಿಗಳಲ್ಲಿ 3 ಲಕ್ಷ ಟನ್ನುಗಳಷ್ಟು ಆಹಾರವನ್ನು ಕೊಂಡುಕೊಳ್ಳುತ್ತಿದ್ದೇವೆ. ಬೆಳೆಯುವ ರೈತನಿಗೆ ಒಂದೆರಡು ಕೋಟಿ ರೂಪಾಯಿಗಳು ಹೋದರೂ ಪರವಾಇಲ್ಲ. ಆದಾಯ ಬರತಕ್ಕ ಅನೇಕ ಬಾಬುಗಳಿವೆ. ಅಂಥಾದ್ದನ್ನು ಸರಿಮಾಡಿಕೊಳ್ಳಬೇಕು. ಅನ್ನ ಹಾಹಾಕಾರವಿರುವ ಸಂದರ್ಭದಲ್ಲಿ ಇದನ್ನು ಖಂಡಿತವಾಗಿ ವಾಪಸ್ಸು ತೆಗೆದುಕೊಳ್ಳಬೇಕು. ರೈತನಿಗೆ ಈರೀತಿ ತೆರಿಗೆ ಹೊರೆ ಬೀಳಬಾರದು. ಏಕೆಂದರೆ ಅವನಿಗೆ ಅದನ್ನು ಹೊರತಕ್ಕ ಶಕ್ತಿಯಿಲ್ಲ. ಬೆಲೆಗಳೇನೋ ಜಾಸ್ತಿಯಾಗಿದೆ. ಅವನ ಅಂತಸ್ತು ಮಟ್ಟಕ್ಕೆ ಕಂದಾಯ ಕೊಡಬಲ್ಲ. ಕಂದಾಯವನ್ನು ನೀರು, ಮತ್ತು ರಸ್ತೆ ಸೌಕರ್ಯಗಳಿಗಾಗಿ ಕೊಡಬೇಕೆಂಬ ವಾದವಿದೆ. ಇದು ಸರಿಯಲ್ಲ. ರೈತನಾದವನು ಸ್ಕೂಲಿನ ತೆರಿಗೆಗಳನ್ನು ಕಟ್ಟುತ್ತಾನೆ. ಹೀಗೆ ನಾನಾ ತೆರಿಗೆ ಬೇರೆ ಬೇರೆ ರೂಪದಲ್ಲಿ ಕಟ್ಟುತ್ತಾನೆ. ಅವನು ಎಲ್ಲಾ ತೆರಿಗೆಗಳನ್ನೂ ಸರ್ಕಾರದ ಖಜಾನೆಗೆ ಕಟ್ಟುತ್ತಾನೆ. ತನ್ನ ಊರಿನ ಮೇಲ್ಮೆಮಾಡಿಕೊಳ್ಳಬೇಕಾದ ಹಕ್ಕು ಅವನಿಗೆ ಇದೆ. ಅದಕ್ಕೋಸ್ಕರ ಕಂದಾಯ ಕೊಟ್ಟೇಕೊಡುತ್ತಾನೆಂದು ಹೇಳುವುದು ತುಂಬಾ ತಪ್ಪಾಗಿದೆ. ಬೇರೆ ವರ್ಗದವರು ಕೊಡತಕ್ಕ ತೆರಿಗೆಯನ್ನೂ ಕೊಟ್ಟು ಅದರ ಜೊತೆಗೆ ಭೂಕಂದಾಯ ಬೇರೆ ಕೊಡುತ್ತಾನೆ. ಇದನ್ನು ತಪ್ಪಿಸಬೇಕು. ಆದಾಯ ಬಂದನಂತರ ತೆರಿಗೆ ಹಾಕುವ ಬಗ್ಗೆ ಒಂದು ಶಾಸ್ತ್ರೀಯವಾದ ನೀತಿಯನ್ನು ಅನುಸರಿಸಬೇಕು. ಸಣ್ಣ ಪುಟ್ಟ ಹಿಡುವಳಿ ಇರತಕ್ಕ ರೈತನಿಗೆ ಯಾವಾಗ ತೊಂದರೆ ಕಡಿಮೆಯಾಗುತ್ತದೋ ಎಂಬುದಾಗಿ ಇರುತ್ತಾನೆ. ದೊಡ್ಡದೊಡ್ಡ ಜಮೀನ್ದಾರರು ಅದರಲ್ಲೂ ಹೆಚ್ಚು ಆದಾಯ ಬರತಕ್ಕ ಜನಗಳಿಗೆ ತೆರಿಗೆ ಹಾಕಿದರೂ ಅದನ್ನು ಹೊರತಕ್ಕ ಶಕ್ತಿ ಅವರಿಗೆ ಇರುತ್ತದೆ.

ಶ್ರೀ ಡಿ. ದೇವರಾಜ್ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಯ ಮಂತ್ರಿಗಳು).—ಆದಾಯ ಬರುವವರಿಗೆ ತೆರಿಗೆ ಹಕ್ಕು ಯಾವ ಬಾಬಿನಿಂದರೇ ಬರಲಿ, ಜಮೀನಿನಿಂದ ಬಂದರೆ ಒಪ್ಪುತ್ತಾರೆಯೇ ಅಥವಾ ಅದು ಇಲ್ಲವೋ ?

ಶ್ರೀ ಎಸ್. ಶಿವಪ್ಪ.—ಜಮೀನಿನ ಆದಾಯವನ್ನು ಅವರು ಸರಿಯಾಗಿ ಲೆಕ್ಕಹಾಕಿ ಖರ್ಚನ್ನು ಕಳೆದು ಅವನ ನಿವ್ವಳ ಆದಾಯವೇನು ಎಂಬುದನ್ನು ನಿರ್ಧಾರಮಾಡಬೇಕು. ಅವನಿಗೆ ಬೇರೆ ಬೇರೆ ಸೆಕ್ಟರಿನಲ್ಲಿ ಆದಾಯತೆರಿಗೆ ಹಾಕುತ್ತೀರಿ. ಆರೀತಿಯಲ್ಲಿ ಹಾಕಬೇಡಿ ಎಂಬುದಾಗಿ ಅನೇಕಸಾರಿ ಹೇಳಿದೇನೆ. ರೈತರಾಮೇಲೆ ಆದಾಯತೆರಿಗೆ ಹಾಕುವ ನೀತಿ ಸರಿಯಿಲ್ಲ. ಅವನಿಗೆ ಕಾರ್ಖಾನೆಗಳಲ್ಲಿ ಕೆಲಸಮಾಡುವವರಿಗೆ ಕೊಟ್ಟಹಾಗೆ ಏನೂ ಸಂಬಳ ಕೊಡುವುದಿಲ್ಲ. ಎಷ್ಟೋ ಜನ ರೈತರಿಗೆ ಫ್ರಿಯಾಗಿ ಆಹಾರರೋತ್ಪತ್ತಿ ಮಾಡುವಂತೆ ಅವಕಾಶವನ್ನು ಮಾಡಿಕೊಡಬೇಕು. ರೈತನಿಗೆ ಇವರು ಯಾವ ಸಂಬಳವನ್ನೂ ಕೊಡುವುದಿಲ್ಲ. ಈಗ ಸರ್ಕಾರದ ಫಾರಂ ಇದೆ. ಅಲ್ಲಿ ಸಿಬ್ಬಂದಿ ಇಟ್ಟು ನಿವ್ವಳ ಲಾಭವನ್ನು ಎಷ್ಟರಮಟ್ಟಿಗೆ ತೋರಿಸುತ್ತಾರೆಂಬುದನ್ನು ನೋಡಿ. ರೈತನ ನಿವ್ವಳ ಆದಾಯವನ್ನು ನಹ ಲೆಕ್ಕಹಾಕಿ ನೋಡಿ. ರೈತನಾದವನು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅವನ ಹೆಂಡತಿ, ಮಕ್ಕಳು ಎಲ್ಲಾ ಕೂಲಿ ಮಾಡುತ್ತಾರೆ. ಅದನ್ನು ಇವರು ಲೆಕ್ಕಹಾಕಿಲ್ಲ. ಅದನ್ನು ನಿಜವಾಗಿ ಇವರು ಲೆಕ್ಕಹಾಕಿದರೆ ಇವರ ಬಿಜಿನೆಸ್, ಅಕೌಂಟ್ಸಿ ಪ್ರಕಾರ ನೋಡಿದರೆ ಮೈಸೂರು ದೇಶದಲ್ಲಿ ಅದರಲ್ಲೂ ಭಾರತ ದೇಶದಲ್ಲಿ ಎಷ್ಟರಮಟ್ಟಿಗೆ ಲಾಭದಾಯಕ ಎನ್ನುವುದನ್ನು ಕಾಣಬಹುದು. ವರಮಾನ ಬರುವುದಿಲ್ಲ, ನಷ್ಟ ಆಗುತ್ತದೆ. ದೊಡ್ಡದೊಡ್ಡ ಜಮೀನ್ದಾರರಿಗೆ ಲಾಭ ಬರಬಹುದು. ಶಾಸ್ತ್ರೀಯ ವಾಗಿ ಅಂದಾಜು ತಯಾರುಮಾಡಿ ಶಾಸ್ತ್ರೀಯವಾದ ತೆರಿಗೆ ನೀತಿಯನ್ನು ಹಾಕಬೇಕು. ಮೊದಲ ನಿಂದಲೂ ನಾನು ಇಲ್ಲಿ ಹೇಳುತ್ತಿದ್ದೇನೆ. ರೈತರ ಮೇಲೆ ಬೀಳತಕ್ಕ ತೆರಿಗೆ ಶಾಸ್ತ್ರೀಯವಾದ ರೀತಿಯಲ್ಲಿ ಅಳವಡಿಸಿಕೊಂಡಿರಬೇಕು ಎಂಬುದಾಗಿ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಕಂದಾಯಮಂತ್ರಿಗಳಿಗೂ ಒಂದು ವಿಷಯವನ್ನು ಹೇಳುತ್ತೇನೆ. ಕಂದಾಯ ಮಸೂದೆ ಏನಿದೆ ಅದನ್ನು ವಾಪಸ್ಸು ತೆಗೆದು ಕೊಳ್ಳಿ. ದೇಶದಲ್ಲಿ ಆಹಾರವನ್ನು ಹೆಚ್ಚಿಗೆ ಬೆಳೆಯಬೇಕು ಎಂಬ ಒಂದು ನೀತಿಯಿದ್ದ ಪಕ್ಷದಲ್ಲಿ ರೈತ ನಿಗೆ ಉತ್ಪನ್ನ ಜಾಸಿ ಯಾಗಬೇಕು ಎಂಬ ಹುಮ್ಮಸ್ಸನ್ನು ಮತ್ತು ಒಳ್ಳೆಯ ಮನಸ್ಸನ್ನುಂಟುಮಾಡ ಬೇಕಾಗಿದ್ದರೆ ಇದನ್ನು ವಾಪಸ್ಸು ತೆಗೆದುಕೊಳ್ಳಿ. ಇದನ್ನು ಬಹಳ ಕ್ರೂರವಾದ ಶಾಸನವೆಂದು ಹೇಳಿ ಈ ಶಾಸನದಿಂದ ರೈತನ ಬೆನ್ನು ಮುರಿಯಬಾರದೆಂದು ಹೇಳಿ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ದೇಶಕ್ಕೆ ಸ್ವಾತಂತ್ರ್ಯ ಬಂದು ಇಂಗ್ಲೀಷರು ಈ ದೇಶ ಬಿಟ್ಟು ಹೋದನಂತರ ನಮ್ಮವರೇ ಆದಜನ ದೇಶದ ಎಲ್ಲಾ ಅಧಿಕಾರಿಗಳ ಸ್ಥಾನವನ್ನು ಆಕ್ರಮಿಸಿ ಕೊಂಡು ನಮ್ಮ ದೇಶದ ಜನಗಳ ಕಷ್ಟವನ್ನೂ ಸಾಮಾನ್ಯವಾಗಿ ಜನತೆಯ ದುರ್ಬರ ಬಡತನ ಏನಿದೆ ಅದನ್ನೂ ಪಾರುಮಾಡುವ ಉದ್ದೇಶದಿಂದ ಕ್ರಾಂತಿಕಾರಕ ಬದಲಾವಣೆಗಳನ್ನು ಜಾರಿಗೆ ತರುತ್ತಾ ರೆಂಬ ಆಶೆಯನ್ನು ಜನ ಇಟ್ಟುಕೊಂಡಿದ್ದರು. ಇದಕ್ಕಾಗಿ ದೇಶದಲ್ಲಿ ಸಾವಿರಾರು ಜನ ಕಾರ್ಮಿ ಕರು, ರೈತರು ತಮ್ಮ ಪ್ರಾಣಾರ್ಪಣೆಮಾಡಿ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲಕೊಟ್ಟು ದೇಶಕ್ಕೆ ಸ್ವಾತಂತ್ರ್ಯ ತಂದರು. ಆದರೆ ಈ ದಿನ ನಮ್ಮವರೇ ಆದ ಕಾಂಗ್ರೆಸ್ ಪಕ್ಷದವರು ಈ ಅಧಿಕಾರವನ್ನು ನಿಜವಾಗಿಯೂ ಕೂಡ ಯಾರಿಗೋಸ್ಕರ ಉಪಯೋಗಿಸಬೇಕಾಗಿತ್ತೋ, ಯಾವ ಉದ್ದೇಶಕ್ಕೋಸ್ಕರ ಉಪಯೋಗಿಸಲು ವಾಗ್ದಾನಕೊಟ್ಟಿದ್ದರೋ ಅದಕ್ಕೆ ತದ್ವಿರುದ್ಧವಾಗಿ ವ್ಯವಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಉದಾಹರಣೆಗೆ ಈ ಸಭೆಯ ಮುಂದೆ ಮಸೂದೆಯನ್ನು ಮಾನ್ಯ ರೆವಿನ್ಯೂ ಸಚಿವರು ಮಂಡಿಸಿದ್ದಾರೆ. ಅದರ ಬಗ್ಗೆ ಸಭೆಯಲ್ಲಿ ನಡೆಯುತ್ತಾ ಇರುವ ಚರ್ಚೆಯಲ್ಲಿ ಎಷ್ಟೋ ವಿಧವಾಗಿ ಸರ್ಕಾರದವರು ಹಾಗೂ ಅಧಿಕಾರಿಗಳು ಏನು ಸಭೆಯಮುಂದೆ ವರದಿಗಳನ್ನು ಇಟ್ಟಿದ್ದಾರೋ ಅವು ಶಾಸ್ತ್ರೀಯವಾಗಿಲ್ಲ, ಅಶಾಸ್ತ್ರೀಯವಾಗಿದೆ, ವರದಿಗಳನ್ನು ಚೆನ್ನಾಗಿ ಬರೆ ದಿಲ್ಲವೆಂದು ಹಲವಾರು ಸದಸ್ಯರು ಹೇಳಿದರು. ಇದನ್ನೇ ಅಧಾರವಾಗಿಟ್ಟುಕೊಳ್ಳಬೇಡಿ. ಇದಕ್ಕೆ ಒಂದು ಸೂಕ್ತವಾದ ಕ್ರಮವನ್ನು ಕಂಡುಹಿಡಿಯಿರಿ ಎಂಬುದಾಗಿ ನಾಲ್ಕಾರುಸಾರಿ ಸರ್ಕಾರಕ್ಕೆ ಮೊರೆ ಇಟ್ಟರೂ ಕೂಡ ಅವರಿಗೊಂದು ಹಟಮಾರಿತನ ಅದೇನೆಂದರೆ ಅವರು ಮಾಡಿದ್ದೇ ನ್ಯಾಯ. ನಮ್ಮ ಅಧಿಕಾರಿಗಳು ಮಾಡಿದ್ದೇ ವೇದವಾಕ್ಯ ಕ್ರೈಸ್ತರು ಬೈಬಲ್ಲಿಗೆ, ಮುಸಲ್ಮಾನರು ಖುರಾನಿಗೆ ಯಾವರೀತಿ ಪ್ರಾಮುಖ್ಯತೆಯನ್ನು ಕೊಡುತ್ತಾರೋ ಅದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಈ ವರದಿಗಳಿಗೆ ಕೊಟ್ಟಿರುವುದನ್ನು ನೋಡಿದರೆ ನನಗಾದರೂ ಬಹಳ ಆಶ್ಚರ್ಯವಾಗುತ್ತದೆ. ಅವರಿಗೆ ವಿಚಾರಮಾಡುವುದು ಅಷ್ಟೇ ಅಲ್ಲ. ಎಷ್ಟು ಚರ್ಚೆ ನಡೆದರೂ ಕೂಡ ಆ ವರದಿಗಳು ಸರಿಯಾಗಿವೆಯೆಂದು ಹೇಳುತ್ತಾರೆ. ಆ ಒಂದು ಉದ್ದೇಶದಿಂದಲೇ ನಾನು ಒಂದು ಉದಾಹರಣೆಯನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಸುಮಾರು 8 ಲಕ್ಷ 21 ಸಾವಿರ ಎಕರೆ ಒಟ್ಟು ಜಮೀನು ಇದೆ.

2-30 P.M.

ಇದರಲ್ಲಿ ¾ ಭಾಗ ಜಮೀನು ಖುಷ್ಕೀ ಜಮೀನು ಇದೆ. ಇದನ್ನು ಸರ್ವೆ ಅಂಡ್ ಸೆಟಲ್‌ಮೆಂಟ್ ಇಲಾಖೆಯವರು 10 ನೇ ಜೋನ್ ಮತ್ತು 11 ನೇ ಜೋನ್ ಎಂಬುದಾಗಿ ಎರಡು ಜೋನುಗಳಾಗಿ ವಿಂಗಡಿಸಿದ್ದಾರೆ. 10 ನೇ ಜೋನಿನಲ್ಲಿ ಮೊದಲು ಖುಷ್ಕೀ ಜಮೀನಿಗೆ 3,80,477 ರೂಪಾಯಿಗಳ ಕಂದಾಯವನ್ನು ಕೊಡುತ್ತಿದ್ದರು. ಈ 10 ನೇ ಡಿವಿಜನ್ನಿಗೆ ಮುಳುಬಾಗಿಲು ತಾಲ್ಲೂಕು, ಮತ್ತು ಶ್ರೀನಿವಾಸಪುರ ತಾಲ್ಲೂಕು ಈ ಎರಡು ತಾಲ್ಲೂಕುಗಳು ಸೇರುತ್ತವೆ. ಈ 10 ನೇ ಜೋನಿನ ರೈತರು 3,80,477 ರೂಪಾಯಿಗಳ ಖುಷ್ಕೀ ಕಂದಾಯವನ್ನು ಕೊಡುತ್ತಿದ್ದರು. ಸಭೆಯ ಮುಂದೆ ಬಂದಿರುವ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕದ ಪ್ರಕಾರ 6.30,216 ರೂಪಾಯಿಗಳ ಕಂದಾಯವನ್ನು ಕೊಡಬೇಕಾಗುತ್ತದೆ. ಇದನ್ನು ಸ್ವಲ್ಪ ಹೆಚ್ಚು ಕಡಿಮೆ ಅಂದಾಜು ಮಾಡುವುದಾದರೆ ಈ ಜೋನಿನಲ್ಲಿ 60 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಆಮೇಲೆ ಕೋಲಾರ ಜಿಲ್ಲೆಯಲ್ಲಿ 11 ನೇ ಡಿವಿಜನ್ ತೆಗೆದುಕೊಂಡರೆ ಅದರಲ್ಲಿ ಕೋಲಾರ, ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ 20 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಕೋಲಾರ ಮತ್ತು ಮುಳುಬಾಗಿಲು ತಾಲ್ಲೂಕುಗಳಲ್ಲಿ ಪಾಲಾರ್ ನದಿಯು ಹರಿಯುತ್ತದೆ. ಆ ಎರಡು ತಾಲ್ಲೂಕುಗಳಲ್ಲಿಯೂ ಒಂದೇ ತರಹ ಜಮೀನು ಇದೆ. ಆದರೆ ಕೋಲಾರ ತಾಲ್ಲೂಕಿನಲ್ಲಿ 20 ಪರ್ಸೆಂಟ್ ಕಂದಾಯ ಮಾತ್ರ ಜಾಸ್ತಿಯಾಗುತ್ತದೆ. ಮುಳಬಾಗಿಲು ತಾಲ್ಲೂಕಿನಲ್ಲಿ 60 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ ನಾವು ಇದರ ಬಗ್ಗೆ ಹತ್ತಾರು ಸಾರಿ ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೇವೆ. ಮತ್ತು ಅನೇಕಸಾರಿ ಕಾಂಗ್ರೆಸ್ ಸದಸ್ಯರು ಮತ್ತು ಬೇರೆ ಪಾರ್ಟಿಯ ಸದಸ್ಯರುಗಳೂ ಖುದ್ದಾಗಿ ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೇವೆ. ರವಿನ್ಯೂ ಸೆಟ್ಲ್‌ಮೆಂಟ್ ರಿಪೋರ್ಟ್ ಸರಿಯಾಗಿಲ್ಲ, ಇದು ಬಹಳ ಅಬಾಸವಾದ ಪರಿಸ್ಥಿತಿಯಲ್ಲಿದೆ, ಇದರ ಬಗ್ಗೆ ಹತ್ತಾರು ಜನ ತಜ್ಞರುಗಳಿಂದ ಕೂಡಿದಂತಹ ಒಂದು ಸಮಿತಿಯನ್ನು ಮಾಡಿ ಅವರು ಇದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಿ, ಇದನ್ನು ಬಹಳ ಆತುರ ಆತುರವಾಗಿ ಮಾಡಬೇಡಿ, ಅದು ಅಷ್ಟು ಸಮಂಜಸವಾಗಿ ಆಗುವುದಿಲ್ಲ ಎಂದು ಅನೇಕ ಜನರು ಸರ್ಕಾರದವರಿಗೆ ಹೇಳಿದ್ದಾರೆ. ಇದನ್ನು ಒಂದು ನ್ಯಾಯವಾದ ರೀತಿಯಲ್ಲಿ ತಯಾರು ಮಾಡಬೇಕು, ಇದರ ಬಗ್ಗೆ ನಾಳೆ ದಿವಸ ಜನಗಳು ಏನಾದರೂ ಕೇಳಿದರೆ ಅವರಿಗೆ ಒಂದು ಸಮಜಾಯಿಷಿಯನ್ನು ಕೊಡುವ ಪರಿಸ್ಥಿತಿಯಲ್ಲಿ ಇರಬೇಕು ಎಂದು ಹೇಳಿದರೂ ಕೂಡ ನಮ್ಮ ಸರ್ಕಾರದವರು ಆ ಬಗ್ಗೆ ಗಮನ ಕೊಡದೆ ನಾವು ಹೇಳಿದಂತಹ ಸಲಹೆಗಳನ್ನು ಸರ್ಕಾರದವರು ತಿರಸ್ಕಾರ ಮಾಡಿದ್ದಾರೆ ಇದು ಸರಿಯಲ್ಲ. ಇದರಲ್ಲಿ ನಾನು ಮುಖ್ಯವಾಗಿ ಹೇಳುವುದೇನೆಂದರೆ ಸಣ್ಣ ಹಿಡುವಳಿದಾರರಿಗೆ ಕಂದಾಯವನ್ನು ಮನಾ. ಮಾಡಬೇಕು. ಇದರ ಬಗ್ಗೆ ನಾವು ಒತ್ತಾಯ ಮಾಡುತ್ತಿದ್ದೇವೆ. ಈ ವಿಷಯದಲ್ಲಿ ಮೊನ್ನೆ ದಿವಸ ಮಾತನಾಡಿದ ಶ್ರೀಮಾನ್ ಗಾಂಜಿ ವೀರಪ್ಪನವರು ಮತ್ತು ಇನ್ನು ಕೆಲವು ಮಾನ್ಯ ಸದಸ್ಯರು ಈ ಒಂದು ತತ್ವವನ್ನು ಒಪ್ಪುತ್ತೇವೆ, ಇದನ್ನು ಮಾಡಬೇಕಾದ್ದು ನ್ಯಾಯವಾಗಿದೆ ಎಂದು ಹೇಳಿದ್ದಾರೆ. ಈಗ ಸರ್ಕಾರದವರು ಸಣ್ಣ ಹಿಡುವಳಿದಾರರಿಗೆ ಕಂದಾಯವನ್ನು ಮನ್ನಾ ಮಾಡುವುದನ್ನು ಮುಂದೆ ಮಾಡೋಣ ಎಂದು ಹೇಳುವುದಾದರೆ, ಈ ದಿವಸ ಕಾಫೀ ತೋಟಗಳಿಗೆ 6¼ ಪರ್ಸೆಂಟ್ ಕಂದಾಯ ಇದ್ದನ್ನ "One per cent of the avarage yield of crops per acre" ಎಂದು ತಿದ್ದುಪಡಿಯನ್ನು ತರುವುದಕ್ಕೆ ಅವಕಾಶ ಹೇಗೆ ಇದೆ ? ಆದರೆ ಸಣ್ಣ ಹಿಡುವಳಿದಾರರಿಗೆ ಕಂದಾಯವನ್ನು ಈಗಲೇ ಮನ್ನಾಮಾಡುವ ವಿಚಾರದಲ್ಲಿ ತಿದ್ದುಪಡಿಯನ್ನು ತರುವುದಕ್ಕೆ ಅವಕಾಶವಿಲ್ಲವೇ ? ತಿದ್ದುಪಡಿಯನ್ನು ಏತಕ್ಕೆ ತರಬಾರದು ಎಂದು ನಾನು ಕೇಳುತ್ತೇನೆ. 5 ಎಕರೆಯ ಕೆಳಗಡೆ ಜಮೀನು ಇರತಕ್ಕ ಹಿಡುವಳಿ ದಾರರಿಗೆ ಕಂದಾಯವನ್ನು ಮನ್ನಾ ಮಾಡುವ ತಿದ್ದುಪಡಿಯನ್ನು ತರುವುದು ಮುಖ್ಯವಲ್ಲವೇ ? ಎಂದು ನಾನು ಸರ್ಕಾರದವರನ್ನು ಕೇಳಬಯಸುತ್ತೇನೆ. ಈಗ ತಾನೆ ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ ಸಣ್ಣ ಹಿಡುವಳಿದಾರರು ಕರೀ ಚೆಡ್ಡಿ ಮತ್ತು ಬನೀನು ಹಾಕಿಕೊಂಡು ಜೀವನ ಮಾಡುತಾ ಅವರು ಸರ್ಕಾರಕ್ಕೆ 10 ರೂಪಾಯಿ 20 ರೂಪಾಯಿ ತೆರಿಗೆಯನ್ನು ಈಗಾಗಲೇ ಸರ್ಕಾರಕ್ಕೆ ಕೊಡು ತಿದ್ದಾರೆ. ಈ ವಿಚಾರವನ್ನು ಅನೇಕ ಜನ ಮಾನ್ಯ ಸದಸ್ಯರು ಈಗಾಗಲೇ ಸರ್ಕಾರಕ್ಕೆ ತಿಳಿಸಿದ್ದಾರೆ. ಆವಡಿ ಅಧಿವೇಶನ ಆದಮೇಲೆ ಸಮಾಜವಾದದ ಗುರಿಯ ಹತ್ತಿರ ಸಾಗುತ್ತಾಮುಂದೆ ಹೋಗುತ್ತಿರುವಾಗ, ಸಮಾಜದಲ್ಲಿ ಯಾರಿಗೆ ಜೀವನವನ್ನು ಮಾಡಲು ಕಷ್ಟವಾಗಿದೆ, ಯಾರಿಗೆ ಕಡಿಮೆ ವರಮಾನ ವಿದೆ, ಯಾರಿಗೆ ಒಂದು ಕರೀ ಚೆಡ್ಡಿ ಮತ್ತು ಒಂದು ಬನೀನು ಹಾಕಿಕೊಳ್ಳುವುದಕ್ಕೆ ಶಕ್ತಿ ಇಲ್ಲವೋ ಅಂಥವರಿಗೆ ಮನ್ನಣೆ ಸಿಕ್ಕಿಲ್ಲ, ಕಂದಾಯದ ರಿಯಾಯಿತಿ ಸಿಕ್ಕಿಲ್ಲ. ಇಂಥಾ ಜನಗಳಮೇಲೆ ಅಪ್ರತ್ಯಕ್ಷ ತೆರಿಗೆಯನ್ನು ಬೇರೆ ಹಾಕಿದ್ದಾರೆ. ಸಾಮಾನ್ಯವಾಗಿ 100 ಕ್ಕೆ 80 ಜನ ರೈತರು 5 ಎಕರೆಗಿಂತ ಕಡಿಮೆ ಜಮೀನನ್ನು ಇಟ್ಟುಕೊಂಡಿರತಕ್ಕ ಸಣ್ಣ ಹಿಡುವಳಿದಾರರು. ಇಂಥವರಿಗೆ ಕಂದಾಯವನ್ನು ಹೆಚ್ಚುಮಾಡುವುದು ಖಂಡಿತಾ ಯಾವರೀತಿಯಿಂದಲೂ

(ಶ್ರೀ ಪಿ. ವೆಂಕಟಗಿರಿಯಪ್ಪ)

ಸರ್ವಥಾ ನ್ಯಾಯವಾಗಲಾರದು. ನಿಜ ವಾಗಿಯೂ ಇದು ಸಮಾಜವಾದದ ನೀತಿಗೆ ವಿರೋಧವಾದ ನೀತಿಯಾಗುತ್ತದೆ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಇನ್ನೊಂದು ವಿಷಯವೇನೆಂದರೆ ಈ ರಿವಿಜನ್ ಅಂಡ್ (and) ಸೆಟ್ಲ್‌ಮೆಂಟ್ ರಿಪೋರ್ಟುಗಳು ಒಂದೊಂದು ಜೋನ್‌ನಲ್ಲಿ ಒಂದೊಂದು ತರಹ ರಿಪೋರ್ಟುಗಳು ಬಂದಿವೆ. ಹೆಚ್ಚು ಮಳೆ ಬೀಳತಕ್ಕ ಪ್ರದೇಶಗಳಲ್ಲಿ ಅನೇಕಕಡೆ ರೈತರಿಗೆ ಮಾರ್ಕೆಟ್ ಫೆಸಿಲಿಟೀಸ್ ಅನ್ನು ಒದಗಿಸಿಕೊಟ್ಟಿಲ್ಲ. ಅನೇಕಕಡೆ ಎಕರೆಗೆ $1\frac{1}{4}$ ರೂಪಾಯಿ $1\frac{1}{8}$ ರೂಪಾಯಿಗಳ ಕಂದಾಯ ಇರುವುದು ಎಕರೆಗೆ $2\frac{1}{2}$ ರೂಪಾಯಿ 3 ರೂಪಾಯಿಗಳಾಗುವ ಸಂಭವ ಬಂದಿದೆ. ಅದರಲ್ಲಿಯೂ ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಖುಷ್ಕೀ ಕಂದಾಯವನ್ನು ಹಾಕಿದ್ದಾರೆಂದು ಹತ್ತಾರುವರ್ಷಗಳಿಂದ ಕೋಲಾರದ ಜನತೆ ಮತ್ತು ಕೋಲಾರ ಜಿಲ್ಲೆಯ ಜನತೆಯ ಪ್ರತಿನಿಧಿಗಳೂ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಕೋಲಾರ ಜಿಲ್ಲೆಯ ಜನತೆಯ ಪ್ರತಿನಿಧಿಗಳು ಹಿಂದಿನ ಸಭೆಯಲ್ಲಿ ಈ ವಿಚಾರದಲ್ಲಿ ಹೋರಾಟ ಮಾಡುತ್ತಿದ್ದುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ ಈಗ ಮತ್ತೆ ಕಂದಾಯವನ್ನು ಜಾಸ್ತಿಮಾಡುವುದಕ್ಕೆ ಮಸೂದೆಯನ್ನು ಸಭೆಯಮುಂದೆ ತಂದಿದ್ದಾರೆ. ಈ ಜಿಲ್ಲೆಯಲ್ಲಿ ಒಂದು ಡಿವಿಜನ್‌ನಲ್ಲಿ 60 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಇನ್ನೊಂದು ಡಿವಿಜನ್‌ನಲ್ಲಿ 20 ಪರ್ಸೆಂಟ್ ಕಂದಾಯ ಜಾಸ್ತಿಯಾಗುತ್ತದೆ. ಈ ರೀತಿ ಮಾಡತಕ್ಕದ್ದು ಸರಿಯಲ್ಲ. ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಖುಷ್ಕೀ ಜಮೀನಿನ ಕಂದಾಯ ಜಾಸ್ತಿ ಇದೆ. ಆದ್ದರಿಂದ ಯಾವರೀತಿಯಿಂದಲೂ ಕೂಡ ಅಲ್ಲಿ ಕಂದಾಯವನ್ನು ಜಾಸ್ತಿ ಮಾಡಬಾರದು ಈಗ ಹಿರಿಯೂರಿನಲ್ಲಿ ಒಂದು ಎಕರೆಗೆ 4 ಆಣೆ 8 ಆಣೆ ಕಂದಾಯ ಇದೆ. ಆದರೆ ಕೋಲಾರದಲ್ಲಿ ಒಂದು ಎಕರೆಗೆ 2 ರೂಪಾಯಿ $2\frac{1}{4}$ ರೂಪಾಯಿಗಳಿವೆ. ಅದರ ಮೇಲೆ ಇನ್ನೂ ಕಂದಾಯವನ್ನು ಜಾಸ್ತಿ ಮಾಡಬೇಕೆಂಬುದು ಖಂಡಿತಾ ಸರಿಯಲ್ಲ. ಸಣ್ಣ ಹಿಡುವಳಿದಾರರಿಗೆ ಕಂದಾಯವನ್ನು ಮಾಫಿ ಮಾಡುವುದಕ್ಕೆ ಒಂದು ತಿದ್ದುಪಡಿಯನ್ನು ತಂದು ರೈತರ ಹಿತವನ್ನು ಕಾಪಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ರೆವಿನ್ಯೂ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಈ ರಿವಿಜನ್ ಸೆಟ್ಲ್‌ಮೆಂಟ್ ಅನ್ನು 30 ವರ್ಷಗಳಿಗೊಮ್ಮೆ ಮಾಡಲೇಬೇಕು ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳುತ್ತಾರೆ. ಅವರು ಈ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿಯ ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸುವಾಗ ಯಾರು ಇವನ್ನು ವಿರೋಧಿಸುತ್ತಾರೆಯೋ ಅವರು ದೇಶದ್ರೋಹ ಮಾಡಿದಹಾಗಾಗುತ್ತದೆ, ಅದಕ್ಕೋಸ್ಕರ ಯಾರೂ ಇದನ್ನು ವಿರೋಧ ಮಾಡಬಾರದು ಎಂದು ಅವರು ಈ ಮಾನ್ಯ ಸಭೆಯಲ್ಲಿ ಹೇಳಿದರು. ಮತ್ತು ವಿರೋಧ ಪಕ್ಷದವರು ಕಂದಾಯ ಏರಿಕೆಯ ಬಗ್ಗೆ ಉಪವಾಸ ಮುಷ್ಕರವನ್ನು ಹೂಡಿದಮೇಲೆ, ಕಾಂಗ್ರೆಸ್ ಪಕ್ಷದಲ್ಲೇ ಈ ಕಂದಾಯ ಏರಿಕೆಯ ಬಗ್ಗೆ ವಿರೋಧ ಬಂದು ಮೊದಲು ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿದಂತಹ ಭೂಕಂದಾಯಕ್ಕೆ ಸಂಬಂಧಿಸಿದ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡು ಈಗ ಭೂಕಂದಾಯಕ್ಕೆ ಸಂಬಂಧಿಸಿದ ತಿದ್ದುಪಡಿಯಂತೆ ಒಟ್ಟು ಆದಾಯದಲ್ಲಿ ಶೇಕಡಾ $6\frac{1}{4}$ ಭಾಗದ ಬದಲು ಶೇಕಡಾ 4 ರಷ್ಟು ಕಂದಾಯ ವಿಧಿಸುವಂತೆ ಮಾಡಿ ಕೆಲವು ಅಂಕಿ ಅಂಶಗಳನ್ನು ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಈ ಅಂಕಿ ಅಂಶಗಳ ಪ್ರಕಾರ ವಾಟರ್ ರೇಟು, ಇರಿಗೇಷನ್ ಚಾರ್ಜಸ್ ಮೆಂಟೆನೆನ್ಸ್ ಚಾರ್ಜಸ್ ಇವುಗಳೆಲ್ಲಾ ಒಂದಕ್ಕೆರಡಷ್ಟಾಗುತ್ತದೆ. ಮಾನ್ಯ ಮಂತ್ರಿಗಳು 30 ವರ್ಷಗಳಿಗೊಮ್ಮೆ ರಿವಿಜನ್ ಸೆಟ್ಲ್‌ಮೆಂಟ್ ಮಾಡಬೇಕು, ಕಂದಾಯವನ್ನು ಏರಿಸಬೇಕು ಎಂದು ಹೇಳಿದರು. ರಿವಿಜನ್ ಮತ್ತು ಸೆಟ್ಲ್‌ಮೆಂಟ್ ಮಾಡುವಾಗ ಕಂದಾಯವನ್ನು ಬೇಕಾದರೆ ವಜಾ ಮಾಡಬಹುದು. ಕಂದಾಯವನ್ನು ಜಾಸ್ತಿ ಮಾಡಲೇಬೇಕೆಂದೇನು ಇಲ್ಲ. ಆವಡಿ ಅಧಿವೇಶನ ಆದಮೇಲೆ ಕಾಂಗ್ರೆಸ್ಸಿನವರು ನಾವು ಸಮಾಜವಾದವನ್ನು ಜಾರಿಗೆ ತರುತ್ತೇವೆ, ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯನ್ನು ಸ್ಥಾಪನೆ ಮಾಡುತ್ತೇವೆಂದು ಅವರು ತೀರ್ಮಾನವನ್ನು ತೆಗೆದುಕೊಂಡು 10 ವರ್ಷಗಳಮೇಲೆ ಆದರೂ ಕೂಡ ಆ ಬಗ್ಗೆ ಇವರು ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಮತ್ತು ಸಾಹುಕಾರರು ಜಾಸ್ತಿ ಸಾಹುಕಾರರಾಗುವುದಕ್ಕೆ ಅವಕಾಶವಿದೆ; ಬಡವರು ಅತಿ ಬಡವರಾಗುವುದಕ್ಕೆ ಅವಕಾಶವಿದೆ. ಸರಕಾರದವರು ಸಮಾಜವಾದ ಹಾದಿಯಲ್ಲಿ ಹೋಗುತ್ತಿದ್ದೇವೆಂದು ಹೇಳುತ್ತಿದ್ದಾರೆ. ಹಾಗಿದ್ದರೆ, ಕಂದಾಯವನ್ನು, ಸ್ಮಾಲ್ ಹೋಲ್ಡರುಗಳಿಗೆ ವಜಾಮಾಡಿ. ಮೊದಲು, 5 ಎಕರೆಗೆ ಕಡಿಮೆ ಇರುವವರಿಗೆ ಯಾವ ವಿಧವಾದ ಕಂದಾಯವನ್ನೂ ವಿಧಿಸಬೇಡಿ. ಮತ್ತೊಂದು 5 ವರ್ಷ ಕಳೆದ ಮೇಲೆ, 10 ಎಕರೆ ವರೆಗೆ ವಿಧಿಸಬೇಡಿ. ಹೀಗೆ ಒಂದು 20 ವರ್ಷದ ಪ್ರೋಗ್ರಾಂ ಇಟ್ಟುಕೊಂಡು,

ಭೂಕಂದಾಯವನ್ನೇ ತೆಗೆದುಹಾಕಬೇಕು. ಮತ್ತು ಇತರ ಕಡೆಗಳಿಂದ ಬರತಕ್ಕಂಥ ಆದಾಯಗಳನ್ನು ಸರಿಯಾಗಿ ವಸೂಲು ಮಾಡಬೇಕು. ಎಸ್ಟಾಬ್ಲಿಶ್‌ಮೆಂಟುಗಳಿಗೆ ತಗಲುತ್ತಿರುವಂಥ ವೆಚ್ಚವನ್ನು ಕಡಿಮೆ ಮಾಡಬೇಕು. ಹೀಗೆ ಆದಾಯ-ಖರ್ಚನ್ನು ಸಮದೂಗಿಸತಕ್ಕಂಥ ಅವಕಾಶ ಬೇಕಾದಷ್ಟಿದೆ. ಇಂಥಹ ಅವಕಾಶವಿದ್ದರೂ ಸಹ, ಪ್ರತಿಯೊಂದು ಸಲವೂ, ಸುಂಕ ಹಾಕುವ, ತೆರಿಗೆ ಹಾಕುವ ಒಂದು ಅಭ್ಯಾಸವನ್ನು, ಮನೋಭಾವವನ್ನು ಸರಕಾರದವರು ಬಳಸಿಕೊಂಡಿದ್ದಾರೆ. ಆದಾಯ ಹೆಚ್ಚಿದ ಹಾಗೆ, ಎಸ್ಟಾಬ್ಲಿಶ್‌ಮೆಂಟ್ ಚಾರ್ಜ್‌ಸನ್ನು ಕಡಿಮೆಮಾಡಿಕೊಳ್ಳುವ ಮನೋಭಾವವಿಲ್ಲ; ಸರಕಾರದ ಗಮನ ಈ ದಿಕ್ಕಿನಲ್ಲಿ ಹರಿದರೆ, ನಮ್ಮ ಸರಕಾರದ ಆರ್ಥಿಕ ಸ್ಥಿತಿ ಎಷ್ಟೋ ಉತ್ತಮವಾಗುತ್ತದೆ. ಮೊನ್ನೆತಾನೆ ಫೈನಾನ್ಸ್ ಮಿನಿಸ್ಟರು ಅವರ ಬಜೆಟ್ ಭಾಷಣದಲ್ಲಿ, ಸೇಲ್ಸ್‌ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸಿನಲ್ಲಿ 48 ಪರ್ಸೆಂಟ್ ಎಸ್ಟಾಬ್ಲಿಶ್‌ಮೆಂಟ್ ಚಾರ್ಜಸ್ಸಿಗೆ ಹೋಗಿ, 19 ಕೋಟಿ ರೂಪಾಯಿ ಆದಾಯ ಬರುತ್ತಿದೆ ಎಂದು ಹೇಳಿದರು. ಅಂದರೆ, 9 ಕೋಟಿ ರೂಪಾಯಿ ಬರೀ ಎಸ್ಟಾಬ್ಲಿಶ್‌ಮೆಂಟ್ ಚಾರ್ಜ್‌ಸ್ಸಿಗೆ ಆಗಿದೆ. ಇಂಥ ಮನೋಭಾವವನ್ನು ಬೆಳೆಸಿಕೊಂಡು ಬಂದು, ಸಾಲದೆ ಬರುವ ದುಡ್ಡಿಗೆ ಕಂದಾಯ ಹಾಕುತ್ತೇವೆಂದು ಹೇಳುವುದು ಉಚಿತವಲ್ಲ. ಹಿಂದೆ ಮೂರುವರೆ ಕೋಟಿ ರೂಪಾಯಿ ಆದಾಯವಿದ್ದಾಗ, ಲ್ಯಾಂಡ್‌ರವಿನ್ಯು ಮುಖ್ಯ ವರಮಾನವಾಗಿದ್ದುದರಿಂದ, ಜಮೀನುಮೇಲೆ ಶರಿಗೆ ಹಾಕಿದ್ದಾರೆ. ಈಗ ದೇಶದ ಬಜೆಟ್ 125 ಕೋಟಿಗೆ ಏರಿರುವಾಗ, ಜಮೀನಿನಿಂದ ಬರತಕ್ಕಂಥ ಮೂರುವರೆ ಕೋಟಿ ಕಂದಾಯ ದೊಡ್ಡದಲ್ಲ; ಅದನ್ನು ತಕ್ಷಣ ವಜಾಮಾಡಬೇಕು. ಒಂದು ಸಮಯ ಹಾಗೆ ಮಾಡಲು ಇಷ್ಟವಿಲ್ಲದಿದ್ದರೆ, ಅದನ್ನು ಕಡಿಮೆ ಹಿಡುವಳಿದಾರರಿಗಾದರೂ ಕಡಿಮೆ ಮಾಡಿ. ಇನ್‌ಕಂಟ್ಯಾಕ್ಸಿಗೆ ಹೇಗೆ 3,400 ರೂಪಾಯಿವರೆಗೆ ವಿನಾಯಿತಿ ಕೊಟ್ಟಿದ್ದಾರೋ ಅದೇರೀತಿಯಾಗಿ 5-10 ಎಕರೆ ಮಿತಿ ಇಟ್ಟುಕೊಂಡು, ಅವರಿಗೆ ವಜಾ ಮಾಡಿ. ಹೆಚ್ಚು ಆದಾಯವಿರತಕ್ಕಂಥ ಜಮೀನುದಾರರಿಗೆ ಹೇಗೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುತ್ತಾರೋ, ಆ ರೀತಿ ಹಾಕಿ, ಬೇಕಾದರೆ 2-3 ಪರ್ಸೆಂಟು ಹೆಚ್ಚುಮಾಡಿ. ಈ ಮೂಲಕ ಜಮೀನಿನಮೇಲೆ ಕೊಡುವ ಕಂದಾಯವನ್ನು ವಜಾಮಾಡಿ. ದೇಶ ಸ್ವಾತಂತ್ರ್ಯವಾಗುವಾಗ, ಇಂಗ್ಲೀಷರನ್ನು ಓಡಿಸುವಾಗ, ದೇವರು ಕೊಟ್ಟಿರುವ ಭೂಮಿಗೆ ಏಕೆ ಕಂದಾಯ ಕೊಡಬೇಕೆಂದು ಇವರು ಕೇಳುತ್ತಿದ್ದರು; ದೇವರು ಮಳೆ ಕೊಡುತ್ತಾನೆ, ಜಮೀನಿಗೆ ತೆರಿಗೆ ಏಕೆ ಕೊಡಬೇಕು ಅನ್ನುತ್ತಿದ್ದರು. ಸ್ವಾತಂತ್ರ್ಯ ಬಂದಮೇಲೆ ಇವರು ಕಂದಾಯವನ್ನು ವಜಾ ಮಾಡುತ್ತಾರೆಂದು ಜನ ತಿಳಿದುಕೊಂಡಿದ್ದರು. ಅಂಥಾದ್ದರಲ್ಲಿ, ದೇವರು ಕೊಟ್ಟಂಥ ಭೂಮಿಗೆ,ಮಳೆಗೆ ಬೆಳೆಯುವ ಜಮೀನುಗಳ ಕಂದಾಯ ಏರಿಸುವುದು ಅವಮಾನಕರ. ಇದು ಕಾಂಗ್ರೆಸ್ ಸರ್ಕಾರಕ್ಕೆ ತರವಲ್ಲ. ಇದು ಸಲ್ಲದು ಶ್ರೀಮಾನ್ ಜತ್ತಿಯವರು, ಅವರ ವರದಿಯಲ್ಲಿ ಹಾಲಿ ಇರುವ ಕಂದಾಯದಲ್ಲಿ 54 ಪರ್ಸೆಂಟ್ ಮಾತ್ರ ವಸೂಲಾಗಿದೆ, 46 ಪರ್ಸೆಂಟ್ ಅರಿಯರ್ಸ್ ಉಳಿದುಕೊಂಡಿದೆ ಎಂದು ಹೇಳಿದ್ದಾರೆ. ಕೊಡುವುದಕ್ಕೆ ಚೈತನ್ಯವಿಲ್ಲದೆ 46 ಪರ್ಸೆಂಟ್ ಹಾಗೆಯೇ ಬಾಕಿ ಇದೆ. ಗ್ರಾಮಾಂತರ ಪ್ರದೇಶಗಳಿಗೆ ಮಂತ್ರಿಗಳು ಫೌಂಡೇಶನ್ ಸ್ಟೋನ್ ಹಾಕುವುದಕ್ಕೆ ಓಪನಿಂಗ್ ಸೆರಮನಿಗಳಿಗೆ ಹೋಗುತ್ತಾರೆ. ಅಲ್ಲಿ ಗ್ರಾಮಾಂತರ ಪ್ರದೇಶಗಳ ಜನರ ಸ್ಥಿತಿ, ಅವರ ಬಟ್ಟೆಬರೆ, ಸ್ಥಿತಿಗತಿ ಮನೆಮಠಗಳನ್ನು ನೋಡಿ ಈ ತೆರಿಗೆ ರದ್ದುಮಾಡಬೇಕೆಂದು ಏಕೆ ಅನ್ನಿಸುವುದಿಲ್ಲವೊ, ನನಗೆ ಆಶ್ಚರ್ಯವಾಗುತ್ತದೆ.

Mr. SPEAKER.—The member has already spoken on the main Resolution and on the amendment, He is traversing the same ground.

ಶ್ರೀ ಬಿ. ಚನ್ನಬೈರೇಗೌಡ.—ಜೋನ್ ನಂಬರ್ ಬೆಂಗಳೂರು ಮತ್ತು ತುಂಪಕೂರು ಸೇರಿಸಿ ಬಿಟ್ಟು ಬರುತ್ತಿರುವ ಆದಾಯವನ್ನು 12ವರೆ ಲಕ್ಷ ರೂಪಾಯಿಗೆ ಏರಿಸಿದ್ದಾರೆ. ವಾಟರ್ ಸೆಸ್, ಮೇಂಟೆನೆನ್ಸ್ ಸೆಸ್ ಮತ್ತಿತರ ಸೆಸ್ಸು, ಯಾವುಯಾವುದನ್ನೊ ಸೇರಿಸಿ ಮಾಡಿದ್ದಾರೆ. 9 ಲಕ್ಷ ಇದ್ದದ್ದಕ್ಕೆ, ಇನ್ನೊಂದು 9 ಲಕ್ಷ ಸೇರಿಸಿದ್ದಾರೆ; 18 ಲಕ್ಷ ಆಗುತ್ತದೆ ಆದರೂ 6 ಲಕ್ಷ ರೂಪಾಯಿ ಅಂತ ಸುಳ್ಳು ಅಂಕಿಗಳನ್ನು ಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರುವ ಫಿಗರ್ಸ್ ಪ್ರಕಾರ 3 ಕೋಟಿ 54 ಲಕ್ಷ ರೂಪಾಯಿ ಎಕ್ಸಿಸ್ಟಿಂಗ್ ರೇಟಿನಲ್ಲಿ ಬರುತ್ತದೆ. ಇದನ್ನೂ ಸೇರಿಸಿದರೆ, 12ವರೆ ಕೋಟಿಯಾಗುತ್ತದೆ. ಇದನ್ನು ವಜಾ ಮಾಡಬೇಕು, ಇಲ್ಲದೆ ಹೋದರೆ ಬಹಳ ಅನಾಹುತಗಳಾಗುತ್ತವೆ, ರಕ್ತಕ್ರಾಂತಿ ಆಗುವುದರಲ್ಲಿ ಯಾವ ಅನುಮಾನವು ಇಲ್ಲ. ಆದ್ದರಿಂದ ಈ ಕಂದಾಯಗಳು ಹಾಕುವುದನ್ನು ವಜಾ ಮಾಡಬೇಕು.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಸೆಟಲ್‌ಮೆಂಟ್ ರಿಪೋರ್ಟಿನ ಬಗ್ಗೆ ಇರುವ ತಿದ್ದುಪಡಿ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ, ಒಂದೆರಡು ವಿಷಯಗಳನ್ನು ಮಾತನಾಡಲಿಚ್ಛಿಸುತ್ತೇನೆ.

(ಶ್ರೀ ಅಂದಾನಯ್ಯ)

ಈ ವರದಿಯನ್ನು ತಯಾರುಮಾಡಿದಂಥ ಸರ್ವೆ ಅಧಿಕಾರಿಗಳು ಒಂದೊಂದು ಕಡೆ ಒಂದೊಂದು ತರಹ ಹೇಳುತ್ತಾರೆ, 50 ವರ್ಷಗಳು ಸರ್ವೆಸೆಟಲ್‌ಮೆಂಟ್ ನಡೆದಿಲ್ಲ, ಆದ್ದರಿಂದ ಹೊಸದಾಗಿ ಮಾಡುತ್ತಾ ಇದ್ದೇವೆ. ರೈತ ಹೆಚ್ಚಿಗೆ ಆದಾಯ ಪಡೆಯುತ್ತಿದ್ದಾನೆ, ಆದ್ದರಿಂದ ತೆರಿಗೆ ಜಾಸ್ತಿ ಮಾಡಬೇಕು ಎಂಬ ಒಂದು ಅಂಶವನ್ನೂ ಕಾಣಿಸುತ್ತಾ ಇದ್ದಾರೆ.

ರೈತನಿಗೆ ಆದಾಯ ಬರಬೇಕಾದರೆ, ಸರ್ಕಾರ ಅವನಿಗೆ ಏನು ಅನುಕೂಲ ಮಾಡಿಕೊಟ್ಟಿದೆ ಅನ್ನುವುದನ್ನು ಮೊದಲು ಯೋಚನೆ ಮಾಡಬೇಕು. ಇವತ್ತು ರೈತ ಇಟ್ಟ ಬೆಳೆ ಅವನ ಕೈಗೆ ಸಿಕ್ಕ ಬೇಕಾದರೆ, ಸಕಾಲದಲ್ಲಿ ಮಳೆ ಬೀಳಬೇಕು. ಆವಾಗಲೂ ಹೆಚ್ಚು ಮಳೆ ಇದ್ದರೆ, ರೈತನು ಇಟ್ಟಂಥ ಬೆಳೆ ನಾಶವಾಗುತ್ತದೆ. ಇಂಥ ಪರಿಸ್ಥಿತಿ ಇರುವಾಗ, ರೈತನಿಗೆ ಬೇಕಾದ ಸೌಲಭ್ಯಗಳನ್ನು ಕೊಡವೆ, ರೈತನು ಇಟ್ಟ ಬೆಳೆಗೆ ಒಂದು ಸೆಕ್ಯೂರಿಟಿಯನ್ನು ಸರ್ಕಾರ ಕೊಡದೆ, ಅವನ ಮೇಲೆ ಈ ತೆರಿಗೆ ಭಾರ ವನ್ನು ಹೊರಿಸುವುದಾದರೆ, ರೈತನಿಗೆ ನಿಜವಾಗಿ ಕೊಡುವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ರೆವಿನ್ಯೂ ಮಂತ್ರಿಗಳು ಹೇಳುತ್ತಾ ಇದ್ದಾರೆ, ಮದ್ರಾಸ್ ಸರ್ಕಾರಕ್ಕೆ ಮತ್ತು ಆಂಧ್ರ ಸರ್ಕಾರಕ್ಕೆ ಜಾಸ್ತಿ ಕೊಡುತ್ತಾ ಇದ್ದಾರೆ, ಆದ್ದರಿಂದ ನಾವೂ ಅವರ ಮಟ್ಟಕ್ಕೆ ಈ ತೆರಿಗೆ ಜಾಸ್ತಿ ಮಾಡುತ್ತಾ ಇದ್ದೇವೆಂದು. ಆದರೆ ಮದ್ರಾಸ್ ದೇಶದಲ್ಲಿ ಮತ್ತು ಆಂಧ್ರ ದೇಶದಲ್ಲಿ ಎಷ್ಟು ಸೌಲಭ್ಯಗಳನ್ನು ವ್ಯವಸಾಯಗಾರರಿಗೆ ಒದಗಿಸಿಕೊಟ್ಟಿದ್ದಾರೆ? ಮದ್ರಾಸ್ ಸರ್ಕಾರ ಮತ್ತು ಆಂಧ್ರ ಸರ್ಕಾರ 30-40 ಪರ್ಸೆಂಟ್ ನೀರಾವರಿ ಅನುಕೂಲ ಒದಗಿಸಿಕೊಟ್ಟಿದೆ. ಮೈಸೂರು ರಾಜ್ಯದಲ್ಲಿ ಯಾವ ಅನುಕೂಲ, ಸೌಲಭ್ಯ ನಮ್ಮ ರೈತನಿಗೆ ಸರ್ಕಾರ ಒದಗಿಸಿಕೊಟ್ಟಿದೆ ! ನಮ್ಮ ದೇಶ ದಲ್ಲಿ ಯಾವ ಹಳ್ಳಿಗೆ ಹೋಗಲಿ, ಅಲ್ಲಿ ರೈತನಿಗೆ ಕುಡಿಯುವುದಕ್ಕೆ ನೀರಿಲ್ಲ, ಕುಡಿಯುವ ನೀರಿನ ಭಾವಿ ಇಲ್ಲ. ರೈತ ಬೆಳೆದ ಸಾಮಗ್ರಿಗಳನ್ನು ಸಾಗಿಸುವುದಕ್ಕೆ ರಸ್ತೆ ಇಲ್ಲ. ರೈತನ ಮಕ್ಕಳು ಕುಳಿತು ಕೊಂಡು ಓದುವುದಕ್ಕೆ ಶಾಲಾ ಕಟ್ಟಡಗಳಿಲ್ಲ. ಇಂಥ ಒಂದು ಪರಿಸ್ಥಿತಿ ರೈತನಿಗಿರುವಾಗ, ತೊಂದರೆ ಇರುವಾಗ, ದುಡ್ಡು ಕೊಡಿ ಅನ್ನುವುದು ಸರಿಯಲ್ಲ. ಬಾವಿ ತೆಗೆದರೆ, ಪಂಪು ಸೆಟ್ಟುಗಳಿಗೆ ದುಡ್ಡು ಕೊಡಿ ಎಂದರೆ, ದುಡ್ಡು ಇಲ್ಲವೆನ್ನುತ್ತಾರೆ. ಪಂಪು ಸೆಟ್ಟುಗಳನ್ನು ಒಂದು ವೇಳೆ ಅವನಿಗೆ ಕೊಟ್ಟರೂ, ಪವರ್ ಕೊಡುತ್ತಾ ಇಲ್ಲ. ಹೀಗೆ ರೈತನಿಗೆ ಏನೂ ಸೌಲಭ್ಯಗಳಿಲ್ಲ. ರೈತನಿಂದ ಆದಾಯ ಹೊಂದ ಬೇಕಾದರೆ, ರೈತನಿಗೆ ಯಾವ ಯಾವ ಸೌಲಭ್ಯಬೇಕು, ಅದನ್ನು ಎಷ್ಟರಮಟ್ಟಿಗೆ ಒದಗಿಸಿಕೊಟ್ಟಿದ್ದೇವೆ ಎಂದು ಸರ್ಕಾರ ಮೊದಲು ಯೋಚನೆಮಾಡಬೇಕು. ಇಂದು ಅವನಿಗೆ ಮೊದಲು ಸೌಲಭ್ಯಗಳನ್ನು ಒದಗಿಸಿ ಕೊಟ್ಟು, ಹೆಚ್ಚಿಗೆ ಕಂದಾಯ ಕೊಡಿ ಅಂದರೆ, ಯಾವ ರೈತನೂ ಕೊಡಲಿಕ್ಕೆ ತಯಾರು ಇರು ತ್ತಾನೆ. ಅದು ಬಿಟ್ಟು, ಒಂದೂ ಸೌಕರ್ಯವನ್ನು ರೈತನಿಗೆ ಕೊಡಲಿಕ್ಕೆ ಸರ್ಕಾರ ತಯಾರಿಲ್ಲದೆ, ಅವನು ಹೆಚ್ಚು ಸಂಪಾದನೆ ಮಾಡುತ್ತಿದ್ದಾನೆ ಒಂದಕ್ಕೆ ಎರಡರಷ್ಟು ಕಂದಾಯ ಕೊಡಲಿ ಅಂದರೆ, ಯಾವನ್ಯಾಯ? ಅವನಿಗೆ ಯಾವ ಸೌಲಭ್ಯವನ್ನೂ ಕೊಡದೆ, ಆಹಾರ ಧಾನ್ಯಗಳ ಬೆಲೆ ಜಾಸ್ತಿಯಾಗಿದೆ. ಅವನು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾನೆ ಎಂದು ಹೇಳುವುದಾದರೆ, ಇದು ಸರ್ಕಾರದ ಯಾವ ನೀತಿ? ಯಾವ ಹಳ್ಳಿಯಲ್ಲಿ ರೈತ ಆಹಾರ ಧಾನ್ಯಗಳನ್ನು ಮಾರುತ್ತಿದ್ದಾನೆ ? ಒಂದು ಹಳ್ಳಿಗೆ ಹೋದರೆ, 2-3 ರೈತರನ್ನು ಬಿಟ್ಟರೆ, ಬಾಕಿ 90-95 ಜನ ರೈತರು 3 ತಿಂಗಳಿಗಾಗು ವಷ್ಟು ಆಹಾರ ಧಾನ್ಯಗಳನ್ನು ಬೆಳೆಯುತ್ತಾ ಇಲ್ಲ; ಇನ್ನು 9 ತಿಂಗಳೂ ಆಹಾರ ಧಾನ್ಯವನ್ನು ಕೊಂಡುಕೊಂಡು ತಿನ್ನುತ್ತಾ ಇರುತ್ತಾರೆ. ಇಂಥ ಪರಿಸ್ಥಿತಿ ಇರುವಾಗ, ನೀವೆಲ್ಲರೂ ಒಂದಕ್ಕೆರಡ ರಷ್ಟು ಕಂದಾಯ ಕೊಡಿರಿ, ನಿಮಗೆ ಬೇಕಾದ ಸೌಲಭ್ಯಗಳನ್ನು ಮಾಡಿಕೊಡುತ್ತೇವೆ, ನಮ್ಮ ಹತ್ತಿರ ಹಣವಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದೀರಿ. ರೈತನು ಎಲ್ಲಿಂದ ಹಣ ಕೊಡಬೇಕು? ಅವನಿಗೆ ಎಲ್ಲಿಂದ ಆದಾಯ ಬರುತ್ತದೆ? ವ್ಯವಸಾಯಗಾರರಿಗೆ ಬರತಕ್ಕಂಥ ಆದಾಯದಲ್ಲಿ ಅವರ ಮಕ್ಕಳ ವಿದ್ಯಾಭ್ಯಾಸ ನಡೆಯಬೇಕು, ಬಟ್ಟೆಬರೆ ಕೊಂಡುಕೊಳ್ಳಬೇಕು, ಮದುವೆ ಮುಂಜಿ ಆಗಬೇಕು. ಅವನ ಪ್ರತಿಯೊಂದು ಖರ್ಚನ್ನೂ ಭೂಮಿಯಿಂದ ಬಂದಂಥ ಉತ್ಪತ್ತಿಯಿಂದ ಮಾಡಬೇಕು, ಯಾವ ಸೌಲಭ್ಯ ಒದಗಿಸಿಕೊಟ್ಟಿದ್ದೀರಿ ಎಂದು ಮೊದಲು ಹೇಳಿ. ಸ್ವಾಮಿ, ಮಾನ್ಯ ಕೃಷ್ಣಪ್ಪನವರು ರೈತ ಕುಟುಂಬಕ್ಕೆ ಸೇರಿದವರು. ಅವರು ಮೊದಲು, ಸ್ವರಾಜ್ಯ ಬರುವುದಕ್ಕೆ ಮುಂಚೆ, ಹೇಳುತ್ತಾ ಇದ್ದರು: ಬ್ರಿಟಿಷರನ್ನು ನಮ್ಮ ದೇಶದಿಂದ ಓಡಿಸಿ, ನಾವೆಲ್ಲಾ ಕಂದಾಯ ಕೊಡದಹಾಗೆ ಮಾಡೋಣ ಈ ರೀತಿ ದೊಡ್ಡ ಭಾಷಣ ಮಾಡುತ್ತಾ ಇದ್ದರು. ಆದರೆ ಈಗ ಅವರು ಮಾಡುತ್ತಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಹುಲಿ ಮರಿ ಆಗಿದ್ದ ಕೃಷ್ಣಪ್ಪ ಇಲಿ ಮರಿ ಆಗಿಬಿಟ್ಟರಲ್ಲಾ ಅದಕ್ಕೆ ಕಾರಣ ಅರ್ಥವಾಗಲಿಲ್ಲ. ವಶೀಕರಣ ಏನೋ ನಡೆದಿದೆ.

Mr. SPEAKER.—The member may come to the point.

ಶ್ರೀ ಅಂದಾನಯ್ಯ.—ಈ ಒಂದು ಸೆಟಲ್‌ಮೆಂಟ್ ರಿಪೋರ್ಟ್ ಮೊದಲೇ ತರಬೇಕಾಗಿತ್ತು. ಜತ್ತಿಯವರ ಕಾಲದಲ್ಲಿಯೇ ಬರಬೇಕಾಗಿತ್ತು. ಅವರು, ನನ್ನ ಕಾಲದಲ್ಲಿ ತಂದು ಹೆಸರು ಏಕೆ ಕೆಡಿಸಿಕೊಳ್ಳಬೇಕು, ಏಕೆ ದೂರು ಹೊತ್ತುಕೊಳ್ಳಬೇಕು. ಮುಂದೆ ಬರುವವರು ಹೊತ್ತುಕೊಳ್ಳಲಿ ಎಂದು ಮುಂದಕ್ಕೆ ತಳ್ಳಿಹಾಕಿದರು. ಈಗ ನನಗೆ ಹಣವಿಲ್ಲ, ರೈತರ ಮೇಲೆ ತೆರಿಗೆ ಹಾಕಿ ಹಣ ಒದಗಿಸದೆ ಹೋದರೆ ಖರ್ಚನ್ನು ವಹಿಸುವುದಕ್ಕೆ ಕಷ್ಟವೆಂದು ಮಂತ್ರಿಮಂಡಲದ ಮೇಲೆ ಒತ್ತಾಯ ಹಾಕುತ್ತಾ ಇದ್ದಾರೆ.

ಸ್ವಾಮಿ, ಬೆಳೆಗಳಿಗೆ ರೋಗ ಬಂದರೆ ರೈತ ಅಲ್ಲಿ ಹೆಚ್ಚು ಬೆಳೆಯಲು ಆಗುವುದಿಲ್ಲ ಎಂದು ಈ ಸೆಟಲ್‌ಮೆಂಟ್ ರಿಪೋರ್ಟಿನಲ್ಲಿ ಒಂದು ಕಡೆ ಹೇಳಿದೆ. ಅವರಿಗೆ ಶೇಕಡಾ ಹತ್ತರಷ್ಟು ಕಂದಾಯದ ಹೊರೆ ಕಡಿಮೆ ಮಾಡಬೇಕು ಇವೊತ್ತು ರಾಗಿ ಬೆಳೆಗಾಗಲಿ ಅಥವಾ ಭತ್ತದ ಬೆಳೆಗೆ ಆಗಲೀ ರೋಗಗಳು ಬಂದು ಶೇಕಡಾ 60 ರಷ್ಟು 70 ರಷ್ಟು ಬೆಳೆ ನಾಶವಾಗುತ್ತಿದೆ. ಇಂತಹ ಕಡೆ ರೈತನ ಮೇಲೆ ಹೆಚ್ಚು ಕಂದಾಯ ಹಾಕಬೇಕೆಂದು ಸರ್ಕಾರ ಹೇಳುವುದು ನ್ಯಾಯವೇ ಎಂದು ಕೇಳುತ್ತೇನೆ. ಕೊನೆಯದಾಗಿ ಒಂದೇ ಒಂದು ಮಾತನ್ನು ಇಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಶ್ರೀರಾಮಚಂದ್ರ ಕಾಡಿಗೆ ಹೋಗುತ್ತಿದ್ದನಂತೆ. ಆಗ ಊರಿನವರೆಲ್ಲಾ ಅವನ ಜೊತೆಯಲ್ಲಿ ಬರುತ್ತಿದ್ದರಂತೆ. ಸ್ವಲ್ಪ ದೂರ ಬಂದಮೇಲೆ ಶ್ರೀರಾಮಚಂದ್ರ ನೀವೆಲ್ಲ ಏತಕ್ಕಾಗಿ ನನ್ನ ಜೊತೆಯಲ್ಲಿ ಕಾಡಿಗೆ ಬರುತ್ತೀರಿ, ನಾನು ಹೋಗುತ್ತೇನೆ ನೀವು ಎಲ್ಲರೂ ನಿಮ್ಮ ಊರಿಗೆ ಹಿಂದಿರುಗಿ ಹೋಗಿ ಎಂದು ಹೇಳಿದನಂತೆ. ಅದರಂತೆ ಅಲ್ಲಿದ್ದ ಎಲ್ಲ ಹೆಂಗಸರು ಗಂಡಸರು ಎಲ್ಲರೂ ವಾಪಸ್ಸು ಹೋದರೂ ಅಲ್ಲಿ ಇನ್ನೂ ಕೆಲವರು ಹಾಗೆ ನಿಂತುಕೊಂಡಿದ್ದರಂತೆ. ಅವರು ಹೆಂಗಸರೂ ಅಲ್ಲ, ಗಂಡಸರೂ ಅಲ್ಲ, ನಪುಂಸಕರಾಗಿದ್ದವರು ಮಾತ್ರ ಅಲ್ಲಿ ನಿಂತರು. ಅವರನ್ನು ಏತಕ್ಕಾಗಿ ನಿಂತಿದ್ದೀರಿ ಎಂದು ಕೇಳಿದಾಗ ಆಗ ಒಬ್ಬರು "ಅವರು ಇನ್ನು ಮುಂದೆ ಬ್ರಿಟಿಷರ ರಾಜ್ಯ ಹೋಗಿ ಕಾಂಗ್ರೆಸ್ಸಿನವರ ರಾಜ್ಯ ಬರುತ್ತದೆ: ಆಗ ಇವರೆಲ್ಲರಿಗೂ ಬಹಳವಾಗಿ ಅನುಕೂಲವಾಗುತ್ತದೆ" ಎಂದರಂತೆ. ಹೀಗೆ ಹಿಂದೆ ರಾಮಚಂದ್ರನು ಆಳಿದಂತಹ ರಾಜ್ಯವನ್ನು ನೀವು ಈಗ ಆಳಬೇಕೆಂದು ಇಲ್ಲಿಗೆ ಬಂದಿದ್ದೀರಿ.

ಅಧ್ಯಕ್ಷರು.—ಆದುದರಿಂದ ರಾಮಚಂದ್ರನ ಕಾಲದಲ್ಲೂ ಕಾಂಗ್ರೆಸ್ಸು ಉಂಟು ಎಂದು ಹೇಳುತ್ತೀರಲ್ಲವೇ ?

ಶ್ರೀ ಅಂದಾನಯ್ಯ.—ನಾನು ಇಲ್ಲಿ ಜನರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ರೀತಿಯಾಗಿ ಜನರಮೇಲೆ ಹೆಚ್ಚು ಹೊರೆ ಹಾಕುತ್ತಾ ಬಂದರೆ ಮುಂದೆ 1967 ನೇ ಇಸವಿಯಲ್ಲಿ ನಿಮಗೆ ಯಾವ ರೀತಿ ಸಹಾಯ ಮಾಡುತ್ತಾರೆನ್ನುವುದನ್ನು ಕಾದು ನೋಡಬಹುದು. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಇದನ್ನು ಮೊದಲು ವಾಪಸ್ಸು ತೆಗೆದುಕೊಳ್ಳಿ ಎಂದು ಸಲಹೆ ಮಾಡುತ್ತೇನೆ. ಅಲ್ಲದೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಹೇಳುವುದು ರೈತರ ಬಗ್ಗೆ ಅವರಿಗೂ ಬಹಳ ಆಸೆಯಿರುವುದರಿಂದ ಅವರು ತಮ್ಮ ಮಂತ್ರಿಮಂಡಲದಲ್ಲಿರುವ ಸ್ಥಾನಕ್ಕೆ ಇದಕ್ಕಾಗಿ ರಾಜೀನಾಮೆ ಕೊಡಲಿ. ನಾನು ಬೇಕಾದರೆ ನನ್ನ ಸ್ಥಾನವನ್ನು ತೆರವು ಮಾಡಿಕೊಟ್ಟು ನನ್ನ ಸ್ಥಾನವನ್ನು ಅವರಿಗಾಗಿ ಕೊಡಿಸಿಕೊಡಲು ನನ್ನ ಸರ್ವಪ್ರಯತ್ನಗಳನ್ನೂ ಮಾಡುತ್ತೇನೆ. ಆದುದರಿಂದ ಮೊದಲು ಸರ್ಕಾರ ಇಂತಹ ರಿಪೋರ್ಟು ತಂದಿರುವುದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟುದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The member has spoken on the main Resolution now he must confine himself only to the reduction of $2\frac{1}{4}$ per cent.

†Sri V. M. DEO.—Yes, Sir.

ಸ್ವಾಮಿ, ಇದರಲ್ಲಿ ನಾನು ಹೇಳುವುದು ಇಷ್ಟೆ. ನಮ್ಮ ರಾಜ್ಯಾಂಗದಲ್ಲಿ ಏನು ಹೇಳಿದ್ದಾರೆಂದರೆ ಅದರಲ್ಲಿರುವ ಕಲಮು 39 (ಬಿ) ಮತ್ತು (ಸಿ) ಮತ್ತು (46)ರಲ್ಲಿ

39 (b), (c) read in conjunction with 46.

"that the ownership and control of the material resources of the community are so distributed as best to subserve the common good ;

"The operation of the economic system does not result in the concentration of the means of production to ...

(Sri V. M. Deo)

"The State shall promote with special care the educational and economic interests of the weaker sections of the people...."

So far as education is concerned, I pay my tribute to the Government. They have done their best.

ನಾನು ಹೇಳುವುದು ಇಷ್ಟೇ. ಇದರಲ್ಲಿ ನೀವು ಶೇಕಡಾ ಆರೂಕಾಲರಷ್ಟು ಇದ್ದುದನ್ನು ಶೇಕಡಾ ನಾಲ್ಕರಷ್ಟಕ್ಕೆ ಇಳಿಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇದರಿಂದ ಏನಾಗುತ್ತದೆ ಎನ್ನುವುದನ್ನು ನೀವು ಸರಿಯಾಗಿ ತೆಗೆದುಕೊಂಡಿಲ್ಲ. ಕಾಫೀ ಪ್ಲಾಂಟರುಗಳಿಗಾಗಿ ಒಂದು ರೀತಿಯಾಗಿ ರೇಟು ಇರಬೇಕೆಂದು ಮಾಡಿದ್ದೀರಿ. ಕಾಫೀ ಪ್ಲಾಂಟರುಗಳು ಸಾಧಾರಣವಾಗಿ ಬೆಂಗಳೂರಿನಲ್ಲೇ ಇರುವವರು. ಎಲ್ಲೋ ಒಂದಾರು ತಿಂಗಳಿಗೆ ಒಂದು ಸಾರಿ ಅವರ ತೋಟಕ್ಕೆ ಹೋಗಿ ಅಲ್ಲಿ ಹದಿನೈದು ದಿನಗಳಿದ್ದು ಬರುತ್ತಿರುತ್ತಾರೆ. ಆವರುಗಳೆಲ್ಲ ಬೆಂಗಳೂರಿನಲ್ಲಿ ಇರುತ್ತಾರೆ. ಅವರಿಗೆ ಒಂದು ಲೆಕ್ಕಾಚಾರ ಮಾಡಿ ಒಂದು ರೇಟು ಹಾಕಿದ್ದಾರೆ. ನನ್ನಂತಹ ಸೆಮಿ ಫ್ಯಾಮಿನ್ ಏರಿಯಾದಿಂದ ಬರುವ ರೈತರ ಮೇಲೆ ಒಂದು ರೀತಿಯಾಗಿ ಹಾಕಿದರೆ ಅದು ಹೇಗೆ ನ್ಯಾಯವಾಗಿರುತ್ತದೆ ಇದರಲ್ಲಿ ನೀವು ಯಾವುದೋ ರೀತಿಯಾದ ಲೆಕ್ಕಾಚಾರಗಳನ್ನು ಇಟ್ಟುಕೊಂಡು ಒಂದಕ್ಕೊಂದು ವ್ಯತ್ಯಾಸವಾಗುವಂತೆ ಮಾಡಿದರೆ ಸರಿಯಾಗುತ್ತದೆಯೇ? ಎಲ್ಲದಕ್ಕೂ ಒಂದೇ ರಾಗ ಹಾಡುತ್ತ ಬರುತ್ತಿರುತ್ತಾರೆ. Wine women and song. ನಾನಾಗಲೇ ಹೇಳಿದ ಹಾಗೆ, ನೀವು Economic interests of the weaker sections of the people. ಅವರ ಬಗ್ಗೆ ಗಮನ ಕೊಡುತ್ತಿಲ್ಲ. ಹೀಗೆ ಯಾರಾದರೂ ಮಾಡಿದ್ದಾರೆಂದರೆ ಇಲ್ಲಿ ಕ್ರಿಟಿಸೈಸು ಮಾಡಿ ಹೇಳಲೇಬೇಕಾಗುತ್ತದೆ.

ಈ ರೀತಿಯಾಗಿ ಹಣವಂತರಾಗಿರುವ ಕಾಫೀ ಪ್ಲಾಂಟರುಗಳ ಜೋಬಿನೊಳಗೆ ಸರಕಾರ ಸಿಕ್ಕಿಕೊಂಡು ರೈತನ ದಾರುಣ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೇ ಇರುವುದು ಇದರಲ್ಲಿ ಬಹಳ ಮುಖ್ಯವಾದುದು. ಇನ್ನೊಂದು ಪಾಯಿಂಟ್ ಇಲ್ಲಿ ಹೇಳಬೇಕಾಗಿದೆ. ಕಾಂಗ್ರೆಸ್ಸಿನವರು ಕ್ಯಾಬಿನೆಟಿನ ಒಳಗೂ ಅವರ ಪ್ರಭಾವ ಬೀರಿದರೋ ಹೇಗೋ ಎಂದು ನನಗೆ ಇಲ್ಲಿ ತೋರುತ್ತಿದೆ. ಅವರಿಗಾಗಿ ಇಲ್ಲಿ ಶೇಕಡಾ ಒಂದರಷ್ಟು ಎಂದು ಮಾಡಿದ್ದಾರೆ. ಆದರ ಬೇರೆ ಕಡೆಗಳಲ್ಲಿ ಶೇಕಡಾ ಆರೂಕಾಲರಷ್ಟು ಎಂದು ಇದ್ದುದನ್ನು ಶೇಕಡಾ ನಾಲ್ಕರಷ್ಟು ಎಂದು ಮಾಡಿದ್ದಾರೆ.

Mr. SPEAKER.—Under which section of the Bill or Resolution the personnel of the Cabinet does not come here.

Sri V. M. DEO.—I will tell you how, Sir.

ಹಿಂದೆ ನಾನು ಹೇಳಿದಂತೆ ಇದು ಕಾನ್‌ಸ್ಟಿಟ್ಯುಷನ್ನು ಪ್ರಕಾರ ನೋಡಿ ಸರಿಮಾಡಿಲ್ಲ. ಶಿಕ್ಷಣದ ಕ್ಷೇತ್ರದಲ್ಲಿ ಫೀಸುಗಳನ್ನು ಕಡಿಮೆ ಮಾಡಿ ಸ್ಕಾಲರ್‌ಷಿಪ್ಪುಗಳನ್ನು ಜಾಸ್ತಿ ಮಾಡಿದ್ದಾರೆ. ಅದಕ್ಕೆ ನಾನೂ ಸಂತೋಷಪಡುತ್ತೇನೆ.

To that extent I pay my tribute to the present Ministry.

ಇದರಲ್ಲಿ ನಾವು ನೋಡಿದರೆ ಪ್ರತಿಯೊಂದು ಹಂತದಲ್ಲಿಯೂ ರಾಜಕೀಯ ಹೆಚ್ಚಾಗಿ ಬೆಳೆಯುತ್ತಿದೆ. ಇದರ ಬಗ್ಗೆ ಕೋರ್ಟಿಗೆ ಹೋದರೂ ಏನು ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲೂ ಏನು ಹೇಳಿದ್ದಾರೆಂದರೆ,

"The provisions contained in this part shall not be enforceable by any court, but the principles therein laid down are nevertheles fundamental in the governance of the country and it shall be the duty of the State to apply these principles in making laws."

ಈ ದೃಷ್ಟಿಯಿಂದ ಮೂಲವಾಗಿ ಹಿಂದೆ ಹಾಕಿದ್ದ ಕಂದಾಯವನ್ನು ಕಡಿಮೆ ಮಾಡುವುದಕ್ಕೆ ದಾರಿ ಇಲ್ಲ. ಆದರೆ ಹೆಚ್ಚು ಮಾಡುವುದಕ್ಕೆ ಹೋಗುತ್ತಿದ್ದಾರೆ. ಇದರಲ್ಲಿ ತಾತ್ವಿಕವಾಗಿ ಯಾವ ತತ್ವವನ್ನು ಅನುಸರಿಸಬೇಕೋ ಅದನ್ನು ಅನುಸರಿಸುತ್ತಿಲ್ಲ. ಆದುದರಿಂದ ಇಲ್ಲಿ ತಂದಿರುವ ರೆಸಲ್ಯೂಷನ್ನು

ಅಂತಹ ಒಂದು ದಾರಿಯಲ್ಲಿ ಹೋಗದೇ ಇರುವುದರಿಂದ ಜನಕ್ಕೆ ಇದರಿಂದ ಅನುಕೂಲವಾಗುವುದಿಲ್ಲ. ಸರಿಯಾದ ಒಂದು ಲೆಕ್ಕಾಚಾರ ಕೂಡ ಮಾಡುತ್ತಿಲ್ಲ. ವಾಟರು ರೇಟು ಒಂದು ಎಕರೆಗೆ 30 ರೂಪಾಯಿಗಳಷ್ಟು ಇದೆ. ಪ್ಲಾಂಟರುಗಳಿಗೆ ಇತಿ ಮಿತಿ ಏನೂ ಇಲ್ಲ.

Coffee Planters--Water rate alone will come to about Rs. 30 per acre in which case the planter pays only 10—12 at the maximum.

Sri K. MALLAPPA (Minister for Industries and Commerce) off What about the Central Excise?

ಶ್ರೀ ವಿ. ಎಂ. ದೇವ್.—ಹೊಸ ಹೊಸದಾಗಿ ಇಲ್ಲ ಕಂದಾಯ ಹೆಚ್ಚು ಮಾಡಬೇಕೆಂದು ಮಾಡಿರುವುದು ಸರಿಯಲ್ಲ. ಇದು ಮಾಡುವುದು ತಪ್ಪು. ಇಲ್ಲಿ ಯಾವ ಯಾವುದೋ ಸುಧಾರಣೆ ಮಾಡಬೇಕೆಂದು ಹೇಳಿ ಈ ಭೂಸುಧಾರಣೆಯನ್ನೂ ತಂದಿದ್ದಾರೆ. ಆದರೆ ಇದರಲ್ಲೇಕೋ ಸರಕಾರದವರು ಹಿಂದೇಟು ಹಾಕುತ್ತಿದ್ದಾರೆ, ಇದರಲ್ಲೇನೋ ರಾಜಕೀಯ ನಡೆಯುತ್ತಿವೆ ಎಂದು ಕಾಣುತ್ತೆ. ನಮ್ಮ ಮಾನ್ಯ ಸಚಿವರೂ ಕೂಡ ಇದನ್ನು ಸರಿಯಾಗಿ ನೋಡಿಲ್ಲ ಎಂದು ತೋರುತ್ತದೆ.

3-00 P.M.

ಸ್ವಾಮಿ, ಒಂದು ವಿಚಾರ ಹೇಳಬೇಕಾಗುತ್ತದೆ. ಈ ಕಾರ್ಯದಲ್ಲಿ ಒಂದು ಸರಿಯಾದ ಡೈರೆಕ್ಷನ್ ಇಲ್ಲ. ದೇಶ ಹೇಗೆ ಕಟ್ಟಬೇಕು ಎನ್ನುವುದಕ್ಕೆ ಒಂದು ಸರಿಯಾದ ಚಿತ್ರ ಇಲ್ಲ, ಆಡಳಿತದಲ್ಲಿ ನಾನಾ ಸುಧಾರಣೆ ಮಾಡಬೇಕಾಗಿದ್ದರೂ ಕೂಡ ಒಂದು ನಿರ್ದಿಷ್ಟ ಚಿತ್ರ ಕಣ್ಣು ಮುಂದೆ ಇಲ್ಲ. ಈ ರೀತಿ ಇರುವುದರಿಂದ ಕಷ್ಟವಾಗಿದೆ. ನಮ್ಮ ಕೆಲಸ ಕಾರ್ಯಗಳಲ್ಲಿ ಒಂದು ನೀಯತ್ತು ಇರಬೇಕಾದುದು ಅಗತ್ಯ. ನೀಯತ್ತು ಇರದೇ ಹೋದರೆ ನಿರಾಶೆಯುಂಟಾಗುತ್ತದೆ. ಇಂಥ ಮನೋಭಾವವನ್ನು ನಾನು whole heartedly condem ಮಾಡುತ್ತೇನೆ. ಇಂಥ ಮನೋಭಾವ ಇರುವುದರಿಂದ ನಾವು ರಾಜಕೀಯವಾಗಿ ಮುಂದೆ ಹೋಗುತ್ತಾ ಇಲ್ಲ. ಇದು ನಮಗೂ ಒಳ್ಳೆಯದಲ್ಲ, ನಿಮಗೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ. ಇದು ಸಮಾಜವಾದ ಆಗುವುದಿಲ್ಲ. ಇದರಿಂದ ರೈತ ವರ್ಗಕ್ಕೆ ಯಾವ ಲಾಭವಾಗುವುದಿಲ್ಲ. ಆದರೆ ಶ್ರೀಮಂತರು ಲಾಭ ಮಾಡಿಕೊಳ್ಳುವುದಕ್ಕೆ ಲಿಮಿಟ್ ಇಲ್ಲ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಅದನ್ನು ತಿಳಿದುಕೊಳ್ಳದೆ ಆತುರದಲ್ಲಿ ಇಂಥ ಕಾನೂನು ತೆಗೆದುಕೊಂಡು ಮುಂದೆ ಬಂದಿದ್ದೇವೆ. ಈ ರೀತಿ ಮಾಡದೇ ಸಾವಧಾನವಾಗಿ ಕಾರ್ಯ ಮಾಡಬೇಕು. ಅಂದರೆ ಯಾವ ರೀತಿ ಅಪ್ರೆಹೆನ್‌ಷನ್ ಇರುವುದಿಲ್ಲ. ಒಂದರಲ್ಲಿ ಏನಾದರೂ ಬದಲಾವಣೆಯಾದರೆ ಇನ್ನೊಂದರ ಮೇಲೆ ಅದರ ಪರಿಣಾಮವಾಗುತ್ತದೆ ಆದುದರಿಂದ ದೇಶ ಚೆನ್ನಾಗಿ ಕಟ್ಟಬೇಕು ಎಂಬ ಉದ್ದೇಶ ಇರುವುದರಿಂದ ಒಂದು ಸರಿಯಾದ ಚಿತ್ರ ಕಣ್ಣು ಮುಂದೆ ಇಟ್ಟುಕೊಂಡು ಕೆಲಸ ಮಾಡಬೇಕು. ಇಲ್ಲದಿದ್ದರೆ ನಮಗೂ ಕಷ್ಟ, ಜನಕ್ಕೂ ಕಷ್ಟ. ಇದನ್ನು ದಯವಿಟ್ಟು ಯೋಚನೆ ಮಾಡಬೇಕು ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಸರ್ವೇ ಸೆಟ್ಲಮೆಂಟ್ ರಿಪೋರ್ಟನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ರಿಪೋರ್ಟ್ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ರೈತರ ಹಿತ ದೃಷ್ಟಿಯಿಂದ ಅನೇಕ ಸೂಚನೆ ಮಾಡಿದ್ದಾರೆ. ಸರಕಾರ ಕೂಡ ಕೂಲಂಕಷವಾಗಿ ವಿಚಾರ ಮಾಡಿ ರೈತರಿಗೆ ಭಾರವಾಗಬಾರದು ಎಂದು ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿ ಬಂದಮೇಲೆ ವಿರೋಧ ಪಕ್ಷದವರು ಇದನ್ನು ಸ್ವಾಗತ ಮಾಡುತ್ತಾರೆ ಎಂದು ನಾನು ಆಶೆ ಪಟ್ಟಿದ್ದೆ. ಇಲ್ಲಿಯ ವಾತಾವರಣ ನೋಡಿದರೆ ರೈತರ ಹೆಸರಿನಲ್ಲಿ, ಕಂದಾಯದ ಹೆಸರಿನಲ್ಲಿ ಏನೇನೋ ಹೇಳಿ ರೈತರ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲ ಮಾಡಲಿಕ್ಕೆ ಹೊರಟಿದ್ದಾರೆ. ಆರೂ ಕಾಲು ಪರ್ಸೆಂಟ್ ಇದ್ದುದನ್ನು ನಾಲ್ಕು ಪರ್ಸೆಂಟಿಗೆ ಇಳಿಸಿದ್ದಾರೆ. ರೈತರ ಅಭಿವೃದ್ಧಿಯ ಸಲುವಾಗಿ ಸರಕಾರ ಕೈಕೊಂಡಂಥ ಕಾರ್ಯಗಳಿಗೆ ಸಹಾಯ ಮಾಡಬೇಕಾದುದು ಅಗತ್ಯ. ರೈತರು ಭೂಮಿಯಲ್ಲಿ ಹೆಚ್ಚು ಉತ್ಪತ್ತಿ ಮಾಡಲು ಆಗಿಲ್ಲ. ರೈತ ಬೆಳೆದದ್ದಕ್ಕೆ ಯೋಗ್ಯ ಬೆಲೆ ಕೊಡಲು ವ್ಯವಸ್ಥೆ ಮಾಡಿದ್ದಾರೆ. ರೈತರ ಹಿತದ ಸಲುವಾಗಿ ಇಂದು ಹೆಚ್ಚು ಹಣ ಖರ್ಚಾಗುತ್ತಿದೆ. ಸರಕಾರ ಕೈಕೊಂಡಿರುವ ಇಂಥ ಒಳ್ಳೇ ಕೆಲಸಕ್ಕೆ ಸಹಾಯ ಮಾಡಿದರೆ ನಿಮಗೆ ಹಾನಿ ಏನು? ಈಗ ನೂರು ಪರ್ಸೆಂಟ್ ಎಂದು ಇದ್ದುದು ಒಂದು ರೂಪಾಯಿ ಒಂದೂ ಕಾಲು ರೂಪಾಯಿ ಆಗುತ್ತದೆ. ಆದುದರಿಂದ ಸರಕಾರಕ್ಕೆ ಆದಾಯ ಇದರಿಂದ ಬರುತ್ತದೋ ಹೇಗೆ? ಹಪ್ತೆ ಕೂಡ ವಸೂಲು ಮಾಡುವುದಿಲ್ಲ ಎಂದು ಸಹ ಹೇಳಿದ್ದಾರೆ. ಹಣ

(ಶ್ರೀ ಎಸ್. ಎಂ. ಗುರೆಡ್ಡಿ)

ಯಾವ ರೀತಿ ಖರ್ಚಾಗುತ್ತದೆ ಯೋಚನೆ ಮಾಡಬೇಕು. ಉತ್ಪತ್ತಿ ಹೆಚ್ಚು ಬರುತ್ತದೆ ಕಂದಾಯ ಹೆಚ್ಚು ಕೊಡಬೇಕು ಎಂಬ ಭಾವನೆ ರೈತರಿಗೆ ಬರಬೇಕು. ಇದು ನಮ್ಮ ಸರಕಾರ, ಇದರಲ್ಲಿ ನಮ್ಮ ಪಾಲು ಇದೆ ಎಂಬ ಭಾವನೆ ಇರಬೇಕು. ಎಲ್ಲವನ್ನೂ ಸರಕಾರವೇ ಮಾಡಲಿ ಎಂದು ಹೇಳುವುದು ಸರಿಯಲ್ಲ. ಸರಕಾರ ಬೇರೆ, ರೈತರು ಬೇರೆ ಎಂಬ ಭಾವನೆ ಬರಕೂಡದು, ಆದುದರಿಂದ ಬರುವ ಉತ್ಪತ್ತಿಯಲ್ಲಿ ಕೆಲವು ಭಾಗ ಸರಕಾರಕ್ಕೆ ಕೊಡಬೇಕಾಗುತ್ತದೆ. ಈ ತಿಳುವಳಿಕೆಯನ್ನು ನಾವು ರೈತರಿಗೆ ಉಂಟುಮಾಡಬೇಕು. ಇದನ್ನು ನಾನು ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಜನಾಭಿಪ್ರಾಯಕ್ಕೆ ಸರಕಾರ ಮನ್ನಣೆ ಕೊಡುತ್ತದೆ ಇದನ್ನು ತಿಳಿದುಕೊಳ್ಳಬೇಕು. ಜನಾಭಿಪ್ರಾಯಕ್ಕೆ ಅನುಸರಿಸಿ ಸರಕಾರ ಈ ತಿದ್ದುಪಡಿ ಮಾಡಿದ್ದಾರೆ. ಇನ್ನು ಮೇಲಾದರೂ ಇದನ್ನು ಮಾನ್ಯ ಸದಸ್ಯರು ಸ್ವಾಗತ ಮಾಡಿ ಇದಕ್ಕೆ ಒಪ್ಪಿಗೆ ಕೊಟ್ಟು ತೀವ್ರ ಪಾಸು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ರೈತರಿಗೆ ಹೆಚ್ಚು ಸಹಾಯ ಮಾಡತಕ್ಕಾತ್ತ ಇಲ್ಲ ಎಂಬುದನ್ನು ನಾವು ನೀವೂ ಕೂಡಿತು ವಿಚಾರ ಮಾಡಿ ಸರಕಾರಕ್ಕೆ ಹೇಳೋಣ, ನೀರಾವರಿ ಮಾಡಿ, ಇರಿಗೇಶನ್ ಪ್ರೊಜೆಕ್ಟ್ ಕೊಡಿ ಎಂದು ಸಹ ಹೇಳಬಹುದು. ಕೊನೆಯದಾಗಿ ಈ ಸರ್ವೇ ಸೆಟ್ಲಮೆಂಟ್ ರಿಪೋರ್ಟನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆಂದು ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

†ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಸರ್ವೆ ಸೆಟ್ಲ್‌ಮೆಂಟ್ ರಿಪೋರ್ಟ್ ಮೇಲೆ ನಡೆದ ಚರ್ಚೆಯಲ್ಲಿ ನಾನು ಕೂಡ ಭಾಗ ವಹಿಸಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸರ್ವೆ ಸೆಟ್ಲಮೆಂಟನ್ನು 30 ವರ್ಷಕ್ಕೆ ಒಮ್ಮೆ ಮಾಡಬೇಕೆಂದು ಕಾಯದೆ ಇದೆ. ಆದರೂ ಕೂಡ ಯಾವ ದೃಷ್ಟಿಯಿಂದ ಇದನ್ನು ಮಾಡಬೇಕಾಗಿತ್ತೋ ಅದರ ಕಡೆ ಸರಕಾರ ತನ್ನ ಅಲಕ್ಷ್ಯ ಮನೋಭಾವನೆ ತೋರಿಸಿದ್ದಾರೆ. ಭೂಮಿ ಸರ್ವೇ ಮಾಡಿ ಯಾವ ಭೂಮಿ ಸತ್ವ ಉಳ್ಳದ್ದು ಆಗಿದೆ ಯಾವುದು ನಿಸ್ಸತ್ವವಾಗಿದೆ ಯಾವ ಭೂಮಿಯಲ್ಲಿ ಎಷ್ಟು ಬೆಳೆ ಬರುತ್ತದೆ ಇದನ್ನು ಪರಿಶೀಲನೆ ಮಾಡಬೇಕಾಗಿತ್ತು. ಕಾಯದೆಯಲ್ಲಿ ಇದು ನಿರ್ದಿಷ್ಟವಾಗಿ ಶಾಸ್ತ್ರೀಯವಾಗಿ ಇದ್ದರೂ ಕೂಡ ಅದನ್ನು ಅಲಕ್ಷ್ಯ ಮಾಡಿ ಸರಕಾರ ಕೇವಲ ಹಣ ಸಂಗ್ರಹ ಮಾಡುವ ದೃಷ್ಟಿಯಿಂದ ಕಂದಾಯ ಏರಿಸುವಂತೆ ಈ ವರದಿ ತಂದಿದ್ದಾರೆ. ಹಣ ಸಂಪಾದನೆ ಮಾಡಬೇಕೆಂಬುದು ಇದರ ಮೂಲ ಉದ್ದೇಶವಾಗಿದೆ. ಇವತ್ತಿನ ದಿವಸ ರೈತನ ಪರಿಸ್ಥಿತಿ ಏನಾಗಿದೆ ಎಂಬುದಕ್ಕೆ ಸರಕಾರ ಗಮನ ಕೊಟ್ಟಿಲ್ಲ. ಸರಕಾರಕ್ಕೆ ರೈತನು ಭೂ ಕಂದಾಯ ಕೊಡುವುದು ಇಷ್ಟೇ ಅಲ್ಲ, ಅಪರೋಕ್ಷವಾಗಿ ರಾಜ್ಯ ಸರಕಾರಕ್ಕೆ 50 ಪರ್ಸೆಂಟ್ ತೆರಿಗೆ ರೈತ ಕೊಡುತ್ತಾನೆ. ಕೇಂದ್ರ ಸರಕಾರಕ್ಕೆ 50 ಪರ್ಸೆಂಟ್ ತೆರಿಗೆ ಕೊಡುತ್ತಾನೆ. ಸ್ಥಾನಿಕ ಸಂಸ್ಥೆಗಳಿಗೆ 20 ಪರ್ಸೆಂಟ್ ಕೊಡುತ್ತಾನೆ. ಈ ಎಲ್ಲ ತೆರಿಗೆ ಭಾರ ಅಪರೋಕ್ಷವಾಗಿ ರೈತನ ಮೇಲೆ ಇರುತ್ತದೆ. ಒಂದು ಕುಟುಂಬದಲ್ಲಿ ಒಂದು ಕೂಸು ಹುಟ್ಟಿದರೆ ತೆರಿಗೆ ಬೆಳೆಯುತ್ತದೆ. ಇದಲ್ಲದೆ ಇಂದು ರೈತನಿಗೆ ಅಪಾರ ಸಾಲದ ಭಾರ ಇದೆ. 5 ಕೋಟಿ ರೂಪಾಯಿ ಕಂದಾಯ ಬಾಕಿ ಇದೆ. 15 ಕೋಟಿ ರೂಪಾಯಿ ಸಾಲ ಇದೆ. ಇದಲ್ಲದೆ ಖಾಸಗಿ ವ್ಯವಹಾರದ ಸಾಲ ಇದೆ. ರೈತನ ಮೇಲೆ ಇಷ್ಟು ಭಾರ ಇರುವಾಗ್ಗೆ ರೈತನ ಬೆನ್ನು ಮುರಿಯುವವರೆಗೆ ಹೊರೆ ಹೇರಬಾರದು. ಇಂಥ ಪರಿಸ್ಥಿತಿಯಲ್ಲಿ ಕಂದಾಯವನ್ನು ಮತ್ತಿಷ್ಟು ಹೆಚ್ಚುಮಾಡಿರುವುದು ದೇಶದಲ್ಲಿ ಹೆಚ್ಚು ಬೆಳೆಯನ್ನು ಬೆಳೆಯಬೇಕೆಂಬ ಆ ಧೋರಣೆಗೆ ಇದು ಮತ್ತಿಷ್ಟು ವಿರೋಧವಾದ ಧೋರಣೆಯಾಗಿದೆ. ಈ ದಿವಸ ದೇಶದಲ್ಲಿ ಆಹಾರಕ್ಕೆ ಅಭಾವವಿದೆ, ದೇಶದಲ್ಲಿ ತುರ್ತುಪರಿಸ್ಥಿತಿ ಬೇರೆ ಇದೆ. ದೇಶದಲ್ಲಿ ಎಲ್ಲೆಲ್ಲೂ ಅತೃಪ್ತಿ ಮೂಡಿರುವಾಗ ಈರೀತಿ ಮಾಡತಕ್ಕದ್ದು ತೀರಾ ಅಸಂಗತ ಅದೆ. ನಮ್ಮ ದೇಶದಲ್ಲಿ ಐದು ಎಕರೆ ಜಮೀನಿರತಕ್ಕ ಜನಗಳೇ ಜಾಸ್ತಿ. ಆ ಜನರಿಗೆಲ್ಲಾ ಭೂಕಂದಾಯವನ್ನು ಮಾಫೀ ಮಾಡಬೇಕಾಗಿತು. ಸಣ್ಣಸಣ್ಣ ಒಕ್ಕಲುತನದಲ್ಲಿರತಕ್ಕವರಿಗೆ ಕಂದಾಯವನ್ನು ಮಾಫೀ ಮಾಡಿದ್ದಲ್ಲಿ ಈ ದಿವಸ ದೇಶದಲ್ಲಿರತಕ್ಕ ಆಹಾರ ಕೊರತೆಯನ್ನು ನೀಗುವುದಕ್ಕೆ ಬಹಳ ಸಹಾಯವಾಗುತ್ತಿತ್ತು. ಈ ರೀತಿ ಭೂಕಂದಾಯವನ್ನು ಹೆಚ್ಚುಮಾಡತಕ್ಕ ಕಾಲದಲ್ಲಿ ಇಂಥ ಒಂದು ರಿಪೋರ್ಟಿನಬಗ್ಗೆ ಸರ್ಕಾರ ಬಹಳ ಎಚ್ಚರಿಕೆಯಿಂದಿರಬೇಕು. ಅ ಎಚ್ಚರಿಕೆಯನ್ನು ನಾನೀಗ ಸರ್ಕಾರಕ್ಕೆ ಕೊಡುತ್ತಿದ್ದೇನೆ. ರೈತನೊಬ್ಬ ಮೂಕ ಪ್ರಾಣಿಯಾಗಿದ್ದಾನೆ. ಆತನಿಗೆ ಯಾರ ಬೆಂಬಲವೂ ಇಲ್ಲ ಎಂಬ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರದವರು ಇಂಥ ಒಂದು ವರದಿಯನ್ನು ಸಭೆಯ ಮುಂದೆ ತಂದು ಒತ್ತಾಯಪೂರ್ವಕವಾಗಿ ಇದನ್ನು ಪಾಸ್‌ಮಾಡಿಕೊಳ್ಳುತ್ತಿದ್ದಾರೆ. ದೇಶದ ವರಮಾನವನ್ನು ಹೆಚ್ಚಿಸಿಕೊಂಡು ತನ್ಮೂಲಕ ರೈತನ ಅಭಿವೃದ್ಧಿಮಾಡುತ್ತೇವೆಂದು ಒಂದು ನೆಪವನ್ನು ಹಾಕಿಕೊಂಡು ತಮಗೆ ಒಂದು ಮೆಜಾರಿಟಿ ಪಕ್ಷದ ಬೆಂಬಲವಿದೆ ಎಂದು ಹೀಗೆಲ್ಲಾ ಮಾಡತಕ್ಕದ್ದು ಒಂದು ಒಳ್ಳೆಯ ರಾಜಕೀಯವಲ್ಲ ಎಂದು ಅವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಅವರ ಇಂಥ ಒಂದು ಹಟಮಾರಿತನದಿಂದ

ಮುಂದೆ ದೊಡ್ಡ ಗಂಡಾಂತರವಿದೆ ಎಂಬುದನ್ನು ಸರ್ಕಾರಕ್ಕೆ ತಿಳಿಸಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ—ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದ ಕೊನೆಯ ದಿನ, ಕೊನೆಯ ಘಳಿಗೆಯಲ್ಲಿ ಈ ಸಭೆಯ ಅಂಗೀಕಾರ ಪಡೆಯಲು ಹೊರಟಿರತಕ್ಕ ಈ ಭೂಕಂದಾಯದ ಏರಿಕೆ ಅಥವಾ ಅದರ ಪುನರ್ವಿಮರ್ಶೆಗೆ ಸಂಬಂಧಪಟ್ಟ ಮೂಲ ನಿರ್ಣಯ ಮತ್ತು ಅದರ ಬಗ್ಗೆ ಮಾನ್ಯ ಸಚಿವರು ತಂದಿರತಕ್ಕ ತಿದ್ದುಪಡಿ ಇವುಗಳನ್ನೆಲ್ಲಾ ನಾನು ವಿರೋಧಿಸುತ್ತೇನೆ. ಇದರ ಕಾರಣಗಳೇನೆಂಬುದರ ಬಗ್ಗೆ ಈಗಾಗಲೇ ಅನೇಕ ಮಾನ್ಯ ಮಿತ್ರರುಗಳು ಹೇಳಿರುವಂತೆ — ಈ ಭೂಕಂದಾಯದ ಪದ್ಧತಿ ನಡುಗಾಲ ಹಾಗೂ ಹಳೇ ಕಾಲದ ಪದ್ಧತಿಗಳೆಲ್ಲಾ ಹೋಗಬೇಕು ಅನ್ನುವ ವಿಷಯದಲ್ಲಿ ತಾತ್ವಿಕವಾಗಿ ಎಲ್ಲಾ ಅರ್ಥಶಾಸ್ತ್ರಜ್ಞರೂ ಒಪ್ಪಿಕೊಂಡಿದ್ದಾರೆ. ಹಾಲೀ ಜನರು ಕೊಡುತ್ತಿರುವ ಕಂದಾಯವನ್ನು ಕಳೆದುಕೊಳ್ಳಲು ಸಾಮಾನ್ಯವಾಗಿ ಯಾವ ಸರ್ಕಾರವೂ ಸಿದ್ಧವಾಗಿರುವುದಿಲ್ಲ. ರಾಜ್ಯಕ್ಕೆ ಹೀಗೆ ಭೂಕಂದಾಯದ ರೂಪದಲ್ಲಿ ಬರುತ್ತಿರುವ ಹುಟ್ಟುವಳಿಯನ್ನು ಕಳೆದು ಕೊಳ್ಳಬೇಕೇಕೆ ಅಂತ ನಮ್ಮಲ್ಲಿ ಅನೇಕ ವರ್ಷಗಳಿಂದ ಈ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾರ್ಯ ನಡೆಯದೆ ಇದ್ದಾಗ್ಯೂ ಈ ಕಂದಾಯದ ವಸೂಲಿಯೇನೋ ಮಾಮೂಲಾಗಿ ಎಂದಿನಂತೆ ನಡೆದುಕೊಂಡು ಬರುತ್ತಲೇ ಇದೆ. ಈಗ ಸರ್ಕಾರ ಇದನ್ನೂ ಜಾಸ್ತಿ ಮಾಡಬೇಕೆಂದು ಹೊರಟಿದೆ.

ಸ್ವಾಮಿ, ಇಲ್ಲಿ ಸರ್ಕಾರದವರು ನಾವು ಶಾಸ್ತ್ರೀಯವಾಗಿ ಈ ಕಂದಾಯದ ಪುನರ್ವಿಮರ್ಶೆಯನ್ನು ಮಾಡಿದ್ದೇವೆಂದು ಇದರಲ್ಲೇನು ಒಂದು ಮಾತನ್ನು ಹೇಳಿದ್ದಾರೋ ಅದು ಅಷ್ಟು ಸಮಂಜಸವಾದ್ದಲ್ಲ. ಈಗ ಕೊಡುತ್ತಿರುವ ಕಂದಾಯದಮೇಲೆ ಆರೂಕಾಲು ಪರ್ಸೆಂಟನ್ನು ಹೆಚ್ಚು ಮಾಡಿದರೆ ಇದು ಸರಿ ಹೋಗುತ್ತದೆಂದು ಅಧಿಕಾರಿಗಳು ಒಪ್ಪಿಸಿರತಕ್ಕ ಒಂದು ವರದಿಯೇನಿದೆ ಅದನ್ನು ಆಧಾರವಾಗಿಟ್ಟು ಕೊಂಡು ಅವರಂತೆ ಇದನ್ನು ಲೆಕ್ಕಾಚಾರ ಹಾಕಿಕೊಂಡು ಇದನ್ನು ಮಾಡಿದ್ದಾರೆ. ಅದರ ಬಿನಾ ಇವರು ಯಾವ ಭೂಮಿಯ ಸಾರ ಇಂದು ಹೆಚ್ಚಾಗಿದೆ, ಯಾವ ಭೂಮಿ ಸಾರವನ್ನು ಕಳೆದುಕೊಂಡಿದೆ, ಯಾವ ಭೂಮಿ ತರಿಯಿದ್ದುದು ಭಾಗಾಯಿತಾಗಿದೆ, ಭಾಗಾಯಿತಿದ್ದ ಭೂಮಿ ತರಿ ಯಾಗಿದೆ, ತರಿ ಇದ್ದದ್ದು ಖುಷ್ಕಿಯಾಗಿದೆ ಅನ್ನುವುದನ್ನು ಗ್ರಾಮವಾರಾಗಿ, ಸರ್ವೆ ನಂಬರ್‌ವಾರಾಗಿ ಪರಿಶೀಲನೆ ಮಾಡಿದ ತದನಂತರ ಈ ಕಂದಾಯ ನಿಗದಿಯಾಗಿಲ್ಲ. ಸರ್ಕಾರದವರೂ ಸಹಾ ಅವರಲ್ಲಿ ಸಾಕಷ್ಟು ಸಿಬ್ಬಂದಿಯಿಲ್ಲ ಎಂತಲೇ ಹೇಳಿದ್ದಾರೆ. ಆದರೆ ಇದರಲ್ಲಿ, ನಮ್ಮೆಲ್ಲರ ಆಶೆಯೂ ಏನಿತ್ತು ಎಂಬುದನ್ನು ಸರ್ಕಾರದವರು ಚೆನ್ನಾಗಿ ಅರಿತಿದ್ದರೂ, ಅದನ್ನು ಅವರು ಮರೆತು ಈ ದಿನ ಭೂಮಿಯಿಂದ ಅವರಿಗೆ ಆದಷ್ಟು ಕಂದಾಯ ಹೆಚ್ಚಿಗೆ ಬರಬೇಕು, ಭೂಮಿಯಿಂದ ಬರತಕ್ಕ ಆದಾಯವನ್ನೂ ಆದಷ್ಟು ಹೆಚ್ಚಿಸಿ ಕೊಳ್ಳಬೇಕು ಅನ್ನುವುದು ಸರ್ಕಾರದವರ ಒಂದನೇ ಅಭಿಪ್ರಾಯವಾಗಿದೆ. ಇನ್ನು ಎರಡನೆಯದು ಸಾಮಾನ್ಯವಾಗಿ ಆ ಪಕ್ಷದವರು ಹೇಳುತ್ತಿರುವುದು 1942 ರಿಂದಿತ್ತೀಚೆಗೆ ಎಲ್ಲ ಧಾನ್ಯಗಳ ಬೆಲೆಯೂ ಹೆಚ್ಚಿದೆ, ಭೂಮಿಯ ಬೆಲೆಯೂ ಹೆಚ್ಚಿದೆ, ಹೀಗೆ ಧಾನ್ಯಗಳ ಮತ್ತು ಭೂಮಿಯ ಬೆಲೆಗಳು ಏರಿರುವಾಗ ರೈತನಾದವನು ಸ್ವಲ್ಪ ಹೆಚ್ಚಿನ ಕಂದಾಯವನ್ನು ಕೊಡುವುದರಲ್ಲಿ ತಪ್ಪೇನಿದೆ ಎಂತ ಶ್ರೀ ಗುರೆಡ್ಡಿಯವರು ಹೇಳಿದರು. ಈ ದಿವಸ ಸರ್ಕಾರದವರು ಹೆಚ್ಚು ಕಂದಾಯವನ್ನು ರೈತನಿಂದ ವಸೂಲ್ಮಾಡಿದರೆ ನಾಳೆ ಅದನ್ನು ಅವರ ಅಭಿವೃದ್ಧಿಗೇ ಉಪಯೋಗಿಸುತ್ತಾರೆ. ಅದರಿಂದ ರೈತನ ಏಳಿಗೆಯಾಗುತ್ತದೆ. ಆದುಧರಿಂದ ಹೆಚ್ಚಿನ ಕಂದಾಯವನ್ನು ಕೊಡಬೇಕೆಂದು ಸರ್ಕಾರ ಕೇಳುತ್ತಿರುವುದರಲ್ಲಿ ತಪ್ಪೇನೂ ಇಲ್ಲ ಎಂದು ಅವರು ಹೇಳಿದರು. ಅವರು ಹೇಳಿರತಕ್ಕದ್ದು ನಿಜವೇ. ಅವರು ಹೇಳಿರುವಂತೆ ಈ ದಿನ ನಿಜವಾಗಿಯೂ ಧಾನ್ಯಗಳ ಬೆಲೆ ಮತ್ತು ಭೂಮಿಯ ಬೆಲೆಗಳೆರಡೂ ಹೆಚ್ಚಾಗಿವೆ; ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಈ ದಿವಸ ನಮ್ಮ ದೇಶದಲ್ಲಿ 100ಕ್ಕೆ 80ರಷ್ಟು ಜನ ರೈತರಿರತಕ್ಕ ಕಡೆ ಅವರು ನೇರವಾಗಿ ತರತಕ್ಕ ಭೂಕಂದಾಯವೊಂದೇ ಅಲ್ಲದೆ ರಾಜ್ಯಕ್ಕೆ ಬರತಕ್ಕ ಆದಾಯದಲ್ಲಿ ಶೇಕಡ 80 ರಷ್ಟನ್ನು ಈ ರೈತವರ್ಗ ಅಪ್ರತ್ಯಕ್ಷವಾಗಿ ಸರ್ಕಾರದ ಬೊಕ್ಕಸಕ್ಕೆ ತುಂಬುತ್ತಿದೆಯೆಂಬುದನ್ನು ಅವರೆಲ್ಲ ಮರೆತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ನಾವು ರೈತನು ತರತಕ್ಕ ಕಂದಾಯದ ಹೊರೆಯೇನಿದೆ ಅದನ್ನು ಮೊದಲಿದ್ದುದರ ಹತ್ತು ಪಟ್ಟು ಜಾಸ್ತಿ ಮಾಡಿದ್ದೇವೆ. ಇದರ ಜೊತೆಗೆ ನಾನಾಗಲೇ ಹೇಳಿದಂತೆ ಪರೋಕ್ಷವಾಗಿ ಬೇರೆ ತೆರಿಗೆಯನ್ನು ತೆರುತ್ತಿದ್ದಾನೆ. ಅವರಲ್ಲಿ ಈ ದಿವಸ 100ಕ್ಕೆ 8-10 ಜನರು ಅನ್ನ ಬಟ್ಟೆಗೆ ನೇರವಾಗಿರಬಹುದು. ಇನ್ನುಳಿದ 100ಕ್ಕೆ 90ರಷ್ಟು ಜನರು ಮೂಲೆಗುಂಪಾಗಿ ಜೀವನ ಮಾಡುತ್ತಿದ್ದಾರೆ. ಅವರಿಗೆ ಕಂದಾಯವನ್ನು ಕೊಡಲು 4 ಕಿಸ್ತುಗಳನ್ನು ಕೊಟ್ಟಿದ್ದಾಗ್ಯೂ ಕಡೇ ಕಿಸ್ತಿನಲ್ಲಿ ಅದನ್ನು ಕಟ್ಟುವುದಕ್ಕೂ ಸಾಧ್ಯವಾಗದ ತೊಂದರೆಯಲ್ಲಿರತಕ್ಕಂಥ ಜನರೇ ಜಾಸ್ತಿಯಿದ್ದಾರೆ. ಹೀಗಾಗಿ ನಮ್ಮಲ್ಲಿ ಪ್ರತಿ ವರ್ಷ ವಸೂಲಾಗತಕ್ಕ ಕಂದಾಯ ಸರಿಯಾಗಿ ವಸೂಲಾಗದ್ದೆ ಸಹಸ್ರಾರು ರೂಪಾಯಿಗಳ ಬಾಕಿ ನಿಂತಿದೆ. ಹೀಗಿರುವಾಗ

(ಶ್ರೀ ಎಸ್. ಗೋಪಾಲಗೌಡ)

ಬೆಲೆಗಳೆಲ್ಲಾ ಏರಿರುತ್ತವೆಂದು ಕಂದಾಯವನ್ನು ಜಾಸ್ತಿಮಾಡುವುದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಇದನ್ನೆಲ್ಲಾ ನೋಡಿದರೆ ಇದನ್ನು ಆಮೂಲಾಗ್ರವಾಗಿ ಸರ್ಕಾರದವರು ನೋಡಿಲ್ಲ ಎಂದು ಕಾಣುತ್ತದೆ.

ಇನ್ನು ಈ ಮಸೂದೆಯನ್ನು ತರತಕ್ಕ ಕ್ರಮದಲ್ಲಿಯೂ ಸಹ ನನಗೆ ಪೂರ ಅನುಮಾನ ಬರುತ್ತಿದೆ ಎಂದರೆ ಅದಕ್ಕೆ ಅಧ್ಯಕ್ಷರು ಕಟುವಾದ ಆಕ್ಷೇಪಣೆಯನ್ನು ಎತ್ತಿ ನೀವು ಮನೆಯಲ್ಲಿ ಓದಿಕೊಂಡು ಬರಬೇಕು......

ಅಧ್ಯಕ್ಷರು.—ನನಗಾಗಿ ನೀವೇನೂ ಓದಿಕೊಂಡು ಬರಬೇಕಾಗಿಲ್ಲ, ನಿಮಗೆ ಬೇಕಾದರೆ ನೀವು ಓದಿಕೊಂಡು ಬನ್ನಿ, ಇಲ್ಲವಾದರೆ ಬಿಟ್ಟುಬಿಡಿ, ಅದರಿಂದ ನನಗೇನಾಗಬೇಕು ?

ಶ್ರೀ ಎಸ್. ಗೋಪಾಲ ಗೌಡ.—ತಾವೇನೋ ಇಲ್ಲಿ ವರದಿಯನ್ನು ತರಿಸಿಟ್ಟಿದ್ದೀರಿ. ಅವು 38 ವಾಲ್ಯೂಂಗಳಿವೆ. ಅವುಗಳನ್ನೆಲ್ಲಾ ಇಲ್ಲಿರತಕ್ಕವರೆಲ್ಲರೂ ಓದಿದ್ದಾರೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಅವುಗಳನ್ನೆಲ್ಲಾ ಓದುವುದಕ್ಕೆ ಸಾಕಷ್ಟು ವೇಳೆಯೂ ಬೇಕು. ಇದರಲ್ಲಿ ಪ್ರತಿಯೊಬ್ಬರೂ, ಅನೇಕ ಅಧಿಕಾರಿಗಳು ಸೇರಿಕೊಂಡು ಇದನ್ನು ಬರೆದಿದ್ದಾರೆ. ಈ ವರದಿಯಲ್ಲಿ ಶಿವಪ್ಪನಾಯಕನ ಮೊದಲುಗೊಂಡು, ಆ ತೋದರಮಲ್ಲನಿಂದ ಹಿಡಿದು ಅಷ್ಟಗ್ರಾಮಗಳೆಂದರೇನು ಎಂಬುದನ್ನೆಲ್ಲಾ ಅದರ ಒರಿಜಿನಲ್ ಸಹಿತವಾಗಿ ಇಲಾಖೆಯವರು ಅಂಕಿಸಂಖ್ಯೆಗಳನ್ನು ಕಲೆಹಾಕಿ ಅವರೊಂದು ವರದಿಯನ್ನು ತಯಾರಿಸಿ ಅದನ್ನು ಡಿ.ಸಿ. ಕಡೆಗೆ ಕೊಟ್ಟಿದ್ದಾರೆ. ಅವರು ಅದಕ್ಕೆ ಒಂದು ನೋಟನ್ನು ಅಟ್ಯಾಚ್ ಮಾಡಿ ಅದನ್ನು ಇಲ್ಲಿಗೆ ರವಾನೆ ಮಾಡಿದ್ದಾರೆ.

ಅಷ್ಟು ಆಗಿದೆ. ಅದನ್ನು ಪರಿವರ್ತನೆ ಮಾಡುವ ಕಷ್ಟ ಬಹಳ ಎನ್ನುವುದಾದರೆ ಅದರಲ್ಲಿ ಎಷ್ಟು ಸಮಂಜಸತೆ ಇದೆ? ನಾನಾ ವಿಷಯಗಳನ್ನು ಅವರು ತರ್ಕ ಮಾಡಿದ್ದಾರೆ, ವಾದ ಮಾಡಿದ್ದಾರೆ, ಅಂತಹ ವಿಷಯಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಜೋನ'ಗೆಲ್ಲಾ ಒಂದೇ ಮಂತ್ರ. ಪ್ರತಿಯೊಂದು ಕಡೆಯಲ್ಲೂ ವ್ಯತ್ಯಾಸ ಇರುತ್ತದೆ. ಮೂಲತಹ ಭೂಮಿಯಲ್ಲೇ ನ್ಯೂನತೆ ಇರುತ್ತದೆ. ಆದ್ದರಿಂದ ಈ ವರದಿಯಲ್ಲಿ ಈಗ ಇರುವುದನ್ನು ಒಪ್ಪುವುದಕ್ಕೆ ಬಹಳ ಕಷ್ಟವಾಗುತ್ತದೆ. ವಿರೋಧ ಪಕ್ಷದವರು ವಿರೋಧಮಾಡುತ್ತಾರೆ ಎಂದರೆ ನಾನಾ ಕಾರಣಗಳಿಗಾಗಿ ವಿರೋಧ ಮಾಡುತ್ತಾರೆ. ನಾವು ಇದನ್ನು ಕೇವಲ ಪ್ರಚಾರಕ್ಕಾಗಿ ವಿರೋಧ ಮಾಡುತ್ತೇವೆ ಎಂದು ಯಾರಾದರೂ ತಿಳಿದುಕೊಳ್ಳುವುದಾದರೆ ಬಹಳ ತಪ್ಪಾಗುತ್ತದೆ. ಇನ್ನೂ ಮೂವತ್ತು ವರ್ಷ ಈ ಕಂದಾಯ ಉಳಿಯಬೇಕಾಗುತ್ತದೆ. ತಮಗೆ ನೆನಪು ಇರಬಹುದು 1932 ರಿಂದ 38ರ ವರೆಗೂ ಎಷ್ಟೋ ಜನ ಕಂದಾಯ ಕಟ್ಟುವುದಕ್ಕೆ ಆಗದೇ ತಮ್ಮ ಜಮೀನನ್ನು ಹರಾಜು ಮಾಡಿಕೊಂಡರು. ಸ್ವಾಮಿ, ಇವತ್ತು ಭೂಮಿಯ ಮೇಲೆ ಒತ್ತಡವೂ ಕೂಡ ಇದೆ, ವ್ಯವಸಾಯದ ಭೂಮಿಯಿಂದ ಬೆಳೆ ಬಂದರೂ ನಿರುದ್ಯೋಗವೂ ಹೆಚ್ಚಾಗಿದೆ. ಭೂಮಿ ಬೇಕೆಂದು ಕೇಳುವವರು ಇದ್ದಾರೆ ಇದೆಲ್ಲಾ ಇದೆ. ಈ ಕಾರಣದಿಂದ ಇವತ್ತು ಅವರು ಕಂದಾಯವನ್ನು ಕೊಡುತ್ತಾ ಇದ್ದಾರೆ. ಆದ್ದರಿಂದ ನೀವು ಸರ್ಚಾರ್ಜ್ ಹಾಕಿದರೂ ಕೂಡ ಅದನ್ನು ಕೊಟ್ಟರು. ಕೆಲವರು ಒಂದಕ್ಕೆ ಎರಡರಷ್ಟು ಹೊರೆಯನ್ನು ಹೊತ್ತುಕೊಂಡಿದ್ದಾರೆ. ಚೈನಾ ಆಕ್ರಮಣ ಮಾಡಿತು. ಬಹಳ ಹಣ ಬೇಕು ದೇಶದ ರಕ್ಷಣೆಗಾಗಿ, ಅದಕ್ಕೋಸ್ಕರ ಸರ್ಚಾರ್ಜು ಹಾಕುತ್ತೇವೆ ಎಂದು ಹೇಳಿದಿರಿ, ಒಂದು ವರ್ಷಕ್ಕೆ ಹಾಕುತ್ತೇವೆ ಎಂದು ಹೇಳಿದ್ದರ ಮೇಲೆ ಅವರು ಅದನ್ನು ಸಂತೋಷವಾಗಿ ಕೊಟ್ಟರು. ಆದರೆ ಈಗ ನೋಡಿದ್ದರಲ್ಲಿ ಅದು ಇನ್ನೂ ಮೂವತ್ತು ವರ್ಷ ಉಳಿಯುತ್ತದೆ, ನಮ್ಮ ದೇಶದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳಾದರೂ ಕೂಡ ರೈತನ ಫಸಲಿನ ಬಗ್ಗೆ, ಬೆಳೆಯ ಬಗ್ಗೆ ಗ್ಯಾರಂಟಿ ಆಗಲಿ, ಅವನು ಅವನ್ನು ಮಾರುಕಟ್ಟೆಗೆ ತಂದು ಸರಿಯಾದ ಬೆಲೆ ಸಿಕ್ಕುತ್ತದೆ ಎಂದು ನಿರೀಕ್ಷಿಸುವ ಬಗ್ಗೆ ಗ್ಯಾರಂಟಿ ಆಗಲಿ ಅಥವಾ ಲುಕ್ಸಾನಾಗುವುದಿಲ್ಲ ಬತ್ತದ ಬೆಳೆಗೆ ಸಾವಿರಾರು ರೂಪಾಯಿ ಕೊಟ್ಟೇ ಕೊಡುತ್ತಾರೆ ಎಂಬ ಗ್ಯಾರಂಟಿ ಆಗಲಿ ಅವನಿಗೆ ಕೊಟ್ಟಿಲ್ಲ. ನಾನಾ ಕಾರಣಗಳಿಂದಾಗಿ ಬೆಲೆ ಸ್ವಲ್ಪ ಜಾಸ್ತಿ ಬಂದರೆ ಅವನ ಮೇಲೆ ನಿಮ್ಮ ಕಣ್ಣು ಮೊದಲನೆಯದಾಗಿ ಬಿದ್ದಿದೆ. ಬೇರೆ ಕಾರಣಗಳಿಂದ ಅವನ ಮೇಲೆ ಆಗುತ್ತಾ ಇರತಕ್ಕ ಉತ್ಪಾತಗಳನ್ನು ರಕ್ಷಿಸುವುದಕ್ಕೆ ಸರ್ಕಾರ ಯಾವ ಭರವಸೆಯನ್ನು ಕೊಟ್ಟಿಲ್ಲ. ಆದ್ದರಿಂದ ನಾನು ಹೇಳುವುದು ಏನೆಂದರೆ ಇದನ್ನು ಪ್ರಚಾರಕ್ಕೆ ಹೇಳುತ್ತೇನೆ ಎಂದು ಅಲ್ಲ ಅಥವಾ ನಾವು ಅವತ್ತು ಬೆಳಿಗ್ಗೆ ವಿರೋಧ ಪಕ್ಷದವರು ಉಪವಾಸ ಮಾಡಿ ಇದು ಹೀಗೆ ಕಡಿಮೆ ಆಯಿತು ಎಂದು ನಾನು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ, ಜನತೆಗೆ, ನಿಮಗೆ ನಮಗೆ ಎಲ್ಲರಿಗೂ ಗೊತ್ತಿದೆ, ಉಪವಾಸ ಮಾಡುವುದಕ್ಕೆ ಕಾರಣ ಇತ್ತು, ಮಾಡಿದೆವು. ಅದು ದೊಡ್ಡ

ಪ್ರಶ್ನೆ ಅಲ್ಲ. ಮುಖ್ಯವಾಗಿ ತಿಳಿದುಕೊಳ್ಳಬೇಕಾದ್ದು ಏನೆಂದರೆ, ಇದನ್ನು ಮೈಸೂರು ಸರ್ಕಾರ ಇನ್ನೂ ಚೆನ್ನಾಗಿ ಯೋಚನೆ ಮಾಡಬೇಕಾಗಿತ್ತು, ವಿಚಾರ ಮಾಡಬೇಕಾಗಿತ್ತು, ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗಿತ್ತು, ಕೊಡಲಿಲ್ಲ. ಈ ನಿರ್ಣಯವನ್ನು ಸಭೆಯ ಮುಂದೆ ಇಟ್ಟರು, ವಿರೋಧಗಳ ಬಂದ ಹಾಗೆ ಅದನ್ನು ಹಾಗೆಯೇ ಹಿಂದಕ್ಕೆ ಇಟ್ಟು ಕೊನೆಯ ಘಳಿಗೆಯಲ್ಲಿ ಘೋಷಣೆ ಮಾಡಿದಂತಹ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ತಿದ್ದುಪಡಿ ಮಾಡಬೇಕೆಂದು ಒಂದೇ ದಿವಸದಲ್ಲಿ ಅದಕ್ಕೆ ಗವರ್ನರ್‌ಅವರ ಮುಂಜೂರಾತಿಯನ್ನು ಪಡೆದು ಅದಕ್ಕೆ ತಿದ್ದುಪಡಿಯನ್ನು ತಂದು ಅದರ ಆಧಾರದ ಮೇಲೆ ಅಂಗೀಕಾರ ಮಾಡಬೇಕೆಂದು ಕೇಳುತ್ತಾ ಇದ್ದೀರಿ, ಅದನ್ನು ಅಂಗೀಕಾರ ಮಾಡುವುದಕ್ಕೆ ಶ್ರೀಮಾನ್ ಗುರೆಡ್ಡಿಯವರು— ಅವರು ಸಭೆಯಲ್ಲಿ ಇಲ್ಲ— ಕೈ ಎತ್ತುವುದಕ್ಕೆ ಸಿದ್ಧವಾಗಿದ್ದರು— ಅದರಂತೆ ಇತರರೆಲ್ಲಾ ಕೈ ಎತ್ತಬಹುದು ಅದು ಬೇರೆ ಪ್ರಶ್ನೆಯಾಯಿತು. ಆದರೆ ಇವತ್ತು ನಾನು ಆಗಲೇ ಅನುಮಾನ ಪಟ್ಟಂತೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಏನು ಹೇಳಲಾಗಿದೆಯೋ ಅದಕ್ಕನುಸಾರವಾಗಿ ಇದು ತಿದ್ದುಪಡಿಯಾದಂತಾಗುತ್ತದೆಯೋ ಎಂಬುದು ಸಮಂಜಸವಾಗಿ ಗೊತ್ತಾಗುತ್ತಾ ಇಲ್ಲ. ಪ್ರಾಮಾಣಿಕವಾಗಿ ಅಧ್ಯಕ್ಷರನ್ನು ಕೇಳುವುದೇನೆಂದರೆ, ಸಭೆ ಮುಗಿದ ಮೇಲೂ ಕೂಡ ತಮ್ಮ ಹತ್ತಿರ ಮತ್ತು ಸಚಿವರ ಹತ್ತಿರ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ಇದರಲ್ಲಿ ಮೂಲವಾದ ತಿದ್ದುಪಡಿಯನ್ನು ಮಾಡಿದ್ದೇವೆ. ಈಗ ನೀವು ಮಾಡುವುದು ಮುಂದೆ ಎಲ್ಲಾ ಸೆಟ್ಲಮೆಂಟ್ ರಿಪೋರ್ಟ್ ಬಂದಾಗಲೂ ಹೀಗೆಯೇ ಮಾಡಬೇಕೆಂದು ಮಾಡಿಕೊಂಡಿದ್ದೀರಾ ಅಥವಾ ಕೇವಲ ಈಗಿನ ದರದಲ್ಲಿ ಆರೂಕಾಲು ಪರ್ಸೆಂಟ್ ಹಾಕುವುದು ಬಹಳ ಜಾಸ್ತಿಯಾಗುತ್ತದೆ ಆದ್ದರಿಂದ ನಾಲ್ಕು ಪರ್ಸೆಂಟ್ ಹಾಕಿದರೆ ಸಾಕು, ಮತ್ತು ಪ್ಲಾಂಟೇಷನ್‌ಗೆ ಒಂದು ಪರ್ಸೆಂಟ್ ಹಾಕಿದರೆ ಸಾಕಾಗುತ್ತದೆ ಎಂದು ಮಾಡಿದ್ದೀರಾಎನ್ನುವುದು ಒಂದು ಪ್ರಶ್ನೆ. ಅದು ಹೇಗೇ ಇರಲಿ, ಸ್ವಾಮಿ, ಅವತ್ತು ಕರಾಚಿ ಕಾಂಗ್ರೆಸ್‌ನಲ್ಲಿ ಅಂಗೀಕಾರವಾದ ಒಂದು ನಿರ್ಣಯ— ಯಾವ ಜಮೀನಿನಲ್ಲಿ ಸಾಕಷ್ಟು ಹುಟ್ಟುವಳಿಯಾಗುವುದಿಲ್ಲವೋ, ಯಾವ ಜಮೀನನ್ನು ಉಳುಮೆ ಮಾಡುವುದರಿಂದ ರೈತನಿಗೆ ಯಾವ ಲಾಭವೂ ಬರುವುದಿಲ್ಲವೋ ಅಂತಹ ಜಮೀನಿನ ಮೇಲೆ ಕಂದಾಯವನ್ನು ಹಾಕುವುದಿಲ್ಲ ಎಂದು ಹೇಳಿ ಒಂದು ನಿರ್ಣಯ ಅಂಗೀಕಾರವಾಯಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ಈಗ 17 ವರ್ಷಗಳಾಗಿವೆ. ಆ ನಿರ್ಣಯವನ್ನು ಅಂಗೀಕಾರಮಾಡಲಿಲ್ಲ. ಇವತ್ತು ನಾನು ಹೇಳುತ್ತೇನೆ ಸ್ವಾಮಿ, ಮೈಸೂರಿನ ಮಂತ್ರಿಮಂಡಲದ ಮೇಲೆ ಪ್ಲಾಂಟೇಷನ್‌ನವರ ಏನು ಒಂದು ಪ್ರಭಾವ ಬಿದ್ದಿದೆಯೋ ಅದು ನಮಗೆ ಗೊತ್ತಿಲ್ಲ. ಅದು ಏನೇ ಇರಲಿ ಅವರಿಗೆ ಒಂದು ಪರ್ಸೆಂಟೇ ಸಾಕು ಎಂದು ಹೇಳಿ ತೀರ್ಮಾನ ಮಾಡಿದ್ದೀರಿ, ಅದಕ್ಕೆ ಅನೇಕ ಕಾರಣಗಳು ಇವೆ, ಅವರು ಫಾರಿನ್ ಎಕ್ಸ್‌ಚೇಂಜ್ ತರುತ್ತಾರೆ ಎಂದೆಲ್ಲಾ ಹೇಳಿದಿರಿ, ಅವರಿಗೆ ಒಂದು ಪರ್ಸೆಂಟ್ ಹಾಕುತ್ತೇವೆ, ಐದುಕಾಲು ಪರ್ಸೆಂಟ್ ಕನ್‌ಸೆಷನ್ ಕೊಡುತ್ತೇವೆ ಎಂದು ಹೇಳಿಬಿಟ್ಟಿರಿ. ಇದರಿಂದ ಎಷ್ಟು ಲುಕ್ಸಾನಾಗುತ್ತದೆ ಎಂಬುದನ್ನು ಲೆಕ್ಕಹಾಕಿ ನೋಡಿ ಎಂದು ತಮ್ಮನ್ನು ಕೇಳುತ್ತಾ ಇದ್ದೇನೆ. ಐದು ಎಕರೆ ಅಥವಾ ಎರಡು ಬೇಸಿಕ್ ಹೋಲ್ಡಿಂಗ್ಸ್ ಅಂತವು ಯಾವುದನ್ನೇ ಆದರೂ ಆಧಾರವಾಗಿ ಇಟ್ಟುಕೊಳ್ಳಿ, ಒಂದು ಇರಿಗೇಟೆಡ್ ಭೂಮಿ ಇದೆ ಸುಮಾರು ಒಂದು ಎಕರೆ ಗಾರ್ಡನ್ ಎರಡು ಎಕರೆ ತರೀ, ಮತ್ತು 3 ಎಕರೆ ರೇನ್ ಫೆಡ್ ವೆಟ್ ನ ತ ಎಕರೆ ರೇನ್ ಫೆಡ್‌ಡ್ರೈ ಇದೆ ಅಥವಾ 6 ಎಕರೆ ಬರೀ ಡ್ರೈ ಈ ರೀತಿ ಮಾಫಿ ಕೊಟ್ಟರೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಮಾಫಿ ಕೊಟ್ಟಂತೆ ಆಗಬಹುದು. ಅದು ಎಷ್ಟು ಲಕ್ಷ ಜನ ರೈತರಿಗೆ ಅನುಕೂಲವಾಗುತ್ತದೆ. ಎಂಬುದನ್ನು ಪರಿಶೀಲನೆ ಮಾಡಿ ಒಂದು ಕೋಟಿ ರೂಪಾಯಿಯಷ್ಟು ಮಾಫಿ ಬಿಟ್ಟರೆ ಆ ಒಂದು ಕೋಟಿ ರೂಪಾಯಿಗಳನು ಪ್ಲಾಂಟೇಷನ್‌ನಿಂದ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಈಗ ಪ್ಲಾಂಟೇಷನ್‌ಗೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಕನ್‌ಸೆಷನ್‌ನ್ನು ಮೀರಿ ಕೂಡತೋರಿಸುತ್ತಾ ಇದ್ದೀರಿ ಧೋರಣೆ ಏನಿದೆಯೋ ಅದರ ಎಲ್ಲೆಯನ್ನು ಮೀರಿ ಕೂಡ ತೋರಿಸಿರುವ ಔದಾರ್ಯ ಅರ್ಥವಾಗಲಿಲ್ಲ. ಇದು ಯಾವ ಔದಾರ್ಯ ? ಏನಾಗುತ್ತದೆ ಎಂದು ಇದನ್ನು ತಾವು ಮಾಡಿದ್ದೀರಿ ? ಆದ್ದರಿಂದ ಇದರಲ್ಲಿ ಶಾಸ್ತ್ರೀಯವಾದದ್ದು ಏನಿದೆ ? ವೈಜ್ಞಾನಿಕತೆ ಏನಿದೆ ? ಕೇವಲ ಅವಸರ, ಕೇವಲ ಹಣಬೇಕು ಮತ್ತು ಸ್ನೇಹಿತರು ಹೇಳಿದ ಹಾಗೆ ಇದನ್ನು ನಾನು ತಂದು ಬಿಟ್ಟಿದ್ದೇನೆ, ಆದ್ದರಿಂದ ಇದು ಆಗಲೇ ಬೇಕು ಎಂದು ಹೇಳಿ ಹಟಮಾರಿತನದಿಂದ ಹೊರಟು, ಅವರಿಗೆ ಇದು ಎಂದು ಪ್ರೆಸ್ಟೀಜ್ ಪ್ರಶ್ನೆಯಾಗಿ ನಿಂತಿದೆ. ಖಂಡಿತವಾಗಿಯೂ ಇದು ಪ್ರೆಸ್ಟೀಜ್ ಪ್ರಶ್ನೆಯಲ್ಲ. ಇದು ಅರ್ಥಶಾಸ್ತ್ರದ ಪ್ರಶ್ನೆ. ನೂರಕ್ಕೆ ಎಂಭತ್ತು ಭಾಗ ರೈತರು ಇದ್ದಾರೆ. ದೇಶಕ್ಕೆ ಅನ್ನ ಕೊಡುತ್ತಾ ಇದ್ದಾರೆ. 24 ಗಂಟೆ ದುಡಿದು ಬೆವರು ಸುರಿಸಿದರೂ ಕೂಡ ತಮ್ಮ ಹೊಟ್ಟೆ ತುಂಬಿಕೊಂಡು ಮೂರನೆಯವರಿಗೆ ಕೊಡಲು ಅವರಲ್ಲಿ ಉಳಿಯುತ್ತಾ ಇಲ್ಲ. ಅಂತಹ ಸ್ಥಿತಿಯಲ್ಲಿ ಇರತಕ್ಕವನ ಮೇಲೆ ಮತ್ತು ಉತ್ತರ ಪ್ರದೇಶದಲ್ಲಿ ಚೈನಾ ದೇಶದವರ ಒಂದು ಗಂಡಾಂತರ ಬೇರೆ ಇದೆ ; ಇಂತಹ ಸಂದರ್ಭದಲ್ಲಿ ಈ ಲೆಕ್ಕಾಚಾರ ಮಾಡುವುದನ್ನು ದೇಶದ ಮುಂದೆ ಇಟ್ಟಿದ್ದೀರಿ. ಮಾನ್ಯ ಕೃಷ್ಣಪ್ಪನವರಂತೂ ಈ ಲೆಕ್ಕಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಮೇಲಿಂದು ಕೆಳಗೆ ಕೆಳಗಿಂದು ಮೇಲೆ ಮಾಡುತ್ತಾರೆ, ಕೆಲವು ವಿಷಯಗಳನ್ನು ಮುಚ್ಚಿ ಇಡುತ್ತಾರೆ ಕೆಲವು ವಿಷಯಗಳನ್ನು ಹೇಳುತ್ತಾರೆ, ಪೂರ್ಣ ಚಿತ್ರವನ್ನು ನಮ್ಮ ಮುಂದೆ ಇಡುವುದಿಲ್ಲ. ಇದನ್ನು ಅವರು ಅಭ್ಯಾಸ ಮಾಡಿದ್ದಾರೆ, ಅದು ಏನೇ ಇರಲಿ ಇಲ್ಲಿ ತೋರಿಸಿರುವ ಪ್ರಕಾರ ನಾಲ್ಕು ಕೋಟಿ ರೂಪಾಯಿ ಮಾತ್ರ ರೈತನ ಮೇಲೆ ಹೊರೆ ಬೀಳುವುದಿಲ್ಲ. ಇರಿಗೇಷನ್ ಆಗುವುದನ್ನು ಬಿಟ್ಟಿದ್ದಾರೆ. ಇರಿಗೇಟೆಡ್ ವೆಟ್ ಲ್ಯಾಂಡ್ಸ್ ಮೇಲೆ 30 ರೂಪಾಯಿ ತನಕ ಕಂದಾಯ ಹಾಕಿದರೆ ಅದೇನೇ ಸುಮಾರು ನಾಲ್ಕು ಕೋಟಿ ರೂಪಾಯಿ ತನಕ ಬರುತ್ತದೆ, ತಾವು ಲೆಕ್ಕ ಹಾಕಿ, ಇರಿಗೇಟೆಡ್ ಗಾರ್ಡನ್ ಲ್ಯಾಂಡ್ ಮೇಲೆ ಸುಮಾರು ಒಂದು ಕೋಟಿ ರೂಪಾಯಿ ತನಕ ಆಗುತ್ತದೆ. ಬೆಟರ್‌ಮೆಂಟ್ ಲೆವಿ ಇದೆಲ್ಲಾ ಇದೆ. ಇನ್ನು ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಯಾರೋ ಒಬ್ಬ ಮಾನ್ಯ ಸದಸ್ಯರು ಇದನ್ನೆಲ್ಲಾ ಪೂರ್ತಿಯಾಗಿ ಗ್ರಾಮಪಂಚಾಯಿತಿಗಳಿಗೆ ಕೊಡುತ್ತೇವೆ ಎಂದು ಹೇಳಿದರು. ಗ್ರಾಮಪಂಚಾಯಿತಿ ಮಸೂದೆಯಲ್ಲಿ ಅಧಿಕಾರ ಕೊಟ್ಟಿರುವ ಪ್ರಕಾರ ಒಂದು ರೂಪಾಯಿನ ಮೇಲೆ 70 ಪೈಸೆ ವರೆಗೂ ಸೆಸ್ ಹಾಕತಕ್ಕ ಅಧಿಕಾರ ಅವರಿಗೆ ಇದೆ. ಇದನ್ನು ತಾವು ಯೋಚನೆ ಮಾಡಬೇಕು.

3–30 P.M.

ಹೊರಬಾರದ ಭಾರವನ್ನು ಭೂಮಿಯನ್ನವಲಂಬಿಸಿರುವ ರೈತನ ಮೇಲೆ ಹಾಕುತ್ತಿದ್ದೀರಿ. ಇದನ್ನು ಅಮಾನುಷ ರೀತಿಯಲ್ಲಿ ಹಾಕುತ್ತಿದ್ದೀರಿ ಎಂದು ಹೇಳಬಹುದು. ಶ್ರೀಮಾನ್ ಗುರೆಡ್ಡಿಯವರು ಸಭೆಯ ಮುಂದಿರುವ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಹೇಳಿದರು. ನಾನಂತೂ ಇದಕ್ಕೆ ಒಪ್ಪುವುದಿಲ್ಲ. ಈ ದಿವಸ ಮಾತ್ರವಲ್ಲ, ಈ ಸಭೆಯಲ್ಲಲ್ಲದೆ ಹೊರಗೆ ಕೂಡ ಪ್ರತಿಭಟನೆ ಮಾಡಬೇಕಾದ್ದು ನಮ್ಮ ಕರ್ತವ್ಯ, ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೆ, ಕಂದಾಯ ಏರಿಸಿರುವ ಬಗ್ಗೆ ಮಾತನಾಡುತ್ತಾ ಶ್ರೀ ಗುರೆಡ್ಡಿಯವರು ಶೇಕಡ 4 ರಷ್ಟು ಹೆಚ್ಚಿಸಿರುವುದಕ್ಕೆ ಬಹಳ ಸಂತೋಷಪಡಬೇಕು, ಹಾಗೆ ಮಾಡದೆ ವಿರೋಧಿಸುತ್ತಿದ್ದಾರೆ ಎಂದು ಹೇಳಿದರು. ಅದನ್ನು ಕೇಳಿ ನನಗಂತೂ ಬಹಳ ಸಂಕಟವಾಯಿತು. ವಸೂಲು ಮಾಡಿದ ಪ್ರತಿಯೊಂದು ಪೈಸಾವನ್ನೂ ರೈತನ ಏಳಿಗೆಗಾಗಿಯೇ ಖರ್ಚು ಮಾಡುತ್ತಾರೆ ಎಂದು ಹೇಳಿದರು. ಯಾವ ಸಮಾಜದಲ್ಲಿ ಅಥವಾ ಕುಟುಂಬದಲ್ಲಿ ಯಾರು ನಿರ್ವೀರ್ಯರೋ, ಯಾರಿಗೆ ಶಕ್ತಿಯಿಲ್ಲವೋ, ಯಾರು ಬಡವರೋ ಅವರನ್ನು ಪಾಲನೆ ಮಾಡಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ. ಆ ರೀತಿ ಮಾಡದೆ ಈ ದಿವಸ ಅವರಿಗೆ ಒಳ್ಳೆಯದನ್ನು ಮಾಡುತ್ತಿದ್ದೇವೆಂದು ಹೇಳಿದರು. ಬಹಳ ಹಿಂದುಳಿದವರೆಂದು ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಹೆಚ್ಚಿನ ಸೌಕರ್ಯವನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ರೈತರಿಗೂ ಕೂಡ ಏಕೆ ಕೊಡಬಾರದು ? ಕಂದಾಯ ವಸೂಲುಮಾಡಿ ಸಾವಿರಾರು ವರ್ಷಗಳಿಂದ ಇರುವ ರೈತರನ್ನು ಮುಂದುವರೆಸುವುದಕ್ಕೆ ಅವಕಾಶವಿಲ್ಲದಿರುವಾಗ ಈಗ ಮಾಡಿಕೊಡುವುದೇನು ? ಅವರಿಗೆ ಬೇಕಾದ ಸೌಕರ್ಯ ಕಲ್ಪಿಸಬೇಕಾದ್ದು ಧರ್ಮ, ಕರ್ತವ್ಯ. ಹಾಗಿಲ್ಲದೆ ರೈತರಿಗೆ ಅನುಕೂಲ ಮಾಡುತ್ತೇವೆಂದು ಹೊರೆ ಹೇರುವುದು ತಪ್ಪು. ಇವತ್ತು ಯಾವ ದೇಶವನ್ನು ತೆಗೆದುಕೊಂಡರೂ ನಿವ್ವಳ ಆದಾಯದ ಮೇಲೆ ತೆರಿಗೆ ಹಾಕುವರೇ ಹೊರತು ಒಟ್ಟು ಆದಾಯದ ಮೇಲೆ ಹಾಕುವುದಿಲ್ಲ. ಕಂದಾಯವನ್ನು ಒಟ್ಟು ಹುಟ್ಟುವಳಿಯ ಮೇಲೆ ಹಾಕುವುದು ಯಾವ ನ್ಯಾಯ ? ವ್ಯಾಪಾರಸ್ಥರಿಗೆ ವರ್ಷದ ಲಾಭ ವಿಂಗಡಿಸಿ ವರಮಾನ ತೆರಿಗೆ ಇಷ್ಟು ಕೊಡಬೇಕೆಂದು ಹೇಳುತ್ತಾರೆ. ರೈತರು ಬೆಳೆಯುತ್ತಿರುವುದಕ್ಕೆ ಸೇಕಡ 4 ಕೊಡಬೇಕೆಂಬುದು ಸೈಂಟಿಫಿಕ್ ಅಲ್ಲ, ಇದು ರೈತರಿಗೆ ಎಸಗಿರುವ ಅಪಚಾರ. ಆದುದರಿಂದ ಇದನ್ನು ಕೈಬಿಡಿ ಎಂದು ಹೇಳಬೇಕಾಗಿದೆ. ಇಲ್ಲಿರುವ ಸದಸ್ಯರಲ್ಲಿ ಅನೇಕರು ರೈತರ ಪರವಾಗಿ ಬಂದಿದ್ದಾರೆ, ಯಾವ ಮಂತ್ರಿಗಳೇ ಆಗಲಿ ರೈತರಾಗಿ ಕೆಲಸಮಾಡಬೇಕಾದರೆ ಬಹಳ ಕಷ್ಟವಿದೆ. ಗೋಪಾಲಗೌಡರು ಮತ್ತು ವೆಂಕಟೇಗೌಡರು ಬಹಳ ಚೆನ್ನಾಗಿ ಹೇಳಿದರು, ಕಡಿದಾಳ್ ಮಂಜಪ್ಪನವರು ರೈತರಿಗೆ ಹೆಂಡತಿಗೆ ಒಂದು ಸೀರೆ ತೆಗೆದುಕೊಡುವುದಕ್ಕೆ ಎಷ್ಟೋ ಕಷ್ಟ ಎಂದು ಹೇಳಿದರು. ಅವರಿಗೆ ಒಂದು ಷರ್ಟು ಬಿಟ್ಟರೆ ಬೇರೆ ಇರುವುದಿಲ್ಲ, ಇರುವುದನ್ನೇ ಒಗೆದು ಒಣಗಿಸಿ ಹಾಕಿಕೊಳ್ಳಬೇಕು. ಇಂಥವರಿಗೆ ತೆರಿಗೆ ಹಾಕಿ ಉದ್ಧಾರಮಾಡುವುದು ಹೇಗೆ ? ಈ ದಿವಸ ಕಾಂಗ್ರೆಸ್ ಸರಕಾರ ಬಂದಮೇಲೆ ರೈತರಿಗೆ ಕಂದಾಯ ದ್ವಿಗುಣವಾಗಿದೆ, ಮೊದಲು ಕಾಂಗ್ರೆಸ್ಸಿನವರು ಕಂದಾಯ ಮಾಫಾ ಮಾಡುತ್ತೇವೆಂದು ಹೇಳಿದ್ದರು. ಗೋಪಾಲಗೌಡರು ಇದು ಅಮಾನುಷ ವರ್ತನೆಯೆಂದು ಹೇಳಿದರು. ಈ ರೀತಿ ಕಂದಾಯ ಹಾಕುವುದು ಉಚಿತವಲ್ಲ. ಇದು ಮೋಸ, ದ್ರೋಹ. ಕೊಡಬಾರದ

ಕಷ್ಟ ಕೊಟ್ಟು ನೀವು ತೋರುವ ಸಹಾನುಭೂತಿಯನ್ನು ರೈತರು ಅರಿಯದೆ ಇರುವುದಿಲ್ಲ. ರೈತರ ಕಷ್ಟವನ್ನರಿಯದೆ ಹೀಗೆ ಭಾರ ರೈತರ ಮೇಲೆ ಹೇರುವುದು ಸರಿಯಲ್ಲವೆಂದು ಹೇಳಿದರೆ ಕ್ರೋಧ ಮಾಡುವುದು ಸರಿಯಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡಲೇಬೇಕು. ಒಟ್ಟಿನಲ್ಲಿ ಜನರಿಗೆ ತೊಂದರೆಯಾಗಬಾರದು. ಶೇಕಡ 4 ರಷ್ಟು ಕಂದಾಯ ಹಾಕಿದರೆ ರೈತರು ಭೂಮಿ ಉಳುವುದನ್ನೇ ಬಿಡಬೇಕಾಗಿ ಬರಬಹುದು, ಕಾದು ನೋಡಬೇಕು. ಕೋಲಾರ ಜಿಲ್ಲೆಯಲ್ಲಿ 3 ಲಕ್ಷವಿರುವ ಕಂದಾಯ 6 ಲಕ್ಷ ಚಿಲ್ಲರೆಯಾಗುತ್ತದೆ, ಒಂದು ರೂಪಾಯಿಗೆ ಎರಡು ರೂಪಾಯಿಯಾಗುತ್ತದೆ. ಕೆಲವು ಕಡೆ 20 ಪೈಸೆ, ಇನ್ನು ಕೆಲವು ಕಡೆ 30 ಪೈಸೆ ಮತ್ತೆ ಕೆಲವು ಕಡೆ ಸೇಕಡ ನೂರರಷ್ಟು ಜಾಸ್ತಿಯಾಗುತ್ತದೆಂದು ಕಂದಾಯ ಸಚಿವರು ಹೇಳಿದರು. ಒಂದು ರೂಪಾಯಿ ಇರುವವರು ಮೂರು ರೂಪಾಯಿ ಕೊಡಬೇಕಾಗುತ್ತದೆ, ಕೆಲವು ಕಡೆ ಖುಷ್ಕಿಗೆ ಬಹಳ ಹೆಚ್ಚು ಕಂದಾಯವಿದೆ, ಮಣ್ಣುಕಲ್ಲು, ಬೆಟ್ಟ, ಕಾಡುಮೇಡು ಜಮೀನು ಬೇರೆ ಇರುತ್ತದೆ, ಅಲ್ಲಿ ಏನೂ ಬೆಳೆಯುವುದಿಲ್ಲ. ಆದುದರಿಂದ ಈಗ ಹಾಕಬೇಕೆಂದಿರುವ ಕಂದಾಯ ಸೈಂಟಿಫಿಕ್ಕಾಗಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ರೈತರು ಎಷ್ಟೇ ಕಷ್ಟಪಟ್ಟರೂ ಹೆಚ್ಚು ಸಂಪಾದಿಸಿ ಇತರರ ಮಟ್ಟಕ್ಕೆ ಬರಲಾರರು. ಪ್ರತಿಯೊಬ್ಬನೂ ತಾನು ಭಾರತೀಯನೆಂದು ಹೆಮ್ಮೆಪಟ್ಟುಕೊಳ್ಳುವಂತೆ ಎಲ್ಲರೂ ಒಂದೇ ಮಟ್ಟದಲ್ಲಿ ಜೀವನ ನಡೆಸಲು ಅವಕಾಶ ಮಾಡಿ ಕೊಡಬೇಕು. ಈಗ ರೈತರಿಗೇನೂ ಸಹಾಯವಾಗುತ್ತಿಲ್ಲ. ಕಂದಾಯ ವಸೂಲು ಮಾಡಿ. ಆದರೆ ರೈತರ ಸಾಲವನ್ನೆಲ್ಲಾ ಕ್ರೋಢೀಕರಿಸಿ ಸರಕಾರ ಅದನ್ನು ವಹಿಸಿಕೊಂಡು 30 ವರ್ಷಗಳಲ್ಲಿ ರೈತ ತೀರಿಸಲು ಕಂತಿನ ಅವಕಾಶ ಮಾಡಿಕೊಡಿ, ರೈತನಿಗೆ ಸಾಲದ ಬಾಧೆ ಇಡವಂತೆ ಮಾಡಿ, ಅವನು ಸಾಲಕ್ಕಾಗಿ ಜಮೀನನ್ನು ಈಡುಮಾಡದಂತೆ ಅವಕಾಶಮಾಡಿ, ಹೀಗೆ ಮಾಡಿದರೆ ಕಂದಾಯ ಎಷ್ಟು ಬೇಕಾದರೂ ಕೊಡುತ್ತಾನೆ. ಬೆಳೆ ಹೆಚ್ಚಾಗಿ ಬೆಳೆಯದಿದ್ದರೂ ಕೂಡ ಕಂದಾಯ ಹೆಚ್ಚು ಮಾಡಿದ್ದಾರೆ. ಮೊನ್ನೆ ನಮ್ಮ ತಾಲ್ಲೂಕಿಗೆ ತಾಸಿಲ್ದಾರರು ಬಂದು ಕಂದಾಯ ಬಹಳ ಬಾಕಿ ಇದೆ, ಅದನ್ನು ವಸೂಲು ಮಾಡಬೇಕೆಂಬ ಒತ್ತಾಯ ಜಾಸ್ತಿಯಾಗಿದೆ ಎಂದು ಹೇಳಿದರು. ಹಿಂದೆ ಹಾಕಿದ್ದ ಸರ್‌ಛಾರ್ಜನ್ನು ಕೊಡುವುದಕ್ಕೇ ರೈತರಿಗೆ ಶಕ್ತಿಯಿಲ್ಲ. ಹಾಗಿರುವಾಗ ಕಂದಾಯವನ್ನು ಇನ್ನೂ ಹೆಚ್ಚು ಮಾಡುತ್ತಿದ್ದಾರೆ. ಹೀಗೆ ಮಾಡಿ ಉಳುವವನೇ ಹೊಲದ ಒಡೆಯನಾಗಬೇಕೆಂದು ಹೇಳುವುದು ಅರ್ಥವಾಗುವುದಿಲ್ಲ. ರೈತರಿಗೆ ಒಳ್ಳೆಯದಾಗಬೇಕಾದರೆ, ಭಾರತ ಕಟ್ಟಬೇಕಾದರೆ, ರೈತರಿಗೆ ನೆರವಾಗಬೇಕು. ರೈತರ ಏಳಿಗೆಯಾಗುವವರೆಗೆ ದೇಶೋದ್ಧಾರವಾಗುವುದಿಲ್ಲ. ಆದುದರಿಂದ ಪ್ರಾರ್ಥನೆ ಮಾಡುವುದು, ಶೇಕಡ 4 ರಂತೆ ಹಾಕುವುದನ್ನು ಕಡಮೆ ಮಾಡಿದರೆ ಶೇಕಡ 80 ಜನ ರೈತರ ಏಳಿಗೆಗೆ ಕಾರಣರಾಗುತ್ತೀರಿ. ಈಗ ಮಾಡಿರುವ ಕೆಲಸ ಹೇಗಿದೆ ಎಂದರೆ ಒಬ್ಬ ಸಾಹುಕಾರ ಶೇಕಡ 4 ರಂತೆ ಬಡ್ಡಿ ಹಾಕಿ ವರ್ಷಕ್ಕೆ 48 ರೂಪಾಯಿ ಬಡ್ಡಿ ಆದಾಗ ಬಹಳ ಜಾಸ್ತಿಯಾಯಿತೆಂದು ಕೇಳಿಕೊಂಡರೆ ಒಂದು ರೂಪಾಯಿ ಕಡಮೆ ಮಾಡುತ್ತೇನೆ ಹೋಗು ಎಂದು ಹೇಳಿದಹಾಗಿದೆ. ಹೀಗೆ ಮಾಡುವುದು ಸರಿಯಲ್ಲ, ಈಗ ತಂದಿರುವ ನಿರ್ಣಯವನ್ನು ವಾಪಸು ತೆಗದುಕೊಂಡು ರೈತರಿಗೆ, ಅದರಲ್ಲೂ 5 ಎಕರೆ ಇರುವವರಿಗೆ ಕಂದಾಯ ವಜಾಮಾಡಿದರೆ ಸರಕಾರಕ್ಕೂ ಕೀರ್ತಿಬಂದು ರೈತರಿಗೂ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ಮಾನ್ಯ ರೆವೆನ್ಯೂ ಮಂತ್ರಿಯವರು ಕಂದಾಯ ಹೆಚ್ಚುವರಿಯ ಮೂಲ ನಿರ್ಣಯಕ್ಕೆ ತಂದಿರುವ ತಿದ್ದುಪಡಿಯ ಬಗ್ಗೆ ವಿರೋಧ ಸೂಚಿಸುತ್ತಾ ಕೆಲವು ಸೂಚನೆಗಳನ್ನು ಸರಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಸ್ವಾಮಿ, ಈ ಹಿಂದೆಯೇ ನಾವಾಗಲೆ ಕಂದಾಯವನ್ನು ಹೆಚ್ಚಿಸಕೂಡದು ಎಂದು ಹೇಳಿದ್ದೆವು. ದೇಶದಲ್ಲಿ ಬಹುಭಾಗದ ಜನತೆಯಾದ ಶೇಕಡ 80 ಜನ ರೈತರಿಗೆ ಈ ರೀತಿ ಕಂದಾಯದ ಹೆಚ್ಚುವರಿ ಮಾಡಿರುವುದು ನಿಮಗೆ ತಕ್ಕದ್ದಲ್ಲ. ಹಿಂದೆ ಕಂದಾಯ ಜಾಸ್ತಿ ಮಾಡಬಾರದೆಂದು ಹೇಳಿದ್ದರೂ ಕೂಡ ಸರಕಾರ ಅದಕ್ಕೆ ಗಮನ ಕೊಡದೆ ಈ ಒಂದು ನಿರ್ಣಯವನ್ನು ಬಹಳ ಕಠಿಣ ಹೃದಯದಿಂದ ತಂದು ರೈತರಿಗೆ ತೊಂದರೆ ಮಾಡಿದೆ. ಈಗಲೂ ಕೂಡ ಪುನರಾಲೋಚನೆ ಮಾಡಿ ಸರಿಪಡಿಸಲು ಅವಕಾಶವಿದೆ.

ಹಸಿವಿನಿಂದ, ಅನ್ನವಿಲ್ಲದೆ, ಸಾಲ ಸೋಲಗಳಲ್ಲಿ ನರಳುತ್ತಿರತಕ್ಕ ರೈತಾಪಿ ಜನಗಳನ್ನು ಅಧಃಪತನಕ್ಕೆ ತಳ್ಳಿಯತಕ್ಕ ಮಟ್ಟಕ್ಕೆ ಸರ್ಕಾರ ಹೋಗುತ್ತಿದೆ ಎಂದು ಬಹಳ ವಿಷಾದದಿಂದ ನಾನು ಹೇಳಬೇಕಾಗುತ್ತದೆ. ಮಾನ್ಯ ರೆವೆನ್ಯೂ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಕೇವಲ ಒಂದು ಕೋಟಿ 80 ಲಕ್ಷ ರೂಪಾಯಿ ಕಂದಾಯವನ್ನು ಹೆಚ್ಚು ಮಾಡುತ್ತಿದ್ದೇವೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದದ್ದು ಮತ್ತು ನಿಜಾಂಶಗಳಿಂದ ಕೂಡಿದ್ದಲ್ಲ ಎಂದು ಈ ಸಂದರ್ಭದಲ್ಲಿ ಮಾನ್ಯ ರೆವೆನ್ಯೂ ಸಚಿವರಿಗೆ ಹೇಳಬಯಸುತ್ತೇನೆ. ಈ ಒಂದು ಸಂಖ್ಯೆಗಳು ಕೇವಲ ಈ ಸಭೆಯ ಸದಸ್ಯರನ್ನು ಮಂಕುಗೊಳಿಸಿ ಒಂದಕ್ಕೆ ನಾಲ್ಕರಷ್ಟು ಕಂದಾಯವನ್ನು ಏರಿಸುವ ಹವ್ಯಾಸಕ್ಕೆ ಹೊರಟಿದ್ದಾರೆ. ವಿರೋಧಪಕ್ಷದ ನಾಯಕರು ಮಾತನಾಡುತ್ತ ಇರಬೇಕಾದರೆ ವಿರೋಧ

(ಶ್ರೀ ಬಿ. ಬೈರಪ್ಪಾಜಿ)

ಪಕ್ಷದವರು ಬಯ್ಯುತ್ತಲೇ ಇರುತ್ತಾರೆ, ಅವರಿಗೆ ಅದೇ ಕೆಲಸ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಬಹಳ ಕಳಕಳಿಯಿಂದ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಬಿನ್ನವಿಸಿಕೊಳ್ಳುವುದೇನೆಂದರೆ, ಕೇವಲ ಬಯ್ಯುವ ದೃಷ್ಟಿಯಿಂದಾಗಲೀ ಅಥವಾ ನಮಗೆ ದೇಶಾಭಿಮಾನವಿಲ್ಲದೆ ಆಗಲೀ ನಾವು ಈ ಸಭೆಗೆ ಬಂದಿಲ್ಲ. ದೇಶದ ಜನತೆಯ ಬಗ್ಗೆ, ದೇಶದ ಬಗ್ಗೆ ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ ನಮಗೂ ಕೂಡ ಅಷ್ಟೇ ಜವಾಬ್ದಾರಿ ಮತ್ತು ದೇಶಾಭಿಮಾನಗಳು ಇವೆ. ನಾವೂ, ಅವರೂ ಎಲ್ಲರೂ ಕೂಡ ದೇಶದ ಜನತೆಗೆ ಸಹಾಯಕರಾಗಿ ಇರಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಈ ಸಭೆಯ ಸದಸ್ಯರು ಯಾವ ಜನತೆಯ ಮುಖಾಂತರವಾಗಿ ಚುನಾಯಿಸಿ ಬಂದಿದ್ದೇವೆಯೋ ಆ ಜನತೆಯ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವನ್ನು ನೆರವೇರಿಸಬೇಕಾದ್ದು ಮುಖ್ಯವಾದುದು. ಈ ನಿರ್ಣಯದ ಬಗ್ಗೆ ಮಾತನಾಡುತ್ತ ಅನೇಕ ಸೂಚನೆಗಳನ್ನು ಸರ್ಕಾರಕ್ಕೆ ಕೊಟ್ಟಿರುತ್ತೇವೆ. ಹಾಗೂ ಹೊರಗೂ ಕೂಡ ರಚನಾತ್ಮಕವಾದ ನೀತಿ ರೀತಿಗಳಿಂದ ಹೊರಗಡೆಯೂ ಕೂಡ ದೇಶದ ಜನತೆ ಹಾಗೂ ಸರ್ಕಾರಕ್ಕೆ ತಿಳಿಯುವ ರೀತಿಯಲ್ಲಿ ಉಪವಾಸವನ್ನು ಆಚರಿಸಿದೆವು. ಪ್ರಜಾಪ್ರಭುತ್ವದಲ್ಲಿ ಯಾವುದೇ ಒಂದು ಪಕ್ಷವನ್ನು, ಆಡಳಿತ ಪಕ್ಷವನ್ನು ಟೀಕೆ ಮಾಡಬೇಕಾದರೆ, ಅಲ್ಲಿ ಅವರು ತೆಗೆದುಕೊಂಡ ನಿರ್ಣಯ ಸರಿಯಾಗಿಲ್ಲದೆ ಇದ್ದ ಪಕ್ಷದಲ್ಲಿ ಅದನ್ನು ವಿರೋಧಿಸಬೇಕಾದ ಸಂದರ್ಭ ಒದಗಿದಾಗ ನಾವು ಶಾಂತ ರೀತಿಯಿಂದ ಮಾಡಬೇಕಾದ ಹಲವು ಕಾರ್ಯಕ್ರಮಗಳಲ್ಲಿ, ಚಳುವಳಿಗಳಲ್ಲಿ ಅದೂ ಒಂದು. ಅದನ್ನು ನಾವು ಶಾಂತ ರೀತಿಯಿಂದ ಮಾಡಿದ್ದೇವೆ. ನಮ್ಮ ಕರ್ತವ್ಯದಲ್ಲಿ ಯಾವ ಲೋಪವೂ ಬಾರದಂತೆ ವಿರೋಧ ಪಕ್ಷದ ಸದಸ್ಯರಾದ ನಾವು ಜನತೆಯ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಆ ಬಗ್ಗೆ ಬಹಳ ಲಘುವಾಗಿ ಮಾತನಾಡುವುದು ತಕ್ಕುದಲ್ಲ. ನಮಗೆ ನಿಮಗೆ ಎಲ್ಲರಿಗೂ ಕೂಡ ಅತಿ ಹೆಚ್ಚಿನದಾದ ದೇಶ ಮತ್ತು ಜನತೆಗೆ ನಾವೆಲ್ಲ ಜವಾಬ್ದಾರರು. ಆ ಜನತೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಕರ್ತವ್ಯದ ಬಗ್ಗೆ ನಾವು ಮುಂದುವರಿದರೆ ಅದರಿಂದ ದೇಶಕ್ಕೆ ಮತ್ತು ಜನತೆಗೆ ಕ್ಷೇಮವಾದೀತು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ,

ಸ್ವಾಮಿ, ಸಭೆಯ ಮುಂದೆ ತಂದಿರುವ ತಿದ್ದುಪಡಿ ಏನಿದೆ, ಒಟ್ಟು ವರಮಾನದ ಮೇಲೆ ಸೇಕಡ ನಾಲ್ಕರಂತೆ ಖುಷ್ಕಿ ಜಮೀನುಗಳ ಮೇಲೂ ಮತ್ತು ಸೇಕಡ ಒಂದರಂತೆ ಕಾಫಿ ತೋಟಗಳ ಮೇಲೂ ಕಂದಾಯವನ್ನು ಹಾಕಬೇಕು ಎನ್ನುವುದು ಸರಿಯಲ್ಲ. ಈ ಭಾರವನ್ನು ಹೊರುವ ಶಕ್ತಿಯನ್ನು ಜನತೆ ಹೊಂದಿಲ್ಲ. ಮಾನ್ಯ ರೆವಿನ್ಯೂ ಸಚಿವರಾದರೂ ಸಚಿವರಾಗಿ ದೇವಲೋಕದಿಂದ ಇಳಿದು ಬಂದಿಲ್ಲ. ಅವರು ಕೂಡ ರೈತಾಪಿ ವರ್ಗದಲ್ಲೇ ಹುಟ್ಟಿ ಬಂದಿದ್ದಾರೆ. ಸರ್ಕಾರಕ್ಕೆ ಆಗಾಗ್ಗೆ ಹಣ ಬೇಕಾಗುತ್ತದೆ. ಹಣ ಬೇಕು ಎಂದು ಮೂಕ ಪ್ರಾಣಿಗಳಂತೆ ಇರುವವರಿಗೆ ತೇಜೋವಧೆ ಆಗತಕ್ಕ, ಅವರ ಶಕ್ತಿಯನ್ನು ಕುಗ್ಗಿಸತಕ್ಕ ರೀತಿಯಲ್ಲಿ ಮೂಲ ನಿರ್ಣಯಕ್ಕೆ ತಿದ್ದುಪಡಿಯನ್ನು ತರತಕ್ಕ ಹವ್ಯಾಸಕ್ಕೆ ಕೈ ಹಾಕಿದ್ದಾರಲ್ಲ ಎಂದು ಪ್ರಶ್ನೆ ಮಾಡುತ್ತೇನೆ. ಸರ್ಕಾರಕ್ಕೆ ಹತ್ತು ಕೋಟಿ ರೂಪಾಯಿಗಳ ವರಮಾನ ಜಾಸ್ತಿಯಾಗುತ್ತದೆ ಎನ್ನುವ ವಿಷಯವನ್ನೂ ಹೇಳುತ್ತಾರೆ. ನಮ್ಮ ಮುಂದೆ ಇರತಕ್ಕ ಅಂಕಿ ಅಂಶಗಳ ಪ್ರಕಾರ ಒಂದು ಕೋಟಿ 80 ಲಕ್ಷ ರೂಪಾಯಿ ಜಾಸ್ತಿ ಆಗುತ್ತದೆಂದು ಹೇಳಿದ್ದಾರೆ. ಇದರಲ್ಲಿ ಮಾನ್ಯ ಸಚಿವರು ಹೇಳಿದಂತೆ ತಾಲ್ಲೂಕ್‌ವಾರು ವಿವರಗಳು ದೊರೆಯುವುದಿಲ್ಲ, ಅದನ್ನು ದೊರಕಿಸುವುದು ಕಷ್ಟ ಎಂದು ಹೇಳಿದ್ದಾರೆ. ಅದನ್ನು ದೊರಕಿಸುವುದು ನಿಜವಾಗಿಯೂ ಕಷ್ಟವೇ. ಸರ್ವೆ ಅಧಿಕಾರಿಗಳನ್ನು ನೇಮಿಸಿ, ಅವರು ಕೊಟ್ಟಿರುವ ರಿಪೋರ್ಟ್‌ಗಳ ಆಧಾರದ ಮೇಲೆ ಕಂದಾಯವನ್ನು ವಿಧಿಸುವ ಸಂದರ್ಭದಲ್ಲಿ ಸರ್ಕಾರ ಕೊಟ್ಟಿರುವ ಅಂಕಿಗಳು ತಲೆಕೆಳಗಾಗುವ ಸಂದರ್ಭ ಇದೆ. ಈ ಅಂಕೆಗಳನ್ನು ಇಟ್ಟು ಮುಂದೆ ತರುವ ರೆವಿನ್ಯೂ ಡಿಮಾಂಡ್‌ಗಳ ಮೇಲೆ ಮಾನ್ಯ ಕೃಷ್ಣಪ್ಪನವರೇ ಇದ್ದರೆ ಉತ್ತರ ಹೇಳುವಾಗ ಅವರ ಅಂಕಿಗಳು ಎಷ್ಟು ದೃಢವಾಗಿವೆ ಅಥವಾ ಮಿಸ್‌ಲೀಡಿಂಗ್ ಆಗಿವೆ ಎಂದು ಹೇಳುವ ಅವಕಾಶ ಬರುತ್ತದೆ.

ಸ್ವಾಮಿ, ಮಾನ್ಯ ಮಂತ್ರಿಗಳಿಗೆ ಕೊನೆಯದಾಗಿ ಒಂದು ವಿಷಯವನ್ನು ತಿಳಿಸುತ್ತೇನೆ. ಅವರಿಗೆ ಹಣ ಬೇಕಾಗಿದೆ. ಜನತೆಯ ನೈತಿಕ ಮಟ್ಟವನ್ನು ಜನತೆಯ ಆರೋಗ್ಯವನ್ನು ಕೆಡಸತಕ್ಕ ಪಾನನಿರೋಧ ಏನಿದೆ ಅದನ್ನು ತೆಗೆದುಹಾಕಲು ಪ್ರಯತ್ನಮಾಡಿ. ಈ ದಿಸೆಯಲ್ಲಿ ಕೇಂದ್ರಕ್ಕೆ ಹೇಳತಕ್ಕ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹಾರೈಸುತ್ತೇನೆ. ಇದರ ಜೊತೆಗೆ ನಷ್ಟ ಎಷ್ಟಾದರೂ ಸರಿಯೇ. ಎನ್ನುವ ಎನ್. ಇ. ಎಸ್. ಯೋಜನೆಯನ್ನು ತೆಗೆದು ಹಾಕಿ. ಈ ಬಗ್ಗೆ ನಾವು ಪದೇ ಪದೇ ಸರ್ಕಾರಕ್ಕೆ ತಿಳಿಸುತ್ತಲೇ ಇದ್ದೇವೆ. ನಷ್ಟ ಎಷ್ಟಾದರೂ ಸರಿಯೇ ಎನ್ನುವ ಈ ಯೋಜನೆ ದೇಶಕ್ಕೆ ಮತ್ತು ಜನತೆಗೆ ಯಾವ ವಿಧವಾದ ಕ್ಷೇಮವನ್ನೂ ಸಾಧಿಸಿಲ್ಲ. ಇದರಿಂದ ಕೋಟ್ಯಂತರ ರೂಪಾಯಿ ಉಳಿತಾಯ

ವಾಗುತ್ತದೆ. ಕೇಂದ್ರಕ್ಕೆ ತಿಳಿಸಲು ನಮ್ಮ ಸರ್ಕಾರಕ್ಕೆ ಸಂಕೋಚವಾದರೆ ನಾವು ತಿಳಿಸುವುದಕ್ಕೆ ಸಿದ್ಧರಾಗಿದ್ದೇವೆ.

ದೇಶದ ಜನತೆ ಹಾಗೂ ಜನರು ರಕ್ತವನ್ನು ಸುರಿಸಿ ಕೊಟ್ಟಂಥ ತೆರಿಗೆ ಹಣ ಅನ್ಯಾಯವಾಗಿ ಹೋಗದ ರೀತಿಯಲ್ಲಿ, ಅದು ವ್ಯವಸ್ಥಿತವಾದ ರೀತಿಯಲ್ಲಿ ಖರ್ಚಾಗುವಂತೆ ಮಾಡಿ, ಅನಾವಶ್ಯಕವಾದ ಇಲಾಖೆಗಳನ್ನು ಕಡಮೆ ಮಾಡಿ ಹಣವನ್ನು ಉಳಿತಾಯ ಮಾಡಿ ತನ್ಮೂಲಕ ಹಣವನ್ನು ಉಳಿಸುವ ಪ್ರಯತ್ನ ಮಾಡಿ. ರೈತರ ಮೇಲೆ ಹೊರೆಯನ್ನು ಹೇರುವಂಥ ಈ ನಿರ್ಣಯವನ್ನು ಅಂಗೀಕರಿಸುವುದಾದರೆ—ಅವರು ಇದನ್ನು ಅಂಗೀಕಾರ ಮಾಡಿಯೇ ಮಾಡುತ್ತಾರೆ—ಮೈಸೂರು ದೇಶದ ಇತಿಹಾಸದಲ್ಲಿ ಇದು ಕಳಂಕಪ್ರಾಯವಾದ ದಿನ, ಮೈಸೂರು ಸಂಸ್ಥಾನದ ರೈತಾಪಿ ಜನರ ದೌರ್ಭಾಗ್ಯದ ದಿನ ಎಂದು ಸಾರಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಸಂಜೀವನಾಥ ಐಕಳ.—ಮಾನ್ಯ ಸಭಾಪತಿಯವರೇ, 9 ವರ್ಷಗಳ ಕಾಲ ಪರ್ಯಂತ ತಯಾರಿಸಿದ 66 ಪುಸ್ತಕಗಳಲ್ಲಿ ಬರೆದಂಥ ವಾಲ್ಯೂಮಿನಸ್ ವರದಿಗಳೇನಿವೆಯೋ ಆ ವರದಿಗಳ ಆಧಾರದಮೇಲೆ ತಂದಂಥ ಈ ಠರಾವು ಹಾಗೂ ಅದಕ್ಕೆ ತಂದಂಥ ತಿದ್ದುಪಡಿಯನ್ನು ದೇಶದ ಬಹು ಜನ ರೈತರ ಹಿತ ದೃಷ್ಟಿಯಿಂದ ನಾನು ವಿರೋಧಿಸಬೇಕಾಗಿದೆ. ಈ ಠರಾವು ಏನಿದೆ ಇದನ್ನು ತಯಾರಿಸಲಿಕ್ಕೆ ಯಾವ ಅಧಿಕಾರಿಗಳು ನಿಜವಾಗಿ ಶ್ರಮಪಟ್ಟಿದ್ದಾರೋ ಅವರ ಸಾಹಸವನ್ನು ನಾವು ಕೊಂಡಾಡಬೇಕಾಗಿದೆ. ಅದರಲ್ಲಿ ನಾನಾ ನಮೂನೆ ಲೋಪದೋಷಗಳು ಸೇರಿಕೊಂಡಿವೆ ಎಂದು ಕಾಣುತ್ತದೆ. ಒಬ್ಬರು ಅರ್ಥ ಶಾಸ್ತ್ರಜ್ಞರು ಹೇಳಿದಹಾಗೆ it is coloured with personal prediliction, ignorance of local conditions.

Mr. SPEAKER.—It is irrelevant.

ಶ್ರೀ ಸಂಜೀವನಾಥ ಐಕಳ.—ಏಕೆಂದರೆ, ಸರಿಯಾಗಿ ಭೂಗುಣಗಳನ್ನು ಪರಿಶೀಲಿಸದೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಿಂದ ಕಂದಾಯ ವಿಧಿಸಿದೆ ಎಂಬುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇದು ಒಂದು ರ್ಯಾಷನಲ್ ಬೇಸಿಸ್ ಮೇಲೆ ಮಾಡಲಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ನಮಗೆ ಒಂದು Note on revision settlement ಕೊಟ್ಟಿದ್ದಾರೆ. ಅದರಲ್ಲಿಯೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಡೆ ಅಡಿಕೆ ತೋಟಕ್ಕೆ ಎಕರೆಗೆ 121-11 ರೂಪಾಯಿಗಳಂತೆಯೂ ಇನ್ನೊಂದು ಕಡೆ 81-82 ರೂಪಾಯಿಗಳಂತೆಯೂ ಇದೆ. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಈ ರೀತಿ ವ್ಯತ್ಯಾಸವಿದೆ. ಈ ಅಡಿಕೆ ಬೆಳೆಯನ್ನು ಮಲೆನಾಡಿನ ಪೂರ್ವ ಭಾಗದಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಅಲ್ಲಿನ ಭೂಗುಣ, ಹವಾಗುಣ ನೀರಿನ ಅನುಕೂಲತೆ, ಮಣ್ಣಿನಸಾರ ಅಷ್ಟು ಚೆನ್ನಾಗಿದೆ ಆದ್ದರಿಂದ ಈ ಸೌಕರ್ಯಗಳನ್ನು ಅಲ್ಲಿ ಪಡೆದಿರುವುದರಿಂದ ಕಂದಾಯವನ್ನು ಆ ರೀತಿ ವಿಧಿಸಿರುವ ಹಾಗೆ ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅಲ್ಲದೆ ಇದರ ಹಿಂದೆ ಇದನ್ನು ಶಾಸ್ತ್ರೀಯವಾದ ರೀತಿಯಲ್ಲಿ ಇದನ್ನು ತಯಾರಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಮೂಲ ತತ್ವಕ್ಕೆ ವಿರೋಧವಾಗಿ ಹೊಸ ಲ್ಯಾಂಡ್ ಆಕ್ಟಿನ 151 ಸೆಕ್ಷನ್ ಪ್ರಕಾರ ಪ್ರತಿಯೊಂದು ಗ್ರಾಮದ ಸರ್ವೆ ವಿಸ್ತೀರ್ಣ ಆಖೈರಾಗಿಲ್ಲ. ರಿಸೆಟಲ್‌ಮೆಂಟ್ ಈಗಾಗಲೇ ವಹಿಸ ಬೇಕಾಗಿತ್ತು. ಹಾಗೆ ಮಾಡದೆ ಈ ಮೂಲತತ್ವಕ್ಕೆ ವಿರೋಧವಾಗಿ ಹೋಗಿದ್ದಾರೆ. ಇದರಲ್ಲಿ ಸೇರಿಸಿರುವ ಗ್ರೂಪ್ ವಿಂಗಡಣೆ ಸರಿಯಾಗಿಲ್ಲ. ಈಗ ದುಷ್ಕಾಲ ಪರಿಸ್ಥಿತಿ ಇರುವಾಗ ರೈತರ ಮೇಲೆ ಕ್ರಮೇಣ ಬಹಳ ಜಾಸ್ತಿಯಾಗುತ್ತಾ ಬರುವ ಪ್ರಸಂಗ ಕಂಡುಬರುತ್ತಾ ಇದೆ. ಇನ್ನು ವ್ಯವಸಾಯವೇನಿದೆ ಇದು ಲಾಭದಾಯಕ ಹುದ್ದೆಯಲ್ಲ. ಕರಭಾರವನ್ನು ಏರಿಸುವಾಗ ಅದರ ಹಿಂದೆ ನಾವು ಅನುಸರಿಸಬೇಕಾದ ಸೂಕ್ತ ತತ್ವವೇನೆಂದರೆ, ನಾವು ಹೊರಿಸುವಂತಹ ಕರಭಾರದಿಂದ ಯಾರ ಮೇಲೂ ಹೆಚ್ಚು ತೀಕ್ಷ್ಣ ಪರಿಣಾಮವಾಗಬಾರದು. ಯಾರ ಮೇಲೆ ಕರಭಾರ ಬೀಳುತ್ತದೋ ಅವರಿಗೆ ಯಾವ ರೀತಿಯಲ್ಲೂ ತೊಂದರೆಯಾಗಬಾರದು. ಅದೇ ಸಮಯದಲ್ಲಿ ಆ ರೀತಿ ಕರಭಾರವನ್ನು ತೆಗೆದು ಕೊಂಡಾಗ್ಗೆ ಅದಕ್ಕೆ ಸರಿಯಾದ ಪ್ರತಿಫಲವನ್ನು ಬೇರೆ ರೀತಿಯಲ್ಲಿ ಒದಗಿಸ ಬೇಕೆಂದು ಹೇಳುವುದು ಒಂದು ತತ್ವ. ಇದು ಅರ್ಥ ಶಾಸ್ತ್ರಜ್ಞರೂ ಸಹ ಒಪ್ಪುವ ತತ್ವವಾಗಿದೆ ಲ್ಯಾಂಡ್ ಟ್ಯಾಕ್ಸೇಷನ್ ಪಾಲಿಸಿ ಎಂಬುದಾಗಿ ಏನು ಪುಸ್ತಕದಲ್ಲಿಬರೆದಿದ್ದಾರೋ ಅದರಲ್ಲಿ ತಿಳಿಸಿದ್ದಾರೆ ಟ್ಯಾಕ್ಸೇಷನ್ ಹಾಕುವಾಗ ಅಷ್ಟೇ ರೀತಿಯಾದ ಪ್ರತಿಫಲವನ್ನು ಕೊಡಬೇಕು. ಆದರೆ ಇಲ್ಲಿ ಹಾಗೆ ಇಲ್ಲ. ರೈತರು ಬೆಳೆಸುವಂತಹ ಪದಾರ್ಥಗಳನ್ನು ತೆಗೆದುಕೊಂಡು ಅದಕ್ಕೆ ಯಾವರೀತಿಯಲ್ಲೂ ಪ್ರೋತ್ಸಾಹ ಕೊಡದೆ ಇವತ್ತು ಇನ್ನೂ ಅವನಿಗೆ ಧಾರಣೆ ಆಧಾರದ ಮೇಲೆ ತೆರಿಗೆಯನ್ನು ನಿಶ್ಚಯಿಸಿದ್ದು ಬಹಳ ಅಶಾಸ್ತ್ರೀಯವಾದ ಕೆಲಸ ಮತ್ತು ಇದು ಬಹಳ ಅನ್ಯಾಯವಾದ ಕೆಲಸವೆಂದು ನಾನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆ ವಿಷಯವಾಗಿ ನಾನು ಮಾತನಾಡುವುದಾದರೆ ನಾವು ಮದ್ರಾಸ್ ಸಂಸ್ಥಾನಕ್ಕೆ ಸೇರುವಾಗ ನಮ್ಮಲ್ಲಿ ಎರಡು ಸಲ ಸೆಟಲ್‌ಮೆಂಟ್,

(ಶ್ರೀ ಸಂಜೀವನಾಥ ಐಕಳ)

ರೀಸೆಟಲ್‌ಮೆಂಟ್ ಆಗಿತ್ತು. ನಾನು ಸ್ವತಃ ಹೇಳಿದ್ದೇನೆ ದಕ್ಷಿಣ ಕನ್ನಡ ಜಿಲ್ಲೆ ಈಗ ಮದ್ರಾಸ್ ಪ್ರಾಂತ್ಯದಿಂದ ಇಲ್ಲಿಗೆ ಬಂದು ಸೇರಿರುವುದರಿಂದ ಅಲ್ಲಿ ಇನ್ನೂ ರೀಸೆಟಲ್‌ಮೆಂಟ್ ಪ್ರಶ್ನೆ ಉದ್ಭವಿಸುವುದಿಲ್ಲ. ಅಷ್ಟು ಶಾಸ್ತ್ರೀಯವಾಗಿ ತಯಾರಿಸಿರುವುದರಿಂದ ಎಷ್ಟು ವರ್ಷಗಳಾದರೂ ಕಂದಾಯ ಏರಿಸುವ ಗೋಜಿಗೆ ಹೋಗುವುದಿಲ್ಲವೆಂದು ಆಗಿನ ಬ್ರಿಟಿಷ್ ಅಧಿಕಾರಿಗಳೇ ಆಶ್ವಾಸನೆ ಕೊಟ್ಟಿದ್ದರು. ಅಷ್ಟು ಶಾಸ್ತ್ರೀಯವಾದ ರೀತಿಯಲ್ಲಿ ನಮ್ಮ ಭೂಗುಣವನ್ನು ಅವಲೋಕಿಸಿ ಬೇರೆ ಬೇರೆ ರೀತಿಯಾದ ಶಾಸ್ತ್ರೀಯವಾದ ಕ್ರಮಗಳನ್ನು ತೆಗೆದುಕೊಂಡು ಅಲ್ಲಿನ ತೆರಿಗೆಗಳನ್ನು ವಿಧಿಸಿದ್ದಾರೆ. ಆಗ ಆರೀತಿ ತೆರಿಗೆಯನ್ನು ಏರಿಸಿದ್ದೇ ಜಾಸ್ತಿಯೆಂಬುದಾಗಿ ಈಗ ಶ್ರೀಮಾನ್ ಭಾಸ್ಕರ ಶೆಟ್ಟರು ಹೇಳುತ್ತಿದ್ದಾರೆ. ಅದನ್ನು ಆ ರೀತಿಯಾಗಿಯೇ ಒಪ್ಪಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ನಮಗೆ 7 ಲಕ್ಷ 43 ಸಾವಿರ ಕಂದಾಯ ಇದ್ದುದು 20 ಲಕ್ಷಕ್ಕೆ ಮುಟ್ಟುವಂತೆ ಹಾಕಿದ್ದಾರೆ. ಅಂದ ಮೇಲೆ ಶೇಕಡ 300 ರಷ್ಟು ಹೆಚ್ಚಾಗಿ ಆಗಿದೆ ಎಂಬುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅಂದರೆ ಬಗ್ಗಿದವನಿಗೆ ಗುದ್ದು ಜಾಸ್ತಿ ಎಂದು ಹೇಳುವ ಹಾಗೆ ಮೊದಲೆ ಕರಭಾರ ಅವರ ಮೇಲೆ ತುಂಬಾ ಇರುವಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುನಃ ಕಂದಾಯ ಜಾಸ್ತಿ ಮಾಡಲು ವ್ಯವಸ್ಥೆ ಮಾಡುತ್ತಿದ್ದಾರೆ. ಇದು ತೆರಿಗೆ ವಸೂಲಿ ನಡೆದಾಗ ಕಾಣಿಸಿಲ್ಲ. ತೆರಿಗೆಗಳ ಬಾಕಿಯನ್ನು ಅವಲೋಕಿಸಿದರೆ ಮೈಸೂರು ಸಂಸ್ಥಾನದ 19 ಜಿಲ್ಲೆಗಳಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ವ್ಯವಸಾಯ ವರಮಾನ ತೆರಿಗೆ ತೀವ್ರ ಬಾಕಿ ಇರುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ವರ್ಷದಲ್ಲಿ ತೀವ್ರ ಬಾಕಿಯಾಗಿಲ್ಲ. ಈ 19 ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಕಾಲದಲ್ಲೂ ಅಷ್ಟು ತೀವ್ರವಾದ ಬಾಕಿ ಮಾಡಿಕೊಳ್ಳಲಿಲ್ಲ. ಇಷ್ಟು ತೀವ್ರತೆಯಿಂದ ಕಂದಾಯ ಅವರು ಕೊಡುತ್ತಿದ್ದರೂ ಪುನಃ ಶೇ 300 ರಷ್ಟು ಕರಭಾರವನ್ನು ಹೆಚ್ಚಿಸುವುದು ಬಹಳ ಅನ್ಯಾಯವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದು ಅವಿವೇಕತನದ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ.

ಇನ್ನು ಉತ್ಪಾದನೆ ನಿಗದಿ ಮಾಡುವ ಕ್ರಮ ಶಾಸ್ತ್ರೀಯವಾಗಿ ನಡೆದಿಲ್ಲವೆಂಬುದು ಇದರಲ್ಲಿ ಕಾಣುತ್ತದೆ. ಹಿಂದಿನ ಸರ್ವೆ ಸೆಟಲ್ ಮೆಂಟ್ ಪ್ರಕಾರ ಆಗಿನ ಉತ್ಪತ್ತಿಯ ಮೇಲೆ 20 ವರ್ಷದ ಧಾರಣೆ ಏನಿದೆ ಅದರ ಒಂದು ಆಧಾರದ ಮೇಲೆ ಈ ತೆರಿಗೆಯನ್ನು ನಿಶ್ಚಯಿಸಬೇಕು ಎಂಬುದಾಗಿ ಒಂದು ಸ್ಪಷ್ಟವಾದ ಧೋರಣೆಯನ್ನು ಮತ್ತು ಆದೇಶವನ್ನು ಕೊಟ್ಟಿದ್ದಾರೆ. ಬ್ರಿಟಿಷರೂ ಸಹ ಆ ತತ್ವವನ್ನು ಅನುಸರಿಸಿದ್ದರು. ಈ ಸರ್ವೆ ಸೆಟಲ್ ಮೆಂಟ್ ಬಗ್ಗೆ ಶ್ರೀ ಕೇ. ಎಮ್. ಮಿರಾನಿಯವರು ಒಳ್ಳೆಯ ಆದೇಶವನ್ನು ಕೊಟ್ಟಿದ್ದರು. ಆದರೆ ಸರ್ವೆ ಸೆಟಲ್‌ಮೆಂಟ್ ಅಧಿಕಾರಿಗಳು ಅದನ್ನು ಗಣನೆಗೆ ತರದಾಗದೆ 1951 ರಿಂದ ಹಣದುಬ್ಬರದ ದೆಸೆಯಿಂದ ಎಲ್ಲಾ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಆ ಒಂದು ಆಧಾರದ ಮೇಲೆ ಈ ತೆರಿಗೆಯನ್ನು ನಿಶ್ಚಯಿಸಿದ್ದಾರೆ. ಇದು ಬಹಳ ತಪ್ಪು ಕೆಲಸ. ಈಗಿನ ಕಷ್ಟ ಸಮಯದಲ್ಲಿ ನಮ್ಮ ಕೃಷಿ ಉತ್ಪನ್ನಗಳಿಗೆ ಜಾಸ್ತಿಬೆಲೆಯಾಗಿವೆ ಇದು ತಾತ್ಕಾಲಿಕವಾದುದು, ಶಾಶ್ವತವಾಗಿ ನಿಲ್ಲುವಂತಹದೇನಲ್ಲ. ಬೆಲೆಗಳು ಇಳಿದು 30 ವರ್ಷಗಳಿಗೊಂದಾವರ್ತಿ ರೈತನಿಗೆ ಕಷ್ಟ ಬರುತ್ತದೆ. ಇದು ಎಲ್ಲಾ ದೇಶಗಳಲ್ಲಿಯೂ ಬಂದಿತ್ತು ನಮ್ಮ ಇಂಡಿಯಾ ದೇಶದಲ್ಲಿಯೂ ಕೃಷಿ ಉತ್ಪನ್ನಗಳಿಗೆ ಇನ್ನು 3-4 ವರ್ಷಗಳಲ್ಲಿ ಆ ರೀತಿ ತೊಂದರೆ ಬರಬಹುದು. ಅಂತಹ ಸಂದರ್ಭಗಳಲ್ಲಿ ಈ ಬದಲಾಣೆ ಏನಿದೆಯೋ ಅದನ್ನು ಒಂದೇ ಸಲಕ್ಕೆ ಕಡಿಮೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಆ ಸಮಯದಲ್ಲಿ ರೈತರಿಗೆ ತುಂಬಾ ಅನ್ಯಾಯವಾಗುತ್ತದೆ. ಐದಾರು ವರ್ಷಗಳ ಉತ್ಪಾದನೆಗಳ ಧಾರಣೆಯನ್ನು ಹಿಡಿದುಕೊಂಡು ಈ ತೆರಿಗೆಯನ್ನು ನಿಶ್ಚಯಿಸಿದ್ದು ತುಂಬಾ ಅಶಾಸ್ತ್ರೀಯವಾಗಿರುತ್ತದೆ.

4 P.M.

ಅದೂ ಅಲ್ಲದೆ ಮಣ್ಣಿನ ಕ್ಲಾಸಿಫಿಕೇಷನ್ ಮಾಡುವುದು ಕೂಡ ಬಹಳ ತಪ್ಪು ರೀತಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಮಳೆ ಬರುವುದು ಸ್ವಲ್ಪ ಹಿಂದೂ ಮುಂದೂ ಇರುತ್ತದೆ. ಅಲ್ಲಿ ಮಳೆ ಜಾಗ್ರತೆಯಾಗಿ ಬಾರದೆ ಇದ್ದರೆ ಬೆಳೆಗಳೆಲ್ಲಾ ಸಂಪೂರ್ಣವಾಗಿ ಹೋಗುತ್ತವೆ. ಹೀಗಿರುವಾಗ ಆ ಒಂದು ಪರಿಸ್ಥಿತಿಯನ್ನು ಸಹ ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಅಲ್ಲಿ ಮಳೆ ಕಾಲ ಕಾಲಕ್ಕೆ ಸರಿಯಾಗಿ ಬರುವುದಿಲ್ಲ. ಅತಿವೃಷ್ಟಿ ಅನಾವೃಷ್ಟಿ ಬಂದು ಬೆಳೆಗಳೆಲ್ಲಾ ಹಾಳಾಗಿಹೋಗುತ್ತವೆ. ಈ ರೀತಿಯಾಗಿ ಕೆಲವು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಬೆಳೆಗಳು ಒಳ್ಳೆಯ ರೀತಿಯಲ್ಲಿ ಬರುವುದಿಲ್ಲ. ಅಲ್ಲಿ ಉತ್ಪತ್ತಿ ಕಡಿಮೆಯಾಗಿವೆ. ಹೀಗಿರುವಾಗ ಈ ಎಲ್ಲಾ ಕಾರಣಗಳನ್ನೂ ಅವಲೋಕಿಸುವಾಗ

ಈಗ ಸರ್ಕಾರದವರು ತಂದಿರುವ ಠರಾವು ಏನಿದೆ ಇದನ್ನು ಪಕ್ಷದ ದೃಷ್ಟಿಯಿಂದ ನಾನು ಹೇಳುತ್ತಿಲ್ಲ.
ನಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ನಿಜವಾಗಿಯೂ ರೈತನಿಗೆ ಅನ್ಯಾಯವಾಗಿದೆ. ನಮ್ಮ ಬಾಯಿಗೆ
ಬೀಗ ಹಾಕಿದ್ದಾರೆ, ನಮಗೆ ಹೇಳುವುದಕ್ಕಾಗುವುದಿಲ್ಲ ಎಂದು ಕಾಂಗ್ರೆಸ್ ಪಾರ್ಟಿಯ ಸದಸ್ಯರುಗಳು
ನಮ್ಮ ಹತ್ತಿರ ಬಂದು ಎಷ್ಟೋ ಜನರು ಹೇಳಿದ್ದಾರೆ. ಈ ಕಂದಾಯ ಏರಿಕೆಯ ಬಗ್ಗೆ ನಾವು
ಉಪವಾಸ ಮುಷ್ಕರವನ್ನು ಹೂಡಿದಾಗ ಎಷ್ಟೋ ಜನ ಕಾಂಗ್ರೆಸ್ ಸದಸ್ಯರೇ ಬಂದು ನಿಮ್ಮ ಕಾರ್ಯ
ಕ್ರಮ ಜಯವಾಗಲೀ ಎಂದು ಹಾರೈಸಿದ್ದಾರೆ. ಕಾಂಗ್ರೆಸ್ ಪಕ್ಷದ ವಿಪ್ ಕೂಡ ನಮಗೆ ಷಹಭಾಷ್
ಗಿರಿ ಮಾಡಿದ್ದಾರೆ. ದೇಶದ ರೈತರು ನಿಮ್ಮ ಕಡೆಯೇ ನೋಡುತ್ತಿದ್ದಾರೆ. ನಿಜವಾಗಿ ರೈತರು ಈ
ವಿಷಯದಲ್ಲಿ ತಮ್ಮ ಮೆಚ್ಚುಗೆಯನ್ನು ತೋರಿಸುತ್ತಾರೆ; ಎಂದು ಎಷ್ಟೋ ಜನ ಕಾಂಗ್ರೆಸ್
ಸದಸ್ಯರು ನಾವು ಉಪವಾಸ ಮಾಡುತ್ತಿದ್ದ ಸ್ಥಳಕ್ಕೆ ಬಂದು ನಮ್ಮನ್ನು ಹಾರೈಸಿದ್ದಾರೆ. ಹೀಗಿರು
ವಾಗ ಕೇವಲ ಪಕ್ಷದ ದೃಷ್ಟಿಯಿಂದ ನಾನು ಈ ರೀತಿ ಹೇಳುತ್ತಿದ್ದೇನೆ ಎಂದು ಮಾನ್ಯಮಂತ್ರಿಗಳು
ತಿಳಿದುಕೊಂಡರೆ ಅದು ತಪ್ಪು ಎಂದು ನಾನು ಭಾವಿಸುತ್ತೇನೆ. ನಾನು ರೈತರ ಹಿತದೃಷ್ಟಿಯಿಂದ
ಹೇಳುತ್ತೇನೆ. ಈಗಾಗಲೇ ಈ ವಿಚಾರದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು
ಹೇಳಿದ್ದಾರೆ. ನಾನು ಇನ್ನು ಹೆಚ್ಚಿಗೆ ಮಾತನಾಡುವುದಿಲ್ಲ. ನಾವು ಎಷ್ಟೇ ಕಳಕಳಿಯಿಂದ ಸರ್ಕಾ
ರದವರನ್ನು ಪ್ರಾರ್ಥಿಸುವುದಾದರೂ ಕೂಡ ಅವರು ಈ ಠರಾವನ್ನು ಹಿಂದಕ್ಕೆ ತೆಗೆದುಕೊಳ್ಳುವಹಾಗೆ
ಕಾಣುವುದಿಲ್ಲ. ನಾವು ನಮ್ಮ ಕರ್ತವ್ಯವನ್ನು ನಾಳೆಯಿಂದ ಮುಂದುವರಿಸುತ್ತೇವೆ. ದೇಶಾದ್ಯಂತ
ರೈತರಿಗೆ ಸರ್ಕಾರದವರು ಹಾಕಿರತಕ್ಕಂಥ ಕಂದಾಯದ ಬಗ್ಗೆ ನಾವು ನಮ್ಮ ಪ್ರತಿಭಟನೆಯನ್ನು
ಸೂಚಿಸುತ್ತೇವೆ. ನಮ್ಮ ಪ್ರತಿಭಟನೆಯಲ್ಲಿ ನಮಗೆ ಕಾಂಗ್ರೆಸ್ ಸರ್ಕಾರದವರು ಪ್ರೋತ್ಸಾಹವನ್ನು
ಕೊಡದೇ ಇದ್ದರೂ ಇಂಥಾ ಒಂದು ಕಾರ್ಯಕ್ಕೆ ಕಾಂಗ್ರೆಸ್ ಸದಸ್ಯರು ನಮಗೆ ಬೆಂಬಲವನ್ನು
ಕೊಡಬೇಕೆಂದು ನಾನು ಅವರನ್ನು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ವಿರೋಧ ಪಕ್ಷದವರು ಈ ಕಂದಾಯ
ಏರಿಕೆಯ ಬಗ್ಗೆ ವಿರೋಧಿಸಿದರೂ ಕೂಡ ಕಾಂಗ್ರೆಸ್ ಸದಸ್ಯರು ಮಾತ್ರ ಈ ಕಂದಾಯ ಏರಿಕೆಯ
ವಿಷಯದಲ್ಲಿ ಒಂದು ನ್ಯಾಯವಾದ ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುವಂತಹ
ಅತ್ಯುತ್ತಮವಾದ ಸಲಹೆಗಳನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಬಹಳ ಸಾರಿ
ಹೇಳಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿಗಳು ವಿರೋಧ ಪಕ್ಷದವರನ್ನು ಕಂಡರೆ ಪಾಕೀಸ್ಥಾನ
ಮತ್ತು ಚೈನಾದವರನ್ನು ಕಂಡಹಾಗೆ ಕಾಣುತ್ತಿದ್ದಾರೆ. ನಾನು ಅದನ್ನು ವಿರೋಧಿಸುತ್ತೇನೆ.
ಏತಕ್ಕೆಂದರೆ, ಪ್ರಜಾಪ್ರಭುತ್ವ ತತ್ವದ ಪ್ರಕಾರ ನಾವು ಚುನಾವಣೆಗೆ ನಿಂತು ಅವರು ಚುನಾವಣೆಗೆ
ಆರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ನಾವು ಒಂದೂಕಾಲು ಸಾವಿರ ರೂಪಾಯಿ
ಗಳನ್ನಾದರೂ ಖರ್ಚು ಮಾಡಿ ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ವಿರೋಧ ಪಕ್ಷದವರು
ಚುನಾವಣೆಯಲ್ಲಿ ಪೋಟಿಗೋಸ್ಕರ ಈ ರೀತಿ ಚಳುವಳಿಯನ್ನು ಮಾಡುತ್ತಿದ್ದಾರೆ ಎಂದು ತಾವು
ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಈಗ ಸರ್ಕಾರದವರು ರೈತರಿಗೆ ಏನು ಕಂದಾಯವನ್ನು
ಹೆಚ್ಚು ಮಾಡಬೇಕೆಂದು ಹೊರಟಿದ್ದಾರೆಯೋ ಅದನ್ನು ನಿಲ್ಲಿಸಿ ಹಿಂದಿನ ರೇಟಿನ ಪ್ರಕಾರವೇ ರೈತರಿಂದ
ಕಂದಾಯವನ್ನು ವಸೂಲು ಮಾಡುವುದಾದರೆ ನಾನು ನನ್ನ ಜೀವ ಇರುವವರೆಗೂ ಚುನಾವಣೆಗೆ
ನಿಲ್ಲುವುದಿಲ್ಲ ಎಂದು ನಾನು ಬರೆದುಕೊಡುತ್ತೇನೆ. ನಮ್ಮ ಒಂದು ಪ್ರತಿಷ್ಠೆಗೋಸ್ಕರ ನಾನು
ಹೇಳುತ್ತಿಲ್ಲ. ಜನಗಳ ಕಷ್ಟವನ್ನು ನೋಡಿ ನಾನು ಹೇಳುತ್ತಿದ್ದೇನೆ. ಹಿಂದೆ ಮುಖ್ಯಮಂತ್ರಿಗಳಾಗಿ
ದ್ದವರು ಈ ಸಭೆಯ ಸದಸ್ಯರುಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಅವರಿಗೆ ಟೀ ಕೊಟ್ಟು ನಿಮ್ಮ
ಕಷ್ಟಸುಖಗಳೇನು, ಪ್ರಜೆಗಳ ಕಷ್ಟಸುಖಗಳೇನು ಎಂದು ಅವರನ್ನು ಕೇಳುತ್ತಿದ್ದರು. ಏತಕ್ಕೆಂದರೆ,
ಅಧಿಕಾರದಲ್ಲಿರುವವರಿಗೆ ದೇಶದ ಮೂಲೆಮೂಲೆಯಲ್ಲಿ ಏನು ನಡೆಯುತ್ತದೆ ಎನ್ನುವ ವಿಷಯ ಗೊತ್ತಾ
ಗುವುದಿಲ್ಲ. ತಾವು ಪತ್ರಗಳಲ್ಲೇನೋ ಅನೇಕ ವಿಚಾರಗಳನ್ನು ಓದುತ್ತೀರಿ, ಆದರೆ ದೇಶದಲ್ಲಿ ಹಳ್ಳಿ
ಗಾಡುಗಳಲ್ಲಿ ವಾಸ್ತವಾಂಶ ಏನಿದೆ ಎಂಬುದನ್ನು ಪೂರ್ತಿಯಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ
ಮಾಡಬೇಕು. ಚೀನಾ ದೇಶದವರು ನಮ್ಮ ದೇಶವನ್ನು ದುರಾಕ್ರಮಣ ಮಾಡಿದಾಗ ಸರ್ಕಾರದವರು
ನಮ್ಮನ್ನು ಎಂದರೆ, ವಿರೋಧ ಪಕ್ಷದವರನ್ನು ನೀವೆಲ್ಲಾ ನಮಗೆ ಸಹಕಾರವನ್ನು ಕೊಡಬೇಕು, ಜನತೆ
ಯಿಂದ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣವನ್ನು ವಸೂಲು ಮಾಡಬೇಕು ಎಂದು ಹೇಳಿದರು. ಆಗ ನಾವು
ಜನತೆಯಿಂದ ಮೂರೂವರೆ ಲಕ್ಷ ರೂಪಾಯಿಗಳನ್ನು ವಸೂಲು ಮಾಡಿಕೊಟ್ಟಿದ್ದೇವೆ. ಇಲ್ಲಿ ಅಸೆಂಬ್ಲಿ
ಯಲ್ಲೇನೋ ಬೈದಹಾಗೆ ಅದರನ್ನು ಬೈಯುತ್ತೇವೆ. ಆದರೆ ನಾವು ಮಂತ್ರಿಗಳನ್ನು ನಮ್ಮ ಊರಿಗೆ
ಕರೆದುಕೊಂಡು ಹೋದಾಗ ಅವರನ್ನು ಗೌರವಿಸುತ್ತೇವೆ. ಮತ್ತು ಎಷ್ಟೋ ಸರ್ಕಾರದ ಕೆಲಸವನ್ನೂ
ಕೂಡ ನಾವು ಮಾಡಿಕೊಟ್ಟಿದ್ದೇವೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈಗಾಗಲೇ ಹೇಳಿದರು
ಶೇಕಡ ಆರೂಕಾಲರಷ್ಟು ಕಂದಾಯವನ್ನು ಹೆಚ್ಚಿಸಬೇಕೆಂದು ಇದ್ದುದನ್ನು ಶೇಕಡ ನಾಲ್ಕಕ್ಕೆ ಇಳಿಸಿ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ದ್ದೇವೆ ಎಂದು. ಇವರು ಈ ಕಂದಾಯವನ್ನು ವಿಧಿಸುವಾಗ ವಾಸ್ತವಿಕವಾಗಿ ಸರಿಯಾಗಿ ನೋಡಿ ಮಾಡಿದ್ದಾರೆಯೇ ಹೇಗೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಒಂದು ಎಕರೆಗೆ ಕಲ್ಟಿವೇಷನ್ ಚಾರ್ಜಸ್ 225 ರೂಪಾಯಿಗಳು ಆಗುತ್ತದೆ ಎಂದು ಹೇಳಿದ್ದಾರೆ. ಇವರು ಈ ಕಲ್ಟಿವೇಷನ್ ಚಾರ್ಜಸ್ ಅಂದಾಜು ಮಾಡುವಾಗ ಸುಮ್ಮನೆ ಯಾವುದೋ ಒಂದು ಲೆಕ್ಕವನ್ನು ತೆಗೆದುಕೊಂಡು ಅಂದಾಜು ಮಾಡಿ ಬರೆಯುತ್ತಾರೆ. ಆದರೆ ನಿಜವಾಗಿ ರೈತನಿಗೆ ಒಂದು ಎಕರೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಬರೆಯುವುದಿಲ್ಲ. ಈಗ ನಮಗೆ ಗೊತ್ತಿರುವ ಪ್ರಕಾರ ಒಂದು ಎಕರೆ ಗದ್ದೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಆಗತಕ್ಕ ಖರ್ಚು ಮತ್ತು ಉತ್ಪತ್ತಿ ಇವೆರಡನ್ನೂ ಲೆಕ್ಕ ಹಾಕಿ ನೋಡಿ ದರೆ ರೈತನಿಗೆ ಒಂದು ಎಕರೆಗೆ ಖರ್ಚು ಜಾತಾ 8 ರೂಪಾಯಿಗಳು ಉಳಿಯುತ್ತದೆ. ಅವನಿಗೆ 8 ರೂಪಾಯಿ ಲಾಭ ಬಂದರೆ ಅವನು ಕಂದಾಯವನ್ನು ಯಾವ ರೀತಿ ಕೊಡಬೇಕು, ಅವನು ಜೀವನ ಯಾವ ರೀತಿ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು.

ಇನ್ನೊಂದು ವಿಷಯ. ಈಗ ಒಂದು ಎಕರೆ ತೆಂಗಿನ ತೋಟದಲ್ಲಿ 1700 ತೆಂಗಿನ ಕಾಯನ್ನು ಬೆಳೆಯುತ್ತಾರೆ ಅಥವಾ ಇನ್ನೂ ಸ್ವಲ್ಪ ಹೆಚ್ಚು ಬೆಳೆಯಬಹುದು ಅಥವಾ ಕಡಿಮೆ ಬೆಳೆಯಬಹುದು ಆದರೆ ಒಂದು ಎಕರೆಯಲ್ಲಿ ಇಷ್ಟೇ ತೆಂಗಿನಕಾಯನ್ನು ಬೆಳೆಯುತ್ತಾರೆ ಎಂದು ಹೇಳುವುದಕ್ಕಾಗಾ ವುದಿಲ್ಲ. ರೈತ ಒಂದು ಎಕರೆಯಲ್ಲಿ ತೆಂಗಿನ ಗಿಡವನ್ನು ಕಟ್ಟಬೇಕಾದರೆ ಸೊಸೈಟಿಯಲ್ಲೋ ಅಥವ ಅಡವಾನ್ ಬ್ಯಾಂಕಿನಲ್ಲೋ ಸಾಲವನ್ನು ತೆಗೆದುಕೊಂಡು ಅವನು ತೆಂಗಿನ ಗಿಡವನ್ನು ಕಟ್ಟುತ್ತಾನೆ ಅವನು ಆ ತೆಂಗಿನ ಗಿಡಗಳನ್ನು ಆ ರೈತ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆ, ಅವನ್ನ ಬ್ಯಾಂಕಿನಲ್ಲಿ ಸಾಲ ತಂದಿರುವ ಹಣಕ್ಕೆ ಬಡ್ಡಿ ಎಷ್ಟು ಕೊಡಬೇಕಾಗುತ್ತದೆ ಎನ್ನುವುದನ್ನೆಲ್ಲಾ ಲೆಕ್ಕ ಹಾಕಿದರೆ ಆಗ ರೈತನಿಗೆ ಎಷ್ಟು ಲಾಭ ಬರುತ್ತದೆ ಎಂಬುದು ಗೊತ್ತಾಗುತ್ತದೆ. ಆದರೆ ಈ ಅಸೆಸ್ ಮೆಂಟ್ ಆಫೀಸರುಗಳು ಯಾವ ಬೇಸಿಸ್ ಮೇಲೆ ಈ ಸೆಟ್ಲಮೆಂಟ್ ರಿಪೋರ್ಟನ್ನು ತಯಾರು ಮಾಡಿದ್ದಾರೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ಸೆಟ್ಲ್‌ಮೆಂಟ್ ರಿಪೋರ್ಟ್ ಗಳನ್ನು ನೋಡಿದರೆ ಒಬ್ಬೊಬ್ಬ ಸದಸ್ಯರಿಗೆ ಕೊಟ್ಟಿರತಕ್ಕ ರಿಪೋರ್ಟುಗಳನ್ನು ಇಲ್ಲಿಗೆ ತರಬೇಕಾದರೆ ನಾಲ್ಕುಜನ ಹೊತ್ತುಕೊಂಡು ಬರಬೇಕು, ವಾಪಸ್ಸು ತೆಗೆದುಕೊಂಡು ಹೋಗಬೇಕಾದರೆ ನಾಲ್ಕು ಜನ ಬೇಕು. ಈ ಕಂದಾಯ ಏರಿಕೆಯ ವಿಷಯದಲ್ಲಿ ಶ್ರೀಮಾನ್ ಕೃಷ್ಣಪ್ಪನವರ ಸಮರ್ಥನೆ ಹೇಗಿದೆ ಎಂದರೆ, ನಾವು ಮದ್ರಾಸು ಮತ್ತು ಆಂಧ್ರ ಎಲ್ಲಾ ರಾಜ್ಯಗಳಲ್ಲಿಯೂ ಎಷ್ಟೆಷ್ಟು ಕಂದಾಯವನ್ನು ಹಾಕಿದ್ದಾರೆ ಎಂಬುದನ್ನು ನೋಡಿದ್ದೇವೆ. ಅದು ಹಾಗಿದೆ, ಇದು ಹೀಗಿದೆ ಎಂದು ಹೇಳಿದರು. ಮತ್ತು ಇಲ್ಲಿ ಬೆಟ್ಟಗುಡ್ಡಗಳ ಮೇಲಿರತಕ್ಕ ಮಣ್ಣೆಲ್ಲವೂ ಕೊಚ್ಚಿಹೋಗಿ ಅದು ಭೂಮಿಯ ಮೇಲೆ ಬಂದು ಭೂಮಿಯೆಲ್ಲಾ ಉತ್ತಮವಾಗಿದೆ. ನೀರಾವರಿ ಸೌಲಭ್ಯ ಇದೆ, ವಿದ್ಯುಚ್ಛಕ್ತಿ ಉತ್ತಮ ವಾಗಿದೆ. ಆದ್ದರಿಂದ ಸ್ವಲ್ಪ ಕಂದಾಯವನ್ನು ಜಾಸ್ತಿ ಕೊಡುವುದು ನ್ಯಾಯ ಎಂದು ಹೇಳಿದರು. ನಿಜ, ನಾವು ಕಂದಾಯವನ್ನು ಜಾಸ್ತಿ ಕೊಡುವುದಕ್ಕೆ ಒಪ್ಪಿಕೊಳ್ಳುತ್ತೇವೆ. ಆದರೆ ಯಾರು ಯಾವ ರೀತಿ ಕಂದಾಯವನ್ನು ಕೊಡಬೇಕು ಎನ್ನುವುದನ್ನು ವಿವೇಚನೆ ಮಾಡಿಲ್ಲ. ಸಣ್ಣ ನೀರಾವರಿಗೆ ಹೊಸ ಕೆಲಸಗಳಿಗೆ ಒಂದು ರೂಪಾಯಿ ಕೊಟ್ಟಿಲ್ಲ. ಇಷ್ಟಾಗಿಯೂ ರೈತನ ಪ್ರಗತಿಗೋಸ್ಕರವಾಗಿ ದುಡಿಯುತ್ತಿದ್ದೇವೆ ಎಂದು ಹೇಳುತ್ತಾರೆ. ಪಂಪುಸೆಟ್ಟುಗಳಿಗೆ ಇಂಡೆಂಟ್ ಮಾಡಿದ್ದಾರೆಯೇ ಅಂದರೆ, ಮಾಡಿಲ್ಲ. ಈ ವರ್ಷ ಒಂದು ಪಂಪುಸೆಟ್ಟೂ ಕೊಡುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಇಂಥ ಸರಕಾರ ರೈತನ ಮೇಲೆ ಕಂದಾಯ ಏರಿಸಬೇಕು ಎಂದು ಹೊರಟಿದೆ. ಧಾರಣೆ ಜಾಸ್ತಿಯಾಗಿದೆ, ಆದ್ದರಿಂದ ಕಂದಾಯ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕಿಂತಲೂ ತಿಳಿಗೇಡಿತನ ಬೇರೆ ಇಲ್ಲ. ಹಿಂದೆ ನಮ್ಮ ಊರಿನಲ್ಲಿ ಒಬ್ಬ ಡೆಪ್ಯುಟಿ ಕಮಿಶನರ್ ಇದ್ದರು. ಅವರು ಒಬ್ಬ ಶಾನುಭೋಗನಿಗೆ 20 ರೂಪಾಯಿ ಫೈನ್ ಹಾಕಿದರು. ಆ ಶಾನುಭೋಗ ಏನು ಹೇಳಿದ ಎಂದರೆ, ಅದನ್ನು ರೈತರೇ ಕೊಡುತ್ತಾರೆ, ಹೇಗೆಂದರೆ ಒಬ್ಬೊಬ್ಬರಿಂದ ತಲಾ 2-2 ರೂಪಾಯಿ ವಸೂಲು ಮಾಡುತ್ತೇನೆಂದು ಹೇಳಿದರು. ಕಂದಾಯ ಜಾಸ್ತಿ ಹಾಕಿದರೆ, ರಾಗಿ, ಬತ್ತದ ಧಾರಣೆ ಜಾಸ್ತಿಯಾಗಿ ಕೊಳ್ಳುವವರು ತೆರಬೇಕಾಗುತ್ತದೆ. ಇವರು ಕಂದಾಯ ಜಾಸ್ತಿ ಮಾಡಿದರೆ ಹೊಲಗಳಲ್ಲಿ ನೋಟುಗಳು ಬೆಳೆಯುತ್ತವೆಯೆ ? ಇಲ್ಲ, ಕೊಯಂಬತ್ತೂರಿನಲ್ಲಿ ಮಾಡಿದಂತೆ ಇಲ್ಲಿ ನೋಟುಗಳನ್ನು ಮಾಡುವುದಕ್ಕೆ ಸಾಧ್ಯವೆ ? ಬಡವ ಕೊಳ್ಳುವ ರಾಗಿಯ ಮೇಲೆ ಈ ಸುಂಕ ಬೀಳುವು ದಿಲ್ಲವೆ ಎಂದು ಸರಕಾರ ನೋಡಬೇಕು.

ಈ ಕಂದಾಯ ಅಸೆಸ್ ಮಾಡುವಾಗ ಈ ಮನುಷ್ಯ (ಅಧಿಕಾರಿ) ತೆಗೆದುಕೊಂಡಿರುವುದು 5 ವರ್ಷದ ಆವರೇಜ್. ಅವರು ಅದಕ್ಕೆ ಯಾವಾಗಿನ ಮಾರ್ಕೆಟ್ ರೇಟ್ ತೆಗೆದುಕೊಂಡಿದ್ದಾರೆಂದರೆ: ಭೀಕರ ಯುದ್ಧ ನಡೆಯುತ್ತಿದ್ದಾಗ, ಎಲ್ಲಾ ಧಾರಣೆವಾಸಿಗಳು ಜಾಸ್ತಿ ಇದ್ದಾಗ, ಇದ್ದ ಧಾರಣೆಗಳು 30 ವರ್ಷಕ್ಕೊಮ್ಮೆ ಅಸೆಸ್‌ಮೆಂಟ್ ಫಿಕ್ಸ್ ಮಾಡಬೇಕಾದರೆ ಇವರು ಆವರೇಜನ್ನು ಯಾವ ಆಧಾರದ ಮೇಲೆ ತೆಗೆದುಕೊಂಡರು. ಒಂದಾನೊಂದು ಕಾಲದಲ್ಲಿ ಎರಡು ರೂಪಾಯಿಗೆ 100 ತೆಂಗಿನಕಾಯಿ ಮಾರುತ್ತಾ ಇದ್ದರು. ಈ 30 ವರ್ಷಗಳ ಕಾಲದಲ್ಲಿ, ಹಾಗೆ ಕಡಿಮೆ ಇದ್ದ ಮಾರ್ಕೆಟ್ ರೇಟುಗಳ ಆವರೇಜನ್ನು ತೆಗೆದುಕೊಂಡಿದ್ದರೆ ಉತ್ತಮವಾಗುತ್ತಿತ್ತು.

ವಿರೋಧ ಪಕ್ಷದವರನ್ನು ಮೈಸೂರು ಸರಕಾರದವರು ಕಡೆಗಣಿಸಿದ್ದಾರೆ. ಆದರೆ ಕೇಂದ್ರ ಮಂತ್ರಿಮಂಡಳ ವಿರೋಧಪಕ್ಷಕ್ಕೆ ಬಹಳ ಮಾನ್ಯತೆ ಕೊಟ್ಟಿದೆ. ಪಾಕೀಸ್ತಾನ ನಮ್ಮ ಗಡಿಯಲ್ಲಿ ಧಾಳಿ ಮಾಡುತ್ತಿರುವ ವಿಚಾರದಲ್ಲಿ, ಕೇಂದ್ರ ಮಂತ್ರಿಗಳು ವಿರೋಧ ಪಕ್ಷದ ಮುಖಂಡರನ್ನು ಕರೆಸಿ ಅವರೊಂದಿಗೆ ಚರ್ಚೆ ಮಾಡಿದರು. ಇಲ್ಲಿ ಕಂದಾಯವನ್ನು ಏರಿಸುವುದರಿಂದ ಏನು ಪರಿಣಾಮವಾಗುತ್ತದೆಂದು ವಿರೋಧ ಪಕ್ಷದವರ ಮುಖಂಡರೊಂದಿಗೆ ಮುಖ್ಯಮಂತ್ರಿಗಳು ಚರ್ಚೆ ಮಾಡದಿದ್ದರೆ ಏನು ಮಾಡಬೇಕು ಅನ್ನುವುದನ್ನು ತಾವೇ ಯೋಚನೆ ಮಾಡಬೇಕು.

ಇಷ್ಟು ಹೇಳಿಬಿಟ್ಟು, ಇನ್ನು ರಚನಾತ್ಮಕ ಸಲಹೆ ಕೊಡಬೇಕಾದ್ದು ನಮ್ಮ ಕರ್ತವ್ಯ. ಈಗ 27 ಜನ ಮಂತ್ರಿಗಳು, ಉಪಮಂತ್ರಿಗಳೂ ಸೇರಿ ಇದ್ದಾರೆ. ಈ ಉಪಮಂತ್ರಿಗಳಿಗೆ ಕೆಲಸವಿಲ್ಲ; ಇವರನ್ನು ರೆಡ್ಯೂಸ್ ಮಾಡಬಹುದು. ಮೊದಲನೆಯದಾಗಿ ಈ ಪಾನನಿರೋಧ ರದ್ದುಮಾಡಿ. ಖಾದಿ ಮತ್ತು ಗ್ರಾಮೋದ್ಯೋಗ ಸಂಸ್ಥೆಗಳಿಂದ ಆಗುತ್ತಿರುವ ನಷ್ಟವನ್ನು ನಿಲ್ಲಿಸಿ. ಎ, ಬಿ, ಸಿ ಅಂತ ಬೇರೆ ಬೇರೆ ತರಹ ಇರುವ ಕಂಟ್ರಾಕ್ಟರುಗಳನ್ನೂ, ಪರ್ಸೆಂಟೇಜುಗಳನ್ನೂ ತೆಗೆದುಹಾಕಿ. ಹಣವಿಲ್ಲದೆ ಅನೇಕ ಸ್ಕೀಮುಗಳನ್ನು ಮಾಡಿ, ಸುಮ್ಮನೆ ಆಫೀಸರುಗಳನ್ನು ನೇಮಕ ಮಾಡುತ್ತೀರಿ. ಅವರುಗಳಿಗೆ ಮನೆ ಇರುವುದಿಲ್ಲ. ಅವರು ಏನು ಮಾಡಬೇಕು ? ಕೆಲಸಕ್ಕೆ ನಿಗಾ ಕೊಡುವುದಿಲ್ಲ. ಇದನ್ನು ತಪ್ಪಿಸಬೇಕು. ಮೊದಲು ನಮ್ಮ ದೇಶದಲ್ಲಿ ಆಗತಕ್ಕಂಥ ಕೆಲಸಗಳಿಗೆ ಹಣ ಬೇಕು. ಸಮಾಜ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಿರುವ ಉದ್ದೇಶ ಬಹಳ ಒಳ್ಳೆಯದು. ಆದರೆ ಆ ಉದ್ದೇಶ ಯಾವ ರೀತಿಯಲ್ಲಿ ಇಂಪ್ಲಿಮೆಂಟ್ ಆಗುತ್ತಿದೆ ಎಂದು ನೋಡಿದರೆ ಗೊತ್ತಾಗುತ್ತದೆ. ಈ ಎನ್. ಇ. ಎಸ್.ನಿಂದಲೂ ಬಹಳ ಹಣ ಪೋಲಾಗುತ್ತಿದೆ. ಮಂತ್ರಿಮಂಡಳಕ್ಕೆ ಮ್ಯಾನ್-ಪವರ್ ಬೇಕು. ಆದರೆ man-power must be utilised in a proper way. ಉಪಮಂತ್ರಿಗಳು ಇದ್ದಾರೆ. ಆದರೆ ಅವರಿಗೆ ಯಾವ ಖಾತೆಯೂ ಇಲ್ಲ. ಇರಲಿ, ಮಂತ್ರಿಗಳಿರಬೇಕೆ. ಆದರೆ ಯಾವದಾದರೂ ಖಾತೆ ಕೊಟ್ಟು, ಅವರಿಗೆ ಇಷ್ಟು ಇಲಸವನ್ನು ಇಷ್ಟು ಕಾಲದಲ್ಲಿ ಮಾಡಬೇಕು ಎಂದು ನಿಗದಿ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ ವಿರೋಧಪಕ್ಷದವರನ್ನು ಒಳ್ಳೆಯ ರೀತಿಯಲ್ಲಿ ಕಂಡು, ಅವರಿಂದ ಬರತಕ್ಕಂಥ ಒಳ್ಳೆಯ ಸಲಹೆಗಳನ್ನು ತೆಗೆದುಕೊಂಡು, ವಿರೋಧಪಕ್ಷಕ್ಕೆ ಗೌರವ ಕೊಡಿ. ಅವರು ಒಳ್ಳೆಯ ಸಲಹೆಗಳನ್ನು ಕೊಡದಿದ್ದರೆ, ಅವರ ತಪ್ಪನ್ನು ತೋರಿಸಿ, ಅವರಿಗೆ ಅಡ್‌ವೈಸ್ ಮಾಡಿ. ಅವರು ತಪ್ಪು ಮಾರ್ಗಕ್ಕೆ ನಿಮ್ಮನ್ನು ಎಳೆಯುವುದಕ್ಕೆ ಪ್ರಯತ್ನಪಟ್ಟಿದ್ದಾರೆಂದು ಕಂಡುಬಂದರೆ, ಅವರನ್ನು ಇನ್ನೊಂದು ದಿವಸ ನಂಬಬೇಡಿ. ಅದು ಬಿಟ್ಟು ನಿಮ್ಮ ಹಿಂದೆ ಮುಂದೆ ಓಡಾಡಿಕೊಂಡು ಚಾಡಿ ಹೇಳುವವರ ಮಾತುಗಳನ್ನು ಕೇಳುವುದು ಸರಿಯಲ್ಲ. ಅಂಥವರು ಅವರಿಗೆ ಆಗದವರ ಮೇಲೆ ಏನಾದರೂ ಚಾಡಿ ಕ್ಷುದ್ರ ಹೇಳಿ ಕಿರುಕುಳ ಕೊಡುವುದಕ್ಕೆ ಹೊಂಚು ಹಾಕುತ್ತಿರುತ್ತಾರೆ. ಶಾಶ್ವತವಾಗಿ ಮುಖ್ಯಮಂತ್ರಿಗಳಾಗಿ ಇರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಹಾಗೆಯೆ ಯಾವಾಗಲೂ ಮೆಂಬರಾಗಿ ಇರುವುವಕ್ಕೂ ಆಗುವುದಿಲ್ಲ. ಆದ್ದರಿಂದ ನ್ಯಾಯವಾಗಿ ಕೆಲಸ ಮಾಡುವುದು ಒಳ್ಳೆಯದು. ಒಬ್ಬ ಶೇಕದಾರನ ಅಥವಾ ಅಧಿಕಾರಿಯ ಟ್ರಾನ್ಸ್‌ಫರ್ ವಿಚಾರದಲ್ಲಿ ಪ್ರವೇಶಿಸಬಾರದು. ನೀವು ಧೈರ್ಯವಾಗಿ ಯೋಚನೆ ಮಾಡಿಕೊಂಡು ಕೆಲಸ ಮಾಡಿ. ನೀವು ನಾವು ಕೊಟ್ಟ ರಚನಾತ್ಮಕ ಸಲಹೆಗಳನ್ನು ಜಾರಿಗೆ ಕೊಡಿ, ನಿಮಗೆ ಬೇಕಾದ ದುಡ್ಡು ಕೊಡುತ್ತೇವೆ, ಅದೇ ಬರುತ್ತದೆ.

ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತೇವೆಂದು ಹೇಳಿ, ಸಾವಿರಾರು ಎಕರೆ ಜಮೀನಿಗೆ 25 ಲಕ್ಷ ರೂಪಾಯಿ ಸಬ್‌ಸಿಡಿ ಕೊಟ್ಟು, ಇವತ್ತು ಬೆಳೆ ಬೆಳೆಯುವ ರೈತನಿಗೆ ಭೂಮಿ ಇಲ್ಲ.

Mr. DEPUTY SPEAKER.—Next Sri R. S. Patil.

Sri S. M. KRISHNA.— May I suggest, we are sitting till 5-30 p.m. The Government may require only half an hour for reply.

Sri S. NIJALINGAPPA.—I will take half-an-hour to 45 minutes and the rest of it by the Revenue Minister. We will not take much time.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೆ, ರಾಜ್ಯದಲ್ಲಿ ಭೂಕಂದಾಯವನ್ನು ಪುನರ್ವಿಮರ್ಶೆ ಮಾಡಿ ಹೊಸ ಅಸೆಸ್‌ಮೆಂಟ್ ರೇಟುಗಳನ್ನು ವಿಧಿಸಲು ಮಂಡಿಸಿದ ಗೊತ್ತುವಳಿಯನ್ನು ಸ್ವಾಗತಿಸುತ್ತೇನೆ. ಇಲ್ಲಿ ಕೊಟ್ಟಂಥ ಕೆಲವು ಅಂಶಗಳ ಮೇಲೆ ನನ್ನ ಭಾವನೆಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಸ್ವಾಮಿ, ಹಿಂದೆ ಮೂಲ ಗೊತ್ತುವಳಿಯಲ್ಲಿ ಉತ್ಪನ್ನದ 6.25 ಪರ್ಸೆಂಟನ್ನು ಈ ಕಂದಾಯ ರೂಪದಲ್ಲಿ ತೆಗೆದುಕೊಳ್ಳುವುದು ಎಂದು ಇದ್ದಾಗ, ಈ ಸಭೆಯಲ್ಲಿ ನಾವುಗಳೆಲ್ಲರೂ ಕೂಡ ಸರ್ಕಾರದವರಿಗೆ ಒಂದು ಸಲಹೆಯನ್ನು ಮಾಡಿದೆವು. ಹಿಂದೆ ಕಂದಾಯವನ್ನು ಹೇರಿಸುವಂಥ ಪದ್ಧತಿ ಆಕರ್ಷಣೀಯವಾಗಿತ್ತು. ಹಳೆಯ ಕಾಲದಲ್ಲಿ ಬರತಕ್ಕಂಥ ಉತ್ಪನ್ನದ ಮೇಲೆ ಕಂದಾಯವನ್ನು ಹಾಕಿಲ್ಲ; ಇದ್ದಂಥ ಪದ್ಧತಿಯನ್ನೆ ಸರಕಾರದವರು ನಡೆಸಿಕೊಂಡು ಬಂದಿದ್ದಾರೆ. ಇಂದು ಏರಿದ ದರಗಳಲ್ಲಿ ರೈತನ ಉತ್ಪತ್ತಿ ಹೆಚ್ಚಾಗಿ ಕಂಡರೂ, ಅವನಿಗೆ ನಿಜವಾಗಿ ಒಳ್ಳೆಯ ಧಾರಣೆ ಬರುತ್ತಿಲ್ಲ. ಕಂದಾಯವನ್ನು ಒಟ್ಟು ಉತ್ಪನ್ನದ 6.25 ಪರ್ಸೆಂಟ್ ಎಂದು ತೆಗೆದುಕೊಳ್ಳುವಾಗ, ಅವನ ಖರ್ಚು ವೆಚ್ಚವನ್ನು ತೆಗೆದುಕೊಳ್ಳದೇನೆ, ಕಂದಾಯ ವಿಧಿಸುವುದಕ್ಕೆ ಮೂಲ ಉತ್ಪನ್ನವನ್ನು (ಗ್ರಾಸ್ ಇನ್‌ಕಂ) ಗಣನೆಗೆ ತೆಗೆದುಕೊಂಡು, ಅದರ 6.25 ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ರೈತನ ಹಿತರಕ್ಷಣೆಯನ್ನು ಮಾಡಬೇಕೆನ್ನುವುದು ನಮ್ಮ ಧ್ಯೇಯವಾಗಿರುವುದರಿಂದ, ಸೆಟಲ್‌ಮೆಂಟ್ ರಿಪೋರ್ಟಿನಲ್ಲಿ ಸೂಚಿತವಾಗಿರುವ ಕಂದಾಯ ಜಾಸ್ತಿಯಾಯಿತು ಎಂದು ನಾವು ಹೇಳಿದ ವುದನ್ನು ಸರಕಾರದವರು ಒಪ್ಪಿ, ಖುಷ್ಕಿ ಮತ್ತು ತರೀ ಜಮೀನಿನ ಕಂದಾಯವನ್ನು ನಾಲ್ಕುವರೆ ಪರ್ಸೆಂಟಿಗೂ, ಪ್ಲಾಂಟೇಶನ್ ಜಮೀನಿನ ಕಂದಾಯವನ್ನು 1 ಪರ್ಸೆಂಟಿಗೂ ಇಳಿಸಿ, ತಿದ್ದುಪಡಿ ತಂದರು. ಈ ಬದಲಾವಣೆಯನ್ನು ಸ್ವಾಗತಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ತಮ್ಮಲ್ಲಿ ಲ್ಯಾಂಡ್ ರೆವಿನ್ಯು ಏರಿಕೆ ಕಡಿಮೆಯಾಗುತ್ತದೆಂದೊ ?

ಶ್ರೀ ಆರ್. ಎಸ್. ಪಾಟೀಲ್.—1950ಕ್ಕಿಂತ ಮುಂಚಿನಿಂದಲೂ ಅಲ್ಲಿ ಲ್ಯಾಂಡ್ ರೆವಿನ್ಯು ಜಾಸ್ತಿ ಮಾಡುತ್ತಾ ಬಂದಿದ್ದಾರೆ. ನಮ್ಮಲ್ಲಿ ಕರೆಕ್ಟ್ ಆಗಿ 25 ಪರ್ಸೆಂಟ್ ಜಾಸ್ತಿಯಾಗುತ್ತಾ ಇದೆ. ನಮ್ಮಲ್ಲಿ 1905ರಲ್ಲಿ ರೆವಿನ್ಯು ಸೆಟಲ್‌ಮೆಂಟ್ ಆಯಿತು; ಆಮೇಲೆ ಕೆಲವು ಕಡೆ 1918ರಲ್ಲಿ ಆಯಿತು. 1905ರಲ್ಲಿಯೆ ಕೆಲವೊಂದು ಪರ್ಸೆಂಟ್ ಜಾಸ್ತಿಯಾಗಿದೆ. 1935ರಲ್ಲಿ ಪುನಃ ರೆವಿನ್ಯು ಸೆಟಲ್‌ಮೆಂಟ್ ಆದ ಕಡೆ ಈಗ ಪರ್ಸೆಂಟೇಜ್ ಇಂಕ್ರೀಸ್ ಸ್ವಲ್ಪ ಕಡಿಮೆಯಾಗಿದೆ. ಆದ್ದರಿಂದ ಒಬ್ಬರಿಗೆ ಜಾಸ್ತಿ ಮಾಡಿದ್ದಾರೆ, ಇನ್ನೊಬ್ಬರಿಗೆ ಕಡಿಮೆ ಮಾಡಿದ್ದಾರೆ ಅನ್ನುವ ವಾದದಲ್ಲಿ ಹುರುಳಿಲ್ಲ. ಈ ಗೊತ್ತುವಳಿಗೆ ತಿದ್ದುಪಡಿ ತಂದಿರುವುದನ್ನು ಸ್ವಾಗತಿಸುತ್ತೇನೆ. ಈಗ ಸುಮಾರು 3 ಕೋಟಿ ರೂಪಾಯಿ ಭೂ-ಕಂದಾಯದಿಂದ ಬರುತ್ತಿದೆ. ಜಮೀನಿನ ಉತ್ಪನ್ನದ ಶೇಕಡ 6.25 ರಷ್ಟು ಕಂದಾಯ ಇರಬೇಕೆಂದು ತೆಗೆದುಕೊಂಡು, ನಮ್ಮ ಸರಕಾರದವರು ಲೆಕ್ಕ ಹಾಕಿದ್ದರಲ್ಲಿ, ಒಟ್ಟು ಏಳುಮುಕ್ಕಾಲು ಕೋಟಿ ಬರಬಹುದೆಂದು ಲೆಕ್ಕ ಹಾಕಿಕೊಂಡರು. ಈಗ ತಿದ್ದುಪಡಿ ಮೂಲಕ, ಅದನ್ನು ಶೇಕಡ 4ಕ್ಕೆ ಇಳಿಸಿದ್ದರಿಂದ ಸುಮಾರು 4.42 ಕೋಟಿ ರೂಪಾಯಿ ಕಂದಾಯ ಬರುತ್ತದೆ.

[MR. DEPUTY SPEAKER in the Chair]

ಅದಕ್ಕಾಗಿ ಯಾವ ಯಾವುದೋ ಯೋಜನೆಗಳನ್ನು ಮಾಡಲು ಆಶೆ ಇಟ್ಟುಕೊಂಡಿದ್ದಾರೆ ಎನ್ನುವುದು ತಪ್ಪು. ಆದರೆ ಜವಾಬುದಾರಿ ಸರಕಾರ ಬಂದ ಮೇಲೆ ನಮ್ಮ ಸರಕಾರದವರು ರಿಸೋರ್ಸಸ್‌ಗಳನ್ನು ಹೆಚ್ಚು ಮಾಡಿಕೊಂಡು ಹೇಗಾದರೂ ಖೋತಾ ಬರುವ ಹಣವನ್ನು ಭರ್ತಿ ಮಾಡಲು ಇಲ್ಲಿ ನಮ್ಮ ಮುಂದೆ ತಂದಿರುವ ಸೆಟಲ್‌ಮೆಂಟು ರಿಪೋರ್ಟಿನಲ್ಲಿ ಹೇಳಿರುವಂತೆ ಸ್ವಲ್ಪ ಕಂದಾಯ ಜಾಸ್ತಿ ಮಾಡಿದರೆ ಸರಕಾರಕ್ಕೆ ಸ್ವಲ್ಪ ಮಟ್ಟಿನ ಹಣ ಬರಬಹುದು. ಈ ಒಂದು ಭಾವನೆಯಿಂದ ಸರಕಾರ ನಮ್ಮ ಮುಂದೆ ಈ ವರದಿಯನ್ನು ಇಲ್ಲಿ ತಂದಿದ್ದಾರೆಯೇ ಹೊರತು ಬೇರೆ ಇನ್ನಾವ ದೃಷ್ಟಿಯಿಂದಲೂ ಇಲ್ಲಿ ತರಲಿಲ್ಲ. ಈ ರೀತಿ ಸ್ವಲ್ಪ ಮಟ್ಟಿನ ತೆರಿಗೆ ಜಾಸ್ತಿ ಮಾಡಿದರೆ ಅದರಿಂದೇನೂ ಅಂತಹ ಕೆಟ್ಟ ಭಾವನೆಗಳು ಬರಲಿಕ್ಕಿಲ್ಲ. ಒಂದು ಕಡೆಯಲ್ಲಿ ಹೆಚ್ಚಾಗಿ ತೆರಿಗೆ ಕೊಡುವುದು ಇನ್ನೊಂದು ಭಾಗದಲ್ಲಿ ಕಡಿಮೆ ತೆರಿಗೆ ಕೊಡುವುದು ಹೀಗೆ ಇರುವುದು ಸರಿಯಲ್ಲ ಎಂದು ದೇಶದ ಎಲ್ಲ ಭಾಗಗಳಲ್ಲಿಯೂ ಒಂದೇ ರೀತಿಯಾದ ತೆರಿಗೆ ಇರುವಂತೆ ಮಾಡಿ ಅದನ್ನು ಜನರ ಮೇಲೆ ಹಾಕುವಾಗ ಸ್ವಲ್ಪಮಟ್ಟಿನ ವ್ಯತ್ಯಾಸಗಳು ಬರುತ್ತವೆ. ಅದನ್ನು ಸರಿಪಡಿಸಿಕೊಂಡು ಹೋಗಬೇಕು. ಈ ದೇಶದಲ್ಲಿ ಭೂ ಸ್ವಾಮ್ಯವನ್ನು ಪಡೆದಿರತಕ್ಕವರು ಅವರ ಭೂಮಿಯ ಮೇಲೆ ಕೆಲಸ ಮಾಡುವಾಗ ಅದಕ್ಕೆ ಏನು ತೆರಿಗೆ ಎಂದು ಹಾಕಲಾಗಿದೆಯೋ ಅದನ್ನು ಕೊಡಬೇಕು. ಆದರೆ ಈಗ ಹೆಚ್ಚಾಗುತ್ತದೆ ಎಂದು ಹೆಚ್ಚುವರಿ ತೆರಿಗೆಯನ್ನು ಕೊಡದೇ ಹೋದರೆ ಅದರಿಂದ ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಈಗ ರಿವಿಷನ್ನು ಮಾಡಿರುವ ಬಗ್ಗೆ ಯೋಚನೆ

ಮಾಡುವುದಾದರೆ ನಮ್ಮ ಭಾಗಕ್ಕೆ ಹೆಚ್ಚು ತೆರಿಗೆ ಹಾಕಿದ್ದಾರೆ ಇತರ ಭಾಗಗಳಲ್ಲಿ ಅಷ್ಟಿಲ್ಲ ಎನ್ನುವ ಭಾವನೆ ತಪ್ಪು. ಭಾರತದ ಭವಿಷ್ಯದ ಬುನಾದಿಯ ಮೇಲೆ ಸ್ಥಾಪಿಸಲ್ಪಟ್ಟಿರುವ ನಮ್ಮ ಕಾಂಗ್ರೆಸ್ಸು ಪಕ್ಷಕ್ಕೆ ಈ ಪಕ್ಷ ದೇಶದ ಜವಾಬುದಾರಿಯನ್ನು ಹೊತ್ತಿರುವುದರಿಂದ ಇಲ್ಲಿರುವ ಬಡ ರೈತರ ಕಷ್ಟ ವೇನು ಎನ್ನುವುದರ ಅರಿವು ಇದೆ. ಅದನ್ನು ನೋಡಿಕೊಂಡೇ ಅವರಿಗೆ ಅನುಕೂಲ ಮಾಡಿಕೊಡು ವಾಗ ವಿರೋಧ ಪಕ್ಷಗಳ ಮಾರ್ಗವನ್ನು ನಾವೇನೂ ಅನುಕರಣ ಮಾಡಬೇಕಾಗಿಲ್ಲ. ಅವರಿಂದ ಪಾಠಗಳನ್ನು ಕಲಿಯುವ ಅಗತ್ಯವೂ ಇಲ್ಲ. ನಮ್ಮ ಜವಾಬುದಾರಿ ನಮ್ಮ ದೇಶದ ಜನತೆಯ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕಾಗಿರುವಾಗ ಅವರ ಪ್ರತಿನಿಧಿಗಳಾಗಿ ನಾವೂ ಅವರಿಗೆ ಅನುಕೂಲ ಮಾಡಿಕೊಡಲು ಸರಕಾರಕ್ಕೆ ಸಹಾಯ ಮಾಡಬೇಕಾಗಿದೆ. ಅಂತಹ ಉತ್ತಮವಾದ ಕಾರ್ಯ ಕ್ರಮಗಳಲ್ಲಿ ಈ ಸರಕಾರ ಈಗ ನಮ್ಮ ಮುಂದೆ ತಂದಿರುವ ಸರ್ವೆ ಸೆಟಲ್‌ಮೆಂಟು ವರದಿಯೂ ಕೂಡ ಬಹಳ ಉತ್ತಮವಾದ ವರದಿಯಾಗಿದೆ. ಇದರಲ್ಲಿ ಕೂಡ ಮೊದಲದ್ದ ರೇಟನ್ನು ಕೂಡ ಕಡಿಮೆ ಮಾಡಿ ಈಗ ಹೊಸದಾಗಿ ಶೇಕಡಾ ನಾಲ್ಕರಷ್ಟು ಎಂದು ಮಾಡಿದ್ದಾರೆ. ಇದು ದೇಶದ ಎಲ್ಲ ಭಾಗ ಗಳಿಗೂ ಅನ್ವಯಿಸಲು ಅನುಕೂಲವಾಗಿದೆ. ಇದನ್ನು ಒಪ್ಪುವುದು ಸೂಕ್ತವಾಗಿದೆ ಎಂದು ಇಷ್ಟು ಹೇಳಿ ಅಧ್ಯಕ್ಷರು ಐದು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇನೆ.

[MR. SPEAKER in the Chair.]

† ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಸ್ವಾಮಿ, ಈ ರೆವೆನ್ಯೂ ಸೆಟಲ್‌ಮೆಂಟಿನಿಂದ ರೈತರು ಉದ್ಧಾರವಾಗುವುದರ ಬದಲಿಗೆ ಅವರು ಮಟ್ಟವಾಗುತ್ತಾರೆ. ಇದು ಅಂತಹ ಒಂದು ತೊಡಕಿನ ಸಮಸ್ಯೆಯಾಗಿದೆ. ಈ ಸೆಟ್‌ಲ್‌ಮೆಂಟ್ ರಿಪೋರ್ಟಿನಲ್ಲಿ ನಮ್ಮ ರೆವೆನ್ಯೂ ಮಂತ್ರಿಗಳು ಹೇಳತಕ್ಕ ಅಂಕೆಗಳಂತೆ ಕೇವಲ 3·04 ಕೋಟಿ ಚಿಲ್ಲರೆಯಷ್ಟು ಬರುತ್ತಿದುದರಲ್ಲಿ ಈಗ ಹೆಚ್ಚು ಮಾಡಿರುವುದರಿಂದ 4.42 ಕೋಟಿ ಚಿಲ್ಲರೆಯಷ್ಟು ಬರುತ್ತದೆಯೇ ಹೊರತು ಅದಕ್ಕಿಂದ ಜಾಸ್ತಿ ಯಾಗುವುದಿಲ್ಲ ಎಂದು ಹೇಳುತ್ತಾರೆ. ಒಟ್ಟು ಇವರು ಕೊಟ್ಟಿರುವ ಅಂಕೆ ಸಂಖ್ಯೆಗಳನ್ನೇ ಇಟ್ಟುಕೊಂಡರೆ ಅವರಂತೆ ಕೆಲವು ಕ್ಷೇತ್ರಗಳಲ್ಲಿ ಜನಕ್ಕೆ ಹೇಗೆ ಅನ್ಯಾಯವಾಗುತ್ತದೆ ಎನ್ನುವುದನ್ನು ತಮ್ಮ ಮುಂದೆ ಇಲ್ಲಿ ಹೇಳ ಬೇಕಾಗಿದೆ. ಕೆಲವು ಪ್ರದೇಶಗಳಿಗೆ ಅನುಕೂಲವಾಗುತ್ತದೆ, ಇದರಲ್ಲಿರುವ ರಿಪೋರ್ಟಿನಲ್ಲಿ ಹೇಳಿರುವಂತೆ ಕೆಲವು ಜೋನುಗಳಲ್ಲಿ ಎಂದರೆ ಉಡುಪಿ, ಪುತ್ತೂರು ಕ್ಷೇತ್ರಗಳಲ್ಲಿ ಹಾಗೂ ಹಳೆಯ ಮೈಸೂರಿನಲ್ಲಿರುವ ಕೊಳ್ಳೆಗಾಲ, ಅರಸೀಕೆರೆ, ತಿಪಟೂರು, ಚಿತ್ರದುರ್ಗ, ಚನ್ನರಾಯಪಟ್ಟಣ ಇಲ್ಲಿ ಒಂದು ರೀತಿಯಾಗಿದೆ. ಹಾಗೂ ಪ್ಲಾಂಟೇಷನ್ನುಗಳು ಇರುವ ಕಡೆಗಳಲ್ಲಿ ಅನ್ಯಾಯವಾಗಿದೆ. ಇದನ್ನೆಲ್ಲಾ ಸರಕಾರ ಪುನರ್ವಿಮರ್ಶಿಸಬೇಕೆಂದು ಹೇಳಬೇಕಾಗಿದೆ. ಇದರಲ್ಲಿ ಸಾಮಾನ್ಯವಾಗಿ ರೈತರಿಗೆ ಜಾಸ್ತಿ ತೊಂದರೆಯಾಗುತ್ತದೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಸರಿಯಾಗಿ ತೆಗೆದು ಕೊಳ್ಳಬೇಕು. ರೆವೆನ್ಯೂ ಸೆಟಲ್‌ಮೆಂಟು ಮಾಡುವುದರಲ್ಲಿ ಏನಾಗಿದೆ ಎಂದರೆ, ಸರ್ವೆ ಸೆಟಲ್‌ ಮೆಂಟು ಮಾಡುವ ಅಧಿಕಾರಿಗಳು ಯಾವ ರೀತಿಯಾದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಾರೋ ಅದರ ಮೇಲೆ ಈ ವರದಿ ಅವಲಂಬನೆಯಾಗಿದೆ. ಕೆಲವು ಆಫೀಸರುಗಳು ನ್ಯಾಯವಾಗಿ ನಿಷ್ಠೆಯಿಂದ ನ್ಯಾಯವಾದಿಗಳಾಗಿರುವಂತಹವರು ಅವರ ಕೆಲಸಗಳನ್ನು ಯಶಸ್ವಿಯಾಗಿ ಮಾಡಿರುವ ಕಡೆಗಳಲ್ಲಿ ಅವರು ಹಾಕಿರುವ ರೇಟುಗಳು ಈ ಸೆಟಲ್‌ಮೆಂಟು ರಿಪೋರ್ಟಿನಲ್ಲಿ ನೋಡಿದರೆ ಕೆಲವು ಕಡೆಗಳಲ್ಲಿ ಸರಿಯಾಗಿದೆ. ಆದರೆ ಇತರ ಕೆಲವು ಭಾಗಗಳಲ್ಲಿ ಹೋಗಿರುವ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ಮಾಡದೆ ಸ್ವೇಚ್ಛೆಯಾಗಿ ಅವರ ಮನಸ್ಸಿಗೆ ಬಂದಂತೆ ಯಾವ ಜಾಗಕ್ಕೂ ಹೋಗದೇ ಅವರು ಕುಳಿತಲ್ಲಿಯೇ ಈ ರಿಪೋರ್ಟನ್ನು ತಯಾರಿಸಿದ್ದಾರೆ. ಅವರು ತಮ್ಮ ಮನಸ್ಸಿಗೆ ಬಂದಂತೆ ಇಲ್ಲಿ ಕೆಲವು ಅಂಕೆಗಳನ್ನು ಕೊಟ್ಟಿರುವಂತೆ ಕಾಣುತ್ತದೆ. ಜಮೀನು ಲೆಕ್ಕಾಚಾರಗಳನ್ನು ಯಾವ ಅಳತೆಯ ಕೋಲಿನ ಮೇಲೆ ಅಳೆಯಬೇಕು, ಯಾವ ಮಟ್ಟದಲ್ಲಿ ರೈತರಿಗೆ ರೇಟುಗಳನ್ನು ಹಾಕಬೇಕು ಎನ್ನುವುದನ್ನು ಶಾಸ್ತ್ರೀಯವಾಗಿ ಮಾಡದೆ ಇಲ್ಲಿ ಮನಸ್ಸಿಗೆ ಬಂದಂತೆ ಮಾಡಿದ್ದಾರೆ. ಶಾಸ್ತ್ರೀಯ ವಾದ ಆಧಾರದ ಮೇಲೆ ಈ ರಿಪೋರ್ಟನ್ನು ಮಾಡಿಲ್ಲ. ಇದರಿಂದಾಗಿ ಕೆಲವು ಭಾಗಗಳಲ್ಲಿ ರೈತರ ಮೇಲೆ ಹೊರೆ ಜಾಸ್ತಿಯಾಗಿ ಬೀಳುತ್ತದೆ. ಹೀಗೆ ಕೆಲವು ಭಾಗಗಳಲ್ಲಿ ಅನ್ಯಾಯವಾಗಿರುವುದನ್ನು ಸಮತೂಗಿಸಬೇಕು. ಒಟ್ಟಿನಲ್ಲಿ ದೇಶವನ್ನು ತೆಗೆದುಕೊಂಡು ಎರಡರಷ್ಟು ಎಂದು ಆಗಿರುವುದನ್ನು ಒಂದೂವರೆಯಷ್ಟು ಎಂದು ಮಾಡಿರುವುದರಲ್ಲಿ ಕೆಲವು ಕಡೆ ಅನ್ಯಾಯವಾಗುತ್ತದೆ. 1965 ನೇ ಇಸವಿಯವರೆಗೆ ಎಂದು ಇಲ್ಲಿ ಅವರು ಹೋಗಿರುವ ಅಪ್ರೋಚು ಸರಿಯಾಗಿಲ್ಲ. ಇದರಿಂದ ಕೆಲವರಿಗೆ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ತಾವು ಎಲ್ಲೆಲ್ಲಿ ಈ ರೀತಿಯಾಗಿ ರೈತರಿಗೆ ಅನ್ಯಾಯ ವಾಗಿದೆಯೋ ಅದನ್ನು ಸರಿಯಾಗಿ ಪತ್ತೆಮಾಡಿ ಆಯಾ ಜೋನಿನ ಆಫೀಸರುಗಳು ಪುನರ್ವಿಮರ್ಶೆ ಮಾಡಿ ಎಲ್ಲರಿಗೂ ನ್ಯಾಯವಾದ ದರಗಳು ಬರುವಂತೆ ನೋಡಿ ಹಾಕಬೇಕು ಮತ್ತು ಎಲ್ಲಿ ದರಗಳು ಹೆಚ್ಚಾಗಿವೆಯೋ ಅದನ್ನು ತಗ್ಗಿಸಬೇಕು ಎಂದು ನಾನು ಇಲ್ಲಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಹಾಗೆ ಇದರಲ್ಲಿ ಕೆಲವು ಪರ್ಸೆಂಟೇಜುಗಳನ್ನು ಕೊಟ್ಟಿದ್ದಾರೆ. ಮೊದಲು ಶೇಕಡಾ ಆರೂಕಾಲರಷ್ಟು ಎಂದು ಮಾಡಬೇಕೆಂದು ಇದ್ದುದನ್ನು ಈಗ ಶೇಕಡಾ ನಾಲ್ಕರಷ್ಟು ಎಂದು ಇಳಿಸುವಾಗ ಹಿಂದೆ ಯಾವ ರೀತಿಯಾಗಿ ಧಾರಣೆಗಳಲ್ಲಿ ಏರಿಳಿತಗಳು ಇತ್ತು ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಇಲ್ಲಿ ನಿಗದಿ ಮಾಡಬೇಕಾಗಿತ್ತು. ವರ್ಷೇ ವರ್ಷೇ ಧಾರಣೆಗಳು ಬದಲಾವಣೆಯಾಗುತ್ತಿರುತ್ತದೆ. 1931 ರಿಂದ 1940 ರಲ್ಲಿ ರಾಗಿ ರೂಪಾಯಿಗೆ 20 ಸೇರುಗಳಷ್ಟು ಇತ್ತು. ಈಗ ರಾಗಿ ಒಂದೂವರೆ ಸೇರಿನಷ್ಟು ಇದೆ. ಅಕ್ಕಿ ಕೂಡ ರೂಪಾಯಿಗೆ ಹತ್ತು ಸೇರುಗಳಿಗಿಂತ ಜಾಸ್ತಿ ಇತ್ತು, ಇವೊತ್ತು ಒಂದು ರೂಪಾಯಿಗೆ ಒಂದೆ ಕೆ. ಜಿ. ಅಕ್ಕಿಯಾಗಿದೆ. ಆದುದರಿಂದ ಧಾರಣೆವಾಸಿಗಳನ್ನು ನೋಡುವಾಗ ಐದು ವರ್ಷಗಳ ಹಿಂದಿನ ಧಾರಣೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಇಲ್ಲಿ ಮಾಡಿರುವುದು ಕೆಲವು ಕಡೆಗಳಲ್ಲಿ ಅನ್ಯಾಯವಾಗುತ್ತದೆ. ಅದುದರಿಂದ ಯಾರಿಗೂ ಅನ್ಯಾಯವಾಗದಂತೆ ಒಂದು ಮೂವತ್ತು ವರ್ಷಗಳ ಆವರೇಜನ್ನು ಲೆಕ್ಕಕ್ಕೆ ತೆಗೆದುಕೊಂಡು ಮಾಡಿದ್ದರೆ ಸರಿಯಾಗಿತ್ತು. ಹಾಗೆ ಮಾಡದೆ ಈಗ ಶೇಕಡಾ ಆರೂಕಾಲರಷ್ಟು ಎಂದು ಇದ್ದುದನ್ನು ಶೇಕಡಾ ನಾಲ್ಕರಷ್ಟು ಎಂದು ಇಳಿಸಲಾಗಿದೆ ಎನ್ನುವ ತಿದ್ದುಪಡಿ ಇಲ್ಲಿ ತಂದಿದ್ದರೂ ಇದು ಸರಿಯಾಗಿಲ್ಲ ಎಂದು ನಾನು ಮಾನ್ಯ ಕಂದಾಯ ಸಚಿವರಿಗೆ ಸಲಹೆ ಮಾಡುತ್ತೇನೆ. ಶೇಕಡಾ ನಾಲ್ಕರಷ್ಟು ಎಂದು ಹಾಕುವಾಗ ಬ್ರಿಟನ್ನಿನಲ್ಲಿ ಹೇಗೆ ಟ್ಯಾಕ್ಸಬಲ್ ಇನ್‌ಕಂ ಮೇಲೆ ಹಾಕುತ್ತಿದ್ದಾರೊ ಆ ರೀತಿ ಇಲ್ಲಿಯೂ ಕೂಡ ಇನ್‌ಕಂ ಮೇಲೆ ತೆರಿಗೆ ಹಾಕಬೇಕಾಗುತ್ತದೆ. ಟ್ಯಾಕ್ಸಬಲ್ ಇನ್‌ಕಂ ಎಷ್ಟು, ಗ್ರಾಸ್ ಇನ್‌ಕಂ ಎಷ್ಟು ಎನ್ನುವುದನ್ನು ನೋಡಿಕೊಂಡು ಗ್ರಾಸ್ ಇನ್ ಕಂ ನಲ್ಲಿ ಲ್ಯಾಂಡು ಟ್ಯಾಕ್ಸನ್ನು ವಜಾ ಮಾಡಬೇಕು. ಕೊಡತಕ್ಕ ತೆರಿಗೆ ಯಾವ ರೀತಿಯಾಗುತ್ತದೆ ಎಂದರೆ ಕಾಸ್ಟ್ ಆಫ್ ಕಲ್ಟಿವೇಷನ್ನು, ಲ್ಯಾಂಡು ಟ್ಯಾಕ್ಸು ಇವೆರಡನ್ನೂ ವಜಾ ಮಾಡಿಕೊಂಡು ಅವರೇಜ್ ಇನ್‌ಕಂ ಎಂದು ಭಾವಿಸಿ ಅದರ ಮೇಲೆ ಶೇಕಡಾ ನಾಲ್ಕರಷ್ಟು ಎಂದು ಲೆಕ್ಕಾಚಾರ ಮಾಡಿ ಆದರ ಮೇಲೆ ಕಂದಾಯ ವಿಧಿಸಬೇಕು.

ಮತ್ತು ತೆಂಗಿನ ವಿಚಾರ ನೋಡುವಾಗ ಅವರಿಗೆ ಈ ವರದಿಯಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ. ಇದರಲ್ಲಿರುವ ಜೋನು (7) ತಿಪಟೂರು ಇದರಲ್ಲಿ ಸರ್ವೆ ಸೆಟಲ್‌ಮೆಂಟು ರಿಪೋರ್ಟಿನ ಪ್ರಕಾರ ಅಧಿಕಾರಿಗಳು ತೆಂಗು ವಿಚಾರವಾಗಿ ತೆರಿಗೆ ಹಾಕುವಾಗ ತಿಪಟೂರಿನಲ್ಲಿ ಬಹಳ ಜಾಸ್ತಿಯಾಗಿ ಮಾಡಿದ್ದಾರೆ, ಎಂದರೆ ಇದರಲ್ಲಿರುವಂತೆ ಶೇಕಡಾ 81 ರಷ್ಟು ಜಾಸ್ತಿ ಮಾಡಿದ್ದಾರೆ. ಇದು ಮಾನ್ಯ ಸದಸ್ಯರಾದ ಶ್ರೀ ಮಾನ್ ರೇವಣಶಿವಪ್ಪನವರಿಗೂ ಚೆನ್ನಾಗಿ ಗೊತ್ತಿದೆ. ಹಾಗೆ ಇದರಲ್ಲಿ ನೋಡುವಾಗ ತುರುವೇಕೆರೆಗೆ ಶೇಕಡಾ 325 ರಷ್ಟು, ಚಿತ್ರದುರ್ಗದಲ್ಲಿ ಶೇಕಡಾ 295 ರಷ್ಟು ಅರಸೀಕೆರೆಯಲ್ಲಿ ಶೇಕಡಾ 498 ರಷ್ಟು ಎಂದು ಇದರಲ್ಲಿ ಜಾಸ್ತಿ ಮಾಡಿದ್ದಾರೆ. ತಿಪಟೂರಿನಲ್ಲಿ ತೆಂಗಿನ ಬೆಳೆಯ ಮಟ್ಟ ಯಾವ ರೀತಿ ಇದೆ, ಅರಸೀಕೆರೆ ತಾಲ್ಲೂಕಿನಲ್ಲಿ ಯಾವ ರೀತಿ ಇದೆ. ಅದನ್ನು ಸರಿಯಾಗಿ ಹೋಗಿ ನೋಡಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಜೋನಿನಿಂದ ಜೋನುಗಳಲ್ಲಿ ಎಲ್ಲೂ ಜಾಸ್ತಿಯಾಗಿಲ್ಲ. ತಾವು ಯಾವುದರಲ್ಲಿ ನೋಡಿ ಇಲ್ಲಿ ಹೇಳುತ್ತಿದ್ದೀರಿ. ಸರ್ವೆ ಸೆಟಲ್‌ಮೆಂಟು ರಿಪೋರ್ಟಿನಲ್ಲಿ. ನಾವು ತಮಗೆ ಅಚ್ಚಾದ ಪ್ರತಿ ಕೊಟ್ಟಿದ್ದೇವಲ್ಲ ಅದರಲ್ಲಿ ನೋಡಿದರೆ ತಮಗೇ ಗೊತ್ತಾಗುತ್ತದೆ :

MR. SPEAKER.—The figures are like this :

Type of land	*Zone No. & name*	*Area in acre*	Existing assessment on the basis of dry rate as obtaining in the locality.	Assessment as it would be with refence to dry-rates of assessment at 4 % of the average yield per acre of dry lands of 100 % classification value.
Irrigated Garden Lands.	VII Tiptur	57,479	65,526	80,470

Mr. SPEAKER.—The existing revenue is Rs. 65,000 and odd and so the proposed assessment is Rs. 15,000 more. That is all. For dry land, the figures are as follows :—

(1)	(3)	(4)	(5)
Dry land	4,07,423	4,48,450	5,91,904.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಒಟ್ಟಿನಲ್ಲಿ ಎಲ್ಲ ಭಾಗಗಳಲ್ಲೂ ಆಗಿರುವ ವರದಿಗಳನ್ನು ತರಿಸಿಕೊಂಡು ಅಲ್ಲಿನ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ನೋಡಿಕೊಂಡು ಅದರ ಮೇಲೆ ಟ್ಯಾಕ್ಸು ಗಳನ್ನು ಹಾಕಲು ಪ್ರಯತ್ನ ಮಾಡಬೇಕು. ಒಂದು ವರ್ಷದ ಮೇಲೆ ಇದನ್ನು ನೋಡಿದರೆ ನಿಮಗೇ ಗೊತ್ತಾಗುತ್ತದೆ. ಅರಸೀಕೆರೆ ತಾಲ್ಲೂಕಿಗೆ ಎಲ್ಲ ವಿಧದಲ್ಲಿಯೂ ಅನ್ಯಾಯವಾಗುತ್ತದೆ. ಅರಸೀ ಕೆರೆಗೆ ಇದರಲ್ಲಿರುವಂತೆ ಡ್ರೈ ಕ್ರಾಫ್‌ಗೆ ಶೇಕಡಾ 397 ರಷ್ಟು ವೆಟ್ ಕ್ರಾಪ್ಸ್‌ಗೆ ಶೇಕಡಾ 206 ರಷ್ಟು ಎಂದು ಜಾಸ್ತಿ ಮಾಡಿದ್ದಾರೆ. ಬಾಗಾಯತಿಗೆ ಶೇಕಡಾ 425 ರಷ್ಟು ಎಂದು ಜಾಸ್ತಿ ಮಾಡಿದ್ದಾರೆ. 89, 867 ಎಕರೆ ಭೂಮಿಯನ್ನು ಇದರಲ್ಲಿ ಸೇರಿಸಿಲ್ಲ. 4 ಪರ್ಸೆಂಟ್ ಮಾಡುವುದಕ್ಕೆ ತಿದ್ದುಪಡಿ ತಂದಿದ್ದೀರಿ. ಆದರೆ ವೆಟ್‌ಲ್ಯಾಂಡ್ ಡೆಫಿನೀಷನ್ ಬದಲಾವಣೆ ಮಾಡಿ ಹೆಚ್ಚು ಕಂದಾಯ ವಸೂಲ್ಮಾಡುತ್ತೀರಿ. ಇದು ಸುಳ್ಳಾದರೆ ನನ್ನ ಮೆಂಬರ್‌ಷಿಪ್ಪ್‌ಗೆ ರಾಜೀನಾಮೆ ಕೊಟ್ಟು ನಾನು ಹೊರಟು ಹೋಗಲು ಸಿದ್ಧನಿದ್ದೇನೆ. ಹೆಚ್ಚುವರಿ ಕಂದಾಯದ ಜೊತೆಗೆ ವಾಟರ್ ಟ್ಯಾಕ್ಸ್ ಹಾಕು ತ್ತೀರಿ...

4-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ಊರಲ್ಲಿ ಇದು ಬರುವುದಿಲ್ಲ. ಯಾಕೆಂದರೆ, ನಿಮ್ಮಲ್ಲಿ ರೇನ್ ಫೆಡ್‌ವೆಟ್ ಗಾರ್ಡನ್ಸ್ ಇಲ್ಲ. ಬಾವಿ ಕೆರೆ ನೀರನ್ನು ಉಪಯೋಗಿಸಿ ಮಾಡುವ ಗಾರ್ಡನ್ಸ್ ಇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸರ್ವೆ ಸೆಟ್ಲ್‌ಮೆಂಟ್ ರಿಪೋರ್ಟಿನಲ್ಲಿ ಇದು ಇದೆ. ಡ್ರೈ ಗಾರ್ಡನ್ ಲ್ಯಾಂಡ್ಸ್‌ಗಳಿಗೆ 19 ರೂಪಾಯಿ ಹಾಕಿದ್ದೀರಿ. ರೇನ್ ಫೆಡ್‌ವೆಟ್ ಲ್ಯಾಂಡ್ಸ್ ರೇನ್ ಫೆಡ್ ಗಾರ್ಡನ್ಸ್ ಎಂದು ಇದೆ. ಡ್ರೈ ಗಾರ್ಡನ್, ವೆಟ್ ಗಾರ್ಡನ್ ಎಂದು ಕ್ಲಾಸಿಫೈ ಮಾಡಿರುವುದು ಮುಂದೆ ಇದೇ ಆಧಾರ ಆಗುತ್ತದೆ.

ಶ್ರೀ ಎಂ.ವಿ. ಕೃಷ್ಣಪ್ಪ.—ನಾರ್ಥ್ ಜೋನಿನಲ್ಲಿ ಧಾರವಾಡ, ಬೆಳಗಾಂವ, ಉಡುಪಿ, ಪುತ್ತೂರು ಇವು ರೇನ್ ಫೆಡ್ ಗಾರ್ಡನ್ಸ್ ಇರತಕ್ಕ ಪ್ರದೇಶದಲ್ಲಿ ಬರುತ್ತವೆ.

Mr. SPEAKER.—The essential point is, he relies upon the previous Reports where as the Hon'ble Minister relies upon the Reports as they are going to be modified.

Sri M. V. KRISHNAPPA.—Both are governing factors.

ಶ್ರೀ ಎಚ್. ಆರ್. ಕೇಶವಮೂರ್ತಿ.—ರೇನ್‌ಫೆಡ್ ಗಾರ್ಡನ್ಸ್ ಮಲೆನಾಡಿನಲ್ಲಿ ಬರುತ್ತದೆ. ನಮ್ಮಲ್ಲಿ ಖುಷ್ಕಿ ಬಾಗಾಯಿತು ಬರುತ್ತದೆ. ಕೆರೆಯ ಕೆಳಗೆ ಇರತಕ್ಕ ಖುಷ್ಕಿ ಬಾಗಾಯಿತಕ್ಕೆ ಡ್ರೈರೇಟ್ ಹಾಗೂ ವಾಟರ್ ರೇಟ್ ಬೀಳುತ್ತದೆ. 15 ಲಕ್ಷ ಎಕರೆಗೆ 7,55,000 ಅಸೆಸ್ಮೆಂಟ್ ಇದ್ದುದನ್ನು 23,35,000 ರೂಪಾಯಿಗಳಿಗೆ ಏರಿಸಿದ್ದೀರಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ನಿಮ್ಮ ಪ್ರದೇಶದಲ್ಲಿ ಬರುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಮೂಲ ರಿಪೋರ್ಟ್‌ನಲ್ಲಿ ಇರುವುದೇ ಮುಂದೆ ಬೇಸಿಸ್ ಆಗುತ್ತದೆ. ಈಗ ಪ್ರತ್ಯೇಕವಾಗಿ ಕೊಟ್ಟಿರುವ ಈ ವಿವರ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಸರ್ವೆ ರಿಪೋರ್ಟಿನಲ್ಲಿರುವ ಹಾಗೆ ಕಂದಾಯ ಏರಿಸುತ್ತಾರೆ.

Mr. SPEAKER.—If this is also sent along with the report, are you satisfied ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಅದು ಪ್ರಯೋಜನವಾಗುವುದಿಲ್ಲ. ಈ ರಿಪೋರ್ಟಿನಲ್ಲಿ ಇರುವ ಪ್ರಕಾರ ವಸೂಲ್ಮಾಡುತ್ತಾರೆ. ಕನ್ಸಾಲಿಡೇಟೆಡ್ ಫಿಗರ್ಸ್ ಇದ್ದರೂಕೂಡ ಇದನ್ನು ಬಿಟ್ಟು ಕೊಟ್ಟು ಮೂಲ ರಿಪೋರ್ಟಿನಲ್ಲಿರುವ ಹಾಗೆ ಅದನ್ನೇ ಬೇಸ್ ಮಾಡಿಕೊಂಡು ಒಂದಕ್ಕೆ ಎರಡರಷ್ಟು ತೆಗೆದುಕೊಳ್ಳುವುದು ಸಾಧ್ಯವಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಇದರಲ್ಲಿ ಎರಡು ತರಹ ಇದೆ. ಪಟಸ್ಥಳ ಮತ್ತು ಮೋಟೆಸ್ಥಳ ಎಂದು. ಒಂದು ಹರಿದು ಬರುವ ನೀರಿನಿಂದ ನೀರಾವರಿಯಾದರೆ ಅದಕ್ಕೆ ಪಟಸ್ಥಳ ಬಾಗಾಯಿತು ಅನ್ನುತ್ತಾರೆ. ಲಿಫ್ಟ್ ಇರಿಗೇಶನ್‌ದಿಂದ ನೀರು ಎತ್ತಿ ತಂದು ನೀರಾವರಿಯಾದರೆ ಅದಕ್ಕೆ ಮೋಟೆ ಸ್ಥಳ ಎಂದು ಅನ್ನುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಹೇಳುವುದು ಎಲ್ಲವೂ ಕರ್ಣಾನಂದಕರವಾಗಿರುತ್ತದೆ. ಇನ್ನೂರು ಜನ ಸದಸ್ಯರ ಮೇಲೆ ಸಮ್ಮೋಹನಾಸ್ತ್ರ ಬಿಟ್ಟಹಾಗೆ ತಾವು ಹೇಳುತ್ತಿದ್ದೀರಿ. ಆದರೆ ನಿಜವಾಗಿಯೂ ರೈತನ ಮೇಲೆ ಯಾವ ತರಹ ಕಂದಾಯಹಾಕುತ್ತಾರೆ ಎಂಬುದು ಗೊತ್ತಿಲ್ಲ. ನಾಲ್ಕರಷ್ಟು ಹೆಚ್ಚು ಕಂದಾಯದ ಹೊರೆ ರೈತನ ಮೇಲೆ ಬೀಳುತ್ತದೆ. ಇದಕ್ಕಿಂತ ಕಡಿಯಾಗುವುದಿಲ್ಲ. ಇದಲ್ಲದೆ ಇನ್ನೂ ಬೇರೆ ಕಂದಾಯದ ಹೊರೆ ರೈತನ ತಲೆಯ ಮೇಲೆ ಇದೆ. ಲ್ಯಾಂಡ್ ಟ್ಯಾಕ್ಸ್ ಇದೆ, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಇದೆ, ಸೇಲ್ಸ್ ಟ್ಯಾಕ್ಸ್ ಇದೆ, ತೆಂಗಿನಕಾಯಿ ಮೇಲೆ ಸೇಲ್ಸ್ ಟ್ಯಾಕ್ಸ್ ಇದೆ. ಜನ ಮೂರು ತರಹ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದಲ್ಲದೆ ರೈತ ಆಕ್ಟ್ರಾಯ ಕೊಡುತ್ತಾನೆ, ಆ ಮೇಲೆ ರೆಗ್ಯುಲೇಟೆಡ್ ಮಾರ್ಕೆಟ್ ಸೆಸ್ ಕೊಡಬೇಕಾಗುತ್ತದೆ. ಕೆಲವು ಸಲ ಮಾಮೂಲು ಸಹ ಕೊಡಬೇಕಾದ ಸಂದರ್ಭ ಇರುತ್ತದೆ. ಕಮಿಷನ್ ಏಜೆಂಟರು ಧರ್ಮ ಎಂದು ಸ್ವಲ್ಪ ಭಾಗ ಸಹ ತೆಗೆದುಕೊಳ್ಳುತ್ತಾರೆ. ಮಧ್ಯೆ ಕೆಲವರು ಪದಾರ್ಥ,ಕದ್ದು ಬಿಡುತ್ತಾರೆ. ಇದನ್ನು ಯೋಚನೆ ಮಾಡಿ ನೋಡಿದರೆ ರೈತನ ಮೇಲೆ ಟ್ಯಾಕ್ಸ್ ಭಾರ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ಯಾವ ಕಾರಣದಿಂದಲೂ ತೆಂಗಿನಕಾಯಿ ತೋಟದ ಮೇಲೆ ಕಂದಾಯ ಜಾಸ್ತಿ ಮಾಡಬಾರದು ಎಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಕಂದಾಯವನ್ನು ಹಾಕುವುದೇ ಬೇಡ ಎಂದು ಹೇಳುವವರಲ್ಲಿ ನಾನೊಬ್ಬ. ಆದುದರಿಂದ ಅವರ ಮೇಲೆ ಕಂದಾಯ ಹಾಕ ಕೂಡದು. ಈಗಾಗಲೇ ಕಾಫಿ ಪ್ಲಾಂಟೇಷನ್ ಮೇಲೆ ಕಂದಾಯ ಜಾಸ್ತಿಯಾಗಿದೆ. ಯಾವ ಕಾರಣದಿಂದಲೂ ಕಂದಾಯ ಜಾಸ್ತಿ ಆಗಕೂಡದು. ಆದುದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಪುನಃ ವ್ಯವಸ್ಥೆ ಮಾಡುವುದಕ್ಕೆ ಆದೇಶ ಕೊಟ್ಟು ಅಧಿಕಾರಿಗಳಿಗೆ ಕಳಿಸಿಕೊಡಬೇಕು. ಎರಡರಷ್ಟು ಕಂದಾಯ ಇರಕೂಡದು ಎಂದು ಆದೇಶ ಕೊಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಇದು ಅತ್ಯಂತ ಮುಖ್ಯವಾದ ವಿಚಾರ ಎನ್ನುವುದನ್ನು ಎಲ್ಲರೂ ಒಪ್ಪಬೇಕಾಗಿರತಕ್ಕಂಥ ಸಂಗತಿ. ಈ ವಿಷಯದಲ್ಲಿ ಮಾನ್ಯ ಸದಸ್ಯರು, ಹೆಚ್ಚಾಗಿ ವಿರೋಧ ಪಕ್ಷದ ಸದಸ್ಯರು, ಮಾತನಾಡಿದ್ದಾರೆ. ಯಾರು ಮಾತನಾಡಿದರೂ ಕಂದಾಯ ಹೆಚ್ಚಾಗಿರತಕ್ಕದ್ದು ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಬಹುಶಃ ಮಾತನಾಡುವವರಲ್ಲಿ ಉತ್ಸಾಹ ಕಡಿಮೆಯಾಗಿದೆ ಎಂದು ನನಗೆ ಅನಿಸುತ್ತದೆ. ಈ ವಿಷಯದಲ್ಲಿ ಚೆನ್ನಾಗಿ ಬೈಯಬೇಕೆಂದು ತಯಾರಾಗಿದ್ದರು. ಆದರೆ ಸುದೈವದಿಂದ ಯೋಗ್ಯ ರೀತಿಯಲ್ಲಿ ಇದನ್ನು ಸರಕಾರ ತೀರ್ಮಾನ ಮಾಡಿರುವುದರಿಂದ ಅದು ಕಡಿಮೆಯಾಗಿದೆ. ಕಂದಾಯ ಸಾಧಾರಣವಾಗಿ 30 ವರ್ಷಕ್ಕೆ ಒಂದು ಸಲ ರಿವೈಜ್ ಮಾಡತಕ್ಕಂಥಾದ್ದು ಕಾನೂನು ಪ್ರಕಾರ ಪದ್ಧತಿ ಇದೆ. ಕೆಲವು ಕಡೆ ರಿವೈಜು ಆಗಿ 30 ವರ್ಷ ಆಗಿ ಹೋಗಿದೆ. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ 60 ವರ್ಷವಾಯಿತು- ಇನ್ನು ಕೆಲವು ಕಡೆ 40 ವರ್ಷ 50 ವರ್ಷ ಆಗಿದೆ. ಮೂರನೇ ಒಂದು ಭಾಗ ಕಂದಾಯ ಏರಿಸಬೇಕಾಗಿತ್ತು. ಕಂದಾಯ ಎರಡು ಪಟ್ಟು ಏರಿಸಿದ್ದರೆ ಶೇಕಡ 60-70 ರಷ್ಟು ಕೂಡ ಕಡಿಮೆಯಾಗುತ್ತಿರಲಿಲ್ಲ. ಶಾಸ್ತ್ರವಾಂಶ ಈ ರೀತಿ ಇದೆ. ಇದನ್ನು ಜಾಸ್ತಿ ಮಾಡಲಿಲ್ಲ. ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೇವು. ಶ್ರೀ ಕೇಶವ ಮೂರ್ತಿಯವರು ವಿಷಯ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರು ಯೋಗ್ಯವಾದುದು ಮಾತನಾಡಿದರು, ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರು ಬಹುಶಃ ಎಲ್ಲರ ಪ್ರತಿನಿಧಿಯಾಗಿ ಮಾತನಾಡಿದ್ದಾರೆ. ನಿಜವಾಗಿಯೂ ಅವರು ಚನ್ನಾಗಿ ತಿಳಿದುಕೊಂಡು ಮಾತನಾಡಿದ್ದಾರೆ. ಆದುದರಿಂದ ಅವರು ಹೇಳತಕ್ಕದ್ದು ನ್ಯಾಯವಾದುದು. ನಾವು ಮಾಡಿದ್ದು ಏನು ? ಆರೂ ಕಾಲು ಹೆಚ್ಚು ಮಾಡಬೇಕೆಂದು ಕಾನೂನಿನಲ್ಲಿದೆ. ಕಾನೂನು ಪ್ರಕಾರ ಇರುವುದನ್ನು ಎಲ್ಲರೂ ಒಪ್ಪುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಕಡಿಮೆ ಮಾಡಬೇಕೆಂದು ಇಲ್ಲ. ಆದರೆ ಜಾಸ್ತಿ ಮಾಡಬೇಕೆಂದು ಇದೆ. ಮೂರನೇ ಒಂದು ಭಾಗಕ್ಕಿಂತ ಜಾಸ್ತಿಯಾಗಬಾರದು ಎಂದಿದೆ. ಈ ಕಾನೂನು 1880ನೇ ಇಸವಿಯಲ್ಲಿ ಮಾಡಿದ್ದಾರೆ. ಕಾನೂನು ಯಾವಾಗ್ಗೆ ಮಾಡಿದ್ದರೂ ಕೂಡ ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರಲ್ಲವೆ ? ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸಿಜರ್ ಕೋಡ್, ಟ್ರಾನ್ಸಫರ್ ಆಫ್ ಪ್ರಾಪರ್ಟಿ ಕಾನೂನು ಯಾರು ಮಾಡಿದರು ! ಏತಕ್ಕೆ ಒಪ್ಪಿಕೊಂಡಿದ್ದೀರಿ ?

ನಾವೆಲ್ಲರೂ ಆ ಕಾನೂನನ್ನು ಈಗಾಗಲೇ ಒಪ್ಪಿಕೊಂಡಿದ್ದೇವೆ. ಆದರೆ ಆ ಕಾನೂನು ಪ್ರಕಾರವಾಗಿ ಈ ದಿವಸ ನಾವು ಆರೂಕಾಲು ಪರ್ಸೆಂಟ್ ಕಂದಾಯವನ್ನು ಹೆಚ್ಚಿಸುವುದಕ್ಕೆ ಅಧಿಕಾರ

ವನ್ನು ಪಡೆದುಕೊಂಡಿದ್ದೇವೆ. ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಈ ಸಭೆ ಇಲ್ಲಿಗೆ 7 ವರ್ಷಗಳ ಹಿಂದೆಯೇ ಒಪ್ಪಿಗೆಯನ್ನು ಕೊಟ್ಟಿದೆ. ಹಾಗೆ ಆರೂಕಾಲು ಪರ್ಸೆಂಟ್ ಕಂದಾಯವನ್ನು ಜಾಸ್ತಿಮಾಡಬೇಕಾಗಿದ್ದರೆ ನಾವು ಏನೇನು ಕ್ರಮಗಳನ್ನನುಸರಿಸಬೇಕು, ಯಾವ ಯಾವ ಜೋನಿನಲ್ಲಿ ನಮ್ಮ ಆ ಸ್ಟ್ಯಾಂಡರ್ಡ್ ಎಕರೆಗಳಿಗೆ ಅನುಗುಣವಾಗಿ ಅದರ ಸಾರವೇನಿದೆ, ಅದರ ಸ್ಥಿತಿಗತಿಗಳೇನು ಎಂಬುದನ್ನೆಲ್ಲ ವಿಮರ್ಶೆ ಮಾಡಿ ಅದನ್ನು ಒಂದು ಸ್ಥಾನಕ್ಕೆ ಎಳೆಸಲು ಇಲ್ಲಿಗೆ ಕಳೆದ 9 ವರ್ಷಗಳಿಂದಲೂ ಪ್ರಯತ್ನ ನಡೆದಿದೆ. ಆಯಾಯಾ ಪ್ರದೇಶದಲ್ಲಿ ಏನಿದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿ ನಮ್ಮ ಅಧಿಕಾರಿಗಳು ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಅದನ್ನು ನಾವೀಗ ಸಭೆಯ ಮುಂದಿಟ್ಟಿದ್ದೇವೆ. ಅದ್ದರಿಂದ ಈ ವರದಿ ಕಾನೂನು ಪ್ರಕಾರವಾಗಿದೆ, ನೆಲದ ಗುಣ, ಅದರಲ್ಲಿ ಬೆಳೆಯತಕ್ಕ ಬೆಳೆಯ ಹುಲುಸು, ಇದನ್ನೆಲ್ಲ ನೋಡಿ ಇದನ್ನು ತಯಾರಿಸಿದ್ದಾರೆ. ಆದರೆ ಈ ಆರೂಕಾಲು ಪರ್ಸೆಂಟ್ ಕಂದಾಯ ನಿಗದಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದಾಗ್ಯೂ ಇದೂ ಸಹಾ ಜಾಸ್ತಿಯಾಗುತ್ತೆಂದು ನಾನೂ ಮತ್ತು ನನ್ನ ಕ್ಯಾಬಿನೆಟ್ಟಿನ ಇನ್ನಿತರ ಸಹೋದ್ಯೋಗಿಗಳೂ ಎಲ್ಲರೂ ಸೇರಿ ಮತ್ತೆ ಚರ್ಚೆ ಮಾಡಿ ರೈತರಿಗೆ ತೊಂದರೆಯಾಗದಿರಲೀ ಎಂದು ನಾವು ಇದನ್ನು ಮತ್ತೆ 4 ಪರ್ಸೆಂಟಿಗೆ ಇಳಿಸಿದ್ದೇವೆ. ಆದರೆ ನಾವು ಹೀಗೆ ಇದನ್ನು ಕಡಮೆ ಮಾಡಿದ್ದು ಕೆಲವು ಮಾನ್ಯ ಸದಸ್ಯರು ಉಪವಾಸ ಮಾಡಿದ್ದಾಗಿ ಕಡಮೆ ಮಾಡಿದರೆಂದು ಯಾರೂ ಭಾವಿಸಬಾರದು. ಏಕೆಂದರೆ ಆ ನನ್ನ ಮಿತ್ರರು ಮಾಡಿದಂಥ ಉಪವಾಸದ ವೈಖರಿಯನ್ನು ನೋಡಿದಂಥವರೆಲ್ಲರೂ ಆದಕ್ಕೆ ಧಿಕ್ಕಾರ ಎಂದು ಹೇಳಿದ್ದಾರೆ. ಆದರೆ ಆ ಉಪವಾಸ ಉಪವಾಸವಾಗಿತ್ತೋ ಇಲ್ಲವೋ ಅದು ಮಾತ್ರ ನನಗೆ ಗೊತ್ತಿಲ್ಲ. ಅದರಿಂದ ನಮ್ಮ ಮೇಲೆ ಯಾವ ಪರಿಣಾಮವೂ ಕೂಡ ಆಗಲಿಲ್ಲ. ನಾನೂ ಸಹಾ ಅನೇಕ ಕಡೆ ಪ್ರವಾಸ ಮಾಡಿ ನೋಡಿದ್ದೇನೆ. ನನ್ನ ಆ ಸ್ನೇಹಿತರು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿದ್ದಾರೆ. ಆದರೆ ನಾನು ಇಡೀ ರಾಜ್ಯವನ್ನೇ ಸುತ್ತಿದ್ದೇನೆ. ಹೋದ ಕಡೆಗಳಲ್ಲೆಲ್ಲಾ ಜನರನ್ನು ಸಂದರ್ಶನ ಮಾಡಿ ಕೇಳಿದ್ದೇನೆ. ಅವರೆಲ್ಲರೂ ದೇಶಕ್ಕೆ ಕಷ್ಟಕಾಲ ಬಂದಿರುವಾಗ ಸರ್ಕಾರಕ್ಕೆ ಅವರು ಸಹಾಯ ಮಾಡಲು ಸಿದ್ಧರಾಗಿರುವುದಾಗಿ ತಿಳಿಸಿದ್ದಾರೆ. ಅದರಂತೆ ನಮ್ಮ ರಾಜ್ಯ ಬಡತನದ ರಾಜ್ಯವಾಗಿದ್ದರೂ ಜನರು 4 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಸರ್‌ಚಾರ್ಜ್ ರೂಪದಲ್ಲಿ ಕೊಟ್ಟಿದ್ದಾರೆ. ಜನರಿಗೆ ಒಳಗಡೆ ಇರತಕ್ಕ ಸಂಕಟ ಹೊರಗಡೆ ಇರತಕ್ಕ ಬಡತನ ಇವೆರಡೂ ಯಾರಿಗೆ ಗೊತ್ತಿಲ್ಲ? ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದಾಗ್ಯೂ ನಾವು ರಾಷ್ಟ್ರದ ಸಂಪತ್ತನ್ನು ರೂಡಿಸಿ ಅದನ್ನು ಕ್ರೋಡೀಕರಿಸಬೇಕು. ಇದು ನಮ್ಮೆಲ್ಲರ ಕರ್ತವ್ಯ. ಇಲ್ಲಿಗೆ ಸುಮಾರು 50-60 ವರ್ಷಗಳಿಂದಲೂ ನಮ್ಮಲ್ಲಿ ಕಂದಾಯವನ್ನು ಜಾಸ್ತಿ ಮಾಡಿಲ್ಲ, ಈಗ ಅದನ್ನು ಜಾಸ್ತಿ ಮಾಡಬೇಕಾಗಿದೆ. ರಾಜ್ಯಕ್ಕೆ ಅಗತ್ಯವಾಗಿ ಬೇಕಾದ ಹಣ ಸಂಪಾದನೆಗೆ ಅನೇಕ ಮಾರ್ಗಗಳಿವೆ. ಅವುಗಳ ಪೈಕಿ ಇದೂ ಸಹಾ ಒಂದಾಗಿದೆ. ನಾವು ಹುಡುಗರಾಗಿದ್ದಾಗ ಒಂದೂವರಾಣೆ ಕೊಟ್ಟರೆ ಒಂದು ಸೇರು ಸಕ್ಕರೆ ಸಿಗುತ್ತಿತ್ತು, ಒಂದು ರೂಪಾಯಿಗೆ 20 ಸೇರು ರಾಗಿ ಸಿಕ್ಕುತ್ತಿತ್ತು, ಒಂದೂವರೆ ರೂಪಾಯಿಗೊಂದು ಮಣ ಹತ್ತಿ ಇತ್ತು. ಈ ರೀತಿ ನಾವೆಲ್ಲಾ ಮಾರಾಟ ಮಾಡಿದ್ದೇವೆ. ಆದರೆ ಈ ದಿವಸ ಧಾರಣೆಪಾಸಿಗಳು ಒಂದಕ್ಕೆ 10-20 ರಷ್ಟು ಏರಿರುತ್ತವೆ. ವಿರೋಧ ಪಕ್ಷದವರೂ ರೈತರ ವಿಚಾರವನ್ನು ಮಾತನಾಡುತ್ತಾರೆ, ನಾವೂ ಆ ರೈತರ ವಿಚಾರವನ್ನು ಮಾತನಾಡುತ್ತೇವೆ, ಆದರೆ ನಾವು ಅವರ ಬಡತನವನ್ನೂ ನೋಡಿದ್ದೇವೆ, ನಾವು ಸುಖವನ್ನು ಅನುಭವಿಸುವುದಕ್ಕೆ ಅವಕಾಶವಿದ್ದರೂ ಅದನ್ನು ಬಿಟ್ಟು ಬಡತನವನ್ನೂ ಅನುಭವಿಸಿ ನಮಗೆ ಎಲ್ಲಾ ಅನುಭವಗಳೂ ಇವೆ. ದೇಶದಲ್ಲಿ ಸಂಪತ್ತನ್ನು ಹೆಚ್ಚಿಸಬೇಕಾದಂಥ ಕಾಲ ಈಗ ಬಂದಿದೆ. ಅದಕ್ಕಾಗಿ ಎಲ್ಲರೂ ದುಡಿಯಬೇಕು. ನಾನು ಆಗಾಗ್ಗೆ ಸಂಚಾರ ಹೋಗಿದ್ದಾಗ ಜನರನ್ನು ಕೇಳಿದ್ದರಲ್ಲಿ ಈ ಕಂದಾಯವನ್ನು ಹೆಚ್ಚಿಗೆ ಕೊಡುವುದಕ್ಕೆ ನಾವೆಲ್ಲರೂ ಸಿದ್ಧರಾಗಿದ್ದೇವೆ, ಆದರೆ ಅದನ್ನು ನೋಡಿ ತಾವು ಜಾಸ್ತಿಮಾಡಿ 1-2 ರೂಪಾಯಿ ಜಾಸ್ತಿ ಮಾಡಿದರೇನೂ ಚಿಂತೆಯಿಲ್ಲ ಎಂಬುದಾಗಿ ಅವರೆಲ್ಲರೂ ಒಪ್ಪಿದ್ದಾರೆ (ಸಭೆಯಲ್ಲಿ ಕೆಲವರು ನಗುತ್ತಿದ್ದರು) ನೀವು ಹಾಗೆ ನಕ್ಕರೆ ನಮಗೇನೂ ಅದರಿಂದ ಆಗುವುದಿಲ್ಲ. ಯಾರ್ಯಾರು ಹೇಳತಕ್ಕದರಲ್ಲಿ ಏನೇನಿದೆ ಎಂಬುದನ್ನು ಜನರು ತಿಳಿದುಕೊಳ್ಳಬಲ್ಲರು; ಅರ್ಥಮಾಡಿಕೊಳ್ಳಬಲ್ಲರು. ಇನ್ನು ಕೆಲವರು ಆ ಮದ್ರಾಸಿನಲ್ಲಿ ಅವರೆಷ್ಟು ಮಾಡಿದ್ದಾರೆ ನೋಡಿ ಎಂತ ಹೇಳಿದರು. ಆದರೆ ಅಲ್ಲಿ ಕೇವಲ 200 ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದು ಅಣೆಕಟ್ಟಾಗುತ್ತೆ. ನಾವು ಇಲ್ಲಿ 1-2 ಸಾವಿರ ಖರ್ಚು ಮಾಡಿದರೂ ಆಗುವುದಿಲ್ಲ. ಆದ್ದರಿಂದ ಅವರಲ್ಲಿ ಒಟ್ಟು ದೊಡ್ಡ ನೀರಾವರಿ, ಮಧ್ಯಮ ವರ್ಗದ ನೀರಾವರಿ ಮತ್ತು ಸಣ್ಣ ನೀರಾವರಿ ಈ ಯೋಜನೆಗಳಿಗೂ ಮತ್ತು ಬಾವಿಗಳಿಗೂ ಅಲ್ಲಿ ಖರ್ಚುಮಾಡಿರತಕ್ಕ ಹಣ ನಮ್ಮ ಖರ್ಚಿನಲ್ಲಿ ಅವರು ಮಾಡಿರತಕ್ಕ ಖರ್ಚು 100ಕ್ಕೆ 20 ರಷ್ಟು ಆಗಿದ್ದರೆ ಹೆಚ್ಚಾಯಿತು. ಕಾರಣ ಅಲ್ಲಿ ನೆಲದ ಗುಣ ಹಾಗಿದೆ. ಈ ವಿಚಾರಗಳೆಲ್ಲ ರೈತರಾದವರಿಗೆ ಗೊತ್ತೆ ಇರುತ್ತೆ. ರಾಜ್ಯಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿ ಜನರಿಗೇನು ಅನುಕೂಲವಾಗಿದೆ ಎಂಬುದು ನಿಷ್ಪಕ್ಷಪಾತಿಗಳಿಗೆ

(ಶ್ರೀ ಎಸ್. ನಿಜಲಿಂಗಪ್ಪ)

ಗೊತ್ತಿಲ್ಲದೆ ಇಲ್ಲ. ದೇಶಾದ್ಯಂತವೂ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದೇವೆ, ಅನೇಕ ಕೆರೆ ಕಾಲುವೆಗಳನ್ನು ಮಾಡಿಸಿದ್ದೇವೆ, 40 ವರ್ಷಗಳ ಹಿಂದೆ ಇದ್ದುದಕ್ಕೂ ಈಗಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಹಿಂದೆ ಉತ್ಪನ್ನಕ್ಕೆ ಅನುಕೂಲವಾಗಿದ್ದ ಭೂಮಿ ಕೇವಲ 9 ಕೋಟಿ ಎಕರೆಗಳು ಮಾತ್ರ ಇತ್ತು, ಆದರೆ ನಾವು 15 ವರ್ಷಗಳಲ್ಲೇ 5 ಕೋಟಿ ಎಕರೆಗಳನ್ನು ಹೆಚ್ಚು ಮಾಡಿದ್ದೇವೆ. ಇನ್ನು ಜನರ ಆರೋಗ್ಯ ಭಾಗ್ಯದ ವಿಚಾರ ತೆಗೆದುಕೊಂಡರೆ ಈಗ ಅದು ಬಹಳ ಮಟ್ಟಿಗೆ ಸುಧಾರಣೆಯಾಗಿದೆ. ಹಿಂದೆ ಜನರು ತಿನ್ನುತ್ತಿದ್ದ ಊಟ ಅವರು ಹಾಕುತ್ತಿದ್ದ ಬಟ್ಟೆ ಇವುಗಳಲ್ಲಿ ಆಗ್ಗೂ ಈಗ್ಗೂ ಬಹಳ ವ್ಯತ್ಯಾಸವಿದೆ. ಜನರು ಈಗ ಉನ್ನತ ಮಟ್ಟದಲ್ಲಿದ್ದಾರೆ. ದೇಶದಲ್ಲಿ ವಿದ್ಯಾವಂತರ ಸಂಖ್ಯೆಯೂ ಹೆಚ್ಚಿದೆ. ಕಳೆದ 5 ವರ್ಷಗಳಿಂದಲೂ ದೇಶದಲ್ಲಿ ಧಾರಣೆವಾಸಿಗಳು ಜಾಸ್ತಿಯಾಗಿ ರೈತನ ಸ್ಥಿತಿಗತಿಗಳು ಬಹಳ ಸುಧಾರಿಸಿದೆ. ಆದರೆ ಇಲ್ಲಿ ನಮಗೂ ನಿಮಗೂ ತೃಪ್ತಿಯಿಲ್ಲ. ಆದರೆ ನಾವು ರಾಜ್ಯದಲ್ಲಿ ಇನ್ನೂ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸತಕ್ಕ ಬಗ್ಗೆ ಹೆಚ್ಚು ವರಮಾನಬೇಕೆಂದು ಹೇಳುತ್ತಿದ್ದೇವೆ. ಅದನ್ನು ವಿರೋಧಪಕ್ಷದವರು ಒಂದು ರಾಜಕೀಯಕ್ಕೆ ಬಳಸಿಕೊಂಡು ಬಾಯಿಗೆ ಬಂದಹಾಗೆಲ್ಲ ಬಯ್ಯುವುದಕ್ಕೆ ಅದಕ್ಕೇನೂ ಲಂಗೂಲಗಾಮು ಯಾವುದೂ ಇಲ್ಲ; ಸಾಲದ್ದಕ್ಕೆ ಆಗಾಗ್ಗೆ ಹೆದರಿಸುತ್ತಲೂ ಇದ್ದಾರೆ. ನಾವು ನಡೆಸುವುದನ್ನು ನಾವು ನಡೆಸುತ್ತಿದ್ದೇವೆ, ಅವರು ನಡೆಸುವುದನ್ನು ಅವರೂ ನಡೆಸುತ್ತಿದ್ದಾರೆ. ನಡೆಸಲಿ, ಅದಕ್ಕೆ ನಮಗೇನೂ ಹೆದರಿಕೆಯಿಲ್ಲ. ಎಷ್ಟೋ ವೇಳೆ ಅನೇಕ ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ನನ್ನನ್ನು ಬೇಕಾದ ಹಾಗೆ ಹೊಗಳಿಯೂ ಇದ್ದಾರೆ. ಎಷ್ಟೋ ಸಾರ್ತಿ ನಮ್ಮ ಶ್ರೀ ಕೆ. ಪಿ. ರೇವಣಸಿದ್ದಪ್ಪನವರೇ ಬಂದು ಹೊಗಳಿದ್ದಾರೆ. ಈ ದಿವಸ ಬೇಕಾಗಿದ್ದರೆ ನಾನು ನಾಲ್ಕು ಜನರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಲಿ ಈಗಲೂ ಅವರು ಏನುಬೇಕಾದರೂ ಹೇಳುತ್ತಾರೆ. ಶ್ರೀ ರೇವಣಸಿದ್ದಪ್ಪನವರಿಗೆ ನಾಟಕದ ವಿಚಾರ ಚೆನ್ನಾಗಿ ಅನುಭವವಿರುವಂತೆ ಕಂಡುಬರುತ್ತಿದೆ. ನನ್ನನ್ನೇ ಒಬ್ಬ ರಾಜನನ್ನಾಗಿ ಮಾಡಿ ಕೂಡಿಸಿ, ಕ್ಷೇಮವೇನ್ನೆ ಸಕಲ ಪ್ರಜೆಗಳೂ ಎಂದು ಹಾಡನ್ನು ಹಾಡಿಬಿಡುತ್ತಾರೆ. ಅವರಿಗೆ ವಿದೂಷಕನ ಪಾತ್ರದ ಅನುಭವ ಚೆನ್ನಾಗಿದ್ದಂತೆ ಕಂಡು ಬರುತ್ತದೆ. ನಾಟಕಗಳಲ್ಲಿ ಪಾತ್ರಗಳ ವಿವರವನ್ನು ಪ್ರೇಕ್ಷಕರಿಗೆ ಪರಿಚಯ ಮಾಡತಕ್ಕ ಬಗ್ಗೆ ಆ ವಿದೂಷಕನ ಪಾತ್ರದವನು, ಈಗ ಬಂದವರು ನೀನು ಯಾರಯ್ಯಾ ಯಾರು ಎಂದು ಕೇಳತಕ್ಕ ರೀತಿಯೆಲ್ಲಾ ಅವರಿಗೆ ಚೆನ್ನಾಗಿ ಗೊತ್ತಿದೆ. ಹೀಗೆ ಅವರಲ್ಲಿ ಒಂದು ನಾಟಕದ ಕಲೆಯಿದೆ ಅದು ಏನೇ ಇರಲಿ, ವಿಚಾರ ಇದು, ಜನ ತಿಳಿದುಕೊಂಡಿದ್ದಾರೆ. ಏನು ಹಣ ಬರುತ್ತದೆ ಅದಕ್ಕಿಂತಲೂ ಹೆಚ್ಚು ಹಣ ಸಂಪಾದನೆ ಮಾಡುತ್ತೇವೆ, ಎಲ್ಲಾ ರಾಜ್ಯಗಳಲ್ಲೂ ಸರ್ಕಾರದವರು ರೈತನಿಗಾಗಿ ಹೆಚ್ಚು ಖರ್ಚುಮಾಡುತ್ತಾ ಇದ್ದಾರೆ ಎಂಬುದು ಅವರಿಗೆ ಗೊತ್ತು. ಆದ್ದರಿಂದ ತಾನು ಹಿಂದೆ ಬೀಳಬಾರದು ತನ್ನ ಕರ್ತವ್ಯವನ್ನು ಪಾಲಿಸುವುದು ತನ್ನ ಧರ್ಮ ಎಂದು ಪ್ರತಿಯೊಬ್ಬ ರೈತನೂ ತಿಳಿದುಕೊಂಡಿದ್ದಾನೆ. ಏನೇ ಪ್ರಚಾರ ನಡೆದರೂ ಕೂಡ ರೈತ ಬುದ್ಧಿವಂತ, ತನ್ನ ಕ್ಷೇಮ ಏನು, ಯಾವ ಸರ್ಕಾರ ತನಗೆ ಏನು ಅನುಕೂಲ ಮಾಡಿಕೊಟ್ಟಿದೆ ಎಂಬುದನ್ನು ತಿಳಿದುಕೊಂಡಿರತಕ್ಕ ಮನುಷ್ಯ ಅತ. ಆದ್ದರಿಂದ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಸಹಜವಾಗಿ ಅವನು ಅಜ್ಞಾನಿ ಎಂದು ಅದು ಏನೋ ನನಗೆ ಗೊತ್ತಿಲ್ಲ. ಈ ರೀತಿ ಇನ್ನೂ ಅನೇಕ ಸೂಚನೆಗಳು ಬಂದಿವೆ, ಆದರೆ ನಾವು ಏನು ಮಾಡಿದ್ದೇವೆ ಎನ್ನುವುದನ್ನು ನೋಡಬೇಕು. ಜನಗಳಿಗೆ ಸಾಧಾರಣವಾಗಿ ಒಂದು ಎರಡಕ್ಕಿಂತ ಜಾಸ್ತಿಯಾಗುವುದಿಲ್ಲ ಎಂದು ಹೇಳಿ ನಾವು ಆಶ್ವಾಸನೆ ಕೊಟ್ಟಿದ್ದೆವು. ಲೆಕ್ಕ ಹಾಕಿದ್ದರಲ್ಲಿ ಕಾನೂನು ಪ್ರಕಾರ ಶೇಕಡ ಆರೂಕಾಲು ಪರ್ಸೆಂಟ್‌ನಂತೆ ಹಾಕಬೇಕಾಗಿತ್ತು ಅದಕ್ಕೆ ವಿರುದ್ಧವಾಗಿ ಹೋಗುವುದಕ್ಕೆ ಆಗುತ್ತಾ ಇರಲಿಲ್ಲ. 9 ವರ್ಷ ಕಷ್ಟಪಟ್ಟು ತಯಾರುಮಾಡಿ ಕಳುಹಿಸಿರತಕ್ಕ ಈ ವರದಿಗಳನ್ನು ತಳ್ಳಿಹಾಕುವುದು ಸರಿಯಲ್ಲ, ಒಪ್ಪಿಕೊಂಡಿದ್ದೇವೆ, ಒಪ್ಪಿಕೊಳ್ಳುತ್ತೇವೆ. ಈ ಸಭೆ ಸಹ ಒಪ್ಪಿಕೊಳ್ಳುತ್ತದೆ. ಆದರೆ ಇದರಿಂದ ಏನು ಅನಾನುಕೂಲ ಆಗಿದೆ, ಜನಗಳ ಅಭಿಲಾಷೆ ಏನು, ಪ್ರಜೆಗಳ ರೈತರ ಕಷ್ಟ ಏನು, ಏನು ಮಾಡಿದರೆ ಸಹಾಯವಾದೀತು ಎಂಬುದನ್ನೆಲ್ಲಾ ಆಲೋಚನೆ ಮಾಡಿ ಇವತ್ತು ಶಾಸ್ತ್ರೀಯವಾಗಿ ಬಂದಿರತಕ್ಕ ಈ ರಿಪೋರ್ಟುಗಳನ್ನು ನೋಡಿ ಸಾಧಾರಣವಾಗಿ ಒಂದರಿಂದ ಎರಡರಷ್ಟು ಇರಬೇಕು ಅದಕ್ಕಿಂತ ಮೀರಬಾರದು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಈ ಕಾನೂನನ್ನು ಬದಲಾವಣೆ ಮಾಡಿದ್ದೇವೆ, ಇದನ್ನು ಒಪ್ಪಿಕೊಳ್ಳಬೇಕು. ಆ ರೀತಿ ಬದಲಾವಣೆ ಮಾಡಿ ಶೇಕಡ 4ಕ್ಕೆ ಇಳಿಸಿ, ಜನಗಳಿಗೆ ಅನಾನುಕೂಲವಾಗಬಾರದು ಎಂದು ಮಾಡಿದ್ದೇವೆ. ರೈತನು ಎಷ್ಟೇ ಸಂಪಾದನೆ ಮಾಡಿದರೂ ಸಹ, ಬೆಲೆ ಒಂದಕ್ಕೆ ಹತ್ತರಷ್ಟು ಆಗಿದ್ದರೂ ಸಹ ಅವನಿಗೆ ಅನುಕೂಲ ಈಗ ಹೆಚ್ಚಾಗಿದೆ, ಅವನು ಈಗ ಕಾಫಿ, ಟೀ ಕುಡಿಯುವ ಸ್ಥಿತಿಯಲ್ಲಿ ಇದ್ದಾನೆ. ಹಿಂದೆ ನಾವು ಹಳ್ಳಿಗಳಿಗೆ ಹೋದರೆ ಪಟೇಲ್ ಶ್ಯಾನುಭೋಗರು ಹೆದರಿಕೊಂಡು ನಮಗೆ ಕಾಫಿ ತಂದುಕೊಡುತ್ತಾ ಇದ್ದರು ಆಗ ಯಾರ ಮನೆಯಲ್ಲೂ

ಸಹ ಕಾಫಿ ಸಿಕ್ಕುತ್ತಾ ಇರಲಿಲ್ಲ. ಈಗ ಸರ್ವೆಸಾಧಾರಣವಾಗಿ ರೈತನ ಮನೆಯಲ್ಲಿ ಕಾಫಿ, ಟೀ ಸಿಕ್ಕುತ್ತದೆ. ಇದು ಎಲ್ಲಿಂದ ಬಂತು? ಆತನ ಉತ್ಪಾದನಾ ಶಕ್ತಿ ಜಾಸ್ತಿಯಾಗಿದೆ. ಇದು ನ್ಯಾಯವಾದ ಮಾತು, ಎಲ್ಲರ ಅನುಭವಕ್ಕೂ ಬಂದಿರತಕ್ಕ ಮಾತು, ಪ್ರಚಾರಕ್ಕಾಗಿ ಬೇರೆ ರೀತಿಯಲ್ಲಿ ಹೇಳುವುದಾದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಇವತ್ತು ನಾನು ಆಲೋಚನೆ ಮಾಡಿದೆ. ಅವನ ಮೇಲೆ ಭಾರ ಜಾಸ್ತಿ ಬೀಳಬಾರದು ಎಂದು ಹೇಳಿ ಒಂದು, ಎರಡರಷ್ಟಕ್ಕಿಂತ ಜಾಸ್ತಿಯಾಗ ಕೂಡದು ಎಂದು ಹೇಳಿದ್ದೇನೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಶೇಕಡ ನಾಲ್ಕರಂತೆ ಮಾಡಿದ್ದಾರೆ. ಮಲೆನಾಡಿನಲ್ಲಿ ಎರಡರಷ್ಟಕ್ಕಿಂತ ಜಾಸ್ತಿ ಹೋಗುವುದಿಲ್ಲ ಎಂದು ಹೇಳಿದ್ದೇನೆ ಎಂದ ಮೇಲೆ ಇದು ಶಾಸ್ತ್ರೀಯವಾಗಿ ಇಲ್ಲವೇ? ಆರೂಕಾಲು ಇದ್ದುದ್ದನ್ನು 4ಕ್ಕೆ ಇಳಿಸಿದ ಮೇಲೆ ಕಡಿಮೆ ಯಾಯಿತೇ ಹೊರತು ಬೇರೆ ಅಲ್ಲ. ಈ ವರದಿಯನ್ನು ಒಪ್ಪಿಕೊಂಡಿದ್ದೇವೆ. ಯಾರಿಗೂ ಅನ್ಯಾಯ ವಾಗಬಾರದು ಎಂದು ಹೇಳಿ ಒಂದು ದಿವಸ ಅಲ್ಲ ಹತ್ತು ದಿವಸ ಕುಳಿತುಕೊಂಡು ಆಲೋಚನೆ ಮಾಡಿ ಇದನ್ನು ಮಾಡಿದ್ದೇವೆ. ಸಾಧಾರಣವಾಗಿ 3-4 ಕಡೆ ಜಾಸ್ತಿಯಾಗಿರಬಹುದು ಅದು ಸರಾಸರಿಯಾಗಿ ಎರಡೂವರೆ ಇದ್ದದ್ದು ಮೂರು ಆಗಿದೆ. 24 ಇದ್ದದ್ದು 31 ಆಗಿದೆ, ಎಂದರೆ ಸರಾಸರಿ ಶೇಕಡ 30 ಹೆಚ್ಚಾಗಿದೆ. ಇದೆಲ್ಲವನ್ನೂ ಕೂಡ ಪುಟ್‌ರೂಲ್ ಹಾಕಿ ಎಲ್ಲೆಲ್ಲಿ 30 ಆಗಿದೆ ಎಲ್ಲೆಲ್ಲಿ 33 ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ 4 ಆಣೆ, 2 ಆಣೆ ಕೂಡ ಇತ್ತು. ಅಂಥಾದ್ದಕ್ಕೆ ಈಗ 6 ಆಣೆ ಮಾಡಿದ್ದೇವೆ, ಸ್ವಲ್ಪ ಜಾಸ್ತಿ ಎಂದರೆ 8 ಆಣೆ ಮಾಡಿರಬಹುದು. ಕೆಲವು ಕಡೆ ಸೊಗಸಾದ ಜಮೀನು ಇದೆ ಅಲ್ಲಿ ನೂರಕ್ಕೆ ನೂರು ಜಾಸ್ತಿಯಾಗಿರಬಹುದು. ಅದನ್ನು ಜಾಸ್ತಿ ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವರಿಗೆ ಉತ್ಪನ್ನವೂ ಕೂಡ ಸಾಕಾದಷ್ಟು ಇರುತ್ತದೆ. ಕೆಲವು ಕಡೆಗಳಲ್ಲಿ ಎಲ್ಲಿ ಜಾಸ್ತಿ ಇತ್ತೋ ಅಲ್ಲಿ ಕಡಿಮೆ ಕೂಡ ಆಗಿದೆ, ಇದು ಶಾಸ್ತ್ರೀಯವಾಗಿ ಮಾಡಿರುವುದು. ಆದ್ದರಿಂದ ತಾರತಮ್ಯ ಮಾಡಿದ್ದಾರೆ ಎಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ.

ಇನ್ನೊಂದು ವಿಚಾರ ಬಂತು. ಸೆಸ್ ಒಬ್ಬ ಮನುಷ್ಯ ಏನು ಕೊಡುತ್ತಾ ಇದ್ದಾನೆ ಎಂದರೆ, ಖುಷ್ಕಿ ಮತ್ತು ತರಿ ಎರಡೂ ಸೇರಿ ಒಂದು ಇಂಟಿಗ್ರೇಟೆಡ್ ರೇಟ್ ಇತ್ತು ಎಲ್ಲದರ ಮೇಲೂ ಅವನು ಕೊಡುತ್ತಾ ಇದ್ದ, ಇವತ್ತು ತೀರ್ಮಾನ ಮಾಡಿರುವಂತೆ ಬರೀ ಖುಷ್ಕಿ ಕಂದಾಯದ ಮೇಲೆ ಮಾತ್ರ ಸೆಸ್ ಕೊಡಬೇಕೆಂದು ಆಗಿದೆ ಅದನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ ತರೀ ಕಂದಾಯದ ಮೇಲೆ ಸೆಸ್ ಹಾಕುವುದಿಲ್ಲ. ಹಾಗೂ ಕೂಡ ರೈತನ ಮೇಲೆ ಕಡಿಮೆ ಭಾರ ಬೀಳುತ್ತದೆ.

ಮತ್ತೊಂದು ವಿಷಯ ಏನೆಂದರೆ: ಕಾಫೀ ತೋಟದವರಿಗೆ ಕಡಿಮೆ ಮಾಡಿದ್ದೀರಿ, ಏನೋ ಪ್ರಭಾವಕ್ಕೆ ಒಳಗಾಗಿದ್ದೀರಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಯಾರ ಪ್ರಭಾವಕ್ಕೂ ಒಳಗಾಗಬೇಕಾಗಿಲ್ಲ. ನಾವು ಹಣ ಮಾಡಬೇಕೆಂದು ಮಾಡಿದ್ದೇವೆ ಎಂದು ಹೇಳುವ ಎದುರುಗಡೆ ಕುಳಿತಿರತಕ್ಕ ಸದಸ್ಯರಲ್ಲೇ ಭಿನ್ನಾಭಿಪ್ರಾಯ ಬಂದಿದೆ, ಅವರಲ್ಲೇ ಬಹಳ ರಾಜಕೀಯ ನಡೆಯುತ್ತಾ ಇದೆ. ಇದರಲ್ಲಿ ಯಾರಿಗೋ ಏನೋ ಸಹಾಯ ಮಾಡಬೇಕು ಎಂದು ಹೇಳಿ ನಾವು ಏನನ್ನೂ ಮಾಡಿಲ್ಲ. ನ್ಯಾಯ, ಅದನ್ನೂ ಜಾಸ್ತಿ ಮಾಡಬೇಕಾಗುತ್ತದೆ, ಕಾಫಿ ಬೆಳೆಯುತಕ್ಕವರು ಒಂದಕ್ಕೆ ಆರರಷ್ಟು ಏಳರಷ್ಟಾದರೂ ಕೊಡಬೇಕು ಎನ್ನುವುದು ನ್ಯಾಯ, ಅವರಿಗೆ ಬೇಕಾದಷ್ಟು ಉತ್ಪನ್ನ ಇದೆ, ಅನೇಕರು ಅನುಕೂಲಸ್ಥರು ಆಗಿದ್ದಾರೆ ಅದರ ಜೊತೆಗೆ ಅವರಿಂದ ನಮಗೂ ಅನುಕೂಲವಾಗುತ್ತಾ ಇದೆ. ನ್ಯಾಯವಾಗಿ ಅವರು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಕೊಡುತ್ತಾ ಇದ್ದಾರೆ. ಆದ್ದರಿಂದ ಅದರಿಂದಲೇ ಅವರಿಗೆ ಒಂದಕ್ಕೆ 7-8, 10ರಷ್ಟು ಬೀಳುತ್ತದೆ, ಆ ರೀತಿ ಬೀಳುವುದು ಅನ್ಯಾಯ ಎಂದು ಅವರೂ ತಿಳಿದುಕೊಳ್ಳಬಾರದು, ನಾವೂ ತಿಳಿದುಕೊಳ್ಳಬಾರದು. ಇವತ್ತು ಏನಾಗಿದೆ ಬಹುಶಃ ಯಾರಿಗೆ ಅನಾನುಕೂಲವಾಗಿದೆಯೋ ಏನೋ? ಅಂತೂ ಅನಾನುಕೂಲವಾಗಿದೆ ಎಂದು ಅನ್ನುವವರು ತೋಟಗಾರರು.

ಶ್ರೀ ಸಂಜೀವನಾಥ ಐಕಳ.—ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಬಹಳ ಅನಾನುಕೂಲವಾಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಅವರು ನೋಡಿಲ್ಲ ಎಂದು ಕಾಣುತ್ತದೆ, ಅವರಿಗೇ ಬಹಳ ಅನುಕೂಲವಾಗಿರುವುದು. ತೆಂಗಿನ ತೋಟ, ಅಡಿಕೆ ತೋಟ ಅಲ್ಲೇ ಜಾಸ್ತಿಯಾಗಿ ಮಾಡಿದ್ದಾರೆ, ಸಾವಿರ ತೆಂಗಿನಕಾಯಿ 200-250 ರೂಪಾಯಿ ಇದ್ದದ್ದು ಇವತ್ತು 320-400 ರೂಪಾಯಿ ಆಗಿದೆ. ಆದ್ದರಿಂದ ಬಹುಶಃ ಅವರಿಗೆ 3-4ರಷ್ಟು ಜಾಸ್ತಿ ಮಾಡಬಹುದು ಅದು ನ್ಯಾಯ ಎಂದು ಅವರೇ ಒಪ್ಪಿಕೊಳ್ಳಬೇಕು. ಅದೇ ರೀತಿಯಲ್ಲಿ ಅಡಿಕೆ ವಿಷಯದಲ್ಲಿ ಹೇಳುವುದಾದರೆ, ಸುಮಾರು ಹತ್ತು ವರ್ಷಗಳ ಕೆಳಗೆ ಅಡಿಕೆ ತೋಟಗಳನ್ನೆಲ್ಲಾ ಮಾರಿಕೊಂಡು ಬಿಡಬೇಕೆಂಬ ಸ್ಥಿತಿಗೆ ಬಂದು ಹೋಗಿತ್ತು. ಚಿಕ್ಕಮಗಳೂರು, ಶಿವಮೊಗ್ಗಾ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯ

(ಶ್ರೀ ಎಸ್. ನಿಜಲಿಂಗಪ್ಪ)

ಜನಗಳು ಬಂದು ಈ ವಿಷಯವನ್ನು ನನ್ನ ಹತ್ತಿರ ಹೇಳಿದಾಗ ನಾನು ಆಗಿದ್ದ ಆರ್ಥಿಕ ಮಂತ್ರಿ ಶ್ರೀ ಸಿ. ಡಿ. ದೇಶಮುಖ್ ಅವರನ್ನು ಕಂಡು ಸಾವಿರಾರು ರೂಪಾಯಿ ಖರ್ಚುಮಾಡಿ ಜನ ಅಡಿಕೆ ತೋಟಗಳನ್ನು ಬೆಳೆಸಿದ್ದಾರೆ ಅವರ ಮೇಲೆ ತೆರಿಗೆ ಹಾಕಿದರೆ ಕೋಟ್ಯಾಂತರ ರೂಪಾಯಿ ಅವರಿಗೆ ಲುಕ್ಸಾನಾಗುತ್ತದೆ ಆವರ ಗತಿ ಏನು? ಅಷ್ಟೇ ಅಲ್ಲ ನಮ್ಮ ಮಹಾರಾಷ್ಟ್ರದಲ್ಲಿ ಕೆಲವು ಭಾಗ ಇದೆ, ಕರ್ನಾಟಕದಲ್ಲಿ ಕೆಲವು ಭಾಗ ಇದೆ, ಬೆಂಗಾಲ್‌ನಲ್ಲಿ ಕೆಲವು ಭಾಗ ಇದೆ, ಅಸ್ಸಾಂನಲ್ಲಿ ಕೆಲವು ಭಾಗ ಇದೆ, ಅಂತಹ ಸಂದರ್ಭದಲ್ಲಿ ಲಕ್ಷಾಂತರ ಜನರಿಗೆ ಲುಕ್ಸಾನಾಗುತ್ತದೆ, ಇದನ್ನು ತಪ್ಪಿಸಬೇಕಾದರೆ ಹೊರಗಡೆಯಿಂದ ಬರತಕ್ಕ ಅಡಿಕೆಗೆ ದಯಮಾಡಿ ಸುಂಕವನ್ನು ಹಾಕಬೇಕೆಂದು ಹೇಳಿದೆ. ಮತ್ತು ಒತ್ತಾಯಮಾಡಿದೆ, ಒತ್ತಾಯಮಾಡಿದ ಮೇಲೆ ಅವರು ಒಂದು ಪೌಂಡ್ ಅಡಿಕೆಗೆ ಒಂದು ರೂಪಾಯಿ ಇಂಪೋರ್ಟ್ ಡ್ಯೂಟಿ ಹಾಕಿದರು. ಆ ಲಾಗಾಯ್ತು ಅಡಿಕೆ ತೋಟಗಾರರು ಯಾವ ಬಡತನದ ಸ್ಥಿತಿಯಲ್ಲಿ ಇದ್ದರೋ ಅದು ಹೋಗಿ, ಇವತ್ತಿನ ದಿವಸ ಒಂದು ಎಕರೆಗೆ 4 ಸಾವಿರ ರೂಪಾಯಿಗಳವರೆಗೂ ಬರುವಂತಹ ಸ್ಥಿತಿಯಲ್ಲಿ ಇದ್ದಾರೆ. ಇಂತಹ ಸಂದರ್ಭದಲ್ಲಿ 4 ರೂಪಾಯಿ ಕೊಡುತ್ತಾ ಇದ್ದ ಮನುಷ್ಯ 16 ರೂಪಾಯಿ ಕೊಡುವುದು, 16 ರೂಪಾಯಿ ಕೊಡತಕ್ಕ ಮನುಷ್ಯ 60 ರೂಪಾಯಿ ಕೊಡುವುದು ಏನೂ ಜಾಸ್ತಿಯಲ್ಲ. ಅವರೂ ಕೂಡ ತಿಳಿದುಕೊಳ್ಳಬೇಕು, ನನಗೂ ಅನುಕೂಲವಾಗಿದೆ ಸಾವಿರಾರು ರೂಪಾಯಿ ಬೆಳೆ ಬೆಳೆಯುತ್ತಾ ಇದ್ದೇನೆ ಆದ್ದರಿಂದ ನ್ಯಾಯವಾಗಿ ಕೊಡಬೇಕಾದ್ದನ್ನು ಕೊಡೋಣ ಎಂಬುದನ್ನು ಅಡಿಕೆ ತೋಟದವರೂ ಕೂಡ ತಿಳಿದುಕೊಂಡಿದ್ದಾರೆ. ಆದ್ದರಿಂದ ಇದು ಶಾಸ್ತ್ರೀಯವಾಗಿದೆ. ಎಷ್ಟು ಹಾಕಬೇಕೋ ಅಷ್ಟನ್ನು ಹಾಕಿದ್ದಾರೆ ಆದ್ದರಿಂದ ಇದು ಜಾಸ್ತಿಯಾಗುವುದಿಲ್ಲ ಎಂದು ಹೇಳುತ್ತೇನೆ.

5-00 P.M.

ನಮ್ಮ ಜಿಲ್ಲೆಯಲ್ಲಿ ಸಾವಿರಾರು ಎಕರೆಗಳಲ್ಲಿ ತೆಂಗಿನ ಗಿಡ ಹಾಕುತ್ತಿದ್ದಾರೆ, ಬೇಕಾದರೆ ತೋರಿಸುತ್ತೇನೆ. ಈಗ ಉಳಿದಿರುವುದು ಏನೆಂದರೆ ಬಹುಶಃ ನೀರಾವರಿ—ವಿಚಾರ. ನೀರಾವರಿ ಜಮೀನಿಗೆ ಎಲ್ಲಿ ಜಾಸ್ತಿ ಮಾಡುತ್ತಾರೋ ಎಂಬ ಭಯವಿದೆ, ಅದಕ್ಕೆ ಸರ್ವೇಸಾಧಾರಣವಾಗಿ ಒಂದಕ್ಕೆ ಎರಡರಷ್ಟಕ್ಕಿಂತ ಜಾಸ್ತಿಯಾಗುವುದಿಲ್ಲ. ಹಳೆಯ ಮೈಸೂರಿನಲ್ಲಿ ಮತ್ತು ಇತರ ಕಡೆ ಸಣ್ಣ ಕೆರೆ ಕೆಳಗೆ 3—4 ತಿಂಗಳಿಗೊಂದು ಫಸಲು ಅಂದರೆ ಏಕ್ ಸಾಲ್ ಕಲ್ಟಿವೇಷನ್ ಇದ್ದು ಒಂದೇ ಫಸಲು ಬರುವ ಕಡೆ ಸ್ವಲ್ಪ ಹೆಚ್ಚು ಕಡಮೆ 5 ರೂಪಾಯಿ ಹಾಕುತ್ತೇವೆ ಎಂದು ಹೇಳಿದೆ. ಎರಡು ಬೆಳೆಯಾಗುವ ಕಡೆ ಸ್ವಲ್ಪ ಹೆಚ್ಚು ಕಡಮೆ 10 ರೂಪಾಯಿ ಹಾಕಿದರೆ ತೊಂದರೆಯಾಗುವುದಿಲ್ಲವೆಂಬುದು ರೈತರಿಗೆ ಗೊತ್ತಿದೆ. ಉಳಿದ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಯಾಗುವ ಕಡೆ ವರ್ಷ ಪೂರ್ತಿ ನೀರು ದೊರೆಯುವ ಕಡೆ ಸಾಧಾರಣವಾಗಿ 25 ರೂಪಾಯಿಗೆ ಜಾಸ್ತಿಯಿಲ್ಲದಂತೆ ವಾಟರ್ ರೇಟ್ ಹಾಕಬೇಕೆಂದಿದೆ. ಜಮೀನನ್ನು ಎರಡು ಭಾಗ ಮಾಡಿ ವಾಟರ್ ರೇಟ್ ಹಾಕುವಾಗ ಸಣ್ಣ ಸಣ್ಣ ಕೆರೆ ಕೆಳಗಿರುವುದಕ್ಕೆ ಹೆಚ್ಚು ಕಡಮೆ 5 ರೂಪಾಯಿ ಆಗಬಹುದು, ದೊಡ್ಡ ದೊಡ್ಡ ಕೆರೆಗಳ ಕೆಳಗಿರುವುದಕ್ಕೆ ಸುಮಾರು 25 ರೂಪಾಯಿ ಆಗಬಹುದು. ನೀರಾವರಿ ಬೆಳೆ ತೆಗೆಯುವವರಿಗೆ ಅವರು ಎಷ್ಟೇ ಅನುಕೂಲಸ್ಥರಾದರೂ ಒಂದೇ ಸಮನೆ ಜಾಸ್ತಿ ಹಾಕಬಾರದು ಎಂದು ಮದ್ರಾಸು, ಆಂಧ್ರ ಮತ್ತು ಅಕ್ಕಪಕ್ಕದಲ್ಲಿರುವ ರಾಜ್ಯಗಳಲ್ಲಿ ಯಾವ ದರವಿದೆ ಎಂದು ನೋಡಿ ದರ ನಿಗದಿ ಮಾಡಲಾಗಿದೆ, ಸಾಧಾರಣವಾಗಿ ಸರಾಸರಿ ಏನು ಬೀಳುತ್ತದೆ ಅದನ್ನು, ಸುಮಾರು 5 ರೂಪಾಯಿನಿಂದ 25 ರೂಪಾಯಿನವರೆಗೆ ಹಾಕುವುದನ್ನು ಒಪ್ಪಿಕೊಂಡಿದ್ದಾರೆ. ಅದರಂತೆ ಮಾಡಿದ್ದೇವೆ. ಸೆಸ್ ಬೇರೆ ಇದೆ. ಆದುದರಿಂದ ಯಾರಿಗೂ ಅನಾನುಕೂಲವಾಗುವುದಿಲ್ಲ. ಈ ಎಲ್ಲಾ ದೃಷ್ಟಿಯಿಂದ ಈಗ ಸರಕಾರ ನ್ಯಾಯ ರೀತಿಯಿಂದ ಮಾಡಿರುವುದನ್ನು ನಿಷ್ಪಕ್ಷಪಾತವಾಗಿ ನಿಷ್ಕಲ್ಮಷ ಮನಸ್ಸಿನಿಂದ ಯೋಚನೆ ಮಾಡುವವರು ಒಪ್ಪಬೇಕು. ಏಕೆಂದರೆ ಒಂದು ಅಥವಾ ಎರಡರಷ್ಟಕ್ಕಿಂತ ಜಾಸ್ತಿಯಾಗಿಲ್ಲ, ಅನೇಕ ರಿಯಾಯಿತಿ ಇದೆ, ಹೆಚ್ಚಿನ ಅನುಕೂಲ ಮಾಡುವುದು ಅವಶ್ಯಕ.

ಮತ್ತೊಂದು ಭೂಕಂದಾಯ ಬರುವುದನ್ನು ನಾವು ಇಟ್ಟುಕೊಳ್ಳಲು ಸಿದ್ಧವಾಗಿಲ್ಲ, ಪಂಚಾಯ್ತಿ ಬಿಲ್ಲೇನು ಬರುತ್ತದೆ ಅದರ ಪ್ರಕಾರ ಪಂಚಾಯ್ತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತಿಗೆ ಹಂಚಬೇಕೆಂದು ಮಾಡಿದ್ದೇವೆ. ಬಹಳ ಸಂಶಯಪಡುವುದು ಒಳ್ಳೆಯದಲ್ಲ. ಸಂಶಯಾತ್ಮ ವಿನಶ್ಯತಿ ಎಂದು ಹೇಳುತ್ತಾರೆ, ನಂಬಿದವರು ಕೆಡುವುದಿಲ್ಲ. ಕಂದಾಯದಿಂದ ಬರುವ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುವುದು ನ್ಯಾಯ. ಆದರೆ ಇದಿಷ್ಟೇ ಸಾಕಾಗುತ್ತದೆಯೇ? ಖಂಡಿತ ಇದಲ್ಲ—ಹತ್ತು ಕೋಟಿ ರೂಪಾಯಿ ಪಂಚಾಯ್ತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತು

ಗಳಿಗೆ ಕೊಟ್ಟರೂ ಸಾಲುವುದಿಲ್ಲ. ಇದರ ಜೊತೆಗೆ 2—3 ರಷ್ಟು ಕೊಡಬೇಕಾಗುತ್ತದೆ, ಅಧಿಕಾರ ಕೊಡಬೇಕಾಗುತ್ತದೆ. ಕಂದಾಯವಲ್ಲದೆ ಬೇರೆ ಹಣವನ್ನೂ ಸರಕಾರ ಕೊಡುವುದು ಆವಶ್ಯಕ. ಬರೀ ಕಂದಾಯದ ಹಣ ಕೊಟ್ಟರೆ ಸಾಲುವುದಿಲ್ಲ, ಜಾಸ್ತಿ ಸಹಾಯ ಮಾಡಿ ಅವರ ಮೇಲೆ ಹೊಣೆ ಹೇರುವಾಗ ಅದನ್ನು ಹೊರಲು ಶಕ್ತಿ ಬರುವಂತೆ ನೋಡಿಕೊಳ್ಳಬೇಕೆಂದು ಜವಾಬ್ದಾರಿಯಿಂದ ಹೇಳುತ್ತೇನೆ. ದೇವರ ಹತ್ತಿರ ಹೋಗಿ ಹಣ್ಣು ಕಾಯಿ ಇಲ್ಲದೆ ವರ ಕೇಳಿದರೆ ಹಣ್ಣಿಲ್ಲ, ಕಾಯಿಲ್ಲ, ವರ ಇಲ್ಲ ಹೋಗು ಎಂದು ಹೇಳಿದ ಎನ್ನುವಂತೆ ಹಣ ಸಾಕಷ್ಟು ಕೊಡದೆ ಜವಾಬ್ದಾರಿ ಸರಿಯಾಗಿ ನಿರ್ವಹಿಸಿ ಎಂದು ಸ್ಥಳೀಯ ಸಂಸ್ಥೆಗಳಿಗೆ ಹೇಳುವುದು ನ್ಯಾಯವಲ್ಲ, ಜವಾಬ್ದಾರಿ ಸರಿಯಾಗಿ ನಿರ್ವಹಿಸಲು ಸಾಕಷ್ಟು ಹಣ ಕೊಟ್ಟು ಅದಕ್ಕೆ ತಕ್ಕಂತೆ ಕಾನೂನು ಮಾಡುವುದು ಸರಕಾರದ ಕರ್ತವ್ಯ. ಆ ರೀತಿ ಮಾಡುವುದಕ್ಕೆ ಈ ನಿರ್ಣಯ ಯೋಗ್ಯ ಸಾಧನ. ಒಂದು ವೇಳೆ ಬಹಳ ಹೆಚ್ಚು ಹಾಕಿದರೆ ರೈತರು ಕೊಡುವುದಿಲ್ಲ, ಈ ದಿವಸ ಪಂಚವಾರ್ಷಿಕ ಯೋಜನೆ ಮಾಡುತ್ತಿದ್ದೇವೆ, ಹಳ್ಳಿಗಳಿಗೆ ಎಷ್ಟು ಹಣ ಕೊಡುತ್ತಿದ್ದೇವೆ, ಹಳ್ಳಿಗಳಿಗೆ ಎಷ್ಟು ವಿನಿಯೋಗವಾಗುತ್ತಿದೆ ಎಂದು ಪ್ಲಾನಿನಲ್ಲಿ ನೋಡಬಹುದು. ಹೆಚ್ಚಿನ ಭಾಗ ರೈತರಿಗೇ ಹೋಗುತ್ತದೆ. ಕೈಗಾರಿಕೆಗಳಿಗೆ ಸಹ ರೈತರು ಕಚ್ಚಾ ಮಾಲುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಕಬ್ಬು, ರೇಷ್ಮೆ, ಹತ್ತಿ, ಸೆಣಬು ಹೀಗೆ ನಾನಾ ರೀತಿಯಲ್ಲಿ ಒದಗಿಸುತ್ತಿದ್ದಾರೆ. ಕೈಗಾರಿಕೆ ಬೆಳೆದಹಾಗೆಲ್ಲಾ ರೈತರ ಪರಿಸ್ಥಿತಿ ಉತ್ತಮ ವಾಗುತ್ತದೆ. 4 ರೂಪಾಯಿಗೆ ಒಂದು ಟನ್ ಕಬ್ಬಿದ್ದುದು ಈ ದಿವಸ 60 ರೂಪಾಯಿಯಾಗಿದೆ. ರೈತರಿಗೆ ಸರಿಯಾದ ಧಾರಣೆ ಸಿಕ್ಕಬೇಕೆಂದು ಬೆಲೆ ಸರಿಯಾಗಿ ನಿಗದಿಮಾಡಿದ್ದೇವೆ. ರೈತರಿಗೆ ಯೋಗ್ಯ ಧಾರಣೆ ಸಿಕ್ಕಬೇಕು, ಬೆಳೆಯುವವರಿಗೆ ಅನಾನುಕೂಲವಾಗಬಾರದು, ಬಡವರು ಅಂಥವರಲ್ಲಿ ಅನೇಕರಿದ್ದಾರೆ. ಬೆಳೆಯದಿರುವವರೂ ಇದ್ದಾರೆ. ಅವರಿಗೂ ಒಂದು ರೀತಿ ಅನುಕೂಲ ವಾಗಬೇಕು. ಈ ಎರಡೂ ದೃಷ್ಟಿಯಿಂದ ಯೋಗ್ಯ ಬೆಲೆ ದೊರೆಯುವಂತೆ ಮಾಡಲಾಗಿದೆ. ಹೀಗೆ ಸರಕಾರ ಸಹಾಯ ಮಾಡುತ್ತಿರುವುದರಿಂದ ಬೇಕಾದಷ್ಟು ಅನುಕಲವಾಗಿದೆ.

ಮತ್ತೊಂದು ಆಕ್ಷೇಪಣೆ ಏನೆಂದರೆ, ಸರಕಾರ ತರಾತುರಿಯಿಂದ ಇದನ್ನು ಮಾಡುತ್ತಿದೆ, ಎಂಬುದು. ಹಾಗೆ ಮಾಡುತ್ತಿಲ್ಲ, ಸಾಕಾದಷ್ಟು ಆಲೋಚನೆ ಮಾಡಿ, ಪುನರಾಲೋಚನೆ ಮಾಡಿ ಸೇಕಡ ಆರೂಕಾಲರಂತೆ ಹಾಕಿದರೆ ಬಡವರಿಗೆ ಅನಾನುಕೂಲವಾಗಬಹುದೆಂದು ಸೇಕಡ ನಾಲ್ಕಕ್ಕೆ ಇಳಿಸಿದ್ದೇವೆ. 15 ದಿವಸ ಒಂದೇ ಸಮನೆ ಪರಿಶೀಲಿಸಿ ಕಡಮೆ ಮಾಡಬೇಕಾದ್ದು ನ್ಯಾಯ, ಅದಕ್ಕಾಗಿ ಕಾನೂನು ಬದಲಾಯಿಸಿದರೂ ಪರವಾಗಿಲ್ಲ ಎಂದು ತೀರ್ಮಾನಿಸಿ ದರವನ್ನು ಇಳಿಸಿದ್ದೇವೆ. ಸೇಕಡ ಒಂದರಂತೆ ಹಾಕಿದ್ದೇವೆ, ಸರ್ವೇಸಾಧಾರಣವಾಗಿ ರೈತರಿಗೆ ಜಾಸ್ತಿಯಾಗಬಾರದು, ಹೊರೆಯಾಗಬಾರದು ಎಂದು ಬಹಳ ಪ್ರಯತ್ನ ಮಾಡಿ ಒಂದಕ್ಕೆ ಎರಡರಷ್ಟಾಗದಂತೆ ಕಡಮೆ ಮಾಡಿದ್ದೇವೆ. ಕೆಲವು ಕಡೆ ಉತ್ಪತ್ತಿ ಜಾಸ್ತಿಯಿರುವ ಕಡೆ, ಒಂದಕ್ಕೆ ನೂರರಷ್ಟು ಉತ್ಪತ್ತಿಯಾಗುವ ಕಡೆ ಒಂದಕ್ಕೆ ಮೂರರಷ್ಟು, ನಾಲ್ಕರಷ್ಟು ಮಾಡಿದ್ದೇವೆ. ಕಾಫಿ, ಅಡಿಕೆ, ತೆಂಗು ಬೆಳೆಯುವವರು ಸುಮಾರು 10 ಲಕ್ಷ ಜನರಿರಬಹುದು. 2 ಕೋಟಿ 70 ಲಕ್ಷ ಎಕರೆಗಳಲ್ಲಿ ಕೆಲವರಿಗೆ ಜಾಸ್ತಿ ಯಾಗಿದ್ದರೂ ಸರ್ವೇಸಾಧಾರಣವಾಗಿ ಹಗಲೂ ರಾತ್ರಿ ದುಡಿಯುವ ರೈತರಿಗೆ ಅನ್ಯಾಯವಾಗಿಲ್ಲ. ಮೊದಲಿದ್ದ ಹಾಗೆ ಜಾರಿಗೆ ಕೊಟ್ಟಿದ್ದರೆ ಒಂದಕ್ಕೆ ಎರಡರಷ್ಟಾಗುತ್ತಿತ್ತು. ಅದರಿಂದ ತೊಂದರೆ ಯಾಗುವುದೆಂಬುದನ್ನು ಮನಗಂಡು ಉದ್ದೇಶಪೂರ್ವಕವಾಗಿ ಕಡಮೆ ಮಾಡಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಹೀಗೆ ಮಾಡಿದರೆ ಅಡಿಕೆ ಮತ್ತು ತೆಂಗಿನ ಬೆಳೆ ಹೇಗೆ ಹೆಚ್ಚಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಕಂದಾಯ ಸ್ವಲ್ಪ ಜಾಸ್ತಿಯಾದಾಕ್ಷಣ ತೆಂಗನ್ನು ಬೆಳೆಯುವುದನ್ನು ನಿಲ್ಲಿಸುವುದಿಲ್ಲ, ಸಾವಿರಾರು ಎಕರೆಗಳಲ್ಲಿ ಬೆಳೆಯುತ್ತಿದ್ದಾರೆ. ತೆಂಗು ಮತ್ತು ಅಡಿಕೆ ಜಾಸ್ತಿ ಬೆಳೆದರೆ ಆಹಾರದ ಉತ್ಪತ್ತಿ ಕಡಮೆಯಾಗಬಹುದೆಂಬ ಸಂಶಯವಿದೆ. ರೈತರಿಗೆ ಹೆಚ್ಚು ಹಣ ಸಿಕ್ಕಬೇಕು, ಯೋಗ್ಯ ಬೆಲೆ ದೊರೆಯಬೇಕು.

ನಾನು ಹೇಳಬೇಕಾದುದನ್ನು ಹೇಳಿದ್ದೇನೆಂದು ಕಾಣುತ್ತದೆ. ಕಂದಾಯವನ್ನು ಬಿಟ್ಟು ಬಿಡಿ ಎಂದು ಹೇಳುತ್ತಾರೆ. ಈ ದಿವಸ ಇರುವ ಪರಿಸ್ಥಿತಿಯಲ್ಲಿ ಬಿಡುವುದಕ್ಕೆ ಆಗುವುದಿಲ್ಲ. ಸರ್ಕಾರ ವನ್ನು ನಡೆಸತಕ್ಕ ಮನುಷ್ಯ ಯಾವ ಯಾವ ಕಾಲದಲ್ಲಿ ತಾನು ಮಾಡತಕ್ಕ ಕೆಲಸದಿಂದ, ಕಾನೂನು ಮತ್ತು ರೂಲ್ಸ್‌ನಿಂದ ಪರಿಣಾಮ ಏನಾದೀತು, ಹಣಕಾಸಿನ ಪರಿಸ್ಥಿತಿ ಏನಾದೀತು ಎನ್ನುವುದನ್ನು ಸಹ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಬಡವರಿಗೆ ಕಂದಾಯವನ್ನು ಬಿಡತಕ್ಕದ್ದು ಸರಿ ಎಂದು ನನ್ನ ಮನಸ್ಸು ಹೇಳುತ್ತದೆ. ಆದರೆ ಇದನ್ನೆಲ್ಲ ಸ್ವಲ್ಪ ಬುದ್ಧಿವಂತಿಕೆಯಿಂದ ನೋಡ ತಕ್ಕದ್ದು ಅವಶ್ಯಕ.

(ಶ್ರೀ ಎಸ್. ನಿಜಲಿಂಗಪ್ಪ)

ಮಾನ್ಯ ಸದಸ್ಯರು ಕೆಲವು ಉಪಯುಕ್ತವಾದ ಸೂಚನೆಗಳನ್ನು ಮಾಡಿದ್ದಾರೆ. ಅದಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಹಾಗೆ ಮಾಡತಕ್ಕ ಸಂದರ್ಭದಲ್ಲಿ ಆ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದರಿಂದ ಏನು ಪರಿಣಾಮ ಆದೀತು, ಬಿಟ್ಟರೆ ಏನು ಪರಿಣಾಮ ಆದೀತು ಎಂದು ಸಾಕಷ್ಟು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ನನ್ನ ಆತ್ಮ ಹೇಳುತ್ತದೆ, ಏನಾದರೂ ಮಾಡಿ ಬಡ ರೈತ, ಏನೂ ಬಾರದೆ ಇರತಕ್ಕ ರೈತರಿಗೆ ಕಂದಾಯವನ್ನು ತೆಗೆದು ಹಾಕಿ ವರಮಾನ ತೆರಿಗೆ ಅಥವಾ ಯಾವುದೊ ಒಂದು ರೂಪದಲ್ಲಿ ವರಮಾನದ ಮೇಲೆ ತೆರಿಗೆ ಹಾಕುವುದು ಸರಿ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಿದೆ. ಆದರೆ ಇವತ್ತು ಅದನ್ನು ಮಾಡುವುದಕ್ಕೆ ತಯಾರಾಗಿಲ್ಲ. ಇದರ ಪ್ರತಿಕ್ರಿಯೆಗಳೇನಾಗುತ್ತದೆ ಎಂದು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಅದನ್ನು ಆಲೋಚನೆ ಮಾಡುತ್ತೇವೆಂದು ಮಾತ್ರ ಹೇಳಬಲ್ಲೆ. ಇವತ್ತು ನೆರವು ಏನು ತಂದಿದ್ದೇವೆಯೋ ಅದನ್ನು ಸಾಕಷ್ಟು ರೀತಿಯಲ್ಲಿ ಯೋಚನೆ ಮಾಡಿ ತಂದದ್ದಾಗಿದೆ. ಅದರಿಂದ ಯಾವ ಅನಾನುಕೂಲವೂ ಆಗಿಲ್ಲ. ಅದರಿಂದ ಸಾಕಷ್ಟು ರೈತರಿಗೆ ಅನುಕೂಲವಾಗುತ್ತದೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೇನೆ.

†ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬಹಳ ಪರಿಣಾಮಕರವಾದ ರೀತಿಯಲ್ಲಿ ಮಾನ್ಯ ಸದಸ್ಯರು, ವಿರೋಧ ಪಕ್ಷದ ಸದಸ್ಯರು ಕೂಡ ಇದಕ್ಕೆ ಒಪ್ಪಿಗೆ ಕೊಡುವ ರೀತಿಯಲ್ಲಿ ವಿಷಯಗಳನ್ನು ಚೆನ್ನಾಗಿ ಹೇಳಿದ್ದಾರೆ......

ಕೆಲವು ಮಾನ್ಯ ಸದಸ್ಯರು.—ಇಲ್ಲ, ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ರಿಪೋರ್ಟ್ ಬಗ್ಗೆ ಮಾತನಾಡುವಾಗ ಕೆಲವು ಸದಸ್ಯರು ಟೀಕೆ ಮಾಡುತ್ತ ಇದು ರ್‍ಯಾಷನಲ್ ಅಲ್ಲ ಎಂದು ಹೇಳಿದರು. ಅವರಲ್ಲಿಯೂ ನಮ್ಮ ಮಿತ್ರರಾದ ಶ್ರೀ ವೆಂಕಟಗಿರಿಯಪ್ಪನವರು ಆ ವಿಚಾರವನ್ನು ಹೇಳಿದರು. ಇದುವರೆಗೂ ಇದ್ದ ಕಂದಾಯ ಪದ್ಧತಿ ರ್‍ಯಾಷನಲ್ ಅಲ್ಲ. ಆ ಪದ್ಧತಿಯಲ್ಲಿ ಒಂದು ಎಕರೆಗೆ ಎಷ್ಟು ಉತ್ಪತ್ತಿಯಾಗುತ್ತದೆ, ಅವರ ಒಟ್ಟು ಉತ್ಪನ್ನವೆಷ್ಟು, ಯಾವ ಪ್ರಮಾಣದಲ್ಲಿ ಕಂದಾಯವನ್ನು ಕೊಡಬೇಕು ಎನ್ನುವ ಯಾವ ಆಧಾರವೂ ಇರಲಿಲ್ಲ. ಹಿಂದಿನ ಕಾಲದಿಂದಲೂ ಬಂದಿತ್ತು, ದಬಾವಣೆ ಪದ್ಧತಿ ಬಂದಿತ್ತು. ಆ ಪ್ರಕಾರ ಕೊಡುತ್ತಿದ್ದಾರೆ. ಆದರೆ ಮೊಟ್ಟ ಮೊದಲನೆಯ ಸಲ ವೈಜ್ಞಾನಿಕ ರೀತಿಯಲ್ಲಿ ಕಂದಾಯ ಹಾಕುವುದಕ್ಕೆ ಯೋಚನೆ ಮಾಡುತ್ತಿರುವುದು ಬಹುಶಃ ಈವಾಗಲೇ ಎಂದು ಹೇಳಬಹುದು. ಇದನ್ನು ಹಾಕಿದ್ದರಿಂದ ಅಲ್ಲಲ್ಲಿ ಕೆಲವು ಏರುಪೇರುಗಳಾಗಿವೆ. ಒಂದೇ ಊರಿನಲ್ಲಿ ಒಂದೇ ಬೆಳೆಯ ಫಸಲು ಅನೇಕ ರೀತಿಯಿಂದ ಕಡಮೆಯಾಗುತ್ತದೆ. ತೆಂಗಿನ ತೋಟದಿಂದ ಉತ್ಪತ್ತಿ ಎಲ್ಲ ಕಡೆಯೂ ಒಂದೇ ತರಹ ಇರುವುದಿಲ್ಲ. ತೆಂಗಿನ ತೋಟದಲ್ಲಿ ಚನ್ನಪಟ್ಟಣದಲ್ಲಿ 500 ರೂಪಾಯಿ ಬಂದರೆ ತಿಪಟೂರಿನಲ್ಲಿ 800 ರೂಪಾಯಿ ಬರುತ್ತದೆ, ಇನ್ನೊಂದು ಕಡೆ ಒಂದು ಸಾವಿರ ರೂಪಾಯಿ ಕೂಡ ಬರಬಹುದು. ಹಾಗೆಯೇ ಅಡಕೆ ತೋಟವನ್ನು ತೆಗೆದುಕೊಂಡರೆ ಅದರಲ್ಲಿಯೂ ಹಾಗೆಯೇ ಬರುತ್ತದೆ. ಅಣ್ಣನ ಹೊಲ ಇದ್ದಷ್ಟು ಫಲವತ್ತಾಗಿ ತಮ್ಮನ ಹೊಲ ಇರುವುದಿಲ್ಲ. ಇದೆಲ್ಲ ನಿತ್ಯ ಜೀವನದಲ್ಲಿ ನೋಡತಕ್ಕ ಅಂಶಗಳು. ಏಕರೂಪವಾಗಿ ಒಂದೇ ರೀತಿಯಲ್ಲಿ ಎಲ್ಲ ಕಡೆಗೂ ಕಂದಾಯ ಹಾಕುವುದನ್ನು ಅನ್ವಯಿಸುತ್ತೇವೆ ಎಂದು ಹೇಳುವುದು ಅಸಾಧ್ಯವಾದ ಮಾತು. ವ್ಯವಸಾಯದ ವಿಷಯದಲ್ಲಿ ಭೂಗುಣ ಬೇರೆ ಬೇರೆ ರೀತಿ ಇರುವುದರಿಂದ ಇದನ್ನು ಮಾಡುವುದಕ್ಕೆ ಯಾವತ್ತಿಗೂ ಆಗುವುದಿಲ್ಲ. ಸ್ವಲ್ಪ ಹೆಚ್ಚು ಕಡಮೆ ಶಾಸ್ತ್ರೀಯವಾದ ರೀತಿಯಲ್ಲಿ ಮಾಡಿದ್ದೇವೆ. ಈ ರೀತಿ ಮಾಡಿರುವುದು ಮೊದಲನೆಯ ಸಲ. ಇರುವ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಇನ್ನು ಮುಂದೆ ಸರಿಮಾಡಬೇಕು.

ಕಂದಾಯ ತೆಗೆದು ಬಿಡಬೇಕು ಮತ್ತು ವ್ಯವಸಾಯದ ಮೇಲೆ ವರಮಾನ ತೆರಿಗೆಯನ್ನು ಹಾಕಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ವರಮಾನ ತೆರಿಗೆ ಹಾಕುವುದು ಈಗ ಸದ್ಯಕ್ಕೆ ಬೇಡ. ರೈತರು ವಿದ್ಯಾವಂತರಾಗುವವರೆಗೆ ವರಮಾನ ತೆರಿಗೆಯನ್ನು ಅವರ ಮೇಲೆ ಖಂಡಿತ ಹಾಕಬೇಡಿ, ಅವರಿಂದ ಲೆಕ್ಕ ಪತ್ರ ಇಡುವುದಕ್ಕೆ ಆಗುವುದಿಲ್ಲ. ಅವಿದ್ಯಾವಂತರು ಕಿರುಕುಳಕ್ಕೆ ಸಿಕ್ಕುತ್ತಾರೆ. ರೈತರಲ್ಲಿ ನೂರಕ್ಕೆ ನಾಲ್ಕೈದು ಜನ ಕೂಡ ವಿದ್ಯಾವಂತರಾಗಿಲ್ಲ. ಬಹುಜನ ನಂಜಪ್ಪನ ರುಂಜು ಎಂದು ಬರೆಯುತ್ತಾರೆ. ಅಂಥ ರೈತನ ಮೇಲೆ, ವ್ಯವಸಾಯವನ್ನು ನಂಬಿಕೊಂಡಿರುವವನ ಮೇಲೆ ವರಮಾನ ತೆರಿಗೆಯನ್ನು ಅವನು ವಿದ್ಯಾವಂತನಾಗುವವರೆಗೂ ಹಾಕಬೇಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೂಡ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ರೈತ ವರ್ಗವನ್ನು ಕಿರುಕುಳಕ್ಕೆ ಸಿಕ್ಕಿಸ ಬಾರದು. ಎಕರೆಗೆ ಇಷ್ಟು ಕೊಡಬೇಕು ಎಂದು ಹೇಳಿದರೆ ಅದನ್ನು ರೈತ

ಕೊಡುತ್ತಾನೆ. ಭಾರಿ ಕುಳಗಳಿಗೆ ವರಮಾನ ತೆರಿಗೆಯು ಲೆಕ್ಕಗಳನ್ನು ಇಡುವುದಕ್ಕೆ ಅನುಕೂಲವಾಗುತ್ತದೆ. ಅಂಥವರ ಹತ್ತಿರ ವಸೂಲ್ಮಾಡಲಿ. ಈಗಿನ ಕಂದಾಯ ವಿಧಿಸುವ ಪದ್ಧತಿಯನ್ನು ಶಾಸ್ತ್ರೀಯವಾಗಿ ಮಾಡಿದ್ದೇವೆ. ಅಲ್ಲಲ್ಲೆ ಕೆಲವು ವ್ಯತ್ಯಾಸಗಳಾಗಿರಬಹುದು. ಅದನ್ನು ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಮುಂದೆ ಸರಿ ಮಾಡೋಣ.

ವೈಜ್ಞಾನಿಕ ರೀತಿಯಲ್ಲಿ ಈಗ ಕಂದಾಯ ವಿಧಿಸಬೇಕು ಎಂದು ಮಾಡಿಲ್ಲವೇ ಎಂದು ಮಾನ್ಯ ವೆಂಕಟಗಿರಿಯಪ್ಪನವರಿಗೆ ಹೇಳುತ್ತೇನೆ. ಮೈಸೂರು ದೇಶದಲ್ಲಿ ಎರಡೂ ಮುಕ್ಕಾಲು ಕೋಟಿ ಎಕರೆ ಭೂಮಿ ಇದೆ. ಅದರಲ್ಲಿ ಎರಡೂವರೆ ಕೋಟಿ ಎಕರೆಗಿಂತ ಹೆಚ್ಚು ಭೂಮಿ ಬಡವರದು. ಅದು ಖುಷ್ಕಿ ಜಮೀನು. ನೂರಕ್ಕೆ 99 ಜನರಲ್ಲಿರುವುದೆಲ್ಲ ಖುಷ್ಕಿ ಜಮೀನು. ಈಗಿನ ಸೆಟಲ್‌ಮೆಂಟ್ ಪ್ರಕಾರ 250 ಲಕ್ಷ ಎಕರೆ ಖುಷ್ಕಿ ಜಮೀನಿನಿಂದ 240 ಲಕ್ಷ ರೂಪಾಯಿ ಕಂದಾಯ ಬರುತ್ತಿದೆ. ಈಗ ಒಟ್ಟು ಉತ್ಪನ್ನದ ಸೇಕಡ ನಾಲ್ಕರಷ್ಟು ಕಂದಾಯ ಹಾಕಬೇಕು ಎಂದು ಮಾಡಿರುವ ಬದಲಾವಣೆಯಿಂದ 312 ಲಕ್ಷ ರೂಪಾಯಿ ಆಗುತ್ತದೆ. ಇದು ಸೇಕಡ 29ರಷ್ಟಾಗುತ್ತದೆ. ಬಡವರ ಮೇಲೆ ಒಂದು ರೂಪಾಯಿಗೆ 29 ಪೈಸೆ ಮಾತ್ರ ಹೊರೆ ಬೀಳುತ್ತದೆ. ಒಂದು ರೂಪಾಯಿ ಕೊಡುವವನು ಒಂದು ರೂಪಾಯಿ 29 ಪೈಸೆ ಕೊಡುತ್ತಾನೆ. ಅನೇಕ ಕಡೆ ಕಡಮೆ ಕೂಡ ಕೊಡುತ್ತಾರೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಬಿದರೆ ಜಿಲ್ಲೆಗಳಲ್ಲಿ ಈಗ ಕೊಡುತ್ತಿರುವ ಕಂದಾಯಕ್ಕಿಂತಲೂ ಸೇಕಡ 25 ರಷ್ಟು ಕಡಮೆಯಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡ್ರೈಲ್ಯಾಂಡ್ ಎನ್ನುವುದರಲ್ಲಿ ಏನೂ ಬೆಳೆಯುತ್ತಿರಲಿಲ್ಲ. ಜಮೀನಿನ ಪಕ್ಕದಲ್ಲಿ ಸಹಾಯಕವಾಗಿ ಕುಮ್ಕಿ ಎಂದು ಇರುತ್ತದೆ. ಅದಕ್ಕೂ ಕಂದಾಯವನ್ನು ಹಾಕಿದ್ದರು. ವೈಜ್ಞಾನಿಕವಾಗಿ ಕಂದಾಯವನ್ನು ವಿಧಿಸುವುದರಿಂದ ಸೇಕಡ 20-25 ರಷ್ಟು ಕಡಮೆಯಾಗುತ್ತದೆ. ಒಟ್ಟಿನಲ್ಲಿ ರೂಪಾಯಿಗೆ 29 ಪೈಸೆ ಜಾಸ್ತಿಯಾಗುತ್ತದೆ. ಇದು ಬಡವರ ಭೂಮಿಗೆ ಜಾಸ್ತಿ ಆಗಿರುವುದು. ಇರಿಗೇಟೆಡ್ ವೆಟ್ ಲ್ಯಾಂಡ್, ಇದಕ್ಕೆ ಖುಷ್ಕಿ ದರಗಳನ್ನೇ ಹಾಕಿದೆ. ಇರಿಗೇಟೆಡ್ ಗಾರ್ಡನ್‌ಗೆ ಸೇಕಡ 41 ರಷ್ಟು ಜಾಸ್ತಿಯಾಗುತ್ತದೆ. ಅವರು 14 ಲಕ್ಷ ರೂಪಾಯಿ ಕೊಡುತ್ತಿದ್ದರು. ಇನ್ನು ಮುಂದೆ 24 ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ತೆಂಗಿನ ತೋಟಗಳು ಇರಿಗೇಟೆಡ್ ಗಾರ್ಡನನಲ್ಲಿ ಬರುತ್ತದೆ. ಮೈಸೂರು ರಾಜ್ಯದಲ್ಲಿ 391 ಸಾವಿರ ಎಕರೆ ತೆಂಗಿನ ತೋಟವಿದೆ. ನಾಲ್ಕು ಲಕ್ಷ ರೂಪಾಯಿ ಕಂದಾಯ ಬರುತ್ತಿತು. ಈಗ 5 ಲಕ್ಷ 50 ಸಾವಿರ ರೂಪಾಯಿ ಬರುತ್ತದೆ. ಒಂದೂವರೆ ಲಕ್ಷ ರೂಪಾಯಿ ಜಾಸ್ತಿ ವಸೂಲು ಮಾಡುತ್ತೇವೆ. ವಿರೋಧ ಪಕ್ಷದವರು ಭೂತ ಬರುತ್ತದೆ ಎಂದು ಏನೇನೋ ಹೇಳುತ್ತಾರೆ. ಭೂತವೂ ಇಲ್ಲ, ಏನೂ ಇಲ್ಲ. ಇವರು ಹೇಳುವ ಮಾತುಗಳು ಹುರುಳಿ ಹೊಲದಲ್ಲಿ ಒಂಟೆ ಬಚ್ಚಿಟುಕೊಂಡಿದೆ ಎಂದು ಹೇಳುವ ಹಾಗೆ ಇದೆ.

ಸ್ವಾಮಿ, ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರು ಆಗಾಗ್ಗೆ ಏಳುತ್ತಿದ್ದುದನ್ನು ನೋಡಿ ಒಂದು ಪದ್ಯವನ್ನು ಬರೆದಿದ್ದೇನೆ. ಅದನ್ನು ಓದುತ್ತೇನೆ.

ರೇವಣ ಸಿದ್ದ
ಪದೇ ಪದೇ ಎದ್ದ
ಕೆಲ ಸಲ ಗೆದ್ದ
ಅನೇಕ ಸಲ ಬಿದ್ದ
ಕೆಲಸಲ ಪೆದ್ದ
ರೇವಣ ಸಿದ್ದ.

ಹಿಂದೆ ಒಂದು ಸಾರಿ ಹುರುಳಿ ಹೊಲದಲ್ಲಿ ಒಂಟೆ ಬಚ್ಚಿಟ್ಟುಕೊಂಡಿತ್ತೆಂದು ಹೇಳಿದರಂತೆ ಕೆಲವರು ಹುರುಳಿ ಹೊಲದಲ್ಲಿ ಒಂಟೆ ಹೇಗೆ ಬಚ್ಚಿಟ್ಟುಕೊಳ್ಳುತ್ತದೆಂದು ಕೇಳಿದರಂತೆ. ಹುರುಳಿ ಹೊಲ ಇಷ್ಟೇ ಇದೆ. ಅದು ಹೇಗೆ ಅಲ್ಲಿ ಬಚ್ಚಿಟ್ಟುಕೊಳ್ಳುತ್ತದೆ ಎಂದು ಕೇಳಿದರಂತೆ ಆದರೂ ಕೆಲವರು ದೊಣ್ಣೆ ಹಿಡಿದು ಓಡಿಸಿದರಂತೆ. ಇದು ಹಾಗಾಯಿತು. ಆದ್ದರಿಂದ ಏನು ಕಂದಾಯ ಜಾಸ್ತಿಮಾಡಿದ್ದರೂ ಅದು ಕೇವಲ 29 ನಯಾಪೈಸೆಗಳು. ಡ್ರೈಲ್ಯಾಂಡಿಗೆ 1 ರೂಪಾಯಿಗೆ 29 ನಯಾಪೈಸೆ ಜಾಸ್ತಿ ಕೊಡುತ್ತಾರೆ. ಮಾನ್ಯ ಶ್ರೀ ವೆಂಕಟಗಿರಿಯಪ್ಪನವರು ಡ್ರೈಲ್ಯಾಂಡಿಗೆ ಶೇ. 20ರಷ್ಟು ಜಾಸ್ತಿಯಾಗಿದೆ ಎಂದು ಹೇಳಿದರು. ನನ್ನ ತಾಲ್ಲೂಕಿನಲ್ಲಿ 1 ರೂಪಾಯಿ ಕೊಡುವವರು 1-50 ನಯಾಪೈಸ ಕೊಡುತ್ತಿದ್ದಾರೆ. ಅಂದಮೇಲೆ 50 ನಯಾಪೈಸೆ ಜಾಸ್ತಿಯಾಗಿದೆ. ಅಲ್ಲಿ ಈಗಾಗಲೇ ಸರ್ಚಾರ್ಜ್ ಒಂದಕ್ಕೆರಡರಷ್ಟು ಕೊಟ್ಟು ಅಭ್ಯಾಸ ಆಗಿದೆ. ಅದನ್ನು ಡಬ್ಬಲ್ಲಾಗಿ ಕೊಡುತ್ತಿದ್ದಾರೆ. ರೈತರು ಸರ್ಚಾರ್ಜ್ ಕೊಟ್ಟು ಕಂದಾಯವನ್ನು ಡಬ್ಬಲ್ಲಾಗಿ ಕೊಡುವುದು ಅಭ್ಯಾಸವಾಗಿದೆ ಎಂದು

(ಶ್ರೀ ಎಂ. ವಿ. ಕೃಷ್ಣಪ್ಪ)

ಕೇಳಿದರೆ ಒಂದು ರೂಪಾಯಿಗೆ ಬದಲು 1—20 ನಯಾಪೈಸೆ ಕೊಡುವಷ್ಟು ದಡ್ಡನಲ್ಲ. ಯೋಚನೆ ಮಾಡುತ್ತಾನೆ. ರೈತ ಇಂತಹ ಪ್ರಚಾರಕ್ಕೆಲ್ಲಾ ಮರುಳು ಆಗುವುದಿಲ್ಲ. ಅವನಿಗೂ ಸ್ವಲ್ಪ ಬುದ್ಧಿ ಇದೆ. ಇವರ ಪ್ರಚಾರದಿಂದೇನೂ ಪ್ರಯೋಜನವಿಲ್ಲ ಎಂಬುದಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಾನು ಹೇಳುವುದಿಷ್ಟೆ. ಇದರಿಂದ ಏನೂ ಆಗಿಲ್ಲ. ಮೈನರ್ ಇರಿಗೇಷನ್‌ಗೆ ವೆಟ್‌ರೇಟ್ಸ್ 5 ರೂಪಾಯಿ ಹಾಕಬೇಕೆಂದಿದೆ. 2 ರೂಪಾಯಿಯನ್ನು ಈ 5 ರೂಪಾಯಿಗೆ ಸೇರಿಸಿದರೆ 7—8 ರೂಪಾಯಿಗಳು ಮೈನರ್ ಇರ್ರಿಗೇಷನ್ನಿಗೆ ಕಂದಾಯವಾಗುತ್ತದೆ. ಆದರೂ ಕೆಲವು ಪ್ರದೇಶಗಳಿಗೆ ಇದರಿಂದೇನೂ ತೊಂದರೆಯಾಗುವುದಿಲ್ಲ. ಯಾರಿಗೆ ಕಂದಾಯ ಹೆಚ್ಚಾಗುತ್ತದೆಂದರೆ, ಗಾರ್ಡನ್ಸ್ ಮತ್ತು ಪ್ಲಾಂಟೇಷನ್ಸ್ ಇಟ್ಟುಕೊಂಡಿರುವವರಿಗೆಲ್ಲ ಕಂದಾಯ ಒಂದಕ್ಕೆ 200-300ರಷ್ಟಾಗುತ್ತದೆ. ಅವರ ವಿಷಯದಲ್ಲಿ ಇಲ್ಲಿ ವಾದ ಮಾಡುವವರು ವೆಸ್ಟೆಂಡ್ ಇಂಟರೆಸ್ಟ್ ಇರುವವರು. ಬಡವರ ಅಂದರೆ, ಡ್ರೈಲ್ಯಾಂಡ್ ಇರುವವರು. ಅಂತಹವರಿಗೆ 29 ನಯಾಪೈಸೆ ಮಾತ್ರ ಜಾಸ್ತಿ ಮಾಡುತ್ತಾರೆ. ಶೇ. 90ರಷ್ಟು ಭೂಮಿ ಬಡವರ ವಶದಲ್ಲಿರುತ್ತದೆ. ವೆಟ್‌ಗಾರ್ಡನ್, ಪ್ಲಾಂಟೇಷನ್ಸ್ ಇರುವುದು ಬರೀ ಶ್ರೀಮಂತರ ಹತ್ತಿರವೇ. ವೆಸ್ಟೆಡ್ ರೈತರ ಬಗ್ಗೆ ಹೇಳಬೇಕೆಂದರೆ, ಅವರೆಲ್ಲ ಖದೀಮರು. ಅವರಿಗೆ ಜಾಸ್ತಿ ಕಂದಾಯವಿದ್ದರೆ ಇವರು ಏಕೆ ವಿರೋಧ ಮಾಡುತ್ತಾರೆ ? ಒಟ್ಟಿನಲ್ಲಿ ಕಂದಾಯ ಜಾಸ್ತಿ. ಇದೆಲ್ಲಾ ಸೇರಿಕೊಂಡರೆ ಒಟ್ಟಿನಲ್ಲಿ ಶೇ. 45ರಷ್ಟು ಜಾಸ್ತಿಯಾಗುತ್ತದೆ. ಡ್ರೈ ಇರಿಗೇಟೆಡ್, ವೆಟ್ ಇರ್ರಿಗೇಟೆಡ್ ರೇನ್‌ಫೆಡ್ ಗಾರ್ಡನ್, ಪ್ಲಾಂಟೇಷನ್ ಕ್ರಾಪ್ಸ್ ಇವೆಲ್ಲಾ ಸೇರಿಕೊಂಡರೂ ಉತ್ಪತ್ತಿ 3 ಕೋಟಿ 4 ಲಕ್ಷ ರೂಪಾಯಿ ಆದೀತು. ವಾಟರ್ ರೇಟ್ 50 ಲಕ್ಷದವರೆಗೂ ಬರುತ್ತದೆ. ಎಲ್ಲವೂ 4 ಕೋಟಿ 42 ಲಕ್ಷವಾಗುತ್ತದೆ. 1 ಕೋಟಿ 42 ಲಕ್ಷ ಅಂದರೆ ಸುಮಾರು ಶೇ. 45ರಷ್ಟು ಜಾಸ್ತಿಯಾಗುತ್ತದೆ. ಆದರೆ ಡ್ರೈಲ್ಯಾಂಡ್ ಮೇಲೆ ಶೇ. 25ರಷ್ಟಾಗುತ್ತದೆಂದು ಅಪಪ್ರಚಾರ ಮಾಡಿಕೊಂಡು ರೈತರಿಗೆ ಅಷ್ಟೊಂದು ಜ್ಞಾನವಿಲ್ಲವೆಂದು ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಯಾರಾದರೂ ಚಳುವಳಿ ಮಾಡಬೇಕೆಂದಿದ್ದರೆ ಬಿಟ್ಟುಬಿಡಿ. ಬೇರೆ ಕೆಲಸವಿಲ್ಲವೆ ? ಡ್ರೈಲ್ಯಾಂಡ್‌ಮೇಲೆ ಶೇಕಡ 29ರಷ್ಟು ಹಾಕುವುದರಿಂದ ಬಡವರಿಗೆ ಅನ್ಯಾಯವಾಗುವುದಿಲ್ಲ. ಏಕೆಂದರೆ, ಮಲೆನಾಡು ಮೈಸೂರು ದೇಶದಲ್ಲಿ ಕಿರೀಟವಿದ್ದಹಾಗೆ. ಮಲೆನಾಡಿನ ಪಲ್ಸಸ್, ಅದರಿಂದ ಮಾಡತಕ್ಕ ಸಾಂಬಾರ್ ಬಹಳ ಒಳ್ಳೆಯ ಪದಾರ್ಥ, ಕೊಂಡುಕೊಳ್ಳುವುದಕ್ಕೆ ಬಹಳ ಸುಲಭ. ಮಲೆನಾಡಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಅಲ್ಲಿರುವ ವೆಟ್‌ಲ್ಯಾಂಡ್, ಡ್ರೈಲ್ಯಾಂಡ್, ರೇನ್‌ಫೆಡ್‌ಗಳಲ್ಲಿ 10 ಲಕ್ಷ ಎಕರೆಯಲ್ಲಿ ಬತ್ತ ಬೆಳೆಯುತ್ತಾರೆ. ಖಾನಾಪೂರ್, ಬೆಳಗಾಂ, ನಾರ್ತ್ ಕೆನರಾ ಸೌತ್ ಕೆನರಾ ಮಲೆನಾಡು ಪ್ರಾಂತಗಳಲ್ಲಿ ಕೂರ್ಗ್‌ನಲ್ಲಿ ಮತ್ತು ಜಗಳೂರಿನಲ್ಲಿ 10 ಲಕ್ಷ ಎಕರೆ ಗೋಧಿಯನ್ನು ಬೆಳೆಯುತ್ತಾರೆ. ಅಲ್ಲೆಲ್ಲಾ ಬಹಳ ಕಷ್ಟಪಟ್ಟು ವ್ಯವಸಾಯ ಮಾಡುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಮತ್ತು ಅಡಿಕೆ ಬೆಳೆಯನ್ನು ಮಂಚ ಕಟ್ಟಿಕೊಂಡು ಮಂಚದ ಮೇಲೆ ಮಾಡುತ್ತಾರೆ. ಮಲೆನಾಡು ರೇನ್‌ಫೆಡ್ ವೆಟ್‌ಲ್ಯಾಂಡ್‌ಗಳನ್ನು ಡ್ರೈಆಗಿ ಮಾಡಿದರೆ ಅವರಿಗೆ ಶೇ. 20ರಷ್ಟು ಮಾತ್ರ ಕಂದಾಯ ಜಾಸ್ತಿಯಾಗುತ್ತದೆ. ಒಂದು ರೂಪಾಯಿ ಕೊಡುವವರು 1 ರೂಪಾಯಿ 20 ಪೈಸೆ ಕೊಡುತ್ತಾರೆ. ಇದರಿಂದ ಬೆಲೆ ಜಾಸ್ತಿಯಾಗುವುದಕ್ಕೆ ಕಾರಣವಾಗುತ್ತದೆ. ಬತ್ತವೆಲ್ಲಾ ಇಲ್ಲಿಯೇ ಬೆಳೆಯುತ್ತಾರೆ. ಪ್ಲಾಂಟೇಷನ್ ಇಲ್ಲಿಯೇ ಇದೆ. ಕಾಫಿ, ಏಲಕ್ಕಿ ಬೆಳೆಯನ್ನು ಕಮ್ಯೂನಿಸ್ಟ್ ಸ್ಟೇಟ್ ಆಗಿದ್ದ ಕೇರಳದಲ್ಲಿ ಹೆಚ್ಚಿಗೆ ಬೆಳೆಯುತ್ತಾರೆಂದು ಮುಖ್ಯಮಂತ್ರಿಗಳು ಹೇಳಿದರು. ಅಲ್ಲಿ ಎಕರೆಗೆ 2 ರೂಪಾಯಿಗಳ ಕಂದಾಯ ಹಾಕಿದ್ದಾರೆ. ಪಕ್ಕದಲ್ಲಿರುವ ಮದ್ರಾಸಿನಲ್ಲಿ ಕಾಫಿಗೆ ಡ್ರೈರೇಟ್ 2 ರೂಪಾಯಿಗಳೆಂದು ಹಾಕಿದೆ. ಇಂಡಿಯಾ ದೇಶದಲ್ಲಿ ಬೆಳೆಯುವ ಕಾಫಿಯಲ್ಲಿ ಶೇ. 80 ಭಾಗದಷ್ಟು ಮೈಸೂರು ದೇಶದಲ್ಲಿಯೇ ಬೆಳೆಯುವುದಾಗಿದೆ. 80 percent Indian Coffee is grow in Mysore 80 per cent Indian Silk is grown in Mysore 99 per cent Gold is got in my area ಎಂಬುದಾಗಿ ನಮ್ಮ ಸಂಸ್ಥಾನದವರು ಹೇಳಿಕೊಳ್ಳುತ್ತಾರೆ. ನನ್ನ ಕ್ಷೇತ್ರದವರೂ ಸಹ ಆ ರೀತಿ ಹೇಳಿಕೊಳ್ಳುತ್ತಾರೆ. ಆದ್ದರಿಂದ ರೇಷ್ಮೆಗೆ ರಿಯಾಯಿತಿ ಕೊಡಬೇಕಾದುದು ಧರ್ಮ. That is the pride of Mysore. 80 per cent of Indian Coffee is grown in Mysore ಇದರಿಂದ 30-40 ಕೋಟಿ ರೂಪಾಯಿಗಳ ಫಾರೆನ್ ಎಕ್ಸ್‌ಚೇಂಜನ್ನು ಸಂಪಾದನೆ ಮಾಡಬಹುದು. ಮಲೆನಾಡಿನ ಕಿರೀಟವಾಗಿರತಕ್ಕ ಕಾಫಿ, ಮೈಸೂರಿನ ಕಿರೀಟವಾಗಿರತಕ್ಕ ರೇಷ್ಮೆ—ಈ ಎರಡು ಬೆಳೆಗಳಿಗೂ ಕೂಡ ರಿಯಾಯಿತಿ ಕೊಟ್ಟಿದ್ದರೆ 2 ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಬೇಕಾಗಿತ್ತು. Coffee is the pride of Mysore ಇದನ್ನು ಬೆಳೆಯುವವರು ನೂರಾರು ರೂಪಾಯಿ ತೆರಿಗೆ ಕೊಟ್ಟು they take such land which is almost useless. ಬೇರೆಯವರಿಗೆ ಆ ಜಮೀನುಗಳನ್ನು ಕೊಟ್ಟರೆ ಅವರು ಅದರಲ್ಲಿ ಏನು ಬೆಳೆ

ಯಾವುದಕ್ಕೂ ಆಗುವುದಿಲ್ಲ. ಇಳಿಜಾರು ಪ್ರದೇಶಗಳನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಾಫಿ ಬೆಳೆಯನ್ನು ಚೆನ್ನಾಗಿ ಬೆಳೆಯುತ್ತಾರೆ. ಇದು ಎಕ್ಸ್‌ಪೋರ್ಟ್ ಕಮಾಡಿಟಿಯಾಗಿದೆ. ಇಂಡಿಯಾ ದೇಶಕ್ಕೆ ಬರುವ ಫಾರೆನ್ ಎಕ್ಸ್‌ಚೇಂಜಿನಲ್ಲಿ ಇದು ಮೊದಲನೆಯದು. 250 ಕೋಟಿ ರೂಪಾಯಿಗಳಷ್ಟು ಫಾರೆನ್ ಎಕ್ಸ್‌ಚೇಂಜು ಇದರಿಂದ ಇಂಡಿಯಾ ದೇಶಕ್ಕೆ ಬರುತ್ತದೆ. ಅದರ ಮೇಲೆ ರಿಯಾಯಿತಿ ಕೊಡಬೇಕು. ಏಕೆಂದರೆ, ಅದನ್ನು ಮೈಸೂರಿನಲ್ಲಿಯೇ ಬೆಳೆಯುತ್ತಾರೆ. ಸೆರಿಕಲ್ಚರನ್ನು ಶೇ. 80 ಭಾಗ ಇಲ್ಲಿ ಬೆಳೆಯುತ್ತಾರೆ. Sericulture will be treated as dry land, ಮಲ್ಬರಿ ಗಾರ್ಡನ್ಸ್‌ಗೆ ಡ್ರೈಲ್ಯಾಂಡ್ ಎಂಬುದಾಗಿ ರಿಯಾಯಿತಿ ಕೊಟ್ಟಿದ್ದಾರೆ. ಆ ರೀತಿ ಕಾಫಿ ಮತ್ತು ಮಲ್ಬರಿಗೆ ರಿಯಾಯಿತಿ ಕೊಟ್ಟಿರುವ ಉದ್ದೇಶ ಕಾಫಿ ಬೆಳೆಗಾರರಿಗೆ ಶೇ. 660 ರಷ್ಟು ಕಂದಾಯ ಜಾಸ್ತಿಯಾಗುತ್ತದೆ. ಒಟ್ಟಿನಲ್ಲಿ ಡ್ರೈನಲ್ಲಿ ಶೇ. 29ರಷ್ಟು ಇರ್ರಿಗೇಟೆಡ್ ವೆಟ್‌ನಲ್ಲಿ ಶೇ. 42ರಷ್ಟು ಇರಿಗೇಟೆಡ್ ಗಾರ್ಡನ್ಸಿನಲ್ಲಿ ಶೇ. 41ರಷ್ಟು ಆಗಿದೆ. ರೇನ್ ಫೆಡ್‌ನಲ್ಲಿ ಶೇ. 30ರಷ್ಟು ಜಾಸ್ತಿಯಾಗಿದೆ. ರೇನ್‌ಫೆಡ್ ಗಾರ್ಡನ್‌ನಿಂದ ಶೇ. 200ರಷ್ಟು ಬರುತ್ತದೆ. ಪ್ಲಾಂಟೇಷನ್ನುಗಳಿಂದ ಶೇ. 660ರಷ್ಟು ಬರುತ್ತದೆ. ಈಗ ಕಾಫಿ ಪ್ಲಾಂಟರುಗಳು 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಹೊಸ ರೂಲ್ಸ್ ಪ್ರಕಾರ 36 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅದೂ ಜಾಸ್ತಿಯಾಗಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಮಾನ್ಯ ಸದಸ್ಯರು ಪ್ಲಾಂಟೇಷನ್ನುಗಳವರಿಗೆ ಶೇ. 660ರಷ್ಟು ಕಂದಾಯ ಹಾಕಿರುವುದೂ ಕೂಡ ಕಡಿಮೆ ಎಂದು ಹೇಳುವುದಾದರೆ, ಅವರನ್ನು ಹ್ಯಾಂಗ್ ಮಾಡಬೇಕು. ಆದರೆ ಸರ್ಕಾರಕ್ಕೆ ಆ ಉದ್ದೇಶವಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮೆದುರಿಗೇ ಸುಳ್ಳು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀಮಾನ್ ಕೇಶವಮೂರ್ತಿಯವರು ಏಕೋ ಬಹಳ ಕೆಟ್ಟುಹೋಗಿದ್ದಾರೆ. ಹೇಳಬಾರದ ವಿಷಯಗಳನ್ನೆಲ್ಲಾ ಹೇಳುತ್ತಿದ್ದಾರೆ. ಮೈಸೂರಿನಲ್ಲಿರುವ ಗಾರ್ಡನ್ಸ್ ಇರ್ರಿಗೇಟೆಡ್ ಗಾರ್ಡನ್ಸ್. 3 ಲಕ್ಷ 91 ಸಾವಿರ ಎಕರೆಗಳನ್ನು ಇಲ್ಲ ತೋರಿಸಿದ್ದಾರೆ. ಇದು ಎನ್‌ಸೈಕ್ಲೋಪೀಡಿಯಾ ಇದ್ದ ಹಾಗೆ ಇದೆ. ಫಿಗರ್ಸ್ ನೋಡಿ. You must compliment me. ಇರ್ರಿಗೇಟೆಡ್ ವೆಟ್, ಇರ್ರಿಗೇಟೆಡ್ ಗಾರ್ಡನ್ಸ್ ಎಷ್ಟು, ಎಂಬುದನ್ನು ಸರಿಯಾಗಿ ನೋಡಿ ಹೇಳಬೇಕು. ಯಾವುದೋ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿದರೆ ನಾನು ಏನು ಮಾಡುವುದಕ್ಕಾಗುತ್ತದೆ! ಇರ್ರಿಗೇಟೆಡ್ ಗಾರ್ಡನ್ 3 ಲಕ್ಷ 90 ಸಾವಿರ ಎಕರೆ ಎಂಬುದಾಗಿ ತೋರಿಸಿದ್ದಾರೆ. ಉತ್ಪತ್ತಿ 4 ಲಕ್ಷ ರೂಪಾಯಿಗಳೆಂದು ತೋರಿಸಿದೆ. Proposed rate 5 ಲಕ್ಷ 50 ಸಾವಿರ ಚಿಲ್ಲರೆಯೆಂದು ತೋರಿಸಿದೆ. ಒಂದೂವರೆ ಲಕ್ಷದಿಂದ 4 ಲಕ್ಷ ಎಕರೆಯಷ್ಟು ಜಾಸ್ತಿ ಬರುತ್ತದೆ. It works out at 33 per cent.

6-00 P.M.

ರೈನ್‌ಫೆಡ್ ಗಾರ್ಡನ್ಸ್ ಒಂದು ಲಕ್ಷ 15 ಸಾವಿರ ಎಕರೆಗಳು ಮಾತ್ರ ಇದೆ. ಇದು ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ಎಕರೆಗಳಿವೆ ಎಂಬುದು ಕೂಡ ಈಗ ತಮಗೆ ಕೊಟ್ಟಿರತಕ್ಕ ಸ್ಟೇಟ್‌ಮೆಂಟಿನಲ್ಲಿದೆ. ರೈನ್‌ಫೆಡ್ ಗಾರ್ಡನ್ಸ್ ನಾರ್ತ್ ಕೆನರಾದಲ್ಲಿ ಒಂದು ಕಡೆ 14 ಸಾವಿರ ಎಕರೆ ಇದೆ. ಅದೇ ನಾರ್ತ್ ಕೆನರಾದಲ್ಲಿ ಇನ್ನೊಂದು ಕಡೆ ಎರಡು ಸಾವಿರ ಎಕರೆಗಳಿವೆ. ಇನ್ನೊಂದು ಕಡೆ 13,000 ಎಕರೆ ಇದೆ. ಧಾರವಾಡದಲ್ಲಿ 300 ಎಕರೆ ರೈನ್‌ಫೆಡ್ ಗಾರ್ಡನ್ಸ್ ಇದೆ. ಬೆಳಗಾಂನಲ್ಲಿ 200 ಎಕರೆ ಇದೆ. ಶಿವಮೊಗ್ಗಾದಲ್ಲಿ 15,000 ಎಕರೆಗಳಿವೆ. ಚಿಕ್ಕಮಗಳೂರಿನಲ್ಲಿ 15 ಸಾವಿರ ಎಕರೆಗಳಿವೆ. ತರೀಕೆರೆಯಲ್ಲಿ 10 ಸಾವಿರ ಎಕರೆಗಳಿವೆ. ಉಡುಪಿಯಲ್ಲಿ 40 ಸಾವಿರ ಎಕರೆ ಇದೆ. ಪುತ್ತೂರಿನಲ್ಲಿ 5,000 ಎಕರೆಗಳಿವೆ. ಮಾನ್ಯ ಸದಸ್ಯರು ನಾವು ಕೊಟ್ಟಿರುವುದನ್ನು ಅರ್ಥ ಮಾಡಿಕೊಳ್ಳದೇ ಇದ್ದರೆ ಹೇಗೆ? ಈ ರೈನ್‌ಫೆಡ್ ಗಾರ್ಡನ್‌ನಲ್ಲಿ ಮಠಸ್ಥಳ ಮತ್ತು ಪಟಸ್ಥಳ ಎಂದು ಇದೆ. ಮಠಸ್ಥಳ ಗಾರ್ಡನ್ ಎಂದರೆ ಲಿಫ್ಟ್ ಇರಿಗೇಷನ್ನಿಗೆ ಸಂಬಂಧಪಟ್ಟದ್ದು, ಎಂದರೆ ಬಾವಿಯಿಂದ ಏತ, ಕಪಿಲೆ ಇವುಗಳ ಸಹಾಯದಿಂದ ನೀರನ್ನು ಒದಗಿಸತಕ್ಕದ್ದು. ಪಟಸ್ಥಳ ಎಂದರೆ ಹರಿಯುವ ನೀರಿನ ಆಸರೆಯನ್ನು ಪಡೆಯತಕ್ಕದ್ದು. ಈ ಜಮೀನನ್ನು ಖುಷ್ಕಿ ಎಂದು ಪರಿಗಣಿಸಲಾಗುವುದು. 30 ವರ್ಷಗಳಿಗೊಂದು ಸಾರಿ ರಿವಿಜನ್ ಸೆಟ್ಲ್‌ಮೆಂಟ್ ಬರುತ್ತದೆ. ಆಗ ಕಂದಾಯ ಸ್ವಲ್ಪ ಜಾಸ್ತಿ ಆಗುತ್ತದೆ. ಶ್ರೀಮಾನ್ ಕೇಶವ ಮೂರ್ತಿಯವರು ಮೋಸ ಮಾಡಿ ರೈತರಿಗೆ ಜಾಸ್ತಿ ಕಂದಾಯವನ್ನು ಹಾಕಿದ್ದಾರೆಂದು ಹೇಳಿದರು. ಅದು ಸರಿಯಲ್ಲ. ನಾವು ಇರುವ ವಿಷಯವನ್ನು

(ಶ್ರೀ ಎಂ. ವಿ. ಕೃಷ್ಣಪ್ಪ)

ಬಹಿರಂಗವಾಗಿ ಕೇಳಿದ್ದೇವೆ. ವಿರೋಧ ಪಕ್ಷದವರು ಸುಮ್ಮನೆ ಚಾಲೆಂಜ್ ಮಾಡುತ್ತಾರೆ. ಅದಕ್ಕೋಸ್ಕರವೇ ಈಗ 18 ವರ್ಷಗಳಿಂದಲೂ ಕೂಡ ನಾವು ಇಲ್ಲಿ ಇದ್ದೇವೆ. ನೀವು ಅಲ್ಲಿಯೇ ಇದ್ದೀರಿ. ನೀವೇ ರೈತರ ಪ್ರತಿನಿಧಿಗಳೆಂದು ತಿಳಿದುಕೊಳ್ಳಬೇಡಿರಿ. ನಾವೂ ಕೂಡ ರೈತರ ಪ್ರತಿನಿಧಿಗಳೇ. ನಾವೂ ಕೂಡ ಚುನಾವಣೆಯಲ್ಲಿ ಜನಗಳಿಂದ ವೋಟು ಪಡೆದುಕೊಂಡು ಇಲ್ಲಿಗೆ ಬಂದ ಮೇಲೆ ನಮ್ಮನ್ನು ಇಲ್ಲಿ ಮಂತ್ರಿಗಳಾಗಿ ಕೂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ ಹಾಗೆ ದೇಶದ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಸರ್ಕಾರಕ್ಕೆ ದುಡ್ಡು ಬೇಕು. ಶ್ರೀಮಾನ್ ಪಿ. ವೆಂಕಟಗಿರಿಯಪ್ಪನವರು ನಮ್ಮನ್ನು ಕುರಿತು ಇವರಿಗೆಲ್ಲೋ ಗ್ರಹಚಾರ ಬಂದಿದೆ ಎಂದು ಹೇಳಿದರು. ಅದು ಸರಿಯಲ್ಲ. ನಮ್ಮ ಊರಿನಲ್ಲಿ ನಮ್ಮದೂ ಭೂಮಿ ಇದೆ. ಅದಕ್ಕೆ ನಾನು ಒಂದು ಎಕರೆಗೆ ಎರಡು ರೂಪಾಯಿ ಖುಷ್ಕಿ ಕಂದಾಯವನ್ನು ಕೊಡುತ್ತಿದ್ದೇವೆ. ಅದು 50 ವರ್ಷಗಳ ಕೆಳಗೆ ಹಾಕಿದ್ದು ಬಹುಶಃ ಆ ಎರಡು ರೂಪಾಯಿಗಳ ಕಂದಾಯವನ್ನು ನಮ್ಮ ತಾತನ ಕಾಲದಲ್ಲಿ ಹಾಕಿದ್ದು ಎಂದು ಕಾಣುತ್ತದೆ. ಆಗಿನ ಕಾಲದಲ್ಲಿ ಎರಡು ರೂಪಾಯಿ ಕಂದಾಯವನ್ನು ರೈತ ಕೊಡಬೇಕಾಗಿದ್ದರೆ ಆಗ ಒಂದು ರೂಪಾಯಿಗೆ 40 ಸೇರು ರಾಗಿಯನ್ನು ಮಾರಬೇಕಾಗಿತ್ತು. ಆ ರೀತಿ ರೈತ ತನ್ನ ಜಮೀನಿನಲ್ಲಿ ಬೆಳೆದ ರಾಗಿಯನ್ನು ಮಾರಿ ಅವನು ಕಂದಾಯವನ್ನು ಕೊಡಬೇಕಾಗಿತ್ತು. ಆಗಿನ ಕಾಲದಲ್ಲಿ ಸರ್ಕಾರದವರು ಬುದ್ಧಿವಂತರಾಗಿದ್ದರೆ ಏನು ಮಾಡಬೇಕಾಗಿತ್ತು ಎಂದರೆ ಒಂದು ಎಕರೆಗೆ 15 ಸೇರು ರಾಗಿಯನ್ನು ಹಾಕಿ ಕಂದಾಯವನ್ನು ಧಾನ್ಯದ ರೂಪದಲ್ಲಿ ಕೊಡಬೇಕೆಂದು ಮಾಡಿದ್ದರೆ ಒಳ್ಳೆಯದಾಗಿತ್ತು, ಏತಕ್ಕೆಂದರೆ, ಈಗ ಒಂದು ಎಕರೆಗೆ 15 ಸೇರು ರಾಗಿಯನ್ನು ಕೊಟ್ಟರೆ, ಆ 15 ಸೇರು ರಾಗಿಯನ್ನು ಮಾರಿದ್ದರೆ ನಮಗೆ 15 ರೂಪಾಯಿಗಳು ಬರುತ್ತಿತ್ತು. ಒಂದು ಎಕರೆಗೆ 15 ರೂಪಾಯಿಗಳಂತೆ ಲೆಕ್ಕವನ್ನು ಹಾಕಿದ್ದರೆ ಈಗ ಖುಷ್ಕಿ ಜಮೀನುಗಳಿಂದ ಬರುವ ಎರಡು ಕೋಟಿ 50 ಲಕ್ಷ ರೂಪಾಯಿಗಳ ಕಂದಾಯದ ಬದಲಿಗೆ 30-40 ಕೋಟಿ ರೂಪಾಯಿ ಕಂದಾಯ ಬರುತ್ತಿತ್ತು. ಆದರೆ ನಮ್ಮ ಹಿಂದಿನವರು ಆ ರೀತಿ ಮಾಡಲಿಲ್ಲ. ಆಹಾರದ ಬೆಲೆಗಳು ಏರಿದಷ್ಟು ರೈತನಿಗೆ ಲಾಭ ಬರುತ್ತದೆ. ಅದನ್ನು ತಿಳಿದುಕೊಂಡೇ ನಮ್ಮ ಹಿಂದಿನವರು ಆಗ ರೈತರು ಜಮೀನಿಗೆ ಕಂದಾಯವನ್ನು ಕೊಡುವುದನ್ನು ಹಣವನ್ನು ಕೊಡುವುದರ ಬದಲು ಧಾನ್ಯವನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಲಿಲ್ಲ. ಯಾವುದನ್ನೂ ಸರಿಯಾಗಿ ತಿಳಿಯದೆ ವಿರೋಧ ಪಕ್ಷದವರು ಸುಮ್ಮನೆ ಚಳುವಳಿ ಮಾಡುವುದು ಸರಿಯಲ್ಲ. ಇದರಿಂದ ಏನಾಗುತ್ತದೆ ಎಂದರೆ, ಅಪಪ್ರಚಾರ ಮಾಡುವವರಿಗೆ ಅನುಕೂಲವಾಗುತ್ತದೆ. ನ್ಯಾಯವಾದ ವಿಷಯವನ್ನು ಹೇಳುವವರಿಗೆ ಸ್ವಲ್ಪ ಅನಾನುಕೂಲವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಕಂದಾಯವನ್ನು ಜಾಸ್ತಿ ಮಾಡಬೇಡಿ, ಬೆಂಗಳೂರು ಜಿಲ್ಲೆಯಲ್ಲಿ ಕಂದಾಯವನ್ನು ಜಾಸ್ತಿ ಮಾಡಬೇಡಿ, ಮತ್ತೊಂದು ಜಿಲ್ಲೆಯಲ್ಲಿ ಕಂದಾಯವನ್ನು ಜಾಸ್ತಿ ಮಾಡಬೇಡಿ ಎಂದು ಹೇಳಿದರೆ ಹೇಗಾಗುತ್ತದೆ ? ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ವಿಷಯದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈಗ ನಾವು ಹಾಕಿರತಕ್ಕ ಕಂದಾಯವೇನು ಜಾಸ್ತಿ ಆಗಿಲ್ಲ. ಕೋಲಾರದ ಜನಗಳನ್ನು ಬೇಕಾದರೆ ನಾನು ಕನ್‌ವಿನ್ಸ್ ಮಾಡುತ್ತೇವೆ. ವಾಟರ್ ರೇಟ್ ವಿಷಯದಲ್ಲಿ ಮದ್ರಾಸ್ ಮತ್ತು ಆಂಧ್ರ ಪ್ರಾಂತಗಳಲ್ಲಿರುವುದನ್ನೂ ನಮ್ಮ ದೇಶದಲ್ಲಿರುವುದನ್ನೂ ಹೋಲಿಕೆ ಮಾಡಿ ನೋಡಿದರೆ, ಅದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಆಮೇಲೆ ಡ್ರೈರೇಟು ಕೂಡ ಆಂಧ್ರ ಪ್ರಾಂತದ ಚಿತ್ತೂರು ಜಿಲ್ಲೆಯಲ್ಲಿ ಏನು ರೇಟು ಇದೆ, ನಮ್ಮ ರಾಜ್ಯದಲ್ಲಿ ಯಾವ ರೇಟು ಇದೆ ಎಂಬುದನ್ನು ನೋಡಿದರೆ ಅದರಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಎರಡೂ ಒಂದೇ ಆಗುತ್ತದೆ. ಆಂಧ್ರ ಪ್ರಾಂತದಲ್ಲಿರುವ ಚಿತ್ತೂರು ಜಿಲ್ಲೆಯ ಲಿಂಗಾರೆಡ್ಡಿಯವರು ಜಮೀನಿಗೆ ಏನು ಕಂದಾಯವನ್ನು ಕೊಡುತ್ತಿದ್ದಾರೆಯೋ ಅದೇ ಕಂದಾಯವನ್ನು ಬೆಂಗಳೂರು ಜಿಲ್ಲೆಯಲ್ಲಿರತಕ್ಕ ಲಿಂಗೇಗೌಡರು ಕೊಡುವುದಕ್ಕೆ ಏನು ತೊಂದರೆ ಇದೆ ? ರೈತರಿಗೆ ಬೇಕಾದರೆ ನಾವು ಹೇಳೋಣ. ಆಂಧ್ರ ಪ್ರಾಂತದಲ್ಲಿ ವೆಟ್‌ಲ್ಯಾಂಡಿಗೆ ಮತ್ತು ಇರಿಗೇಟೆಡ್ ವೆಟ್‌ಲ್ಯಾಂಡಿಗೆ ಕೂಡ ನಮ್ಮ ದೇಶದಲ್ಲಿರತಕ್ಕ ರೇಟುಗಳೇ ಇವೆ. ಈ ವಿಷಯದಲ್ಲಿ ಬೇಕಾದರೆ ನಾವು ರೈತರಿಗೆ ಜವಾಬು ಕೊಡುತ್ತೇವೆ. ಆದ್ದರಿಂದ ವಿರೋಧ ಪಕ್ಷದವರು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಇನ್ನುಮೇಲಾದರೂ ಅವರು ಟೀಕೆ ಮಾಡುವುದನ್ನು ನಿಲ್ಲಿಸಲಿ ಮತ್ತು ಅವರ ಚಳುವಳಿಯನ್ನು ರದ್ದುಗೊಳಿಸಲಿ. ಇಲ್ಲದಿದ್ದರೆ ಅವರ ಪಾಡು ಕಾಗದದ ಹುಲಿಯಂತಾಗುವುದು ಎಂದು ಹೇಳಿ ಈ ಮಾನ್ಯ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸ್ವಾಮಿ, ನನ್ನ ಮನಸ್ಸಿಗೆ ಬಹಳ ನೋವು ಉಂಟಾಗಿದೆ. ಆದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ನಾನೊಂದು ಕವನವನ್ನು ಕಟ್ಟಿದ್ದೇನೆ. ಅದನ್ನು ಇನ್ನೊಮ್ಮೆ ನಾನು ಹೇಳುತ್ತೇನೆ.

"ರೇವಣ ಸಿದ್ಧ
ಪದೇ ಪದೇ ಎದ್ದ
ಕೆಲ ಸಲ ಗೆದ್ದ
ಅನೇಕ ಸಲ ಬಿದ್ದ
ಕೆಲಸೆಲ್ಲಾ ಪೆದ್ದ,
ರೇವಣ ಸಿದ್ಧ."

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—(ಅವರು ತಕ್ಷಣ ಎದ್ದು ನಿಂತು)

"ಭಲೇ-ಭಲೇ ಕಿಟ್ಟ
ಹಳ್ಳಿಗೆ ಬಾ ಕಿಟ್ಟ."

ಶ್ರೀ ಎಂ. ವಿ. ಕೃಷ್ಣಪ್ಪ.—(ನಸುನಗುತ್ತಾ)

"ಬರ್ತೀನಿ-ಬರ್ತೀನಿ"

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—

"ಹಳ್ಳಿಗೆ ಬಾ ಕಿಟ್ಟ
ಹಾಕೊಲ್ಲ ಹಿಟ್ಟ"
ಕಂದಾಯ ಕೇಳೋಕ್ಕೋಗ್ ಕಿಟ್ಟ
ಕೈಗೆ ತಗೊಳ್ತಾರೆ ಲಟ್ಟ."

Mr. SPEAKER.—I will now put the Resolution to the Vote of the House. The question is:

"That in the official resolution moved in pursuance of sub-section (1) of section 121 of the Mysore Land Revenue Act, 1964, after the figures and words "26th February 1965", the following words shall be inserted, namely:—

"as modified by the Mysore Land Revenue (Amendment) Act, 1965, subject to the following modifications, namely:—

(1) Notwithstanding anything contained in the said Settlement Reports but subject to the provisions of section 121 of the Mysore Land Revenue Act, 1964 as amended by the Mysore Land Revenue (Amendment) 1965 (hereinafter in this Resolution referred to as the said Act), where any land, which is dry land falling within the category of sub-item (i) of the definition of "dry land" contained in item (a) of Explanations in clause (8) of section 2 of the said Act and in which mulberry crop can be grown, has been classed as garden land in the said settlement Reports, such land shall, except where it is classified as dry garden land under any law repealed by section 202 or any law in force at any time before the commencement of said Act, be classified as dry land for the purposes of the Said Act and assessed accordingly;

(2) Notwithstanding anything contained in the said Settlement Reports, in respect of land which is plantation land as defined in item

(MR. SPEAKER)

(d) of Explanations in clause (8) of section 2 of the said Act, steps be taken for the classification of such land as plantation land and for the determination of assessment and settlement of land revenue in accordance with the provision of the said Act."

Sri H. R. KESHAVA MURTHY.—Sir, my amendment may be put to vote.

Mr. SPEAKER.—I will put it to the vote. The question is:

"That in page 3 of the Official Resolution after item—

"Revision Settlement Report of Zone No. VII" the following proviso shall be added :—

"Provided that the maximum standard rates of assessment proposed do not exceed the maximum standard retes now existing in all classes of lands, *viz.*, Dry, Wet and Bagayat."

The amendment was negatived.

Those in favour will say 'Aye'—

Those against will say 'No'.

Sri SANJEEVANATH AIKALA.—Sir, I claim a division.

(The Division Bell rang ; the House divided.)

Mr. SPEAKER.—Division Results: For—59
Against 27.

I will put the main resolution to the vote of the House. The question is :

'In the official resolution moved in pursuance of-section (1) of section 121 of the Mysore Land Revenue Act, 1964, after the figures and words "26th February 1965", the following words shall be inserted, namely :—

"as modified by the Mysore Land Revenue (Amendment) Act, 1965, subject to the following modifications, namely :—

(1) Notwithstanding anything contained in the said Settlement Reports but subject to the provisions of section 121 of the Mysore Land Revenue Act, 1964 as amended by the Mysore Land Revenue (Amendment) Act, 1965 (hereinafter in this Resolution referred to as the said Act), where any land, which is dry land falling within the category of sub-item (i) of the definition of "dry land" contained in item (a) of Explanations in clause (8) of section 2 of the said Act and in which mulberry crop can be grown, has been classed as garden land

in the said settlement Reports, such land shall, except where it is classified as dry garden land under any law repealed by section 202 or any law in force at any time before the commencement of said Act, be classified as dry land for the purposes of the Said Act and assessed accordingly ;

(2) Notwithstanding anything contained in the said Settlement Reports, in respect of land which is plantation land as defined in item (d) of Explanations in clause (8) of section 2 of the Act, steps be taken for the classification of such land as plantation land and for the determination of assessment and settlement of land revenne in accordance with the provision of the said Act." '

The motion was adopted.

Sri SANJEEVANATH AIKALA.—Is that all ? (Because those agains were only 27).

Mr. SPEAKER.—Next time if the Hon'ble Member repeats it, I wil ask him to apologise to the House.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಸರಕಾರದ ಪರವಾಗಿ ಉತ್ತರ ಹೇಳುವಾಗ, ಮಾನ್ಯ ಮುಃ ಮಂತ್ರಿಗಳು ಒಂದು ತರಹ ಉತ್ತರ ಹೇಳಿದರು. ರೆವಿನ್ಯು ಮಂತ್ರಿಗಳು ಬೇರೆ ತರಹ ಹೇಳಿರುವುದ ಅವರ ತತ್ವಕ್ಕೆ ವಿರುದ್ಧವಾಗಿದೆ. ಅವರು ಉತ್ತರ ಕೊಟ್ಟಿರುವುದರಲ್ಲಿ ಸರ್ಕಾರದಲ್ಲಿ ಹೊಂದಾಣಿ ಇಲ್ಲವೆಂದು ವ್ಯಕ್ತವಾಗುತ್ತದೆ; ರೈತರ ವಿಷಯದಲ್ಲಿ ಅವರು ತಾತ್ಸಾರ ಭಾವನೆಯಿಂದ ಇದ್ದಾರೆ. ಅವರುಗಳು ನಿರಾಶಾದಾಯಕ ಉತ್ತರ ಕೊಟ್ಟಿರುತ್ತಾರೆ. ಈ ಚರ್ಚೆಗೆ ಕೊಟ್ಟಿರತಕ್ಕಂಥ ಉತ್ತರ ಇಡೀ ರೈತ ಜನಾಂಗಕ್ಕೆ ಅಸಮರ್ಪಕವಾಗಿದೆ ಮತ್ತು ರೈತರಿಗೆ ಕುಠಾರಪ್ರಾಯವಾಗಿದೆ. ಇದರ ವಿರುದ್ಧವಾಗಿ ಸಭಾತ್ಯಾಗ ಮಾಡುತ್ತಾ ಇದ್ದೇವೆ.

ಅಧ್ಯಕ್ಷರು.—ಪೋಲ್ ಡಿಮ್ಯಾಂಡ್ ಮಾಡಿ, ಡಿವಿಶನ್ ಕೇಳಿದ ನಂತರ ಸಭಾತ್ಯಾಗವೆ ?

(The Opposition staged a walk out).

Mr. SPEAKER.—We shall adjourn the half-an-hour discussion to some other day. The House will now adjourn *sine die.*

The House adjourned sine die *at Fifty Minutes past Five of the Clock.*

YD 5066—GPB—500—17-9-1965